ಸರಸ್ವತೀ ದರ್ಶನ

(ಸಾಹಿತ್ಯ, ಶಾಸನ, ಚಿತ್ರಕಲೆ ಮತ್ತು ಶಿಲ್ಪಗಳ ಹಿನ್ನೆಲೆಯಲ್ಲಿ)

ಸಂಶೋಧಕರು

ಸತ್ಯನಾರಾಯಣ ಬಿ.ಆರ್.

ಮಾರ್ಗದರ್ಶಕರು

ಡಾ. ದೇವರಕೊಂಡಾರೆಡ್ಡಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಇಲ್ಲಿಗೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

2007

236

ಸರಸ್ವತೀ ದರ್ಶನ

(ಸಾಹಿತ್ಯ, ಶಾಸನ, ಜಾನಪದ ಮತ್ತು ಶಿಲ್ಪಗಳ ಹಿನ್ನೆಲೆಯಲ್ಲಿ)

ಸಂಶೋಧಕರು

ಸತ್ಯನಾರಾಯಣ ಬಿ.ಆರ್.

ಮಾರ್ಗದರ್ಶಕರು

ಡಾ. ದೇವರಕೊಂಡಾರೆಡ್ಡಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಇಲ್ಲಿಗೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

2007

ಸರಸ್ವತೀ ದರ್ಶನ (ಸಾಹಿತ್ಯ, ಶಾಸನ, ಜಾನಪದ ಮತ್ತು ಶಿಲ್ಪಗಳ ಹಿನ್ನೆಲೆಯಲ್ಲಿ) ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗಿದೆ. **ಡಾ. ದೇವರಕೊಂಡಾರೆಡ್ಡಿ** ಅವರ ಸಲಹೆ ಮತ್ತು ಮಾರ್ಗದರ್ಶನದ ಫಲವಾಗಿ ಈ ಮಹಾಪ್ರಬಂಧವು ಸಿದ್ಧಗೊಂಡಿದೆ. ಈ ನಿಬಂಧದ ವಿಷಯವನ್ನು ಅಥವಾ ಅದರ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಪದವಿಗಾಗಲೀ, ಇತರೆ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣ ಮಾಡುತ್ತೇನೆ.

ವಿದ್ಯಾರಣ್ಯ
ದಿನಾಂಕ: 31.08.2007

(ಸತ್ಯನಾರಾಯಣ. ಬಿ.ಆರ್)

ಸರಸ್ವತೀ ದರ್ಶನ (ಸಾಹಿತ್ಯ, ಶಾಸನ, ಜಾನಪದ ಮತ್ತು ಶಿಲ್ಪಗಳ ಹಿನ್ನೆಲೆಯಲ್ಲಿ) ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಈ ಮಹಾಪ್ರಬಂಧವು ಸಿದ್ಧಗೊಂಡಿದೆ. ಈ ನಿಬಂಧವನ್ನು ಸಂಶೋಧಕರು ತಮ್ಮ ಸ್ವಂತ ಸಂಶೋಧನೆಯ ಮೂಲಕ ರಚಿಸಿದ್ದಾರೆ. ಈ ನಿಬಂಧದ ವಿಷಯವನ್ನು ಅಥವಾ ಅದರ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಪದವಿಗಾಗಲೀ, ಇತರೆ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ವಿದ್ಯಾರಣ್ಯ
ದಿನಾಂಕ: 31.08.2007

(ಡಾ. ದೇವರಕೊಂಡಾರೆಡ್ಡಿ)

[illegible] [illegible]

'ಈ'

'ಹುಡುಕಾಟ'ದ ಹಾದಿಯಲ್ಲಿ

ನನ್ನ ಜೊತೆಗಿದ್ದ

ತಾಯಿ–ತಂದೆ

ಗುರು–ಹಿರಿಯರು

ಹೆಂಡತಿ–ಮಗಳು

ಹಾಗೂ

ಬಂಧು–ಮಿತ್ರರು

ಎಲ್ಲರನ್ನು

ನೆನೆಯುತ್ತಾ.........

ಸರಸ್ವತೀ ದರ್ಶನ

(ಸಾಹಿತ್ಯ, ಶಾಸನ, ಜಾನಪದ ಮತ್ತು ಶಿಲ್ಪಗಳ ಹಿನ್ನೆಲೆಯಲ್ಲಿ)

<u>**ಪರಿವಿಡಿ**</u>

1. ಅಧ್ಯಯನ 1–18

1.1. ಸರಸ್ವತೀ ಪದದ ನಿಷ್ಪತ್ತಿ ಮತ್ತು ಅರ್ಥಸ್ವರೂಪ

1.2. ಪ್ರಾಚೀನತೆ

1.3. ಮೂಲ ಆಕರಗಳು

1.4. ಇದುವರೆಗಿನ ಅಧ್ಯಯನಗಳು

1.5. ಉದ್ದೇಶ

1.6. ವ್ಯಾಪ್ತಿ

2. ಸರಸ್ವತೀ ಪರಿಕಲ್ಪನೆ 19–80

2.1. ಬೌದ್ಧಧರ್ಮ

2.2. ಜೈನಧರ್ಮ

2.3. ವೈದಿಕಮತ

2.4. ಅನ್ಯನಾಗರಿಕತೆಗಳಲ್ಲಿ ಸರಸ್ವತಿಗೆ ಸಮಾನವಾದ ದೇವತೆಗಳು

3. ಸಾಹಿತ್ಯದಲ್ಲಿ ಸರಸ್ವತಿ 81–190

3.1. ಸಂಸ್ಕೃತ ಸಾಹಿತ್ಯ

3.2. ಕನ್ನಡ ಸಾಹಿತ್ಯ

4. ಶಾಸನಗಳಲ್ಲಿ ಸರಸ್ವತಿ 191–207

5. ಜನಪದದಲ್ಲಿ ಸರಸ್ವತಿ 208–220

6. ಸರಸ್ವತೀ ಶಿಲ್ಪಗಳು 221–278

6.1. ಶಾಸ್ತ್ರೀಯ ಆಧಾರಗಳು

6.2. ಭಾರತದ ಪ್ರಾಚೀನ ಸರಸ್ವತೀ ಶಿಲ್ಪಗಳು

6.3. ಕರ್ನಾಟಕದ ಪ್ರಾಚೀನ ಸರಸ್ವತೀ ಶಿಲ್ಪಗಳು

6.4. ಶಿಲ್ಪಗಳ ವಿಭಾಗ ಕ್ರಮ ಮತ್ತು ತೌಲನಿಕ ಅವಲೋಕನ

7. ಚಿತ್ರಕಲೆಯಲ್ಲಿ ಸರಸ್ವತಿ 279–287

7.1. ಮೈಸೂರು ಶೈಲಿ

7.2. ತಂಜಾವೂರು ಶೈಲಿ

7.3. ರಾಜಾ ರವಿವರ್ಮ

7.4. ಆಧುನಿಕ ಕಾಲ

7.5. ಜನಪ್ರಿಯ ಚಿತ್ರಗಳು

8. ಸಮಾರೋಪ 288–294

ಅನುಬಂಧಗಳು

ಅನುಬಂಧ –1. ಸರಸ್ವತೀ ಶಿಲ್ಪಗಳ ವಿವರಗಳು i-xv

ಅನುಬಂಧ –2. ಆಯ್ದ ಪಾರಿಭಾಷಿಕ ಪದಗಳ ಅರ್ಥ–ವಿವರಣೆ xvi-xvii

ಅನುಬಂಧ –3. ಸರಸ್ವತಿಯ ಶಿಲ್ಪಗಳ ಕೈಗಳಲ್ಲಿ ಕಂಡುಬರುವ ಪರಿಕರಗಳು xviii

ಅನುಬಂಧ –4. ಗ್ರಂಥಋಣ xix-xxvi

ಛಾಯಾಚಿತ್ರಗಳು 1–28

ಅಧ್ಯಾಯ *1*

ಅಧ್ಯಯನ

1.1. ಸರಸ್ವತಿ ಪದದ ನಿಷ್ಪತ್ತಿ ಮತ್ತು ಅರ್ಥಸ್ವರೂಪ

1.2. ಪ್ರಾಚೀನತೆ

1.3. ಮೂಲ ಆಕರಗಳು

1.4. ಇದುವರೆಗಿನ ಅಧ್ಯಯನಗಳು: ಕನ್ನಡದಲ್ಲಿ ನಡೆದಿರುವ ಅಧ್ಯಯನಗಳು

1.5. ಉದ್ದೇಶ

1.6. ವ್ಯಾಪ್ತಿ

ಅಧ್ಯಾಯ 1

ಅಧ್ಯಯನ

'ಸಂವಹನ' ಎಂಬುದು ಆಧುನಿಕ ಜಗತ್ತಿನ ಅತ್ಯಗತ್ಯ ಚಟುವಟಿಕೆಯಾಗಿದೆ. ಸಂಕೇತಗಳು, ನಿರ್ದಿಷ್ಟ ಶಬ್ದಗಳು ಸಂವಹನಕ್ರಿಯೆಗೆ ಆಧಾರವಾಗಿದ್ದ ಕಾಲದಿಂದಲೂ ನಿರಂತರ ಬದಲಾವಣೆಯೊಂದಿಗೆ, ಈ ಯುಗವನ್ನು 'ಸಂವಹನಯುಗ'ವೆಂದು ಪ್ರಭಾವಿಸುವಷ್ಟರ ಮಟ್ಟಿಗೆ ಅದಕ್ಕೆ ವ್ಯಾಪ್ತಿ ಮತ್ತು ಪ್ರಾಮುಖ್ಯ ಉಂಟಾಗಿದೆ. ಸಂವಹನ ಕ್ರಿಯೆಗೆ ಅತ್ಯಗತ್ಯವಾಗಿದ್ದ ಶಬ್ದಗಳೇ ಒಂದು ನಿಶ್ಚಿತ ಧ್ವನಿರೂಪವನ್ನು ತಳೆಯುವುದರೊಂದಿಗೆ ಭಾಷೆಯ ಉಗಮಕ್ಕೆ ನಾಂದಿಯಾಯಿತು. ಮಾನವನ ಮೂಲಭೂತ ಅಗತ್ಯಗಳಲ್ಲಿ ಒಂದಾದ ಭಾಷೆಯ ಉಗಮಕ್ಕೆ ಕಾರಣೀಭೂತವಾದ ಹಾಗೂ ಸಂವಹನ ಕ್ರಿಯೆಗೆ ಅತ್ಯಗತ್ಯವಾದ ವಾಕ್ ಅಥವಾ ಮಾತು, ಭಾರತೀಯ ಸಂಸ್ಕೃತಿಯಲ್ಲಿ ದೈವತ್ವಕ್ಕೇರಿದ್ದು ಜಗತ್ತಿನ ಸುಕೃತವೆಂದೇ ಹೇಳಬೇಕು. ವಾಕ್‌ನ ಉಪಯೋಗ, ಪ್ರಭಾವ, ಆಯತಪ್ಪಿದರೆ ಅದರಿಂದಾಗುವ ಅನಾಹುತ....... ಇವುಗಳಿಂದಾಗಿ ಮಾತಿಗೆ ಮಹತ್ವದ ಸ್ಥಾನ ಲಭ್ಯವಾಗಿದೆ.

ಇಂತಹ ಮಾತು ದೈವತ್ವಕ್ಕೇರಿದಾಗ, ವಾಕ್ಕಿಗೇ ಒಂದು ದೇವತೆಯೂ ಸೃಷ್ಟಿಯಾಗಬೇಕಾಗುತ್ತದೆ. ಅಂತಹ ವಾಗ್ದೇವಿಯ ಸೃಷ್ಟಿ ಭಾರತೀಯ ಸಂಸ್ಕೃತಿಯಲ್ಲಿ ವಿಭಿನ್ನವಾಗಿಯೇ ಇದೆ. ಜನೋಪಯೋಗಿಯಾದ ಸರಸ್ವತೀ ನದಿಯು ದೈವತ್ವಕ್ಕೇರಿದ ಪರಿಣಾಮವಾಗಿ ನದಿದೇವತೆಯಾಗಿ ಆರಾಧನೆಗೊಳಗಾಗುತ್ತಾಳೆ. ತನ್ನ ಹರಿಯುವ ಪಾತ್ರವನ್ನು ಬದಲಿಸುವ ನದಿಯಂತೆ, ನದಿಯಾಗಿದ್ದ ಸರಸ್ವತಿಯು ತನ್ನ ಪಾತ್ರವನ್ನು ಬದಲಿಸಿ ವಾಗ್ದೇವಿಯಾಗಿದ್ದು, ನಂತರದ ದಿನಗಳಲ್ಲಿ ವಿದ್ಯಾದೇವತೆ, ಸಾಹಿತ್ಯದೇವತೆ, ಸಕಲಕಲಾದೇವತೆಯಾಗಿ ಭಾರತೀಯರ ಜನಮಾನಸದಲ್ಲಿ ನೆಲೆನಿಂತದ್ದು ಒಂದು ಮಹಾಕಥನ. ಹಾಗೊಂದು ವೇಳೆ ಸರಸ್ವತಿಯು ತನ್ನ ಪಾತ್ರವನ್ನು ಬದಲಿಸದಿದ್ದರೆ, (ಬೇರೊಂದು ದೇವತೆ ವಾಗ್ದೇವಿಪಟ್ಟವನ್ನು ಅಲಂಕರಿಸುತ್ತಿದ್ದುದು ನಿಜವಾದರೂ,) ಮರಳುಗಾಡಿನಲ್ಲಿ ಕಣ್ಮರೆಯಾದ ಸರಸ್ವತೀ ನದಿಯಂತೆ, ಭಾರತೀಯರ ಮನಸ್ಸಿನಿಂದ ಈಗಾಗಲೇ ಕಾಣೆಯಾಗಿರುವ ವೇದೋಕ್ತವಾದ ಹಲವಾರು ದೇವತೆಗಳಂತೆ ಸರಸ್ವತಿಯೂ ಕಣ್ಮರೆಯಾಗಬೇಕಾಗುತ್ತಿತ್ತು. ಸರಸ್ವತೀ ನದಿಯು ಮಾತ್ರ ತನ್ನ ಪಾತ್ರವನ್ನು ಬದಲಿಸದೆ ಮರಳುಗಾಡಿನಲ್ಲಿ ಇಂಗಿಹೋಗಿದ್ದು ಮಹಾನಾಗರಿಕತೆಯೊಂದರ ದುರಂತವೇ ಸರಿ.

'ಸರಸ್ವತಿ' ಎಂದರೆ ಈಗ ಕಣ್ಣಮುಂದೆ ನಿಲ್ಲುವುದು, ನಾವು ನೋಡಿರುವ ಯಾವುದೋ ಶಿಲ್ಪದ ಇಲ್ಲವೇ ಚಿತ್ರಪಟದ ಇಲ್ಲವೇ ಸಾಹಿತ್ಯವರ್ಣನೆಯಿಂದ ನಮ್ಮ ಮನಸ್ಸಿನಲ್ಲಿ ರೂಪಗೊಂಡ ಸುಂದರ 'ಸ್ತ್ರೀ' ದೇವತೆಯೊಬ್ಬಳ ಚಿತ್ರ, ಅರಳಿದ ಬೆಳ್ದಾವರೆಯ ಮೇಲೆ ವೀಣೆ-ಪುಸ್ತಕ-ಅಕ್ಷಮಾಲೆಗಳನ್ನು ಹಿಡಿದು

ಶುಭ್ರವರ್ಣದ, ಪ್ರಸನ್ನವದನಳಾದ ಚತುರ್ಭುಜ ದೇವತೆಯ ಚಿತ್ರ, ಹತ್ತಿರದಲ್ಲಿ ಹಂಸ, ಕೆಲವೊಮ್ಮೆ ನವಿಲು ಇರುತ್ತದೆ. ಆದರೆ ಇಂದು ನಾವು ಕಾಣುತ್ತಿರುವ ಈ ಚಿತ್ರ ರೂಪುಗೊಂಡಿದ್ದಕ್ಕೆ ಸುಮಾರು ನಾಲ್ಕುಸಾವಿರ ವರ್ಷಗಳ ಇತಿಹಾಸವಿದೆ ಎಂದು ಅರಿತಾಗ ಆಶ್ಚರ್ಯ, ಸಂತೋಷ, ಹೆಮ್ಮೆ ಒಟ್ಟಿಗೇ ಉಂಟಾಗುತ್ತದೆ. ಸರಸ್ವತಿಯು ನಡೆದು ಬಂದ ನಾಲ್ಕುಸಾವಿರ ವರ್ಷಗಳ ಹಾದಿಯ ಅವಲೋಕನವೇ ಒಂದು ಚೇತೋಹಾರಿ ಅನುಭವ.

1.1. ಸರಸ್ವತಿ ಪದದ ನಿಷ್ಪತ್ತಿ ಮತ್ತು ಅರ್ಥಸ್ವರೂಪ

'ಸರಸ್ವತಿ' ಎಂಬುದನ್ನು ರೋಮನ್ ಅಕ್ಷರಗಳಲ್ಲಿ ಬರೆಯುವಾಗ 'Sarasvati' ಮತ್ತು 'Saraswati' ಎಂಬ ಎರಡೂ ರೂಪಗಳನ್ನು ಬಳಸಲಾಗುತ್ತದೆ. 'V' ಮತ್ತು 'W' ಅಕ್ಷರಗಳ ಉಚ್ಚಾರಣೆಯಲ್ಲಿರುವ ಸಾಮ್ಯತೆಯೇ ಇದಕ್ಕೆ ಕಾರಣ. ಸಂಸ್ಕೃತದಲ್ಲಿ 'ಸರಸ್ವತೀ' ಎಂದು ದೀರ್ಘಾಂತವಾಗಿರುತ್ತದೆ. ಕನ್ನಡದಲ್ಲಿ ಬರೆಯುವಾಗ 'ಸರಸ್ವತಿ' ಎಂದು ಹ್ರಸ್ವಾಂತವಾಗಿಯೇ ಪ್ರಯೋಗವಾಗುತ್ತದೆ. ಸರಸ್ವತಿ ಎಂಬ ಪದ 'ಸರಸ್' ಮತ್ತು 'ವತಿ' ಎಂಬ ಎರಡು ಪದಗಳ ಜೋಡಣೆಯಿಂದ ಆಗಿದೆ. ಸರಸ್ ಎಂಬ ಪದ 'ಸರ' ಎಂಬುದರಿಂದ ನಿಷ್ಪನ್ನವಾಗಿದೆ. ಸರ ಎಂಬುದಕ್ಕೆ ನಿಘಂಟಿನಲ್ಲಿ ಗಮನ, ಚಲನೆ, ನಡೆಯುವುದು, ಹೋಗುವುದು, ದಧ್ಯಗ್ರ, ಶರ, ಬಾಣ, ನದಿಯ ಪ್ರವಾಹ, ಲವಣ, ಉಪ್ಪು, ಹಾರ, ಕಂಠಾಭರಣ, ಜಲ, ನೀರು, ಸರೋವರ ಮೊದಲಾದ ಅರ್ಥಗಳನ್ನು ಹೇಳಲಾಗಿದೆ.[1] ಗಮನ, ಚಲನೆ, ನಡೆಯುವುದು, ಹೋಗುವುದು ಈ ಪದಗಳಿಗೆ ಸಮೀಪದ ಅರ್ಥವನ್ನು 'ಹರಿಯುವುದು' ಎಂಬ ಪದ ಕೊಡುತ್ತದೆ. ಋಗ್ವೇದದ ಸಾಯಣಭಾಷ್ಯವೂ[2] ಸರ ಎಂಬುದಕ್ಕೆ ಉದಕ ಅಂದರೆ ನೀರು ಎಂಬರ್ಥವನ್ನೇ ಸೂಚಿಸುತ್ತದೆ. **'ಸರ ಇತ್ಯುದಕನಾಮ',**[3] **'ಸರಸ್ವತೀ ಸರ ಇತ್ಯುದಕನಾಮ ಸರ್ತೇಸ್ತದ್ವತೀ'**[4] ಎಂಬ ನಿರುಕ್ತದ ಉಕ್ತಿಗಳೂ ಸರ ಎಂಬುದಕ್ಕೆ ಉದಕ ಅಂದರೆ ನೀರು ಎಂಬರ್ಥವನ್ನೇ ಆರೋಪಿಸುತ್ತವೆ. ಸರಸ್ ಎಂಬ ಪದದ ಅರ್ಥ ಸರೋವರ ಅಥವಾ ಕೊಳ ಎಂಬುದಕ್ಕೆ 'ನೀರು ನಿಂತಿರುವ ಜಾಗ' ಎಂಬ ಅರ್ಥ ಬರುತ್ತದೆ. ಆದರೆ ನಿಘಂಟಿನ ಈ ಸೀಮಿತ ಅರ್ಥವ್ಯಾಪ್ತಿಯನ್ನು ಮೀರಿ ಸರಸ್ ಎಂದರೆ ನೀರು, ಹರಿಯುವ ನೀರು ಎಂಬ ಅರ್ಥವೂ ಸ್ಫುರಿಸುತ್ತದೆ. Monier Williamsನ ಇಂಗ್ಲಿಷ್–ಸಂಸ್ಕೃತ ನಿಘಂಟಿನಲ್ಲಿ Saraswati ಎಂಬುದಕ್ಕೆ **'signifying flowing'** ಅಂದರೆ, 'ಹರಿಯುವುದನ್ನು ಸೂಚಿಸುತ್ತದೆ' ಎಂಬ ಅರ್ಥದಲ್ಲಿ 'ನದಿ' ಎಂದೇ ವ್ಯಾಖ್ಯಾನ ಮಾಡಲಾಗಿದೆ.[5]

---

1. ಸಂಸ್ಕೃತ–ಕನ್ನಡ ಶಬ್ದಕೋಶ, ಸಂಪುಟ 6 ಪು.2729
2. ಸಾಯಣಭಾಷ್ಯಸಹಿತಾ ಋಗ್ವೇದಸಂಹಿತಾ, ಸಂಪುಟ 14, ಪು.257
3. ನಿರುಕ್ತ 2.29
4. ನಿರುಕ್ತ 9.26
5. Monier Williams: A Dictionary English and Sanskrit. P.709

'ವತಿ' ಎಂಬ ಪದಕ್ಕೆ ಉಳ್ಳದ್ದು, ಒಳಗೊಂಡಿದ್ದು ಎಂಬ ಅರ್ಥಗಳಿವೆ. 'ಸರಸ್‌ವತಿ' ಎಂದರೆ 'ನೀರನ್ನು ಉಳ್ಳದ್ದು' ಅಥವಾ 'ಹರಿಯುವ ನೀರಿನಿಂದ ಕೂಡಿದ್ದು' ಎಂಬ ಅರ್ಥ ಬರುತ್ತದೆ. ಹರಿಯುವ ನೀರಿನಿಂದ ಕೂಡಿರುವುದಕ್ಕೆ 'ನದಿ' ಎಂಬುದು ಸಮಾನಾರ್ಥಕ ಪದ. ಸರಸ್ವತಿ ಎಂಬುದು ಮೂಲತಃ ಒಂದು ನದಿಯಾಗಿರುವುದರಿಂದ, ನದಿ ಎಂಬುದಕ್ಕೆ ಸರಸ್ವತಿ ಎಂಬುದು ಅನ್ವರ್ಥವಾಗಿಯೇ ಬಳಕೆಯಾಗಿದೆ ಎನ್ನಬಹುದು.

ಸರಸ್ವತಿ ಎಂಬ ಪದಕ್ಕೆ ಗೋವು, ಹಸು ಎಂಬ ಅರ್ಥಗಳೂ ಇವೆ.[6] ಸರಸ್ವತಿಗೆ ವೇದಗಳಲ್ಲೂ ಮತ್ತು ವೇದಾಂತ ಸಾಹಿತ್ಯಗಳಲ್ಲೂ ಕಾಮಧೇನುವಿನ ಸ್ವರೂಪ ಇರುವುದರಿಂದ ಗೋವು, ಹಸು ಎಂಬ ಅರ್ಥಗಳು ಪ್ರಾಪ್ತವಾಗಿವೆ ಎನ್ನಬಹುದು.

ಸುಮಾರು ಕ್ರಿ.ಶ. 6ನೇ ಶತಮಾನದ ರಚನೆಯಾದ 'ಅಮರಕೋಶ'ದಲ್ಲಿ ಸರಸ್ವತಿಯ ನದಿ ಮತ್ತು ವಾಗ್ದೇವಿ ಸ್ವರೂಪಗಳೆರಡಕ್ಕೂ ಅರ್ಥಗಳನ್ನು ಹೇಳಿದೆ.[7] ಸರಸ್ವತಿಯನ್ನು ವಾಗ್ದೇವತೆ ಎಂದು ಕರೆದಿರುವ ಶ್ಲೋಕದಲ್ಲಿ ಬ್ರಾಹ್ಮೀ, ಭಾರತೀ, ಭಾಷಾ, ಗಿರ್, ವಾಚ್(ಕ್), ವಾಣೀ ಎಂಬ ಬೇರೆ ಬೇರೆ ಹೆಸರುಗಳನ್ನು ಹೇಳಿದೆ.[8] ಬ್ರಹ್ಮನ ಅಥವಾ ಆದಿಜಿನನ ವಾಣಿಯಾದ್ದರಿಂದ ವಾಣಿ, ವಾಕ್ಕಿಗೆ ಅಧಿದೇವತೆಯಾದ್ದರಿಂದ ವಾಗ್ದೇವಿ ಎಂಬ ಹೆಸರುಗಳು ಸಹಜವಾಗಿಯೇ ಬಂದಿವೆ. ಗಿರ್ ಎಂಬ ಪದಕ್ಕೂ ಮಾತು[9] ಎಂದೇ ಅರ್ಥವಿರುವುದರಿಂದ ಗಿರಾ ಎಂಬ ಹೆಸರು ಸರಸ್ವತಿಯ ವಾಗ್ದೇವಿ ಸ್ವರೂಪವನ್ನು ಸೂಚಿಸುತ್ತದೆ.

ಟಿಬೆಟ್‌ನಲ್ಲಿ ಸರಸ್ವತಿಯನ್ನು Nag-gi-lha-mo ಮತ್ತು dByangs-can-ma (Yangchenma – English Phonetics) ಎಂಬ ಹೆಸರುಗಳಿಂದ ಆರಾಧಿಸುತ್ತಾರೆ. ಈ ಪದಗಳ ಅರ್ಥ ಸುಂದರವಾದ ಸ್ತ್ರೀ (Melodious Lady) ಮತ್ತು ಸುಂದರವಾದ ಧ್ವನಿ ಅಥವಾ ಸ್ವರ (Melodious voice) ಎಂಬುದೇ ಆಗಿದೆ.[10]

ಋಗ್ವೇದದಲ್ಲಿ ಸರಸ್ವತಿಯೊಂದಿಗೆ ಭಾರತಿಯನ್ನು ವಾಕ್ ದೇವತೆಯೆಂದೂ,[11] ಇಳಾ–ಭಾರತೀ–ಸರಸ್ವತೀ ಈ ಮೂರು ದೇವತೆಗಳನ್ನು ತಿಸ್ರೋದೇವತೆಗಳೆಂದು, ಒಂದೇ ದೇವತೆಯ ಬೇರೆ ಬೇರೆ

---

6. ಜಿ.ಎನ್.ಚಕ್ರವರ್ತಿ : ಸಂಸ್ಕೃತ–ಕನ್ನಡ ನಿಘಂಟು, ಪು.959
7. ಅಮರಕೋಶ –292 & 298
8. ಅಮರಕೋಶ –179
9. ಸಂಸ್ಕೃತ–ಕನ್ನಡ ಶಬ್ದಕೋಶ, ಸಂಪುಟ 2 ಪು.943
10. Bunce Fredrick W: AN Encyclopaedia of Buddhist Deities Demigods, Godlings, Saints & Demons, Vol -1, 1994, DK Printworld (p) Ltd., India. P.479, 574 & 597
11. ಋಗ್ವೇದ 10.110.8 ಆ ನೋ ಯಜ್ಞಂ ಭಾರತೀ ತೂಯಮೇತ್ವಿಳಾ ಮನುಷ್ವದಿಹ ಚೇತಯಂತೀ।
ತಿಸ್ರೋದೇವೀರ್ಬರ್ಹರೇದಂ ಸ್ಯೋನಂ ಸರಸ್ವತೀ ಸ್ವಪಸಃ ಸದಂತು॥

ರೂಪಗಳೆಂದು[12] ಕರೆದಿರುವುದರಿಂದ ಸರಸ್ವತಿಗೆ ಭಾರತಿ ಎಂಬ ಹೆಸರೂ ಪ್ರಾಪ್ತವಾಗಿದೆ. ವಾಕ್ ಒಂದು ಭಾಷೆಯ ಮೂಲಭೂತ ವಸ್ತುವಾಗಿರುವುದರಿಂದ ಮತ್ತು ಮಹತ್ವದ್ದೂ ಆಗಿರುವುದರಿಂದ ಒಟ್ಟಾರೆಯಾಗಿ ಭಾಷೆಯನ್ನೇ ಪ್ರಭಾವಿಸುವುದರಿಂದ ಸರಸ್ವತಿಗೆ ಭಾಷಾ ಎಂಬ ಹೆಸರು ಸಂದಿದೆ. Monier Williamsನ ಇಂಗ್ಲಿಷ್-ಸಂಸ್ಕೃತ ನಿಘಂಟಿನಲ್ಲಿ Saraswati ಎಂಬುದಕ್ಕೆ ಬ್ರಹ್ಮನ ಪತ್ನಿ, ವಾಗ್ದೇವಿ, ವಿದ್ಯಾದೇವತೆ, ಕಲಾದೇವತೆ ಮೊದಲಾದ ವಿಶೇಷಣಗಳನ್ನು ಹೇಳುವುದರ ಜೊತೆಗೆ, ಸರಸ್ವತಿ ಎಂಬುದು ಸಂಸ್ಕೃತ ಭಾಷೆ ಮತ್ತು ದೇವನಾಗರಿ ಲಿಪಿಯನ್ನೂ ಧ್ವನಿಸುತ್ತದೆ ಎಂದು ವಿವರಿಸಲಾಗಿದೆ.[13] ಭಾರತೀಯ ಸಂಸ್ಕೃತೇತರ ಯಾವುದೇ ಭಾಷೆಯ ಮತ್ತು ಜೈನ ಪರಿಕಲ್ಪನೆಯ ಸರಸ್ವತಿಯ ಪರಿಚಯವಿಲ್ಲದ್ದರಿಂದ ನಿಘಂಟುಕಾರ ಈ ನಿಲುವಿಗೆ ಬಂದಿರುವಂತೆ ಕಾಣುತ್ತದೆ. ಏಕೆಂದರೆ ಸರಸ್ವತಿಯು ಸರ್ವಭಾಷಾಮಯೀ ಎಂಬ ಪರಿಕಲ್ಪನೆ ಭಾರತೀಯ ಭಾಷೆಗಳಲ್ಲಿರುವುದು ಸ್ಪಷ್ಟವಾಗಿದೆ. ಬ್ರಾಹ್ಮಿಯೆಂಬುದು ಸರಸ್ವತಿಗೆ ಇರುವ ಇನ್ನೊಂದು ಹೆಸರೂ ಹೌದು. ಭಾರತೀಯ ಎಲ್ಲಾ ಲಿಪಿಗಳಿಗೂ –ದೇವನಾಗರಿಯೂ ಸೇರಿ– ಮೂಲ ಬ್ರಾಹ್ಮೀಲಿಪಿ. ಆದ್ದರಿಂದಲೇ ಸರಸ್ವತಿಗೆ ಸರ್ವಭಾಷಾಮಯೀ ಸ್ವರೂಪ ಪ್ರಾಪ್ತವಾಗಿದೆ. ಕಾಶ್ಮೀರಿಯಲ್ಲಿ ಬಳಕೆಯಲ್ಲಿರುವ ಒಂದು ಲಿಪಿಗೆ 'ಶಾರದಾಲಿಪಿ' ಎಂಬ ಹೆಸರಿದೆ. ಆದ್ದರಿಂದ ಸರಸ್ವತಿ ಎಂಬುದು ಕೇವಲ ಸಂಸ್ಕೃತ ಭಾಷೆ ಮತ್ತು ದೇವನಾಗರಿ ಲಿಪಿಯನ್ನು ಮಾತ್ರ ಸಂಕೇತಿಸುವುದಿಲ್ಲ. ಇಡೀ ಭಾರತೀಯ ಭಾಷೆ ಮತ್ತು ಲಿಪಿಸಮೂಹಗಳನ್ನೇ ಪ್ರತಿನಿಧಿಸುವ ಸರ್ವಭಾಷಾಮಯೀ ಸರಸ್ವತಿಯಾಗುತ್ತಾಳೆ.

'ಈ' ಎಂಬ ಅಕ್ಷರಕ್ಕೂ ಸರಸ್ವತಿ ಎಂಬ ಅರ್ಥವಿದೆ. 'ಈ' ಎಂದರೆ ನಾಲಗೆ, ಜಿಹ್ವೆ ಎಂದರ್ಥ. ಈ ಅಕ್ಷರದಿಂದ ಉತ್ಪನ್ನವಾಗಿರುವ ಈಕ್ಷ, ಈಕ್ಷತಿ, ಈಕ್ಷಿತ ಎಂಬ ಪದರೂಪಗಳಿಗೆ ನೋಟ, ದರ್ಶನ, ಗ್ರಹಿಸುವುದು ಎಂಬ ಅರ್ಥಗಳಿವೆ.[14] ಭಾಷೆಯ ಉತ್ಪನ್ನಸ್ವರೂಪವಾದ ಶಬ್ದವನ್ನು ಆಲಿಸುವುದು ಪಂಚೇಂದ್ರಿಯಗಳಲ್ಲಿ ಒಂದಾದ ಕಿವಿಯೇ. ಹಾಗೇ ಭಾಷೆಯ ಚಾಕ್ಷುಷ ರೂಪವಾದ ಲಿಪಿಯನ್ನು ಗ್ರಹಿಸುವುದು ಇನ್ನೊಂದು ಇಂದ್ರಿಯವಾದ ಕಣ್ಣು. ಗ್ರಹಿಸುವುದು ಪಂಚೇಂದ್ರಿಯಗಳಿಂದಾದ್ದರಿಂದ ಮತ್ತು ನಾಲಗೆಯೂ ಪಂಚೇಂದ್ರಿಯಗಳಲ್ಲಿ ಒಂದಾದ್ದರಿಂದ ಈ ಅರ್ಥ ಸರಿಯಾಗಿದೆ. ವಾಗ್ದೇವಿ ಸರಸ್ವತಿಯ ಮೂಲಸ್ವರೂಪ ವಾಕ್ ಆದ್ದರಿಂದ ಹಾಗೂ ವಾಕ್‌ನ ಜನನಸ್ಥಾನ ನಾಲಗೆಯಾದ್ದರಿಂದ ಸರಸ್ವತಿಗೆ 'ನಾಲಗೆ' ಎಂಬ ಅರ್ಥವನ್ನು ಸ್ಫುರಿಸುವ 'ಈ' ಎಂಬ ಹೆಸರು ಅರ್ಥಪೂರ್ಣವಾಗಿಯೇ ಇದೆ.

---

12. ಸಾಯಣಭಾಷ್ಯಸಹಿತಾ ಋಗ್ವೇದಸಂಹಿತಾ; ಭಾಗ –2: ಪು.565–66; (ಐತು ನೋ ಯಜ್ಞಂ ಭಾರತೀ ಕ್ಷಿಪ್ರಂ। ಭರತ ಆದಿತ್ಯಸ್ತಸ್ಯ ಭಾ ಇಳಾ ಚ ಮನುಷ್ಯದಿಹ ಚೇತಯಮಾನಾ ತಿಸ್ರೋ ದೇವ್ಯೋ ಬರ್ಹಿರಿದಂ ಸುಖಂ ಸರಸ್ವತೀ ಚ ಸಕರ್ಮಾಣ ಅಸೀದಂತು॥)
13. Monier Williams: A Dictionary English and Sanskrit. P.709
14. ಸಂಸ್ಕೃತ–ಕನ್ನಡ ಶಬ್ದಕೋಶ, ಸಂಪುಟ 1 ಪು.390

ಸರಸ್ವತಿಗೆ 'ಶಾಬ್ದ'[15] ಎಂಬ ಹೆಸರೂ ಇದೆ. ಶಾಬ್ದ ಎಂದರೆ ಶಬ್ದದಿಂದ ಆದುದು ಎಂದರ್ಥ. ವಾಕ್ ರೂಪಗೊಳ್ಳುವುದು ಶಬ್ದರೂಪದಲ್ಲಿಯೇ. ನಮ್ಮ ಮನಸ್ಸಿನಲ್ಲಿ ಉದಯಿಸಿದ ವಾಕ್ ಕೇಳುಗನ ಕಿವಿಯನ್ನು ಸೇರಿದಾಗಲೇ ಅದಕ್ಕೆ ಪೂರ್ಣತೆ ಪ್ರಾಪ್ತಿಯಾಗುತ್ತದೆ. ಹಾಗೆ ಅದು ಕೇಳುಗನ ಕಿವಿಯನ್ನು ಶಬ್ದರೂಪದಲ್ಲಿ ತಲಪುತ್ತದೆ. ಆದ್ದರಿಂದ, ವಾಗ್ದೇವಿಯಾದ ಸರಸ್ವತಿಗೆ 'ಶಾಬ್ದ' ಎಂಬುದು ಅರ್ಥಪೂರ್ಣವಾದ ಹೆಸರೇ ಆಗಿದೆ.

ಮೂಲತಃ ಬೇರೆ ಬೇರೆ ದೇವತೆಗಳಾದ ಶಾರದೆ ಮತ್ತು ಸರಸ್ವತಿಯರು ಜನಮಾನಸದಲ್ಲಿ ಒಂದೇ ಎಂಬಂತೆ ನೆಲೆಯೂರಿದ್ದಾರೆ. ಶಾರದ ಎಂಬ ಹೆಸರು ದುರ್ಗಾದೇವಿ ಮತ್ತು ಸರಸ್ವತಿದೇವಿ ಇಬ್ಬರಿಗೂ ಅನ್ವಯಿಸುತ್ತದೆ[16] ಹಾಗೂ ಶಾರದೆ ಎಂಬುದು ಯಾವುದೇ ದೇವತೆಗೆ ಬಳಸುವ ವಿಶೇಷಣ ಎಂಬುದನ್ನು ಗಮನಿಸಬೇಕು. ಶಾರದೆ ಎಂಬ ಪದದ ಅರ್ಥಕ್ಕೂ ಸರಸ್ವತಿಗೂ ಅವಿನಾಭಾವ ಸಂಬಂಧವಿರುವುದು ಅದಕ್ಕೊಂದು ಕಾರಣವಿರಬಹುದು. 'ಶಾರ' ಎಂದರೆ ವಾಯು, ಗಾಳಿ ಎಂಬ ಅರ್ಥಗಳಿವೆ. ವಾಕ್ ಉತ್ಪನ್ನವಾಗುವಲ್ಲಿ ಗಾಳಿಯ ಪಾತ್ರ ಅತ್ಯಂತ ಪ್ರಧಾನವಾದದ್ದು ಎಂಬುದನ್ನು ಇಲ್ಲಿ ಗಮನಿಸಬಹುದು. ಶಾರದೆ ಎಂಬುದಕ್ಕೆ ಶರತ್‌ಋತುವಿಗೆ ಸಂಬಂಧಿಸಿದ್ದು, ಶರತ್‌ಋತುವಿನಲ್ಲಿ ಜನಿಸಿದ್ದು ಎಂಬ ಅರ್ಥಗಳೂ ಇವೆ. ಒಂದು ಬಗೆಯ ವೀಣೆಗೂ 'ಶಾರದ' ಎಂಬ ಹೆಸರಿದೆ. ಒಂದು ಬಗೆಯ ಲಿಪಿಗೂ 'ಶಾರದಲಿಪಿ' ಎಂಬ ಹೆಸರಿದೆ. ಇವುಗಳನ್ನು ಗಮನಿಸಿದಾಗ ಶಾರದೆ ಎಂಬ ಪದಕ್ಕೂ ಸರಸ್ವತಿಯ ಸ್ವರೂಪಕ್ಕೂ ಸಾಮ್ಯವಿರುವುದು ತೋರುತ್ತದೆ.

ಸರಸ್ವತಿ ಎಂಬ ಪದದ ಮೂಲ ಅರ್ಥಸ್ವರೂಪಗಳು ನದಿ, ಸ್ತ್ರೀ, ದೇವತೆ, ವಾಕ್, ಗೋವು ಎಂದಾಗಿವೆ. ಈ ಅರ್ಥಗಳನ್ನು ಅನುಸರಿಸಿ ಸರಸ್ವತಿಗೆ ನದಿದೇವತೆ, ವಾಗ್ದೇವಿ, ಭಾಷಾ, ಗಿರ್, ಬ್ರಾಹ್ಮೀ, ಕಾಮಧೇನು, ವಿದ್ಯಾದೇವತೆ ಮೊದಲಾದ ಸ್ವರೂಪಗಳು ಪ್ರಾಪ್ತವಾಗಿವೆ.

1.2. ಪ್ರಾಚೀನತೆ

ಸರಸ್ವತಿಯ ಪ್ರಾಚೀನತೆಯನ್ನು ಹುಡುಕುವುದೆಂದರೆ ಋಗ್ವೇದದ ಪ್ರಾಚೀನತೆಯನ್ನು ಕುರಿತು ಸಂಶೋಧನೆ ಮಾಡಿದಂತೆಯೇ ಸರಿ. ಏಕೆಂದರೆ ಸರಸ್ವತಿಯ ಪ್ರಥಮ ಉಲ್ಲೇಖಗಳು ಬರುವುದು ಋಗ್ವೇದದಲ್ಲಿಯೇ. ಆದರೆ ಋಗ್ವೇದದ ಕಾಲದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. 'The Practice dates (of Vedic chant) back atleast 3000 years and is probably the worlds oldest continuous vocal tradition'[17] ಎಂಬ ಮಾತು ವೇದಗಳ ಪ್ರಾಚೀನತೆಯನ್ನು ಸಾರುವುದರ

---

15. ಸಂಸ್ಕೃತ-ಕನ್ನಡ ಶಬ್ದಕೋಶ, ಸಂಪುಟ 6. ಪು.2575
16. ಸಂಸ್ಕೃತ-ಕನ್ನಡ ಶಬ್ದಕೋಶ, ಸಂಪುಟ 6 ಪು.2577
17. Encyclopaedia Britannica, Vol. 12, P.290

ಜೊತೆಗೆ ವೇದಗಳ ಮಹತ್ವ ಮತ್ತು ಪ್ರಭಾವವನ್ನೂ ಮನಗಾಣಿಸುತ್ತದೆ. 'The hymns of Rigveda composed during the last two or three centuries of the 2nd millennium BC'[18] ಎಂಬ ಮಾತು ಋಗ್ವೇದದ ಪ್ರಾಚೀನತೆಯನ್ನು ಕ್ರಿ.ಪೂ. 1300-1200ಕ್ಕೆ ತಂದು ನಿಲ್ಲಿಸುತ್ತದೆ. ಈ ಕಾಲದ ಬಗ್ಗೆ ಹೆಚ್ಚಿನ ವಿದ್ವಾಂಸರ ಸಮ್ಮತಿಯಿದೆ.[19] **'ಋಗ್ವೇದದ ಕಾಲವನ್ನು ಕ್ರಿ.ಪೂ.1500-1000ದ ಅವಧಿಯಲ್ಲಿ ಇಡಬಹುದು. ಆದರೆ ಈ ವೇದದ ಅತ್ಯಂತ ಪ್ರಾಚೀನ ಭಾಗಗಳು ಕ್ರಿ.ಪೂ.1500ಕ್ಕಿಂತಲೂ ಪ್ರಾಚೀನವಾಗಿರುವ ಸಾಧ್ಯತೆ ಇದೆ.'**[20] ಎಂಬ ಮಾತುಗಳು ಋಗ್ವೇದದ ಪ್ರಾಚೀನತೆಯನ್ನು ಕ್ರಿ.ಪೂ.ಸುಮಾರು 1500ಕ್ಕಿಂತಲೂ ಹಿಂದಕ್ಕೆ ಒಯ್ಯುತ್ತವೆ. ಇವುಗಳನ್ನು ಗಮನಿಸಿದಾಗ ಋಗ್ವೇದದ ಕಾಲವನ್ನು ಕ್ರಿ.ಪೂ.ಸುಮಾರು 2000-1500 ಎಂದು ಹೇಳಲು ಅಡ್ಡಿಯಿಲ್ಲವೆನ್ನಿಸುತ್ತದೆ.

ಸುಮಾರು ಮೂರೂವರೆಯಿಂದ ನಾಲ್ಕುಸಾವಿರ ವರ್ಷಗಳಷ್ಟು ಪ್ರಾಚೀನವಾದ ಋಗ್ವೇದದಲ್ಲಿ ಸರಸ್ವತಿಯ ಪ್ರಥಮ ಉಲ್ಲೇಖಗಳು ದೊರೆಯುತ್ತವೆ. ಸರಸ್ವತಿಯ ಪ್ರಥಮ ಉಲ್ಲೇಖ ನದಿಯ ಸ್ವರೂಪದಲ್ಲಿ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಋಗ್ವೇದದ ಒಂದನೇ ಮಂಡಲದ ಮೂರನೇ ಸೂಕ್ತದ 12ನೇ ಋಕ್ಕಿನಲ್ಲಿಯೇ ಸರಸ್ವತೀ ನದಿಯನ್ನು, 'ಮಹೋಅರ್ಣಃ' ಅಂದರೆ ದೊಡ್ಡ ನದಿ ಎಂದು ಕರೆಯಲಾಗಿದೆ. ಇದೊಂದೇ ಅಲ್ಲದೆ, ಇನ್ನೂ ಹಲವಾರು ಋಕ್ಕುಗಳಲ್ಲಿ ಸರಸ್ವತಿಯ ಉಲ್ಲೇಖಗಳಿವೆ. 'The earliest notion of Sarasvati was undoubtedly as a river. It originally stood for a primitive, but mighty stream mentioned at several places in the Rigveda.'[21] ಋಗ್ವೇದದಲ್ಲಿ ನದಿ, ನದಿದೇವತೆಯಾಗಿ ಅಲ್ಲದೆ, 25ಕ್ಕೂ ಅಧಿಕ ವಿಶೇಷಣಗಳಿಂದ ಸರಸ್ವತಿಯನ್ನು ಉಲ್ಲೇಖಿಸಲಾಗಿದೆ.

ನಂತರ ಉಳಿದ ವೇದಗಳಲ್ಲಿ, ವೇದಾಂತ ಸಾಹಿತ್ಯದಲ್ಲಿ, ಮಹಾಕಾವ್ಯಗಳಲ್ಲಿ ಮತ್ತು ಪುರಾಣಗಳಲ್ಲಿ ಸರಸ್ವತಿಯ ಬಗ್ಗೆ ಸಾವಿರಾರು ಉಲ್ಲೇಖಗಳು, ನೂರಾರು ಕಥೆ-ಉಪಕಥೆಗಳು ಸಿಗುತ್ತವೆ. ಇವುಗಳೆಲ್ಲವುದರ ಆಧಾರದ ಮೇಲೆ ಸರಸ್ವತಿಯ ಪ್ರಾಚಿನತೆಯನ್ನು ಕ್ರಿ.ಪೂ.2000-1500 ಅಂದರೆ ಸುಮಾರು 3500-4000 ವರ್ಷಗಳು ಎಂದು ಖಚಿತವಾಗಿ ಹೇಳಬಹುದು.

1.3. ಮೂಲ ಆಕರಗಳು

ಪ್ರಸ್ತುತ ಅಧ್ಯಯನ ಕನ್ನಡಸಂಸ್ಕೃತಿಯ ಹಿನ್ನೆಲೆಯಲ್ಲಿ ನಡೆದರೂ ಸರಸ್ವತಿಯ ಪರಿಕಲ್ಪನೆಯನ್ನು ಅರಿತುಕೊಳ್ಳಲು ಕನ್ನಡೇತರ ಮೂಲ ಆಕರಗಳ ನೆರವು ಬೇಕೇಬೇಕು. ಸರಸ್ವತಿಯ ಅತ್ಯಂತ ಪ್ರಾಚೀನ ಉಲ್ಲೇಖಗಳನ್ನು ಒಳಗೊಂಡಿರುವ ಋಗ್ವೇದವು ಆಕರಗ್ರಂಥಗಳ ಸಾಲಿನಲ್ಲೂ ಅಗ್ರಸ್ಥಾನದಲ್ಲಿ ನಿಲ್ಲುತ್ತದೆ.

---

18. Encyclopaedia Britannica, Vol. 20, P.521
19. Monier Williams: A Dictionary English and Sanskrit. P.827
20. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ : 4 ಚರಿತ್ರೆ, ಪು.628
21. Mohammad Israil Khan: Sarasvati in Sanskrit Literature, P85

ಇಂದು ನಾವು ನೋಡುತ್ತಿರುವ ಎಲ್ಲಾ ರೀತಿಯ ಸರಸ್ವತಿಯ ಪರಿಕಲ್ಪನೆಗಳಿಗೆ ಋಗ್ವೇದವೇ ಆದಿಮೂಲ. ಮುಖ್ಯವಾಗಿ ನದಿದೇವತೆ ಮತ್ತು ವಿದ್ಯಾದೇವತೆ ಸರಸ್ವತಿಯ ಸ್ವರೂಪಗಳೆರಡಕ್ಕೂ ಋಗ್ವೇದವೇ ಉಗಮಸ್ಥಾನ. ಸರಸ್ವತಿಯು ಬ್ರಹ್ಮನ ಮಗಳೂ ಹೌದು; ಶಕ್ತಿಯೂ ಹೌದು ಎಂಬ ಪರಿಕಲ್ಪನೆಗೂ ಋಗ್ವೇದವೇ ಮೂಲ. ಯಜುರ್ವೇದ ಮತ್ತು ಅಥರ್ವಣವೇದಗಳಲ್ಲಿಯೂ ಸರಸ್ವತಿಯ ಬಗ್ಗೆ ಹಲವು ಉಲ್ಲೇಖಗಳಿವೆ. ಆದರೆ ಅವುಗಳಲ್ಲಿ ಹೆಚ್ಚಿನವು ಋಗ್ವೇದದಲ್ಲಿ ಬಂದಿರುವ ವಿಚಾರಗಳೇ ಆಗಿವೆ. ವೇದಾಂತ ಸಾಹಿತ್ಯಗಳಾದ ಬ್ರಾಹ್ಮಣಗಳು, ಆರಣ್ಯಕಗಳು, ಉಪನಿಷತ್ತುಗಳಲ್ಲಿ ನದಿ ಮತ್ತು ವಾಕ್ ದೇವತೆಗಳೆರಡರ ವಿಚಾರವೂ ಇದೆ. ಸರಸ್ವತಿಯು ಸ್ತ್ರೀರೂಪಧಾರಣೆ ಮಾಡಿದ ವಿಚಾರಗಳಿಗೂ ವೇದಾಂತ ಸಾಹಿತ್ಯವೇ ಮೂಲ ಆಕರವಾಗಿದೆ. ಮಹಾಭಾರತದಲ್ಲಿ ಸರಸ್ವತೀ ನದಿಯ ವಿಚಾರಗಳು ವಿವರವಾಗಿ ಬಂದಿವೆ. ಪುರಾಣಗಳು, ಆಗಮಗಳು, ತಂತ್ರಗಳಲ್ಲೂ ಸರಸ್ವತಿಯ ಬಗ್ಗೆ ಹಲವಾರು ಕಥೆ–ದಂತಕಥೆಗಳು ಉಲ್ಲೇಖವಾಗಿವೆ. ಸರಸ್ವತಿಯ ಹಲವಾರು ರೂಪಲಕ್ಷಣಗಳಿಗೆ ಪುರಾಣ ಮತ್ತು ತಂತ್ರಗಳೇ ಕಾರಣವಾಗಿವೆ. ಪುರಾಣಗಳಲ್ಲಿ ಸ್ಕಂದಪುರಾಣ, ಬೃಹದ್‌ಧರ್ಮಪುರಾಣ, ವಿಷ್ಣುಧರ್ಮೋತ್ತರ– ಪುರಾಣ, ಭಾಗವತಪುರಾಣಗಳಲ್ಲಿ ಹಾಗೂ ರೂಪಮಂಡನ, ಅಂಶುಮದ್‌ಭೇದಾಗಮ ಮತ್ತು ಪೂರ್ವಾಕರಣಾಗಮಗಳಲ್ಲಿ ಸರಸ್ವತಿಯ ಶಿಲ್ಪಗಳ ಅಧ್ಯಯನಕ್ಕೆ ಬೇಕಾದ ಮಾಹಿತಿಗಳಿವೆ. ತಂತ್ರಸಾರ, ಶಾರದಾತಿಲಕತಂತ್ರ, ಪ್ರಪಂಚಸಾರತಂತ್ರ, ವಿದ್ಯಾರ್ಣವತಂತ್ರ ಮೊದಲಾದ ತಂತ್ರಗ್ರಂಥಗಳು ಸರಸ್ವತಿಯ ಶಿಲ್ಪಲಕ್ಷಣಗಳನ್ನು, ಸರಸ್ವತಿಯ ತಾಂತ್ರಿಕ ಆರಾಧನಾ ವಿಧಾನಗಳನ್ನು ತಿಳಿದುಕೊಳ್ಳಲು ಮೂಲ ಆಕರಗಳಾಗಿವೆ.

ಜೈನಧರ್ಮ ಮತ್ತು ಬೌದ್ಧಧರ್ಮಗಳ ಧರ್ಮಗ್ರಂಥಗಳು ಈ ಅಧ್ಯಯನಕ್ಕೆ ಅತ್ಯಗತ್ಯ ಆಕರಗಳಾಗಿವೆ. ಜೈನಾಗಮಗಳಾದ ಕಲ್ಯಾಣಕಾಂಡ ಸ್ತುತಿ, ಚತುರ್ವಿಂಶತಿಕ, ಪಂಚಕಲ್ಪ, ಭಗವತೀಸ್ತುತಿ, ಸರಸ್ವತೀಕಲ್ಪ, ಪ್ರತಿಷ್ಠಕಲ್ಪ, ನಿರ್ವಾಣಕಲಿಕಾ, ಜೈನಸಂಹಿತಾ ಮೊದಲಾದವುಗಳಲ್ಲಿ ಸರಸ್ವತಿಯ ಸ್ವರೂಪಕ್ಕೆ ಹಾಗೂ ಶಿಲ್ಪಗಳಿಗೆ ಸಂಬಂಧಪಟ್ಟ ಅನೇಕ ವಿಚಾರಗಳಿವೆ. ಮಹಾಪುರಾಣ ಜೈನರ ಸರಸ್ವತಿಯ ಪರಿಕಲ್ಪನೆಯನ್ನು ಅರಿಯಲು ಸಹಕಾರಿಯಾಗಿದೆ. ಬೌದ್ಧಧರ್ಮದ ಸಾಧನಮಾಲಾ ಮೊದಲಾದ ಕೃತಿಗಳು ಶಿಲ್ಪಗಳ ಅಧ್ಯಯನಕ್ಕೆ ಮೂಲ ಆಕರಗಳಾಗಿವೆ. ವೈದಿಕ, ಜೈನ ಮತ್ತು ಬೌದ್ಧಧರ್ಮಗಳ ಧಾರ್ಮಿಕ ಆಕರಗಳಲ್ಲಿ ಬರುವ ಸರಸ್ವತಿಗೆ ಸಂಬಂಧಪಟ್ಟ ಕೆಲವು ವಿಚಾರಗಳಲ್ಲಿ ಸಾಮ್ಯತೆಯಿರುವುದಿಲ್ಲ. ಆದರೆ ಆಯಾಯ ಧರ್ಮದ, ಸಂಪ್ರದಾಯದ ದೃಷ್ಟಿಯಿಂದ ಅವುಗಳ ಅಧ್ಯಯನದ ಅಗತ್ಯವಿದೆ.

ಕನ್ನಡ ಸಾಹಿತ್ಯಚರಿತ್ರೆಯನ್ನು ಗಮನಿಸಿದಾಗ, ಕಾವ್ಯದ ಪ್ರಾರಂಭದಲ್ಲಿಯೇ ಸರಸ್ವತಿಯನ್ನು ಸ್ತುತಿಸುವುದು ಒಂದು ಪರಂಪರೆಯಾಗಿ ಬೆಳೆದು ಬಂದಿರುವುದು ಕಂಡುಬರುತ್ತದೆ. ಹಳಗನ್ನಡ,

ನಡುಗನ್ನಡ ಮತ್ತು ಹೊಸಗನ್ನಡದ ಹಲವಾರು ಸಾಹಿತ್ಯಕೃತಿಗಳ ಸರಸ್ವತಿಯ ಪ್ರಾರ್ಥನೆಗಳು ಸರಸ್ವತಿಪರಿಕಲ್ಪನೆಯ ಹಲವಾರು ಸ್ವರೂಪಗಳನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತವೆ.

ಜನಪದ ಸಾಹಿತ್ಯಕೃತಿಗಳಲ್ಲೂ ಸರಸ್ವತಿಯನ್ನು ಸ್ತುತಿಸುವ ಪರಂಪರೆಯನ್ನು ಕಾಣಬಹುದಾಗಿದೆ. ಕನ್ನಡದ ಹಲವಾರು ಗಾದೆಮಾತುಗಳು, ನುಡಿಗಟ್ಟುಗಳು ಮಾತಿನ ಮಹತ್ವವನ್ನು ಮನಗಾಣಿಸುವ ಪ್ರಮುಖ ಆಕರಗಳಾಗಿವೆ. ಜಾನಪದ ಗೀತೆಗಳಲ್ಲಿ ವಾಗ್ದೇವಿಯ ಲಾಲನೆ ಪಾಲನೆ ಆರಾಧನೆ ಬಹುವಿಧವಾಗಿ ವ್ಯಕ್ತವಾಗಿದೆ. ಜಾನಪದ ಆಚರಣೆಗಳಲ್ಲಿ ಸರಸ್ವತಿಗೆ ಮಹತ್ವದ ಸ್ಥಾನವಿದೆ.

ಹಲವು ಕನ್ನಡಶಾಸನಗಳಲ್ಲಿ ಸರಸ್ವತಿಗೆ ಸಂಬಂಧಪಟ್ಟ ವಿಚಾರಗಳಿವೆ. ಶಾಸನಗಳಲ್ಲಿ ವ್ಯಕ್ತವಾಗಿರುವ ಸರಸ್ವತಿಪರಿಕಲ್ಪನೆ, ಶಿಲ್ಪ-ದೇವಾಲಯಗಳ ಮಾಹಿತಿ, ರೂವಾರಿಯ ವಿಚಾರಗಳು, ಸರಸ್ವತೀ ಸಂಬಂಧವಾದ ಬಿರುದುಗಳು, ಹೋಲಿಕೆ ಮೊದಲಾದವು ಅಧ್ಯಯನಯೋಗ್ಯವಾದವುಗಳಾಗಿವೆ.

ಕರ್ನಾಟಕದಾದ್ಯಂತ ಸಿಗುವ, ಸುಮಾರು ಒಂದು ಸಾವಿರ ವರ್ಷಗಳ ಕಾಲಾವಧಿಗೆ ಸೇರಿದ ನೂರಾರು ಸರಸ್ವತಿಯ ಶಿಲ್ಪಗಳು ಅಧ್ಯಯನದ ಪ್ರಥಮ ಆಕರಗಳಾಗಿವೆ. ವಿವಿಧ ಸ್ವರೂಪದ, ಭಂಗಿಯ, ದ್ವಿಭುಜ, ಚತುರ್ಭುಜ, ಷಡ್ಭುಜ, ಅಷ್ಟಭುಜ ಮತ್ತು ದಶಭುಜಗಳ ಸರಸ್ವತಿಯ ಶಿಲ್ಪಗಳು ಕ್ಷೇತ್ರಕಾರ್ಯದಲ್ಲಿ ಲಭ್ಯವಾಗಿವೆ. ಈ ಶಿಲ್ಪಗಳು ಒಂದು ಶಿಸ್ತುಬದ್ಧ ಅಧ್ಯಯನಕ್ಕೆ ಒಳಪಡುವ ಅಗತ್ಯವಿದೆ. ಇವುಗಳಲ್ಲದೆ ಕರ್ನಾಟಕದಲ್ಲಿ ಪ್ರಚಲಿತವಿದ್ದ ಹಲವಾರು ಚಿತ್ರಕಲಾ ಪ್ರಕಾರಗಳಲ್ಲೂ ಸರಸ್ವತಿಯ ಚಿತ್ರಗಳು ಲಭ್ಯವಾಗಿವೆ. ಅಲ್ಲಿ ಕಂಡುಬರುವ ಸರಸ್ವತಿಯ ಚಿತ್ರಣದ ರೂಪರೇಷೆಗಳು, ಭಾವಭಂಗಿಗಳು, ಬಳಕೆಯಾಗಿರುವ ಬಣ್ಣಗಳು ಮೊದಲಾದವುಗಳನ್ನು ಗಮನಿಸಬಹುದಾಗಿದೆ.

1.4. ಇದುವರೆಗಿನ ಅಧ್ಯಯನಗಳು

ಸರಸ್ವತಿಯು ಭಾರತೀಯ ಸಂಸ್ಕೃತಿಯ ದೇವಾನುದೇವತೆಗಳಲ್ಲಿ ಅತ್ಯಂತ ಪ್ರಮುಖ ದೇವತೆ. ಸರಸ್ವತಿಯು ದೇವತೆಗಳಲ್ಲಿ ಅತ್ಯಂತ ಶ್ರೇಷ್ಠಳಾದವಳು.[22] ವೇದಕಾಲದಿಂದ ಇಂದಿನವರೆಗೂ ಜನಮಾನಸದಲ್ಲಿ ನಿರಂತರವಾಗಿ ನೆಲೆಸಿರುವವಳು. ಇಂತಹ ಸಾಂಸ್ಕೃತಿಕ ಅಧಿದೇವತೆಯ ಬಗ್ಗೆ ಸಂಶೋಧಕರು ತಲೆಕೆಡಿಸಿಕೊಳ್ಳದೇ ಇಲ್ಲ. ಹಾಗೆ ನೋಡಿದರೆ, ಭಾರತೀಯ ಸಾಹಿತ್ಯದಲ್ಲಿ 'ಸರಸ್ವತೀ ಸ್ತುತಿ' ಎಂಬ ಪರಂಪರೆಯೇ ಇದ್ದು, ಆ ಪರಂಪರೆಯಲ್ಲಿಯೇ ಸರಸ್ವತಿಯ ಬಗ್ಗೆ ಚಿಕಿತ್ಸಕ ನೋಟವನ್ನು ಬೀರಿದ ಮಹನೀಯರಿದ್ದಾರೆ. ಆಧುನಿಕ ಯುಗದಲ್ಲಿ ಅಂದರೆ ಸಂಶೋಧನೆಯನ್ನು ಒಂದು ಶಿಸ್ತನ್ನಾಗಿ ಪರಿಭಾವಿಸಿದ ನಂತರ ಸರಸ್ವತಿಯ ಬಗ್ಗೆ ಅಧ್ಯಯನಗಳು ನಡೆದಿವೆ. ಅವುಗಳ ಸ್ಥೂಲ ಪರಿಚಯ ಪ್ರಸ್ತುತ ಅಧ್ಯಯನಕ್ಕೆ ಅಗತ್ಯವಾಗಿರುತ್ತದೆ.

---

22. ಋಗ್ವೇದ 2.41.16 (ದೇವೀತಮೇ -ದೇವೀನಾಂ ಶ್ರೇಷ್ಠೇ)

ಸರಸ್ವತಿಯ ಬಗೆಗಿನ ಸಂಶೋಧನೆಗೆ ಸುಮಾರು 200 ವರ್ಷಗಳಷ್ಟು ಸುದೀರ್ಘ ಇತಿಹಾಸವಿದೆ. ಇದುವರೆಗೆ ನಡೆದ ಅಧ್ಯಯನಗಳ ಸ್ವರೂಪವನ್ನು ಸ್ಥೂಲವಾಗಿ ಗಮನಿಸಿದರೆ ಪ್ರಾರಂಭದ ಅಧ್ಯಯನಗಳು ಸಾಂದರ್ಭಿಕವಾಗಿ ನಡೆದಂತಹವುಗಳು ಎಂಬುದು ಸ್ಪಷ್ಟವಾಗುತ್ತದೆ. ವೇದಗಳು, ವೈದಿಕಮತ, ಪುರಾಣಗಳು, ಮಹಾಕಾವ್ಯಗಳು ಇವುಗಳ ಅಧ್ಯಯನದ ಸಂದರ್ಭದಲ್ಲಿ ಸರಸ್ವತಿಯ ಬಗ್ಗೆ ಬೆಳಕು ಚೆಲ್ಲಲಾಗಿದೆ. ನಂತರದ ದಿನಗಳಲ್ಲಿ ಸರಸ್ವತಿಯ ಬಗ್ಗೆಯೇ ಪ್ರತ್ಯೇಕವಾದ ಅಧ್ಯಯನಗಳು ವಿಸ್ತಾರವಾಗಿ ನಡೆದಿರುವುದನ್ನು ಕಾಣಬಹುದು.

ಸರಸ್ವತಿಯ ಬಗೆಗಿನ ಅಧ್ಯಯನದ ದೃಷ್ಟಿಯಿಂದ ಥಾಮಸ್ ಮೂರ್ ಮೊದಲಿಗರಾಗುತ್ತಾರೆ. ಕ್ರಿ.ಶ. 1810ರಲ್ಲಿ ಥಾಮಸ್ ಮೂರ್ ಬರೆದ 'Hindu Pantheon'[23] ಎಂಬ ಕೃತಿಯಲ್ಲಿ ಸರಸ್ವತಿಯ ವಿಷಯ ಪ್ರಸ್ತಾಪವಾಗಿದೆ. ಸರಸ್ವತಿಯೂ ಸೇರಿದಂತೆ ಹಲವಾರು ಹಿಂದೂ ದೇವತೆಗಳ ಪಾತ್ರ, ಪ್ರಭಾವ, ಸ್ಥಾನ–ಮಾನಗಳನ್ನು ಗುರುತಿಸಲು ಮೂರ್ ಪ್ರಯತ್ನಿಸಿದ್ದಾರೆ. ಬ್ರಹ್ಮನ ಪತ್ನಿ, ವಿದ್ಯಾಧಿದೇವತೆ, ಸಾಹಿತ್ಯಾಧಿದೇವತೆ, ಎಲ್ಲಾ ಕಲೆಗಳಿಗೂ ಅಧಿದೇವತೆ ಎಂಬ ಜನಪ್ರಿಯ ಪರಿಕಲ್ಪನೆಗಳನ್ನು ಇಲ್ಲಿ ಗುರುತಿಸಲಾಗಿದೆ. ಸರಸ್ವತಿಯ ರೂಪಲಕ್ಷಣಗಳನ್ನು ರೋಮನ್ ಸಂಸ್ಕೃತಿಯ 'ಮಿನರ್ವಾ' ದೇವತೆಯೊಂದಿಗೆ ಹೋಲಿಸಲಾಗಿದೆ. ಆದರೆ ಸರಸ್ವತಿಯು ಮಿನರ್ವಾಗಿಂತ ಪ್ರಾಚೀನವಾದ ಗ್ರೀಕ್ ಸಂಸ್ಕೃತಿಯ 'ಅಥೀನಾ'ಳ ಸ್ವರೂಪಕ್ಕೆ ಹತ್ತಿರವಾಗಿದ್ದಾಳೆ ಎಂಬುದನ್ನು ಅಧ್ಯಯನದಿಂದ ದೃಢಪಡಿಸಲಾಗಿದೆ. ಮೂರ್‌ನ ಅಧ್ಯಯನದಿಂದಾಗಿ ಹೆಚ್ಚಿನ ವಿದ್ವಾಂಸರು ಸರಸ್ವತಿಯ ಬಗೆಗೆ ಆಸಕ್ತಿ ತೋರಿಸುವಂತಾಯಿತು.

ವ್ಯಾನ್ಸ್ ಕೆನೆಡಿಯ 'Researches into the Nature and Affinity of Ancient and Hindu Mythology'[24] ಎಂಬ ಕೃತಿ ಕ್ರಿ.ಶ.1831ರಲ್ಲಿ ಪ್ರಕಟವಾಯಿತು. ಇದು ನೇರವಾಗಿ ಸರಸ್ವತಿಗೆ ಸಂಬಂಧಿಸಿದ ಅಧ್ಯಯನವಲ್ಲ ಎಂಬುದನ್ನು ಶೀರ್ಷಿಕೆಯೇ ಸೂಚಿಸುತ್ತಿದೆ. ಆದರೆ, ಮತ್ಸ್ಯ, ವರಾಹ ಮತ್ತು ಸ್ಕಂದಪರಾಣಗಳಲ್ಲಿ ಬರುವ ಸರಸ್ವತಿಯ ವಿಚಾರಗಳನ್ನು ಸಾಂದರ್ಭಿಕವಾಗಿ ಚರ್ಚಿಸಲಾಗಿದೆ. ಸಾವಿತ್ರಿ, ಗಾಯತ್ರಿ ಮತ್ತು ಸರಸ್ವತಿ ದೇವತೆಗಳ ಬಗ್ಗೆ ಚರ್ಚಿಸಿ, ಸಾವಿತ್ರಿ ಮತ್ತು ಗಾಯತ್ರಿಯರು ಸರಸ್ವತಿಯದೇ ಆದ ಎರಡು ಸ್ವರೂಪಗಳು ಎನ್ನುವ ತೀರ್ಮಾನಕ್ಕೆ ಬರಲಾಗಿದೆ. ಈ ತೀರ್ಮಾನ ಧನಾತ್ಮಕವಾಗಿಯೇ ಇದೆಯಾದರೂ, ಅಧ್ಯಯನದ ವ್ಯಾಪ್ತಿ ತೀರಾ ಸೀಮಿತವಾದದ್ದು. ನಿರ್ದಿಷ್ಟ ಆಕರ ಗ್ರಂಥಗಳು, ಸೀಮಿತ ಉದ್ದೇಶಗಳಿಂದಾಗಿ ಸರಸ್ವತಿಯ ಬಗೆಗೆ ಇದೊಂದು ಅಪೂರ್ಣ ಅಧ್ಯಯನವಾಗಿದೆ ಎನ್ನಬಹುದು.

---

23. Edward Moor (Ed): Thomas Moore's Hindu Pantheon (1st Edn 1810) Kissinger Publishing, London (August 2003)
24. Vans Kennedy: Researches into the Nature and Affinity of Ancient and Hindu Mythology, (1st Edition 1831) Kissinger Publishing, London Feb 2006

ಅಧ್ಯಯನದ ವ್ಯಾಪ್ತಿಯ ದೃಷ್ಟಿಯಿಂದ ಕ್ರಿ.ಶ.1873ರಲ್ಲಿ ಐದು ಸಂಪುಟಗಳಲ್ಲಿ ಪ್ರಕಟವಾದ John Muir ಎಂಬ ವಿದ್ವಾಂಸನ 'Original Sanskrit Texts on the Origin and_Progress of the Religion and Institutions of India'[25] ಎಂಬ ಬೃಹತ್‌ಕೃತಿ ಗಮನಾರ್ಹವಾದುದು. ಐದನೇ ಸಂಪುಟದಲ್ಲಿ ಸರಸ್ವತಿಯ ಬಗ್ಗೆ ವೇದಗಳು ಮತ್ತು ವೇದಾಂತ ಸಾಹಿತ್ಯದ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಆ ಚರ್ಚೆಯ ಫಲಶ್ರುತಿಯಾಗಿ, ಸರಸ್ವತಿಯು ವೇದಗಳಲ್ಲಿ ನದಿದೇವತೆ ಮಾತ್ರ; ವಾಕ್ ದೇವತೆಯಲ್ಲ. ವಾಗ್ದೇವತೆಯಾಗಿದ್ದು ವೇದಾಂತ ಸಾಹಿತ್ಯದಲ್ಲಿ ಎಂಬ ನಿರ್ಧಾರಗಳು ಮೂಡಿಬಂದಿವೆ. ಋಗ್ವೇದದಲ್ಲಿಯೇ ಸರಸ್ವತಿಯ ವಾಗ್ದೇವಿಸ್ವರೂಪ ಪ್ರಕಟವಾಗಿದೆ ಮತ್ತು ವೇದಾಂತ ಸಾಹಿತ್ಯದಲ್ಲಿ ಅದು ಇನ್ನಷ್ಟು ಸ್ಪಷ್ಟವಾಗಿದೆ ಎಂಬುದು ಈ ಅಧ್ಯಯನದಿಂದ ಮೂಡುತ್ತದೆ. ಮುಂದಿನ ಸಂಶೋಧಕರಿಗೆ ಈ ಕೃತಿ, ಸರಸ್ವತಿಯ ಅಧ್ಯಯನಗಳ ಬಗ್ಗೆ ಹೊಸ ಸಾಧ್ಯತೆಗಳನ್ನು ತೋರಿಸಿಕೊಡುವಲ್ಲಿ ಯಶಸ್ವಿಯಾಯಿತು ಎನ್ನಬಹುದು.

ಹಿಂದೂಧರ್ಮದ ಅಧ್ಯಯನದ ದೃಷ್ಟಿಯಿಂದ, ಕ್ರಿ.ಶ.1882ರಲ್ಲಿ ಪ್ರಕಟವಾದ W.J. Wilkins ಎಂಬುವವನ 'Hindu Mythology'[26], 1897ರಲ್ಲಿ ಪ್ರಕಟವಾದ Arthur Anthony MacDonell ಎಂಬುವವನ 'Vedic Mythology'[27] ಮತ್ತು ಕ್ರಿ.ಶ.1915ರಲ್ಲಿ ಪ್ರಕಟವಾದ Hopkins E. Washburn ಎಂಬುವವನ 'Epic Mythology'[28] ಪ್ರಮುಖವಾದವುಗಳು. ವಿಲ್ಕಿನ್ಸ್‌ನ ಕೃತಿಯು ವಿಷಯಸಂಪತ್ತಿಯಿಂದ ಬೃಹತ್‌ಕೃತಿಯಾದರೂ ಸರಸ್ವತಿಯ ಬಗ್ಗೆ ಯಾವುದೇ ತೀರ್ಮಾನಗಳಿಲ್ಲ. ಮ್ಯಾಕಡೊನೆಲ್ ಮಾತ್ರ ವೇದಗಳಲ್ಲಿ ಸರಸ್ವತಿಯ ವಾಗ್ದೇವಿ ಸ್ವರೂಪ ಪ್ರಕಟವಾಗಿರುವುದನ್ನು ಗುರುತಿಸುತ್ತಾನೆ. ಈ ಕೃತಿಗಳಿಂದ, ಸರಸ್ವತಿಗೂ ಮತ್ತು ಇತರ ಹಿಂದೂ ದೇವತೆಗಳ ನಡುವಿನ ಸಂಬಂಧದ ಬಗ್ಗೆ ಚರ್ಚೆಗೆ ನಾಂದಿಯಾಯಿತು.

ವೈದಿಕ ದೇವತೆಗಳ ಲಕ್ಷಣಗಳ ದೃಷ್ಟಿಯಿಂದ ಗಮನಿಸಬಹುದಾದ ಪ್ರಮುಖ ಕೃತಿ, ಟಿ.ಎ.ಗೋಪಿನಾಥ್ ಅವರ 'Elements of Hindu Iconography'[29]. ಕ್ರಿ.ಶ.1914ರಲ್ಲಿ ಇದರ ಪ್ರಥಮ ಸಂಪುಟ ಮತ್ತು 1916ರಲ್ಲಿ ಎರಡನೇ ಸಂಪುಟಗಳು ಪ್ರಕಟವಾದವು. ವೈದಿಕ ದೇವತಾಶಿಲ್ಪಗಳ ಅಧ್ಯಯನಕ್ಕೆ ಒಂದು ಕೈಪಿಡಿಯಂತೆ ಸಿದ್ಧವಾಗಿರುವುದು ಈ ಕೃತಿಯ ವಿಶೇಷ. ಆದರೆ ಸರಸ್ವತಿಯು

---

25. John Muir: Original Sanskrit Texts on the Origin and_Progress of the Religion and Institutions of India (1-5 Vols. 1st Edn1858-73) Stanford University London. Digitized Version, 13 Mar 2006
26. W.J. Wilkins: Hindu Mythology (1st Edn. 1882) Kissinger Publishing Co London 19 Mar 2004
27. Arthur Anthony MacDonell: Vedic Mythology (1st Edn. 1897), University Press of the Pacific, London July 30, 2004
28. Hopkins, Edward Washburn, 1857-1932: Epic mythology (1st Edn. 1915), Digitized version, Strasburg K.J. Toronto. May 23, 2006
29. Gopinath Rao T. A.: Elements of Hindu Iconography 2 Vols. (1st Edn. 1914 & 1916) Asian Humanities Press, Delhi, December 1984

ಎರಡನೇ ಪಂಕ್ತಿಯ ದೇವತೆಯಂತೆ ಚಿತ್ರಿತಳಾಗಿದ್ದು, ಹೆಚ್ಚಿನ ವಿವರಗಳಿರುವುದಿಲ್ಲ. ಈ ನಿಟ್ಟಿನಲ್ಲಿ ಗಮನಿಸಬಹುದಾದ ಇನ್ನೊಂದು ಕೃತಿ, ಜಿತೇಂದ್ರನಾಥ ಬ್ಯಾನರ್ಜಿ ಅವರ 'The Development of Hindu Iconography'.[30] ಈ ಕೃತಿಯಲ್ಲಿ ಹಿಂದೂ ದೇವತೆಗಳ ಶಿಲ್ಪಲಕ್ಷಣಗಳನ್ನು ವಿಸ್ತಾರವಾಗಿ ಚರ್ಚಿಸಲಾಗಿದೆ. ಸರಸ್ವತಿಯ ಆರಾಧನೆಯ ವಿಷಯಕ್ಕೆ ಹೆಚ್ಚು ಒತ್ತು ನೀಡಲಾಗಿದೆ.

ನೀಲಕಂಠ ಭಟ್ಟಸಾಲಿಯವರ ಕೃತಿ 'Iconography of Buddhist and Brahmanical Sculptures (In the Dacca Museum)'[31] ಕ್ರಿ.ಶ.1929ರಲ್ಲಿ ಪ್ರಕಟವಾಯಿತು. ಡಾಕಾ ಮ್ಯೂಸಿಯಂನಲ್ಲಿದ್ದ ಶಿಲ್ಪಗಳಿಗೆ ಆದ್ಯತೆ ಕೊಟ್ಟಿರುವುದರಿಂದ ಉತ್ತರಭಾರತದ ಶಿಲ್ಪಗಳ ಅಧ್ಯಯನಕ್ಕೆ ಮಾತ್ರ ಈ ಕೃತಿ ಸಹಾಯಕವಾಗುತ್ತದೆ. ಸರಸ್ವತಿಯು ಭಾರತಾದ್ಯಂತ ವಿಧವಿಧವಾಗಿ ಪೂಜೆಗೊಳ್ಳುವ ದೇವತೆ ಎಂಬುದನ್ನು ಭಟ್ಟಸಾಲಿಯವರು ಗುರುತಿಸಿದ್ದಾರೆ.

ಕ್ರಿ.ಶ. 1933ರಲ್ಲಿ Journal of the Royal Asiatic Societyಯಲ್ಲಿ ಪ್ರಕಟವಾದ R.D. Oldham ಅವರ 'The Sarsawati and the Lost River of the Indian Desert'[32] ಲೇಖನ ಸರಸ್ವತಿಯನ್ನು ಕುರಿತಾದ ಸ್ವತಂತ್ರ ಅಧ್ಯಯನಕ್ಕೆ ನಾಂದಿ ಹಾಡಿತೆಂದೇ ಹೇಳಬೇಕು. ಸರಸ್ವತೀ ನದಿಯು ಇಂಗಿ ಹೋಗಿದ್ದರ ಸತ್ಯಾಸತ್ಯತೆಗಳನ್ನು ಅರಿಯಲು ಲೇಖನದಲ್ಲಿ ಪ್ರಯತ್ನಿಸಲಾಗಿದೆ. ಸರಸ್ವತಿಯ ದೇವತಾಸ್ವರೂಪದ ಬಗ್ಗೆ ಯಾವುದೇ ವಿಚಾರಗಳಿಲ್ಲ. ಅದರ ಮರುವರ್ಷವೇ ಅಂದರೆ ಕ್ರಿ.ಶ.1934ರಲ್ಲಿ ಪ್ರಕಟವಾದ ಹರಿದಾಸ್ ಭಟ್ಟಾಚಾರ್ ಅವರ 'Sarasvati: The Goddess of Learning'[33] ಲೇಖನ ಸರಸ್ವತಿಯ ದೇವತಾಸ್ವರೂಪದ ಮೇಲೆ ಬೆಳಕು ಚೆಲ್ಲುತ್ತದೆ.

ಜೈನಪರಂಪರೆಯ ಶಿಲ್ಪಗಳನ್ನು ಅಧ್ಯಯನಕ್ಕೆ ಒಳಪಡಿಸಿದವರಲ್ಲಿ ಬಿ.ಸಿ.ಭಟ್ಟಾಚಾರ್ಯ ಪ್ರಮುಖರು. ಕ್ರಿ.ಶ.1939ರಲ್ಲಿ ಪ್ರಕಟವಾದ 'Jaina Iconography'[34] ಅವರ ಮಹತ್ವದ ಕೃತಿ. ಅದರಲ್ಲಿ ಅವರು ಸರಸ್ವತಿಯನ್ನು ಜೈನಪರಂಪರೆಯ ಹದಿನಾರು ವಿದ್ಯಾದೇವತೆಗಳ ಸಮಗ್ರ ಮತ್ತು ಮಾತೃಸ್ವರೂಪ ಎಂಬ ನಿರ್ಧಾರಕ್ಕೆ ಬಂದಿರುತ್ತಾರೆ. ಕ್ರಿ.ಶ.1941ರಲ್ಲಿ ಪ್ರಕಟವಾದ ಯು.ಪಿ. ಷಾ ಅವರ 'Iconography of the Jain Goddess Sarasvati'[35] ಎಂಬ ಲೇಖನ ಜೈನಸರಸ್ವತಿಯ ಸ್ವರೂಪದ ಮೇಲೆ ಬೆಳಕು

---

30. Jitendra Nath Banerjea: The Development of Hindu Iconography (1st Edn 1941) Kessinger Publishing, London 2004
31. Nalini Kanta Bhattasali: Iconography of Buddhist and Brahmanical Sculptures : (In the Dacca Museum). (1st Edn. 1929) Reprint, Aryan, New Delhi. 2002
32. Oldham, R.D.: The Sarsawati and the Lost River of the Indian Desert. -Journal of the Royal Asiatic Society. 1893. 49-76
33. Haridas Bhattachar: Sarasvati, The Goddess of Learning -K.B. Pathak Commemoration Volume edited by Rao Bahadur, 1934
34. Bhattacharya B.C.: Jain Iconography (1st Edn. 1939) Motilal Banarsidass, India (Dec 1998)
35. Shah U.P.: Iconography of the Jain Goddess Sarasvati -published in Journal of the University of Bombay, 1941

ಚೆಲ್ಲುತ್ತದೆ. 'ಹದಿನಾರು ವಿದ್ಯಾದೇವತೆಯರ ಸಮಗ್ರಸ್ವರೂಪವೇ ಸರಸ್ವತಿ' ಎಂಬ ಬಿ.ಸಿ. ಭಟ್ಟಾಚಾರ್ಯ ಅವರ ನಿರ್ಧಾರವನ್ನು ಷಾ ಒಪ್ಪುವುದಿಲ್ಲ.

ಬಿ.ಭಟ್ಟಾಚಾರ್ಯ ಅವರ 'The Indian Buddhist Iconography'[36] ಮತ್ತು ಎಸ್.ಕೆ.ಸರಸ್ವತಿ ಅವರ 'Tantrayana Art: An Album- with Introduction and Notes'[37] ಬೌದ್ಧ ಪರಂಪರೆಯ ಶಿಲ್ಪಗಳ ಅಧ್ಯಯನಕ್ಕೆ ಮೀಸಲಾದ ಎರಡು ಕೃತಿಗಳು. ಬೌದ್ಧಪರಂಪರೆಯ ಸರಸ್ವತಿಯ ಶಿಲ್ಪಗಳ ಅಧ್ಯಯನಕ್ಕೆ ಈ ಕೃತಿಗಳು ಪ್ರಮುಖ ಆಕರಗ್ರಂಥಗಳಾಗಿವೆ.

ಕ್ರಿ.ಶ.1959ರಲ್ಲಿ ಪ್ರಕಟವಾದ 'The Concept of Sarasvati'[38] ಲೇಖನದಲ್ಲಿ ಎಸ್.ಕೆ.ರಾಮಚಂದ್ರರಾವ್ ಅವರು ಸರಸ್ವತಿಯ ಸ್ವರೂಪವನ್ನು ಕುರಿತು ಚರ್ಚಿಸಿರುತ್ತಾರೆ. ಆಧಾರಗಳ ಹಿನ್ನೆಲೆಯಲ್ಲಿ ಅಧ್ಯಯನ ಸಾಗದೇ ಇದ್ದರೂ, ಸರಸ್ವತಿಯ ಪ್ರಚಲಿತ ಸ್ವರೂಪಕ್ಕೆ ವೇದ–ಪುರಾಣ–ಆಗಮಗಳ ಆಧಾರಗಳನ್ನು ಲೇಖಕರು ನೀಡಿದ್ದಾರೆ.

ಕ್ರಿ.ಶ.1978ರಲ್ಲಿ ಪ್ರಕಟವಾದ ಪ್ರೊ.ಮೊಹಮದ್ ಇಸ್ರೈಲ್ ಖಾನ್ ಎಂಬುವವರ 'Sarasvati in Sanskrit Literature'[39] ಸಂಶೋಧನಾ ಕೃತಿಯಲ್ಲಿ, ಸರಸ್ವತಿಯ ನಾನಾ ಸ್ವರೂಪಗಳನ್ನು ವೇದ, ವೇದಾಂತ ಸಾಹಿತ್ಯ, ಪುರಾಣಗಳು ಮಾತ್ರವಲ್ಲದೇ ಹಲವು ಸಂಸ್ಕೃತ ಕವಿಗಳ ಕಾವ್ಯಗಳ ಹಿನ್ನೆಲೆಯಲ್ಲಿ ವಿಸ್ತಾರವಾಗಿ ಚರ್ಚಿಸಲಾಗಿದೆ. ಮೈಕ್ರೊ ಅಧ್ಯಯನವಾಗಿರುವ ಈ ಕೃತಿ, ಬೇರೆ ಭಾರತೀಯ ಭಾಷೆಗಳಲ್ಲಿ ಅಧ್ಯಯನ ಕೈಗೊಳ್ಳುವವರಿಗೆ ಮಾಹಿತಿಕೋಶದಂತಿದೆ. ಇದರಲ್ಲಿ ಹಳೇಬೀಡು ಮತ್ತು ಸೋಮನಾಥಪುರ ದೇವಾಲಯಗಳ ತಲಾ ಒಂದೊಂದು ಸರಸ್ವತಿಶಿಲ್ಪವನ್ನು ಉಲ್ಲೇಖಿಸಲಾಗಿದೆ.

ಕ್ರಿ.ಶ.1979ರಲ್ಲಿ ಪ್ರಕಟವಾದ ಶ್ರೀವಾಸ್ತವ ಅವರ 'Mother Goddess: An Indian Art Architecture and Literature'[40] ಕೃತಿಯಲ್ಲಿ ಸರಸ್ವತಿಯ ಮಾತೃಸ್ವರೂಪವನ್ನು ಅರಿಯಲು ಪ್ರಯತ್ನಿಸಲಾಗಿದೆ. ವೇದ–ಪುರಾಣಗಳ ಕಾಲದಿಂದಲೂ ಸರಸ್ವತಿಗೆ ಮಾತೃಸ್ಥಾನವೇ ದೊರೆತಿದೆ. ಋಗ್ವೇದದಲ್ಲಿ ಅಂಬಿತಮೇ ಎಂದೇ ಸರಸ್ವತಿಯನ್ನು ಸ್ತುತಿಸಲಾಗಿದೆ. ಸರಸ್ವತಿಯ ಮಾತೃಸ್ವರೂಪದ ಆಳ ವಿಸ್ತಾರಗಳನ್ನು ಅಳೆಯುವಲ್ಲಿ ಶ್ರೀವಾಸ್ತವ ಯಶಸ್ವಿಯಾಗಿದ್ದಾರೆ.

---

36. Benoytosh Bhattacharyya: The Indian Buddhist Iconography (1st Edn. 1924) Asian Educational Services, Delhi. May 1993
37. S.K. Saraswati: Tantrayana Art : An Album: With Introduction and Notes (1st edn 1977)Reprint. Kolkata, The Asiatic Society, 2003
38. Ramachandra Rao S.K.: The Concept of Sarasvati -Quarterly Journal of the Mythic Society, January 1959. Vol. XLIX, No.4; P.217-227
39. Mohammad Israil Khan: Sarasvati in Sanskrit Literature (1st Edn 1978),Reprint ed., Nisha Book Service Ghaziabad 2006
40. M.C.P. Srivastava: Mother Goddess: An Indian Art Architecture and Literature, Agamakala Prakashan, Delhi. 1979. P.128-136

ಕನ್ನೈಲಾಲ್ ಭಟ್ಟಾಚಾರ್ಯರ 'Sarasvati –A Study on her Concept and Iconography'[41] ಕೃತಿ ಕ್ರಿ.ಶ.1983ರಲ್ಲಿ ಪ್ರಕಟವಾಯಿತು. ವೈದಿಕ, ಜೈನ ಮತ್ತು ಬೌದ್ಧ ಪರಂಪರೆಯ ಸರಸ್ವತಿಗೆ ಸಂಬಂಧಿಸಿದ ಅಧ್ಯಯನದ ಜೊತೆಗೆ ಹಲವಾರು ಶಿಲ್ಪಗಳನ್ನು ವಿವೇಚಿಸಲಾಗಿದೆ. ಬಹುತೇಕ ಶಿಲ್ಪಗಳು ಉತ್ತರಭಾರತದ ಅದರಲ್ಲೂ ಬಂಗಾಳ ಪ್ರಾಂತದ ಶಿಲ್ಪಗಳೇ ಆಗಿವೆ. ಕರ್ನಾಟಕದ ಕೆಲವು ಶಿಲ್ಪಗಳನ್ನು ಕುರಿತು ಚರ್ಚಿಸಲಾಗಿದೆ. ಅದರಲ್ಲಿ ಚರ್ಚಿತವಾಗಿರುವ, ಬ್ರಿಟಿಷ್ ಮ್ಯೂಸಿಯಂನಲ್ಲಿರುವ, ಕರ್ನಾಟಕದ್ದೆಂದು ಹೇಳಲಾಗಿರುವ ದ್ವಿಭುಜ ಜೈನಸರಸ್ವತಿಯ ವಿಗ್ರಹ ಅಪರೂಪದ್ದಾಗಿದೆ. ಕರ್ನಾಟಕದಲ್ಲಿ ವಿಪುಲವಾಗಿ ದೊರೆತಿರುವ ಸರಸ್ವತಿಯ ಶಿಲ್ಪಗಳ ಸಂಖ್ಯೆಗೆ ಹೋಲಿಸಿದರೆ ಇಲ್ಲಿ ಚರ್ಚೆಗೆ ಎತ್ತಿಕೊಂಡಿರುವುದು ಶೇಕಡಾ ಒಂದೆರಡು ಮಾತ್ರ.

ಕ್ರಿ.ಶ.1992ರಲ್ಲಿ ಪ್ರಕಟವಾದ ಎಸ್.ಕೆ.ರಾಮಚಂದ್ರರಾವ್ ಅವರ 'Pratima-Kosha, Encyclopaedia of Indian Iconography'[42] ಕೃತಿಯ ಆರನೇ ಸಂಪುಟದಲ್ಲಿ ಸರಸ್ವತಿಯ ಶಿಲ್ಪಲಕ್ಷಣಗಳನ್ನು ಶಾಸ್ತ್ರೀಯ ಆಧಾರಗಳ ಹಿನ್ನೆಲೆಯಲ್ಲಿ ವಿವೇಚಿಸಲಾಗಿದೆ. ಆದರೆ ನೇರವಾಗಿ ಶಿಲ್ಪಗಳನ್ನೇ ಅಧ್ಯಯನಕ್ಕೆ ಒಳಪಡಿಸಿಲ್ಲ.

Frederick W Bunce ಎಂಬುವವನ Encyclopedia of Buddhist Deities Demigods, Godlings, Saints and Demons[43] ಎಂಬ ಎರಡು ಸಂಪುಟಗಳ ಕೃತಿ ಕ್ರಿ.ಶ.1994ರಲ್ಲಿ ಪ್ರಕಟವಾಯಿತು. ಇದೇ ಕರ್ತೃವಿನ Dictionary of Buddhist and Hindu Iconography[44] ಎಂಬ ನಿಘಂಟು ಕ್ರಿ.ಶ.1997ರಲ್ಲಿ ಪ್ರಕಟವಾಯಿತು. ಈ ಎರಡೂ ಕೃತಿಗಳು ಬೌದ್ಧಧರ್ಮದ ಶಿಲ್ಪಲಕ್ಷಣಗಳನ್ನು ಅರಿಯಲು ಸಹಾಯಕವಾಗಿವೆ.

ಇವುಗಳಲ್ಲದೆ ನಿರಂಜನ್ ಘೋಷ್ ಅವರ 'Sri Sarasvati in Indian Art and Literature'[45], ಚಿತ್ರಲೇಖಸಿಂಗ್ ಮತ್ತು ಪ್ರೇಮನಾಥ್ ಅವರ 'Sarasvati: Gayatri Savitri Bagdevi'[46] ಕೃತಿಗಳು ಮತ್ತು ಜ್ಯೇಷ್ಠವರ್ಮನ್ ಅವರ 'The Sublime Message of Goddess Saraswati'[47] ಲೇಖನ ಹೆಸರಿಸಬಹುದಾದ ಪ್ರಕಟಣೆಗಳು.

---

41. Kanailal Bhattacharya: Sarasvati – A Study on her Concept and Iconography, Saraswat Library Calcutta. 1983
42. Ramachandra Rao S.K.: Pratima-Kosha, Encyclopaedia of Indian Iconography, Vol. 6, Kalpataru Research Academy Publication, Bangalore. 1992
43. Frederick W Bunce: Encyclopedia of Buddhist Deities Demigods, Godlings, Saints and Demons, DK Printworld (P) Ltd, New Delhi. 1994
44. Frederick W Bunce: Dictionary of Buddhist and Hindu Iconography, DK Printworld (P) Ltd, New Delhi. 1997
45. Niranjan Ghosh: Sri Sarasvati in Indian Art and Literature, Sri Satguru prakashana, Delhi, 1984
46. Chitralekha Singh & Prem Nath: Sarasvati: Gayatri Savitri Bagdevi, Crest Publishing House, New Delhi. 1999
47. Jyesht Verman: The Sublime Message of Goddes Saraswati -Mythic Society Quarterly Journal 2004. Vol. XCV, No.1; P.1-38

ಈವರೆಗಿನ ಎಲ್ಲಾ ಅಧ್ಯಯನಗಳು ಇಂಗ್ಲಿಷ್‌ನಲ್ಲಿಯೇ ಪ್ರಕಟವಾಗಿರುವಂತಹುಗಳು. ಇಲ್ಲಿನ ಯಾವುದೇ ಪ್ರಕಟಣೆಗೆ ಪ್ರಾದೇಶಿಕತೆಯ ತೊಡಕು ಇಲ್ಲ. ಆದರೂ ಭಾರತೀಯ ಸಂಶೋಧಕರು ಸಹಜವಾಗಿಯೇ ತಮ್ಮ ಪ್ರಾಂತ್ಯದ ಆಕರಗ್ರಂಥಗಳಿಗೆ ಹಾಗೂ ಶಿಲ್ಪಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟಿರುವುದನ್ನು ಕಾಣಬಹುದು.

ಕನ್ನಡದಲ್ಲಿ ನಡೆದಿರುವ ಅಧ್ಯಯನಗಳು

ಕ್ರಿ.ಶ.1944ರಲ್ಲಿ ಪ್ರಕಟವಾದ 30 ಸಂಪುಟಗಳ **'ಸಾಯಣಭಾಷ್ಯಸಹಿತಾ ಋಗ್ವೇದಸಂಹಿತಾ'** ಒಂದು ಬೃಹತ್ ಗ್ರಂಥ.[48] ಮೈಸೂರು ಮಹಾರಾಜರ ಆಶ್ರಯದಲ್ಲಿ ವಿದ್ವಾಂಸ ಸಮೂಹ ಈ ಕಾರ್ಯವನ್ನು ಕೈಗೊಂಡಿದ್ದಾಗಿ ತಿಳಿದುಬರುತ್ತದೆ. ಹೆಚ್.ಪಿ.ವೆಂಕಟರಾವ್ ಎಂಬುವವರು ಈ ಬೃಹತ್‌ಗ್ರಂಥಮಾಲೆಯ ಸಂಪಾದಕರಾಗಿದ್ದಾರೆ. ಗ್ರಂಥದಲ್ಲಿ ಅಗತ್ಯವಿದ್ದ ಕಡೆಯೆಲ್ಲಾ ದೇವತೆಗಳ ಸ್ಥಾನ-ಮಾನ, ಸಂಬಂಧ-ಸ್ವರೂಪ ಮೊದಲಾದವುಗಳನ್ನು ವಿವರವಾಗಿ ಚರ್ಚಿಸಲಾಗಿದೆ. ಸಂಪುಟ 2, 7, 11-12, 14-19, 21-30 ಇವುಗಳಲ್ಲಿ ಅಲ್ಲಲ್ಲಿ ಸರಸ್ವತಿಯ ವಿಚಾರಗಳು ಪ್ರಸ್ತಾಪವಾಗಿವೆ. ಹೀಗೆ ಪ್ರಸ್ತಾಪವಾಗಿರುವ ವಿಚಾರಗಳಲ್ಲಿ ಪುನರಾವರ್ತನೆ ಎದ್ದು ಕಾಣುತ್ತದೆ. ಒಟ್ಟು ಸುಮಾರು ಮೂರುನೂರಕ್ಕು ಹೆಚ್ಚು ಪುಟಗಳನ್ನು ಸರಸ್ವತಿಯ ಬಗೆಗಿನ ಚರ್ಚೆ ವ್ಯಾಪಿಸಿದೆ. ಋಗ್ವೇದದ ಹಿಂದಿನ ಯಾವುದೇ ಆಧಾರಗಳು ಇಲ್ಲದಿರುವುದರಿಂದ, ಋಗ್ವೇದದ ನಂತರದ ಆಧಾರಗಳನ್ನೇ ಕೆಲವೊಂದು ಗೊಂದಲಗಳ ನಿವಾರಣೆಗಾಗಿ ಬಳಸಿಕೊಂಡಿರುವುದು ವಿಶೇಷ. ಉದಾಹರಣೆಗೆ, ತಿಸ್ರೋದೇವಿಯರ ವಿಷಯದ ಸ್ಪಷ್ಟತೆಗಾಗಿ ಬ್ರಾಹ್ಮಣ, ನಿರುಕ್ತ, ಉಪನಿಷತ್‌ಗಳನ್ನು ಉದಾಹರಿಸಿರುವುದನ್ನು ಕಾಣಬಹುದು. ಕನ್ನಡದಲ್ಲಿ ಸರಸ್ವತಿಯ ಬಗ್ಗೆ ಅಧ್ಯಯನ ಮಾಡುವ ಸಂಶೋಧಕನಿಗೆ, ಸರಸ್ವತಿಯ ಮೂಲಸ್ವರೂಪವನ್ನು ಅರಿಯಲು ಈ ಕೃತಿ ಏಕಮಾತ್ರ ಆಕರಗ್ರಂಥವಾಗಿದೆ. ವಿದ್ವಾಂಸಸಮೂಹದ ಕೆಲಸವಾದ್ದರಿಂದ ಹಾಗೂ ಯಾವ ವಿದ್ವಾಂಸರ ಹೆಸರನ್ನೂ ಪ್ರತ್ಯೇಕವಾಗಿ ಉಲ್ಲೇಖಿಸಿಲ್ಲವಾದ್ದರಿಂದ, ಅಲ್ಲಿನ ಯಾವ ಭಾಗದ ಚರ್ಚೆಯನ್ನು ಯಾವ ವಿದ್ವಾಂಸರು ನಡೆಸಿದ್ದಾರೆ ಎಂಬುದು ತಿಳಿಯುವುದಿಲ್ಲ.

ಕ್ರಿ.ಶ.1957ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟವಾದ ರಂ.ಶ್ರೀ.ಮುಗಳಿಯವರ **'ಕನ್ನಡ ಸಾಹಿತ್ಯದಲ್ಲಿ ಸರಸ್ವತೀ ದರ್ಶನ'**[49] ಒಂದು ಚಿಕ್ಕ ಕೃತಿ. ಇದರಲ್ಲಿ ಕನ್ನಡದ ಮಾರ್ಗ, ದೇಸಿ ಮತ್ತು ಹೊಸಗನ್ನಡದ ಸಾಹಿತ್ಯದಲ್ಲಿ ಅಂತರ್ಗತವಾಗಿರುವ ಸರಸ್ವತಿಯ ದರ್ಶನವನ್ನು ಆಯ್ದ ಕೃತಿಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಸರಸ್ವತಿಯ ತತ್ವಕ್ಕೇ ಹೆಚ್ಚಿನ ಪ್ರಾಧಾನ್ಯ ನೀಡಲಾಗಿದೆ.

---

48. ಸಾಯಣಭಾಷ್ಯಸಹಿತಾ ಋಗ್ವೇದಸಂಹಿತಾ, 30 ಸಂಪುಟಗಳು. ಶ್ರೀ ಶಾರದಾ ಪ್ರೆಸ್, ಮೈಸೂರು. 1944
49. ರಂ.ಶ್ರೀ ಮುಗಳೀ: ಕನ್ನಡ ಸಾಹಿತ್ಯದಲ್ಲಿ ಸರಸ್ವತಿ ದರ್ಶನ, ಮೈಸೂರು ವಿಶ್ವವಿದ್ಯಾಲಯ ಮೈಸೂರು. 1957

ವಿಶೇಷವಾಗಿ ವಿದ್ಯೆ, ಕಾವ್ಯ, ವಾಕ್ ಮೊದಲಾದವುಗಳ ಚರ್ಚೆಯೂ ನಡೆದಿದೆ. ಕನ್ನಡ ಸಂಸ್ಕೃತಿಯ ಭಾಗವಾದ ಸಾಹಿತ್ಯದ ಹಿನ್ನೆಲೆಯಲ್ಲಿ ಸರಸ್ವತಿಯ ಬಗ್ಗೆ ನಡೆದ ಮೊದಲ ಅಧ್ಯಯನ ಇದು ಎಂಬುದು ಈ ಕೃತಿಯ ಹಿರಿಮೆ.

ಕ್ರಿ.ಶ.1985ರಲ್ಲಿ ಪ್ರಕಟವಾದ ಹೆಚ್.ಎಸ್.ಲಕ್ಷ್ಮೀನರಸಿಂಹಮೂರ್ತಿ ಎಂಬುವವರ **'ಸರಸ್ವತೀರಹಸ್ಯೋಪನಿಷಚ್ಚಂದ್ರಿಕೆ'**[50] ಕೇವಲ 54 ಪುಟಗಳ ಪುಟ್ಟ ಕೃತಿ. ಸರಸ್ವತಿರಹಸ್ಯೋಪನಿಷತ್ತು ಋಗ್ವೇದಕ್ಕೆ ಸೇರಿದ್ದು ಉಪನಿಷನ್ಮಾಲೆಯಲ್ಲಿ 106ನೆಯದೆಂದು ಪರಿಗಣಿಸಲ್ಪಟ್ಟಿದ್ದೆಂದು ಹೇಳಿ, ವಿವರಣೆಯನ್ನು ಕೊಟ್ಟು ಪ್ರಕಟಿಸಲಾಗಿದೆ. ಹಾಗೆ ಕೊಟ್ಟಿರುವ ವಿವರಣೆಯಲ್ಲಿ ಕೆಲವು ಸರಸ್ವತಿಯ ವಿಚಾರಗಳನ್ನು ಪ್ರಸ್ತಾಪಿಸಲಾಗಿದೆ. ಮುಖ್ಯವಾಗಿ ಜನಸಾಮಾನ್ಯರಲ್ಲಿ ಒಂದೇ ಎಂದು ಭಾವಿಸಲ್ಪಟ್ಟಿರುವ ಸರಸ್ವತಿ ಮತ್ತು ಶಾರದೆ, ಮೂಲತತ್ವದ ದೃಷ್ಟಿಯಿಂದ ಉಪಾಸಕರದೃಷ್ಟಿಯಿಂದ ಬೇರೆ ಬೇರೆ ದೇವತೆಗಳೆಂದು ಚರ್ಚಿಸಿದೆ. ದಂಡಿಯ ಪ್ರಸಿದ್ಧ ಸರಸ್ವತೀ ಸ್ತುತಿಯಾದ 'ಚತುರ್ಮುಖಮುಖಾಂಭೋಜ......' ಎಂಬ ಪದ್ಯವೂ ಈ ಉಪನಿಷತ್‌ಭಾಗವಾಗಿ ಬಂದಿರುವುದು ಒಂದು ವಿಶೇಷ.

ಕರ್ನಾಟಕ ಇತಿಹಾಸ ಅಕಾಡೆಮಿಯ **'ಇತಿಹಾಸದರ್ಶನ'** ಸಂಪುಟಗಳಲ್ಲಿ ಕೆ.ವಸಂತಲಕ್ಷ್ಮಿಯವರ ಸರಸ್ವತಿಯ ಬಗೆಗಿನ ಎರಡು ಲೇಖನಗಳು ಪ್ರಕಟವಾಗಿವೆ. ಕ್ರಿ.ಶ.1991ರಲ್ಲಿ ಪ್ರಕಟವಾಗಿರುವ 'ಶಾರದಾ ಉಪಾಸನೆ ಒಂದು ಅಧ್ಯಯನ'[51] ಎಂಬ ಲೇಖನ ಶಾರದಾ ಉಪಾಸನೆಗೆ ಸಂಬಂಧಿಸಿದ್ದಾಗಿದೆ. ಇಲ್ಲಿ ಚರ್ಚಿತಳಾಗಿರುವ ಶಾರದೆಗೂ ಪ್ರಸ್ತುತ ಅಧ್ಯಯನದ ಸರಸ್ವತಿಗೂ ಯಾವುದೇ ಸಂಬಂಧವಿಲ್ಲ. ಲೇಖನದ ಕೊನೆಯ ಭಾಗದಲ್ಲಿ ಶಾರದೆಯ ಲಕ್ಷಣಗಳಿಗೂ ಸರಸ್ವತಿಯ ಲಕ್ಷಣಗಳಿಗೂ ಹೆಚ್ಚೇನು ವ್ಯತ್ಯಾಸವಿಲ್ಲ ಎಂಬುದನ್ನು ಸ್ಪಷ್ಟೀಕರಿಸಿದ್ದಾರೆ. ಆದರೆ, **'ಯಕ್ಷಿ ಸಿದ್ಧಾಯಿಕೆಯನ್ನು ಸರಸ್ವತಿಯೆಂದೇ ಭಾವಿಸುವರು'** ಎನ್ನುವ ಲೇಖಕಿಯ ಮಾತಿಗೆ ಯಾವ ಆಧಾರವೂ ಇಲ್ಲ. ಅಕ್ಷಮಾಲೆ, ಅಂಕುಶ, ಪಾಶ ಮತ್ತು ಪುಸ್ತಕಗಳನ್ನು ಕೈಗಳಲ್ಲಿ ಧರಿಸಿರುವ ಸಿದ್ಧಾಯಿಕೆಯ ಲಾಂಛನ ಹಂಸ ಎಂಬುದಕ್ಕೂ ಯಾವ ಆಧಾರಗಳೂ ಇಲ್ಲ. ಕ್ರಿ.ಶ.1992ರಲ್ಲಿ ಪ್ರಕಟವಾಗಿರುವ ಅದೇ ಲೇಖಕರ 'ಕರ್ನಾಟಕದ ಸರಸ್ವತಿ ಶಿಲ್ಪಗಳು'[52] ಲೇಖನದಲ್ಲಿ ಕೆಲವೊಂದು ಶಿಲ್ಪಗಳನ್ನು ಶಾಸ್ತ್ರೀಯ ಆಧಾರಗಳೊಂದಿಗೆ ಚರ್ಚಿಸಲಾಗಿದೆ. ಆದರೆ ಈ ಲೇಖನದಲ್ಲೂ ಉಲ್ಲೇಖವಾಗಿರುವ **'ಜೈನಧರ್ಮದಲ್ಲಿ ಸರಸ್ವತಿಯು ಮಹಾವೀರ ತೀರ್ಥಂಕರನ ಯಕ್ಷಿದೇವತೆಯಾಗಿ**

50. ಲಕ್ಷ್ಮೀನರಸಿಂಹಮೂರ್ತಿ ಹೆಚ್.ಎಸ್.: ಸರಸ್ವತೀ ರಹಸ್ಯೋಪನಿಷಚ್ಚಂದ್ರಿಕೆ, ಆಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ. 1985

51. ವಸಂತಲಕ್ಷ್ಮಿ ಕೆ.: ಶಾರದಾ ಉಪಾಸನೆ ಒಂದು ಅಧ್ಯಯನ (ಇತಿಹಾಸ ದರ್ಶನ ಸಂ. 6) 1991. ಪು.ಟ83–93

52. ವಸಂತಲಕ್ಷ್ಮಿ ಕೆ.: ಕರ್ನಾಟಕದ ಸರಸ್ವತಿ ಶಿಲ್ಪಗಳು(ಇತಿಹಾಸ ದರ್ಶನ ಸಂ. 7) 1992. ಪು.74–78

ಕಾಣಿಸಿಕೊಳ್ಳುತ್ತಾಳೆ' ಎಂಬ ಮಾತಿಗೂ ಯಾವುದೇ ಆಧಾರವಿಲ್ಲ. ಪ್ರಸ್ತುತ ಅಧ್ಯಯನದಲ್ಲಿ ಸರಸ್ವತಿ ಮತ್ತು ಸಿದ್ಧಾಯಿಕೆ ಇಬ್ಬರೂ ಬೇರೆ ಬೇರೆ ಎಂದೂ, ಅವರಿಬ್ಬರಿಗೂ ಯಾವುದೇ ಹೋಲಿಕೆಯಿಲ್ಲ ಎಂಬುದನ್ನು ನಾನು ಆಧಾರಸಮೇತವಾಗಿ ನಿರೂಪಿಸಿದ್ದೇನೆ.

ಕ್ರಿ.ಶ.1993 ಸೆಪ್ಟಂಬರ್‌ನಲ್ಲಿ ಪ್ರಕಟವಾಗಿರುವ ಚಿ.ನಾ.ಮಂಗಳ ಅವರ **'ಭಾರತೀಯರ ಪರಿಕಲ್ಪನೆಯಲ್ಲಿ ಸರಸ್ವತಿ'**[53] ಕೃತಿ ಕೇವಲ 40 ಪುಟಗಳ ಪುಸ್ತಕ. ವೇದ, ಪುರಾಣ, ಮಹಾಭಾರತಗಳಿಂದ ಕೆಲವು ಸರಸ್ವತೀ ಪರವಾದ ಶ್ಲೋಕಗಳನ್ನು ಸಂಗ್ರಹಿಸಿ ಅವುಗಳ ಕನ್ನಡ ಅನುವಾದದೊಂದಿಗೆ ಪ್ರಕಟಿಸಲಾಗಿದೆ. ಇನ್ನಾವುದೇ ವಿಶೇಷವಿಲ್ಲ.

'ಜೈನವೇದ ಮತ್ತು ಶ್ರುತಪಂಚಮಿ'[54] ಎಂಬ ಕಿರುಕೃತಿಯೊಂದು ಕ್ರಿ.ಶ.1998ರಲ್ಲಿ ಪ್ರಕಟವಾಗಿದೆ. ಎರ್ತೂರು ಶಾಂತಿರಾಜಶಾಸ್ತ್ರಿ ಎಂಬುವವರು ಅದರ ಕರ್ತೃ. ಜೈನವೇದ ಅಂದರೆ ಶ್ರುತಗಳ ಮತ್ತು ಶ್ರುತಪಂಚಮಿ ಹಬ್ಬದ ಆಚರಣೆಯ ಅರ್ಥ-ವಿಶೇಷಗಳನ್ನು ಪರಿಚಯ ಮಾಡಿಕೊಡುವ ಉದ್ದೇಶದಿಂದ ಕೃತಿ ರಚಿತವಾಗಿದೆ. ಲೇಖಕರು ಸ್ವತಃ ಧರ್ಮಾಧ್ಯಯನದಲ್ಲಿ ಆಸಕ್ತರಾದವರಾದ್ದರಿಂದ ಹಲವಾರು ಮಾಹಿತಿಗಳೊಂದಿಗೆ ಅರ್ಥಪೂರ್ಣವಾಗಿ ಕೃತಿರಚನೆ ಮಾಡಿದ್ದಾರೆ. ಜೈನಮತದ ಧಾರ್ಮಿಕಗ್ರಂಥಗಳ ಪರಿಚಯ ಮಾಡಿಕೊಟ್ಟಿದ್ದಾರೆ. ಆ ಗ್ರಂಥಗಳೇ ಸರಸ್ವತಿ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಆದಿಜಿನರು ಹೇಳಿದ ಉಪದೇಶಗಳೇ ಶ್ರುತಗಳೆಂದು, ಶ್ರುತಗಳೇ ಸರಸ್ವತಿಯೆಂದು, ಶ್ರುತಪಂಚಮಿ ಎಂದರೆ ಸರಸ್ವತಿಯ ಹಬ್ಬ ಎಂಬುದನ್ನು ವಿಶ್ಲೇಷಿಸಿದ್ದಾರೆ.

ಕ್ರಿ.ಶ.2002ರಲ್ಲಿ ಪ್ರಕಟವಾದ **'ಸರಸ್ವತಿ -ಪ್ರೇರಣಾ ಶಕ್ತಿಯ ಅಧಿದೇವತೆ'**[55] ಪುಸ್ತಕ ಕೇವಲ 34 ಪುಟಗಳ ಅನುವಾದ ಕೃತಿ. ಆರ್.ಎಲ್.ಕಶ್ಯಪ್ ಅವರು ಇಂಗ್ಲಿಷ್‌ನಲ್ಲಿ ಬರೆದಿದ್ದನ್ನು ರ.ವಿ.ಜಹಾಗೀರದಾರ ಎಂಬುವವರು ಅನುವಾದಿಸಿದ್ದಾರೆ. ಸರಸ್ವತೀ ಸಂಬಂಧವಾದ ಕೆಲವು ವೇದಮಂತ್ರಗಳಿಗೆ ಅರ್ಥವಿವರಣೆ ನೀಡಲಾಗಿದೆ. ಅಂತಿಮವಾಗಿ, ವೇದದಲ್ಲಿ ಸರಸ್ವತಿಯು ಮೂಲತಃ ದೈವೀಪ್ರೇರಣೆಯ ದೇವತೆ ಮಾತ್ರ. ವೇದಗಳಲ್ಲಿ ಬರುವ ಕೆಲವು ಗುಣವಾಚಕಗಳಿಂದಾಗಿ, ಸರಸ್ವತಿಯನ್ನು ನದಿದೇವತೆಯನ್ನಾಗಿ ಪರಿಭಾವಿಸಲಾಗಿದೆ. ಅದಕ್ಕೆ ವೇದಗಳ ಶ್ಲೇಷಾರ್ಥ ಭಾಷೆಯೂ ಕಾರಣ. ಆ ಕಾಲದಲ್ಲಿ ಹರಿಯುತ್ತಿದ್ದ ಸರಸ್ವತೀ ಹೆಸರಿನ ನದಿ ಇದ್ದದ್ದೂ ಕಾರಣ. ಶುದ್ಧ ಆಧ್ಯಾತ್ಮಿಕ ಅರ್ಥ ಗೊತ್ತಿಲ್ಲದವರು ಸರಸ್ವತಿಯನ್ನು ನದಿದೇವತೆಯಾಗಿಯೂ, ವಿದ್ಯಾದೇವತೆಯಾಗಿಯೂ ಪರಿಭಾವಿಸುತ್ತಾರೆ ಎಂಬುದು ಕೃತಿಕಾರರ

---

53. ಚಿ.ನಾ. ಮಂಗಳಾ: ಭಾರತೀಯರ ಪರಿಕಲ್ಪನೆಯಲ್ಲಿ ಸರಸ್ವತಿ, ಪುಸ್ತಕಾಲಯ, ಬೆಂಗಳೂರು. 1993
54. ಎರ್ತೂರು ಶಾಂತಿರಾಜಶಾಸ್ತ್ರಿ: ಜೈನವೇದ ಮತ್ತು ಶ್ರುತಪಂಚಮಿ, ಪಂಡಿತರತ್ನ ಎರ್ತೂರು ಶಾಂತಿರಾಜಶಾಸ್ತ್ರಿ ಟ್ರಸ್ಟ್, ಬೆಂಗಳೂರು. 1998
55. ಆರ್.ಎಲ್.ಕಶ್ಯಪ್: ಸರಸ್ವತಿ -ಪ್ರೇರಣಾ ಶಕ್ತಿಯ ಅಧಿದೇವತೆ ಅನು: ರ.ವಿ.ಜಹಾಗೀರದಾರ, ಶ್ರೀ ಅರೋಬಿಂದೊ ಕಪಾಲಿಶಾಸ್ತ್ರಿ ವೇದಸಂಸ್ಕೃತಿ ಸಂಸ್ಥೆ, ಬೆಂಗಳೂರು. 2002

ಒಟ್ಟಭಿಪ್ರಾಯ. ಆದರೆ ವೇದಗಳಲ್ಲಿ ಸರಸ್ವತಿಯು ವಿದ್ಯಾದೇವತೆಗಿಂತ ಹೆಚ್ಚಾಗಿ ನದಿಯಾಗಿ, ನದಿದೇವತೆಯಾಗಿ ಸ್ತುತಿಗೊಂಡಿದ್ದಾಳೆ ಎಂಬುದು ಈಗಾಗಲೇ ಸ್ವೀಕೃತವಾಗಿರುವ ವಿಚಾರ.

ಟಿ.ಆರ್.ಅನಂತರಾಮು ಅವರ **'ಸರಸ್ವತೀ ನದಿ: ಪುರಾಣ-ಇತಿಹಾಸ-ವಿಜ್ಞಾನ'**[56] ಎಂಬ ಕೃತಿ ಸರಸ್ವತೀ ನದಿಯ ಬಗ್ಗೆ ವೈಜ್ಞಾನಿಕವಾಗಿ ಆದರೆ ಸರಳವಾಗಿ ಚರ್ಚೆ ನಡೆಸಿರುವ ಪುಸ್ತಕ. ಸ್ವತಃ ಭೂವಿಜ್ಞಾನಿಯಾಗಿರುವ ಲೇಖಕರು ಪುರಾಣ ಮತ್ತು ಇತಿಹಾಸಗಳ ಸರಸ್ವತೀ ಸಂಬಂಧವಾದ ವಿಚಾರಗಳ ಹಿನ್ನೆಲೆಯಲ್ಲಿ, ಅಂತರ್ಗಾಮಿಯಾದ ಸರಸ್ವತಿನದಿಯ ಬಗ್ಗೆ ವೈಜ್ಞಾನಿಕವಾಗಿ ವಿವರವಾಗಿ ಬರೆದಿದ್ದಾರೆ. ಈ ಕೃತಿ, ಸರಸ್ವತೀ ನದಿಯ ವಿಷಯವಾಗಿ ಕನ್ನಡದಲ್ಲಿರುವ ಒಂದು ಸ್ವೀಕಾರಾರ್ಹ ದಾಖಲೆ.

ಇವುಗಳನ್ನು ಬಿಟ್ಟರೆ, ಸರಸ್ವತಿಯ ಬಗೆಗಿನ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಹೇಳಬಹುದಾದ ಇನ್ನಾವ ಕೃತಿಯೂ ಕನ್ನಡದಲ್ಲಿ ಇಲ್ಲ. ಸಾಂದರ್ಭಿಕವಾಗಿ ಕೆಲವು ಕೃತಿಗಳಲ್ಲಿ ಸರಸ್ವತಿಯ ಉಲ್ಲೇಖಗಳು ಬಂದಿರಬಹುದಷ್ಟೆ. ಕನ್ನಡದಲ್ಲಿರುವ ಸರಸ್ವತಿಯ ಬಗೆಗಿನ ಅಧ್ಯಯನದ ಈ ಕೊರತೆಯೇ ಒಂದು ಸಂಪೂರ್ಣ ಅಧ್ಯಯನದ ಅಗತ್ಯವಿದೆ ಎಂಬುದನ್ನೂ ಅದರ ಅನಿವಾರ್ಯತೆಯನ್ನೂ ಒತ್ತಿಹೇಳುತ್ತದೆ.

1.5. ಉದ್ದೇಶ

ಇದುವರೆಗೆ ಗಮನಿಸಿದ ಸರಸ್ವತಿಯ ಬಗೆಗಿನ ಪ್ರಾಥಮಿಕ ವಿಚಾರಗಳು, ಸರಸ್ವತಿಯ ಬಗೆಗೆ ನಡೆದಿರುವ ಅಧ್ಯಯನಗಳು 'ಸರಸ್ವತಿ' ಒಂದು ಅಧ್ಯಯನಯೋಗ್ಯ ವಿಷಯವೆಂಬುದನ್ನು ಸ್ಪಷ್ಟಪಡಿಸುತ್ತವೆ. ಮೂಲದಲ್ಲಿ ಕೇವಲ ಒಂದು ನದಿಯಾಗಿ, ಸಣ್ಣ ತೊರೆಯಂತೆ ಕಾಣಿಸಿಕೊಂಡ ಸರಸ್ವತಿಯು ಸುಮಾರು ನಾಲ್ಕು ಸಾವಿರ ವರ್ಷಗಳಿಂದ ಇಂದಿನವರೆಗೂ ಅತ್ಯಂತ ಜನಪ್ರಿಯ ದೇವತೆಯಾಗಿಯೇ ಉಳಿದು, ಮಹಾನದಿಯಾಗಿ ಬದಲಾಗಿದ್ದಾಳೆ. ನೂರಾರು ತೊರೆಗಳನ್ನೂ ಉಪನದಿಗಳನ್ನೂ ಸೇರಿಸಿಕೊಂಡು, ತನ್ನ ಮೂಲಪಾತ್ರವನ್ನೇ ಬದಲಾಯಿಸಿ, ಹೊಸವೇಷ, ಹೊಸದೇಶ, ಹೊಸಸ್ವರೂಪದಲ್ಲಿ ಹರಿಯುವ ನದಿಯಂತೆ, ಸರಸ್ವತಿಯ ಸ್ವರೂಪ ಅಂದಿನಿಂದ ಇಂದಿನವರೆಗೂ ಬದಲಾಗುತ್ತಲೇ ಇದೆ. ಬಹುಶಃ ಈ ಬದಲಾಗುವ ಪ್ರಕ್ರಿಯೆಯೇ ಸರಸ್ವತಿಗೆ ನಿತ್ಯನೂತನತೆಯನ್ನು ತಂದುಕೊಟ್ಟಿದೆ. 'ವಾಗ್ದೇವಿ' ಮಾತ್ರವಾಗಿದ್ದ ಸರಸ್ವತಿಯು ಇಂದು ವಿದ್ಯಾಸರಸ್ವತಿ, ಪುಸ್ತಕಸರಸ್ವತಿ, ಸಾಹಿತ್ಯಸರಸ್ವತಿ, ಕಾವ್ಯಸರಸ್ವತಿ, ಕಲಾಸರಸ್ವತಿ, ಸಂಗೀತಸರಸ್ವತಿ, ನಾಟ್ಯಸರಸ್ವತಿ, ಜಾನಪದಸರಸ್ವತಿ, ಜಂಗಮಸರಸ್ವತಿ, ವಚನಸರಸ್ವತಿ, ಪುರುಷಸರಸ್ವತಿ, ಕಾನನಸರಸ್ವತಿ...... ಹೀಗೆ ಹತ್ತು-ಹಲವು ಹೊಸವೇಷಗಳನ್ನು ಧರಿಸಿ ನಿಂತಿದ್ದಾಳೆ. ಇಂತಹ ನವನವೋನ್ಮೇಷಶಾಲಿಯಾದ ಸರಸ್ವತಿಯ ಬಗೆಗೆ ಸಹಜವಾಗಿಯೇ ಅಧ್ಯಯನಕುತೂಹಲ ಗರಿಗೆದರುತ್ತದೆ.

---

56. ಟಿ.ಆರ್.ಅನಂತರಾಮು: ಸರಸ್ವತಿ ಪುರಾಣ-ಇತಿಹಾಸ-ವಿಜ್ಞಾನ, ನವಕರ್ನಾಟಕ ಪ್ರಕಾಶನ, ಬೆಂಗಳೂರು. 2005

ಸರಸ್ವತಿಯ ಬಗೆಗೆ ಇದುವರೆಗೆ ನಡೆದಿರುವ ಮಹತ್ವವೆನ್ನಬಹುದಾದ ಅಧ್ಯಯನಗಳು ಕೂಡಾ ತಮ್ಮಷ್ಟಕ್ಕೆ ತಾವು ಸೀಮಿತಾರ್ಥದಲ್ಲಿ ಪರಿಪೂರ್ಣವಾದರೂ, ಕನ್ನಡಭಾಷೆ, ಸಾಹಿತ್ಯ, ಸಂಸ್ಕೃತಿಗಳ ವಿಷಯ ಬಂದಾಗ ಅಪೂರ್ಣವಾಗಿರುವುದನ್ನು ಗಮನಿಸಿದ್ದೇವೆ. ಕನ್ನಡದಲ್ಲಿಯಂತೂ ಸರಸ್ವತಿಯನ್ನು ಕುರಿತು ಒಂದು ಸಮಗ್ರವೆನ್ನಬಹುದಾದ ಅಧ್ಯಯನವಾಗಿಯೇ ಇಲ್ಲ. ಸುಮಾರು ಎರಡುಸಾವಿರ ವರ್ಷಗಳಿಂದ ಜೀವಂತವಿರುವ, ಒಂದು ಜೀವಂತ ಸಂಸ್ಕೃತಿ–ಕನ್ನಡಸಂಸ್ಕೃತಿ–ಯ ಹಿನ್ನೆಲೆಯಲ್ಲಿ ಅಧ್ಯಯನ ನಡೆಸುವುದೇ ಪ್ರಸ್ತುತ ಅಧ್ಯಯನದ ಮೂಲ ಉದ್ದೇಶ.

1.6. ವ್ಯಾಪ್ತಿ

ಭಾರತೀಯ ಮತ್ತು ಭಾರತೀಯೇತರ ಸಂಸ್ಕೃತಿಗಳೆರಡರಲ್ಲೂ ಮಾನ್ಯತೆ ಪಡೆದಿರುವ ಸರಸ್ವತಿಯ ಪ್ರಾಚೀನತೆ, ವಿಶ್ವವ್ಯಾಪಕತ್ವ, ಪ್ರಭಾವ, ಸ್ವರೂಪ ಇವುಗಳೆಲ್ಲವನ್ನೂ ಸೇರಿಸಿ ಸಮಗ್ರವೆನ್ನಬಹುದಾದ ಅಧ್ಯಯನ ನಡೆಸುವುದು ಕಷ್ಟಸಾಧ್ಯ. ಪ್ರಸ್ತುತ ಅಧ್ಯಯನದ ಉದ್ದೇಶ ಕನ್ನಡದ ಮಟ್ಟಿಗೆ ಸಮಗ್ರವೆನ್ನಬಹುದಾದ ಅಧ್ಯಯನದ ಕೊರತೆಯನ್ನು ತುಂಬುವ ಪ್ರಯತ್ನ. ಆದರೆ ಇದು ಅಧ್ಯಯನದ ಮಿತಿಯಲ್ಲ. ಕನ್ನಡ ಸಂಸ್ಕೃತಿಯ ಅವಿಭಾಜ್ಯ ಆಕರಗಳಾದ ಸಾಹಿತ್ಯ, ಜಾನಪದ, ಶಾಸನ, ಶಿಲ್ಪ, ಚಿತ್ರಕಲೆ ಮೊದಲಾದವುಗಳ ಹಿನ್ನೆಲೆಯಲ್ಲಿ ಅಧ್ಯಯನವನ್ನು ನಡೆಸಲಾಗಿದೆ. ಆದರೆ ಅದಕ್ಕೆ ಪೂರ್ವಭಾವಿಯಾಗಿ, ಸರಸ್ವತಿಯ ಮೂಲ ಸ್ವರೂಪವನ್ನು ಅರಿಯಲು ವೈದಿಕ, ಜೈನ ಮತ್ತು ಬೌದ್ಧಮತಗಳ ಸರಸ್ವತಿ ಹಾಗೂ ವಿಶ್ವಸಂಸ್ಕೃತಿಯಲ್ಲಿ ಸರಸ್ವತಿಗೆ ಸಮಾನವಾದ ಸ್ವರೂಪವನ್ನುಳ್ಳ ದೇವತೆಗಳ ಸ್ವರೂಪವನ್ನೂ ಕುರಿತು ಅಧ್ಯಯನ ನಡೆಸಲಾಗಿದೆ. ಇವುಗಳಲ್ಲದೆ ಕನ್ನಡ ಸಂಸ್ಕೃತಿಯನ್ನು ಪ್ರಭಾವಿಸಿರುವ ವೈದಿಕ–ಪುರಾಣಗಳು, ಮಹಾಕಾವ್ಯಗಳಲ್ಲಿ ಅಂತರ್ಗತವಾಗಿರುವ ಸರಸ್ವತಿಯ ವಿಚಾರಗಳನ್ನೂ ಗಮನಿಸಲಾಗಿದೆ. ಕನ್ನಡ ಸಾಹಿತ್ಯದ ವಸ್ತು, ವಿಷಯ, ರೂಪ, ಛಂದಸ್ಸು, ಕಾವ್ಯಮೀಮಾಂಸೆ ಇವುಗಳ ಮೇಲೆ ಅತಿ ಹೆಚ್ಚು ಪ್ರಭಾವ ಬೀರಿದ ಸಂಸ್ಕೃತ ಸಾಹಿತ್ಯದ ಕೆಲವು ಪ್ರಮುಖ ಕವಿಗಳ ಸರಸ್ವತಿಯ ವಿಚಾರವನ್ನು ಕನ್ನಡ ಸಾಹಿತ್ಯ ಸರಸ್ವತಿಯ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ. ಕರ್ನಾಟಕ ರಾಜ್ಯದಾದ್ಯಂತ ಸಿಗುವ ನೂರಾರು ಸರಸ್ವತಿಯ ಶಿಲ್ಪಗಳ ಅಧ್ಯಯನಕ್ಕೆ ಪೂರ್ವಭಾವಿಯಾಗಿ ವೈದಿಕ, ಜೈನ, ಬೌದ್ಧಮತಗಳ ಶಿಲ್ಪಶಾಸ್ತ್ರೀಯ ಆಧಾರಗ್ರಂಥಗಳಲ್ಲದೆ, ತಾಂತ್ರಿಕ ಪಠ್ಯಗಳನ್ನೂ ಗಮನಿಸಲಾಗಿದೆ.

ಸುಮಾರು ಒಂದೂವರೆ ಸಾವಿರವರ್ಷಗಳ ಇತಿಹಾಸವಿರುವ ಕನ್ನಡದ ಶಾಸನಗಳು, ಪ್ರಾಚೀನ ಮತ್ತು ಅರ್ವಾಚೀನ ಸಾಹಿತ್ಯಕೃತಿಗಳು, ಜನಪದ ಸಾಹಿತ್ಯಕೃತಿಗಳು, ಹಲವಾರು ಚಿತ್ರಕಲಾಪ್ರಕಾರಗಳು, ವಿವಿಧ ಕಾಲಮಾನಗಳಿಗೆ ಸೇರಿರುವ ವಿವಿಧ ರೂಪಲಕ್ಷಣಗಳ ಸರಸ್ವತಿಯ ನೂರಾರು ಶಿಲ್ಪಗಳು ಪ್ರಸ್ತುತ ಅಧ್ಯಯನದ ವ್ಯಾಪ್ತಿಯಲ್ಲಿ ಬಂದಿವೆ.

ಅಧ್ಯಾಯ 2 ಸರಸ್ವತೀ ಪರಿಕಲ್ಪನೆ

2.1. ಬೌದ್ಧಧರ್ಮ

2.2. ಜೈನಧರ್ಮ: ಮಹಾಪುರಾಣದಲ್ಲಿ ಸರಸ್ವತಿಯ ಪರಿಕಲ್ಪನೆ; ಸರಸ್ವತಿಯ ಹೆಸರುಗಳು; ಶ್ರುತದೇವತಾ

2.3. ವೈದಿಕಮತ

2.3.1. ವೇದಗಳು: ನದಿ ಮತ್ತು ನದೀದೇವತೆ; ದೇವತೆ ಅಥವಾ ಯಜ್ಞದೇವತೆ; ತಿಸ್ರೋದೇವಿಯರು; ಇಳಾ–ಸರಸ್ವತೀ–ಕಾಮಧೇನು; ವಾಗ್ದೇವತೆ; ಜ್ಞಾನದೇವತೆ ಮತ್ತು ಪ್ರೇರಣಾದೇವತೆ; ಯುದ್ಧದೇವತೆ ಅಥವಾ ರಕ್ಷಣಾದೇವತೆ; ಶಾಂತಿದೇವತೆ; ಅಹಿಂಸಾದೇವತೆ; ಅನ್ನಪೂರ್ಣೆ; ಭಾಗ್ಯದೇವತೆ; ಆರೋಗ್ಯದೇವತೆ; ತಾಯಿ; ಸಹೋದರಿ; ಮಗಳು; ಸ್ನೇಹಿತೆ; ಪತ್ನಿ; ಸರಸ್ವತಿ ಮತ್ತು ಸಾ(ಸ)ರಸ್ವತ; ಸಹದೇವತೆಗಳು

2.3.2. ವೇದಾಂತ ಸಾಹಿತ್ಯ: ನದಿ; ವಾಕ್; ವೇದಮಾತೆ; ಕಾಮಧೇನು; ಸಿಂಹಿಣಿಯ ರೂಪಧಾರಣೆ; ವಾಗ್ದೇವಿಯ ಸ್ತ್ರೀರೂಪಧಾರಣೆ; ವಾಗ್ದೇವಿಯ ಸರಸ್ವತೀ ಅವತಾರ;

3.2.3. ಸರಸ್ವತೀರಹಸ್ಯೋಪನಿಷಚ್ಚಂದ್ರಿಕೆ

2.3.4. ಮಹಾಭಾರತ

2.3.5. ಪುರಾಣಗಳು: 2.3.5.1. ಪದ್ಮಪುರಾಣ; 2.3.5.2. ಬ್ರಹ್ಮವೈವರ್ತಪುರಾಣ; 2.3.5.3. ದೇವೀ ಭಾಗವತ ಮಹಾಪುರಾಣ; 2.3.5.4. ಮಾರ್ಕಂಡೇಯ ಪುರಾಣ; 2.3.5.5. ಬ್ರಹ್ಮಾಂಡಪುರಾಣ; 2.3.5.6. ವಾಮನಪುರಾಣ; 2.3.5.7. ಮತ್ಸ್ಯಪುರಾಣ; 2.3.5.8. ಸ್ಕಂದಪುರಾಣ; 2.3.5.9. ಭಾಗವತಪುರಾಣ; 2.3.5.10. ಲಿಂಗ ಪುರಾಣ; 2.3.5.11. ವರಾಹ ಪುರಾಣ; 2.3.5.12. ವಿಷ್ಣುಧರ್ಮೋತ್ತರ ಪುರಾಣ; 2.3.5.13. ಅಗ್ನಿ ಪುರಾಣ

2.3.6. ಶ್ರೀತತ್ವನಿಧಿ

2.4. ಅನ್ಯನಾಗರಿಕತೆಗಳಲ್ಲಿ ಸರಸ್ವತಿಗೆ ಸಮಾನವಾದ ದೇವತೆಗಳು

2.4.1. ಈಸಿಸ್ (Isis): ಈಜಿಪ್ಷಿಯನ್ ದೇವತೆ

2.4.2. ಅಥೀನಾ (Athena or Athene): ಗ್ರೀಕ್ ದೇವತೆ

ಅಧ್ಯಾಯ 2

ಸರಸ್ವತೀ ಪರಿಕಲ್ಪನೆ

ಭಾರತೀಯ ಸಂಸ್ಕೃತಿಯಲ್ಲಿ ಸರಸ್ವತಿಯ ಪಾತ್ರ ಅತ್ಯಂತ ಮಹತ್ತರವಾದುದು. ನದಿ, ನದಿದೇವತೆ, ವಾಗ್ದೇವತೆ, ವಿದ್ಯಾದೇವತೆ, ಜ್ಞಾನದೇವತೆ..... ಹೀಗೆ ಹಲವಾರು ಸ್ವರೂಪಗಳಲ್ಲಿ ಸರಸ್ವತಿಯು ಪರಿಚಿತಳು. ಬ್ರಹ್ಮನ ಮಗಳೆಂದೂ, ಬ್ರಹ್ಮನ ಸೃಷ್ಟಿಯಾದ ವೇದಗಳಿಗೆ ಅಧಿದೇವತೆಯೆಂದೂ, ವೇದಮಾತೆಯೆಂದೂ ಸರಸ್ವತಿಯನ್ನು ಸ್ತುತಿಸಲಾಗಿದೆ. ಬ್ರಹ್ಮನ ಮಗಳು ಎಂಬ ಪರಿಕಲ್ಪನೆಯನ್ನು ಮೀರಿ, ಸರಸ್ವತಿಗೆ 'ಬ್ರಹ್ಮನ ಶಕ್ತಿ' ಎಂಬ ಸ್ವರೂಪವೂ ಬೆಳೆದು ಬಂದಿದೆ. 'ಸರಸ್ವತಿ' ಎಂದರೆ ಸಾಮಾನ್ಯವಾಗಿ ನಮ್ಮ ಕಣ್ಣಮುಂದೆ ನಿಲ್ಲುವ ರೂಪವೆಂದರೆ, ಚತುರ್ಭುಜಗಳು, ಎರಡು ಕೈಗಳಲ್ಲಿ ವೀಣೆ, ಇನ್ನೊಂದರಲ್ಲಿ ಅಕ್ಷಮಾಲೆ, ನಾಲ್ಕನೆಯದರಲ್ಲಿ ಪುಸ್ತಕ. ಬಿಳಿ ತಾವರೆಯ ಮೇಲೆ ಆಸೀನಳಾಗಿರುವ ಶುಭ್ರವರ್ಣದ ಸರಸ್ವತಿಯ ವಾಹನ ಹಂಸ. ಕೆಲವೊಮ್ಮೆ ನವಿಲೂ ಇರುತ್ತದೆ. ಹೀಗೆ ಭಾರತೀಯ ಜನಮಾನಸದಲ್ಲಿ ನೆಲೆನಿಂತಿರುವ ಸರಸ್ವತಿಯ ಉಗಮ, ವಿಕಾಸ, ಪರಿಕಲ್ಪನೆ ಮೊದಲಾದವುಗಳನ್ನು ಕೂಲಂಕಷವಾಗಿ ಅರಿಯುವ ಅಗತ್ಯವಿದೆ.

ಭಾರತ ಬಹುಧರ್ಮಗಳ ಬೀಡು. ಸರಸ್ವತಿಯು ತನ್ನ ವಿಶಿಷ್ಟ ಸ್ವರೂಪದಿಂದಾಗಿ, ಮತ್ತು ಜನರಿಗೆ ಅತ್ಯಂತ ಅಗತ್ಯವಾದ ಮಾತು ಮತ್ತು ವಿದ್ಯೆಯ ದೇವತೆಯಾದ್ದರಿಂದ ಎಲ್ಲಾ ಧರ್ಮಗಳಲ್ಲೂ ವಿಶೇಷವಾದ ಸ್ಥಾನವನ್ನು ಪಡೆದಿದ್ದಾಳೆ. ಭಾರತದ ಬಹುಮುಖ್ಯ ಧಾರ್ಮಿಕ ಪಂಥಗಳಾದ ಬೌದ್ಧ, ಜೈನ ಮತ್ತು ವೈದಿಕ ಪರಂಪರೆಯಲ್ಲಿ ಸರಸ್ವತಿಗೆ ಅತ್ಯಂತ ಪ್ರಮುಖವಾದ ಸ್ಥಾನವಿದೆ. ಸರಸ್ವತಿಯ ಮೂಲಸ್ವರೂಪವನ್ನು ಅರಿಯಲು ನಾವು ಆಶ್ರಯಿಸಬೇಕಾದುದು ಈ ಧರ್ಮಗಳನ್ನೇ.

ಈ ಅಧ್ಯಾಯದಲ್ಲಿ, ಮೊದಲಿಗೆ ಬೌದ್ಧ ಮತ್ತು ಜೈನ ಪಂಥಗಳಲ್ಲಿ ಕಂಡುಬರುವ ಸರಸ್ವತಿಯ ಸ್ವರೂಪವೇನು ಎಂಬುದನ್ನು ನಿರೂಪಿಸಿದೆ. ನಂತರ ಸರಸ್ವತಿಯ ತವರುಪರಂಪರೆಯಾದ ವೈದಿಕಪಂಥದಲ್ಲಿ, ಸರಸ್ವತಿಯ ಉಗಮ, ವಿಕಾಸ, ದರ್ಶನ ಮೊದಲಾದವುಗಳನ್ನು ಅಧ್ಯಯನ ಮಾಡಿದೆ. ವೇದಗಳು ಮತ್ತು ವೇದೋತ್ತರ ಸಾಹಿತ್ಯಗಳಲ್ಲಿ ಸರಸ್ವತಿಯ ವಿಕಾಸದ ಹಂತಗಳನ್ನು ಗುರುತಿಸಲು ಪ್ರಯತ್ನಿಸಿದೆ.

2.1. ಬೌದ್ಧಧರ್ಮ

ಭಾರತದಲ್ಲಿ ಉತ್ಪನ್ನವಾದ ಹಲವಾರು ಧರ್ಮಗಳಲ್ಲಿ ಬೌದ್ಧಧರ್ಮವೂ ಒಂದು. ಬುದ್ಧನ ಆಶಯಗಳನ್ನು ಅನುಸರಿಸಿ ರೂಪಿತವಾದ ಬೌದ್ಧಧರ್ಮ, ಐತಿಹಾಸಿಕ ನಡಾವಳಿಗಳಿಂದಾಗಿ

ವೇದವಿರೋಧಿಯಂತೆ, ತಾಂತ್ರಿಕ ಆಚರಣೆಯಂತೆ ಬಳಕೆಗೆ ಬಂದಿದ್ದೇ ಒಂದು ರೋಚಕ ಅಧ್ಯಾಯ. ಬುದ್ಧನ ಅನುಯಾಯಿಗಳಲ್ಲಿ ಉಂಟಾದ ಭಿನ್ನಮತ ಮಹಾಯಾನ ಮತ್ತು ಹೀನಯಾನ ಎಂದು ಎರಡು ಪಂಥಗಳಾಗಿ ರೂಪಗೊಂಡಿದ್ದು, ಬಹುತೇಕ ಏಷ್ಯಾಖಂಡವನ್ನು ಆವರಿಸಿಕೊಂಡಿದ್ದು ಇತಿಹಾಸದ ಪ್ರಮುಖ ಘಟ್ಟ. ಈ ವಿಸ್ತರಣೆಯ ಭಾಗವಾಗಿ ಹಿಂದೂ ದೇವತೆಗಳನ್ನು ಬೌದ್ಧಧರ್ಮದ ಅಂಗವನ್ನಾಗಿ ರೂಪಿಸಿಕೊಂಡಿದ್ದು ಎರಡನೆಯ ಘಟ್ಟ ಎನ್ನಬಹುದು. 'ಪಾಲಿತ್ರಿಪಿಟಿಕಾ'ಗಳಲ್ಲಿ ಕಂಡುಬರುವ ಅಷ್ಟೂ ದೇವತೆಗಳು ಬುದ್ಧನ ಉಪದೇಶಗಳನ್ನು ಅನುಸರಿಸಿ ರೂಪಗೊಂಡವುಗಳಲ್ಲ.[1] ಸಾಮಾನ್ಯ ಜನರ ನಂಬಿಕೆಗಳನ್ನು ಅಲ್ಲಗಳೆಯದೆ, ಸ್ಥಾವರ ಪ್ರಕೃತಿಯವರಾಗಿದ್ದ ವೈದಿಕ ದೇವಾನುದೇವತೆಗಳನ್ನು ಹೊಸರೂಪಗಳೊಂದಿಗೆ ಸ್ವೀಕರಿಸಿ, ವಿಗ್ರಹರೂಪದಲ್ಲಿ ಪೂಜೆಗೆ ಒಳಪಡಿಸಿದ್ದೇ ಬೌದ್ಧಧರ್ಮ. ಹೀಗೆ ಬೌದ್ಧಧರ್ಮದಿಂದ ಸ್ವೀಕೃತವಾದ ದೇವತೆಗಳ ಪಟ್ಟಿಯಲ್ಲಿ ಸರಸ್ವತಿಗೂ ಒಂದು ಪ್ರಮುಖ ಸ್ಥಾನವಿದೆ.

ಮಹಾಯಾನ ಪಂಥವೂ ವಜ್ರಯಾನ, ಸಹಜಯಾನ, ಮತ್ತು ಕಾಲಚಕ್ರಾಯಾನ ಎಂದು ಮೂರು ಭಾಗಗಳಾಗುತ್ತದೆ. ಇವುಗಳಲ್ಲದೆ ತಂತ್ರಯಾನ, ಮಂತ್ರಯಾನ, ಭದ್ರಯಾನ ಮೊದಲಾದ ಸಣ್ಣ ಸಣ್ಣ ಪಂಥಗಳೂ ರೂಪಗೊಂಡವು. ತಂತ್ರಯಾನವು ಮಹಾಯಾನ ಪಂಥದಿಂದ ರೂಪುಗೊಂಡಿದ್ದರೂ ವಜ್ರಯಾನದೊಂದಿಗೆ ಸೇರಿ ಬೌದ್ಧಧರ್ಮಕ್ಕೆ ತಾಂತ್ರಿಕ ಧರ್ಮವೆನ್ನುವ ಸ್ವರೂಪವನ್ನೂ ದೊರಕಿಸಿಕೊಟ್ಟಿತು. ಈ ಪ್ರಕ್ರಿಯೆಯಲ್ಲಿ ಬೌದ್ಧಧರ್ಮ ಮತ್ತು ಹಿಂದೂಧರ್ಮದ ಅನೇಕ ಉತ್ತಮಾಂಶಗಳ ಸಂಗಮವಾಯಿತು. ವಜ್ರಯಾನ ಮತ್ತು ತಂತ್ರಯಾನದ ಸಂಗಮದ ಫಲವಾಗಿ ಬೌದ್ಧಧರ್ಮದಲ್ಲಿ ಧಾರ್ಮಿಕ ಆಚರಣೆಗಳು, ಮಂತ್ರಗಳು, ಮಂಡಲಗಳು, ಮುದ್ರೆಗಳು, ಸಿದ್ಧಾಂತಗಳು, ನಂಬಿಕೆಗಳು ಹುಟ್ಟಿಕೊಂಡವು. ತಂತ್ರಯಾನದಲ್ಲಿ ಮೊದಲೇ ಇದ್ದ ಆಚರಣೆಗಳಿಗೂ ಧರ್ಮದ ಮಾನ್ಯತೆ ಸಿಕ್ಕಿತು. ಇದರಿಂದಾಗಿ ಬೌದ್ಧಧರ್ಮ ಜನಪ್ರಿಯತೆಯನ್ನೂ ಗಳಿಸಿಕೊಂಡು ದೇಶ ವಿದೇಶಗಳಲ್ಲಿ ನೆಲೆಯೂರಲು ಸಾಧ್ಯವಾಯಿತು. ಸೈದ್ಧಾಂತಿಕವಾಗಿ ವಜ್ರಯಾನ ಬುದ್ಧನ ಮೂಲ ಸಂದೇಶಗಳಿಗೆ ವಿರುದ್ಧವಾದುದಾಗಿದೆ ಎಂಬ ಆರೋಪದ ಹೊರತಾಗಿಯೂ ಆಚರಣೆಯಲ್ಲಿ, ಪೂಜಾವಿಧಾನಗಳಲ್ಲಿ ಹಲವಾರು ದೇವತೆಗಳ ವಿಗ್ರಹಗಳು, ಶಿಲ್ಪಗಳು, ಚಿತ್ರಗಳು ಬಳಕೆಗೆ ಬಂದವು. ದೇವತೆಗಳ ಸಂಖ್ಯೆಯೂ ಹೆಚ್ಚುತ್ತಾ ಹೋಯಿತು. ಹೀಗೆ ಹೆಚ್ಚಾದ ಬಹುತೇಕ ದೇವರುಗಳು ಸ್ವರೂಪದಲ್ಲಿ ಹಿಂದೂ ದೇವತೆಗಳನ್ನೇ ಹೋಲುತ್ತಿದ್ದವು. ಆದರೆ ಈ ದೇವತೆಗಳ ಸ್ವರೂಪ ಆಯಾಯ ದೇಶದ ಸ್ಥಳೀಯ ಅಂಶಗಳೊಂದಿಗೆ ಬೇರೆ ಬೇರೆಯಾಗಿಯೂ ಇರುತ್ತಿದ್ದವು. ಉದಾಹರಣೆಗೆ ಮಂಜುಶ್ರೀ ದೈವಜ್ಞಾನವನ್ನು ಪ್ರತಿನಿಧಿಸುವ ಬೋಧಿಸತ್ವ, ಆದರೆ ನೇಪಾಳದಲ್ಲಿ ಮೊದಲಿನ ಸ್ವರೂಪದ ಜತೆಗೆ ನೇಪಾಳೀ ನಾಗರೀಕತೆಯ ಸಂಸ್ಥಾಪಕನಾಗಿ, ಕಠ್ಮಂಡು

---

1. Bunce Fredrick W: An Encyclopaedia of Buddhist Deities Demigods, Godlings, Saints & Demons, Vol -1. p. 55

ಕಣಿವೆಯ ಸೃಷ್ಟಿಕರ್ತನ ಸ್ವರೂಪವನ್ನು ಪಡೆದಿದ್ದಾನೆ. ಬಹುತೇಕ ಮಂಜುಶ್ರೀಯ ಸ್ವರೂಪ ಹಿಂದೂ ಧರ್ಮದ ಬ್ರಹ್ಮನ ಸ್ವರೂಪವನ್ನೇ ಹೋಲುತ್ತದೆ. ಹಿಂದೂಧರ್ಮದಲ್ಲಿ ಸೃಷ್ಟಿಕರ್ತನಾದ ಬ್ರಹ್ಮನ ಶಕ್ತಿಯಾದ ಸರಸ್ವತಿಯು ಬೌದ್ಧಧರ್ಮದಲ್ಲಿ ಮಂಜುಶ್ರೀಯ ಶಕ್ತಿಯಾಗಿ ಕಾಣಿಸಿಕೊಳ್ಳುತ್ತಾಳೆ. ಕೆಲವೊಮ್ಮೆ ಆಕೆಯನ್ನು ಪ್ರಸ್ತುತ ಕಲ್ಪದ ಅಧಿಪತಿಯಾದ ಅವಲೋಕಿತೇಶ್ವರನ ಶಕ್ತಿಯಾದ ತಾರಾಳೊಂದಿಗೆ ಸಮೀಕರಿಸಲಾಗಿದೆ. ತಾರಾ ಎಂಬ ದೇವತೆಯು ಜ್ಞಾನದ ಸಂಕೇತವಾದ 'ಪ್ರಜ್ಞಾಪಾರಮಿತಾ'ದ ಸ್ತ್ರೀರೂಪವಾದ್ದರಿಂದ ಸರಸ್ವತಿಯನ್ನು ತಾರಾಳೊಂದಿಗೆ ಸಮೀಕರಿಸಲಾಗಿದೆ. ಅದರಿಂದಾಗಿ ಸರಸ್ವತಿಗೆ ಆಯಾಯ ದೇಶದಲ್ಲಿ ಬೇರೆ ಬೇರೆಯದೇ ಆದ ಹೆಸರೂ ಸ್ವರೂಪವೂ ದೊರೆತಿವೆ. ತಾಂತ್ರಿಕ ಆಚರಣೆಯ ಪ್ರಭಾವದಿಂದಾಗಿ, ಮೂಲ ಬೌದ್ಧಧರ್ಮದಲ್ಲಿ ಜ್ಞಾನದೇವತೆಯಾಗಿದ್ದ 'ಪ್ರಜ್ಞಾಪಾರಮಿತಾ'ಳ ಸ್ಥಾನವನ್ನು ಸರಸ್ವತಿಯು ಆಕ್ರಮಿಸಿದ್ದಾಳೆ. ಜನಪ್ರಿಯ ದೇವತೆಯೂ ಆಗಿದ್ದಾಳೆ. ಹೊಸ ಅವತಾರದಲ್ಲಿಯೂ ಸರಸ್ವತಿಯ ಪಾತ್ರ ಮೂಲದಲ್ಲಿದ್ದಂತೆ ಜ್ಞಾನದೇವತೆ ಮತ್ತು ವಿದ್ಯಾದೇವತೆಯದೇ ಆಗಿದೆ. ಕೆಲವೊಮ್ಮೆ ನೆನಪಿನ ದೇವತೆ ಎಂದೂ ಕರೆಯಲಾಗಿದೆ. ಆದರೆ ನೆನಪಿನ ಶಕ್ತಿ ಜ್ಞಾನಕ್ಕೆ ಪೂರಕವಾಗಿಯೇ ಇರುವಂಥದ್ದು.

'ಕಾರಂಡವ್ಯೂಹ' ಎಂಬ ಗ್ರಂಥದಲ್ಲಿ ದೇವತೆಗಳ ಸೃಷ್ಟಿಯನ್ನು ಕುರಿತು ಹೇಳಲಾಗಿರುವ ಪ್ರಕಾರ, ಆದಿಬುದ್ಧನ ಆದೇಶದ ಮೇರೆಗೆ ಪದ್ಮಪಾಣಿಯು ಮುಖ್ಯವಾಗಿ ಮೂರು ಗುಣ(ಕ್ರಿಯಾತತ್ವ)ಗಳನ್ನು – ಅಂದರೆ ಬ್ರಹ್ಮ (ದೇವತೆಗಳ ಮಾನವರ ಸೃಷ್ಟಿಕರ್ತ), ವಿಷ್ಣು (ರಕ್ಷಕ) ಮತ್ತು ಮಹಾದೇವ (ಲಯಕರ್ತ) ಇವರನ್ನು ಸೃಷ್ಟಿಸುತ್ತಾನೆ. ಬೋಧಿಸತ್ವನಿಂದ ವಾಯು, ಭೂಮಿ, ನೀರು, ಮಳೆ, ಸೂರ್ಯ, ಚಂದ್ರ ಮೊದಲಾದವರು ಸೃಷ್ಟಿಯಾಗುತ್ತಾರೆ. ಇವರ ಜತೆಯಲ್ಲಿಯೇ ಸಂಗೀತ ಮತ್ತು ಕಾವ್ಯದ ದೇವತೆಯಾಗಿ ಸರಸ್ವತಿ ಹಾಗೂ ಸೌಂದರ್ಯ ಮತ್ತು ಸಂಪತ್ತಿನ ದೇವತೆಯಾಗಿ ಲಕ್ಷ್ಮಿಯರು ಸೃಷ್ಟಿಯಾಗುತ್ತಾರೆ.[2] ಆದರೆ ಬೌದ್ಧಧರ್ಮದ ಇನ್ನೊಂದು ಸೃಷ್ಟಿಪುರಾಣವಾದ 'ಗುಣ–ಕಾರಂಡವ್ಯೂಹ' ಇನ್ನೊಂದು ರೀತಿಯ ವಿವರಣೆಯನ್ನು ಒದಗಿಸುತ್ತದೆ. ಅದರ ಪ್ರಕಾರ– ಪದ್ಮಪಾಣಿಯ ಭುಜಗಳ ನಡುವಿನಿಂದ ಬ್ರಹ್ಮ, ಆತನ ಎರಡು ಕಣ್ಣುಗಳಿಂದ ಸೂರ್ಯ ಚಂದ್ರರು, ಬಾಯಿಯಿಂದ ಗಾಳಿ, ಹಲ್ಲುಗಳಿಂದ ಸರಸ್ವತಿ, ಮಂಡಿಯಿಂದ ಲಕ್ಷ್ಮಿ, ಪಾದದಿಂದ ಭೂಮಿ, ನಾಭಿಯಿಂದ ನೀರು ಮೊದಲಾದವು ಸೃಷ್ಟಿಯಾಗುತ್ತವೆ.[3] ಇದು ಹಿಂದೂ ಪುರಾಣಗಳಲ್ಲಿ ಬರುವ ಸರಸ್ವತಿಯ ಸೃಷ್ಟಿ ವಿಚಾರವನ್ನೇ ಅಲ್ಪಸ್ವಲ್ಪ ಹೋಲುತ್ತದೆ.

ಬೌದ್ಧಧರ್ಮದಲ್ಲಿ ಸರಸ್ವತಿಯ ಸಾಮಾನ್ಯ ಲಕ್ಷಣಗಳು ಹೀಗಿವೆ: ಸರಸ್ವತಿಯ ಬಣ್ಣ ಬಿಳಿ. ಏಕಮುಖದ ದೇವತೆಯಾಗಿದ್ದು ಅರ್ಧಪರ್ಯಂಕಾಸನದಲ್ಲಿ ಕುಳಿತಿರುತ್ತಾಳೆ. ಹಂಸ ಆಕೆಯ ವಾಹನ. ದ್ವಿಭುಜೆಯಾಗಿದ್ದು ಒಂದು ಕೈಯಲ್ಲಿ ವೀಣೆಯಿದ್ದರೆ ಇನ್ನೊಂದು ವರದಾ ಮುದ್ರೆಯಲ್ಲಿರುತ್ತದೆ.

---

2. Dr. Niranjan Ghosh: Sri Sarasvati in Indian Art and Literature p.59
3. Ibid.,

ಕೆಲವೊಮ್ಮೆ ವೀಣೆಯ ಬದಲು ಬೆಳ್ದಾವರೆ ಇರುತ್ತದೆ.[4] ಇದಲ್ಲದೆ, ಆಸನ, ಭುಜಸಂಖ್ಯೆ, ಆಯುಧಗಳು, ಮುದ್ರೆಗಳು ಇವುಗಳನ್ನು ಆಧರಿಸಿ ವಜ್ರಸರಸ್ವತಿ, ಮಹಾಸರಸ್ವತಿ, ವಜ್ರವೀಣಾಸರಸ್ವತಿ, ವಜ್ರಶಾರದೆ, ಆರ್ಯಾಸರಸ್ವತಿ, ರಕ್ತಸರಸ್ವತಿ, ಸಿತಸರಸ್ವತಿ, ನೀಲಸರಸ್ವತಿ ಮೊದಲಾದ ಸ್ವರೂಪಗಳನ್ನು ಹೇಳಲಾಗಿದೆ.

ಸರಸ್ವತಿಯನ್ನು, ಚೀನಾದ ಬೌದ್ಧಧರ್ಮೀಯರು Ta-pien-ts'ai-t'iennu ಮತ್ತು Miao-yin mu ಎಂಬ ಹೆಸರುಗಳಿಂದ ಪೂಜಿಸುತ್ತಾರೆ. ಜಪಾನಿನಲ್ಲಿ Benten, ಮಂಗೋಲಿಯಾದಲ್ಲಿ Kele-yin ukin tegri ಎಂದೂ ಹಾಗೂ ಟಿಬೆಟ್‌ನಲ್ಲಿ Nag-gi-lha-mo ಮತ್ತು dByangs-can-ma (Yangchenma – English Phonetics) ಎಂಬ ಹೆಸರುಗಳಿಂದಲೂ ಆರಾಧಿಸುತ್ತಾರೆ. ಈ ಪದಗಳ ಅರ್ಥ ಸುಂದರವಾದ ಸ್ತ್ರೀ (Melodious Lady) ಮತ್ತು ಸುಂದರವಾದ ಧ್ವನಿ ಅಥವಾ ಸ್ವರ (Melodious voice) ಎಂಬುದಾಗಿದೆ.[5] ಟಿಬೆಟ್‌ನ Yangchenma ದೇವಿಯನ್ನು ಶ್ವೇತತಾರಾಳೊಂದಿಗೆ ಹೋಲಿಸಲಾಗುತ್ತದೆ. ಒಂದು ಮುಖ, ಮೂರುಕಣ್ಣು ಇದ್ದು ಕಾಲುಗಳನ್ನು ಸ್ವಲ್ಪ ಬಾಗಿಸಿ ನಿಂತಿರುವ Yangchenma ದೇವಿಯು ಎರಡು ಕೈಗಳಲ್ಲಿ ವೀಣೆಯನ್ನು ನುಡಿಸುತ್ತಿರುತ್ತಾಳೆ. ಕೆಲವೊಮ್ಮೆ ವೀಣೆಯ ಬದಲು ಒಂದು ಕೈಯಲ್ಲಿ ಪುಸ್ತಕ (ಪ್ರಜ್ಞಾಪಾರಮಿತಾ) ಇನ್ನೊಂದರಲ್ಲಿ ಅಕ್ಷಮಾಲೆ ಇರುತ್ತದೆ.[6] ಕೆಲವು ಚಿತ್ರಪಟಗಳಲ್ಲಿ, ಸರಸ್ವತಿಯನ್ನು ಹಂಸದ ಮೇಲೆ ಕುಳಿತು ಹಾರುತ್ತಿರುವಂತೆ ಚಿತ್ರಿಸಲಾಗಿದೆ.

ಜಪಾನಿನಲ್ಲಿ ಪ್ರಮುಖವಾಗಿ ಪೂಜೆಗೊಳ್ಳುತ್ತಿರುವ ಹಿಂದೂ ದೇವತೆಗಳೆಂದರೆ, ಮಹಾಕಾಳಿ (Daikokuten), ಕುಬೇರ (Bismanten) ಮತ್ತು ಸರಸ್ವತಿ (Benten). ಜಪಾನಿಯರ ಪರಿಕಲ್ಪನೆಯ ಏಳುಮಂದಿ ಅದೃಷ್ಟದೇವತೆಗಳಲ್ಲಿ Benten ಒಬ್ಬಳು.[7] ಸರಸ್ವತಿಯ ಪೂರ್ಣ ಹೆಸರು Dai-ben-Zai-ten, ಅಂದರೆ Great Divinity of Reasoning Faculty ಎಂದರ್ಥ. ಶಕ್ತಿ ಸಂತೋಷ, ಸಂಪತ್ತು, ಆಯಸ್ಸು ಮೊದಲಾದವುಗಳಿಗಾಗಿ ಸರಸ್ವತಿಯನ್ನು ಆರಾಧಿಸಲಾಗುತ್ತದೆ. ಜಪಾನಿನ ಸರಸ್ವತಿಯು ಸುಂದರವಾದ ಸ್ತ್ರೀಯಾಗಿದ್ದು, ಚೀನಾದ ಉನ್ನತವರ್ಗದ ಸ್ತ್ರೀಯಂತೆ ವೇಷಭೂಷಣ ಧರಿಸಿರುತ್ತಾಳೆ. ತನ್ನೆರಡು ಕೈಗಳಲ್ಲಿ ಬಿವಾ (Biwa) ಅಂದರೆ ಒಂದು ರೀತಿಯ ವೀಣೆಯನ್ನು ಹಿಡಿದಿರುತ್ತಾಳೆ. ರತ್ನಖಚಿತವಾದ ಕಿರೀಟವಿರುತ್ತದೆ. ಸಂಗೀತ, ಸಂಸ್ಕೃತಿ, ಕಲೆ, ಮೊದಲಾದವುಗಳ ದೇವತೆಯಾಗಿರುವ ಈಕೆಯನ್ನು ನದಿ ಮತ್ತು ನೀರಿಗೂ ಸಂಬಂಧಿಸಿದ ದೇವತೆಯಾಗಿಯೂ ಆರಾಧಿಸಲಾಗುತ್ತದೆ. ಒಂದು ದಂತಕತೆಯ ಪ್ರಕಾರ Benten ಸಮುದ್ರ ಡ್ರಾಗನ್ ಅನ್ನು ಮದುವೆಯಾಗಿ, ಡ್ರಾಗನ್‌ಗೂ ಎನೊಷಿಮಾ

---

4. Ramesh S Gupte: Iconography of the Hindus, Buddhist and Jains.
5. Bunce Fredrick W: AN Encyclopaedia of Buddhist Deities Demigods, Godlings, Saints & Demons, Vol -1, 1994, DK Printworld (p) Ltd., India. Page 479, 574 & 597
6. Gordan K: The Iconography of Tibetan Lamaism P.156
7. Encyclopaedia Britanica (2002 Edn.) Vol. 2, P.109

(Enoshima) ದ್ವೀಪಕ್ಕೂ ಇದ್ದ ದ್ವೇಷವನ್ನು ಕೊನೆಗೊಳಿಸುತ್ತಾಳೆ.[8] ಜಪಾನಿನಲ್ಲಿ ಸರಸ್ವತಿಗೆ ಸಂಬಂಧಿಸಿದ ಬಹುತೇಕ ದೇವಾಲಯಗಳು ನದಿ, ತೊರೆ, ಕೊಳ, ಸರೋವರ, ಸಮುದ್ರ ಮತ್ತು ದ್ವೀಪಗಳಲ್ಲಿಯೇ ಇವೆ ಎನ್ನಲಾಗಿದೆ. ಸರಸ್ವತಿಯು ಜಪಾನಿನಲ್ಲಿ ಅತ್ಯಂತ ಜನಪ್ರಿಯ ದೇವತೆಯಾಗಿದ್ದು, ದೂರದರ್ಶನ, ಪತ್ರಿಕೆಗಳಲ್ಲಿ ನಾನಾ ರೂಪದಲ್ಲಿ ಪ್ರತಿನಿತ್ಯ ಕಾಣಿಸಿಕೊಳ್ಳುತ್ತಾಳೆ.[9]

ನೇಪಾಳದಲ್ಲೂ ಸರಸ್ವತಿಯ ಆರಾಧನೆ ಇದೆ. ಅಲ್ಲಿ ಆರಾಧಿಸಲ್ಪಡುವ ಸರಸ್ವತಿಯ ಚಿತ್ರಣ ಹೀಗಿದೆ: ತಾವರೆಯ ಮೇಲೆ ಲಲಿತಾಸನದಲ್ಲಿ ಕುಳಿತಿರುವ ಚತುರ್ಭುಜ ದೇವತೆಯಾಗಿದ್ದು, ಎಡಭಾಗದ ಕೈಗಳಲ್ಲಿ ಬೆಳ್ದಾವರೆ ಮತ್ತು ಪುಸ್ತಕ ಇದ್ದರೆ, ಬಲಭಾಗದ ಕೆಳಗಿನ ಕೈ ಸೊಂಟದ ಮೇಲಿರುತ್ತದೆ. ಬಲಭಾಗದ ಮೇಲಿನ ಕೈ ಅಭಯಮುದ್ರೆಯಲ್ಲಿರುತ್ತದೆ.[10]

ಏಷ್ಯಾದ ಬಹುತೇಕ ದೇಶಗಳಲ್ಲಿ ಬೌದ್ಧಧರ್ಮ ನೆಲೆಯೂರಿದ್ದರಿಂದ, ಸರಸ್ವತಿಯ ಆರಾಧನೆ ಆ ಎಲ್ಲಾ ದೇಶಗಳಲ್ಲೂ ಉಳಿದುಕೊಂಡು ಬಂದಿದೆ. ಆದರೆ ಆರಾಧನೆಯ ಸ್ವರೂಪ, ಶಿಲ್ಪ ಮತ್ತು ಚಿತ್ರಗಳ ಚಿತ್ರಣ, ವೇಷಭೂಷಣ, ಹೆಸರು ಎಲ್ಲವೂ ಆಯಾಯ ದೇಶಗಳ ಸೊಗಡನ್ನು ಆಧರಿಸಿ ಬದಲಾಗಿವೆ. ಆದರೆ ಆರಾಧನೆಯ ಉದ್ದೇಶ ಮಾತ್ರ ಪ್ರಮುಖವಾಗಿ ಜ್ಞಾನಾರ್ಜನೆಯೇ ಆಗಿದೆ ಹಾಗೂ ಸರಸ್ವತಿಯು ಪ್ರಧಾನ ದೇವತೆಯಾಗಿಯೇ ಆರಾಧನೆಗೊಂಡಿದ್ದಾಳೆ. ವೈದಿಕ ದೇವತೆಯಾದರೂ, ವಿಗ್ರಹರೂಪದಲ್ಲಿ ಆರಾಧನೆಗೊಂಡಿದ್ದು ಮೊದಲು ಬೌದ್ಧಧರ್ಮದಲ್ಲಿಯೇ. ನಂತರ ವೈದಿಕ, ಜೈನಧರ್ಮಗಳಲ್ಲಿಯೂ ಸರಸ್ವತಿಯಾರಾಧನೆ ವಿಸ್ತೃತವಾಗಿ ಬಂದಿರುವುದನ್ನು ಮುಂದೆ ಗಮನಿಸಬಹುದಾಗಿದೆ.

2.2. ಜೈನಧರ್ಮ

ಜೈನಧರ್ಮ ಭಾರತದಲ್ಲಿ ಇರುವ ಪ್ರಮುಖ ಧರ್ಮಗಳಲ್ಲೊಂದು. ಬೌದ್ಧಧರ್ಮದಂತೆ ಜೈನಧರ್ಮವೂ ಇತಿಹಾಸದ ನಡಾವಳಿಗಳಿಂದಾಗಿ ಶ್ವೇತಾಂಬರ ಮತ್ತು ದಿಗಂಬರ ಪಂಥಗಳಾಗಿ ಇಬ್ಭಾಗವಾಯಿತು. ಮೂಲದ ಜೈನಮತಾನುಯಾಯಿಗಳಲ್ಲಿ ವಿಶೇಷವಾಗಿ ಪೂಜೆಗೊಳಗಾಗುವರು ಸಿದ್ಧ, ಅರ್ಹತ್ (ತೀರ್ಥಂಕರ), ಆಚಾರ್ಯ, ಉಪಾಧ್ಯಾಯ ಮತ್ತು ಸಾಧು ಎಂಬುವವರು. ಈ ಐವರೇ ಪಂಚಪರಮೇಷ್ಠಿಗಳು. ಈ ಐವರೇ ಮನುಷ್ಯನ ಬದುಕಿನ ಎಲ್ಲಾ ರಂಗಗಳನ್ನು ಪ್ರತಿನಿಧಿಸುತ್ತಾರೆ. ಆದ್ದರಿಂದ ಇವರುನ್ನುಳಿದ ಬೇರೆ ಯಾರ ಆರಾಧನೆಯೂ ಮುಖ್ಯವಲ್ಲ ಎಂಬ ಕಲ್ಪನೆಯಿತ್ತು. ನಂತರದ ದಿನಗಳಲ್ಲಿ ತ್ರಿಷಷ್ಠಿಶಲಾಕಪುರುಷರ ಪರಿಕಲ್ಪನೆ ಬೆಳೆದು, ಅವರು ಪ್ರಮುಖವಾಗಿ ಆರಾಧನಾಮೂರ್ತಿಗಳಾದರು. 24 ಮಂದಿ ತೀರ್ಥಂಕರರು, 12 ಮಂದಿ ಚಕ್ರವರ್ತಿಗಳು, 9 ಮಂದಿ

---

8. Encyclopaedia Britanica (2002 Edn.) Vol. 2, P.109
9. Richard Thornhill: Sarasvti in Japan (article published in Hindustan Today, Nov-Dec 2002)
10. Kanailal Bhattacharyya: Sarasvati. P.140

ಬಲದೇವರುಗಳು, 9 ಮಂದಿ ವಾಸುದೇವರುಗಳು ಮತ್ತು 9 ಮಂದಿ ಪ್ರತಿವಾಸುದೇವರುಗಳು ಇವರೇ 63 ಮಂದಿ ತ್ರಿಷಷ್ಠಿಶಲಾಕಾಪುರುಷರು. ಇವರುಗಳಲ್ಲದೆ ಶ್ವೇತಾಂಬರ ಪಂಥದಲ್ಲಿ ರೋಹಿಣೀ, ಕಾಳಿ, ಮಹಾಕಾಳಿ, ಗೌರಿ, ಗಾಂಧಾರೀ, ಮಾನಸಿ, ಮಹಾಮಾನಸೀ, ಅಚ್ಯುಪ್ತಾ (Achchhupta), ಪುರುಷದತ್ತಾ, ಜಂಬುನಾದಾ, ಪ್ರಜ್ಞಪ್ತೀ, ವಜ್ರಾಂಕುಶಾ, ವಜ್ರಶೃಂಖಲಾ, ಜ್ವಾಲಮಾಲಿನೀ, ಮಾನವೀ ಮತ್ತು ವೈರೋತ್ಯಾ (Vairotya) ಎಂಬ ಹದಿನಾರು ಜನ ವಿದ್ಯಾದೇವತೆಯರ ಪರಿಕಲ್ಪನೆಯೂ ರೂಪುಗೊಂಡಿತು. **'ಜೈನಧರ್ಮವು ಯಾವುದೇ ಹಿಂದೂ ಧರ್ಮದ ಯಾವುದೇ ದೇವತೆಯನ್ನು ಸ್ವೀಕರಿಸಿಲ್ಲ. ಆದರೆ ಕುಟುಂಬದ ದೇವತೆಗಳಂತೆ ಆರಾಧನಾಗೊಳ್ಳುತ್ತಿದ್ದ ದೇವತೆಗಳೇ ಮುಂದೆ ಜೈನಧರ್ಮದ ಭಾಗವಾಗಿ ಹೋದವು'**[11] ಎಂಬ ಮಾತುಗಳೂ ಇವೆ. ಜೈನಧರ್ಮ ಪ್ರವರ್ಧಮಾನಕ್ಕೆ ಬಂದಾಗ, ಅದನ್ನು ಸ್ವೀಕರಿಸಿದ ನಂತರವೂ, ಜನಸಾಮಾನ್ಯರು ತಾವು ಈ ಮೊದಲೇ ಆರಾಧಿಸುತ್ತಿದ್ದ ದೇವತೆಗಳ ಆರಾಧನೆಯನ್ನೂ ಮುಂದುವರೆಸಿರುವ ಸಾಧ್ಯತೆ ಇದೆ. ಮೇಲೆ ಹೇಳಿದ ವಿದ್ಯಾದೇವತೆಗಳಲ್ಲಿ ಹೆಚ್ಚಿನವು ಹಿಂದೂಧರ್ಮದ ದೇವತೆಗಳೇ ಆಗಿವೆ. 'ಹದಿನಾರು ವಿದ್ಯಾದೇವತೆಗಳನ್ನು ಸೇರಿಸಿದ ಸಮಗ್ರರೂಪವೇ ಸರಸ್ವತಿ'[12] ಎಂಬ ಅಭಿಪ್ರಾಯವೂ ಇದ್ದು, ಆ ಅಭಿಪ್ರಾಯಕ್ಕೆ ಯಾವುದೇ ಜೈನಶಾಸ್ತ್ರೀಯ ಆಧಾರಗಳಿಲ್ಲ[13] ಎಂಬ ಮಾತಿದೆ. ಅಬುವಿನ ದಿಲ್ವಾರ ದೇವಾಲಯದಲ್ಲಿ ಈ ಹದಿನಾರು ವಿದ್ಯಾದೇವಿಯರ ಶಿಲ್ಪಗಳಿವೆ. ಯಾವ ಶಿಲ್ಪವೂ ಸರಸ್ವತಿಯ ಶಿಲ್ಪಲಕ್ಷಣಗಳನ್ನು (ವೀಣೆ, ಪುಸ್ತಕ ಇತ್ಯಾದಿ) ಹೋಲುವುದಿಲ್ಲ ಎಂಬುದನ್ನು ಗಮನಿಸಿದಾಗ, ಸರಸ್ವತಿಗೂ ವಿದ್ಯಾದೇವತೆಗಳಿಗೂ ಯಾವುದೇ ಸಂಬಂಧವಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇಲ್ಲಿ ಉಕ್ತವಾಗಿರುವ ವಿದ್ಯಾದೇವಿಯರ ಹೆಸರುಗಳು ಮೇಲ್ನೋಟಕ್ಕೇ ಹಿಂದೂ ಮತ್ತು ಬೌದ್ಧಧರ್ಮದ ತಾಂತ್ರಿಕ ಆರಾಧನೆಯ ದೇವತೆಗಳ ಹೆಸರುಗಳಂತೆ ಕಾಣುತ್ತವೆ. ಬಹುಶಃ ಭಾರತದಲ್ಲಿ ತಾಂತ್ರಿಕ ಆಚರಣೆ ಪ್ರಬಲವಾಗಿದ್ದಾಗ ಈ ವಿದ್ಯಾದೇವಿಯರ ಪರಿಕಲ್ಪನೆ ಬೆಳೆದು ಬಂದಿರಬೇಕು. ಬೇರೆ ಯಾವ ಭಾರತೀಯ ಧರ್ಮದಲ್ಲೂ ವಿದ್ಯಾದೇವತೆಗಳು ಇಷ್ಟೊಂದು ಸಂಖ್ಯೆಯಲ್ಲಿಲ್ಲ. ಆದರೆ, ವಿದ್ಯಾದೇವತೆ ಸರಸ್ವತಿಗಿರುವ ಸ್ಪಷ್ಟವಾದ ಸ್ವರೂಪ ಹದಿನಾರು ವಿದ್ಯಾದೇವತೆಗಳಿಗಿಲ್ಲ. ಆದುದರಿಂದ ವಿದ್ಯಾದೇವತೆಗಳಿಗೂ ಸರಸ್ವತಿಗೂ ಯಾವುದೇ ರೀತಿಯ ಸಂಬಂಧವಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಸಮಕಾಲೀನ ಧರ್ಮಗಳಲ್ಲಿ ಜನಪ್ರಿಯವಾಗುತ್ತಿದ್ದ ಬಹುದೇವತಾ ಆರಾಧನೆ, ಜನಸಾಮಾನ್ಯರ ದೃಷ್ಟಿಯಿಂದ ಜೈನರಿಗೂ ಅನಿವಾರ್ಯವಾಗಿತ್ತು. ಪರಿಣಾಮವಾಗಿ ಯಕ್ಷ–ಯಕ್ಷಿಯರ ಪರಿಕಲ್ಪನೆ ರೂಪಗೊಂಡಿತು. ಹಲವಾರು ವಿದ್ಯಾದೇವತೆಗಳೇ ಯಕ್ಷಿಯರಾಗಿ ರೂಪಗೊಂಡಿದ್ದಾರೆ. ಯಕ್ಷ–

---

11. Dr. Niranjan Ghosh: Sri Sarasvati in Indian Art and Literature by p.80
12. Bhattacharyya B.C.: Jain Iconography by p.163
13. Kanailal Bhattacharyya: Sarasvati. P105

ಯಕ್ಷಿಯರು ತೀರ್ಥಂಕರರ ಸಹಾಯಕರಂತೆ ರೂಪಗೊಂಡರೂ, ಜನಸಾಮಾನ್ಯರ ದೃಷ್ಟಿಯಲ್ಲಿ ಅತ್ಯಂತ ಜನಪ್ರಿಯ ದೇವತೆಗಳಾದರು. ಬಹುತೇಕ ಯಕ್ಷ ಮತ್ತು ಯಕ್ಷಿಯರು ಪರಿಕಲ್ಪನೆಯಲ್ಲಿ, ಹೆಸರುಗಳಲ್ಲಿ ಹಿಂದೂ ದೇವತೆಗಳನ್ನು ಹೋಲುತ್ತಾರೆ. ಬ್ರಹ್ಮ, ಲಕ್ಷ್ಮಿ, ಗಣಪತಿ, ಕುಬೇರ ಮೊದಲಾದವರು ಯಕ್ಷ-ಯಕ್ಷಿಯರಾಗಿ ಜೈನಧರ್ಮವನ್ನು ಪ್ರವೇಶಿಸಿದಂತೆ ತೋರುತ್ತದೆ. ಹೀಗೆ ರೂಪಾಂತರ ಹೊಂದಿದ ಸಿದ್ಧಾಯಿಕೆ ಎಂಬ ಯಕ್ಷಿಯನ್ನು ಜೈನಸರಸ್ವತಿ ಎಂದೂ ತಿಳಿಯಲಾಗಿದೆ. ಆದರೆ ಅದು ಮೇಲ್ನೋಟಕ್ಕಷ್ಟೇ ಸೀಮಿತವಾಗಿದ್ದು, ತಲಸ್ಪರ್ಶಿ ಅಧ್ಯಯನದಿಂದ ಸಿದ್ಧಾಯಿಕೆ-ಸರಸ್ವತಿಯರು ಬೇರೆ ಬೇರೆ ಎಂಬುದು ಸ್ಪಷ್ಟವಾಗುತ್ತದೆ.

ಸಿದ್ಧಾಯಿಕೆ, ಸಿದ್ಧಾಯಿಕಾ, ಸಿದ್ಧಾಯಿಣಿ ಮತ್ತು ಸಿದ್ಧಾ ಮುಂತಾದ ಹೆಸರುಗಳಿರುವ ಜೈನ ಪರಂಪರೆಯ ದೇವತೆ ಮಹಾವೀರನ ಯಕ್ಷಿ ಎಂಬುದು ಸರ್ವವಿದಿತ. ಶಿಲ್ಪಲಕ್ಷಣಗಳ ದೃಷ್ಟಿಯಿಂದ ಸಿದ್ಧಾಯಿಕೆಗೆ ಜೈನಪರಂಪರೆಯ ಎರಡೂ ಪಂಥಗಳಲ್ಲೂ ವಿಶಿಷ್ಟಲಕ್ಷಣಗಳಿವೆ. ದಿಗಂಬರ ಪಂಥದಲ್ಲಿ ಸಿದ್ಧಾಯಿಕೆ ದ್ವಿಭುಜೆಯಾಗಿದ್ದು, ಒಂದು ಕೈಯಲ್ಲಿ ಪುಸ್ತಕ ಹಿಡಿದಿದ್ದರೆ, ಇನ್ನೊಂದು ಕೈ ವರದಾ ಮುದ್ರೆಯಲ್ಲಿರುತ್ತದೆ. ಭದ್ರಾಸನದಲ್ಲಿ ಆಸೀನಳಾಗಿರುವ ಯಕ್ಷಿಯ ಬಣ್ಣ ಸುವರ್ಣ. ಸಿಂಹ ಅವಳ ವಾಹನ. ಶ್ವೇತಾಂಬರ ಪಂಥದಲ್ಲಿ ಸಿದ್ಧಾಯಿಕೆಗೆ ಎರಡು ರೀತಿಯ ಲಕ್ಷಣಗಳನ್ನು ಹೇಳಲಾಗಿದೆ. ಎರಡೂ ರೀತಿಗಳಲ್ಲಿ ಆಕೆ ಚತುರ್ಭುಜಳಾಗಿದ್ದಾಳೆ. ಒಂದು ರೀತಿಯಲ್ಲಿ, ಮೂರು ಕೈಗಳಲ್ಲಿ ಪುಸ್ತಕ, ಬೀಜಪೂರ, ವೀಣೆಗಳಿದ್ದರೆ, ಇನ್ನೊಂದು ಕೈ ಅಭಯಮುದ್ರೆಯಲ್ಲಿರುತ್ತದೆ. ಸಿಂಹ ಇಲ್ಲಿ ಆಕೆಯ ವಾಹನ. ಇನ್ನೊಂದು ರೀತಿಯ ಸಿದ್ಧಾಯಿಕೆಯ ಮೂರು ಕೈಗಳಲ್ಲಿ ಪುಸ್ತಕ, ಪಾಶ, ಕಮಲ ಇದ್ದು ಇನ್ನೊಂದು ಕೈ ಅಭಯಮುದ್ರೆಯಲ್ಲಿರುತ್ತದೆ. ಇಲ್ಲಿ ಆನೆ ವಾಹನವಾಗಿರುತ್ತದೆ. ಈ ಎರಡೂ ರೀತಿಯ ಸಿದ್ಧಾಯಿಕೆಯ ಬಣ್ಣ ಹರಿತ್.

ಜೈನಧರ್ಮದಲ್ಲಿ ಯಕ್ಷ-ಯಕ್ಷಿಯರ ಪರಿಕಲ್ಪನೆ ರೂಪಗೊಂಡಿದ್ದು ಸುಮಾರು ಕ್ರಿ.ಶ. ಐದನೇ ಶತಮಾನದಲ್ಲಿ. ಜೈನಧರ್ಮದಲ್ಲಿ ಸರಸ್ವತಿಯ ಪರಿಕಲ್ಪನೆ ಸ್ಪಷ್ಟವಾಗಿ ಕ್ರಿ.ಶ.ದ ಆರಂಭದೊತ್ತಿಗೆ ರೂಪಗೊಂಡಿತ್ತು. ಎರಡನೇ ಶತಮಾನದ ಸರಸ್ವತಿಯ ಶಿಲ್ಪಗಳೂ ದೊರೆತಿವೆ. ಸಂಸ್ಕೃತದ 'ಮಹಾಪುರಾಣ'ದಲ್ಲಿ ಸರಸ್ವತಿಯ ಉಗಮ ಮತ್ತು ವಿಕಾಸದ ಬಗ್ಗೆ ಸ್ಪಷ್ಟವಾದ ವಿವರಗಳಿವೆ. ಸರಸ್ವತಿಯ ಸ್ತುತಿಯೂ ಇದೆ. ಕೈಗಳಲ್ಲಿ ಪುಸ್ತಕ ವೀಣೆ ಮೊದಲಾದ ಸರಸ್ವತೀ ಸಂಬಂಧೀ ಪರಿಕರಗಳನ್ನು ಹಿಡಿದಾಕ್ಷಣ ಸಿದ್ಧಾಯಿಕೆಯನ್ನು ಸರಸ್ವತಿ ಎನ್ನಲಾಗುವುದಿಲ್ಲ. ಜೈನಧರ್ಮಾನುಸಾರವೂ ಸರಸ್ವತಿಯು ವಾಗ್ದೇವತೆಯೇ ಆಗಿದ್ದಾಳೆ. 'ಜೈನವೇದ-ಶಾಸ್ತ್ರವೆಂದರೂ ಶ್ರುತವೆಂದರೂ ಒಂದೇ ಅರ್ಥವೆಂದೂ, ಆ ಶಾಸ್ತ್ರವೇ ಸರಸ್ವತೀ ಅಥವಾ ಶಾರದಾದೇವಿ ಎಂದೂ ಹೇಳಲಾಗಿದೆ' ಎಂಬುದು ಜೈನಪರಂಪರೆಯ

ನಂಬಿಕೆ.[14] ಹೀಗೆ ಜೈನಶಾಸ್ತ್ರಗ್ರಂಥಗಳು, ಸಾಹಿತ್ಯ ಕೃತಿಗಳು ಸರಸ್ವತಿಯನ್ನು ವಾಗ್ದೇವತೆಯಾಗಿ, ವಿದ್ಯಾದೇವತೆಯಾಗಿ ಸ್ವೀಕರಿಸಿ ಆರಾಧಿಸುತ್ತಾ ಬಂದಿವೆ.

ಮಹಾಪುರಾಣದಲ್ಲಿ ಸರಸ್ವತಿಯ ಪರಿಕಲ್ಪನೆ

ಆದಿಜಿನರ ಮುಖದಿಂದುದಯಿಸಿ, ಜಿನರ ಮುಖದಲ್ಲಿ ನೆಲೆನಿಂತ ಸರಸ್ವತಿಯ ಉಗಮ ಮತ್ತು ಶ್ರೇಷ್ಠತೆಯನ್ನು ಜೈನರ ಪವಿತ್ರಗ್ರಂಥವಾದ 'ಮಹಾಪುರಾಣ'ದಲ್ಲಿ ವಿವರವಾಗಿ ವರ್ಣಿಸಲಾಗಿದೆ. ಜೈನತತ್ವದ ಬಗ್ಗೆ ಭರತನಿಗುಂಟಾದ ಸಂಶಯವನ್ನು ನಿವಾರಿಸಲು ಆದಿಜಿನನಾದ ವೃಷಭದೇವನು ಮಾತನಾಡುತ್ತಾನೆ.

ಅಪರಿಸ್ಪಂದತಾಲ್ವಾದೇರಸ್ಪಷ್ಟದಶನುದ್ಯುತೇಃ
ಸ್ವಯಂಭುವೋ ಮುಖಾಂಭೋಜಾಜ್ಞಾತಾ ಚಿತ್ರಂ ಸರಸ್ವತೀ।[15]

'ಅಕ್ಷರೋತ್ಪತ್ತಿಸ್ಥಾನವಾದ ತಾಲು(ದವಡೆ) ಮೊದಲಾದವುಗಳ ಚಲನೆಯಿಲ್ಲದಿರುವುದೂ, ಹಲ್ಲುಗಳ ಕಾಂತಿಯೂ ಸ್ಪಷ್ಟವಾಗಿ ತೋರದಿರುವುದೂ ಆದ ಸ್ವಯಂಭೂ (ಆದಿಬ್ರಹ್ಮ)ನ ಮುಖಕಮಲದಿಂದ ಸರಸ್ವತಿಯು ಹೊರಟಳು.' ಅಂದರೆ ಇಲ್ಲಿ ಸರಸ್ವತಿಯು ಆದಿಜಿನರ ನಾಲಗೆಯಿಂದ ಜನಿಸಲಿಲ್ಲ; ಬದಲಿಗೆ ನೇರವಾಗಿ ಮುಖದಿಂದಲೇ ಜನಿಸಿದ್ದಾಳೆ. ಜೈನರಲ್ಲಿ ಸರಸ್ವತಿಯು ವಾಗ್ದೇವತೆಯಾದರೂ ವಾಕ್ ಅಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಸರಸ್ವತಿಯ ವಾಸಸ್ಥಾನ ವಿದ್ವಜ್ಜನರ ನಾಲಗೆಯ ತುದಿ; ಜಿನರ ನಾಲಗೆಯ ತುದಿಯಲ್ಲ. ಆದರೆ ಜಿನರ ಮುಖವೇ ಸರಸ್ವತಿಯ ಉತ್ಪತ್ತಿಸ್ಥಾನ ಮತ್ತು ತವರುಮನೆ ಎಂಬುದು "ಆದಿಬ್ರಹ್ಮರ ಮುಖಕಮಲದಲ್ಲಿ ಉದ್ಭವಿಸಿದ ಆ ಸರಸ್ವತಿಯು ಜಗತ್ತನ್ನು ವಶಮಾಡಿದುದರಿಂದ ನಿಜವಾಗಿಯೂ ಈ ಸರಸ್ವತಿಗೆ ಆದಿಬ್ರಹ್ಮರ ಮುಖಕಮಲವು ಉತ್ಪತ್ತಿಸ್ಥಾನ(ತವರ್ಮನೆ) ಆಗಿದೆ"[16] ಎಂಬ ಮಾತುಗಳಿಂದ ಸ್ಪಷ್ಟವಾಗುತ್ತದೆ. ಮಹಾಪುರಾಣದ ಈ ಬಗೆಯ ಸರಸ್ವತಿಯ ಪರಿಕಲ್ಪನೆಯೇ ಕನ್ನಡದ ಪಂಪನ 'ಪರಮಜಿನೇಂದ್ರವಾಣಿಯೆ ಸರಸ್ವತಿ'[17] ಎಂಬ ಮಾತಿಗೆ ಪ್ರಮಾಣವಾಗಿದೆ.

ಏಕರೂಪಾಪಿ ತದ್ಭಾಷಾಶ್ರೋತೄನ್ಪ್ರಾಪ್ಯ ಪೃಥಗ್ವಿಧಾನ್
ಭೇಜೇನಾನಾತ್ಮತಾಂ ಕುಲ್ಯಾಜಲಸ್ರುತಿರಿವಾಂಘ್ರಿಪಾನ್।

ಆದಿಜಿನರ ಮುಖದಿಂದ ಒಂದೇ ವಿಧವಾದ ದಿವ್ಯಭಾಷೆ ಹೊರಟರೂ, ಒಂದೇ ಜಲಪ್ರವಾಹವು ಬೇರೆ ಬೇರೆ ಕಾಲುವೆಗಳನ್ನು ಆಶ್ರಯಿಸಿ ಬೇರೆ ಬೇರೆ ಜಲಗಳಾಗಿಯೇ ಪರಿವರ್ತಿಸುವಂತೆ, ಬೇರೆ ಬೇರೆ ಶ್ರೋತೃಗಳನ್ನು ತಲುಪಿದ್ದರಿಂದ ಅದು (ಸರಸ್ವತಿ) ನಾನಾ ರೂಪ ತಾಳಿತು. ಮಹಾಪುರಾಣದ ಈ ಮಾತು

---

14. ಎರ್ತೂರು ಶಾಂತಿರಾಜ ಶಾಸ್ತ್ರೀ – ಜೈನವೇದ ಮತ್ತು ಶ್ರುತಪಂಚಮಿ, 1998. ಪು.12
15. ಮಹಾಪುರಾಣ 1–184
16. ಮಹಾಪುರಾಣ 1–185
17. ಪಂಪಭಾರತಂ 1–9

ಸರಸ್ವತಿಯ ಅಂದರೆ ವಾಗ್ದೇವಿಯ ಸರ್ವವ್ಯಾಪಕತೆಯನ್ನು ತೋರಿಸುತ್ತದೆ. ನಾಗವರ್ಮನ "ಸರ್ವಭಾಷಾಸರಸ್ವತೀ" ಮತ್ತು ಭಟ್ಟಾಕಳಂಕನ "ಸರ್ವಭಾಷಾಮಯೀ ಭಾಷಾ" ಎಂಬ ಪರಿಕಲ್ಪನೆಗೆ ಈ ಶ್ಲೋಕವೇ ಆಧಾರವಾಗಿದೆ.

'ಸರಸ್ವತಿಯು ಬ್ರಹ್ಮನ ಮುಖಕಮಲದಿಂದ ಜನಿಸಿದಳು' ಎಂಬ ವೈದಿಕ ಕಲ್ಪನೆಗೂ 'ಆದಿಜಿನರ ಮುಖಕಮಲದಿಂದ ಜನಿಸಿದಳು' ಎಂಬ ಜೈನಪರಿಕಲ್ಪನೆಗೂ ಸಾಮ್ಯವಿದೆ. ಆದರೆ ವೈದಿಕಧರ್ಮದಲ್ಲಿ ಅದೇ 'ಸರಸ್ವತಿಯನ್ನು ಬ್ರಹ್ಮನು ತನ್ನ ಶಕ್ತಿಯನ್ನಾಗಿ ಅಂದರೆ ಪತ್ನಿಯನ್ನಾಗಿ ಸ್ವೀಕರಿಸುತ್ತಾನೆ' ಎಂಬುದಕ್ಕೆ ಜೈನಧರ್ಮದ ಸಹಮತವಿಲ್ಲ. ಸರಸ್ವತಿಯು ಮೂಲತಃ ವೈದಿಕ ದೇವತೆಯಾಗಿದ್ದು, ನಂತರ ಜೈನಧರ್ಮಕ್ಕೆ ಸ್ವೀಕೃತವಾದವಳು. ಆದ್ದರಿಂದ ಈ ಕತೆಯೂ ಜೈನಧರ್ಮವನ್ನು ಪ್ರವೇಶಿಸಿದಂತಾಯಿತು. ಆದರೆ ಮಗಳನ್ನೇ ಪತ್ನಿಯನ್ನಾಗಿ ಸ್ವೀಕರಿಸಿದ ಸೃಷ್ಟಿಕರ್ತನ ಕತೆಗೆ ಒಂದು ತಾತ್ವಿಕತೆಯನ್ನು ಆರೋಪಿಸಲಾಗಿದೆ. ಶ್ರುತವೆಂದರೆ ಜೈನಪರಿಕಲ್ಪನೆಯಲ್ಲಿ ಎರಡು ವಿಧ. ಒಂದು ದ್ರವ್ಯಶ್ರುತ; ಇನ್ನೊಂದು ಭಾವಶ್ರುತ. ಜನರ ಶಬ್ದರೂಪವಾದ ವಚನಪರಂಪರೆಗೆ ದ್ರವ್ಯಶ್ರುತವೆಂದೂ, ಅದಕ್ಕೆ ಪ್ರೇರಕವಾದ ಭಾವರೂಪವಾದ ತತ್ವಜ್ಞಾನಕ್ಕೆ ಭಾವಶ್ರುತವೆಂದೂ ಕರೆಯಲಾಗಿದೆ.[18] ನಾಗಚಂದ್ರನು ತನ್ನ ಮಲ್ಲಿನಾಥಪುರಾಣದಲ್ಲಿ ಸರಸ್ವತಿಯನ್ನು 'ಪರಬ್ರಹ್ಮ ಶರೀರಪುಷ್ಟಿ'[19] ಎಂದು ಕರೆದಿದ್ದಾನೆ. ಅಂದರೆ ಪರಮಜಿನನ ಶರೀರಕ್ಕೆ, ಸರಸ್ವತಿಯಿಂದ ದೊರೆಯುವ ಆನಂದದ ಅನ್ನ, ರಸದ ಅಮೃತ ಪುಷ್ಟಿಯನ್ನು ಒದಗಿಸುತ್ತದೆ. ಈ ಜಗತ್ತು ಅಥವಾ ಸೃಷ್ಟಿಯೇ ಪರಮಾತ್ಮನ ಶರೀರ. ಸರಸ್ವತಿಯು ಆನಂದದ ಆಹಾರದಿಂದ ಈ ಸೃಷ್ಟಿಯನ್ನು ಪೋಷಿಸುತ್ತಾಳೆ. 'ಭಾವಶ್ರುತದ ಉಪಯೋಗ ಸೃಷ್ಟಿಕರ್ತರಾದ ಜಿನರಿಗೂ ದ್ರವ್ಯಶ್ರುತದ ಉಪಯೋಗ ಬೇರೆಯವರಿಗೂ ಆಗುವುದು. ಬೇರೆಯವರ ಉಪಯೋಗಕ್ಕಾಗಿ ದ್ರವ್ಯಶ್ರುತರೂಪದಲ್ಲಿ ಜಿನರಿಂದ ಜನಿಸಿದವಳಾದ್ದರಿಂದ ಸರಸ್ವತಿಯು ಜಿನರಿಗೆ ಮಗಳಾಗುತ್ತಾಳೆ. ಆದರೆ ಅವರಿಗೇ ಉಪಯೋಗವಾಗುತ್ತಿರುವ ಭಾವಶ್ರುತರೂಪಳಾದ ಸರಸ್ವತಿಯು ಜಿನರ ಪತ್ನಿಯ ಸ್ವರೂಪವನ್ನು ಹೊಂದುತ್ತಾಳೆ. ಇಲ್ಲಿ ಅರ್ಥ ಅಥವಾ ಭಾವವು ಪ್ರಧಾನವಾಗಿರುವುದರಿಂದ ಪತ್ನಿ ಎಂಬ ಪದವು ದೋಷಾವಹವಲ್ಲವೆಂದು ಭಾವಿಸಬೇಕು'[20] ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. 'ಪ್ರಜಾಪತಿಯು ವಾಕ್ಕಿನಿಂದಲೇ ಶಕ್ತಿಯನ್ನು ತೃಪ್ತಿಯನ್ನು ಪಡೆಯುತ್ತಾನೆ'[21] ಎಂಬುದು ವೈದಿಕಮತದ ನಂಬುಗೆಯೂ ಆಗಿದೆ. ಯಾವುದೇ ಧರ್ಮದಲ್ಲಿಯಾಗಲೀ, ನಂಬಿಕೆಯೇ ಪ್ರಧಾನವಾದ್ದರಿಂದ ಜನಸಾಮಾನ್ಯರ

---

18. ಶಬ್ದಮಣಿದರ್ಪಣಂ 1-9
19. ರಾಮಚಂದ್ರಚರಿತ ಪುರಾಣ 1-1
20. ಎರ್ತೂರು ಶಾಂತಿರಾಜ ಶಾಸ್ತ್ರೀ – ಜೈನವೇದ ಮತ್ತು ಶ್ರುತಪಂಚಮಿ, 1998. ಪು.14-15
21. ಶ.ಬ್ರಾ. 3.9.1.9 (ವಾಗ್ವೈ ಸರಸ್ವತೀ) (ವಾಚೈವ ತತ್ಪ್ರಜಾಪತಿಃ ಪುನರಾತ್ಮಾನಮಾಪ್ಯಾಯಯತ)

ನಂಬಿಕೆಗಳನ್ನು ಅಲ್ಲಗಳೆಯಲಾಗದು. ನಂಬಿಕೆಯ ನೇರ ಸ್ವೀಕೃತಿಗೆ ಹಿಂಜರಿಕೆಯಾದಾಗ ತಾತ್ವಿಕ ಸಮಾಧಾನಗಳ ಮೊರೆಹೋಗುವುದು ಎಲ್ಲಾ ಧರ್ಮಗಳಲ್ಲಿಯೂ ಕಂಡುಬರುತ್ತದೆ.

ಸರಸ್ವತಿಯ ಹೆಸರುಗಳು

ಜೈನಧರ್ಮದಲ್ಲಿ ವಿದ್ಯಾದೇವತೆಯನ್ನು ಹಲವಾರು ಹೆಸರುಗಳಿಂದ ಗುರುತಿಸಲಾಗಿದೆ. ಹೇಮಚಂದ್ರನ ಅಭಿದಾನ ಚಿಂತಾಮಣಿಯಲ್ಲಿ[22] ಸರಸ್ವತಿಯ ಹಲವಾರು ಹೆಸರುಗಳನ್ನು ಒಂದೆಡೆ ಕ್ರೋಡೀಕರಿಸಲಾಗಿದೆ. ಅಲ್ಲಿ ಹೇಳಿರುವ ಸರಸ್ವತಿಯ ಹೆಸರುಗಳು ಶ್ರುತದೇವತೆ, ಶಾರದಾ, ಭಾರತೀ, ಭಾಷಾ, ವಾಕ್, ವಾಗ್‌ದೇವತಾ, ವಾಗೀಶ್ವರೀ, ವಾಗ್ವಾದಿನೀ, ವಾಣಿ, ಬ್ರಾಹ್ಮಾ ಮೊದಲಾದವುಗಳು ವೈದಿಕ ಪರಂಪರೆಯಲ್ಲಿಯೂ ಪ್ರಚಲಿತವಾಗಿವೆ.

ಶ್ರುತದೇವತಾ

ಜೈನಧರ್ಮದಲ್ಲಿ ಸರಸ್ವತಿಯು ಜ್ಞಾನ ಮತ್ತು ಜ್ಞಾನಾರ್ಜನೆಯ ಸರ್ವೋಚ್ಚದೇವತೆ ಎಂಬುದು ಸ್ಪಷ್ಟವಾಗಿದೆ. ಜೈನಧರ್ಮದಲ್ಲಿ ಜ್ಞಾನವು ಐದು ಬಗೆಯದೆಂದು ಹೇಳಲಾಗಿದೆ. ಮತಿಜ್ಞಾನ, ಶ್ರುತಜ್ಞಾನ, ಅವಧಿಜ್ಞಾನ, ಮನಃಪರ್ಯಾಯಜ್ಞಾನ ಮತ್ತು ಕೇವಲಜ್ಞಾನಗಳೇ ಆ ಪಂಚಜ್ಞಾನಗಳು. ಇವುಗಳನ್ನು ಒಟ್ಟಾಗಿ ಶ್ರುತಗಳೆಂದೂ ಜೈನವೇದಗಳೆಂದೂ ಕರೆಯುತ್ತಾರೆ. ಈ ಶ್ರುತಗಳಿಗೆ ಸರಸ್ವತಿಯು ದೇವತೆಯಾದ್ದರಿಂದ 'ಶ್ರುತದೇವತಾ' ಎಂಬ ಹೆಸರು ಬಂದಿದೆ. ಆದ್ದರಿಂದ ಜೈನರಿಗೆ ಸರಸ್ವತಿಹಬ್ಬ ಎಂದರೆ 'ಶ್ರುತಪಂಚಮಿ' ಆಗಿದೆ. ತೀರ್ಥಂಕರರ ವಾಣಿಯಾದ ಜೈನವೇದಗಳು ಕ್ರಿ.ಶ.ಸು.156ರವರೆಗೂ ಮೌಖಿಕ ಪರಂಪರೆಯಲ್ಲೇ ಉಳಿದು ಬಂದಿದ್ದವು. ಅವುಗಳನ್ನು ಬರಹರೂಪದಲ್ಲಿ ಸಂಪಾದನೆ ಮಾಡುವ ಕಾರ್ಯ ಜ್ಯೇಷ್ಠಶುದ್ಧ ಪಂಚಮಿಯ ದಿವಸ ಮುಗಿದಿದ್ದರಿಂದ, ಆ ದಿನವನ್ನು ಶ್ರುತಪಂಚಮಿಯೆಂದು ಜೈನರು ಆಚರಿಸುತ್ತಾರೆ. ತೀರ್ಥಂಕರರ ಶ್ರುತಗಳೇ ಸರಸ್ವತಿಯಾದ್ದರಿಂದ ಶ್ರುತಪಂಚಮಿಯನ್ನು ಸರಸ್ವತಿಹಬ್ಬವೆಂದೂ ಕರೆಯಲಾಗುತ್ತದೆ. ಸರಸ್ವತಿಹಬ್ಬವನ್ನು ದಿಗಂಬರ ಪಂಥದವರು ಜ್ಯೇಷ್ಠಶುದ್ಧ ಪಂಚಮಿಯಂದು ಆಚರಿಸಿದರೆ, ಶ್ವೇತಾಂಬರ ಪಂಥದವರು ಕಾರ್ತಿಕಶುದ್ಧ ಪಂಚಮಿಯಂದು ಆಚರಿಸುತ್ತಾರೆ. ಶ್ವೇತಾಂಬರರು ಆಚರಿಸುವ ಸರಸ್ವತಿಹಬ್ಬದ ದಿನವನ್ನು ಜೈನಪಂಚಮಿಯೆಂದು ಕರೆದರೆ, ದಿಗಂಬರ ಪಂಥದವರು ಶ್ರುತಪಂಚಮಿಯೆಂದು ಕರೆಯುತ್ತಾರೆ.

ಶ್ವೇತಾಂಬರ ಮತ್ತು ದಿಗಂಬರ ಪಂಥಗಳೆರಡರಲ್ಲೂ ಸರಸ್ವತಿಯ ಆರಾಧನೆ ಇದೆ ಎಂಬುದು ಸ್ಪಷ್ಟವಾಗಿದೆ. ಎರಡೂ ಪಂಥಗಳಲ್ಲಿಯೂ ಬೇರೆ ಬೇರೆ ಸ್ವರೂಪದ ಸರಸ್ವತಿಯನ್ನು ಪೂಜಿಸುತ್ತಾರೆ. ಆರಾಧನಾ ಮೂರ್ತಿಯ ರೂಪಲಕ್ಷಣಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಆಯಾಯ ಪಂಥದ

---

22. ಅಭಿಧಾನಚಿಂತಾಮಣಿ, ಸಂಪುಟ –2; ಶ್ಲೋಕ –155

ಶಾಸ್ತ್ರಕೃತಿಗಳಲ್ಲಿ ಸರಸ್ವತಿಗೆ ಬೇರೆ ಬೇರೆ ಲಕ್ಷಣಗಳನ್ನು ಹೇಳಲಾಗಿದೆ. ಆ ಲಕ್ಷಣಗಳನ್ನು ವಿವರವಾಗಿ ಸರಸ್ವತಿಯ ಶಿಲ್ಪಗಳನ್ನು ಅಧ್ಯಯನ ಮಾಡುವಾಗ ಗಮನಿಸಲಾಗುವುದು.

ಜೈನಧರ್ಮದಲ್ಲಿ ತೀರ್ಥಂಕರವಾಣಿಯೇ ಶ್ರುತಗಳೆಂದೂ, ಆ ಶ್ರುತಗಳೇ ಸರಸ್ವತಿಯ ರೂಪ ಎಂಬುದನ್ನು ಆಗಲೇ ನೋಡಿದ್ದೇವೆ. ಕನ್ನಡದ ಆದಿಕವಿ ಪಂಪ 'ಪರಮಜಿನೇಂದ್ರವಾಣಿಯೆ ಸರಸ್ವತಿ' ಎಂದು ಹೇಳುವುದರ ಜೊತೆಗೆ, 'ಅದು ಹೆಣ್ಣಿನ ರೂಪ ಧರಿಸಿ ನಿಂತಿಲ್ಲ' ಎಂದೂ ಹೇಳಿದ್ದಾನೆ. ಆದರೆ ಶ್ರುತದೇವತೆ ಅಂದರೆ ಸರಸ್ವತಿಯ ಸ್ವರೂಪ ಸ್ತ್ರೀಯದ್ದೇ ಆಗಿದೆ. ಅದು, 'ಸರಸ್ವತೀಮಣಿಹಾರ'ನೆಂದು ಕರೆದುಕೊಂಡಿರುವ ಪಂಪನ ಮಾತುಗಳಲ್ಲಿಯೂ ವ್ಯಕ್ತವಾಗಿದೆ. ಹೀಗೆ ತೀರ್ಥಂಕರರ ವಾಣಿ ಮಾತ್ರವಾಗಿದ್ದ ಸರಸ್ವತಿಯು ಜೈನ ವಾಙ್ಮಯಕಾರರ ದೃಷ್ಟಿಯಲ್ಲಿ ಸರ್ವಭಾಷಾಮಯೀ ಸರಸ್ವತಿಯಾಗಿ ನೆಲೆಗೊಂಡಿರುವುದನ್ನು ಗಮನಿಸಬಹುದಾಗಿದೆ.

2.3. ವೈದಿಕಮತ

ವೈದಿಕಮತದಲ್ಲಿ ಸರಸ್ವತಿಯ ಸ್ವರೂಪವನ್ನು ಅರಿಯಲು ನಮಗಿರುವ ಮೂಲ ಆಕರಗಳೆಂದರೆ ವೇದಗಳು, ವೇದೋತ್ತರ ಸಾಹಿತ್ಯ, ಮಹಾಕಾವ್ಯಗಳು ಮತ್ತು ಪುರಾಣಗಳು. ವೇದಗಳಲ್ಲಿ ಋಗ್ವೇದವು ಕಾಲದ ದೃಷ್ಟಿಯಿಂದಲೂ, ಮಾಹಿತಿ ಸಂಪತ್ತಿನ ದೃಷ್ಟಿಯಿಂದಲೂ ಅತ್ಯಂತ ಮಹತ್ವವಾದ್ದು; ಹಾಗೂ ಸರಸ್ವತಿಯ ಮೂಲಸ್ವರೂಪವನ್ನು ಅರಿಯಲು ಇರುವ ಅತ್ಯಂತ ಪ್ರಾಚೀನ ದಾಖಲೆ. ಯಜುರ್ವೇದ ಮತ್ತು ಅಥರ್ವಣವೇದಗಳೂ ಸೇರಿದಂತೆ, ಇನ್ನುಳಿದ ಆಕರಗಳು ಋಗ್ವೇದದಲ್ಲಿ ದೊರೆಯುವ ಮಾಹಿತಿಯ ವಿಸ್ತರಣೆ ಎನ್ನಬಹುದು. ಪುರಾಣಗಳಲ್ಲಿ ಮಾತ್ರ ಸ್ವಲ್ಪಮಟ್ಟಿನ ಕಥನಾತ್ಮಕ ಘಟನೆಗಳನ್ನು ಸರಸ್ವತಿಯ ವಿಷಯದಲ್ಲಿ ಕಾಣಬಹುದಾಗಿದೆ.

2.3.1. ವೇದಗಳು

ಚತುರ್ವೇದಗಳಲ್ಲಿ ಅತ್ಯಂತ ಪ್ರಾಚೀನವಾದುದು ಋಗ್ವೇದ. ಕ್ರಿ.ಪೂ. ಸುಮಾರು 3500 ವರ್ಷಗಳಷ್ಟು ಸುದೀರ್ಘ ಪ್ರಾಚೀನತೆ ಋಗ್ವೇದಕ್ಕಿದೆ. ಸರಸ್ವತಿಯ ಮೂಲ ಸ್ವರೂಪವನ್ನು ಅರಿಯುವಲ್ಲಿ ಇರುವ ಅತ್ಯಂತ ಪ್ರಾಚೀನವಾದುದೂ, ಅಧಿಕೃತವೂ ಆದ ಆಕರವು ಋಗ್ವೇದವೇ ಆಗಿದೆ. ಇದರಲ್ಲಿ ಸರಸ್ವತಿಯು ಪ್ರಧಾನ ದೇವತೆಯಾಗಿಯೂ ಸ್ತುತಿಗೊಂಡಿದ್ದಾಳೆ. ಇಂದ್ರ, ಅಗ್ನಿ, ರುದ್ರ, ವಿಷ್ಣು ಮೊದಲಾದ ಪ್ರಧಾನ ದೇವತೆಗಳ ಜೊತೆಯಲ್ಲಿಯೂ ಸ್ತುತಿಗೊಂಡಿದ್ದಾಳೆ. ಸುಮಾರು ತೊಂಬತ್ತಕ್ಕೂ ಹೆಚ್ಚು ಋಕ್ಕುಗಳಲ್ಲಿ ಸರಸ್ವತಿಯು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸ್ತುತಿಗೊಂಡಿದ್ದಾಳೆ. ಆರನೇ ಮಂಡಲದ 61ನೆಯ ಸೂಕ್ತದ ಎಲ್ಲಾ ಹದಿನಾಲ್ಕು ಋಕ್ಕುಗಳೂ ಸರಸ್ವತಿಗೆ ಸಂಬಂಧಿಸಿದ್ದಾಗಿವೆ. ಅದರ ಋಷಿಗಳು ಭರದ್ವಾಜ ಮತ್ತು ಬೃಹಸ್ಪತಿ. ನಂತರದ ವೇದಗಳಲ್ಲಿ, ಉಪನಿಷತ್ತುಗಳಲ್ಲಿ, ಮಹಾಕಾವ್ಯಗಳಲ್ಲಿ, ಪುರಾಣಗಳಲ್ಲಿ ಮತ್ತು

ಒಟ್ಟಾರೆ ಭಾರತೀಯ ಸಾಹಿತ್ಯದಲ್ಲಿ ಸ್ಥಾಪಿತವಾಗಿರುವ ಸರಸ್ವತಿಯ ಎಲ್ಲಾ ಸ್ವರೂಪಗಳಿಗೂ ಋಗ್ವೇದವೇ ಗಂಗೋತ್ರಿ ಎಂಬುದರಲ್ಲಿ ಯಾವುದೇ ಅತಿಶಯೋಕ್ತಿಯಿಲ್ಲ. ಋಗ್ವೇದವನ್ನು ಬಿಟ್ಟರೆ ಉಳಿದ ವೇದಗಳಲ್ಲಿ ಸರಸ್ವತಿಯ ವಿಷಯ ವಿರಳವಾಗಿ ಬಂದಿದೆ. ಬಂದಿರುವುದರಲ್ಲಿ ಭಾಗಶಃ ಋಗ್ವೇದದ ಅನುಕರಣೆಯೇ ಆಗಿದೆ. ಆದ್ದರಿಂದ, ಇಲ್ಲಿ ಮುಖ್ಯವಾಗಿ ಋಗ್ವೇದದ ಸರಸ್ವತಿಯ ಪರವಾದ ಋಕ್ಕುಗಳನ್ನು ವಿವೇಚಿಸುತ್ತಲೇ, ಸಂದರ್ಭಕ್ಕನುಗುಣವಾಗಿ ಬೇರೆ ವೇದಗಳಲ್ಲಿ ಉಕ್ತವಾಗಿರುವ ವಿಷಯವನ್ನೂ ಗಮನಿಸಲಾಗುವುದು.

'ಋಗ್ವೇದದಲ್ಲಿ 99 ನದಿಗಳ ಬಗ್ಗೆ ಉಲ್ಲೇಖವಿದೆ. ಈ ಪೈಕಿ 31 ನದಿಗಳಿಗೆ ಪ್ರತ್ಯೇಕ ಹೆಸರುಗಳಿವೆ. 25 ನದಿಗಳ ಬಗ್ಗೆ ಸೂತ್ರಗಳಿವೆ. 65 ಬಾರಿ ಸರಸ್ವತೀ ನದಿಯ ಹೆಸರು ಉಲ್ಲೇಖವಾಗಿದೆ. ಆದರೆ ಸರಸ್ವತೀ ಕುರಿತಂತೆ ಬರುವ ಉಲ್ಲೇಖಗಳೆಲ್ಲಾ ಸರಸ್ವತಿಗೆ ಸಂಬಂಧಿಸಿದವಲ್ಲ.'[23] ಸರಸ್ವತೀ ಶಬ್ದಕ್ಕೆ ನದಿ, ನದಿಯ ಹೆಸರು, ದೇವತೆಯ ಹೆಸರು, ಆಕಾಶಾಭಿಮಾನ ದೇವತೆ ಮತ್ತು ವಾಗ್ದೇವೀ ಎಂಬ ಐದು ವಿಧವಾದ ಅರ್ಥ ವಿವರಣೆಯನ್ನು ಸಾಯಣರು ಕೊಟ್ಟಿದ್ದಾರೆ.[24] ಇವುಗಳಲ್ಲದೆ ಋಗ್ವೇದದಲ್ಲಿ ಸರಸ್ವತಿಯು ದೇವತೆಯಾಗಿ, ನದಿಯಾಗಿ, ನದಿದೇವತೆಯಾಗಿ, ವಾಗ್ದೇವತೆಯಾಗಿ, ಜ್ಞಾನದೇವತೆಯಾಗಿ, ರಕ್ಷಣಾದೇವತೆಯಾಗಿ, ತಾಯಿಯಾಗಿ, ಅನ್ನಪೂರ್ಣೆಯಾಗಿ ಹೀಗೆ ಹತ್ತು ಹಲವಾರು ಸ್ವರೂಪಗಳಲ್ಲಿ ಸ್ತುತಿಗೊಂಡಿದ್ದಾಳೆ. ಈ ಸ್ವರೂಪಗಳಲ್ಲಿ ಒಂದೊಂದನ್ನು ಪ್ರತ್ಯೇಕವಾಗಿ ಗಮನಿಸಬೇಕು. ಹಾಗೆ ಗಮನಿಸುವಲ್ಲಿ ನಮಗೆ ಪ್ರಧಾನ ಆಕರವಾಗಿರುವುದು, "ಸಾಯಣಭಾಷ್ಯಸಹಿತಾ ಋಗ್ವೇದಸಂಹಿತಾ" ಉದ್ಗ್ರಂಥದ 30 ಸಂಪುಟಗಳು. ಪ್ರಸ್ತುತ ಗ್ರಂಥದಲ್ಲಿ ಪ್ರತಿಯೊಂದು ಋಕ್ಕುಗಳಿಗೂ ಸಾಯಣಭಾಷ್ಯದ ಜೊತೆಗೆ, ಪ್ರತಿಪದಾರ್ಥವನ್ನೂ ಭಾವಾರ್ಥವನ್ನೂ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ, ಕೊಟ್ಟಿದೆ. ಇವುಗಳಲ್ಲದೆ ಸಂದರ್ಭಕ್ಕನುಗುಣವಾಗಿ ಸರಸ್ವತಿಯ ವಿಚಾರವನ್ನು ಬ್ರಾಹ್ಮಣ, ಆರಣ್ಯಕ ಮತ್ತು ಪುರಾಣಗಳ ಶ್ಲೋಕಗಳನ್ನು ಬಳಸಿ ಚರ್ಚಿಸಿದೆ.

ನದಿ ಮತ್ತು ನದೀದೇವತೆ

ಗಂಗಾ-ಯುಮುನ-ಸರಸ್ವತೀ ಈ ಮೂರು ನದಿಗಳಿಗೆ ಭಾರತೀಯ ಸಂಸ್ಕೃತಿಯಲ್ಲಿ ವಿಶೇಷ ಸ್ಥಾನವಿದೆ. ಅದು ಎಷ್ಟರ ಮಟ್ಟಿಗೆ ಎಂದರೆ, ಅಲಹಾಬಾದಿನಲ್ಲಿರುವ, ಭೌತಿಕವಾಗಿ ಕಣ್ಣಿಗೆ ಕಾಣುವ ಎರಡು ನದಿಗಳ ಸಂಗಮವನ್ನು ಸ್ಪಷ್ಟವಾಗಿ ನಿರಾಕರಿಸಿ, ಅಂತರ್ಗಾಮಿನಿಯಾದ ಸರಸ್ವತೀ ನದಿಯನ್ನು ಸೇರಿಸಿ 'ತ್ರಿವೇಣಿಸಂಗಮ' ಎಂಬ ಕಲ್ಪನೆಯನ್ನು ಸುಮಾರು ಮೂರೂವರೆ ಸಾವಿರ ವರ್ಷಗಳಿಂದ

---

23. ಟಿ.ಆರ್.ಅನಂತರಾಮು: ಸರಸ್ವತೀ ನದಿ, ಪು.19
24. ಸಾಯಣಭಾಷ್ಯಸಹಿತಾ ಋಗ್ವೇದಸಂಹಿತಾ; ಭಾಗ -2: ಪು.68

ಪೋಷಿಸಿಕೊಂಡು ಬರುವಷ್ಟರ ಮಟ್ಟಿಗೆ, ಈ ಮೂರೂ ನದಿಗಳಿಗೆ ವಿಶೇಷ ಸ್ಥಾನವಿದೆ. ವೈಜ್ಞಾನಿಕವಾಗಿ ಸರಸ್ವತೀ ನದಿಯ ಪಾತ್ರ ಅದಲ್ಲವೆಂದು ದೃಢಪಟ್ಟಿದ್ದರೂ, ಜನಮಾನಸದಲ್ಲಿರುವ ನಂಬಿಕೆಗೆ ಚ್ಯುತಿ ಬಂದಿಲ್ಲ. ಇದರಿಂದ ಗಂಗಾ ಯಮುನಾ ನದಿಗಳಿಗೆ ಸಿಕ್ಕಿರುವ ಮಹತ್ವಕ್ಕಿಂತ 'ಅಂತರ್ಗಾಮಿಯಾಗಿದೆ' ಎಂದು ನಂಬಿರುವ ಸರಸ್ವತೀ ನದಿ ಮಾತ್ರ ಭಾರತೀಯರ ನಂಬಿಕೆಯಲ್ಲಿ ಶಾಶ್ವತವಾದ ಸ್ಥಾನವನ್ನು ಪಡೆದಿದೆ. ನದಿ ಇದ್ದ ಬಗ್ಗೆಯೂ, ನದಿ ಪಾತ್ರದ ಬಗ್ಗೆಯೂ ಇರುವ ವಿಚಾರಗಳು ನಮಗಿಲ್ಲಿ ಅಪ್ರಸ್ತುತ. ಆದರೆ ಋಗ್ವೇದದಲ್ಲಿ ಅಂತರ್ಗತವಾಗಿರುವ ಸರಸ್ವತೀ ನದಿ ವಿಚಾರವನ್ನು ಮಾತ್ರ ಇಲ್ಲಿ ಗಮನಿಸಿದೆ.

ಸುಮಾರು 30ಕ್ಕೂ ಹೆಚ್ಚು ಋಕ್ಕುಗಳಲ್ಲಿ ಸರಸ್ವತೀ ನದಿಯ ವಿಚಾರಗಳಿವೆ. ನದಿ ಮತ್ತು ನದೀದೇವತೆಗಳ ನಡುವೆ ಅಭೇದ ಕಲ್ಪನೆಯಿದೆ. 'ನದೀ' ಎಂಬ ಪದವೇ ಸ್ತ್ರೀಲಿಂಗವಾಚಿಯಾಗಿರುವುದು ಇದಕ್ಕೆ ಕಾರಣವಿರಬಹುದು. ಅಂಬಿತಮೇ, ನದೀತಮೇ ಮತ್ತು ದೇವೀತಮೇ ಈ ಪದಗಳೆಲ್ಲವೂ ಸ್ತ್ರೀಲಿಂಗವಾಚಿಗಳಾಗಿವೆ. ವಾಕ್‌ದೇವತೆಯೂ ಕೂಡಾ 'ವಾಗ್ದೇವಿ' ಎಂದು ಸ್ತ್ರೀಲಿಂಗವಾಚಿಯಾಗಿದೆ. ಆದ್ದರಿಂದ ಇಲ್ಲಿ ನದಿ ಮತ್ತು ನದೀದೇವತೆ ಎರಡನ್ನೂ ಒಟ್ಟಾಗಿಯೇ ಚರ್ಚಿಸಲಾಗಿದೆ.

ಗಂಗಾ, ಯಮುನ, ಸರಸ್ವತಿ, ಶುತದ್ರಿ, ಪರುಷ್ಣಿ, ಅಸಿಕ್ನಿ ನದಿಯೊಡಗೂಡಿದ ಮರುದ್ವೃಧೆ, ವಿತಸ್ತೆ ಮತ್ತು ಸುಷೋಮಾ ನದಿಯೊಡಗೂಡಿದ ಆರ್ಜಿಕಾ ನದಿಗಳನ್ನು ಒಂದೇ ಋಕ್ಕಿನಲ್ಲಿ ಹೇಳಿದೆ.[25] ಏಳು ಪ್ರಮುಖ ನದಿಗಳ ಮತ್ತು ಮೂರು ಉಪನದಿಗಳ ಹೆಸರುಗಳನ್ನು ಹೇಳಿದೆ.[26] ಆದರೆ ಯಾವುದು ಪ್ರಮುಖ? ಯಾವುದು ಉಪನದಿ? ಎಂಬುದು ಸ್ಪಷ್ಟವಾಗಿಲ್ಲ. ಗಂಗಾ, ಯಮುನಾ, ಸರಸ್ವತಿ, ಶುತದ್ರಿ, ಪರುಷ್ಣಿ –ಈ ಐದು ಮುಖ್ಯನದಿಗಳು ಎಂಬುದು ಸ್ಪಷ್ಟ. ***'ಅಸಿಕ್ನ್ಯಾ ಮರುದ್ವದೇ*** ಮತ್ತು ***'ವಿತಸ್ತಯಾ ಸುಷೋಮಯಾ ಆರ್ಜಿಕೀಯೇ*** ಎಂಬಲ್ಲಿ ಮರುದ್ವದೇ ಮತ್ತು ಆರ್ಜಿಕಾ ಪ್ರಮುಖ ನದಿಗಳಾಗಿಯೂ, ಅಸಿಕ್ನೀ, ವಿತಸ್ತೆ ಮತ್ತು ಸುಷೋಮಾ ಈ ಮೂರು ನದಿಗಳು ಉಪನದಿಗಳಾಗಿಯೂ ಇರುವಂತೆ ಕಾಣುತ್ತದೆ. ಆದರೆ ಸುಷೋಮಾ ನದಿಯನ್ನು ಸಿಂಧೂ ನದಿಗೆ ಸಮೀಕರಿಸಿರುವುದರಿಂದ[27], ಅದನ್ನು ಉಪನದಿಯೆಂದು ಒಪ್ಪಿಕೊಳ್ಳುವುದು ಕಷ್ಟವಾಗುತ್ತದೆ. ಸರಸ್ವತಿ–ಸಿಂಧೂ ನದಿಗಳು ಅತ್ಯಂತ ಹೆಚ್ಚು ಜಲಸಂಪತ್ತಿನಿಂದ ಕೂಡಿದವುಗಳೆಂದು ಋಗ್ವೇದದಲ್ಲಿಯೇ ಹೇಳಿದೆ.[28]

---

25. ಋಗ್ವೇದ 10.75.5
26. ಸಾಯಣಭಾಷ್ಯಸಹಿತಾ ಋಗ್ವೇದಸಂಹಿತಾ; ಭಾಗ –29: ಪು.107
27. ಟಿ.ಆರ್.ಅನಂತರಾಮು: ಸರಸ್ವತೀ ನದಿ, ಪು.21
28. ಋಗ್ವೇದ 10.64.9

ಗಂಗಾದಿ ಸಪ್ತಸಹೋದರೀ ನದಿಗಳೆಂದು ಎರಡು ಋಕ್ಕುಗಳಲ್ಲಿ ಹೇಳಿದೆ.[29] ಸಪ್ತನದಿಗಳಲ್ಲಿ ಏಳನೆಯದೂ ಮಾತೃಭೂತವಾದದ್ದೂ ಸರಸ್ವತೀ ನದಿ.[30] ಆದರೆ ಪ್ರೀತಿಪಾತ್ರರ ನಡುವೆ ಪ್ರಿಯವಾಗಿರುವ (ಸಪ್ತಸ್ವಸಾ) ಗಂಗಾದಿ ಸಪ್ತಸಹೋದರಿಯರನ್ನುಳ್ಳವಳೂ[31] ಎಂದಿರುವಲ್ಲಿ ಸರಸ್ವತಿನದಿಯು ಸೇರುವುದಿಲ್ಲವೆಂದು ಹೇಳಬಹುದು. 'ಸರಸ್ವತೀ ಸಪ್ತಸಿಂಧವಃ ಮೇ ಹವನಂ ಅವಂತು'[32] ಅಂದರೆ ಸರಸ್ವತೀ ದೇವಿಯೂ, ಗಂಗಾದಿ ಸಪ್ತನದಿಗಳೂ ನನ್ನ ಆಹ್ವಾನವನ್ನು ಕೇಳಲಿ ಎಂಬುದನ್ನು ಮತ್ತು ಸಪ್ತಧಾತುಃ ಅಂದರೆ ಗಂಗಾದಿ ಸಪ್ತಾವಯವಗಳುಳ್ಳವಳೂ[33] ಎಂಬುದನ್ನು ಗಮನಿಸಿದರೆ, ಸರಸ್ವತಿಯೇ ಬೇರೆ; ಗಂಗಾದಿ ಸಪ್ತಾ ನದಿಗಳೇ ಬೇರೆ ಎಂಬ ಅರ್ಥ ಬರುತ್ತದೆ. 6.61.10ನೇ ಋಕ್‌ನ ಸಾಯಣಭಾಷ್ಯದಲ್ಲಿ 'ಸಪ್ತಸ್ವಸಾ ಎಂಬ ಶಬ್ದಕ್ಕೆ ಎರಡು ವಿಧವಾಗಿ ಅರ್ಥ ಮಾಡಬೇಕು. ಸರಸ್ವತಿಯನ್ನು ವಾಗ್ದೇವತೆ ಎಂಬರ್ಥದಲ್ಲಿ ಸ್ತುತಿಸುವಾಗ ಸಪ್ತಸ್ವಸಾ ಎಂದರೆ ಗಾಯತ್ರ್ಯಾದಿ ಸಪ್ತಛಂದಸ್ಸುಗಳೆಂದೂ, ನದಿಯೆಂಬರ್ಥದಲ್ಲಿ ಸ್ತುತಿಸುವಾಗ ಗಂಗಾದಿ ಸಪ್ತನದಿಗಳೆಂದೂ ಅರ್ಥವನ್ನು ಹೇಳಬೇಕು' ಎಂಬ ವಿವರವಿದೆ. ಆ ಋಕ್ಕಿನ (ನಃ ಪ್ರಿಯಾಸು ಪ್ರಿಯಾ ಸಪ್ತಸ್ವಸಾ ಸುಜಷ್ಟಾ ಸರಸ್ವತೀ ಸ್ತೋಮ್ಯಾ ಭೂತ್) ಭಾವಾರ್ಥವೂ 'ನಮ್ಮ ಪ್ರೀತಿಪಾತ್ರರ ನಡುವೆ ಅತ್ಯಂತ ಪ್ರಿಯತಮಳೂ, ಗಂಗಾದಿ ಸಪ್ತಸಹೋದರಿಯುಳ್ಳವಳೂ, ಋಷಿಮುನಿಗಳಿಂದ ಸೇವಿತಳೂ ಆದ ಸರಸ್ವತೀ (ನದಿ ಅಥವಾ ವಾಕ್‌ದೇವತೆ) ನಮಗೆ ಸ್ತುತಿಪಾತ್ರಳಾಗಿರಲಿ'[34] ಎಂದೇ ಇದೆ. ಗಾಯತ್ರಿ ಮೊದಲಾದ ಸಪ್ತಛಂದಸ್ಸುಗಳಲ್ಲಿ ಸರಸ್ವತಿ ಎಂಬ ಛಂದಸ್ಸು ಇಲ್ಲ ಎಂಬುದನ್ನು ಗಮನಿಸಬೇಕು.

10.75.5ನೇ ಋಕ್ಕಿನಲ್ಲಿ ಬರುವ ಸುಷೋಮಾ (ಸಿಂಧೂ) ನದಿಯನ್ನು ಮುಖ್ಯ ನದಿಯನ್ನಾಗಿ ಅರ್ಥೈಸಿದರೆ, ಸರಸ್ವತಿಯನ್ನು ಬಿಟ್ಟೂ, ಏಳು ಮುಖ್ಯನದಿಗಳಾಗುತ್ತವೆ. ಗಂಗಾದಿ ಸಪ್ತನದಿಗಳು ಸರಸ್ವತಿಗೆ ಸಹೋದರಿಯರಾಗುತ್ತಾರೆ. ಸಪ್ತನದಿಗಳ ಮಾತೃಭೂತವಾದದ್ದು ಸರಸ್ವತೀ ನದಿ.[35] ಆದ್ದರಿಂದ ಸರಸ್ವತೀ ನದಿಗೆ ಮಾತೃಸ್ಥಾನ ಸಿಗುತ್ತದೆ. ಗಂಗಾ, ಯಮುನ, ಶುತದ್ರಿ (ಸಟ್ಲೆಜ್), ಪರುಷ್ಣಿ (ರಾವಿ), ಅಸಿಕ್ನಿ (ಚೀನಾಬ್), ವಿತಸ್ತೆ (ಜೀಲಮ್), ಮತ್ತು ಸುಷೋಮಾ (ಸಿಂಧೂ) ಈ ಏಳನ್ನು (ಸಪ್ತಸ್ವಸಾ –ಗಂಗಾದಿ

---

29. ಋಗ್ವೇದ 6.61.10 (ಪ್ರಿಯಾಸು ಪ್ರಿಯಾ ಸಪ್ತಸ್ವಸಾ ಸರಸ್ವತೀ);
30. ಋಗ್ವೇದ 7.36.6 (ಯದ್ಯಾಸಾಂ ಗಂಗಾದೀನಾಂ ನದೀನಾ ಮಧ್ಯೇ ಸಿಂಧುಮಾತಾಪಾಂ ಮಾತೃಭೂತಾ ಸರಸ್ವತ್ಯೇತದಾಖ್ಯಾ ನದೀ ಸಪ್ತಥೀ)
31. ಋಗ್ವೇದ 6.61.10 (ಪ್ರಿಯಾಸು ಪ್ರಿಯಾ ಸಪ್ತಸ್ವಸಾ ಸರಸ್ವತೀ)
32. ಋಗ್ವೇದ 8.54.4
33. ಋಗ್ವೇದ 6.61.12
34. ಸಾಯಣಭಾಷ್ಯಸಹಿತಾ ಋಗ್ವೇದಸಂಹಿತಾ; ಭಾಗ –212: ಪು.419
35. ಋಗ್ವೇದ 7.36.6 (ಯದ್ಯಾಸಾಂ ಗಂಗಾದೀನಾಂ ನದೀನಾ ಮಧ್ಯೇ ಸಿಂಧುಮಾತಾಪಾಂ ಮಾತೃಭೂತಾ ಸರಸ್ವತ್ಯೇತದಾಖ್ಯಾ ನದೀ ಸಪ್ತಥೀ)

ಸಪ್ತನದಿಗಳು) ಪ್ರಮುಖ ನದಿಗಳನ್ನಾಗಿಯೂ, ಮರುದ್ವೃದೆ (ಜೀಲಮ್ ಮತ್ತು ಚೀನಾಬ್ ನದಿಗಳ ಸಂಗಮದಿಂದಾದ ಒಂದು ನದಿ) ಮತ್ತು ಆರ್ಜಿಕಾ (ಬಿಯಾಸ್) ಈ ಎರಡು ನದಿಗಳನ್ನು ಉಪನದಿಗಳನ್ನಾಗಿಯೂ ಊಹಿಸಬಹುದು.[36] ಋಗ್ವೇದದಲ್ಲಿ 'ಸಪ್ತಸ್ವಸಾ' 'ಸಪ್ತಥೀ' ಎಂದು ಸರಸ್ವತಿಯನ್ನು ಕರೆದಿರುವಂತೆ, ಯಜುರ್ವೇದದಲ್ಲಿ 'ಪಂಚಧಾ'[37] ಎಂದು ಸರಸ್ವತಿಯನ್ನು ಸೇರಿಸಿಕೊಂಡು ಐದು ನದಿಗಳ ಗುಂಪನ್ನು ಸೂಚಿಸಲಾಗಿದೆ. ಆಗ ಋಗ್ವೇದದಲ್ಲಿ[38] ಪ್ರಧಾನವಾಗಿ ಸೂಚಿಸಲಾಗಿರುವ ಗಂಗಾ–ಯಮುನಾ ಮತ್ತು ಶುತದ್ರಿ (ಸಟ್ಲೆಜ್)– ಪರುಷ್ಣಿ (ರಾವಿ) ನದಿಗಳ ಮಧ್ಯದಲ್ಲಿ ಸರಸ್ವತೀ ನದಿಯನ್ನು ಸೇರಿಸಿಕೊಳ್ಳಬೇಕಾಗುತ್ತದೆ.

'ಪ್ರವಾಹಯುಕ್ತಳಾದ, ರಥವೇಗದಲ್ಲಿ ಹರಿಯುವ ಸರಸ್ವತೀ ನದಿ ತನ್ನ ಮಹಿಮೆಯಿಂದ ಉಳಿದ ಸಮಸ್ತನದಿಗಳನ್ನು ತನ್ನಲ್ಲಿಯೇ ಸೇರಿಸಿಕೊಂಡಿದ್ದಾಳೆ'[39] ಮತ್ತು 'ಪ್ರವಹಿಸುತ್ತಿರುವ ಇತರ ಉದಕಗಳೊಂದಿಗೆ ವೃದ್ಧಿಯನ್ನು ಹೊಂದತಕ್ಕ ಸರಸ್ವತೀ ನದಿ'[40] ಎಂಬ ಮಾತುಗಳನ್ನು ಗಮನಿಸಿದರೆ, ಸರಸ್ವತಿ ನದಿಗೆ ಹಲವಾರು ಉಪನದಿಗಳಿದ್ದವು ಎನ್ನಿಸುತ್ತದೆ.

ಸರಸ್ವತೀ ನದಿ ಪರ್ವತಗಳಿಂದ ಸಮುದ್ರದವರೆಗೂ,[41] ಸಮುದ್ರದೋಪಾದಿಯಲ್ಲಿ ಶಬ್ದ ಮಾಡುತ್ತಾ[42] ಅತ್ಯಂತ ವೇಗವಾಗಿ[43] ಪ್ರವಾಹವನ್ನುಂಟು ಮಾಡುತ್ತಾ[44] ಹರಿಯುತ್ತದೆ. ಯಜುರ್ವೇದದ ಒಂದು ಮಂತ್ರವು[45] '(ಸರಸ್ವತೀ ನದಿ) ತನ್ನ ಹೆಚ್ಚಾದ ಉದಕಳನ್ನು ವಿಶ್ವಕ್ಕೆಲ್ಲಾ ಪ್ರೋಕ್ಷಿಸುತ್ತಿದ್ದಳು (ಮಹೋ ಮಹತ್ ಅರ್ಣಃ ಉದಕಂ ಪ್ರಚೇತಯತಿ)' ಎಂದು ವರ್ಣಿಸುತ್ತದೆ. ಬಹುಶಃ ಸರಸ್ವತೀ ನದಿಯಲ್ಲಿ ಉಂಟಾಗುತ್ತಿದ್ದ ಪ್ರವಾಹವನ್ನು ಇದು ಸೂಚಿಸುತ್ತಿರಬಹುದು. ಅದರ ವೇಗ ರಭಸ ಎಂತಹುದೆಂಬುದಕ್ಕೆ ಹೋಲಿಕೆಯೊಂದನ್ನು ಒಂದು ಋಕ್ಕು ನೀಡುತ್ತದೆ. ತಾವರೆಯ ದಂಟು ಕೆಸರನ್ನು ಕೊರೆಯುವಂತೆ, ತನ್ನ ಶಕ್ತಿಯುತವಾದ ದೊಡ್ಡದಾದ ಅಲೆಗಳಿಂದ ಪರ್ವತಗಳನ್ನೇ ಕೊರೆಯುತ್ತಾ,

---

36. ಟಿ.ಆರ್.ಅನಂತರಾಮು: ಸರಸ್ವತೀ ನದಿ, ಪು.21
37. ಯಜುರ್ವೇದ 34.11 (ಪಂಚನದ್ಯಃ ಸರಸ್ವತೀಂ ಅಪಿಯಂತಿ ಸಸ್ರೋತಸಃ। ಸರಸ್ವತೀ ತು ಪಂಚಧಾ ಸೊ ದೆಶೊ ಭವತ್ ಸರಿತ್॥)
38. ಋಗ್ವೇದ 10.75.5
39. ಋಗ್ವೇದ 7.95.1 (ಸಿಂಧುಃ ರಥ್ಯೇವ ಮಹಿನಾ ವಿಶ್ವಾಃ ಅನ್ಯಾ ಅಪಃ ಪ್ರಬಾಬಧನಾ)
40. ಋಗ್ವೇದ 6.52.6 (ಸಿಂಧುಭಿಃ ಪಿನ್ವಮಾನಾ ಸರಸ್ವತೀ)
41. ಋಗ್ವೇದ 7.95.2 (ಗಿರಿಭ್ಯಃ ಆ ಸಮುದ್ರಾತ್ ಯತಿ ಏಕಾ ಸರಸ್ವತಿ)
42. ಋಗ್ವೇದ 6.61.8 (ಅರ್ಣವಃ ರೋರುವತ್ ಚರತಿ)
43. ಋಗ್ವೇದ 6.61.13
44. ಋಗ್ವೇದ 1.3.12 (ಮಹೋಅರ್ಣಃ, ಕೇತುನಾ); 7.96.1 (ನದೀನಾಂ ಅಸುರ್ಯಾ ಬೃಹದು)
45. ಯಜುರ್ವೇದ 20.86

ಹೆಮ್ಮರಗಳನ್ನು ಉರುಳಿಸುವಷ್ಟು ರಭಸವಾದದ್ದು ಸರಸ್ವತೀ ನದಿ.[46] ಈ ನದಿಯ ಆರ್ಭಟದಿಂದ ಆಗಾಗ ತೊಂದರೆಗಳಾಗುತ್ತಿದ್ದುದರಿಂದ, 'ಅತಿಯಾದ ಪ್ರವಾಹದಿಂದ ತೊಂದರೆ ಮಾಡಬೇಡ' ಎಂದು ಸರಸ್ವತಿಯನ್ನು ಪ್ರಾರ್ಥಿಸಿರುವುದಿದೆ.[47]

ಸರಸ್ವತಿ ಎಂಬ ಹೆಸರೇ ಹರಿಯುವ ನೀರನ್ನು ಸೂಚಿಸುತ್ತದೆ. 'ಸರಸ್ವತೀ –ಸರ ಇತ್ಯುದಕನಾಮ ಸರ್ತೇಸ್ತದ್ವತೀ' (ನಿರುಕ್ತ 9–26)[48] 'ಸರವೆಂದರೆ ಉದಕವೆಂದರ್ಥ; ಉದಕವನ್ನು ಉಳ್ಳವಳು ಸರಸ್ವತೀ' ಎನ್ನಲಾಗಿದೆ. 'ಋತಾವರಿ ಸರಸ್ವತೀ' ಎಂದರೆ ಉದಕಯುಕ್ತಳಾದ (ನದಿ) ಸರಸ್ವತಿ ಎಂದರ್ಥವಿದೆ.[49] ಇನ್ನೊಂದು ಋಕ್ಕಿನಲ್ಲಿ ಸರಸ್ವತಿಯನ್ನು 'ಋತಜಾತಃ'[50] ಅಂದರೆ ಉದಕದಿಂದ ಹುಟ್ಟಿದವಳು ಎಂದೇ ಕರೆಯಲಾಗಿದೆ. ಸರಸ್ವತೀ ನದಿಗಳಲ್ಲಿಯೇ ಅತ್ಯಂತ ಶ್ರೇಷ್ಠವಾದ ನದಿ[51] ಹಾಗೂ ನದಿಗಳಿಗೆಲ್ಲಾ ಮಾತೃಪ್ರಾಯಳಾಗಿರುವವಳು.[52] ಸರಸ್ವತಿಯು ಮಹತ್ತನ್ನುಳ್ಳ ನದಿಗಳ ನಡುವೆ ಅಧಿಕ ಮಹತ್ತನ್ನುಳ್ಳದ್ದು[53] ಮತ್ತು ಬೇರೆ ನದಿಗಳಿಗಿಂತ ಪರಿಶುದ್ಧವಾದ ಸ್ವಚ್ಛವಾದ ನದಿಯಾಗಿದೆ.[54] ಸರಸ್ವತಿಯು ನೀರನ್ನು ಪ್ರೋಕ್ಷಿಸುವವಳು.[55] ಮಾನವರಿಗಾಗಿ ಉದಕರೂಪದಲ್ಲಿ ಸರಸ್ವತೀ ನದಿ ಹರಿಯುತ್ತಿದ್ದಾಳೆ.[56] ಆದ್ದರಿಂದ ಅವಳು ಜನರನ್ನು ಶುದ್ಧಿಗೊಳಿಸುವ ಶುದ್ಧಿಕಾರಕಳು[57] ಎಂಬ ಋಗ್ವೇದದ ಮಾತುಗಳಿಂದ ಸರಸ್ವತೀ ಪವಿತ್ರವಾದ ನದಿ ಎಂಬ ನಂಬಿಕೆಯಿದ್ದುದು ಸ್ಪಷ್ಟವಾಗುತ್ತದೆ.

ಹೀಗೆ ಸರಸ್ವತಿಯು ಪವಿತ್ರವಾದ ನದಿಯಾದ್ದರಿಂದಲೇ ಅದರ ದಡದಲ್ಲಿ ಯಾವಾಗಲೂ ಯಜ್ಞಗಳು ನಡೆಯುತ್ತಿರುತ್ತವೆ. ಯಾವುದೇ ದೇವತೆಗೆ ಸಂಬಂಧಿಸಿದ ಯಜ್ಞವಾದರೂ ಅದು ಸರಸ್ವತೀ ನದಿಯ ದಡದಲ್ಲಿಯೇ ನಡೆಯಬೇಕು.[58] ನಹುಷನು ಸಾವಿರವರ್ಷಗಳವರೆಗೂ ನಡೆಸಲು ಉದ್ದೇಶಿಸಿದ್ದ ಯಜ್ಞಕ್ಕೆ, ಬೇರೆ ನದಿಗಳೂ, ಸರಸ್ವತೀ ನದಿಯ ದಂಡೆಯನ್ನೇ ಸೂಚಿಸುತ್ತವೆ. 'ನಹುಷನ

---

46. ಋಗ್ವೇದ 6.61.2 (ಶುಷ್ಮೇಭಿಃ ತವಿಷೇಭಿಃ ಊರ್ಮಿಭಿಃ ಗಿರೀಣಾಂ ಸಾನು ಆರುಜಾತ್ ಪಾರಾವತಘ್ನೀಂ)
47. ಋಗ್ವೇದ 6.61.14 (ಪಯಸಾ ನಃ ಮಾ ಆ ಧಕ್)
48. ಸಾಯಣಭಾಷ್ಯಸಹಿತಾ ಋಗ್ವೇದಸಂಹಿತಾ; ಭಾಗ –12: ಪು.670
49. ಋಗ್ವೇದ 2.41.18; 6.61.9
50. ಋಗ್ವೇದ 3.54.13
51. ಋಗ್ವೇದ 2.41.16 (ನದೀತಮೇ: ನದೀನಾಂ ಶ್ರೇಷ್ಠೇ)
52. ಋಗ್ವೇದ 7.36.6 (ಸಿಂಧುಮಾತಾ ಸರಸ್ವತೀ)
53. ಋಗ್ವೇದ 10.64.9 (ಮಹಃ ಮಹೀಃ ಊರ್ಮಿಭೀಃ ಸರಸ್ವತೀ)
54. ಋಗ್ವೇದ 7.95.2 (ನದೀನಾಂ ಶುಚಿಃ)
55. ಋಗ್ವೇದ 5.43.11 (ಘೃತಾಚೀ)
56. ಋಗ್ವೇದ 6.61.3 (ಐಭ್ಯಂ ವಿಷಂ ಅಸ್ರವಃ)
57. ಋಗ್ವೇದ 1.3.10 (ಪಾವಕಾ); 6.49.7 (ಪಾವೀರವೀ –ಇದಕ್ಕೆ ಆಯುಧಧಾರಿಣೀ ಎಂಬ ಅರ್ಥವೂ ಇದೆ. ನೋಡಿ ಋಗ್ವೇದ 10.65.13)
58. ಋಗ್ವೇದ 3.23.4

ಪ್ರಾರ್ಥನೆಯಿಂದ ಸುಪ್ರೀತಳಾದ ಸರಸ್ವತೀ, ಸಕಲ ಭೂತ ಜಾತಗಳಿಗೂ ಪ್ರಭೂತವಾದ ಧನಗಳನ್ನು ಕೊಡುತ್ತಾ, ರಾಜನಾದ ನಹುಷನಿಗೆ ಸಾವಿರ ವರ್ಷಗಳಿಗಾಗುವಷ್ಟು ಘೃತವನ್ನೂ ಕ್ಷೀರವನ್ನೂ ಕರೆದಳು ಎಂದು ವಸಿಷ್ಠ ಋಷಿಯೇ ವರ್ಣಿಸಿದ್ದಾನೆ'[59] ಎಂದೂ ಋಗ್ವೇದದಲ್ಲಿ ಹೇಳಿದೆ.

ಋಗ್ವೇದದಲ್ಲಿ 10ನೇ ಮಂಡಲದ 75ನೇ ಸೂಕ್ತವೂ ನದೀ ಸೂಕ್ತವೆಂದೇ ಹೆಸರಾಗಿದೆ. ಒಟ್ಟಾರೆ ಋಗ್ವೇದದಲ್ಲಿ ಹಲವಾರು ನದಿಗಳು ಸ್ತುತಿಸಲ್ಪಟ್ಟಿದ್ದರೂ, ಮುಖ್ಯವಾಗಿ ಸರಸ್ವತೀ ಮತ್ತು ಸಿಂಧೂನದಿಯ ಸ್ತುತಿಯೇ ಹೆಚ್ಚಾಗಿದೆ. ಸಿಂಧೂನದಿಗೆ ಉಪನದಿಗಳು ಇರುವುದು, ಹೆಚ್ಚಾಗಿ ನೀರಿರುವುದು ಇದೇ ಮೊದಲಾದ ವಿಚಾರಗಳಿದ್ದರೆ, ಸರಸ್ವತಿಯ ವಿಷಯದಲ್ಲಿ ಹೆಚ್ಚು ವಿಶೇಷಣಗಳಿವೆ. ಆದ್ದರಿಂದಲೇ ಸರಸ್ವತಿಯನ್ನು "ನದೀತಮೇ" ಎಂದು ಗೌರವಿಸಲಾಗಿದೆ.

ದೇವತೆ ಅಥವಾ ಯಜ್ಞದೇವತೆ

ಋಗ್ವೇದದಲ್ಲಿ ಸರಸ್ವತಿಯನ್ನು ಐವತ್ತಕ್ಕೂ ಹೆಚ್ಚು ಋಕ್ಕುಗಳಲ್ಲಿ ದೇವತೆಯಾಗಿ ಸ್ತುತಿಸಲಾಗಿದೆ. ಹೆಚ್ಚಿನ ಋಕ್ಕುಗಳಲ್ಲಿ ಯಜ್ಞಕ್ಕೆ ಬರುವಂತೆ ಆಹ್ವಾನಿಸುವ, ಹವಿಸ್ಸನ್ನರ್ಪಿಸುವ ವಿಷಯವಷ್ಟೇ ಬರುತ್ತದೆ. ಹತ್ತು ಋಕ್ಕುಗಳಲ್ಲಿ ತಿಸ್ರೋ (ಭಾರತಿ, ಇಳಾ, ಸರಸ್ವತಿ) ದೇವಿಯರ ವಿಚಾರವಿದೆ. ಆದ್ದರಿಂದ ತಿಸ್ರೋದೇವಿಯರಿಗೆ ಸಂಬಂಧ ಪಟ್ಟ ಋಕ್ಕುಗಳನ್ನು ಪ್ರತ್ಯೇಕವಾಗಿಯೇ ಚರ್ಚಿಸಲಾಗುವುದು. ಇವುಗಳಲ್ಲದೆ ಸರಸ್ವತಿಗೆ ವಾಗ್ದೇವತೆ, ಜ್ಞಾನದೇವತೆ, ಪ್ರೇರಣಾದೇವತೆ, ಯುದ್ಧದೇವತೆ, ಅಹಿಂಸಾ ದೇವತೆ, ಮೊದಲಾದ ಸ್ವರೂಪಗಳನ್ನು ಆರೋಪಿಸಿರುವುದರಿಂದ ಅವುಗಳನ್ನು ಪ್ರತ್ಯೇಕವಾಗಿ ಚರ್ಚಿಸಲಾಗುವುದು. ಈಗ, ಸರಸ್ವತಿಯನ್ನು ಕೇವಲ ಒಂದು ದೇವತೆಯಾಗಿ ಸ್ತುತಿಸಿರುವ ಹಾಗೂ ಯಜ್ಞಕ್ಕೆ ಆಹ್ವಾನಿಸಿರುವ ಋಕ್ಕುಗಳನ್ನು ಮಾತ್ರ ಗಮನಿಸಲಾಗುವುದು.

'ಸರಸ್ವತಿಯು ದೇವತೆಗಳಲ್ಲೆಲ್ಲಾ ಶ್ರೇಷ್ಠಳಾದವಳು.[60] ಪ್ರಜಾಪತಿಯಿಂದ ಸೃಷ್ಟಿಯಾದವಳು.[61] ಕಮನೀಯವಾದ ರೂಪವನ್ನು[62] ಮತ್ತು ಸುಂದರವಾದ ದೇಹವನ್ನುಳ್ಳ[63] ಸರಸ್ವತಿಯು ಶ್ವೇತವರ್ಣದ ದೇವತೆ.[64] ತನ್ನ ಮಹಿಮೆಯಿಂದಲೇ ಮಹತ್ ಸ್ವರೂಪವನ್ನುಳ್ಳ[65] ಸರಸ್ವತಿಯು ಕಲ್ಯಾಣಕರವಾದ ಮತ್ತು ಪ್ರಶಸ್ತವಾದ ಗುಣವನ್ನುಳ್ಳ ದೇವತೆ'[66] ಎಂದು ಋಕ್ಕುಗಳು ಹೇಳುತ್ತವೆ.

---

59. ಋಗ್ವೇದ 7.95.2
60. ಋಗ್ವೇದ 2.41.16 (ದೇವೀತಮೇ –ದೇವೀನಾಂ ಶ್ರೇಷ್ಠೇ)
61. ಋಗ್ವೇದ 6.61.13 (ಕೃತಾ ಸರಸ್ವತೀ –ಪ್ರಜಾಪತಿನಾ ನಿರ್ಮಿತಾ ಸರಸ್ವತಿ)
62. ಋಗ್ವೇದ 6.49.7 (ಕನ್ಯಾ –ಕಮನೀಯಾ)
63. ಋಗ್ವೇದ 9.81.4 –(ಸುಯಮಾ ಸರಸ್ವತೀ –ಯಮ್ಯತೇ ನಿಯಮ್ಯತ ಇತಿ ಯಮೋ ವಿಗ್ರಹಃ)
64. ಋಗ್ವೇದ 7.95.6; 7.96.2 (ಶುಭ್ರೇ –ಶುಭ್ರವರ್ಣೇ ದೇವೀ)
65. ಋಗ್ವೇದ 6.61.13 (ಮಹಿಮ್ನಾ ಮಹಿನಾ –ಮಾಹಾತ್ಮ್ಯೇನ ಮಹತೀ)
66. ಋಗ್ವೇದ 7.96.3 (ಭದ್ರಾ ಅಕಾವರೀ –ಕಲ್ಯಾಣೀ ಭಜನೀಯಾ ವಾ ಸರಸ್ವತೀ)

ಇಂತಹ ಸರಸ್ವತಿಯನ್ನು ಧನ, ಅನ್ನ, ವಾಕ್, ಯುದ್ಧ, ಮೊದಲಾದವುಗಳಿಗಾಗಿ ಯಜ್ಞಕ್ಕೆ ಆಹ್ವಾನಿಸಿ, ಸ್ತುತಿಸಿ ಹವಿಸ್ಸನ್ನು ಅರ್ಪಿಸುತ್ತಿದ್ದರು. ಒಂದು ಋಕ್ಕು ಸರಸ್ವತಿಯನ್ನು ಏತಕ್ಕಾಗಿ ಮತ್ತು ಯಾರು ಆಹ್ವಾನಿಸುತ್ತಾರೆ ಎಂಬುದರ ಬಗ್ಗೆ ಹೇಳುತ್ತದೆ. 'ದೇವತೆಗಳನ್ನು ಅಪೇಕ್ಷಿಸುವವರು, ಉತ್ತಮವಾದ ಕೆಲಸಗಳನ್ನು ಮಾಡುವವರು, ಯಜ್ಞವನ್ನು ಸಾಂಗವಾಗಿ ನೆರವೇರಿಸಲು, ಅಪೇಕ್ಷಿತ ಫಲವನ್ನು ಪಡೆಯಲು ಸರಸ್ವತಿಯನ್ನು ಆಹ್ವಾನಿಸುತ್ತಾರೆ.'[67] 'ವಸಿಷ್ಠನೂ ಸರಸ್ವತಿಗಾಗಿ ತಾನು ಮಾಡುವ ಯಜ್ಞದ ಎರಡೂ ದ್ವಾರಗಳನ್ನು ತೆಗೆದಿಡುತ್ತಾನೆ'[68] ಎಂದು ಒಂದು ಋಕ್ ಹೇಳುತ್ತದೆ. 'ಸ್ವಧಾರೂಪವಾದ ಹವಿಸ್ಸುಗಳಿಂದ ಹರ್ಷವನ್ನು ಹೊಂದುತ್ತಾ ಪಿತೃಗಳೊಡನೆ ಒಂದೇ ರಥದಲ್ಲಿ ಕುಳಿತು ಹೋಗುವ (ಸರಸ್ವತಿ) ನೀನು ತೃಪ್ತಿಯನ್ನು ಹೊಂದಲು ಈ ದರ್ಭಾಸನದಲ್ಲಿ ಕುಳಿತುಕೋ'[69] ಎಂದು ಪ್ರಾರ್ಥಿಸಲಾಗುತ್ತದೆ. ಸರಸ್ವತಿಯನ್ನು ಒಳಗೊಂಡ ತಿಸ್ರೋದೇವಿಯರನ್ನು ಆರು ಋಕ್ಕುಗಳು ಯಜ್ಞಕ್ಕೆ ಆಹ್ವಾನಿಸುತ್ತವೆ. ಒಂದರಲ್ಲಿ, 'ಪೂಜ್ಯಳಾದ ಸರಸ್ವತಿಯು ನಮ್ಮ ಯಜ್ಞಕ್ಕೆ ದ್ಯುಲೋಕದಿಂದಾಗಲೀ, ಅಂತರಿಕ್ಷದಿಂದಾಗಲೀ ದಯಮಾಡಲಿ'[70] ಎಂದಿದ್ದರೆ, ಉಳಿದ ಐದರಲ್ಲಿ, 'ಭಾರತೀ ಇಳಾ ಸರಸ್ವತೀ ಎಂಬ ತಿಸ್ರೋದೇವಿಯರು, ಯಜ್ಞವೇದಿಯಲ್ಲಿರುವ ದರ್ಭಾಸನದ ಮೇಲೆ ಕುಳಿತುಕೊಳ್ಳಲಿ'[71] ಎಂಬ ಸ್ತುತಿಯಿದೆ.

ಯಜ್ಞಕ್ಕೆ ಆಹ್ವಾನಿಸಿದ ಸರಸ್ವತಿಯನ್ನು ನಾನಾ ರೀತಿಯಲ್ಲಿ ಸ್ತುತಿಸಿ ಪ್ರಾರ್ಥಿಸಲಾಗಿದೆ. 'ಸರಸ್ವತಿಯು ಈ ಯಜ್ಞದಲ್ಲಿ ನಮ್ಮ ಸ್ತುತಿಯನ್ನು ಕೇಳಲಿ.'[72] 'ಮೂರು ಲೋಕಗಳನ್ನು[73] ಅಂದರೆ, ಪೃಥಿವೀಲೋಕ, ವಿಸ್ತೃತವಾದ ಲೋಕ ಮತ್ತು ಅಂತರಿಕ್ಷವನ್ನೂ ವ್ಯಾಪಿಸಿರುವವಳು ನೀನು.'[74] 'ನಮ್ಮ ಯಜ್ಞದ ಹವಿಸ್ಸಿನ ರೂಪದ ಅನ್ನವನ್ನು ಅಪೇಕ್ಷಿಸು.'[75] 'ರಮಣೀಯವಾದ ರಸವನ್ನು ಒದಗಿಸುವ, ಧನವೇತ್ತೃವೂ ದಾತೃವೂ ಆದ ನಿನ್ನ ಸ್ತನವನ್ನು ಈ ಯಜ್ಞಕರ್ಮದಲ್ಲಿ ಪಾನಕ್ಕೆ ಯೋಗ್ಯವಾದುದನ್ನಾಗಿ

67. ಋಗ್ವೇದ 10.17.7 (ದೇವಯಂತಃ ಸರಸ್ವತೀಂ ಹವಂತೇ, ತಾಯಮಾನೇ ಅಧ್ವರೇ ಸರಸ್ವತೀಂ, ಸುಕೃತಃ ಸರಸ್ವತೀಂ ಅಹ್ವಯಂತ, ಸರಸ್ವತೀ ದಾಶುಷೇ ವಾರ್ಯಂ ದಾತ್)
68. ಋಗ್ವೇದ 7.95.6 (ಅಯಂ ವಸಿಷ್ಠಃ ತೇ ಋತಸ್ಯ ದ್ವಾರೌ ವ್ಯಾವ ಉ)
69. ಋಗ್ವೇದ 10.17.8 (ಸ್ವಧಾಭಿಃ ಮದಂತೀ ಸರಥಂ ಯಯಾಥ ಅಸ್ಮಿನ್ ಬರ್ಹಿಷಿ ಅಸದ್ಯ ಮಾದಯಸ್ವ)
70. ಋಗ್ವೇದ 5.43.11 (ಯಜತಾ ಸರ್ವತೀ ನಃ ಯಜ್ಞಂ ದಿವಃ ಬೃಹತಃ ಪರ್ವತಾತ್ ಆ ಗಂತು)
71. ಋಗ್ವೇದ 1.13.9; 1.142.9; 3.4.8; 5.5.8; 7.2.8; (ಭಾರತೀ ಇಳಾ ಸರಸ್ವತೀ ಬರ್ಹಿಃ ಸೀದಂತು)
72. ಋಗ್ವೇದ 7.95.4 (ಸರಸ್ವತೀ ನಃ ಅಸ್ಮಿನ್ ಯಜ್ಞೇ ಉಪಶ್ರವತ್)
73. ಋಗ್ವೇದ 6.61.12 (ತ್ರಿಷಧಸ್ಥಾ –ತ್ರಿಷು ಲೋಕೇಶು ಸಹಾವತಿಷ್ಠಮಾನಾ ತ್ರಿಲೋವ್ಯಾಪಿನೀ)
74. ಋಗ್ವೇದ 6.61.11 (ಪಾರ್ಥಿವಾನಿ ಉರು ರಜಃ ಅಂತರಿಕ್ಷಂ ಆ ಪಪ್ರುಷೀ ಸರಸ್ವತೀ)
75. ಋಗ್ವೇದ 1.3.10 (ನಃ ಯಜ್ಞಂ ವಾಜೇಭಿಃ ವಷ್ಟು)

ಮಾಡು.'[76] 'ಹವಿಸ್ಸುಗಳನ್ನು ಆಹುತಿರೂಪದಲ್ಲಿ ಅರ್ಪಿಸುತ್ತಾ ನಮಸ್ಕರಿಸುತ್ತೇವೆ.'[77] 'ಈ ಹವಿಸ್ಸುಗಳನ್ನು ಸ್ವೀಕರಿಸಿ ಸೇವಿಸು'[78] ಎಂದು ಮುಂತಾಗಿ ಸ್ತುತಿಸಲಾಗಿದೆ. ಕೊನೆಯಲ್ಲಿ ಸರಸ್ವತಿಯನ್ನು ಮತ್ತು ಸರಸ್ವತಿಯೊಂದಿಗೆ ಆಹ್ವಾನಿತರಾಗಿದ್ದ ಇತರ ದೇವತೆಗಳನ್ನು ಅಪೇಕ್ಷಿತ ಫಲಕ್ಕಾಗಿ –ಧನ, ಸಂಪತ್ತು, ಘೃತ, ಕ್ಷೀರ, ಪುತ್ರಸಂಪತ್ತು ಮತ್ತು ಗರ್ಭರಕ್ಷಣೆಗಾಗಿ–[79] ಪ್ರಾರ್ಥಿಸಲಾಗಿದೆ.

ತಿಸ್ರೋದೇವಿಯರು

ತಿಸ್ರೊ ಎಂಬ ಪದ ಮೂರು ಎಂಬ ಸಂಖ್ಯೆಯನ್ನು ಸೂಚಿಸುತ್ತದೆ. ಹಿಂದೂಸ್ಥಾನಿ ಸಂಗೀತದಲ್ಲಿ ತಿಸ್ರೊ ಎಂಬ ರಾಗವಿದೆ. ಕರ್ನಾಟಕ ಸಂಗೀತದಲ್ಲಿ ಮೂರು ಸ್ವರಗಳ ನಡೆಯನ್ನು ತಿಶ್ರನಡೆ ಎನ್ನುತ್ತಾರೆ. ತಿಸ್ರೋದೇವಿಯರು ಎಂದರೆ ಮೂವರು ದೇವಿಯರು ಎಂದಷ್ಟೇ ಅರ್ಥವಾಗುತ್ತದೆ.

ತಿಸ್ರೋದೇವಿಯರು ಎಂಬುದಕ್ಕೆ ಯಾಸ್ಕರು *'ತಿಸ್ರೋ ದೇವೀಃ। ತಿಸ್ರೋ ದೇವೀಸ್ತಿಸ್ರೋ ದೇವ್ಯಃ'* ಎಂದು ಮಾತ್ರ ಹೇಳಿ ಋಗ್ವೇದದ ಒಂದು ಋಕ್ಕನ್ನು[80] ಉದಾಹರಣೆಯಾಗಿ ಕೊಟ್ಟಿದ್ದಾರೆ. ಅದಕ್ಕೆ ಕೊಟ್ಟಿರುವ ವಿವರಣೆ[81] ಹೀಗಿದೆ:

- ಭಾರತೀ–ದ್ವಾದಶಾದಿತ್ಯರಲ್ಲಿ ಒಬ್ಬನಾದ ಭರತನ ದೀಪ್ತಿಗೆ ಭಾ ಎಂದು ಹೆಸರು. ಆದ್ದರಿಂದ ಭಾರತಿ ಎಂದರೆ ಸೂರ್ಯನ ಪ್ರಕಾಶವು ಅಥವಾ ಸೂರ್ಯಮಂಡಲದಲ್ಲಿ ಪ್ರಕಾಶರೂಪದಿಂದಿರುವ ಅಗ್ನಿಯ ಸ್ವರೂಪ.
- ಇಳಾ–ಇಳಾ ಎಂದರೆ ಪೃಥ್ವಿ, ಮನುಷ್ಯರನ್ನು ಪ್ರೇರೇಪಿಸುವ ಶಕ್ತಿಯುಳ್ಳವಳು. ಅಂದರೆ, ಭೂಮಿಯ ಮೇಲಿರುವ ಮನುಷ್ಯರಿಗೆ ಅನ್ನವೇ ಮೊದಲಾದ ಆಹಾರಗಳನ್ನು ಮತ್ತು ಧನಾದಿಗಳನ್ನು ಕೊಡುವವಳು. ಆದ್ದರಿಂದ ಇಳಾ ಎಂದರೆ ಪೃಥ್ವಿ ಸ್ಥಾನದಲ್ಲಿರುವ ಅಗ್ನಿಯ ಸ್ವರೂಪ.
- ಸರಸ್ವತೀ–ಅಂತರಿಕ್ಷದಲ್ಲಿರುವ ಸಿಡಿಲು ಮಿಂಚುಗಳಿಗೆ ಅಭಿಮಾನಿ ದೇವತೆ[82] ಆಗಿರುವುದರಿಂದ ಸರಸ್ವತಿಯು ಅಂತರಿಕ್ಷಸ್ಥಾನದಲ್ಲಿರುವ ಅಗ್ನಿಯ ಸ್ವರೂಪ.

ಮೇಲಿನ ವಿವರಣೆಗೆ ಪೂರಕವಾಗಿ ಋಗ್ವೇದದಲ್ಲಿಯೇ ಉದಾಹರಣೆಗಳಿವೆ.

---

76. ಋಗ್ವೇದ 1.164.49
77. ಋಗ್ವೇದ 7.95.5 (ಇಮಾ ಜುಹ್ವಾನಾಃ ನಮೋಭಿಃ)
78. ಋಗ್ವೇದ 2.41.18 (ಇಮಾಬ್ರಹ್ಮ ಜುಷಸ್ವ)
79. ಋಗ್ವೇದ 3.54.13; 7.39.5; 10.148.2
80. ಋಗ್ವೇದ 10.110.8 ಆ ನೋ ಯಜ್ಞಂ ಭಾರತೀ ತೂಯಮೇತ್ವಿಳಾ ಮನುಷ್ವದಿಹ ಚೇತಯಂತೀ।
ತಿಸ್ರೋದೇವೀರ್ಬರ್ಹರೇದಂ ಸ್ಯೋನಂ ಸರಸ್ವತೀ ಸ್ವಪಸಃ ಸದಂತು॥
81. ಸಾಯಣಭಾಷ್ಯಸಹಿತಾ ಋಗ್ವೇದಸಂಹಿತಾ; ಭಾಗ –2: ಪುಟ 565–66; (ಏತು ನೋ ಯಜ್ಞಂ ಭಾರತೀ ಕ್ಷಿಪ್ರಂ। ಭರತ ಆದಿತ್ಯಸ್ತಸ್ಯ ಭಾ ಇಳಾ ಚ ಮನುಷ್ಯದಿಹ ಚೇತಯಮಾನಾ ತಿಸ್ರೋ ದೇವ್ಯೋ ಬರ್ಹಿರಿದಂ ಸುಖಂ ಸರಸ್ವತೀ ಚ ಸಕರ್ಮಾಣ ಆಸೀದಂತು॥)
82. ಋಗ್ವೇದ 186.3 (ವಾಗ್ದೇವತೆ ಮತ್ತು ಸಿಡಿಲು ಮಿಂಚುಗಳ ಅಭಿಮಾನಿದೇವತೆ), 2.30.8; 3.54.12 (ನದಿ ಮತ್ತು ಸಿಡಿಲು ಮಿಂಚುಗಳ ಅಭಿಮಾನಿದೇವತೆ), 5.42.12; 5.43.11; 5.46.2 (ಸಿಡಿಲು ಮಿಂಚುಗಳ ಅಭಿಮಾನಿದೇವತೆ)

- ಒಂದು ಋಕ್ಕಿನಲ್ಲಿ, ಸೋಮ ಸಂಬಂಧಿಯಾದ ಯಜ್ಞಕ್ಕೆ ಈ ಮೂರೂ ದೇವತೆಗಳು ಬರಬೇಕೆಂದು ಪ್ರಾರ್ಥಿಸಲಾಗಿದೆ.[83]
- ಭಾರತಿಯು ಭಾರತಿಸಂಬಂಧಿಯಾದ ದೇವತೆಗಳೊಡನೆ, ಇಳಾದೇವಿಯು ಮನುಷ್ಯ ಲೋಕದವರೊಂದಿಗೆ, ಸರಸ್ವತಿಯು ಮಧ್ಯಮಸ್ಥಾನದಲ್ಲಿರುವ ದೇವತೆಗಳೊಂದಿಗೆ ಬರಲಿ. ಹೀಗೆ ಬಂದ ತಿಸ್ರೋದೇವಿಯರು ಯಜ್ಞವೇದಿಯಾದ ದರ್ಭಾಸನದ ಮೇಲೆ ಕುಳಿತುಕೊಳ್ಳಲಿ.[84]
- ಅಗ್ನಿದೇವನೇ, ನೀನು ಆದಿತ್ಯ ಸಂಬಂಧಿಯಾದ ಭಾರತಿಯೂ, ನಿತ್ಯಳಾದ ಇಳಾ ರೂಪದಲ್ಲಿಯೂ ಮತ್ತು ವಾಯುಸಂಬಂಧಿಯಾದ ಸರಸ್ವತಿಯೂ ಆಗಿದ್ದೀಯ.[85]
- ಆದಿತ್ಯ ಸಂಬಂಧಿಯಾದ ತೇಜಸ್ಸುಗಳೊಡನೆ ಕೂಡಿಕೊಂಡಿರುವ ಭಾರತೀ, ಮನುಷ್ಯರೊಡನೆ (ಕೂಡಿದ) ಇಳಾ ಮತ್ತು ಮಾಧ್ಯಮಿಕಾ ವಾಕ್ ಸರಸ್ವತೀ– ಈ ತಿಸ್ರೋದೇವಿಯರಿಂದಾದ ಅಗ್ನಿಯನ್ನು ಯಜ್ಞಕ್ಕೆ ಆಹ್ವಾನಿಸುತ್ತಿದ್ದೇವೆ.[86]

ಈ ಮೇಲಿನ ವಿವರಣೆಗಳನ್ನು ಗಮನಿಸಿ, ಅಗ್ನಿಯು ಸ್ವರ್ಗ, ಭೂಮಿ ಮತ್ತು ಅಂತರಿಕ್ಷ ಮೂರೂ ಲೋಕಗಳಲ್ಲಿಯೂ ಆರಾಧಿಸಲ್ಪಡುವವನಾದ್ದರಿಂದ ಯಜ್ಞಕ್ಕೆ ಅಗ್ನಿಸ್ವರೂಪರಾದ ತಿಸ್ರೋದೇವಿಯರನ್ನು ಆಹ್ವಾನಿಸಲಾಗಿದೆ ಎಂದು ಭಾವಿಸಬಹುದು. ಈ ಮೂರೂ ದೇವತೆಗಳು ಪ್ರೇರಣಾ ದೇವತೆಗಳಾಗಿದ್ದು, 'ಭಾರತೀ ಇಳಾ ಸರಸ್ವತಿಯರು ಸಂಪತ್ತನ್ನು ಪಡೆಯುವುದಕ್ಕಾಗಿ ಪ್ರೇರೇಪಿಸಲಿ'[87] ಎಂದು ಪ್ರಾರ್ಥಿಸಿರುವುದುಂಟು. 'ಬುದ್ಧಿಯನ್ನು ಪರಿಷ್ಕರಿಸುವ ಸರಸ್ವತೀ; ದೇವತಾತ್ಮಳಾದ ಇಳಾ, ಸಕಲವನ್ನೂ ವ್ಯಾಪಿಸಿರುವ ಭಾರತೀ ಈ ತಿಸ್ರೋದೇವಿಯರು ಅತಿವಿಸ್ತೃತವಾದ ಈ ದರ್ಭಾಸನದ ಮೇಲೆ ಕುಳಿತುಕೊಳ್ಳಲಿ'[88] 'ಇಳಾದೇವಿಯು, ಪ್ರಕಾಶಮಾನಳಾದ ಸರಸ್ವತಿಯು, ಕಾಂತಿಯುತವಾದ ಪಾದಗಳನ್ನುಳ್ಳ ಭಾರತಿಯು ಹವಿಸ್ಸನ್ನು ಸೇವಿಸಲಿ'[89] ಎಂದು ಪ್ರಾರ್ಥಿಸಿರುವುದುಂಟು. ಅಥರ್ವವೇದದಲ್ಲಿ ತಿಸ್ರೋದೇವಿಯರ ಪರಿಕಲ್ಪನೆ ಮುಂದುವರೆದು,[90] ಒಂದೇ ದೇವತೆಯ ಬೇರೆ ಬೇರೆ ರೂಪಗಳೆಂಬುದು ಸಾಧಿತವಾಗಿದೆ. ಇಳಾ(ಡಾ) ಭಾರತಿ ಮತ್ತು ಸರಸ್ವತಿ ಮೂರೂ ಜನರನ್ನು ಮೂರು ಜನ ಸರಸ್ವತಿಯರೆಂದೂ ಕರೆಯಲಾಗಿದೆ.[91]

---

83. ಋಗ್ವೇದ 9.5.8
84. ಋಗ್ವೇದ 7.2.8 (ಭಾರತೀ ಭಾರತೀಭಿಃ, ಇಳಾ ಮನುಷ್ಯೇಭಿಃ, ಸರಸ್ವತೀ ಸಾರಸ್ವತೇಭಿಃ)
85. ಋಗ್ವೇದ 2.1.11 (ಭಾರತೀ ಭರತಸ್ಯಾದಿತ್ಯ ಸಂಬಂಧಿನೀ, ನಿತ್ಯೇಳಾ ಭೂಮಿರಸಿ, ವಾಯೂನಾಂ ಸಂಬಂಧಿನ್ಯೋ ಸರಸ್ವತೀ)
86. ಋಗ್ವೇದ 3.4.8 (ಭಾರತೀಭಿಃ ಸಜೋಷಾಃ ಭಾರತೀ, ಮನುಷ್ಯೇಭಿಃ ಇಳಾ, ಸಾರಸ್ವತೇಭಿರ್ವಾಕ್ ಸರಸ್ವತೀ)
87. ಋಗ್ವೇದ 1.188.8
88. ಋಗ್ವೇದ 2.3.8
89. ಋಗ್ವೇದ 10.70.8
90. ಅಥರ್ವವೇದ 5.12.8 (ತಿಸ್ರೋದೇವೀಃ ಸರಸ್ವತೀಃ); 6.100.1 ತಿಸ್ರಃ ಸರಸ್ವತೀಃ)
91. Mohammad Israil Khan: Sarasvati in Sanskrit Literature, P.85

ಆದರೆ ತಿಸ್ರೋದೇವಿಯರಿಗೆ ಸಂಬಂಧಿಸಿದ ಋಗ್ವೇದದ ಮೂರು ಋಕ್ಕುಗಳಲ್ಲಿ ಸ್ವಲ್ಪ ಮಟ್ಟಿನ ಗೊಂದಲವಿರುವಂತೆ ಕಾಣುತ್ತದೆ. 'ಇಳಾ ಸರಸ್ವತೀ ಮಹೀ ತಿಸ್ರೋದೇವೀರ್'[92] ಎಂದು ಭಾರತೀ ಹೆಸರನ್ನು ಬಿಟ್ಟು ಎರಡು ಋಕ್ಕುಗಳಲ್ಲಿ ಸ್ತುತಿಸಲಾಗಿದೆ. ಇಲ್ಲಿ ಭಾರತೀ ಹೆಸರಿಗೆ ಬದಲಾಗಿ ಬಂದಿರುವ 'ಮಹೀ'ಪದಕ್ಕೆ ಸಾಯಣಭಾಷ್ಯದಲ್ಲಿ 'ಮಹತ್ವಗುಣಯುಕ್ತಳಾದ ಭಾರತೀ'[93] ಎಂದು ವಿವರಣೆ ನೀಡಲಾಗಿದೆ. ಆದರೆ, 'ಭಾರತೀ ಇಳಾ ಸರಸ್ವತೀ ಮಹೀ ಬರ್ಹಿಃ ಸೀದಂತು'[94] ಎಂಬಲ್ಲಿ 'ಮಹೀ' ಎಂಬುದನ್ನು 'ಮಹತ್ತಾದ ಸ್ವರೂಪವುಳ್ಳ' ಎಂದೇ ಅರ್ಥೈಸಲಾಗಿದ್ದರೂ ಅದು ಭಾರತಿಗೆ ಸಂಬಂಧಿಸಿರದೆ, ಸರಸ್ವತಿಗೆ ಸಂಬಂಧಿಸಿದ ವಿಶೇಷಣವಾಗಿದೆ. ಮಹೀ ಎಂಬುದು ಯಾವುದೇ ದೇವತೆಗೂ ಬಳಸಬಹುದಾದ ವಿಶೇಷಣ ಎಂದುಕೊಂಡರೆ ಈ ಸಣ್ಣ ಗೊಂದಲ ನಿವಾರಣೆಯಾಗುತ್ತದೆ.

ಇಳಾ–ಸರಸ್ವತೀ–ಕಾಮಧೇನು

ತಿಸ್ರೋದೇವಿಯರಿಗೆ ಸಂಬಂಧಿಸಿದ ಒಂದು ಋಕ್ಕಿನಲ್ಲಿ[95] ಇಳಾದೇವತೆಗೆ 'ಗೋರೂಪವನ್ನು ಧರಿಸಿರುವ ಭೂಮಿಯ ದೇವತೆ' ಎಂದು ಸಾಯಣಭಾಷ್ಯದಲ್ಲಿದೆ. ಇಲ್ಲಿ ಗೋರೂಪವನ್ನು ಧರಿಸಿರುವ ಕಲ್ಪನೆ, ವಾಕ್(ಇಳಾ) ಕಾಮಧೇನು ಎಂಬ ಕಲ್ಪನೆಗೆ ಕಾರಣವಾಗಿರಬೇಕು. ಸರಸ್ವತಿಯು ನಹುಷನಿಗೆ ಘೃತವನ್ನೂ ಕ್ಷೀರವನ್ನೂ (ಸಹಸ್ರವರ್ಷಗಳಿಗೆ ಆಗುವಷ್ಟು) ಕರೆದಳು ಎಂಬ ಮಾತಿದೆ.[96] ಇನ್ನೊಂದು ಋಕ್ಕಿನಲ್ಲಿ 'ಪವಮಾನನಿಗೆ ಸಂಬಂಧಿಸಿದ, ಋಷಿಗಳು ಸಂಪಾದಿಸಿದ, ವೇದಗಳ ಸಾರಭೂತವಾದ ಸೂಕ್ತಗಳನ್ನು ಪಠಿಸುವವನಿಗೆ ಸರಸ್ವತಿಯು ಕ್ಷೀರ, ಘೃತ, ಮಧು ಮತ್ತು ಸೋಮವನ್ನು ಕರೆಯುತ್ತಾಳೆ'[97] ಎಂದು ಹೇಳಿದೆ. 'ರಮಣೀಯವಾದ ರಸವನ್ನು ಒದಗಿಸುವ, ಧನವೇತ್ತೃವೂ ದಾತೃವೂ ಆದ ನಿನ್ನ ಸ್ತನವನ್ನು ಈ ಯಜ್ಞಕರ್ಮದಲ್ಲಿ ಪಾನಕ್ಕೆ ಯೋಗ್ಯವಾದುದನ್ನಾಗಿ ಮಾಡು'[98] ಎಂಬ ಸ್ತುತಿಯಿದೆ. ಆದ್ದರಿಂದ ಸರಸ್ವತಿಗೆ ಕಾಮಧೇನು ಸ್ವರೂಪವೂ ಇರುವುದು ಸ್ಪಷ್ಟವಾಗಿದೆ. ಇದು ಬೃಹದಾರಣ್ಯಕೋಪನಿಷತ್ತಿನಲ್ಲಿ[99] ಇನ್ನೂ ಸ್ಪಷ್ಟವಾಗಿ ಮೂಡಿಬಂದಿದೆ. ಇದರಲ್ಲಿ ಸರಸ್ವತಿಯನ್ನು ಹಸು(ಕಾಮಧೇನು)ವಿನ ರೂಪದಲ್ಲಿ ಲಕ್ಷಿಸಲಾಗಿದೆ. ಆಕೆಯ ನಾಲ್ಕು ಸ್ತನಗಳು ಸ್ವಹಾ, ವಶತ್, ಹಂತ

---

92. ಋಗ್ವೇದ 1.13.9; 5.5.8
93. ಸಾಯಣಭಾಷ್ಯಸಹಿತಾ ಋಗ್ವೇದಸಂಹಿತಾ; ಭಾಗ –2: ಪುಟ 564 (ಮಹೀಶಬ್ದೋ ಮಹತ್ವಗುಣಯುಕ್ತಾಂ ಭಾರತೀಂ)
94. ಋಗ್ವೇದ 1.142.9
95. ಋಗ್ವೇದ 3.23.4; (ಗೋರೂಪಧಾರಿಣ್ಯಾಃ ಇಳಾಯಾಃ ಪೃಥಿವ್ಯಾ ಭೂಮೇರ್ವರೇ), 3.23.5 (ಇಳಾಮೇತನ್ನಾಮಿಕಾಂ ಗೋರೂಪಾಂ ದೇವತಾ)
96. ಋಗ್ವೇದ 7.95.2 (ನಹುಷಾಯ ರಾಯಃ ಚೇತಂತೀ ಘೃತಂ ಪಯಃ ದುದುಹೇ)
97. ಋಗ್ವೇದ 9.67.32
98. ಋಗ್ವೇದ 1.164.49
99. ಋಗ್ವೇದಸಂಹಿತಾ ಭಾಗ –12, ಪು.645

ಮತ್ತು ಸ್ವಧಾ ಇವುಗಳನ್ನು ಪ್ರತಿನಿಧಿಸುತ್ತವೆ ಎನ್ನಲಾಗಿದೆ. ಸ್ವಹಾ ಮತ್ತು ವಶತ್ ಇವುಗಳ ಮೇಲೆ ದೇವತೆಗಳು, ಹಂತ ಎಂಬುದರ ಮೇಲೆ ಮನುಷ್ಯರು ಮತ್ತು ಸ್ವಧಾ ಎಂಬುದರ ಮೇಲೆ ಪಿತೃಗಳು ಅವಲಂಬಿತರಾಗಿರುತ್ತಾರೆ.

'ಪುರಾಣ ಕಥೆಯಲ್ಲಿ ಸೂಚಿತವಾಗಿರುವ ವಸಿಷ್ಠನ (ಕಾಮ)ಧೇನು (ವಾಕ್) ಋಗ್ವೇದದಲ್ಲಿಯೂ ಇದ್ದಾಳೆ. ಅಂಬೆ ಅಂಬಿತಮೆ ಎಂದು ಸಂಸ್ಥುತಳಾದ ಸರಸ್ವತಿಯೇ ವಸಿಷ್ಠನ ವಾಕ್‌ಧೇನು ಇರಬೇಕೆಂದು ಹೇಳಲು ಅವಕಾಶವಿದೆ. ಶಾಸ್ತ್ರಕ್ಕೆ ಸಾಂಕೇತಿಕ ನಾಲ್ಕು ಸ್ತನಗಳ ಪ್ರಾಣಿಯಾದರೂ, ಮೊದಲಲ್ಲಿ ಈ ವಾಕ್‌ಧೇನು ಎರಡು ಸ್ತನದ ದೇವಿಯಾಗಿರುವಳು. ಒಂದು ಸ್ತನದಿಂದ ಮಾನವರಿಗೆ ಧನಕನಕಾದಿಗಳನ್ನು, ಇನ್ನೊಂದರಿಂದ ವಿವೇಕವನ್ನು ನೀಡುತ್ತೀಯ ಎಂಬ ಮಾತು ಋಗ್ವೇದದಲ್ಲಿಯೇ ಬಂದಿದೆ.'[100] ಯಜುರ್ವೇದದ ಒಂದು ಸೂಕ್ತದಲ್ಲಿ 'ಸುದುಘಾ'[101] ಎಂದು ಕರೆದಿರುವುದನ್ನು ವಿಶ್ಲೇಷಿಸಿ ಸರಸ್ವತಿಗೆ ಕಾಮಧೇನುವಿನ ಸ್ವರೂಪ ಇದ್ದುದನ್ನು ಸ್ಪಷ್ಟಪಡಿಸಲಾಗಿದೆ.[102] ಇವೆಲ್ಲವೂ ಸರಸ್ವತಿಗೂ ಕಾಮಧೇನುವಿಗೂ ಅಭೇದ್ಯವನ್ನು ಕಲ್ಪಿಸಿವೆ.

ವಾಗ್ದೇವತೆ

ಸರಸ್ವತಿಗೆ ಎಷ್ಟೆಲ್ಲಾ ಸ್ವರೂಪಗಳಿದ್ದರೂ, ಆದಿಯಿಂದ ಇಂದಿನವರೆಗೆ ನಿರಂತರವಾಗಿ ಉಳಿದು ಬಂದಿರುವುದೆಂದರೆ ವಾಗ್ದೇವತೆಯ ಸ್ವರೂಪ. ಋಗ್ವೇದದಲ್ಲಿ, ಸರಸ್ವತಿಯ ವಾಗ್ದೇವತೆಯ ಸ್ವರೂಪವನ್ನು ಅರಿಯಲು ಸಾಕಷ್ಟು ಋಕ್ಕುಗಳು ಸಹಾಯ ಮಾಡುತ್ತವೆ. ಹತ್ತನೇ ಮಂಡಲದ 71ನೇ ಸೂಕ್ತದ ಮೊದಲ ಆರು ಋಕ್ಕುಗಳಲ್ಲಿ ವಾಕ್ ಮಹಿಮೆಯನ್ನು ಹೇಳಲಾಗಿದೆ. ಈ ಸೂಕ್ತದ ದೇವತೆ ಜ್ಞಾನ; ಋಷಿ ಬೃಹಸ್ಪತಿ. ವಾಕ್ಕಿಗೆ ಅಧಿದೇವತೆ ಸರಸ್ವತಿಯೇ ಎಂಬ ಸರ್ವಮಾನ್ಯವಾದ ಕಲ್ಪನೆಯಿರುವುದರಿಂದ ಮತ್ತು ಸರಸ್ವತಿಗೆ ಜ್ಞಾನದೇವತೆಯ ಸ್ವರೂಪವೂ ಇರುವುದರಿಂದ ವಾಗ್ದೇವತೆಯ ವಿಚಾರವನ್ನು ಚರ್ಚಿಸುವುದಕ್ಕೆ ಮೊದಲು, 'ವಾಕ್'ಮಹಿಮೆಯನ್ನು ಹೀಗೆ ಸಂಗ್ರಹಿಸಬಹುದು.

- ವಾಕ್ಕುಗಳಲ್ಲಿ ಯಾವುದು ಶ್ರೇಷ್ಠವಾದದು, ಪಾಪರಹಿತವಾದದು, ರಹಸ್ಯವಾಗಿ ಸ್ಥಾಪಿತವಾಗಿರುವುದು ಇರುವುದೋ ಅದನ್ನು ಸರಸ್ವತಿಯು ಪ್ರೀತಿಯಿಂದ ಪ್ರಕಾಶಪಡಿಸುತ್ತಾಳೆ (ಋ.ವೇ.10.71.1).
- ವಂದರಿಯಿಂದ ಧಾನ್ಯವನ್ನು ಸಂಸ್ಕರಿಸಿದಂತೆ ಪ್ರಾಜ್ಞರು ಯುಕ್ತವಾದ ಮನಸ್ಸಿನಿಂದ ಸಂಸ್ಕರಿಸಿದಾಗ ಮಿತ್ರರು ತಮ್ಮ ಮಿತ್ರತ್ವವನ್ನು ತಿಳಿಯುತ್ತಾರೆ. ಪ್ರಾಜ್ಞರ ವಾಕ್ಕಿನಲ್ಲಿ ಕಲ್ಯಾಣಾತ್ಮಕವಾದ ಶ್ರೇಯಸ್ಸು ಸ್ಥಾಪಿತವಾಗಿದೆ (ಋ.ವೇ.10.71.2).

---

100. ಶಂಭಾ ಜೋಷಿ ಕೃತಿ ಸಂಪುಟ –4, ಪು –411
101. ಯಜುರ್ವೇದ 20.75
102. Mohammad Israil Khan: Sarasvati in Sanskrit Literature, p.74-75

- ವಿವೇಕಿಗಳು ವಾಕ್ತತ್ವವನ್ನು ಯಜ್ಞದ ಮೂಲಕ ಅರಿತರು. ಅವರು ಋಷಿಗಳಿಂದ ಆ ವಾಕ್ತತ್ವವನ್ನು ಪಡೆದರು. ಪಡೆದು ಎಲ್ಲೆಡೆ ಹಂಚಿದರು. ಅಂತಹ ವಾಕ್ತತ್ವವನ್ನು ಗಾಯತ್ರ್ಯಾದಿ ಛಂದಸ್ಸುಗಳು ಸುತ್ತುವರಿದು ಕೂಡಿಕೊಳ್ಳುತ್ತವೆ (ಋ.ವೇ.10.71.3).
- ಸಾಕ್ಷಾತ್ಕಾರ ಹೊಂದಲರಿಯದವರು ವಾಕ್‌ತತ್ವವನ್ನು ನೋಡಿದರೂ ನೋಡಲಾರರು, ಕಿವಿಯಲ್ಲಿ ಕೇಳಿದರೂ ಪ್ರಯೋಜನವಿರದು. ಆದರೆ ವಾಕ್ತತ್ವವನ್ನು ಅರಿಯುವ ಸಾಮರ್ಥ್ಯವಿರುವವರಿಗೆ, 'ಪತ್ನಿಯ ಸಂಗವನ್ನು ಬಯಸಿದ ಪತ್ನಿಯು, ತನ್ನ ಪತಿಗೆ ವಸ್ತ್ರಾದಿಗಳಿಂದ ಅಲಂಕೃತವಾಗಿರುವ ಸುಂದರವಾದ ತನ್ನ ದೇಹವನ್ನು ಪ್ರಕಾಶಪಡಿಸುವಂತೆ', ವಾಗ್ದೇವಿಯು ತನ್ನ ಸ್ವರೂಪವನ್ನು ಪ್ರಕಾಶ ಪಡಿಸುತ್ತಾಳೆ (ಋ.ವೇ.10.71.4).
- ವಾಕ್ತತ್ವ ಬಲ್ಲವನನ್ನು ವಿದ್ವಾಂಸರ ಗುಂಪಿನಲ್ಲಿ ವಿಶೇಷವಾಗಿ ಗೌರವಿಸುತ್ತಾರೆ. ವಾಗ್ವ್ಯವಹಾರಗಳಲ್ಲಿ ಯಾರೂ ಪ್ರತಿಭಟಿಸುವುದಿಲ್ಲ. ಜ್ಞಾನರಹಿತನಾದವನು ವಾಕ್ಕನ್ನು ಕೇಳಿದರೂ ಅರ್ಥವನ್ನು ಗ್ರಹಿಸಲಾರ (ಋ.ವೇ.10.71.5).
- ಮಿತ್ರರೂಪವಾದ ವಾಕ್‌ನ ಬೆಲೆಯನ್ನು ತಿಳಿದವನು ವೇದಮಂತ್ರಗಳಿಗೆ ಮಿತ್ರನಾಗಿರುತ್ತಾನೆ. ಅಂತಹವನನ್ನು ನಿರ್ಲಕ್ಷಿಸಿದವನ ಮಾತಿನಲ್ಲಿ ಸತ್ಯವಿರುವುದಿಲ್ಲ (ಋ.ವೇ.10.71.6).

ಶ್ರೇಷ್ಠವಾದ, ಪಾಪರಹಿತವಾದ, ಮಿತ್ರತ್ವವನ್ನು ದೊರಕಿಸಿಕೊಡುವ ಸಾಧನವಾಗಿರುವ ವಾಕ್(ಮಾತು) ಜೀವ ಜಗತ್ತಿನ ಅಮೂಲ್ಯ ಆಸ್ತಿ. ಮಾನವರಿಗಂತೂ ಅತ್ಯವಶ್ಯಕ. ವಾಕ್ ಮಾನವರಿಗೆ ಯಶಸ್ಸನ್ನೂ ತಂದುಕೊಡುತ್ತದೆ ಎಂದು ಯಜುರ್ವೇದದ ಒಂದು ಮಂತ್ರ ಸರಸ್ವತಿಯನ್ನು 'ಯಶೋಭಾಗಿನಿ' ಎಂದು ಕರೆಯುವುದರ ಮೂಲಕ ಪ್ರತಿಪಾದಿಸುತ್ತದೆ.[103] ಸಂಪರ್ಕ ಕ್ರಾಂತಿಯ ಇಂದಿನ ಜಗತ್ತಿಗಂತೂ ಅದೇ ದೊಡ್ಡ ಬಂಡವಾಳ. ಅಂತಹ ವಾಕ್‌ಗೆ ಸರಸ್ವತಿಯು ಅಧಿದೇವತೆ. 'ಋಗ್ವೇದದಲ್ಲಿ ಸರಸ್ವತಿಯು ನದೀದೇವತೆಯೇ ಹೊರತು ಬೇರೆ ಯಾವ ಗುಣವೂ ಹೇಳಲ್ಪಟ್ಟಿಲ್ಲ'[104] ಎಂಬ ಮಾತಿದೆ. ವಾಗ್ದೇವತೆ ಎಂದು ಸರಸ್ವತಿಗೆ ನೇರವಾಗಿ ಸಂಬಂಧಿಸಿದ ಋಕ್ಕುಗಳು ಇಲ್ಲದಿದ್ದರೂ, ಒಂದು ಪದ ಅಥವಾ ವಾಕ್ಯವನ್ನು ಆಧರಿಸಿ, ಅವುಗಳಿಂದಲೇ ವಾಗ್ದೇವತೆಯ ಸ್ವರೂಪವನ್ನು ಅರಿಯಬೇಕಾಗಿದೆ.

'ಒಳ್ಳೆಯ ಮಾತುಗಳನ್ನಾಡುವಂತೆ ಪ್ರೇರೇಪಿಸುವವಳು,[105] ಎಂಬ ಮಾತು ಸ್ಪಷ್ಟವಾಗಿ ವಾಗ್ದೇವತೆಗೆ ಹೇಳಿದುದಾಗಿದೆ. ಇಂದ್ರನೇ ಮೊದಲಾದ ದೇವತೆಗಳೊಡನೆ ಸರಸ್ವತಿಯನ್ನು, ಅಂತರಿಕ್ಷವನ್ನು ಬೆಳಗುತ್ತಿರುವವಳು ಎಂದಿರುವುರಿಂದ ಈ ಋಕ್ಕಿನಲ್ಲಿ (10.65.1), ಮತ್ತು ಶಬ್ದಕಾರಕಳು ಎಂದು ವಾಕ್‌ಮಾಧ್ಯಮಿಕಾ ಸರಸ್ವತಿಯನ್ನು ಸ್ತುತಿಸಿರುವ ಇನ್ನೊಂದು ಋಕ್ಕಿನಲ್ಲಿ (10.65.13), ಸರಸ್ವತಿಯನ್ನು

---

103. ಯಜುರ್ವೇದ 2.20
104. ಸಾಯಣಭಾಷ್ಯಸಹಿತಾ ಋಗ್ವೇದಸಂಹಿತಾ; ಭಾಗ –29: ಪು.93
105. ಋಗ್ವೇದ 1.3.11 (ಸೂನೃತಾನಾಂ ಚೋದಯತ್ರೀ –ಪ್ರಿಯಾಣಾಂ ಸತ್ಯವಾಕ್ಯಾನಾಂ ಪ್ರೇರಯಿತ್ರೀ)

ವಾಕ್‌ದೇವತೆ ಎಂದು ಭಾವಿಸಲಾಗಿದೆ.[106] 'ರತ್ನಧಾಃ'[107] ಎಂಬ ಪದಕ್ಕೆ 'ರಮಣೀಯವಾದ ಅರ್ಥವನ್ನು (ರಸವನ್ನು) ಕೊಡುವವಳು' ಎಂದೂ ಅರ್ಥವಿರುವುದರಿಂದ ಸರಸ್ವತಿಯನ್ನು ವಾಗ್ದೇವತೆಯಾಗಿಯೇ ಪರಿಭಾವಿಸಬಹುದಾಗಿದೆ. ಇನ್ನೊಂದು ಋಕ್ಕಿನಲ್ಲಿ 'ಇಂದ್ರನನ್ನು ಸರಸ್ವತೀ ದೇವಿಯು ಸಮೀಪಿಸಿ ಸೇವಿಸುವಳು'[108] ಎಂಬ ಮಾತಿದೆ. ಇದೂ ಕೂಡಾ ವಾಕ್‌ದೇವತೆ ಸರಸ್ವತಿಯನ್ನು ಸೂಚಿಸುತ್ತಿರಬಹುದು.

ಮರುದ್ದೇವತೆಯೊಂದಿಗೆ ಸರಸ್ವತಿಯನ್ನು ಫಲಾಪೇಕ್ಷೆಯಿಂದ ಪ್ರಾರ್ಥಿಸಿರುವ ಋಕ್ಕಿನ[109] ಸಾಯಣಭಾಷ್ಯದಲ್ಲಿ 'ಗದ್ಯ ಪದ್ಯರೂಪೇಣ ಪ್ರಸರಣಮಸ್ಯಾ ಅಸ್ತೀತಿ ಸರಸ್ವತೀ ವಾಗ್ದೇವತಾ' ಎಂಬ ವಿವರಣೆಯಿದೆ.

'ಯಜ್ಞಕ್ಕೆ ದೇವತೆಗಳನ್ನು ವೇದಾತ್ಮವಾದ (ನಿವಿದಾ) ವಾಕ್ಕಿನಿಂದ ಆಹ್ವಾನಿಸುತ್ತೇವೆ' ಎನ್ನುವ ಈ ಋಕ್ಕಿನಲ್ಲಿ ಸರಸ್ವತಿಯು ವಾಗ್ದೇವತೆ (ನಿವಿದಾ) ಅಥವಾ ಸಿಡಿಲು ಮಿಂಚುಗಳ ಅಭಿಮಾನಿದೇವತೆ ಎಂದು ಭಾವಿಸಿದೆ. ನಿವಿದಾ ಪದಕ್ಕೆ ವಾಕ್ ಅಥವಾ ವೇದಾತ್ಮಕವಾದ ವಾಕ್ ಎಂಬ ಅರ್ಥವಿರುವುದು ಸರಸ್ವತಿಯ ವಾಗ್ದೇವಿ ಪಟ್ಟಕ್ಕೆ ಪರೋಕ್ಷ ಬೆಂಬಲವಾಗಿದೆ.

ಆರನೇ ಮಂಡಲದ 61ನೇ ಸೂಕ್ತದ ಎಲ್ಲಾ ಹದಿನಾಲ್ಕು ಋಕ್ಕುಗಳಿಗೆ ಸರಸ್ವತಿಯೇ ದೇವತೆ. ಅವುಗಳಲ್ಲಿ ಒಂದು ಋಕ್ಕು (6.61.10) 'ಪ್ರಿಯಾಸು ಪ್ರಿಯಾ ಸಪ್ತಸ್ವಸಾ ಸರಸ್ವತಿ' ಅಂದರೆ 'ಪ್ರೀತಿಪಾತ್ರರಿಗೆ ಪ್ರಿಯವಾಗುವಂತೆ ಇರುವ ಏಳು ಮಂದಿ ಭಗಿನಿಯರು(ಗಾಯತ್ರ್ಯಾದಿ ಸಪ್ತ ಛಂದಸ್ಸು)ಗಳನ್ನು ಹೊಂದಿರುವವಳು' ಎಂದು ಹೇಳುತ್ತದೆ. ಸಪ್ತಸ್ವಸಾ ಎಂಬುದಕ್ಕೆ ಗಾಯತ್ರ್ಯಾದಿ ಸಪ್ತಛಂದಸ್ಸು ಎಂಬ ಅರ್ಥ ಸರಿಯಾದುದಾದರೆ ಇಲ್ಲಿ ಹೇಳಿರುವ ಸರಸ್ವತಿಯು ವಾಗ್ದೇವತೆಯಾಗುತ್ತಾಳೆ. ಆದರೆ ಸಪ್ತಸ್ವಸಾ ಎಂಬುದನ್ನು ನದೀದೇವತೆಗಳಿಗೂ ಅನ್ವಯಿಸಿ, ಗಂಗಾದಿ ಸಪ್ತನದಿಗಳನ್ನು ಸಹೋದರಿಯರನ್ನಾಗಿ ಉಳ್ಳವಳು ಎಂದು ಅರ್ಥ ಮಾಡಲು ಸಾಧ್ಯವಿದೆ. ಹಾಗೆಯೇ ಮಾಡಬೇಕೆಂದು ಭಾಷ್ಯಕಾರರೂ ಸೂಚಿಸಿದ್ದಾರೆ.[110] ಯಜುರ್ವೇದದಲ್ಲಿ ಸರಸ್ವತಿಗೆ ಪ್ರಾಪ್ತವಾಗಿರುವ 'ಹವಿಸ್ಮತೀ'[111] ಎಂಬ ವಿಶೇಷಣಕ್ಕೆ ಬೇರೆ ಬೇರೆ ವಿದ್ವಾಂಸರು ನೀಡಿರುವ ಅರ್ಥಗಳನ್ನು ಪರಿಶೀಲಿಸಿ 'ಯಾವಾಗಲೂ ಪಂಡಿತೋತ್ತಮರ ನಡುವೆ ಸೇವಿತಳಾಗುವವಳು'[112] ಎಂಬ ತೀರ್ಮಾನಕ್ಕೆ ಬಂದಿರುವುದು ಸಹ, ಸರಸ್ವತಿಯ ವಾಗ್ದೇವತೆಯ ಸ್ವರೂಪವನ್ನು ಶ್ರುತಪಡಿಸುತ್ತದೆ.

---

106. ಸಾಯಣಭಾಷ್ಯಸಹಿತಾ ಋಗ್ವೇದಸಂಹಿತಾ; ಭಾಗ –29: ಪು.90
107. ಋಗ್ವೇದ 1.164.49 (ರತ್ನಧಾಃ –ಬಹುವಿಧರಮಣೀಯರಸಾನಾಂ ಧಾರಯಿತಾ)
108. ಋಗ್ವೇದ 10.131.5 (ಸರಸ್ವತೀ ದೇವೀ ತ್ವಾಮಬಿಷ್ಣಕ್ ಉಪಾಸೇವಿತ)
109. ಋಗ್ವೇದ 3.54.13
110. ಸಾಯಣಭಾಷ್ಯಸಹಿತಾ ಋಗ್ವೇದಸಂಹಿತಾ; ಭಾಗ –21: ಪು.469
111. ಯಜುರ್ವೇದ 20.24
112. Mohammad Israil Khan: Sarasvati in Sanskrit Literature, p.73-74

ವಾಗ್ದೇವತೆಯೆಂದೇ ಪ್ರಸಿದ್ಧಳಾಗಿರುವ ಸರಸ್ವತಿಯನ್ನು, ಋಗ್ವೇದದಲ್ಲಿ ವಾಗ್ದೇವತೆ ಎಂದು ಪ್ರತ್ಯೇಕವಾಗಿ ಸ್ತುತಿಸಿರುವ ಋಕ್ಕುಗಳಿಲ್ಲ; ಆದರೆ ಸೂಚನೆಗಳಿವೆ. ಈ ಮೇಲೆ ಗಮನಿಸಿದ ಕೆಲವು ಅಂಶಗಳು ಮತ್ತು, ತಿಸ್ರೋದೇವಿಯರಲ್ಲಿ ಹೇಳುವ ಸರಸ್ವತಿಯು 'ಮಾಧ್ಯಮಿಕಾ ವಾಕ್' ಆಗಿರುವುದರಿಂದ ಸರಸ್ವತಿಯ 'ವಾಗ್ದೇವಿ ಸ್ವರೂಪ'ದ ಬೇರುಗಳು ಋಗ್ವೇದದಲ್ಲಿಯೇ ಇವೆ ಎನ್ನಬಹುದು.

ಜ್ಞಾನದೇವತೆ ಮತ್ತು ಪ್ರೇರಣಾದೇವತೆ

ವಾಗ್ದೇವತೆ ಎಂದು ನೇರವಾಗಿ ಸ್ತುತಿಗೊಳ್ಳದಿದ್ದರೂ, ಸರಸ್ವತಿಯು ಜ್ಞಾನದೇವತೆಯಾಗಿ ಋಗ್ವೇದದಲ್ಲಿ ಸ್ತುತಿಗೊಂಡಿದ್ದಾಳೆ. 'ಒಳ್ಳೆಯ ಮಾತುಗಳನ್ನು ಆಡುವಂತೆ, ಒಳ್ಳೆಯ ಬುದ್ಧಿಯುಂಟಾಗುವಂತೆ, ಸತ್ಕಾರ್ಯ ಮಾಡುವಂತೆ ನೆನಪಿಸುವವಳು, ಮತ್ತು ಪ್ರೇರೇಪಿಸುವವಳು ಸರಸ್ವತೀ'[113] ಎಂಬ ಸ್ತುತಿ ಆಕೆಯನ್ನು ಜ್ಞಾನದೇವತೆಯನ್ನಾಗಿ ಪ್ರತಿಷ್ಠಾಪಿಸುತ್ತದೆ. 'ವಿಶ್ವಪ್ರಜ್ಞೆ ಚೈತನ್ಯಗೊಳ್ಳುವಂತೆ ಪ್ರೇರೇಪಿಸುವವಳು'[114] 'ಕೆಲಸಮಾಡುವ ಬುದ್ಧಿಯನ್ನು ಅನುಗ್ರಹಿಸುವವಳು'[115] ಎಂಬ ಮಾತು ಪ್ರಜ್ಞೆ ಅಥವಾ ಜ್ಞಾನವನ್ನೇ ಸೂಚಿಸುತ್ತದೆ. ಯಜುರ್ವೇದದಲ್ಲಿಯೂ[116] 'ಸಮಸ್ತ ಜನಗಳನ್ನು ಉದ್ದೀಪನಗೊಳಿಸುವವಳು (ವಿಶ್ವಾಧಿಯಃ ವಿರಾಜತಿ)' ಎಂಬ ಪ್ರೇರಣಾದೇವತಾ ಸೂಚಕವಾದ ಮಾತುಗಳು ಬಂದಿರುವುದನ್ನು ಗಮನಿಸಬಹುದಾಗಿದೆ. 'ಸ್ತೋತೃವಿನ ಜ್ಞಾನಕ್ಕೆ ಕಾರಣಳಾದವಳು'[117] ಎಂಬ ಮಾತು ನೇರವಾಗಿ ಜ್ಞಾನದೇವತೆಯನ್ನು ಪ್ರತಿಷ್ಠಾಪಿಸುತ್ತದೆ. 'ಭಾರತೀ ಇಳಾ ಸರಸ್ವತಿಯರು ಸಂಪತ್ತನ್ನು ಪಡೆಯುವುದಕ್ಕಾಗಿ ಪ್ರೇರೇಪಿಸಲಿ, ಸರಸ್ವತಿಯು ಉತ್ತೇಜನಗೊಳಿಸುವವಳು'[118] ಎಂಬ ಮಾತುಗಳು ಮತ್ತು ಮೇಲೆ ಹೇಳಿದ ಋಕ್ಕುಗಳಲ್ಲಿನ 'ಚೋದಯತ್ರೀ' ಎಂಬ ವಿಶೇಷಣ ಸರಸ್ವತಿಗೆ ಪ್ರೇರಣಾದೇವತೆಯ ಪಟ್ಟವನ್ನೂ ತಂದುಕೊಡುತ್ತದೆ.

ಯುದ್ಧದೇವತೆ ಅಥವಾ ರಕ್ಷಣಾದೇವತೆ

ಸರಸ್ವತಿಯನ್ನು ದೇವತೆಯೆಂದು ಸ್ತುತಿಸಿರುವ ಕೆಲವು ಋಕ್ಕುಗಳಲ್ಲಿ ಯುದ್ಧದೇವತೆಯ ಸ್ವರೂಪವನ್ನು ಗುರುತಿಸಬಹುದಾಗಿದೆ. ಆಯುಧಧಾರಿಣಿ[119] ಎಂಬ ವಿಶೇಷಣ ಸರಸ್ವತಿಯನ್ನು

---

113. ಋಗ್ವೇದ 1.3.11 (ಸೂನೃತಾನಾಂ ಸುಮತೀನಾಂ ಚೇತಂತೀ ಚೋದಯತ್ರೀ)
114. ಋಗ್ವೇದ 1.3.12 (ವಿಶ್ವಾಧಿಯಃ ವಿರಾಜತಿ)
115. ಋಗ್ವೇದ 6.49.7 (ಧಿಯಂ ಧಾತ್)
116. ಯಜುರ್ವೇದ 20.86
117. ಋಗ್ವೇದ 6.61.13 (ಚಿಕಿತುಷಾ ಸರಸ್ವತೀ)
118. ಋಗ್ವೇದ 1.188.8; 7.40.3 (ಸರಸ್ವತೀ ಜುನಂತಿ)
119. ಋಗ್ವೇದ 10.65.13 (ಪಾವೀರವೀ –ಆಯುಧವತೀ. ಇದಕ್ಕೆ ಶುದ್ಧಿಕಾರಕಳು ಎಂಬ ಅರ್ಥವೂ ಸಾಯಣ ಭಾಷ್ಯದಲ್ಲಿದೆ. ನೋಡಿ ಋಗ್ವೇದ 6.49.7)

ಯುದ್ಧದೇವತೆನ್ನಾಗಿ ಚಿತ್ರಿಸುತ್ತದೆ. ಇಂದ್ರನು ಶಂಡವಂಶದ ಅಸುರ ಪ್ರಮುಖನನ್ನು ಕೊಂದನೆಂದು ಹೇಳಿರುವ ಋಕ್ಕಿನಲ್ಲಿ 'ಮರ್ದನ ಮಾಡುವವಳಾದ ಸರಸ್ವತೀ ನೀನು ಶತ್ರುಗಳನ್ನು ಜಯಿಸು. ನಮ್ಮನ್ನು ರಕ್ಷಿಸು'[120] ಎಂದು ಸ್ತುತಿಸುತ್ತದೆ. 'ವಿದ್ಯುತ್‌ರೂಪದ ಅಥವಾ ಮಿಂಚಿನಂಥ ವೇಗವುಳ್ಳ ರಥವುಳ್ಳವರು, ಕಾಂತಿಯುತವಾದ ಆಯುಧವುಳ್ಳವರು, ಶತ್ರುನಾಶಕರು'[121] ಎಂದು ಮರುತ್‌ದೇವತೆಗಳನ್ನು ಸರಸ್ವತಿಯೊಂದಿಗೆ ಮತ್ತು 'ಶತ್ರುಗಳಿಗೆ ಭಯಂಕರಳೂ, ಸುವರ್ಣನಿರ್ಮಿತವಾದ ರಥವುಳ್ಳವಳೂ, ಶತ್ರುನಾಶಕಳಾದ ಸರಸ್ವತೀ'[122] ಎಂದು ಚಿತ್ರಿಸಲಾಗಿದೆ. 'ಯಾರು ಮಹಾಸ್ವಾರ್ಥಿಯೂ ಕಡುಲೋಭಿಯೂ ಆದ ಅಸುರನನ್ನು ಕೊಂದಳೋ ಅವಳು ಸರಸ್ವತಿ'[123], 'ನೀನು ದೇವನಿಂದಕರಾದ ಅಸುರನನ್ನು ನಾಶ ಮಾಡಿರುವೆ, ಶಕ್ತಿಯುತನಾದ ತ್ವಷ್ಟೃವಿನ ಪುತ್ರನಾದ ವೃತನನ್ನೂ ಕೊಂದು, ಅಸುರರಿಂದ ಅಪಹೃತವಾಗಿದ್ದ ಭೂಮಿಗಳನ್ನು ಮಾನವರಿಗೆ ಪುನಃ ಕೊಡಿಸಿದ್ದೀಯಾ'[124], 'ವೀರಪಾಲಕಳಾದ ನೀನು ಶತ್ರುಗಳು ಅಪಹರಿಸಿರುವ ಗೃಹವನ್ನು ತಿರುಗಿ ದಯಪಾಲಿಸು'[125] ಎಂಬ ಸ್ತುತಿಗಳಂತೂ ಸರಸ್ವತಿಯನ್ನು ಯುದ್ಧಭಯಂಕರಳಾಗಿಯೇ ಚಿತ್ರಿಸುತ್ತವೆ. 'ಪ್ರತಿಯೊಂದು ಯುದ್ಧದಲ್ಲಿಯೂ ಆಹ್ವಾನಿತಳಾಗುವವಳು'[126] ಎಂಬ ಮಾತು ಸರಸ್ವತಿಯು ಒಬ್ಬಳು ಪ್ರಧಾನ ಯುದ್ಧದೇವತೆ ಎಂಬುದನ್ನು ಸೂಚಿಸುತ್ತದೆ. 'ಲತೆಗೆ ಆಶ್ರಯವಾದ ವೃಕ್ಷದಂತೆ, ದೃಢವಾದ ಆಶ್ರಯವನ್ನು ಕೊಡುವ ನಿನ್ನನ್ನೇ ಆಶ್ರಯಿಸುತ್ತವೆ'[127] ಎಂಬ ಸ್ತುತಿ ಸರಸ್ವತಿಯ ರಕ್ಷಣಾದೇವತೆಯ ಸ್ವರೂಪವನ್ನು ಸೂಚಿಸುತ್ತದೆ. ಅಥರ್ವವೇದದಲ್ಲೂ ಇಂದ್ರ, ಪೂಷನ್, ಅದಿತಿ, ಮರುದ್ದೇವತೆಗಳು, ವಿಷ್ಣು, ದ್ಯಾವಾಪೃಥಿವಿ, ಅಗ್ನಿ, ಉಷಸ್, ನಿಶಾ ಅಶ್ವಿನಿ ಮೊದಲಾದ ದೇವತೆಗಳೊಂದಿಗೆ ಸರಸ್ವತಿಯನ್ನು, 'ಶತ್ರುಗಳಿಂದ ನಮ್ಮನ್ನು ರಕ್ಷಿಸು' ಎಂದು ಪ್ರಾರ್ಥಿಸಲಾಗಿದೆ.[128]

ಆಧುನಿಕ ಯುಗದ ಸರಸ್ವತಿಯ ಸ್ವರೂಪವನ್ನು ಗಮನಿಸಿದಾಗ, ಸರಸ್ವತಿಯ ಯುದ್ಧದೇವತೆಯ ಸ್ವರೂಪ ಅಚ್ಚರಿ ಮೂಡಿಸುತ್ತದೆ. ಸರಸ್ವತಿಯು ಯುದ್ಧದೇವತೆ ಎಂಬ ಕಲ್ಪನೆಯೇ ಈಗ ಸಂಪೂರ್ಣ

---

120. ಋಗ್ವೇದ 2.30.8 (ಧೃಷತೀ ಶತ್ರೂನ್ ಜೇಷಿ, ಸರಸ್ವತಿ ಅಸ್ಮಾನ್ ಅವಿಢ್ಢಿ)
121. ಋಗ್ವೇದ 3.54.13 (ವಿದ್ಯದ್ರಥಾಃ ಋಷ್ಟಿಮಂತಃ ಮರ್‍ಯಾಃ–ವಿದ್ಯೋತಮಾನರಥೋಪೇತಾ, ದೀಪ್ತಿಮಂತಃ ಋಷ್ಟಿರಾಯುಧ ವಿಶೇಷಃ, ಶತ್ರುನಾಶಕರು)
122. ಋಗ್ವೇದ 6.61.7 (ಘೋರಾ, ಹಿರಣ್ಯವರ್ತನಿಃ, ವೃತ್ರಘ್ನೀ)
123. ಋಗ್ವೇದ 6.61.1 (ಯಾ ಶಶ್ವಂತಂ ಅವಸಂ ಪಣಿಂ ಆಚಕಾದ ಇಯಂ)
124. ಋಗ್ವೇದ 6.61.3 (ಸರಸ್ವತಿ ದೇವನಿದೋ ನಿ ಬರ್ಹಯ, ವಿಶ್ವಸ್ಯ ಮಾಯಿನಃ ಬೃಸಯಸ್ಯ ಪ್ರಜಾಂ, ಕ್ಷಿತಿಭ್ಯಃ ಅವನೀಃ ಅವಿಂದಃ)
125. ಋಗ್ವೇದ 6.49.7 (ವೀರಪತ್ನೀ –ವೀರಾಣಾಂ ಪಾಲಯತ್ರೀ –ವೀರರ ಪಾಲಕಳು)
126. ಋಗ್ವೇದ 6.61.12 (ವಾಜೇವಾಜೇ ಹವ್ಯಾಭೂತ್ –ಯುದ್ಧೇ ಯುದ್ಧೇ ಸರ್ವೇಷು ಯುದ್ಧೇಷು ಹವ್ಯಾಭೂತ್)
127. ಋಗ್ವೇದ 7.95.5 (ಶರಣಂ ವೃಕ್ಷಂ ನ ಉಪ ಸ್ಥೇಯಾಮ ಯಷ್ಮತ್)
128. ಅಥರ್ವವೇದ 6.3.1–3

ಮರೆಯಾಗಿದೆ. ಯುದ್ಧದೇವತೆಯ ಸ್ವರೂಪ ಯಾವಾಗ ಮತ್ತು ಹೇಗೆ ಮರೆಯಾಯಿತು ಎಂಬುದು ಸ್ಪಷ್ಟವಾಗಿಲ್ಲ. ಸರಸ್ವತೀ ಶಿಲ್ಪಗಳಲ್ಲಿ ಮಾತ್ರ, ಆಯುಧ ಸಂಬಂಧಿಯಾದ ಅಂಕುಶ ಮತ್ತು ಪಾಶಗಳನ್ನು ನೋಡಬಹುದಾಗಿದೆ.

ಶಾಂತಿದೇವತೆ

'ಯುದ್ಧ ಮುಗಿದ ಮೇಲೆ ಶಾಂತಿ ನೆಲಸಲೇ ಬೇಕು' ಎಂಬುದು ಸಾಮಾನ್ಯ ನಂಬಿಕೆ. ಈ ನಂಬಿಕೆಯನ್ನು ಸಮರ್ಥಿಸುವಂತೆ, ಯುದ್ಧಭಯಂಕರಳಾಗಿ ಚಿತ್ರಿತಳಾಗಿರುವ ಸರಸ್ವತಿಯು ಒಂದು ಋಕ್ಕಿನಲ್ಲಿ ಶಾಂತಿದೇವತೆಯಾಗಿಯೂ ಸ್ತುತಿಗೊಂಡಿದ್ದಾಳೆ. 'ಸರಸ್ವತಿಯು ತನ್ನ ಕರ್ಮಗಳೊಡನೆ ನಮ್ಮ ಶಾಂತಿಗಾಗಿ ಅನುಗ್ರಹಿಸಲಿ'[129] ಎಂದು ವಿಶ್ವದೇವತೆಗಳೊಂದಿಗೆ ಯಜ್ಞಕ್ಕೆ ಆಹ್ವಾನಿತಳಾಗಿದ್ದಾಳೆ.

ಅಹಿಂಸಾದೇವತೆ

ಸರಸ್ವತೀ ಯುದ್ಧದೇವತೆಯಾದರೂ ಹಿಂಸೆಯನ್ನುಂಟು ಮಾಡುವವಳಲ್ಲ. ಅವಳು ಅಹಿಂಸಾ ದೇವತೆಯೂ ಹೌದು. 'ಯಾರಿಗೂ ಹಿಂಸೆ ಮಾಡದಿರುವ ದೇವತೆ'[130] ಎಂದು ಭಾರತಿ ಮತ್ತು ಇಳಾದೇವಿಯರೊಂದಿಗೆ ಸ್ತುತಿಗೊಂಡಿದ್ದಾಳೆ.

ಅನ್ನಪೂರ್ಣೆ

ನದಿಬಯಲು ಫಲವತ್ತತೆಯಿಂದ ಕೂಡಿರುವುದು ಸಹಜವಾಗಿದೆ. ಕೃಷಿ, ಹೈನುಗಾರಿಕೆ ಇತ್ಯಾದಿ ಉತ್ಪತ್ತಿ ಸಮೃದ್ಧವಾಗಿ ಇರುತ್ತದೆ. ಅಲ್ಲಿ ಅನ್ನ ಅಂದರೆ ಆಹಾರ ವಸ್ತುಗಳ ಬೆಳವಣಿಗೆ ಉತ್ತಮವಾಗಿ ಇರುತ್ತದೆ. ಸರಸ್ವತಿ ನದಿ ದೊಡ್ಡ ನದಿಯಾದ್ದರಿಂದ, ಅಲ್ಲಿದ್ದ ಎಲ್ಲರಿಗೂ ಸಾಕಾಗುವಷ್ಟು ಆಹಾರ ವಸ್ತುಗಳನ್ನು ಉತ್ಪಾದಿಸಿಕೊಳ್ಳುವುದು ಕಷ್ಟವಾಗಿರಲಿಲ್ಲ. ಮೂಲತಃ ನದಿ ಮತ್ತು ನದಿದೇವತೆಯಾದ ಸರಸ್ವತಿಗೆ, ಅನ್ನದಾತೆ, ಅನ್ನದೇವತೆ, ಅನ್ನಪೂರ್ಣೆ ಎಂಬ ವಿಶೇಷಣಗಳು ಪ್ರಾಪ್ತವಾಗಿವೆ ಎನ್ನಬಹುದು.

ಐದು ಋಕ್ಕುಗಳಲ್ಲಿ[131] ಸರಸ್ವತಿಯನ್ನು 'ವಾಜಿನೀವತೀ' ಎಂಬ ವಿಶೇಷಣದಿಂದ ಸ್ತುತಿಸಲಾಗಿದೆ. ವಾಜಿನೀವತಿ ಎಂಬುದಕ್ಕೆ ಸಾಯಣಭಾಷ್ಯದಲ್ಲಿ ಅನ್ನವತಿ ಅಂದರೆ ಅನ್ನಯುಕ್ತಳೂ ಅಥವಾ ಅನ್ನವನ್ನು ಉತ್ಪಾದಿಸುವವಳು ಎಂಬ ಅರ್ಥವನ್ನು ನೀಡಲಾಗಿದೆ. 'ನಿನ್ನಲ್ಲಿ ಸಮಸ್ತವಾದ ಅನ್ನಗಳು ಆಶ್ರಯಿಸಿವೆ'[132],

---

129. ಋಗ್ವೇದ 7.35.11 (ಸರಸ್ವತೀ ಧೀಭಿಃ ಸಹ ಶಂ ಅಸ್ತು –ಸರಸ್ವತೀ ಚ ಧೀಭಿಃ ಸ್ತುತಿಭಿಃ ಕರ್ಮಾಭಿರ್ವಾ ಸಹ ನೋಸ್ಮಾಕಂ ಶಂ ಶಾಂತ್ಯಾ ಅಸ್ತು)
130. ಋಗ್ವೇದ (1.13.9 –ಅಸ್ರಿಧಃ –ಶೊಷೇಣ ಕ್ಷಯೇಣ ವಾ ರಹಿತಾಃ)
131. ಋಗ್ವೇದ 1.3.10; 2.41.18; 6.61.3; 6.61.4; 7.96.3 (ವಾಜಿನೀವತೀ –ವಾಜಿನೀವತ್ಯನ್ನವತಿ)
132. ಋಗ್ವೇದ 2.41.17 (ತ್ವೇ ವಿಶ್ವಾ ಆಯೂಂಷಿ ಶ್ರಿತಾ)

'ಸರಸ್ವತಿಯು ನಮಗೆ ಅನ್ನವನ್ನು ವೃದ್ಧಿಪಡಿಸಲಿ'[133], 'ಅನ್ನಯುಕ್ತಳಾದ ಸರಸ್ವತಿಯು ಅನ್ನಗಳಿಂದ ನಮ್ಮನ್ನು ತೃಪ್ತಿ ಪಡಿಸಲಿ'[134], 'ಕಾಂತಿಯುಕ್ತವಾದ ಅನ್ನಯುಕ್ತಳು'[135] ಮುಂತಾದ ಅಂಶಗಳು ಸರಸ್ವತಿಯನ್ನು ಅನ್ನಪೂರ್ಣೆಯಾಗಿ ಚಿತ್ರಿಸಲು ನೆರವಾಗುತ್ತವೆ.

'ರೋಗಾದಿರಹಿತವಾದ ಅನ್ನಗಳನ್ನು ನಮಗೆ ಕೊಡು'[136], 'ಸರಸ್ವತಿಯು, ಸ್ತುತಿಸತಕ್ಕ ನನಗೆ ಸಕಲ ಅನ್ನವನ್ನು ಕೊಡಲಿ'[137] ಮತ್ತು 'ಈ ಯಜ್ಞದಲ್ಲಿ ಅನೇಕರ ಸ್ತುತಿಗೂ ತೃಪ್ತಿಗೂ ಸಾಕಾಗುವ ಅನ್ನದ ಭಾಗವನ್ನು ಸ್ಥಾಪಿಸಲಿ'[138] ಎಂದು ಪ್ರಾರ್ಥಿಸಲಾಗಿದೆ. 'ಸ್ತುತಿಕರ್ತನಾದ ವಸಿಷ್ಠನಿಗೆ ಅನ್ನಗಳನ್ನು ಕೊಡು'[139] ಎಂದೂ ಪ್ರಾರ್ಥಿಸಿರುವುದುಂಟು.

ಭಾಗ್ಯದೇವತೆ

ಋಗ್ವೇದದ ಹಲವಾರು ಋಕ್ಕುಗಳಲ್ಲಿ ಸರಸ್ವತಿಯನ್ನು ಧನಪ್ರಾಪ್ತಿಗಾಗಿ ಸ್ತುತಿಸಿದೆ. ಸರಸ್ವತೀ ನದಿ ಸಂಪತ್ಭರಿತವಾಗಿದ್ದಾಗ, ಆ ಕಾಲದ ಎಲ್ಲಾ ಆರ್ಥಿಕ ಚಟುವಟಿಕೆಗಳು ನದಿಯನ್ನೇ ಅವಲಂಬಿಸಿದ್ದಿರಬೇಕು. ಆದ್ದರಿಂದ ಸರಸ್ವತಿಯನ್ನು ಎಲ್ಲಾ ಕಾರಣಗಳಿಗಾಗಿ ಅಂದರೆ, ಯುದ್ಧ, ಯಜ್ಞ ಮೊದಲಾದವುಗಳಿಗಾಗಿ ಸ್ತುತಿಸಲಾಗಿದೆ.

ಸುಭಗೇ, ಸುಭಗಾ ಎಂಬ ವಿಶೇಷಣಗಳಿಂದ ನಾಲ್ಕು ಋಕ್ಕುಗಳಲ್ಲಿ[140] ಸರಸ್ವತಿಯನ್ನು ಸ್ತುತಿಸಲಾಗಿದೆ. ಸುಭಗಾ ಎಂಬುದಕ್ಕೆ 'ಶೋಭನಧನೇ' ಎಂಬ ಅರ್ಥವನ್ನು ಭಾಷ್ಯಕಾರರು ನೀಡಿದ್ದಾರೆ. ಅಂದರೆ ಸರಸ್ವತಿಯು ಒಳ್ಳೆಯ ಧನವನ್ನು ಉಳ್ಳವಳು ಎಂದರ್ಥ. ಸರಸ್ವತಿಯು 'ಯಜ್ಞಾದಿಗಳಿಗೆ ಬೇಕಾದ ಧನರೂಪವಾದ ಐಶ್ವರ್ಯಪ್ರಾಪ್ತಿಗೆ ಕಾರಣಳಾದವಳು'.[141] ಸರಸ್ವತಿಯು ಕೊಡುವ 'ಧನಾದಿಗಳು ಮಹತ್ಫಲವುಳ್ಳವುಗಳಾಗಿವೆ'[142] ಎಂದೂ ಸ್ತುತಿಸಲಾಗಿದೆ.

---

133. ಋಗ್ವೇದ 6.50.12 (ಸರಸ್ವತೀ ನಃ ಇಷಂ ಪಿಪ್ಯತಾಂ)
134. ಋಗ್ವೇದ 6.61.4 (ವಾಜಿನೀವತೀ ಸರಸ್ವತೀ ವಾಜೇಭಿಃ ನಃ ಪ್ರ ಅವತು)
135. ಋಗ್ವೇದ 6.61.13 (ದ್ಯುಮ್ನೇಭಿಃ –ದ್ಯುಮ್ನೈರ್ದ್ಯೋತಮಾನ್ಯೈರ್ಯ ಶೋಭಿರನ್ನೈರ್ವಾ ಯುಕ್ತಾ)
136. ಋಗ್ವೇದ 10.17.8 (ಅನಮೀ ವಾಃ ಇಷಃ ಅಸ್ಮೇ ಆ ಧೇಹಿ)
137. ಋಗ್ವೇದ 10.30.12 (ಸರಸ್ವತೀ ಗೃಣತೇ ತತ್ ವಯಃ ಧಾತ್)
138 . ಋಗ್ವೇದ 10.17.9 (ಅತ್ರ ಸಹಸ್ರಾರ್ಘಂ ಇಳಃ ಭಾಗಂ ಧೇಹಿ)
139. ಋಗ್ವೇದ 7.95.6 (ಸ್ತುವತೇ ವಾಜಾನ್ ರಾಸಿ –ವಸಿಷ್ಠಾಯ ಅನ್ನಾನಿ ಪ್ರದೇಹಿ)
140. ಋಗ್ವೇದ 1.89.3; 7.95.4; 7.95.6; 8.21.17
141. ಋಗ್ವೇದ 1.3.10 (ಧಿಯಾವಸುಃ –ಕರ್ಮಪ್ರಾಪ್ಯಧನನಿಮಿತ್ತಭೂತಾ)
142. ಋಗ್ವೇದ 6.61.1 (ತೇ ದಾತ್ರಾಣಿ ತವಿಷಾ –ತ್ವದೀಯಾನಿ ದಾನಾನಿ ತವಿಷಾಣಿ ಮಹಾಂತಿ ಭವಂತಿ)

ಸರಸ್ವತಿಯನ್ನು ಮಹತ್ಫಲವುಳ್ಳ ಸಂಪತ್ತಿಗಾಗಿ 'ಧನವನ್ನು ಒದಗಿಸು',[143] 'ಉತ್ತಮವಾದ ಸಂಪತ್ತನ್ನು ಕೊಡು',[144] 'ಯಜ್ಞದಲ್ಲಿ ಅನೇಕರ ಸ್ತುತಿಗೂ ತೃಪ್ತಿಗೂ ಸಾಕಾಗುವಷ್ಟು ಧನವನ್ನೂ ಪುಷ್ಟಿಯನ್ನೂ ಕೊಡು'[145] ಎಂದು ಪ್ರಾರ್ಥಿಸಲಾಗಿದೆ. ಅಂಬಿತಮೆ, ನದೀತಮೆ ದೇವಿತಮೇ ಸರಸ್ವತಿಯನ್ನು 'ಧನಸಮೃದ್ಧಿಯನ್ನುಂಟು ಮಾಡಲೂ'[146] ಸ್ತುತಿಸಿರುವುದುಂಟು. 'ಬಳ್ಳಿಯು ವೃಕ್ಷವನ್ನು ಆಶ್ರಯಿಸಿದಂತೆ, ದೃಢವಾದ ಆಶ್ರಯವನ್ನು ಕೊಡುವ ನಿನ್ನನ್ನೇ ನಾವು ಆಶ್ರಯಿಸುತ್ತೇವೆ. ನಿನ್ನಿಂದ ನಾವು ಸಂಪತ್ತನ್ನು ಹೊಂದುವಂತಾಗಲಿ'[147] ಎಂದು ಸರಸ್ವತಿಯನ್ನು ಸ್ತುತಿಕಾರರು ಧನಸಂಪತ್ತಿಗಾಗಿ ಆಶ್ರಯಿಸಿದ್ದಾರೆ.

ಸರಸ್ವತಿಯನ್ನು ಸಂಪತ್ತಿಗಾಗಿ, ಏಕದೇವತೆಯನ್ನಾಗಿ ಸ್ತುತಿಸಿರುವಂತೆ, ಸಹದೇವತೆಯಾಗಿಯೂ ಸ್ತುತಿಸಿರುವುದುಂಟು. ಯಜ್ಞಾರ್ಹರಾದ ಮರುದ್ದೇವತೆ,[148] ಋಭು, ಇಂದ್ರಾಣಿ ಮತ್ತು ರಾಕಾ[149] ಇವರನ್ನು ಧನಪ್ರಾಪ್ತಿಗಾಗಿ ಸರಸ್ವತಿಯೊಂದಿಗೆ ಸ್ತುತಿಸಲಾಗಿದೆ. ಆರ್ಯಮಾ, ಬೃಹಸ್ಪತಿ, ಇಂದ್ರ, ವಾಯು, ವಿಷ್ಣು, ಮತ್ತು ಸವಿತೃ ಎಂಬ ದೇವತೆಗಳೊಡನೆಯೂ ಸ್ತುತಿಸಲಾಗಿದೆ.[150] ಇಂದ್ರನನ್ನು ಸರಸ್ವತಿಯೊಂದಿಗೆ ಧನಕ್ಕಾಗಿ ಸ್ತುತಿಸಿರುವ ಎರಡು ಋಕ್ಕುಗಳಲ್ಲಿ 'ಯುದ್ಧಗಳಿಗಾಗಿ ಸಂಪತ್ತನ್ನು ಕೊಡು'[151] ಎಂದು ಪ್ರಾರ್ಥಿಸಲಾಗಿದೆ. ನಹುಷನೆಂಬ ರಾಜನು ಸಾವಿರ ವರ್ಷಗಳವರೆಗೆ ಮಾಡಬೇಕಾದ ಸತ್ರಯಾಗಕ್ಕಾಗಿ, ಎಲ್ಲಾ ನದಿಗಳ ಸಹಾಯವನ್ನು ಕೇಳುತ್ತಾನೆ. ಆಗ ನದೀ ಸಮೂಹವು, ಅಷ್ಟೊಂದು ದೀರ್ಘವಾದ ಯಾಗಕ್ಕೆ ಬೇಕಾದ ಸಾಮಗ್ರಿಗಳನ್ನು ಪೂರೈಸುವ ಶಕ್ತಿ ತಮಗಿಲ್ಲವೆಂದೂ, ಸರಸ್ವತೀ ನದಿಯು ಮಾತ್ರ ಪೂರೈಸಬಲ್ಲಳೆಂದೂ ಹೇಳುತ್ತವೆ. ನಹುಷನ ಪ್ರಾರ್ಥನೆಯನ್ನು ಮನ್ನಿಸಿ ಸರಸ್ವತಿಯು, 'ಸಾವಿರ ವರ್ಷಗಳಿಗಾಗುವಷ್ಟು ಧನವನ್ನು ಕೊಡುತ್ತಾ, ತುಪ್ಪವನ್ನೂ ಕ್ಷೀರವನ್ನೂ ಕರೆದಳು'[152] ಎಂದು ವಸಿಷ್ಠ ಕೃತ

143. ಋಗ್ವೇದ 7.96.2 (ರಾಧಃ ಚೋದ)
144. ಋಗ್ವೇದ 6.61.14 (ವಸ್ವಃ ಅಭಿ ನೇಷಿ)
145. ಋಗ್ವೇದ 10.17.9 (ಅತ್ರ ಸಹಸ್ರಾರ್ಘಂ ರಾಯಃ ಪೋಷಂ ಧೇಹಿ)
146. ಋಗ್ವೇದ 2.41.16 (ಅಂಬಿತಮೇ ನದೀತಮೇ ದೇವೀತಮೇ ಸರಸ್ವತಿ ಪ್ರಶಸ್ತಿಂ ಕೃಧಿ)
147. ಋಗ್ವೇದ 7.95.5 (ಶರಣಂ ವೃಕ್ಷಂ ನ ಉಪ ಸ್ಥೇಯಾಮ ಯಷ್ಮತ್ ಆ ದದೀಮಹಿ)
148. ಋಗ್ವೇದ 3.54.13
149. ಋಗ್ವೇದ 5.42.12
150. ಋಗ್ವೇದ 10.141.5
151. ಋಗ್ವೇದ 6.61.5 (ವೃತ್ರತೂರ್ಯೇ ಧನೇಹಿತೇ ತ್ವಾ ಉಪಬ್ರೂತೇ); 6.61.6 (ವಾಜೇಷು ಅವ; ಸನಿಂ ರದ)
152. ಋಗ್ವೇದ 7.95.2 (ನಹುಷಾಯ ರಾಯಃ ಚೇತಂತೀ ಘೃತಂ ಪಯಃ ದುದುಹೇ)

ಋಕ್ಕಿನಲ್ಲಿ ಹೇಳಿದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದರೆ, ಸರಸ್ವತಿಯು ವಾಕ್‌ಲಕ್ಷ್ಮಿ ಮಾತ್ರವಲ್ಲ; ಧನಲಕ್ಷ್ಮಿಯೂ ಹೌದು ಎಂಬ ಅಭಿಪ್ರಾಯ ಮೂಡುತ್ತದೆ.

ಆರೋಗ್ಯದೇವತೆ

ಋಗ್ವೇದದ ಒಂದು ಋಕ್ಕಿನಲ್ಲಿ 'ರೋಗಾದಿರಹಿತವಾದ ಅನ್ನಗಳನ್ನು ನಮಗೆ ಕೊಡು'[153] ಎಂದು ಪ್ರಾರ್ಥಿಸಲಾಗಿದೆ. ಇದರಿಂದ ಸರಸ್ವತಿಯು ಆರೋಗ್ಯಕ್ಕೂ ಸಂಬಂಧಿಸಿದ ಮತ್ತು ಸ್ತುತಿಕಾರರ ಆರೋಗ್ಯದ ಬಗ್ಗೆ ಕಾಳಜಿ ಇರುವ ದೇವತೆ ಎಂಬುದು ಸ್ಪಷ್ಟವಾಗುತ್ತದೆ. ಸಿನೀವಾಲಿ ಮತ್ತು ಅಶ್ವಿನಿದೇವತೆಗಳೊಂದಿಗೆ ಸರಸ್ವತಿಯನ್ನು 'ಗರ್ಭವನ್ನು ಧರಿಸುವಂತೆ ಮಾಡಿ ಅದನ್ನು ರಕ್ಷಿಸಿರಿ' ಎಂದು ಸ್ತುತಿಸಿರುವುದನ್ನು ನೋಡಬಹುದು.[154] ಇದಕ್ಕೆ ಪೂರಕವಾಗಿ ಯಜುರ್ವೇದದಲ್ಲಿ ಸರಸ್ವತಿಗೆ ಪ್ರಾಪ್ತವಾಗಿರುವ 'ಜಾಗೃವಿ'[155] ಎಂಬ ವಿಶೇಷಣವನ್ನು ವಿಶ್ಲೇಷಿಸಿ, ಸರಸ್ವತಿಯನ್ನು ಅಶ್ವಿನಿ ದೇವತೆಗಳೊಂದಿಗೆ 'ವೈದ್ಯೆ' ಎಂದು ಗುರುತಿಸಿರುವುದುಂಟು. ಇಂದ್ರನು ಅತಿಯಾದ ಸೋಮರಸವನ್ನು ಸೇವಿಸಿ ಅಸ್ವಸ್ಥನಾದಾಗ ಸರಸ್ವತಿ ಮತ್ತು ಅಶ್ವಿನಿದೇವತೆಗಳು ಸೇರಿ ಅವನಿಗೆ ಶುಶ್ರೂಶೆ ಮಾಡಿದ ವಿಚಾರವನ್ನು ಮೇಲಿನ ವಿಶ್ಲೇಷಣೆಗೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.[156] ಅಥರ್ವವೇದದ ನಾಲ್ಕನೇ ಸೂಕ್ತದಲ್ಲಿರುವ 8 ಮಂತ್ರಗಳು ಸರಸ್ವತಿಯನ್ನು ಅಗ್ನಿ, ಸವಿತೃ, ಬ್ರಾಹ್ಮಣಸ್ಪತಿಯರ ಜೊತೆಯಲ್ಲಿ ವೈದ್ಯದೇವತೆಯನ್ನಾಗಿ ಸ್ತುತಿಸಿವೆ.[157] ಘೃತಾಚಿ ಎಂಬುವವಳೊಡನೆ ಜೊತೆಯಾಗಿ ಸರಸ್ವತಿಯು ಹಾವಿನ ವಿಷ ಇಳಿಸುವುದೇ ಮೊದಲಾದವುಗಳಿಗೆ ಔಷಧಿ ನೀಡುತ್ತಿದ್ದಳೆಂದು ಊಹಿಸಲಾಗಿದೆ. ಅಲ್ಲಿ ಸರಸ್ವತಿಯು ಒಂದು ಆದಿವಾಸಿ ಜನಾಂಗದ ಹೆಣ್ಣಾಗಿದ್ದಿರಬಹುದು ಎನ್ನಲಾಗಿದೆ.[158] ಕೆಲವು ಔಷಧಿ ಸಸ್ಯಗಳನ್ನು ಮತ್ತು ಯಾವ ಖಾಯಿಲೆಗೆ ಯಾವ ಸಸ್ಯೌಷಧಿ ಎಂಬುದನ್ನು ವಿವರವಾಗಿ ಚರ್ಚಿಸಿರುವುದೂ[159] 'ಸರಸ್ವತಿಯು

---

153. ಋಗ್ವೇದ 10.17.8 (ಅನಮೀ ವಾಃ ಇಷಃ ಅಸ್ಮೇ ಆ ಧೇಹಿ)
154. ಋಗ್ವೇದ 10.148.2 (ಗರ್ಭಂ ಧೇಹಿ ಸರಸ್ವತಿ)
155. ಯಜುರ್ವೇದ 21.36
156. Mohammad Israil Khan: Sarasvati in Sanskrit Literature, p.75-80
157. ಅಥರ್ವವೇದ 4.4.1–8 (ಆದ್ಯೆಗ್ನೆ ಆದ್ಯಸವಿತರ್ ಆದ್ಯದೇವಿಸರ್ವತೀ, ಆದ್ಯಾಸ್ಯ ಬ್ರಾಹ್ಮಣಸ್ಪತೆ ಧನುರ್ ಇವಾ ತಾನಾಯಾ ಪಾಸಃ)
158. Ramachandra Rao S.K. –The Conception of Sarasvati (article published in the Quarterly Journal of the Mythic Society. Vol. XLIX, No. 4, January 1959. p.217-227
159. Mohammad Israil Khan: Sarasvati in Sanskrit Literature, p.84-86

ಮಾನವರಿಗೆ ಒಳ್ಳೆಯ ಗಾಳಿಯನ್ನು ಉಸಿರಾಟಕ್ಕೆ ಒದಗಿಸುವವಳು' ಎನ್ನುವ ಇನ್ನೊಂದು ಮಂತ್ರ,[160] ಇವೆಲ್ಲಾ ಸರಸ್ವತಿಯನ್ನು ಆರೋಗ್ಯದೇವತೆಯನ್ನಾಗಿ ಚಿತ್ರಿಸುತ್ತವೆ.

ತಾಯಿ

ಋಗ್ವೇದದಲ್ಲಿ ಸರಸ್ವತಿಗೆ ಕೆಲವು ದೇವತೆಗಳೊಂದಿಗೆ ತಾಯಿ, ಸಹೋದರಿ, ಮಗಳು, ಸ್ನೇಹಿತೆ, ಪತ್ನಿ ಮುಂತಾದ ಸಂಬಂಧಗಳು ಗೋಚರವಾಗುತ್ತವೆ. 'ತಾಯಿಯರಲ್ಲಿಯೇ ಶ್ರೇಷ್ಠವಾದವಳು ಸರಸ್ವತಿ'[161] ಎಂಬ ಮಾತು, ಸರಸ್ವತಿಯನ್ನು ಮತ್ತು ಸಹದೇವತೆಗಳಾದ ಸಿನಿವಾಲಿ ಮತ್ತು ಮರುದ್ದೇವತೆಗಳೊಂದಿಗೆ 'ಪುತ್ರರನ್ನು ಕೊಡುವವಳು' ಎಂದು ಪ್ರಾರ್ಥಿಸಿರುವುದು ಸರಸ್ವತಿಯ ತಾಯಿಯ ಸ್ವರೂಪಕ್ಕೆ ಪೂರಕವಾಗಿರುವ ಅಂಶಗಳು.[162] ಇನ್ನೊಂದು ಋಕ್ಕಿನಲ್ಲಿ, ಹವಿಸ್ಸನ್ನು ಅರ್ಪಿಸಿದ ವಧ್ಯಶ್ವಾಯ ಎಂಬ ಋಷಿಗೆ, ಪಿತೃಋಣವನ್ನು ತೀರಿಸುವವನಾದ ದಿವೋದಾಸನೆಂಬ ಪುತ್ರನನ್ನು ಕೊಟ್ಟಿರುವ ವಿಚಾರ ಪ್ರಸ್ತಾಪವಾಗಿದೆ.[163] ಅದೇ ಋಕ್ಕಿನಲ್ಲಿ, ನಿನ್ನಿಂದ ಪಡೆಯಲ್ಪಟ್ಟ ಪುತ್ರರು ಮಹತ್ಫಲವುಳ್ಳವರಾಗಿರುತ್ತಾರೆ ಎಂಬ ಮಾತೂ ಇದೆ. ಸರಸ್ವತಿಗೆ ಪುತ್ರರನ್ನು ಕೊಡುವ ತಾಯಿಯ ಸ್ವರೂಪವಿರುವುದನ್ನೂ ಮತ್ತು ಅವಳಿಂದ ಪಡೆದ ಪುತ್ರರು ಸತ್ಫಲವುಳ್ಳವರು ಎಂಬುದನ್ನೂ ಗಮನಿಸಿದಾಗ 'ತಾಯಿಯರಲ್ಲಿ ಶ್ರೇಷ್ಠಳಾದವಳು ಸರಸ್ವತಿ' ಎಂಬ ಮಾತಿಗೆ ಹೆಚ್ಚು ಅರ್ಥವೈಶಾಲ್ಯ ದೊರೆಯುತ್ತದೆ.

ನದೀ ದೇವತೆಯಾಗಿ ಸ್ತುತಿಸಿರುವ ಒಂದು ಋಕ್ಕಿನಲ್ಲಿ ಸರಸ್ವತಿಯನ್ನು, ಗಂಗಾದಿ ಸಪ್ತ ನದಿಗಳ ನಡುವೆ ನದಿಗಳಿಗೆಲ್ಲಾ ಮಾತೃಪ್ರಾಯಳಾದವಳು (ಸಿಂಧುಮಾತಾ) ಎಂಬ ವರ್ಣನೆಯಿದೆ. ಸಾಯಣಭಾಷ್ಯದಲ್ಲಿ ಇದಕ್ಕೆ 'ಮಾತೃಭೂತಾಃ' ಎಂಬ ವಿವರಣೆಯಿದೆ.[164] ಮೂಲತಃ ನದಿದೇವತೆಯಾದ ಸರಸ್ವತಿಯು, ನದಿ ದಂಡೆಯಲ್ಲಿ ವಾಸವಾಗಿದ್ದ ಸರ್ವರಿಗೂ ನೀರು ಅನ್ನಾದಿಗಳನ್ನು ಪೂರೈಸುತ್ತಿದುದರಿಂದ 'ಮಾತಾ' ಎಂಬ ಅಭಿದಾನ ಪ್ರಾಪ್ತವಾಗಿರಬೇಕು.

ದೇವತಾತ್ಮಳೂ, ಮಾತೃರೂಪಳೂ, ಜಗತ್ತಿಗೆ ಚೈತನ್ಯದಾಯಕಳೂ ಎಂದು ಸರಸ್ವತಿಯನ್ನು ಸ್ತುತಿಸಿರುವ ಋಕ್ಕಿನಲ್ಲಿ, 'ಮಾತರಃ' ಎಂಬ ಪದಕ್ಕೆ ಸಾಯಣಭಾಷ್ಯದಲ್ಲಿ 'ಮಾತೃಭೂತಾಃ' ಎಂಬ ವಿವರಣೆ ಇದೆ. ಅದನ್ನು 'ಜಗತ್ತಿಗೆ ಮಾತೃರೂಪದವಳಾದ ಸರಸ್ವತಿ' ಎಂದು ಅರ್ಥೈಸಲಾಗಿದೆ.[165]

---

160. ಅಥರ್ವವೇದ 6.41.2 (ಅಪಾನಾಯ ವ್ಯಾನಾಯ ಪ್ರಾಣಾಯ ಭೂರಿಧಾಯಸೆ, ಸರಸ್ವತೀ ಆ ಉರುವ್ಯಾಚೆ ವಿಧೆಮ ಹವಿಷ್ಯಾ ವಯಂ)
161. ಋಗ್ವೇದ 2.41.16 (ಅಂಬಿತಮೇ: ಮಾತೃಣಾಂ ಶ್ರೇಷ್ಠೇ)
162. ಋಗ್ವೇದ 2.32.6; 3.54.13; 2.41.17 (ನಃ ಪ್ರಜಾಂ ದಿದಿಡ್ಢಿ: ನೋಸ್ಮಭ್ಯಂ ಪುತ್ರಾಂನ್ದೇಹಿ)
163. ಋಗ್ವೇದ 6.61.1 (ಋಣಚ್ಯುತಂ ದಿವೋದಾಸಂ ಅದದಾತ್)
164. ಋಗ್ವೇದ 7.36.6 (ಸಿಂಧುಮಾತಾ: ಮಾತೃಭೂತಾಃ)
165. ಋಗ್ವೇದ 10.64.9 (ಮಾತರಃ: ಮಾತೃಭೂತಾಃ)

ಅಥರ್ವವೇದದಲ್ಲಿ[166] ಒಂದು ಮದುವೆಯ ಸಂದರ್ಭದಲ್ಲಿ ಸರಸ್ವತಿಯ ಪಾತ್ರ ಆಕೆಯನ್ನು ಪರೋಕ್ಷವಾಗಿ 'ತಾಯಿ' ಎಂದು ನಿರೂಪಿಸುತ್ತದೆ. 'ಸೂರ್ಯಾ' ಎಂಬ ದೇವತೆಯು ಮದುವೆಯಾಗಿ ಗಂಡನ ಮನೆಗೆ ಹೋಗುವಾಗ ಅಗ್ನಿ ಮತ್ತು ಸರಸ್ವತಿ ಹಾಗೂ ತಂದೆ-ತಾಯಿಯರನ್ನು ಪೂಜಿಸುತ್ತಾಳೆ. ಆಗ ಸರಸ್ವತಿಯು ಅವಳಿಗೆ ಗಂಡನನ್ನು, ವಿಷ್ಣುಸ್ವರೂಪನೆಂದು ಭಾವಿಸಿ ಹೇಗೆ ಸೇವಿಸಬೇಕೆಂದು ವಧುವಿಗೆ ಬೋಧಿಸುತ್ತಾಳೆ. ಸಿನಿವಾಲಿಯೊಂದಿಗೆ ಸೇರಿಕೊಂಡು ಗಂಡನ ಮನೆಯಲ್ಲಿ ಹೇಗೆ ಇರಬೇಕೆಂದು ವಧುವಿಗೆ ಬೋಧಿಸಿ, ವಧು-ವರರಿಗೆ ಶುಭವಾಗಲೆಂದು ಹಾರೈಸುತ್ತಾಳೆ.

ಸಹೋದರಿ

ಸರಸ್ವತಿಯನ್ನು ನದಿದೇವತೆಯಾಗಿ ಸ್ತುತಿಸಿರುವ ಋಕ್ಕುಗಳಲ್ಲಿ ಅವಳ 'ಸಹೋದರಿ'ಯ ಸ್ವರೂಪ ಸ್ಪಷ್ಟವಾಗಿ ಪ್ರಕಟವಾಗಿದೆ. 'ಸಪ್ತಸ್ವಸಾ'[167] ಮತ್ತು 'ಸಪ್ತಧಾತುಃ'[168] ಎಂಬುದನ್ನು ಕ್ರಮವಾಗಿ ಗಂಗಾದಿ ಸಪ್ತಸಹೋದರಿಯುಳ್ಳವಳು ಮತ್ತು ಗಂಗಾದಿ ಸಪ್ತ ಅವಯವಗಳುಳ್ಳವಳು ಎಂದು ಅರ್ಥೈಸಲಾಗಿದೆ. ಎರಡರ ಅರ್ಥವೂ ಗಂಗಾದಿ ಸಪ್ತ ನದಿಗಳನ್ನು ಸಹೋದರಿಯರನ್ನಾಗಿ ಉಳ್ಳವಳು ಎಂಬುದೇ ಆಗಿದೆ. ಗಂಗಾದಿ ಸಪ್ತ ನದಿಗಳು –ಗಂಗಾ, ಯಮುನ, ಶುತದ್ರಿ (ಸಟ್ಲೆಜ್), ಪರುಷ್ಣಿ (ರಾವಿ), ಅಸಿಕ್ನಿ (ಚೀನಾಬ್), ವಿತಸ್ತೆ (ಜೀಲಮ್), ಮತ್ತು ಸುಷೋಮಾ (ಸಿಂಧೂ) ಎಂಬುದನ್ನು ನದಿದೇವತೆಯ ವಿಚಾರವನ್ನು ವಿವೇಚಿಸುವಾಗಲೇ ಗಮನಿಸಿಲಾಗಿದೆ. ಅಲ್ಲದೆ ಈ ಎರಡೂ ಋಕ್ಕುಗಳಿಗೆ ಸಾಯಣಭಾಷ್ಯದಲ್ಲಿ, ಸರಸ್ವತಿಯನ್ನು ವಾಕ್‌ದೇವತೆಯಾಗಿಯೂ ಸ್ತುತಿಸಬಹುದೆಂಬುದಕ್ಕೆ ಸೂಚನೆಗಳನ್ನು ಕೊಡಲಾಗಿದೆ. ಈ ಋಕ್ಕುಗಳ ಸರಸ್ವತಿಯನ್ನು ವಾಕ್‌ದೇವತೆಯಾಗಿ ಪರಿಭಾವಿಸುವುದಾದರೆ, ಗಂಗಾದಿ ಸಪ್ತನದಿಗಳು ಎಂಬುದರ ಬದಲಾಗಿ ಗಾಯತ್ರಿಯೇ ಮೊದಲಾದ ಏಳು ಛಂದಸ್ಸುಗಳನ್ನು ಸಹೋದರಿಯರನ್ನಾಗಿ (ಗಾಯತ್ರ್ಯಾದೀನಿ ಸಪ್ತಛಂದಾಂಸಿ ಸ್ವಸಾರಃ) ಉಳ್ಳವಳು ಎಂದು ಅರ್ಥೈಸಿಕೊಳ್ಳಬೇಕಾಗುತ್ತದೆ. ಆದರೆ ಗಾಯಿತ್ರಿಯನ್ನುಳಿದ ಆರು ಛಂದಸ್ಸುಗಳು ಯಾವುವು ಎಂಬುದು ಋಕ್ಕುಗಳಲ್ಲಾಗಲೀ, ಭಾಷ್ಯದಲ್ಲಾಗಲೀ ಸ್ಪಷ್ಟವಾಗಿ ಹೇಳಿಲ್ಲ.

---

166. ಅಥರ್ವವೇದ 14.1.6; 14.1.10–14; 14.1.16 (ಪ್ರತಿ ತಿಷ್ಠ ವಿರಾಡ್ ಅಸಿ ವಿಷ್ಣುರ್ ಇವೇಹ ಸರಸ್ವತೀ)
167. ಋಗ್ವೇದ 6.61.10 (ಸಪ್ತಸ್ವಸಾ: ಗಾಯತ್ರ್ಯಾದೀನಿ ಸಪ್ತಛಂದಾಂಸಿ ಸ್ವಸಾರೋ ಯಸ್ಯಾಸ್ತಾದೃಶೀ; ನದೀರೂಪಾಯಾಸ್ತು ಗಂಗಾದ್ಯಾಃ ಸಪ್ತ ನದ್ಯಃ ಸ್ವಸಾರಃ)
168. ಋಗ್ವೇದ 6.61.12 (ಸಪ್ತಧಾತುಃ: ಗಾಯತ್ರ್ಯಾದ್ಯಾ ಗಂಗಾದ್ಯಾ ವಾ ಯಸ್ಯಾಃ ಸಾ ತಥೋಕ್ತಾ)

ಮಗಳು

ಋಗ್ವೇದದ ಒಂದು ಋಕ್ಕಿನಲ್ಲಿ ಮಾತ್ರ ಸರ್ವತಿಯನ್ನು 'ಕೃತಾ'[169] ಎಂದು ಸಂಬೋಧಿಸಲಾಗಿದೆ. ಕೃತಾ ಎಂಬುದಕ್ಕೆ ಸಾಯಣಭಾಷ್ಯದಲ್ಲಿ 'ಪ್ರಜಾಪತಿಯಿಂದ ನಿರ್ಮಿತಳಾದ ಸರಸ್ವತಿ' ಎಂಬ ವಿವರಣೆಯಿದೆ. ಪ್ರಜಾಪತಿಯೆಂದರೆ ಬ್ರಹ್ಮ. ನಂತರದ ಪೌರಾಣಿಕ ಸಾಹಿತ್ಯದಲ್ಲಿ 'ಸರಸ್ವತಿಯು ಬ್ರಹ್ಮನ ಮಗಳು' ಎಂಬ ಸ್ಪಷ್ಟವಾದ ವಿಚಾರ ರೂಪಗೊಳ್ಳಲು ಈ ಮೇಲೆ ಹೇಳಿರುವ ಋಕ್ಕು ಹಾಗೂ ಸಾಯಣಭಾಷ್ಯ ಕಾರಣವಾಗಿದ್ದಿರಬೇಕು. ಸರಸ್ವತಿಗೆ ಹೇಳಲ್ಪಟಿರುವ 'ಪಾವಿರವಿ' ಮತ್ತು 'ಕನ್ಯಾ' ಎಂಬ ಪದಗಳನ್ನು ಬಳಸಿಕೊಂಡು, ಪಾವಿರು(?) ಎಂಬುವವನ ಮಗಳು ಎಂಬುದಾಗಿ ಸಾಧಿಸಲು ಪ್ರಯತ್ನ ನಡೆದಿದೆಯಾದರೂ ಅದರಲ್ಲಿ ಯಾವುದೇ ಸ್ಪಷ್ಟತೆಯಿಲ್ಲ.[170]

ಸ್ನೇಹಿತೆ

ಒಂದು ಋಕ್ಕಿನಲ್ಲಿ ಸರಸ್ವತಿಯನ್ನು 'ಮರುತ್ಸಖಾ'[171] ಎಂದು ಸಂಬೋಧಿಸಲಾಗಿದೆ. ಸಖಾ ಎಂಬುದಕ್ಕೆ ಗೆಳತಿ, ಸ್ನೇಹಿತೆ ಎಂಬ ಅರ್ಥಗಳಿವೆ. ಅಲ್ಲದೆ ಮೂರು ಋಕ್ಕುಗಳಲ್ಲಿ[172] ಸರಸ್ವತಿಯನ್ನು ಮರುದ್ದೇವತೆಗಳೊಂದಿಗೆ ಸಂಪತ್ತಿಗಾಗಿ, ಪುತ್ರಭಾಗ್ಯಕ್ಕಾಗಿ, ಸಹದೇವತೆಯನ್ನಾಗಿ ಸ್ತುತಿಸಲಾಗಿದೆ. ಆದ್ದರಿಂದ ಇಲ್ಲಿ ಸರಸ್ವತಿಯನ್ನು ಮಾಧ್ಯಮಿಕಾ ಸ್ಥಾನದ ದೇವಗಣವಾದ ಮರುದ್ದೇವತೆಗಳಿಗೆ ಸ್ನೇಹಿತೆಯೆಂದು ಪರಿಭಾವಿಸಬಹುದು. 'ತನ್ನಲ್ಲಿರುವ ಉತ್ತಮವಾದ ಧನವನ್ನು ತನ್ನ ಮಿತ್ರರಿಗೆ ಅಧಿಕವಾಗಿ ಕೊಡುವವಳು'[173] ಎಂದು ಒಂದು ಋಕ್ಕಿನಲ್ಲಿ ಮತ್ತು 'ನಮ್ಮ ಮಿತ್ರತ್ವವನ್ನು ಸೇವಿಸು'[174] ಎಂದು ಇನ್ನೊಂದು ಋಕ್ಕಿನಲ್ಲಿ ಪ್ರಾರ್ಥಿಸಲಾಗಿದೆ. ಇವುಗಳಲ್ಲಿ ಮಿತ್ರರು ಯಾರು ಎಂಬುದು ಸ್ಪಷ್ಟವಾಗುವುದಿಲ್ಲ.

ಪತ್ನಿ

ಸರಸ್ವತಿಗೆ ಹೇಳಲಾಗಿರುವ 'ವೀರಪತ್ನಿ' ಎಂಬ ವಿಶೇಷಣಕ್ಕೆ ಸಾಯಣಭಾಷ್ಯದಲ್ಲಿ 'ಪ್ರಜಾಪತಿಯನ್ನು ಪತಿಯಾಗಿ ಉಳ್ಳವಳು' ಮತ್ತು 'ವೀರರನ್ನು ಪಾಲಿಸುವವಳು' ಎಂಬ ಎರಡು ಅರ್ಥಗಳನ್ನು ಹೇಳಲಾಗಿದೆ. ಮೊದಲಿನ ಅರ್ಥದಲ್ಲಿ ಗ್ರಹಿಸಿದರೆ, ಸರಸ್ವತಿಯನ್ನು ಪ್ರಜಾಪತಿಯ ಪತ್ನಿ

---

169. ಋಗ್ವೇದ 6.61.13 (ಕೃತಾ: ಪ್ರಜಾಪತಿನಾ ನಿರ್ಮಿತಾ ಸಾ ಸರಸ್ವತೀ)
170. Mohammad Israil Khan: Sarasvati in Sanskrit Literature, p.44-46
171. ಋಗ್ವೇದ 7.96.2 (ಮರುತ್ಸಖಾ: ಮರುತೋ ಮಾಧ್ಯಮಿಕಾ ದೇವಗಣಾಃ ತೇ ಸಖಾಯೋ ಯಸ್ಯಾ ಮಾಧ್ಯಮಿಕಾಯಾ ವಾಚಸ್ತಾದೃಶೀ)
172. ಋಗ್ವೇದ 2.30.8; 3.54.13; 7.9.5
173. ಋಗ್ವೇದ 7.95.4 (ರಾಯಾಚಿತ್ ಸಖಿಭ್ಯಃ ಉತ್ತರಾ: ರಾಯಾಧನೇನ ಚ ಸಂಗತಾ ಸಖಿಭ್ಯ ಉತ್ತರೋತ್ಕೃಷ್ಟತರಾ)
174. ಋಗ್ವೇದ 6.61.14 (ಸಖ್ಯಾ: ಸಖ್ಯಾನಿ ಸಖಿಕರ್ಮಾಣೀ)

ಎಂದು ಭಾವಿಸಬೇಕಾಗುತ್ತದೆ. ಪ್ರಜಾಪತಿ ಎಂದರೆ ಬ್ರಹ್ಮ. ಈಗಾಗಲೇ 'ಕೃತಾ' ಎಂಬ ವಿಶೇಷಣದ ಹಿನ್ನೆಲೆಯಲ್ಲಿ, ಸರಸ್ವತಿಯು ಪ್ರಜಾಪತಿಯಿಂದ ನಿರ್ಮಿತಳಾದವಳು ಎಂದು ಗ್ರಹಿಸಿದ್ದೇವೆ. ಬಹುಶಃ, ಈ ಕಾರಣಗಳಿಂದ ಪುರಾಣಗಳಲ್ಲಿ ಸರಸ್ವತಿಯು ಬ್ರಹ್ಮನ ಮಗಳಾಗಿಯೂ, ಪತ್ನಿಯಾಗಿಯೂ ಚಿತ್ರಿತವಾಗಿದ್ದಾಳೆ.

ಕಾಮವರ್ಷಕನಾದ ಇಂದ್ರನನ್ನು ಸ್ತುತಿಸಿರುವ ಋಕ್ಕಿನಲ್ಲಿ,[175] ವಿಭುವಿನಿಂದ ನಿರ್ಮಿತವಾದ ನದಿಗಳನ್ನು ಸರಸ್ವತಿಯನ್ನು ಇಂದ್ರನ ಪತ್ನಿಯರ ಸಾಲಿನಲ್ಲಿ ಹೇಳಲಾಗಿದೆ. ಈ ಋಕ್ಕಿನ ಸಾಯಣಭಾಷ್ಯವೂ ಇದಕ್ಕೆ ಪೂರಕವಾಗಿಯೇ ಇದೆ. 'ಇಂದ್ರನೇ, ನೀನು ಹರ್ಷದಾಯಕವಾದ ಹವಿಸ್ಸನ್ನು ಪಾನ ಮಾಡಿದಾಕ್ಷಣ, ಸರಸ್ವತಿಯು ನಿನ್ನ ಬಳಿಗೆ ಬಂದು ನಿನ್ನನ್ನು ಸೇವಿಸುವಳು'[176] ಎಂದು ಒಂದು ಋಕ್ಕಿನಲ್ಲಿ ಹೇಳಿದೆ. ಇಂದ್ರನು ಮಳೆಯ ದೇವತೆ ಮತ್ತು ಆತನು ವೃತ್ರಾಸುರನನ್ನು ಕೊಂದು, ಅವನ ಸೆರೆಯಲ್ಲಿದ್ದ ನೀರನ್ನು ಎಲ್ಲಾ ನದಿಗಳಿಗೆ ಇಂದ್ರನು ಬಿಡಿಸಿದನು ಎಂಬ ಘಟನೆಯನ್ನು ಉಲ್ಲೇಖಿಸಿ ಸರಸ್ವತಿಯನ್ನು ಇಂದ್ರನ ಪತ್ನಿಯನ್ನಾಗಿ ಪರಿಭಾವಿಸಲಾಗಿದೆ.[177] ಇನ್ನೊಂದು ಋಕ್ಕಿನಲ್ಲಿ ಬರುವ 'ಮರುತ್ವತೀ'[178] ಎಂಬ ವಿಶೇಷಣವನ್ನು ಮತ್ತು ಅದಕ್ಕಿರುವ ಸಾಯಣಭಾಷ್ಯವನ್ನು ಗಮನಿಸಿದರೆ, ಸರಸ್ವತಿಯು ಮರುತ್ ಎಂಬ ದೇವತೆಗೂ ಪತ್ನಿಯಾಗುತ್ತಾಳೆ. ಮರುತ್ ಎಂದರೆ, ಮೋಡ, ಇಂದ್ರ ಎಂಬ ಅರ್ಥಗಳಿರುವುದರಿಂದ, ಈ ಋಕ್ ಪ್ರಕಾರ ಸರಸ್ವತಿಯನ್ನು ಇಂದ್ರನ ಹೆಂಡತಿಯಾಗಿ ಪರಿಭಾವಿಸಬಹುದು. ಯಜುರ್ವೇದದಲ್ಲೂ ಸರಸ್ವತಿಯು ಇಂದ್ರನಿಗೆ ಅತಿ ಸಮೀಪದ ದೇವತೆಯಾಗಿ ಚಿತ್ರಿತವಾಗಿದ್ದಾಳೆ. 'ಸೋಮರಸ ಸೇವನೆಯಿಂದ ಅಸ್ವಸ್ಥನಾಗಿದ್ದ ಇಂದ್ರನನ್ನು ಆರೈಕೆ ಮಾಡುವುದು ಸರಸ್ವತಿ'[179] ಎಂಬುದೂ ಸರಸ್ವತಿಯನ್ನು ಇಂದ್ರನ ಪತ್ನಿಯನ್ನಾಗಿ ಚಿತ್ರಿಸಲು ಸಹಕಾರಿಯಾಗಿದೆ. ಸರಸ್ವತಿಯನ್ನು ನದಿ ಅಥವಾ ನದಿದೇವತೆಯ ಸ್ವರೂಪದಲ್ಲಿ ಮಾತ್ರ ಇಂದ್ರನ ಹೆಂಡತಿಯಾಗಿ ಪರಿಭಾವಿಸಬಹುದೆಂಬುದು ಮೇಲಿನ ವಿವರಣೆಯಿಂದ ಸ್ಪಷ್ಟವಾಗುವ ಅಂಶ. ವಾಗ್ದೇವಿ ಸರಸ್ವತಿಗೂ ಇಂದ್ರನಿಗೂ ಯಾವುದೇ ಸಂಬಂಧವಿಲ್ಲ.

---

175. ಋಗ್ವೇದ 5.42.12 (ವೃಷ್ಣಃ ಪತ್ನೀರ್ನದ್ಯೋ ವಿಭ್ವತಷ್ಟಾಃ ಸರಸ್ವತೀ)
176. ಋಗ್ವೇದ 10.131.5
177. Mohammad Israil Khan: Sarasvati in Sanskrit Literature, p.43
178. ಋಗ್ವೇದ 2.30.8 (ಮರುತ್ವತೀ: ಮರುದ್ಭಿರ್ಯುಕ್ತಾ ಮಧ್ಯಮಸ್ಥಾನಾ ಹಿ ವಾಕ್ ಸರಸ್ವತೀ)
179. ಯಜುರ್ವೇದ 21.36

ಸರಸ್ವತಿ ಮತ್ತು ಸಾ(ಸ)ರಸ್ವತ

ಈಗಾಗಲೇ ಸರಸ್ವತಿಯು ಪ್ರಜಾಪತಿಯ ಮಗಳೂ, ಪತ್ನಿಯೂ ಆಗಿರುವುದನ್ನು ನೋಡಿದ್ದೇವೆ. ಅದೇ ರೀತಿ ಸರಸ್ವತ ಎಂಬ ದೇವತೆಗೆ ಸರಸ್ವತಿಯು ಪತ್ನಿಯಾಗಿಯೂ, ತಾಯಿಯಾಗಿಯೂ ದ್ವಿಪಾತ್ರದಲ್ಲಿ ಚಿತ್ರಿತಳಾಗಿರುವುದನ್ನು ವಿವರವಾಗಿ ನಾವು ಗಮನಿಸಬೇಕಾಗುತ್ತದೆ.

ಋಗ್ವೇದದಲ್ಲಿ ದ್ಯುಲೋಕೋತ್ಪನ್ನನೂ (ದಿವ್ಯಂ), ಗಮನಶೀಲನೂ (ವಾಯಸಂ), ಉದಕಗಳ ಉತ್ಪಾದಕನು (ಸರಸ್ವತ)[180] ಎಂದು ಸರಸ್ವತನನ್ನು ಸ್ತುತಿಸಲಾಗಿದೆ. ಈ ವಿಶೇಷಣಗಳು ಸರಸ್ವತಿಗೂ ಸಂಬಂಧಿಸಿದವುಗಳಾಗಿವೆ. ಆದ್ದರಿಂದ ಸರಸ್ವತಿ ಮತ್ತು ಸರಸ್ವತ ಇವರ ನಡುವಿನ ಸಂಬಂಧವೇನು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಪುತ್ರೇಚ್ಛೆಯುಳ್ಳವರು ಸರಸ್ವತನನ್ನು ಪ್ರಾರ್ಥಿಸುತ್ತಾರೆ[181] ಮತ್ತು ಸರಸ್ವತನು ಉದಕಗಳಿಗೆ ಅಂದರೆ ನದಿಗಳಿಗೆ ಪ್ರಭುವಾಗಿರುವವನು[182] ಎಂದೂ ಹೇಳಲಾಗಿದೆ. ಸರಸ್ವತಿಯನ್ನು ಪುತ್ರಸಂತಾನಕ್ಕಾಗಿ, ಸಿನಿವಾಲಿ ಎಂಬ ದೇವತೆಯೊಡಗೂಡಿ ಸ್ತುತಿಸುವ ಮೂರು ಋಕ್ಕುಗಳು ಋಗ್ವೇದದಲ್ಲಿವೆ.[183] ಸಂಪತ್ತನ್ನು ಪಡೆಯಲಿಚ್ಛಿಸುವವರೂ ಧನಕ್ಕಾಗಿ ಸರಸ್ವತಿಯನ್ನು ಸ್ತುತಿಸಿದ್ದಾರೆ.[184] ಸರಸ್ವತೀ ನದಿಯ ಪತಿಯೂ, ನದ್ಯಾತ್ಮಕವಾದ ದೇವತೆಯೂ ಆದ ಸರಸ್ವತನನ್ನು ಪತ್ನೀಕಾಮರೂ, ಪುತ್ರಕಾಮರೂ ಸಂಪತ್ತನ್ನು ಪಡೆಯಲಿಚ್ಛಿಸುವವರು ಪ್ರಾರ್ಥಿಸುತ್ತಾರೆ.[185] ಸರಸ್ವತಿಯ ನದಿ ದೇವತೆ ಎಂಬ ಸ್ವರೂಪವನ್ನು ತೆಗೆದುಕೊಂಡಾಗ ಸರಸ್ವತನು ಉದಕಗಳ ಪ್ರಭುವೆಂದೂ, ಸರಸ್ವತಿಯ ಪತಿಯೆಂದೂ ಅರ್ಥವಾಗುತ್ತದೆ. ಯಜುರ್ವೇದದಲ್ಲಿ[186] ಉಕ್ತವಾಗಿರುವ ಸರಸ್ವತಿ ಮತ್ತು ಸಾರಸ್ವತನ ವಿಚಾರಗಳನ್ನು ಪರಿಶೀಲಿಸಿದರೆ ಸರಸ್ವತಿಯು ಸರಸ್ವತನ ಪತ್ನಿ ಎಂಬ ಅಭಿಪ್ರಾಯ ಉಂಟಾಗುತ್ತದೆ. ಸರಸ್ವಾನ್ ಮತ್ತು ಸರಸ್ವತಿಯರ ಸಂತಾನವೇ 'ಸಾರಸ್ವತರು' ಎಂಬ ಪರಿಕಲ್ಪನೆಯೂ ಇದೆ.[187] ಇದರ ವಿಸ್ತರಣೆ ಎನ್ನುವಂತೆ, 'ಬೃಹದ್ ದೇವತಾ'ದಲ್ಲಿ, ವಾಕ್ ಮತ್ತು ಸರಸ್ವಾನ್ ಇಂದ್ರನ ಮಧ್ಯಮಲೋಕದ ದೇವತೆಗಳು. ಮೂರು ಲೋಕಗಳಲ್ಲೂ ಘೃತಪೂರ್ಣವಾದ ನೀರನ್ನುಳ್ಳವನಾದ್ದರಿಂದ ಸರಸ್ವಾನ್‌ಗೆ ಸರಸ್ವತ್ತು ಎಂಬ ಹೆಸರು ಬಂತು. ಆದ್ದರಿಂದ ವಾಕ್‌ಗೆ ಸರಸ್ವತಿ ಎಂಬ ಹೆಸರಾಯಿತು[188] ಎಂದಿದೆ.

---

180. ಋಗ್ವೇದ 1.164.52
181. ಋಗ್ವೇದ 7.96.4 (ಪುತ್ರೀಯಂತಃ ಸುದಾನವಃ ಸರಸ್ವಂತಂ ಹವಾಮಹೇ)
182. ತೈತ್ತಿರೀಯಸಂಹಿತೆ 3.1.10.3
183. ಋಗ್ವೇದ 2.32.6; 2.32.7 ಮತ್ತು 2.41.17
184. ಋಗ್ವೇದ 1.3.10; 1.89.3; 2.41.16; 5.42.12 ಇತ್ಯಾದಿ
185. Muir: Original Sanskrit Texts - Vol. V. P.340
186. ಯಜುರ್ವೇದ 38.20; 13.35
187. Mohammad Israil Khan: Sarasvati in Sanskrit Literature, p80.82
188. ಬೃ.ದೇ. 1.123; 2.51 ಋಗ್ವೇದ ಸಂಹಿತಾ, ಭಾಗ –12, ಪು.671ರಲ್ಲಿ ಉದ್ಧೃತ.

ಮಾತಾಪುತ್ರೌತು ವಾಕ್ಪ್ರಾಣೌ ಮಾತಾ ವಾಗಿತರಃ ಸುತಃ।
ಸರಸ್ವಂತಮಿತಿ ಪ್ರಾಣೋ ವಾಚಂ ಪ್ರಾಹುಃ ಸರಸ್ವತೀಂ॥[189]

'ವಾಕ್ಕೇ ಮಾತೃ; ಪ್ರಾಣವೇ ಪುತ್ರ. ಸರಸ್ವತ್ ಶಬ್ದದಿಂದ ಪ್ರಾಣವೂ, ಸರಸ್ವತೀ ಶಬ್ದದಿಂದ ವಾಕ್ಕೂ ನಿರ್ದಿಷ್ಟವಾಗಿವೆ. ಇಲ್ಲಿ ಪ್ರಾಣವೆಂದರೆ ಉಸಿರು.' ಆ ಉಸಿರಿನಿಂದಲೇ ವಾಕ್ ಉದ್ಭವಿಸುತ್ತದೆ ಎಂಬುದೇನೋ ಸರಿಯಾಗಿದೆ. ಆದರೆ ಅವರಿಬ್ಬರಿಗೂ ತಾಯಿ ಮತ್ತು ಮಗನ ಸಂಬಂಧವನ್ನು ಕಲ್ಪಿಸುವುದು ಸರಸ್ವತಿಯು ವಾಗ್ದೇವತೆ ಎಂಬ ಸ್ವರೂಪವನ್ನು ತೆಗೆದುಕೊಂಡಾಗ ಮಾತ್ರ ಸಾಧ್ಯ ಎಂದಾಗುತ್ತದೆ. ಆದರೆ ತನ್ನ ತಾಯಿ ಸರಸ್ವತೀ ನದಿಯು ಕೊಡುತ್ತಿದ್ದ ಮೀನುಗಳನ್ನು ತಿಂದು, ಹನ್ನೆರಡು ವರ್ಷಗಳಷ್ಟು ದೀರ್ಘವಾದ ಬರಗಾಲದಲ್ಲೂ ವೇದಗಳನ್ನು ಹಾಳಾಗದಂತೆ ಕಾಪಾಡಿಕೊಂಡು, ನಂತರ ಬಂದ ಬ್ರಾಹ್ಮಣರಿಗೆ ಸಾರಸ್ವತ ಅವುಗಳನ್ನು ಕಲಿಸಿದನೆಂದು ಮಹಾಭಾರತದಲ್ಲಿ ಬರುವ ಸನ್ನಿವೇಶವೊಂದು ವಿವರಿಸುತ್ತದೆ. (ಅದನ್ನು ಮುಂದೆ ವಿವರವಾಗಿ ಗಮನಿಸಲಾಗುವುದು). ಆಂದರೆ ಮಹಾಭಾರತದ ಕಥೆಯನ್ನೂ ತೆಗೆದುಕೊಂಡರೆ ಸರಸ್ವತಿಯು ನದೀದೇವತೆಯಾಗಿ ಸರಸ್ವತನ ಪತ್ನಿಯಾಗಿರುವಂತೆ, ಸಾರಸ್ವತನ ತಾಯಿಯೂ ಆಗಿದ್ದಾಳೆ ಎನ್ನಬೇಕಾಗುತ್ತದೆ. ಸರಸ್ವತ ಎಂದಿದ್ದರೆ ಪತಿಯೆಂದೂ, ಸಾರಸ್ವತ ಎಂದಿದ್ದರೆ ಪುತ್ರನೆಂದೂ ಪರಿಭಾವಿಸುವುದು ಸೂಕ್ತವಾಗುತ್ತದೆ.

ಸಹದೇವತೆಗಳು

ಋಗ್ವೇದದಲ್ಲಿ ನೂರಾರು ದೇವತೆಗಳ ಹೆಸರುಗಳು ಬರುತ್ತವೆ. ಆದರೆ ಅವುಗಳಿಗಿರುವ ಪರಸ್ಪರ ಸಂಬಂಧ ಖಚಿತವಾಗಿಲ್ಲ. ಬಹುಶಃ, ಋಗ್ವೇದದ ಋಕ್ಕುಗಳೆಲ್ಲವೂ ನೂರಾರು ಜನ ಸ್ತುತಿಕರ್ತರ ರಚನೆಗಳಾಗಿರುವುದೇ ಇದಕ್ಕೆ ಕಾರಣವಿರಬಹುದು. ಇದರ ನಡುವೆಯೇ ಸರಸ್ವತಿಗೂ ಇತರ ದೇವತೆಗಳಿಗೂ ಇರುವ ಸಂಬಂಧವನ್ನು ಅರಿಯಬೇಕಾಗಿದೆ. ಈಗಾಗಲೆ ತಿಸ್ರೋದೇವಿಯರ ಋಕ್ಕುಗಳನ್ನು ಆಧರಿಸಿ ಇಳಾ ಮತ್ತು ಭಾರತೀ ಎಂಬ ದೇವತೆಗಳ ಸ್ವರೂಪಕ್ಕೂ, ಸರಸ್ವತಿಯ ಸ್ವರೂಪಕ್ಕೂ ಇರುವ ಸಾದೃಶ ಮತ್ತು ವೈರುಧ್ಯದ ಸಂಬಂಧವನ್ನು ಚರ್ಚಿಸಿರುವುದರಿಂದ, ಅವುಗಳನ್ನುಳಿದ ದೇವತೆಗಳನ್ನು ಇಲ್ಲಿ ಗಮನಿಸಲಾಗಿದೆ.

ಇಳಾ ಮತ್ತು ಭಾರತಿಯರು ಹಾಗೂ ಇಂದ್ರನು ಸರಸ್ವತಿಗೆ ತೀರಾ ಸಮೀಪದ ಸಂಬಂಧವನ್ನುಳ್ಳ ದೇವತೆಗಳು. ಇಂದ್ರನು ಸರಸ್ವತಿಯೊಂದಿಗೆ ಪ್ರಮುಖವಾಗಿ ಆರು ಋಕ್ಕುಗಳಲ್ಲಿ ಸ್ತುತಿಗೊಂಡಿದ್ದಾನೆ. ಯಜ್ಞದೇವತೆಯಾಗಿ ಪರಸ್ಪರರನ್ನು ಆಹ್ವಾನಿಸಿರುವುದುಂಟು.[190] ಇವರಿಬ್ಬರ ಜತೆ ಆರ್ಯಮಾ, ಬೃಹಸ್ಪತಿ, ವಾಯು, ವಿಷ್ಣು, ಸವಿತೃ, ಅಗ್ನಿ, ವರುಣ, ಮಿತ್ರ, ರುದ್ರ, ಪೂಷಾ, ಭಗ, ಪರ್ಜನ್ಯ, ಮಿತ್ರ, ಅದಿತಿ, ದಕ್ಷ,

---

189. ಬೃ.ದೇ. 4.39 ಸಾಯಣಭಾಷ್ಯಸಹಿತಾ ಋಗ್ವೇದಸಂಹಿತಾ; ಭಾಗ -12: ಪು.671

190. ಋಗ್ವೇದ 5.46.2; 6.52.6

ಆಸ್ರಿಧ, ಆರ್ಯಮಣ, ಸೋಮ, ತ್ವಷ್ಟ್ರ, ಮರುದ್ದೇವತೆಗಳು ಮತ್ತು ಅಶ್ವಿನಿ ದೇವತೆಗಳು ಮೊದಲಾದವರನ್ನೂ ಯಜ್ಞಕ್ಕೆ ಆಹ್ವಾನಿಸಲಾಗಿದೆ. 'ಇಂದ್ರನೇ, ನೀನು ಹರ್ಷದಾಯಕವಾದ ಹವಿಸ್ಸನ್ನು ಪಾನ ಮಾಡಿದಾಕ್ಷಣ, ಸರಸ್ವತಿಯು ನಿನ್ನ ಬಳಿಗೆ ಬಂದು ನಿನ್ನನ್ನು ಸೇವಿಸುವಳು'[191] ಎಂಬುದನ್ನು ಗಮನಿಸಿದಾಗ, ಇಂದ್ರನಿಗೆ ಹೆಚ್ಚು ಪ್ರಾಶಸ್ತ್ಯ ಸಿಕ್ಕಿರುವುದು ಸ್ಪಷ್ಟವಾಗುತ್ತದೆ. ಧನಾದಿಗಳನ್ನು ಹೊಂದುವುದಕ್ಕಾಗಿ ಆರ್ಯಮಾ, ಬೃಹಸ್ಪತಿ, ವಾಯು, ವಿಷ್ಣು ಸವಿತೃ ಎಂಬ ದೇವತೆಗಳನ್ನು ಸರಸ್ವತಿಯ ಜತೆಯಲ್ಲಿ ಸ್ತುತಿಸಲಾಗಿದೆ.[192] ಇನ್ನೊಂದು ಋಕ್ಕಿನಲ್ಲಿ ಪರ್ಜನ್ಯ ಮತ್ತು ಅಗ್ನಿಯನ್ನು ಸರಸ್ವತಿಯ ಜತೆ ಯಜ್ಞಕ್ಕೆ ಆಹ್ವಾನಿಸಲಾಗಿದೆ.[193] ಸರಸ್ವತಿಯನ್ನು ಯುದ್ಧದೇವತೆಯಾಗಿ ಸ್ತುತಿಸಿರುವ ಋಕ್ಕುಗಳಲ್ಲಿ ಎರಡರಲ್ಲಿ ಇಂದ್ರನೂ ಯುದ್ಧದೇವತೆಯಾಗಿ ಚಿತ್ರಿತನಾಗಿರುವುದು ವಿಶೇಷ. 'ಶತ್ರುಗಳನ್ನು ಮರ್ದನ ಮಾಡುವವಳಾಗಿ ಶತ್ರುಗಳನ್ನು ಜಯಿಸು' ಎಂದು ಸರಸ್ವತಿಯನ್ನು ಸ್ತುತಿಸಿದ್ದರೆ, ಇಂದ್ರನು ಶಂಡವಂಶದವರ ಪ್ರಧಾನ ಅಸುರನನ್ನು ಕೊಂದಿರುವುದಾಗಿ ಹೇಳಿದೆ.[194] 'ಯುದ್ಧ ಮಾಡುವುದಕ್ಕಾಗಿ ಸಂಪತ್ತನ್ನು ಕೊಡುವಂತೆ ಇಂದ್ರ ಮತ್ತು ಸರಸ್ವತಿಯನ್ನು ಸ್ತುತಿಸಿರುವುದುಂಟು.[195] ಇಂದ್ರನ ಬದಲಾಗಿ ಪೂಷದೇವನನ್ನೂ ಸರಸ್ವತಿಯನ್ನೂ ಯುದ್ಧಕ್ಕಾಗಿ ಧನವನ್ನು ಕರುಣಿಸುವಂತೆ ಪ್ರಾರ್ಥಿಸಿರುವುದು ಇದೆ.[196] ಋಗ್ವೇದದಲ್ಲಿ ನದಿದೇವತೆಯಾಗಿ, ಅನ್ನದೇವತೆಯಾಗಿ ಸ್ತುತಿಗೊಂಡಿರುವುದರ ವಿಸ್ತರಣೆಯಾಗಿ ಸರಸ್ವತಿಯು ಅಥರ್ವವೇದದಲ್ಲಿ ಇಂದ್ರನ ಜತೆ ಕೃಷಿದೇವತೆಯಾಗಿಯೂ ಸ್ತುತಿಗೊಂಡಿದ್ದಾಳೆ.[197]

ತಿಸ್ರೋದೇವಿಯರಾದ ಭಾರತೀ, ಇಳಾ, ಸರಸ್ವತಿಯರ ಜೊತೆಯಲ್ಲಿ ಅಗ್ನಿಯನ್ನೂ ಯಜ್ಞಕ್ಕೆ ಆಹ್ವಾನಿಸಿರುವುದುಂಟು.[198] ಸರಸ್ವತಿ, ಮರುದ್ದೇವತೆಗಳು, ಅಶ್ವಿನೀದೇವತೆಗಳು ಮತ್ತು ಅಬ್ದೇವತೆಗಳನ್ನು ಪೂಜಿಸುವಂತೆ ಅಗ್ನಿಯನ್ನೂ ಸ್ತುತಿಸಲಾಗಿದೆ.[199] ಅಗ್ನಿ ಮತ್ತು ಸರಸ್ವತಿಯರು ಮಾನವರನ್ನು

---

191. ಋಗ್ವೇದ 10.131.5
192. ಋಗ್ವೇದ 10.141.5
193. ಋಗ್ವೇದ 6.52.6
194. ಋಗ್ವೇದ 2.30.8
195. ಋಗ್ವೇದ 6.61.5
196. ಋಗ್ವೇದ 6.61.6
197. ಅಥರ್ವವೇದ 6.30.1
198. ಋಗ್ವೇದ 2.1.11; 7.2.8
199. ಋಗ್ವೇದ 7.9.5

ಉತ್ತೇಜಿಸುತ್ತಾರೆ[200] ಆದ್ದರಿಂದ ಅವರಿಬ್ಬರೂ ಪ್ರೇರಣಾ ದೇವತೆಗಳು ಎಂಬುದು ಸ್ಪಷ್ಟವಾಗುತ್ತದೆ. ಇನ್ನೊಂದು ಋಕ್ಕಿನಲ್ಲಿ ತಿಸ್ರೋದೇವಿಯರನ್ನು ಸೋಮಸಂಬಂಧಿ ಎಂದು ಕರೆದಿದೆ.[201]

ಸರಸ್ವತಿಯು ಮರುದ್ದೇವತೆಗಳೊಂದಿಗೆ ಸಂಬಂಧವುಳ್ಳವಳು.[202] ತಿಸ್ರೋದೇವಿಯರಲ್ಲಿ ಸರಸ್ವತಿಯನ್ನು ವಾಯುಸಂಬಂಧಿಯಾದ ಆಕಾಶಾಭಿಮಾನಿದೇವತೆ[203] ಎಂದಿರುವುದರಿಂದ ಮರುದ್ದೇವತೆಗಳೊಂದಿಗೆ ಸಂಬಂಧ ಕಲ್ಪಿಸಿರುವುದು ಸೂಕ್ತವಾಗಿದೆ. ಈ ಇಬ್ಬರನ್ನೂ ಪುತ್ರಸಂತಾನಕ್ಕಾಗಿ, ಧನಸಂಪತ್ತಿಗಾಗಿ ಪ್ರಾರ್ಥಿಸಿರುವುದು ಇದೆ.[204] ಸರಸ್ವತಿಯನ್ನು ರಾಕಾ ಎಂಬ ದೇವತೆಯೊಂದಿಗೆ ಬುದ್ಧಿ ಮತ್ತು ಸಂಪತ್ತಿಗಾಗಿ ಸ್ತುತಿಸಲಾಗಿದೆ.[205] ಸರಸ್ವತಿಯೊಂದಿಗೆ ರಾಕಾ, ಋಭು ಮತ್ತು ಇಂದ್ರಾಣಿ ಇವರನ್ನು ಧನಪ್ರಾಪ್ತಿಗಾಗಿ ಸ್ತುತಿಸಲಾಗಿದೆ.[206] ಸಿನೀವಾಲಿ ಎಂಬ ದೇವತೆಯನ್ನು ಗರ್ಭಪಾತವನ್ನು ತಡೆಯುವ ದೇವತೆ ಎಂದೂ, ಅಶ್ವಿನಿದೇವತೆಗಳನ್ನು ಗರ್ಭರಕ್ಷಕದೇವತೆಗಳೆಂದೂ, ಸ್ತುತಿಸಿರುವ ಋಕ್ಕಿನಲ್ಲಿ ಸರಸ್ವತಿಯನ್ನು ಗರ್ಭಧರಿಸುವಂತೆ ಪ್ರೇರೇಪಿಸುವ ದೇವತೆಯೆಂದು ಸ್ತುತಿಸಿದೆ.[207] ಸರಸ್ವತಿಯನ್ನು ಅನ್ನಪೂರ್ಣೆಯಾಗಿ ಸ್ತುತಿಸಿರುವ ಒಂದು ಋಕ್ಕಿನಲ್ಲಿ ರುದ್ರ, ವಿಷ್ಣು, ವಾಯು, ಋಭು, ವಾಜ, ವಿಭ್ವ ಮತ್ತು ಪರ್ಜನ್ಯ ದೇವತೆಗಳನ್ನು ಸ್ತುತಿಸಲಾಗಿದೆ.[208] ವಾಯು ಮತ್ತು ಪರ್ಜನ್ಯರು ಮಳೆ ಸಂಬಂಧೀ ದೇವತೆಗಳಾದ್ದರಿಂದಲೂ, ಸರಸ್ವತಿಯು ವಾಯುಸಂಬಂಧಿ ದೇವತೆಯಾದ್ದರಿಂದಲೂ ಇದು ಅರ್ಥಪೂರ್ಣವಾಗಿದೆ. ಬೃಹಸ್ಪತಿಯು, ಆರನೇ ಮಂಡಲದ 61ನೇ ಸೂಕ್ತದ ಎಲ್ಲಾ ಹದಿನಾಲ್ಕು ಸರಸ್ವತೀ ಪರವಾದ ಋಕ್ಕುಗಳ ಕರ್ತೃ. ಭಾರದ್ವಜ ಆ ಸೂಕ್ತದ ಇನ್ನೊಬ್ಬ ಕರ್ತೃ. ಮೇಲೆ ಪ್ರಸ್ತಾಪಿಸಿದ ದೇವತೆಗಳನ್ನು ಬಿಟ್ಟರೆ ಉಳಿದ ದೇವತೆಗಳಿಗೂ ಸರಸ್ವತಿಗೂ ಯಾವುದೇ ಸಂಬಂಧವು ಗೋಚರಿಸುವುದಿಲ್ಲ. ಕೇವಲ ಸಹದೇವತೆಗಳಾಗಿ ಯಜ್ಞಕ್ಕೆ ಆಹ್ವಾನಿತರಾಗಿರುವಂತೆ ಕಾಣುತ್ತದೆ. ಅಥರ್ವವೇದದಲ್ಲಿ ಮಿತ್ರ, ವರುಣ ಎಂಬ ದೇವತೆಗಳೊಂದಿಗೆ ಸರಸ್ವತಿಯನ್ನು ಐಕ್ಯತೆಗಾಗಿ ಸ್ತುತಿಸಿರುವುದುಂಟು.[209]

---

200. ಋಗ್ವೇದ 7.40.3
201. ಋಗ್ವೇದ 9.5.8
202. ಋಗ್ವೇದ 2.30.8
203. ಋಗ್ವೇದ 2.1.11; 7.2.8
204. ಋಗ್ವೇದ 3.54.13
205. ಋಗ್ವೇದ 2.32.5
206. ಋಗ್ವೇದ 5.42.12
207. ಋಗ್ವೇದ 10.148.2
208. ಋಗ್ವೇದ 6.50.12
209. ಅಥರ್ವವೇದ 6.89.3

ಇದಿಷ್ಟು ವೇದಗಳಿಂದ ಸರಸ್ವತಿಯ ಬಗ್ಗೆ ತಿಳಿದುಬರುವ ವಿಚಾರಗಳು. ನದಿ, ನದಿದೇವತೆ, ವಾಗ್ದೇವತೆ, ಜ್ಞಾನದೇವತೆ, ಯುದ್ಧದೇವತೆ ಎಂಬ ದೇವತೆಗಳ ಸ್ವರೂಪವಲ್ಲದೆ, ಅನ್ನಪೂರ್ಣೆ, ತಾಯಿ, ಮಗಳು, ಪತ್ನಿ, ಸ್ನೇಹಿತೆ ಹೀಗೆ ಹಲವಾರು ಸ್ವರೂಪಗಳೂ ಪ್ರಕಟವಾಗಿವೆ. ಸಂಬಂಧಗಳ ವಿಚಾರದಲ್ಲಿ ಸ್ವಲ್ಪಮಟ್ಟಿನ ಗೊಂದಲವಿದೆ. ಇಂದಿನ ಕೌಟಂಬಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ಅಸಾಧುವಾದಂತಹ ಸಂಬಂಧಗಳು ಸರಸ್ವತಿಯ ವಿಷಯದಲ್ಲಿ ಗೋಚರವಾಗುತ್ತವೆ. ಆದರೆ, ಮಗಳನ್ನೇ ಮದುವೆಯಾಗುವ ಸಂಪ್ರದಾಯವನ್ನಲ್ಲದಿದ್ದರೂ, ಆ ಸಂಪ್ರದಾಯದ ಮೂಲಪುರುಷನಾದ ಬ್ರಹ್ಮನನ್ನು ಭಾರತಿಯ ಮನಸ್ಸು ಒಪ್ಪಿಕೊಂಡಿದೆ. ಇದು ಅಷ್ಟೇನು ಪರಿಚಿತವಲ್ಲದ ಸಾರಸ್ವತನ ವಿಷಯದಲ್ಲೂ ನಿಜ. ಸರಸ್ವತಿಗೆ ಸಿಕ್ಕ ಹೆಚ್ಚಿನ ಸ್ಥಾನಗೌರವಗಳಿಂದಾಗಿ ಸಾರಸ್ವತನ ಚಿತ್ರ ಮಸುಕಾದಂತೆ ಕಂಡುಬರುತ್ತದೆ. ಸರಸ್ವತಿಯು ನದಿ ಅಥವಾ ನದೀದೇವತೆ ಎಂಬ ಮೂಲಸ್ವರೂಪದಲ್ಲಿಯೇ ಉಳಿದಿದ್ದರೆ, ವೇದಗಳ ಹಲವಾರು ದೇವತೆಗಳ ಹಾಗೆ ಜನಮಾನಸದಿಂದ ಕಣ್ಮರೆಯಾಗುತ್ತಿದ್ದುದು ಅಕ್ಷರಶಃ ಸತ್ಯ. ಆದರೆ, ಕಾಲಧರ್ಮವನ್ನು ಅನುಸರಿಸಿ ಸರಸ್ವತಿಗೆ ಸಿಕ್ಕ ಹೊಸ ಹೊಸ ಸ್ವರೂಪಗಳು ಆಕೆಯನ್ನು ಒಂದು ಜನಪ್ರಿಯ ದೇವತೆಯನ್ನಾಗಿ ಉಳಿಸಿವೆ. ಸ್ವಲ್ಪಮಟ್ಟಿನ ಗೊಂದಲಗಳಿದ್ದರೂ, ಸರಸ್ವತಿಯ ಈಗಿನ ಎಲ್ಲಾ ಸ್ವರೂಪಗಳಿಗೂ ಋಗ್ವೇದವೇ ಮೂಲ. ಅಲ್ಲಲ್ಲಿ ಉಳಿದಿರುವ ಗೊಂದಲಗಳಿಗೆ, ಬಹುಶಃ ವೇದಗಳ ಸ್ತುತಿಕಾರರು ಬೇರೆ ಬೇರೆಯಾಗಿದ್ದು, ಬೇರೆ ಬೇರೆ ಕಾಲಕ್ಕೆ ಸೇರಿದವರಾಗಿದ್ದುದೂ ಕಾರಣವಿರಬಹುದು.

2.3.2. ವೇದಾಂತ ಸಾಹಿತ್ಯ

ವೇದಗಳಲ್ಲಿ ಉಕ್ತವಾಗಿರುವ ಸರಸ್ವತಿಗೂ ಆಧುನಿಕ ಸರಸ್ವತಿಯ ಸ್ವರೂಪಕ್ಕೂ ಅಗಾಧ ವ್ಯತ್ಯಾಸಗಳಿವೆ. ಈ ಬದಲಾವಣೆಗಳಿಗೆ ಕಾರಣವೇನು? ಯಾವ ಕಾಲದಲ್ಲಿ ಈ ಬದಲಾವಣೆಗಳಾದವು? ಅವಕ್ಕಿರುವ ಸಾಹಿತ್ಯಕ ಆಧಾರಗಳು ಯಾವುವು? ಎಂಬ ಪ್ರಶ್ನೆಗಳು ಸಹಜವಾಗಿಯೇ ಉದ್ಭವಿಸುತ್ತವೆ. ವೇದಗಳ ನಂತರ ಸರಸ್ವತಿಯ ಅಧ್ಯಯನಕ್ಕೆ ಆಕರಗಳಾಗಿರುವವು ನಿರುಕ್ತಗಳು, ಆರಣ್ಯಕಗಳು, ಬ್ರಾಹ್ಮಣಗಳು ಮತ್ತು ಉಪನಿಷತ್ತುಗಳು. ಇವುಗಳಲ್ಲಿ ಉಲ್ಲೇಖವಾದ ಸರಸ್ವತಿಯ ಸ್ವರೂಪವನ್ನು ಅರಿತರೆ, ಬಹುಶಃ ಪುರಾಣಗಳಲ್ಲಿ ಮತ್ತು ಆಧುನಿಕ ಯುಗದಲ್ಲಿ ಸರಸ್ವತಿಗಿರುವ ಹಲವಾರು ರೂಪಗಳಿಗೆ ಆಧಾರಗಳು ದೊರೆಯಬಹುದು. ಇವುಗಳ ಆಳವಾದ ಅಧ್ಯಯನಕ್ಕೆ ಹೋಗದೆ, ನಮ್ಮ ಅಧ್ಯಯನಕ್ಕೆ ಪೂರಕವಾಗಿ, ಇವುಗಳಲ್ಲಿನ ಸರಸ್ವತಿಯ ಸ್ವರೂಪವನ್ನು ಅರಿಯಲು ಪ್ರಯತ್ನಿಸಿದೆ. ಬೇರೆ ಬೇರೆ ವಿದ್ವಾಂಸರು ನಡೆಸಿರುವ ಅಧ್ಯಯನದ ಹಿನ್ನೆಲೆಯಲ್ಲಿ ಒಟ್ಟಾರೆ ಅಭಿಪ್ರಾಯವನ್ನು ಗ್ರಹಿಸಲಾಗಿದೆ.

ನದಿ

ಯಾಸ್ಕರು ಸರಸ್ವತಿಗೆ ನದಿ ಮತ್ತು ದೇವತೆ ಎಂಬ ಎರಡು ಸ್ವರೂಪಗಳನ್ನು ಹೇಳಿದ್ದಾರೆ.[210] 'ಸರ ಇತ್ಯುದಕನಾಮ ತದ್ವತೀ ಸ್ತನಿತಾದಿರೂಪಾ ಮಾಧ್ಯಮಿಕಾ ಚ ವಾಕ್' ಅಂದರೆ, ಸರ ಶಬ್ದಕ್ಕೆ ಉದಕವೆಂದರ್ಥ. ಉದಕವುಳ್ಳವಳೂ ಮತ್ತು ಗುಡುಗು ಮುಂತಾದ ಶಬ್ದವುಳ್ಳವಳೂ ಆದ ಅಂತರಿಕ್ಷವಾದ ವಾಗ್ದೇವತೆಯ ರೂಪವೇ ಸರಸ್ವತಿ.[211] 'ಸರಸ್ವತೀ ಸರ ಇತ್ಯುದಕನಾಮ ಸರ್ತೇಸ್ತದ್ವತೀ'[212] ಎಂಬುದೂ ಅದನ್ನೇ ಸೂಚಿಸುತ್ತದೆ. ನಿರುಕ್ತಗಳಲ್ಲಿ ಆಕೆ ನದೀದೇವತೆಯಂತೆ ಚಿತ್ರಿತಳಾಗಿದ್ದಾಳೆ.

ವಾಕ್

ಒಂದು ನಿರುಕ್ತದಲ್ಲಿ 'ಸರಸ್ವತೀ ವ್ಯಾಖಾತಾ'[213] ಅಂದರೆ ಸರಸ್ವತಿಯೇ ವಾಕ್ ಎಂದು ಸ್ತುತಿಗೊಂಡಿದ್ದಾಳೆ. ಛಾಂದೋಗ್ಯೋಪನಿಷತ್ತಿನಲ್ಲಿ 'ವಾಕ್‌ತತ್ವವು ಕೇವಲ ನಾಮಕ್ಕಿಂತ ಅಧಿಕವಾದುದು. ಸತ್ಯಾಸತ್ಯಗಳು ಪ್ರಿಯಾಪ್ರಿಯಗಳು ವಾಕ್ಕಿನಿಂದಲೇ ತಿಳಿಯುತ್ತವೆ',[214] 'ಸಕಲಕ್ಕೂ ವಾಕ್ ರಕ್ಷಕವಾಗಿರುವುದರಿಂದ ವಾಕ್ಕೇ ಗಾಯತ್ರಿಯು (ವಾಗ್ವೈ ಗಾಯತ್ರೀ)'[215] ಎಂದು ವಾಕ್ ಮಹತ್ವವನ್ನು ಹೇಳಿ, ವಾಕ್ ಅನ್ನು ಗಾಯತ್ರಿಗೆ ಸಮೀಕರಿಸಲಾಗಿದೆ.

ವಾಚಸ್ಪತಿ, ಬ್ರಹ್ಮ, ಬೃಹಸ್ಪತಿ ಮೊದಲಾದ ಹೆಸರುಗಳನ್ನುಳ್ಳ ದೇವತೆ ವಾಕ್‌ದೇವತೆಯ ಸೃಷ್ಟಿಕರ್ತ ಮತ್ತು ಸರಸ್ವತಿಯ ಆಜ್ಞಕರ್ತ.[216] ಇವು ಪ್ರಜಾಪತಿಗೆ ವಿವಿಧ ಸಂದರ್ಭದಲ್ಲಿ ಬಳಸಿರುವ ಹೆಸರುಗಳಾಗಿವೆ. ಶತಪಥ ಬ್ರಾಹ್ಮಣದಲ್ಲಿ ಬ್ರಹ್ಮನು ವಾಕ್‌ದೇವಿಯನ್ನು ಸೃಷ್ಟಿಸುತ್ತಾನೆ ಮತ್ತು ಸೃಷ್ಟಿಕಾರ್ಯಕ್ಕಾಗಿ ಅವಳಲ್ಲಿಯೇ ಅನುರಕ್ತನಾಗುತ್ತಾನೆ[217] ಎಂದಿದೆ.

'ವಾಕ್ ಅಕ್ಷರಂ ಪ್ರಥಮಜಾ ಋತಸ್ಯ ವೇದಾನಾಂ ಮಾತಾ ಅಮೃತಸ್ಯ ನಾಭೀಃ'[218] ಅಂದರೆ, ವಾಕ್ ಎಂಬುದು ಕ್ಷಯವಿಲ್ಲದ್ದು, ಮೊದಲು ದೇವತೆಗಳ ನಡುವೆ ಹುಟ್ಟಿದ್ದು, ವೇದಮಾತೆ ಮತ್ತು

---

210. ನಿರುಕ್ತ 2.29
211. ಋಗ್ವೇದ ಸಂಹಿತಾ ಭಾಗ -11, ಪು.266
212. ನಿರುಕ್ತ 9.26
213. ನಿರುಕ್ತ 11.15 (ಋಗ್ವೇದ ಸಂಹಿತಾ ಭಾಗ -12, ಪು. 643)
214. ಛಾಂದೋಗ್ಯೋಪನಿಷತ್ತು 7.2.1 ಋಗ್ವೇದ ಸಂಹಿತಾ, ಭಾಗ 12; ಪು.645
215. ಅದೇ, 3.12.1
216. ಐ.ಬ್ರಾ, 5.25; ಶಬ್ರಾ, 4.1.1.9, 5.1.16; ತೈಬ್ರಾ, 1.3.5.1; 3.12.5.1 ತೈಆ 3.1.1 – Cf. Mohammad Israil Khan: Sarasvati in Sanskrit Literature, P.98
217. ಶ.ಬ್ರಾ, 3.2.4.1–2 Cf.. Kanailal Bhattacharyya: Sarasvati. P.34
218. ತೈಬ್ರಾ, 2.8.8.5

ಶಾಶ್ವತವಾದುದರ ಮಧ್ಯೆ ಇರುವಂತದ್ದು ಎಂದು ವಾಕ್‌ನ ಮಹಿಮೆಯನ್ನು ತೈತ್ತರೀಯ ಬ್ರಾಹ್ಮಣದಲ್ಲಿ ಹೇಳಿದೆ.

ಆದರೆ, ಆರಣ್ಯಕಗಳಲ್ಲಿ ಸರಸ್ವತಿಗೆ ವಾಗ್ದೇವಿಯ ಸ್ವರೂಪ ಬಂದಿರುವುದನ್ನು ನೋಡಬಹುದು. ಐತರೇಯಾರಣ್ಯಕದಲ್ಲಿ ವಾಗ್ದೇವಿಯು ಸ್ತುತಿ ಮಂತ್ರಗಳ ನಿಧಿಯಾಗಿದ್ದಾಳೆ. ಇವುಗಳನ್ನು ಪಠಿಸಿದವನಿಗೆ ವಾಗ್ದೇವಿಯ ಅನುಗ್ರಹವಾಗುತ್ತದೆ. ಯಜ್ಞಕರ್ತನಿಗೆ ಆತ್ಮಶುದ್ಧಿಯುಂಟಾಗುತ್ತದೆ. ಅವಳು ಪವಿತ್ರಾತ್ಮಳು, ಪವಿತ್ರಾಕಾರಳು. ಈ ದೇವತೆ ನಮ್ಮ ಯಜ್ಞವನ್ನು ವಹಿಸಿ ದೇವತೆಗಳಿಗೆ ಸೇರಿಸಲಿ ಎಂದು ಸ್ತುತಿಗೊಂಡಿದ್ದಾಳೆ.[219]

ವೇದಮಾತೆ

ತೈತ್ತರೀಯ ಬ್ರಾಹ್ಮಣದಲ್ಲಿ ಮತ್ತು ಐತರೇಯ ಬ್ರಾಹ್ಮಣದಲ್ಲಿ ಸರಸ್ವತಿಯು ವಾಕ್, ವೇದಮಾತೆ ಎಂಬಂತೆ ಚಿತ್ರಿತಳಾಗಿದ್ದಾಳೆ.[220] ವಾಚಾವ್ಯೆ ವೇದಾಃ ಸಂಧಿಯಂತೆ ವಾಚಾ ಛಂದಾಂಸಿ ವಾಚಾ ಸರ್ವಾಣಿ..... ವಾಕ್ ವೇದಮಾತೆ; ಮತ್ತು ಇಡೀ ವಿಶ್ವವನ್ನು ತನ್ನೊಳಗೇ ಹೊಂದಿದ್ದಾಳೆ. ವಾಕ್ ಅತ್ಯಂತ ಶಕ್ತಿಯುತ ದೇವತೆ. ವಿಶ್ವವೆಲ್ಲವನ್ನು ತನ್ನೊಳಗೇ ಇಟ್ಟುಕೊಂಡಿರುವವಳು ಮತ್ತು ಸೃಷ್ಟಿಮಾತೆ. ಇದು ವಾಗ್ದೇವತೆಯ ಚಿತ್ರಣ. ಇದರಿಂದ, ವಾಗ್ದೇವತೆಯೇ ವೇದಮಾತೆ ಎಂಬುದು ತಿಳಿಯುವುದಾದರೂ, ಸರಸ್ವತಿಯೇ ವಾಗ್ದೇವತೆ ಎಂಬುದು ಸ್ಪಷ್ಟವಾಗುವುದಿಲ್ಲ.

ಕಾಮಧೇನು

ಬೃಹದಾರಣ್ಯಕೋಪನಿಷತ್ತಿನಲ್ಲಿ[221] ಸರಸ್ವತಿಯನ್ನು ಹಸು(ಕಾಮಧೇನು)ವಿನ ರೂಪದಲ್ಲಿ ಲಕ್ಷಿಸಲಾಗಿದೆ. ಆಕೆಯ ನಾಲ್ಕು ಸ್ತನಗಳು ಸ್ವಹಾ ವಶತ್ ಹಂತ ಮತ್ತು ಸ್ವಧಾ ಇವುಗಳನ್ನು ಪ್ರತಿನಿಧಿಸುತ್ತವೆ ಎನ್ನಲಾಗಿದೆ. 'ಸ್ವಹಾ ಮತ್ತು ವಶತ್ ಇವುಗಳ ಮೇಲೆ ದೇವತೆಗಳು, ಹಂತ ಎಂಬುದರ ಮೇಲೆ ಮನುಷ್ಯರು ಮತ್ತು ಸ್ವಧಾ ಎಂಬುದರ ಮೇಲೆ ಪಿತೃಗಳು ಅವಲಂಬಿತರಾಗಿರುತ್ತಾರೆ' ಎಂದು ಈ ಹಿಂದೆಯೇ ಹೇಳಿದೆ. ಮೊದಲಲ್ಲಿ ಈ ವಾಕ್‌ಧೇನು ಎರಡು ಸ್ತನದ ದೇವಿಯಂತೆ ವರ್ಣಿತಳಾಗಿದ್ದಾಳೆ. ಒಂದು ಸ್ತನದಿಂದ ಮಾನವರಿಗೆ ಧನಕನಕಾದಿಗಳನ್ನು, ಇನ್ನೊಂದರಿಂದ ವಿವೇಕವನ್ನು ನೀಡುತ್ತೀಯ ಎಂಬ ಮಾತು ಋಗ್ವೇದದಲ್ಲಿಯೇ ಬಂದಿದೆ.'[222] ಯಜುರ್ವೇದದ ಒಂದು ಸೂಕ್ತದಲ್ಲಿ 'ಸುದುಘಾ'[223]

---

219. ಐ.ಆ. 1.1.4 (ಋಗ್ವೇದ ಸಂಹಿತಾ ಭಾಗ –12, ಪು.643)
220. A.B. 3.1.6 & T.B. 2,8,8,5 Cf. Mohammad Israil Khan: Sarasvati in Sanskrit Literature, p.98
221. ಋಗ್ವೇದಸಂಹಿತಾ ಭಾಗ –12, ಪು.645
222. ಶಂಭಾ ಜೋಷಿ ಕೃತಿ ಸಂಪುಟ –4, ಪು.411
223. ಯಜುರ್ವೇದ 20.75

ಎಂದು ಕರೆದಿರುವುದನ್ನು ವಿಶ್ಲೇಷಿಸಿ ಸರಸ್ವತಿಗೆ ಕಾಮಧೇನುವಿನ ಸ್ವರೂಪ ಇದ್ದುದನ್ನು ಸ್ಪಷ್ಟಪಡಿಸಲಾಗಿದೆ.[224] ಇವೆಲ್ಲವೂ ಸರಸ್ವತಿಗೂ ಕಾಮದೇನುವಿಗೂ ಅಭೇದ್ಯವನ್ನು ಕಲ್ಪಿಸಿವೆ.

ಸಿಂಹಿಣಿಯ ರೂಪಧಾರಣೆ

ಶತಪಥ ಬ್ರಾಹ್ಮಣದಲ್ಲಿ ಮತ್ತು ಜೈಮಿನೀಯ ಬ್ರಾಹ್ಮಣಗಳಲ್ಲಿ ಸರಸ್ವತಿಯು ಸ್ತ್ರೀರೂಪಧಾರಣೆ ಮಾಡಿದ್ದನ್ನು ಹೇಳಿದೆ. ದೇವತೆಗಳು (ಆದಿತ್ಯರು) ಸೋಮಸಂಬಂಧಿಯಾದ ಯಜ್ಞವನ್ನು ಮಾಡುತ್ತಿದ್ದಾಗ ಅಗ್ನಿಯು ಅಧ್ವರ್ಯುವಾಗಿರುತ್ತಾನೆ. ಯಜ್ಞದ ಕೊನೆಯಲ್ಲಿ ವಾಕ್ ಅನ್ನು ರಾಕ್ಷಸರಿಗೆ ದಕ್ಷಿಣೆಯಾಗಿ ಕೊಡಲು ಹೋದಾಗ, ರಾಕ್ಷಸರು ತಿರಸ್ಕರಿಸುತ್ತಾರೆ. ವಾಕ್ ಬದಲಿಗೆ ಸೂರ್ಯನನ್ನು ದಕ್ಷಿಣೆ ಕೊಡಲು ಹೋದಾಗ ಒಪ್ಪಿಕೊಳ್ಳುತ್ತಾರೆ. ಇದರಿಂದ ಅವಮಾನಿತಳಾದ ವಾಕ್ ಸಿಂಹಿಣಿಯ ರೂಪವನ್ನು ಹೊಂದಿ ರಾಕ್ಷಸರನ್ನು, ದೇವತೆಗಳನ್ನು ಕೊಲ್ಲಲು ಪ್ರಾರಂಭಿಸುತ್ತಾಳೆ. ಅಗ್ನಿ ಮತ್ತು ಇಂದ್ರ ಸೇರಿ ಸಮಾಧಾನ ಮಾಡಿದ್ದರಿಂದ ವಾಕ್‌ದೇವತೆಯು ದೇವತೆಗಳ ಜತೆಯಲ್ಲಿಯೇ ಉಳಿದುಕೊಳ್ಳುತ್ತಾಳೆ.[225]

ವಾಗ್ದೇವಿಯ ಸ್ತ್ರೀರೂಪಧಾರಣೆ

ಬ್ರಾಹ್ಮಣಗಳಲ್ಲಿ ವಾಗ್ದೇವಿಯು ಸ್ತ್ರೀರೂಪಧಾರಣೆ ಮಾಡಿದ ವಿಚಾರಗಳಿಗೆ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಒಂದೇ ಕಥೆಯನ್ನು ಹೇಳಲಾಗಿದೆ. ಶತಪಥ ಬ್ರಾಹ್ಮಣದಲ್ಲಿ, ದೇವತೆಗಳು ಭೂಮಿಯಲ್ಲೂ ಸೋಮ ಆಕಾಶದಲ್ಲೂ ಇರುತ್ತಾರೆ. ಸೋಮನನ್ನು ಪಡೆಯಲು ದೇವತೆಗಳು ಛಂದೋದೇವತೆಯಾದ ಗಾಯತ್ರಿಯನ್ನು ಪಕ್ಷಿರೂಪದಲ್ಲಿ ಆಕಾಶಕ್ಕೆ ಕಳಿಸುತ್ತಾರೆ. (ಸುಪರ್ಣಿಯಾ ನಿರಮಿತಹಾ ಗಾಯತ್ರಿ ಛಂದೋದೇವತಾ ಪಕ್ಷಿರೂಪೇಣ......') ಆಗ ವಿಶ್ವಾವಸು ಎಂಬ ಗಂಧರ್ವ ಅವಳನ್ನು ಅಪಹರಿಸುತ್ತಾನೆ. ಗಂಧರ್ವರು ಸ್ತ್ರೀಯರನ್ನು ಇಷ್ಟಪಡುತ್ತಾರೆಂದು ದೇವತೆಗಳಿಗೆ ಗೊತ್ತಿದ್ದರಿಂದ ವಾಕ್‌ಗೆ ಸ್ತ್ರೀರೂಪವನ್ನು ಕೊಟ್ಟು, ವಾಗ್ದೇವಿಯನ್ನಾಗಿ ಬದಲಾಯಿಸಿ, ಕಳುಹಿಸಿ ಸೋಮನನ್ನು ತರಿಸಿಕೊಳ್ಳುತ್ತಾರೆ. ನಂತರ ದೇವತೆಗಳು, ಅವಳ ಇಚ್ಛೆಗೆ ವಿರುದ್ಧವಾಗಿ ಇಟ್ಟುಕೊಳ್ಳುವಂತಿಲ್ಲ ಎಂದಾಗ ಗಂಧರ್ವರು ವಾಗ್ದೇವತೆಯನ್ನು ಒಲಿಸಿಕೊಳ್ಳಲು ವೇದಗಳನ್ನು ಹೇಳುತ್ತಾರೆ. ದೇವತೆಗಳು ಕೊಳಲನ್ನು ನುಡಿಸುತ್ತಾರೆ. ವಾಗ್ದೇವತೆ ದೇವತೆಗಳಿಗೇ ಒಲಿಯುತ್ತಾಳಾದ್ದರಿಂದ ಗಂಧರ್ವರು ಸೋಮ ಮತ್ತು ವಾಗ್ದೇವತೆ ಇಬ್ಬರನ್ನೂ ಕಳೆದುಕೊಳ್ಳಬೇಕಾಗುತ್ತದೆ.[226] ವಾಗ್ದೇವಿ ಸಂಗೀತಕ್ಕೆ ಒಲಿಯುವ ಈ ಸಂದರ್ಭವೇ ಭಾರತೀಯ ಸಾಹಿತ್ಯದಲ್ಲಿ 'ಸಂಗೀತಸರಸ್ವತೀ' ಎಂಬ ವಿಶೇಷಣಕ್ಕೆ ಕಾರಣವಾಗಿರಬಹುದು.

---

224. Mohammad Israil Khan: Sarasvati in Sanskrit Literature, p.74-75

225. ಶ.ಬ್ರಾ, 3.2.4.1–2; ಜೈ.ಬ್ರಾ, 3.187 Cf. Kanailal Bhattacharyya: Sarasvati. P.34-5

226. ಶ.ಬ್ರಾ, 3.2.4.1–7 Cf. Mohammad Israil Khan: Sarasvati in Sanskrit Literature, p102-3 & Kanailal Bhattacharyya: Sarasvati. P.34

ಐತರೇಯ ಬ್ರಾಹ್ಮಣದಲ್ಲಿ ಗಾಯತ್ರಿಯ ಪಾತ್ರವಿಲ್ಲ. ಸ್ವತಃ ವಾಗ್ದೇವಿಯೇ 'ಗಂಧರ್ವರಿಗೆ ಸ್ತ್ರೀಯರೆಂದರೆ ತುಂಬಾ ಪ್ರೀತಿ. ನಾನು ಸ್ತ್ರೀರೂಪವನ್ನು ಧರಿಸುತ್ತೇನೆ. ನೀವು ನನ್ನನ್ನು ಗಂಧರ್ವರಿಗೆ ಕೊಟ್ಟು ಸೋಮನನ್ನು ಪಡೆಯಿರಿ' ಎಂಬ ಸಲಹೆಯನ್ನು ಕೊಡುತ್ತಾಳೆ. ವಾಕ್ ಇಲ್ಲದೆ ಬದುಕುವುದು ಹೇಗೆ? ಎಂಬ ಸಮಸ್ಯೆ ದೇವತೆಗಳಿಗೆ ಎದುರಾಗುತ್ತದೆ. 'ನೀವು ಸೋಮನನ್ನು ಪಡೆದುಕೊಳ್ಳಿ, ನಿಮಗೆ ಅಗತ್ಯ ಬಿದ್ದಾಗ ನಾನು ಮರಳಿ ಬರುತ್ತೇನೆ' ಎಂದು ಆಶ್ವಾಸನೆ ಕೊಡುತ್ತಾಳೆ. ದೇವತೆಗಳು ಸರಸ್ವತಿಯನ್ನು ವಿನಿಮಯರೂಪವಾಗಿ ಗಂಧರ್ವರಿಗೆ ನೀಡಿ ಸೋಮನನ್ನು ಪಡೆದುಕೊಳ್ಳುತ್ತಾರೆ.[227] ತೈತ್ತರೀಯ ಬ್ರಾಹ್ಮಣದಲ್ಲಿ ಇದೇ ಕಥೆ ಬರುತ್ತದೆ. ಆದರೆ ಇಲ್ಲಿ ಒಂದು ವರ್ಷದ ಬಳಿಕ ವಾಗ್ದೇವಿಯನ್ನು, ಸಂಗೀತ ಸ್ಪರ್ಧೆಯಲ್ಲಿ ಗೆಲ್ಲುವುದರ ಮೂಲಕ ದೇವತೆಗಳು ತಿರುಗಿ ಪಡೆದರು ಎಂಬ ವಿಷಯವಿದೆ.[228] ಬಹುಶಃ, ಈ ಕಥೆಗಳು ವಾಗ್ದೇವಿ ಸ್ತ್ರೀರೂಪದಲ್ಲಿ ನೆಲೆಗೊಳ್ಳಲು ಕಾರಣವಾಗಿರಬಹುದು.

ವಾಗ್ದೇವಿಯ ಸರಸ್ವತೀ ಅವತಾರ

ಶತಪಥ ಬ್ರಾಹ್ಮಣದಲ್ಲಿ ಸರಸ್ವತಿ ಮತ್ತು ವಾಕ್ ಅನ್ನು ಒಂದೇ ದೇವತೆಯನ್ನಾಗಿ ಸ್ತುತಿಸಿದೆ.[229] 'ಸರಸ್ವತಿಯೇ ವಾಗ್ದೇವತೆಯು' ಎಂದು ಹೇಳಿ, 'ಪ್ರಜಾಪತಿಯು ವಾಕ್ಕಿನಿಂದಲೇ ಶಕ್ತಿಯನ್ನು, ತೃಪ್ತಿಯನ್ನು ಪಡೆಯುತ್ತಾನೆ'[230] ಎಂದೂ ಹೇಳಿರುವುದು, ಪ್ರಜಾಪತಿ ಸೃಷ್ಟಿಕಾರ್ಯಕ್ಕಾಗಿ ಮಗಳನ್ನೇ ವರಿಸಿದ ಎಂಬ ಕಥೆಗೆ ಇದು ಕಾರಣವಾಗಿರಬಹುದು.

'ಬೃಹದ್ ದೇವತಾ'ದಲ್ಲಿ, ವಾಕ್ ಮತ್ತು ಸರಸ್ವಾನ್ ಇಂದ್ರನ ಮಧ್ಯಮಲೋಕದ ದೇವತೆಗಳು. ಮೂರು ಲೋಕಗಳಲ್ಲೂ ಘೃತಪೂರ್ಣವಾದ ನೀರನ್ನುಳ್ಳವನಾದ್ದರಿಂದ ಸರಸ್ವಾನ್‌ಗೆ ಸರಸ್ವತ್ತು ಎಂಬ ಹೆಸರು ಬಂತು. ಆದ್ದರಿಂದ ವಾಕ್‌ಗೆ ಸರಸ್ವತಿ ಎಂಬ ಹೆಸರಾಯಿತು[231] ಎಂದು ಹೇಳಿದೆ.

3.2.3. ಸರಸ್ವತೀರಹಸ್ಯೋಪನಿಷಚ್ಚಂದ್ರಿಕೆ

ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ ಇವರು ಪ್ರಕಟಿಸಿರುವ, 'ಸರಸ್ವತೀರಹಸ್ಯೋಪನಿಷಚ್ಚಂದ್ರಿಕೆ' ಕೃತಿಯು ಪೂರ್ಣವಾಗಿ ಸರಸ್ವತಿಗೆ ಸಂಬಂಧಿಸಿದ್ದಾಗಿದೆ. "ಸರಸ್ವತೀರಹಸ್ಯೋಪನಿಷತ್ತು" ಎಂಬುದು ಋಗ್ವೇದಕ್ಕೆ ಸೇರಿದ್ದು ಉಪನಿಷನ್ಮಾಲೆಯಲ್ಲಿ 106ನೆಯದೆಂದು ಪರಿಗಣಿಸಲ್ಪಟ್ಟಿದೆ, ಎಂದು ಸಂಪಾದಕರಾದ ಹೆಚ್.ಎಸ್.ಲಕ್ಷ್ಮೀನರಸಿಂಹಮೂರ್ತಿಯವರು ಹೇಳಿದ್ದಾರೆ. ಈ

---

227. ಐ.ಬ್ರಾ. – 1.27 Cf Mohammad Israil Khan: Sarasvati in Sanskrit Literature, p.101-102
228. ತೈ.ಬ್ರಾ. 6.1.6.5 Cf. Kanailal Bhattacharyya: Sarasvati. P.34
229. ಶ.ಬ್ರಾ. 14. 2. 1. 12. (ಸರಸ್ವತಿ ಪಿನ್ವಸ್ವೇತಿ: ವಾಗ್ವೈ ಸರಸ್ವತೀ)
230. ಶ.ಬ್ರಾ. 3.9.1.9 (ವಾಗ್ವೈ ಸರಸ್ವತೀ) (ವಾಚೈವ ತತ್ಪ್ರಜಾಪತಿಃ ಪುನರಾತ್ಮಾನಮಾಪ್ಯಾಯಯತ)
231. ಬೃ.ದೇ. 1.123; 2.51 ಋಗ್ವೇದ ಸಂಹಿತಾ, ಭಾಗ –12, ಪು 671ರಲ್ಲಿ ಉದ್ಧೃತ.

ಕೃತಿಯ ಕಾಲದ ಬಗ್ಗೆಯೂ ಸಂಪಾದಕರು ಅನುಮಾನವೆತ್ತಿದ್ದಾರೆ. ಇದರಲ್ಲಿ ಸರಸ್ವತಿಯನ್ನು ದಶಶ್ಲೋಕಿಯೆಂದು ಕರೆದು ಹೇಳಿರುವ ಹತ್ತು ಶ್ಲೋಕಗಳು ಋಗ್ವೇದದಲ್ಲಿ ಬರುವ ಋಕ್ಕುಗಳೇ ಆಗಿವೆ. ಈಗಾಗಲೇ ಆ ಋಕ್ಕುಗಳನ್ನು ನಾವು ಋಗ್ವೇದದ ಭಾಗದಲ್ಲಿ ಚರ್ಚಿಸಿರುವುದರಿಂದ ಮತ್ತೆ ನೋಡುವ ಅಗತ್ಯವಿಲ್ಲ. ಆದರೆ ಆ ಹತ್ತು ಶ್ಲೋಕಗಳಲ್ಲದೆ ಇನ್ನೂ ಹಲವಾರು ಸರಸ್ವತೀ ಸಂಬಂಧವಾದ ಶ್ಲೋಕಗಳು ಇಲ್ಲಿ ಸಂಕಲಿತವಾಗಿದೆ. ದಂಡಿಯ ಪ್ರಸಿದ್ಧವಾದ 'ಚತುರ್ಮುಖಮುಖಾಂಭೋಜ............' ಎಂಬ ಸರಸ್ವತೀ ಸ್ತುತಿಯೂ ಅದರಲ್ಲಿ, ದಶಶ್ಲೋಕಗಳಾದ ನಂತರ ಮೊದಲನೆಯದಾಗಿ ಸೇರಿದೆ. ಆದಕಾರಣ 'ಸರಸ್ವತೀರಹಸ್ಯೋಪನಿಷಚ್ಚಂದ್ರಿಕೆ'ಯು ದಂಡಿಯ ಕಾಲವಾದ ಏಳನೆಯ ಶತಮಾನದ ನಂತರದ ಸಂಕಲನವಾಗಿರುವುದೆಂದು ನಿರ್ವಿವಾದವಾಗಿ ಹೇಳಬಹುದು. ಪ್ರಸ್ತುತ ಅಧ್ಯಯನವು ಉಪನಿಷತ್ತಿನ ಕಾಲನಿರ್ಣಯವಲ್ಲವಾದ್ದರಿಂದ, ನಮ್ಮ ಅಧ್ಯಯನಕ್ಕೆ ಪೂರಕವಾಗಿರುವ ಕೆಲವು ಶ್ಲೋಕಗಳನ್ನಷ್ಟೇ ಗಮನಿಸಲಾಗುವುದು. ಇವುಗಳು –ಸಂಪಾದಕರೇ ಹೇಳುವಂತೆ– ಮತ್ತೆ ಯಾವ ಗ್ರಂಥದಲ್ಲಾಗಲೀ ಪುರಾಣಗಳಲ್ಲಿಯಾಗಲೀ ಇವೆಯೋ, ಇಲ್ಲವೋ ತಿಳಿಯದು.

ದಶಶ್ಲೋಕಗಳನ್ನು ಹೇಳುವುದಕ್ಕೆ ಮೊದಲೇ ಒಂದು ಶ್ಲೋಕದಲ್ಲಿ ಸರಸ್ವತಿಯನ್ನು ಸ್ತುತಿಸಿ ನಮಿಸಲಾಗಿದೆ.

ನೀಹಾರಹಾರಘನಸಾರಸುಧಾಕರಾಭಾಂ
ಕಲ್ಯಾಣದಾಂ ಕನಕಚಂಪಕದಾಮಭೂಷಾಮ್॥
ಉತ್ತುಂಗಪೀನಕುಚಕುಂಭಮನೋಹರಾಂಗೀಂ
ವಾಣೀಂ ನಮಾಮಿ ಮನಸಾ ವಾಚಸಾಂ ವಭೂತ್ಯೈ॥

ಮಂಜಿನ ಮಾಲೆಯಂತೆ ಬಿಳುಪಾದ, ಘನ(ಗಟ್ಟಿ)ಯಾದ ಅಮೃತದ ಸಾರದಂತಿರುವ ಚಂದ್ರನಂತೆ ಕಾಂತಿಯುಳ್ಳವಳೂ ಮಂಗಳವನ್ನುಂಟುಮಾಡುವವಳೂ ಚಿನ್ನದಂತೆ ಹೊಂಬಣ್ಣವಾದ ಸಂಪಿಗೆ ಹೂವಿನಹಾರವನ್ನು ಧರಿಸಿರುವವಳೂ, ಉಬ್ಬಿದ ಸ್ಥೂಲವಾದ ಕುಚಕುಂಭಗಳಿಂದ ಮನೋಹರವಾದ ಶರೀರವುಳ್ಳವಳೂ ಆದ ವಾಣೀ ಎಂಬ ದೇವಿಯನ್ನು ವಾಕ್ಕುಗಳೆಂಬ ಐಶ್ವರ್ಯಸಿದ್ಧಿಗಾಗಿ ಮನಸಾರೆ ನಮಸ್ಕರಿಸುವೆನು. ಇಲ್ಲಿ ವಾಗ್ದೇವಿಯ ರೂಪವರ್ಣನೆ ಸೊಗಸಾಗಿ ಮೂಡಿ ಬಂದಿದೆ. ಇದರಲ್ಲಿ ಸರಸ್ವತಿಯ ಶಿಲ್ಪಲಕ್ಷಣಗಳೂ ಬಂದಿರುವುದನ್ನು ಗಮನಿಸಬಹುದಾಗಿದೆ.

ನಮಸ್ತೇ ಶಾರದಾದೇವಿ ಕಾಶ್ಮೀರಪುರವಾಸಿನಿ।
ತ್ವಾಮಹಂ ಪ್ರಾರ್ಥಯೇ ನಿತ್ಯಂ ವಿದ್ಯಾದಾನಂ ಚ ದೇಹಿ ಮೇ॥

ಕಾಶ್ಮೀರಪುರವಾಸಿನಿ ಸರಸ್ವತಿಯು ಶಾರದಾ ಹೆಸರಿನಿಂದ ವಿದ್ಯಾದೇವತೆಯಾಗಿ ಸ್ತುತಿಗೊಂಡಿದ್ದಾಳೆ.

ಅಕ್ಷಸೂತ್ರಾಂಕುಶಧರಾ ಪಾಶಪುಸ್ತಕಧಾರಿಣೀ।
ಮುಕ್ತಹಾರಸಮಾಯುಕ್ತಾ ವಾಚಿ ತಿಷ್ಠತು ಮೇ ಸದಾ॥

ಇದರಲ್ಲಿ ಶಿಲ್ಪಲಕ್ಷಣಗಳನ್ನು ಕೊಡಲಾಗಿದೆ. ಚತುರ್ಭುಜ ಸರಸ್ವತಿಯ ಕೈಗಳಲ್ಲಿ ಅಕ್ಷಮಾಲೆ ಅಂಕುಶ ಪಾಶ ಮತ್ತು ಪುಸ್ತಕಗಳಿದ್ದು, ಮುಕ್ತಾಹಾರಸಮೇತವಾದ ಸರಸ್ವತಿಯ ಚಿತ್ರಣವನ್ನು ನೀಡಲಾಗಿದೆ. ಈ ಲಕ್ಷಣಗಳನ್ನೊಳಗೊಂಡ ನೂರಾರು ಶಿಲ್ಪಗಳು ಕರ್ನಾಟಕದ ವಿವಿಧ ದೇವಾಲಯಗಳಲ್ಲಿ ನೋಡಸಿಗುತ್ತವೆ. ಪ್ರಸ್ತುತ ಶ್ಲೋಕಕ್ಕೆ ವಿವರಣೆಯನ್ನು ಕೊಡುತ್ತಾ ಸಂಪಾದಕರು, ವಾಗ್ದೇವಿ ಮತ್ತು ಶಾರದೆಯರು ಬೇರೆ ಬೇರೆ ದೇವತೆಗಳು ಎನ್ನುತ್ತಾರೆ. ಅದು ನಿಜವಾದರೂ, ಸಾಮಾನ್ಯವಾಗಿ ಜನಸಾಮಾನ್ಯರಲ್ಲಿ ಇವರೆಡೂ ಒಂದೇ ದೇವತೆಗಳಂತೆ ಪೂಜೆಗೊಳ್ಳುತ್ತವೆ.

ಋಗ್ವೇದದಲ್ಲಿ ಒಂದಕ್ಕೊಂದು ಸ್ಪಷ್ಟವಾದ ಸಂಬಂಧವಿಲ್ಲದ ಸರಸ್ವತೀ ನದಿ, ನದೀ ದೇವತೆ, ವಾಕ್, ಮತ್ತು ವಾಗಾಭಿಮಾನಿ ಮಾಧ್ಯಮಿಕಾ ವಾಕ್ ಸರಸ್ವತಿ ಇವುಗಳಲ್ಲೆಕ್ಕೂ ವೇದಾಂತ ಸಾಹಿತ್ಯದಲ್ಲಿ ಸ್ಪಷ್ಟ ರೂಪ ದೊರೆತಿದೆ. ವೇದಾಂತ ಸಾಹಿತ್ಯದಲ್ಲೂ ಮೇಲಿನ ಎಲ್ಲಾ ರೂಪಗಳಿದ್ದರೂ, ಒಂದಕ್ಕೊಂದು ಸಂಬಂಧವೇರ್ಪಟ್ಟಿದೆ. ಸಂಬಂಧದಲ್ಲಿ ಸ್ಪಷ್ಟತೆಯಿದೆ. ವಾಕ್, ವಾಗ್ದೇವತೆಯಾಗಿ ನಂತರ ಸರಸ್ವತಿಯೇ ಆಗುವುದು ಈ ಘಟ್ಟದ ಪ್ರಮುಖ ಅಂಶ. ವೇದಮಾತೆ, ವಾಕ್, ಕಾಮಧೇನು, ಸಿಂಹಿಣಿ, ವಾಗ್ದೇವಿ ಮತ್ತು ಸರಸ್ವತಿಯು ಹೀಗೆ ಸ್ವರೂಪದಲ್ಲಿ ಬದಲಾವಣೆ ಹೊಂದಿ, ವಾಗ್ದೇವತೆಯೇ ಸರಸ್ವತೀ ಎಂಬ ಹಂತವನ್ನು ತಲುಪಿದೆ. ಮುಂದೆ, ಸರಸ್ವತಿಯು ವಿದ್ಯಾದೇವತೆಯಾಗಿ, ಸಂಗೀತದೇವತೆಯಾಗಿ ರೂಪಗೊಳ್ಳಲು ಇಲ್ಲೇ ಬೀಜಾಂಕುರ ಆಗಿದೆ. ಪ್ರಜಾಪತಿಯ ಅಂದರೆ ಬ್ರಹ್ಮನ ಮಗಳು ಮತ್ತು ಶಕ್ತಿ ಎರಡೂ ಸರಸ್ವತಿಯೇ ಆಗುವುದಕ್ಕೂ ಇಲ್ಲಿಯೇ ಬೀಜಾಂಕುರವಾಗಿದೆ.

2.3.4. ಮಹಾಭಾರತ

ರಾಮಾಯಣ ಮತ್ತು ಮಹಾಭಾರತಗಳು ಭಾರತೀಯರ ಆದಿಮಹಾಕಾವ್ಯಗಳು. ರಾಮಾಯಣದಲ್ಲಿ ಸರಸ್ವತಿಯ ಸ್ತುತಿಯಿಲ್ಲ. ಬಹುಶಃ, ಕಾವ್ಯಮೀಮಾಂಸೆಯ ತತ್ವಗಳು ರೂಪಗೊಳ್ಳುವ ಪೂರ್ವದಲ್ಲಿಯೇ ರಾಮಾಯಣ ಮಹಾಕಾವ್ಯ ರಚಿತವಾಗಿರುವುದು ಅದಕ್ಕೆ ಕಾರಣವಿರಬಹುದು. ಮಹಾಭಾರತದಲ್ಲೂ ಸರಸ್ವತಿಯ ಸ್ತುತಿ ಎಂಬುದು ಇಲ್ಲವಾದರೂ ಬೇರೆ ಬೇರೆ ಸಂದರ್ಭದಲ್ಲಿ ಸರಸ್ವತಿಯ ವಿಚಾರಗಳು ಪ್ರಸ್ತಾಪವಾಗಿರುವುದನ್ನು ಪರಿಶೀಲಿಸಬಹುದು.

'ಶ್ರೀಮನ್ಮಹಾಭಾರತ'[232]ದ ಪ್ರತಿ ಸಂಪುಟದ ಆರಂಭದಲ್ಲಿ ಕೆಳಗಿನ ಶ್ಲೋಕವನ್ನು ಕೊಡಲಾಗಿದೆ.

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್।
ದೇವೀಂಸರಸ್ವತೀಂ ಚೈವ ತತೋ ಜಯಮುದೀರಯೇತ್॥

232. ಶ್ರೀಮನ್ಮಹಾಭಾರತ (ವ್ಯಾಸಭಾರತದ ಕನ್ನಡ ಸರಳಾನುವಾದ), 32 ಸಂಪುಟಗಳು, ಭಾರತ ದರ್ಶನ ಪ್ರಕಾಶನ, ಬೆಂಗಳೂರು. 8ನೇ ಮುದ್ರಣ, 2001

ಈ ಶ್ಲೋಕ ವ್ಯಾಸರದ್ದೇ ಅಥವಾ ಅಲ್ಲವೆ ಎಂಬ ಅನುಮಾನಗಳಿದ್ದರೂ ಸಹ, ಅದರಲ್ಲಿ ಸರಸ್ವತಿಯ ಹೆಸರು ಬರುವುದರಿಂದ, ಮತ್ತು ಸರಸ್ವತಿ ಶಬ್ದಪ್ರಯೋಗದ ಬಗ್ಗೆ ಸಂಪಾದಕರು ವಿಶ್ಲೇಷಿಸಿರುವುದರಿಂದ ನಾವಿಲ್ಲಿ ಅದನ್ನು ಗಮನಿಸಬೇಕಾಗಿದೆ. ಪಂಚಮವೇದವೆಂದು ಕರಿಸಿಕೊಂಡಿರುವ ಜಯ(ಮಹಾಭಾರತ)ವನ್ನು ನಾರಾಯಣನನ್ನು, ಅರ್ಜುನನನ್ನು, ಮತ್ತು ಸರಸ್ವತಿಯನ್ನು ನಮಸ್ಕರಿಸಿ ಅನಂತರ ಪ್ರವಚನ ಮಾಡಬೇಕು ಎಂಬ ಸೂಚನಾ ಶ್ಲೋಕ ಇದು. ಇದು ವ್ಯಾಸ ರಚನೆಯೇ ಆಗಿದ್ದಲ್ಲಿ, ಸರಸ್ವತಿಯನ್ನು ಅವರು ವಾಗ್ದೇವತೆ, ವಿದ್ಯಾದೇವತೆ ಹಾಗೂ ಕಾವ್ಯದೇವತೆಯ ನೆಲೆಯಲ್ಲಿ ಕಂಡಿದ್ದಾರೆ ಎಂದಾಗುತ್ತದೆ. ವ್ಯಾಸ ರಚನೆ ಆಗಿಲ್ಲದಿದ್ದರೂ, ಮಹಾಭಾರತ ಪಂಚಮವೇದವೆಂದು ಪ್ರಚಲಿತಕ್ಕೆ ಬಂದನಂತರ ಯಾರಾದರೂ ಅದನ್ನು ಸೇರಿಸಿದ್ದರೂ, ಸರಸ್ವತಿಯು ವಾಗ್ದೇವಿಯಾಗಿಯೇ ಪ್ರಕಟಗೊಂಡಿದ್ದಾಳೆ ಎಂಬುದು ಸ್ಪಷ್ಟ.

ಮಹಾಭಾರತದಲ್ಲಿ ಸರಸ್ವತೀ ಪವಿತ್ರ ನದಿಯಾಗಿಯೂ, ನದಿದೇವತೆಯಾಗಿಯೂ ಉಲ್ಲೇಖವಾಗಿದ್ದಾಳೆ. ಲೋಮಋಷಿಯು ಸರಸ್ವತೀ ನದಿಯ ಮಹಿಮೆಯನ್ನು ಧರ್ಮರಾಯನಿಗೆ ಹೇಳುವ ಸನ್ನಿವೇಶವಿದೆ.[233] ಸರಸ್ವತೀ ನದಿಯು ಕೆಲವು ಜಾಗದಲ್ಲಿ ಅದೃಶ್ಯಳಾಗಿ ಮತ್ತೆ ಕೆಲವು ಜಾಗದಲ್ಲಿ ಕಾಣಿಸಿಕೊಳ್ಳುತ್ತಿದ್ದ ವಿವರವೂ ಅಲ್ಲಿ ಬರುವುದರಿಂದ ಮಹಾಭಾರತದ ರಚನೆಯ ಕಾಲಕ್ಕಾಗಲೇ ಸರಸ್ವತೀ ನದಿ ಬತ್ತಿ ಹೋಗುವ ಪ್ರಕ್ರಿಯೆ ಆರಂಭವಾಗಿತ್ತೆಂದು ಊಹಿಸಬಹುದು. ಪಾಂಡವರು ವನವಾಸದಲ್ಲಿದ್ದಾಗ ವಿಶಾಖಯೂಪಾರಣ್ಯದಿಂದ ಹೊರಟು, ಮರುಧ್ವನವನ್ನು ದಾಟಿ ಸರಸ್ವತೀ ತೀರಕ್ಕೆ ಬಂದು ಕೆಲವು ದಿನ ಇದ್ದರು ಎಂಬ ವರ್ಣನೆಯಿದೆ.[234] ಭೀಷ್ಮಪರ್ವದ ಆರಂಭದಲ್ಲಿ ಸಂಜಯನು ಧೃತರಾಷ್ಟ್ರನಿಗೆ ಭಾರತವರ್ಷದ ಪರಿಚಯವನ್ನು ಮಾಡಿಕೊಡುವಾಗ ನೂರಾರು ನದಿಗಳ ಹೆಸರನ್ನು ಹೇಳುತ್ತಾನೆ. ಆಗ ಸರಸ್ವತೀ ನದಿಯನ್ನು ಪಿಬಂನ್ತಿ, ವಿಪುಲಾ, ಗಂಗಾ, ಸಿಂಧು, ಗೋದಾವರಿ, ನರ್ಮದಾ ನದಿಗಳೊಂದಿಗೆ ಹೇಳುತ್ತಾನೆ (ಶ್ಲೋಕ –14). ಈ ಏಳು ನದಿಗಳನ್ನು ಸಪ್ತತೀರ್ಥಗಳೆಂದು ಭಾವಿಸಬಹುದೇ ಎಂಬುದು ತಿಳಿಯುವುದಿಲ್ಲ. ಮೊದಲಿನ ಎರಡು ನದಿಗಳು ಯಾವುವು ಎಂಬುದೂ ಸ್ಪಷ್ಟವಾಗುವುದಿಲ್ಲ. ಇವುಗಳ ಜಾಗದಲ್ಲಿ ಇರಬಹುದಾಗಿದ್ದ ಯಮುನಾ ಮತ್ತು ಶತುದ್ರು(ಸಟ್ಲೆಜ್) ಎರಡೂ ನದಿಗಳು ಬೇರೆ ಶ್ಲೋಕದಲ್ಲಿ ಉಲ್ಲೇಖವಾಗಿವೆ (ಶ್ಲೋಕ –15). ಸಂಜಯನೇ ಹೇಳುವ ಪ್ರಕಾರ ಆತ ಕೊಡುವ ಪಟ್ಟಿಯಲ್ಲಿ ಕಣ್ಣಿಗೆ ಕಾಣದಿರುವ, ಅಂದರೆ ಮೊದಲೇ ಇದ್ದು ಈಗ ಅಂತರ್ಗಾಮಿಯಾಗಿರುವ ನದಿಗಳ ಹೆಸರುಗಳೂ ಇವೆ. ಇನ್ನೊಂದು ಶ್ಲೋಕದಲ್ಲಿ (ಶ್ಲೋಕ –36) ಕುಮಾರೀ, ಋಷಿಕಲ್ಯಾ, ಮಾರಿಷಾ, ಮಂದಾಕಿನೀ, ಸುಪುಣ್ಯಾ,

---

233. ಶ್ರೀಮನ್ಮಹಾಭಾರತ (ವ್ಯಾಸಭಾರತದ ಕನ್ನಡ ಸರಳಾನುವಾದ), ವನಪರ್ವ, ಸಂ. 5, ಪು.2770–71

234. ಶ್ರೀಮನ್ಮಹಾಭಾರತ (ವ್ಯಾಸಭಾರತದ ಕನ್ನಡ ಸರಳಾನುವಾದ), ವನಪರ್ವ, ಸಂ. 6, ಪು.3082

ಸರ್ವಾ ಮತ್ತು ಗಂಗಾ ನದಿಗಳೊಂದಿಗೆ ಸರಸ್ವತೀ ನದಿಯ ಹೆಸರನ್ನು ಹೇಳಿ, ಈ ನದಿಗಳ ನೀರನ್ನು ಭಾರತವರ್ಷದ ಜನರು ಕುಡಿಯುತ್ತಾರೆ ಎಂದು ಹೇಳಿದೆ.[235] ಶಲ್ಯಪರ್ವದುದ್ದಕ್ಕೂ, ಬಲರಾಮನು ತೀರ್ಥಯಾತ್ರೆ ಕೈಗೊಂಡಾಗ ಸರಸ್ವತೀ ನದೀತೀರ್ಥಕ್ಕೆ ಬಂದ, ಸರಸ್ವತೀ ನದಿದಡದಲ್ಲಿದ್ದ ಋಷ್ಯಾಶ್ರಮಗಳು ಮತ್ತು ಹಿಂದೆ ಆ ನದಿ ದಡದಲ್ಲಿ ನಡೆದ ಯಜ್ಞಯಾಗಾದಿಗಳ ವಿವರಗಳು ಬರುತ್ತವೆ.[236]

ಆ ವಿವರಗಳನ್ನು ಹೀಗೆ ಸಂಕ್ಷೇಪಿಸಬಹುದು: ಅಲೆಗಳಿಂದ ಕೂಡಿದ, ಮಹಾಸಾಗರದಂತಿದ್ದ, ಬಹುದೊಡ್ಡದಾಗಿದ್ದ ಪವಿತ್ರವಾದ ಸರಸ್ವತೀ ನದಿಯ ದಂಡೆಯಲ್ಲಿ ಹಲವಾರು ತೀರ್ಥಕ್ಷೇತ್ರಗಳಿದ್ದವು. ದಕ್ಷಿಣಾಭಿಮುಖವಾಗಿ ಹರಿಯುತ್ತಿದ್ದ ಸರಸ್ವತೀ ನದಿಯು ನಾಗಧನ್ವಾತೀರ್ಥದ ನಂತರ ಪೂರ್ವಾಭಿಮುಖವಾಗಿ ತಿರುಗಿ ಏಳು ಕವಲುಗಳಾಗಿ ಹರಿಯುತ್ತಿದ್ದಳು. ಅಲ್ಲಿಂದ ಮುಂದಕ್ಕೆ ಸಪ್ತಸಾರಸ್ವತ ತೀರ್ಥ ಎಂದೇ ಸರಸ್ವತಿಗೆ ಹೆಸರು. ಆ ಸಪ್ತಶಾಖೆಗಳನ್ನು, ಸುಪ್ರಭಾ, ಕಾಂಚನಾಕ್ಷೀ, ವಿಶಾಲಾ, ಮನೋರಮಾ, ಓಘವತೀ, ಸುರೇಣು ಮತ್ತು ವಿಮಲೋದಕಾ ಎಂದು ಹೇಳಿದೆ. ಸರಸ್ವತೀ ನದಿಗೆ ಇಷ್ಟೊಂದು ಪ್ರಾಮುಖ್ಯತೆ ಬರಲು ಕಾರಣವನ್ನು 'ದೇವತೆಗಳು ಗಂಗಾನದಿಯನ್ನು ತಮ್ಮ ಸಾನ್ನಿಧ್ಯದಿಂದ ಶೋಭಾಯಮಾನವನ್ನಾಗಿ ಮಾಡಿದ್ದರು. ವಾಲಖಿಲ್ಯಾದಿ ಮಹರ್ಷಿಗಳು ಸರಸ್ವತೀ ನದಿಯನ್ನು ತಮ್ಮ ಸಾನ್ನಿಧ್ಯದಿಂದ ಶೋಭಾಯಮಾನವನ್ನಾಗಿ ಮಾಡಿದ್ದರು' ಎಂದು ವಿಶ್ಲೇಷಿಸಿದೆ.

ವಿಶ್ವಾಮಿತ್ರನ ಮನೋನಿಶ್ಚಯದ ಆಜ್ಞೆಯಂತೆ ಸರಸ್ವತೀ ಪ್ರವಾಹವನ್ನುಂಟು ಮಾಡಿ ವಸಿಷ್ಠನನ್ನು ತೇಲಿಸಿಕೊಂಡು ಹೋಗುತ್ತಿರುವಾಗ, ವಸಿಷ್ಠನು ಸರಸ್ವತಿಯನ್ನು ಪ್ರಾರ್ಥಿಸುತ್ತಾನೆ: 'ಬ್ರಹ್ಮನ ಸರಸ್ಸಿನಿಂದ ಉದ್ಭವವಾಗುವುದರಿಂದ ಸರಸ್ವತೀ ಎಂಬ ಹೆಸರು ಬಂದಿದೆ. ಸಾಗರಸದೃಶ್ಯವಾದ, ವೇಗವಾಗಿ ಹರಿಯುವ ಅತಿ ದೊಡ್ಡ ಪವಿತ್ರ ನದಿಯಾಗಿದೆ. ವೇದಾಧ್ಯಯನ ಮಾಡುವ ಋಷಿಮುನಿಗಳಿಗೆ ಆಶ್ರಯತಾಣವಾಗಿದೆ. ಪುಷ್ಟಿ, ಕೀರ್ತಿ, ದ್ಯುತಿ, ಸಿದ್ಧಿ, ಉಮಾ, ವಾಣೀ ಮತ್ತು ಸ್ವಾಹಾ ಎಂಬ ಸ್ವರೂಪಗಳೂ ಆಕೆಗೆ ಉಂಟು. ಎಲ್ಲ ಪ್ರಾಣಿಗಳಲ್ಲೂ ಸರಸ್ವತೀ ಪರಾ, ಪಶ್ಯನ್ತೀ, ಮಧ್ಯಮಾ ಮತ್ತು ವೈಖರೀ ಎಂಬ ನಾಲ್ಕು ರೂಪಗಳಿಂದ ಆವಿರ್ಭೂತಳಾಗುತ್ತಾಳೆ.' ಎಂಬುದು ಪ್ರಾರ್ಥನೆಯ ಸಾರಾಂಶ. ವಸಿಷ್ಠನನ್ನು ಉಳಿಸುವ ಮನಸ್ಸಿನಿಂದ ಸರಸ್ವತಿಯು ವೇಗವಾಗಿ ಚಲಿಸಿ ವಿಶ್ವಾಮಿತ್ರನಿಗೆ ಕೋಪವನ್ನುಂಟುಮಾಡಿ ರಕ್ತನದಿಯಾಗುವಂತೆ ಶಾಪವನ್ನು ಪಡೆಯುತ್ತಾಳೆ. ಆನಂತರ ಮಹಾದೇವನ ಅನುಗ್ರಹದಿಂದ ಮತ್ತೆ ಪವಿತ್ರನದಿಯಾಗಿ ಹರಿಯತೊಡಗುತ್ತಾಳೆ. ನಮುಚಿಯ ಶಾಪದಿಂದ ಉಂಟಾದ

---

235. ಶ್ರೀಮನ್ಮಹಾಭಾರತ (ವ್ಯಾಸಭಾರತದ ಕನ್ನಡ ಸರಳಾನುವಾದ), ಭೀಷ್ಮಪರ್ವ, ಸಂ. 12, ಪು.79–82

236. ಶ್ರೀಮನ್ಮಹಾಭಾರತ (ವ್ಯಾಸಭಾರತದ ಕನ್ನಡ ಸರಳಾನುವಾದ), ಶಲ್ಯಪರ್ವ, ಸಂ. 20, ಪು.4824–4888

ಬ್ರಹ್ಮಹತ್ಯಾದೋಷವನ್ನು ಇಂದ್ರನು ಸರಸ್ವತೀ ನದಿಯಲ್ಲಿ ಸ್ನಾನ ಮಾಡಿ ಕಳೆದುಕೊಳ್ಳುತ್ತಾನೆ. ದೇವಸೇನಾಪತಿ ಕಾರ್ತಿಕೇಯನಿಗೆ ಪಟ್ಟಾಭಿಷೇಕ ಮಾಡಲು ಬ್ರಹ್ಮ ಆರಿಸಿಕೊಂಡಿದ್ದು ಪುಣ್ಯತಮವಾದ ಸರಸ್ವತೀ ನದಿ ತೀರವನ್ನು.

ಇಲ್ಲಿಯೇ ಗಮನಿಸಬೇಕಾದದ್ದು, ವಸಿಷ್ಠನು ಸರಸ್ವತಿಗೆ ಹೇಳಿರುವ 'ವಾಣೀ' ಎಂಬ ಸರಸ್ವತಿಯ ಸ್ವರೂಪವನ್ನು. ಇಲ್ಲಿ ಉಕ್ತವಾಗಿರುವ ವಾಣೀ ಎಂಬ ಹೆಸರು, ಅಷ್ಟು ಹೊತ್ತಿಗೆ ಸರಸ್ವತಿಯು ವಾಗ್ದೇವತೆಯಾಗಿ ರೂಪಗೊಂಡಿರುವುದನ್ನು ತೋರಿಸುತ್ತದೆ.

ನದಿದೇವತೆ ಸರಸ್ವತೀ, ಸ್ತ್ರೀರೂಪವನ್ನು ಧರಿಸಿದ ವಿವರಗಳನ್ನು ಹೀಗೆ ಸಂಗ್ರಹಿಸಬಹುದು: ಸರಸ್ವತೀ ನದಿಯ ತೀರದಲ್ಲಿ ದಧೀಚಿ ಎಂಬ ಮುನಿಯು, ಇಂದ್ರನು ಕಳುಹಿಸಿದ್ದ ಆಲಂಬುಷೆ ಎಂಬ ಅಪ್ಸರೆಯನ್ನು ನೋಡಿದಾಗ, ಆತನ ವೀರ್ಯ ಜಾರಿ ಸರಸ್ವತೀ ನದಿಯಲ್ಲಿ ಬೀಳುತ್ತದೆ. ತಕ್ಷಣ ಸರಸ್ವತೀ ಆ ವೀರ್ಯವನ್ನು ರಕ್ಷಿಸಲು ಸ್ತ್ರೀಯಾಗಿ ಗರ್ಭಧರಿಸುತ್ತಾಳೆ. ಅದರಿಂದ ಹುಟ್ಟಿದ ಮಗನನ್ನು ದಧೀಚಿಗೆ ಕೊಟ್ಟು ಅವನಿಂದ ಸೇವಿತಳಾಗುತ್ತಾಳೆ. 'ಬ್ರಹ್ಮಸರಸ್ಸಿನಿಂದ ಹುಟ್ಟಿದ ಸರಸ್ವತಿಯು ನದಿಗಳಲ್ಲಿ ಶ್ರೇಷ್ಠಳು. ಅವಳ ಗರ್ಭದಿಂದ ಉದಯಿಸಿದ ಮಗ ಸಾರಸ್ವತನೆಂಬ ಹೆಸರಿನಿಂದಲೇ ಪ್ರಖ್ಯಾತನಾಗುತ್ತಾನೆ' ಎಂಬುದು ದಧೀಚಿಯ ಸ್ತುತಿಯ ಸಾರಾಂಶ. ಸರಸ್ವತಿಯಿಂದ ಪೋಷಿಸಲ್ಪಟ್ಟ ಸಾರಸ್ವತನು ಶ್ರೇಷ್ಠಮುನಿಯಾಗಿ ಬೆಳೆಯುತ್ತಾನೆ. ಸಾರಸ್ವತನು ಹನ್ನೆರಡು ವರ್ಷಗಳ ದೀರ್ಘ ಬರಗಾಲದಲ್ಲಿ ವೇದಾಧ್ಯಯನ ಮಾಡುವ ಬ್ರಾಹ್ಮಣರೇ ಇಲ್ಲವಾದಾಗ, ತಾಯಿ ಸರಸ್ವತಿಯು ಕೊಡುತ್ತಿದ್ದ ಮೀನುಗಳನ್ನು ತಿಂದುಕೊಂಡು ವೇದಾಧ್ಯಯನ ಮಾಡಿ, ಬರಗಾಲದ ನಂತರ ಬಂದ ಬ್ರಾಹ್ಮಣರಿಗೆ ಅದನ್ನು ಕಲಿಸಿದನು. ಆ ಜಾಗವೇ ಸಾರಸ್ವತ ತೀರ್ಥ ಎಂದು ಹೆಸರಾಯಿತು.

ಈ ಕಥೆಯಿಂದ, ಸರಸ್ವತಿಯು ನದಿದೇವತೆಯಾಗಿ ಸ್ತ್ರೀರೂಪ ಧರಿಸಿದ್ದಕ್ಕೆ ಕಾರಣಗಳನ್ನು ಕಂಡುಕೊಳ್ಳಬಹುದು. ದಧೀಚಿಯ ವೀರ್ಯದಿಂದ ಉತ್ಪನ್ನವಾದ ಮಗುವಿಗೆ ತಾಯಿಯಾಗುವ ಮೂಲಕ ಸರಸ್ವತಿಯು, ವೇದಗಳ ಅಂಬಿತಮೆ ಎಂಬ ವಿಶೇಷಣವನ್ನು ಅರ್ಥಪೂರ್ಣಗೊಳಿಸಿದ್ದಾಳೆ ಎನ್ನಬಹುದು.

ತಾರ್ಕ್ಷ್ಯಮುನಿ ಎಂಬುವವನು, ಪ್ರಪಂಚದಲ್ಲಿ ಮಾನವನ ಕರ್ತವ್ಯಗಳೇನು? ಸ್ವಧರ್ಮಕ್ಕೆ ಚ್ಯುತಿಯಾಗದಂತೆ ಹೇಗೆ ನಡೆದುಕೊಳ್ಳಬೇಕು? ಅಗ್ನಿಹೋತ್ರವನ್ನು ಹೇಗೆ ಮಾಡಬೇಕು? ದೇವತೆಗಳನ್ನು ಹೇಗೆ ಪೂಜಿಸಬೇಕು? ಎಂದು ಮುಂತಾದ ಹಲವಾರು ಪ್ರಶ್ನೆಗಳಿಗೆ ಸರಸ್ವತಿಯು ವಿವರವಾಗಿ ಉತ್ತರವನ್ನು ನೀಡುತ್ತಾಳೆ.[237] ಆದರೆ ಇಲ್ಲಿ ಸರಸ್ವತಿಯು ವಾಗ್ದೇವಿಯೋ ನದಿದೇವತೆಯೋ ಸ್ಪಷ್ಟವಾಗುವುದಿಲ್ಲ. ಆದರೆ ತಾರ್ಕ್ಷ್ಯಮನಿಯು ಎತ್ತಿದ ಸಮಸ್ಯೆಗಳಿಗೆ ಸರಸ್ವತಿಯು ಕೊಟ್ಟಿರುವ

237. ಶ್ರೀಮನ್ಮಹಾಭಾರತ (ವ್ಯಾಸಭಾರತದ ಕನ್ನಡ ಸರಳಾನುವಾದ), ವನಪರ್ವ, ಸಂ. 6, ಪು.3159–3172

ಜ್ಞಾನಪೂರ್ಣವಾದ ವಿವರಣೆಯನ್ನು ಗಮನಿಸಿದರೆ ಅವಳು ಜ್ಞಾನದೇವತೆಯಾಗಿಯೇ ಪ್ರಕಟವಾಗಿದ್ದಾಳೆ ಎನ್ನಬಹುದು.

ಸರಸ್ವತಿಗೆ ಸಾವಿತ್ರಿ ಎಂಬ ಹೆಸರೂ ಇದೆ. ಶಾಂತಿಪರ್ವದಲ್ಲಿ ಸಾವಿತ್ರಿಯು ವೇದಮಾತೆಯಾಗಿ ಪ್ರಕಟವಾಗಿ ತಪಸ್ವಿಯೊಬ್ಬನಿಗೆ ವರವನ್ನು ಕೊಡುತ್ತಾಳೆ. ಆ ತಪಸ್ವಿ ಕೇಳುವ ಮತ್ತು ಸಾವಿತ್ರಿ ಕೊಡುವ ವರವು ಮನಸ್ಸು ಮತ್ತು ಬುದ್ಧಿಗೆ ಸಂಬಂಧಿಸಿದ್ದಾಗಿದೆ.[238] ಸಾವಿತ್ರಿಯನ್ನು ವೇದಮಾತೆ ಎಂದೂ ಕರೆಯಲಾಗಿದೆ.

ಮಹಾಭಾರತದಲ್ಲಿ ಸರಸ್ವತಿಯು ಮುಖ್ಯವಾಗಿ ನದಿದೇವತೆಯಾಗಿಯೇ ಉಲ್ಲೇಖಗೊಂಡಿದ್ದಾಳೆ. ದಧೀಚಿ ಮತ್ತು ಸಾರಸ್ವತರ ಪ್ರಸಂಗಗಳು ಮುಂದೆ ಬಾಣ ಮೊದಲಾದ ಕವಿಗಳಿಗೆ ಸರಸ್ವತಿಯ ವಿಚಾರದಲ್ಲಿ ತಮ್ಮ ಕಲ್ಪನೆಯನ್ನು ವಿಸ್ತರಿಸಿಕೊಳ್ಳಲು ಕಾರಣವಾಗಿವೆ. ಮಹಾಭಾರತದ ಪ್ರಾರಂಭದ ಒಂದು ಶ್ಲೋಕದಲ್ಲಿ (ಪ್ರಕ್ಷಿಪ್ತ!?) ಮಾತ್ರ ಸರಸ್ವತಿಯು ಕಾವ್ಯದೇವತೆಯಾಗಿ ಪ್ರಕಟವಾಗಿದ್ದಾಳೆ.

2.3.5. ಪುರಾಣಗಳು

ವೇದ, ವೇದೋತ್ತರ ರಚನೆಗಳಲ್ಲಿ ನದೀ ದೇವತೆಯಾಗಿ, ವಾಗ್ದೇವತೆಯಾಗಿ ಇರುವ ಸರಸ್ವತಿಯು ನಂತರದಲ್ಲಿ ಬಂದ ಸಾಹಿತ್ಯದಲ್ಲಿ, ಬಹುಶಃ ಭಾರತದ ಎಲ್ಲಾ ಭಾಷೆಗಳ ಸಾಹಿತ್ಯದಲ್ಲೂ ಸ್ತುತಿಗೊಂಡಿದ್ದಾಳೆ. ವೇದೋತ್ತರ ರಚನೆಗಳಲ್ಲಿ ಜನರಂಜಕವಾದ ಪುರಾಣಗಳ ಪಾತ್ರ ಮಹತ್ವದ್ದು. ಐತಿಹಾಸಿಕ ಅಧ್ಯಯನದ ದೃಷ್ಟಿಯಿಂದ ಪುರಾಣಗಳು ಪ್ರಾಮಾಣಿಕ ಆಕರಗಳೇನೂ ಅಲ್ಲ. ಪುರಾಣಗಳು ರಚನೆಗೊಂಡು ಹೆಚ್ಚೆಚ್ಚು ಜನಪ್ರಿಯವಾದ ಮೇಲೆ ರೂಪಿತಗೊಂಡಿರಬಹುದಾದ ಸಾಂಸ್ಕೃತಿಕ ಇತಿಹಾಸವನ್ನು ಅರಿಯಬಯಸುವ ಸಂಶೋಧಕ ಪುರಾಣಗಳನ್ನು ಕಡೆಗಣಿಸುವಂತಿಲ್ಲ. ಪುರಾಣಗಳು ಐತಿಹಾಸಿಕ ಅಕರಗಳಲ್ಲ ಎಂಬ ವಿಚಾರ ಮಾನ್ಯವಾದದ್ದೇ ಆಗಿದೆ. ಪುರಾಣಗಳು ಓದುವುದಕ್ಕೆ ಮಾತ್ರ ಎಂಬ ಅಭಿಪ್ರಾಯವೂ ಇದೆ. ಪುರಾಣಗಳಲ್ಲಿ ಐತಿಹಾಸಿಕ ಅಂಶಗಳು ಇಲ್ಲದೆಯೂ ಇಲ್ಲ. ಪುರಾಣಗಳು ಅವುಗಳ ರಚನೆಯ ನಂತರದಲ್ಲಿ ಭಾರತೀಯ ಸಮಾಜದಲ್ಲಿ ಬೀರಿದ ಪ್ರಭಾವ ಕಡಿಮೆಯೇನಲ್ಲ. ವೇದ ಮತ್ತು ಉಪನಿಷತ್ತುಗಳು ಕೇವಲ ದೇವರ ಮತ್ತು ಪಂಡಿತರ ನಡುವಿನ ವಿಚಾರಗಳಾಗಿದ್ದವು. ಆದರೆ ಪುರಾಣಗಳು ಸಾಮಾನ್ಯ ಜನರಿಗೂ ಕೇಳಲು ಓದಲು ಲಭ್ಯವಿದ್ದಂತಹವು. ಜನರು ಅವುಗಳಲ್ಲಿರುವ ವಿಚಾರಗಳನ್ನು ಸತ್ಯವೆಂದು ನಂಬಿ ಆಚರಣೆಗೆ ಅಳವಡಿಸಿಕೊಂಡಿರಬಹುದು. ಆದರೂ ಪುರಾಣಗಳನ್ನು ಐತಿಹಾಸಿಕ ಆಕರಗಳಾಗಿ ಸ್ವೀಕರಿಸುವಾಗ ಎಚ್ಚರದ ಅಗತ್ಯವಿದೆ.

---

238. ಶ್ರೀಮನ್ಮಹಾಭಾರತ (ವ್ಯಾಸಭಾರತದ ಕನ್ನಡ ಸರಳಾನುವಾದ), ಶಾಂತಿಪರ್ವ, ಸಂ. 24, ಪು.1765–1769

ಸರಸ್ವತಿಯು ಪುರಾಣಗಳಲ್ಲಿ ನಾನಾ ಸ್ವರೂಪಗಳಲ್ಲಿ ಸ್ತುತಿಗೊಂಡಿದ್ದಾಳೆ. ಅಷ್ಟಾದಶ ಪುರಾಣಗಳ ಪೈಕಿ, ಹತ್ತು ಪುರಾಣಗಳಲ್ಲಿ ಮಾತ್ರ ಸರಸ್ವತಿಯ ಉಲ್ಲೇಖ ದೊರೆಯುತ್ತದೆ.[239] ಬ್ರಹ್ಮಾಂಡಪುರಾಣ ಮತ್ತು ವಿಷ್ಣುಧರ್ಮೋತ್ತರಪುರಾಣಗಳಲ್ಲೂ ಸರಸ್ವತಿಯ ವಿಚಾರಗಳಿವೆ. ಇವುಗಳಲ್ಲದೆ ಬೇರೆ ಪುರಾಣಗಳಲ್ಲಿ ಮತ್ತು ಉಪಪುರಾಣಗಳಲ್ಲಿ ಸಾಂದರ್ಭಿಕವಾಗಿ ಸರಸ್ವತಿಯ ಉಲ್ಲೇಖಗಳು ಬಂದಿರುತ್ತವೆ. ಅದು ನದೀ ದೇವತೆಯಾಗಿರಬಹುದು, ವಾಗ್ದೇವಿ ಅಥವಾ ಜ್ಞಾನದೇವತೆಯಾಗಿರಬಹುದು. ಇಲ್ಲವೇ ಎರಡೂ ಆಗಿರಬಹುದು. ಪುರಾಣಗಳಲ್ಲಿ ಬಂದಿರುವ ವಿಚಾರವು ಒಂದೇ ತೆರನಾಗಿರದೆ, ಸರಸ್ವತಿಯ ಮೂಲ, ವಿಕಾಸ, ಸ್ವರೂಪ ಮುಂತಾದವುಗಳ ಬಗ್ಗೆ ಅಧ್ಯಯನ ಮಾಡುವ ಸಂಶೋಧಕರಿಗೆ ಗೊಂದಲವನ್ನುಂಟುಮಾಡುವಂತಿವೆ. ಹೀಗಾಗಿ ಎಲ್ಲ ವಿಚಾರಗಳನ್ನು ಒಂದು ಕ್ರಮವಾಗಿ ಜೋಡಿಸುವುದಾಗಲೀ, ಒಂದಕ್ಕೊಂದು ಸಂಬಂಧ ಕಲ್ಪಿಸುವುದಾಗಲೀ ಕಷ್ಟಸಾಧ್ಯ. ಮೊದಲಿಗೆ ಒಂದೊಂದು ಪುರಾಣದಲ್ಲಿಯೂ ದೊರಕಬಹುದಾದ ಸರಸ್ವತಿಯ ವಿಚಾರಗಳನ್ನು ಗ್ರಹಿಸಲಾಗಿದೆ. ನಂತರ, ಪುರಾಣಗಳಲ್ಲಿನ ಸರಸ್ವತಿಯ ಸ್ವರೂಪವನ್ನು ಸ್ಥೂಲವಾಗಿಯಾದರೂ ಅರಿಯುವ ಪ್ರಯತ್ನ ಮಾಡಲಾಗಿದೆ.

2.3.5.1. ಪದ್ಮಪುರಾಣ

'ಪದ್ಮಪುರಾಣ'ದಲ್ಲಿ ಸರಸ್ವತಿಯು ನದೀ ದೇವತೆಯಾಗಿ ಕಾಣಿಸಿಕೊಳ್ಳುತ್ತಾಳೆ.[240] ಪುಷ್ಕರದ ಬಳಿ ಸರಸ್ವತಿಯು ಸುಪ್ರಭಾ, ಕಾಂಚನಾ, ಪ್ರಾಚೀ, ನಂದಾ ಮತ್ತು ವಿಶಾಲಕಾ ಎಂದು ಐದು ಭಾಗಗಳಾಗಿ ಹರಿಯುವಳೆಂದು, ಇವುಗಳ ದಂಡೆಯ ಮೇಲೆ ಹಲವಾರು ಪವಿತ್ರ ಕ್ಷೇತ್ರಗಳಿದ್ದುವೆಂದು ಈ ಪುರಾಣ ಹೇಳುತ್ತದೆ. 'ವಿಷ್ಣು ಮೊದಲಾದ ದೇವತೆಗಳು, ಪವಿತ್ರಾಗ್ನಿಯನ್ನು ಪುಷ್ಕರದಿಂದ ಕೊಂಡೊಯ್ದು ಲವಣಸಾಗರದಲ್ಲಿ ವಿಸರ್ಜಿಸಲು ಸರಸ್ವತಿಯನ್ನು ಕೇಳಿಕೊಳ್ಳುತ್ತಾರೆ. ಅದಕ್ಕೆ ಸರಸ್ವತಿಯು ತನ್ನ ತಂದೆ ಬ್ರಹ್ಮನ ಅನುಮತಿ ಬೇಕೆಂದು ಹೇಳುತ್ತಾಳೆ. ದೇವತೆಗಳ ಕೋರಿಕೆಯ ಮೇಲೆ ಬ್ರಹ್ಮನು, ಪುಷ್ಕರ ಪ್ರದೇಶವನ್ನು ಬಿಡಲು ಇಷ್ಟವಿರದ ಸರಸ್ವತಿಯನ್ನು ತನ್ನ ತೊಡೆಯಮೇಲೆ ಕೂರಿಸಿಕೊಂಡು ಒಪ್ಪಿಸುತ್ತಾನೆ. ದೇವತೆಗಳು ಅವಳನ್ನು ಪ್ರಾರ್ಥಿಸಿ ಅರ್ಪಿಸಿದ ಅಗ್ನಿಯನ್ನು ತನ್ನ ಸಹವರ್ತಿಗಳಾದ ಗಂಗಾ ಯಮುನ ಗಾಯತ್ರಿ ಮತ್ತು ಸಾವಿತ್ರಿಯರೊಂದಿಗೆ ತಾನೂ ನದಿಯಾಗಿ ಹರಿದು, ಲವಣಸಾಗರಕ್ಕೆ ಸೇರಿಸುತ್ತಾಳೆ' ಎಂಬ ಕಥೆಯೂ ಇದೆ.

---

239. Sarasvati : A study on her Concept and Iconography by Kanailal Bhattacharyya, P.43
240. ಪದ್ಮ ಪುರಾಣ : 221 – 111 ರಿಂದ 250

'ಪದ್ಮಪುರಾಣ'ದ 'ಸೃಷ್ಟಿಕಾಂಡ'ದಲ್ಲಿ[241] ರುದ್ರನು ಗಾಯತ್ರಿಯನ್ನು ವೇದಮಾತೆಯೆಂದು ಕರೆದಿರುವುದಲ್ಲದೆ, 'ದುರ್ಗಾತಾರಿಣೀ' ಮತ್ತು 'ವಾಣೀಸಪ್ತವಿಧಾ' 'ಪುಣ್ಯಜಾಲಾ' ಎಂದೂ ಹೊಗಳಿದ್ದಾನೆ. ಗಾಯತ್ರಿ ಸರಸ್ವತಿಯ ಮತ್ತೊಂದು ಹೆಸರು. ಶ್ವೇತವರ್ಣೆಯಾದ ಆಕೆ ಕೈಗಳಲ್ಲಿ ಶಂಖ ಮತ್ತು ಬೆಳ್ದಾವರೆಯನ್ನು ಹಿಡಿದು ಶ್ವೇತವಸ್ತ್ರವನ್ನು ಧರಿಸಿರುತ್ತಾಳೆ. ಸರಸ್ವತಿಗೆ ಬ್ರಹ್ಮನಿಂದಲೇ ಸೃಷ್ಟಿಯಾದ ಲಕ್ಷ್ಮಿ, ಮರುದ್ವತೀ, ಸಾಧ್ಯಾ ಮತ್ತು ವಿಶ್ವೇಶಾ ಎಂಬ ನಾಲ್ಕು ಜನ ಸಹಾಯಕಿಯರು[242] ಎಂಬುದಾಗಿ ತಿಳಿಯುತ್ತದೆ.

'ಪದ್ಮಪುರಾಣ'ದ ರಚನೆಯ ಕಾಲಕ್ಕಾಗಲೇ ಅಜ್ಮೇರ್ ಬಳಿಯ ಪುಷ್ಕರದ ಹತ್ತಿರದ ಮರುಭೂಮಿಯಲ್ಲಿ ಸರಸ್ವತೀ ನದಿ ಇಂಗಿ ಹೋಗಿದ್ದಿರಬೇಕು.[243] ಪೂರ್ತಿ ಕಾಣೆಯಾಗುವ ಮೊದಲು ಅಲ್ಲಲ್ಲಿ ಹಲವಾರು ಶಾಖೆಗಳಾಗಿ ಹರಿದಿರಬೇಕು ಎಂದು ಊಹಿಸಲು ಸಾಧ್ಯವಿದೆ. ಸರಸ್ವತೀ ಬ್ರಹ್ಮನ ಮಗಳಾಗಿಯೇ ಇದ್ದು, ಆತನ ಆಣತಿಯಂತೆ ನಡೆದುಕೊಳ್ಳುತ್ತಿದ್ದಳು ಎನ್ನಬಹುದು. ಗಾಯತ್ರಿಯನ್ನು ವೇದಮಾತೆ ಎಂದು ಕರೆದಿರುವುದು, ಗಾಯತ್ರಿ ಸರಸ್ವತಿಯ ಇನ್ನೊಂದು ಸ್ವರೂಪ ಎಂಬುದನ್ನು ಸೂಚಿಸುತ್ತದೆ.

2.3.5.2. ಬ್ರಹ್ಮವೈವರ್ತಪುರಾಣ

ಈ ಪುರಾಣದಲ್ಲಿ ಸರಸ್ವತಿ ಎಂಬ ದೇವತೆಯ ಅವತಾರ, ನದಿಯಾಗಿ ಭೂಮಿಗೆ ಬಂದಿದ್ದು ಮತ್ತು ವಾಣಿಯಾಗಿ ಬ್ರಹ್ಮನನ್ನು ಆಶ್ರಯಿಸಿದ್ದು ಮೊದಲಾದ ವಿಚಾರಗಳು ಬರುತ್ತವೆ. ಈ ಪುರಾಣದ ನಾಲ್ಕನೇ ಅಧ್ಯಾಯದಲ್ಲಿ ಪ್ರಕೃತಿಯು ಸೃಷ್ಟಿಗೆ ಮನಸ್ಸು ಮಾಡಿದಾಗ ದುರ್ಗಿ, ರಾಧೆ, ಲಕ್ಷ್ಮಿ, ಸರಸ್ವತಿ ಮತ್ತು ಸಾವಿತ್ರಿ ಎಂಬ ಐದು ಸ್ವರೂಪದಲ್ಲಿ ಪ್ರಕಟವಾಗುತ್ತಾಳೆ. ಅವರಲ್ಲಿ ಸರಸ್ವತಿಯೇ ಪ್ರಧಾನಳು[244] ಎಂದಿದೆ. ದೇವಿಯ ಅವತಾರವಾದ ಸರಸ್ವತಿಯನ್ನು ಮೊದಲು ಶ್ರೀಕೃಷ್ಣನೇ ಪೂಜಿಸುತ್ತಾನೆ. ಆದರೆ ಸರಸ್ವತಿಯು ಕೃಷ್ಣನನ್ನೇ ಕಾಮಿಸುತ್ತಾಳೆ. ಕೃಷ್ಣನು ಸರಸ್ವತಿಗೆ 'ತನ್ನ ಅಂಶದವನೇ ಆದ ನಾರಾಯಣನನ್ನು ವರಿಸು ಎಂದು ಹೇಳಿ ಕಳಿಸಿಕೊಡುತ್ತಾನೆ[245] ಎಂದೂ ಇದೆ. 'ಲಕ್ಷ್ಮಿ, ಸರಸ್ವತಿ ಮತ್ತು ಗಂಗೆ ಮೂವರೂ ನಾರಾಯಣನ ಪತ್ನಿಯರು. ಒಮ್ಮೆ ಗಂಗೆಯು ಉಳಿದವರಿಬ್ಬರ ಎದುರಿನಲ್ಲೇ ನಾರಾಯಣನನ್ನು ಕಾಮಾಸಕ್ತಿಯಿಂದ ನೋಡುತ್ತಾಳೆ. ಆಗ ಅದನ್ನು ಸಹಿಸದ ಸರಸ್ವತಿಯು ಭೂಮಿಯಲ್ಲಿ ನದಿಯಾಗಿ ಹುಟ್ಟುವಂತೆ ಗಂಗೆಗೆ ಶಾಪ ಕೊಡುತ್ತಾಳೆ. ಗಂಗೆಯೂ ಸರಸ್ವತಿಗೆ, ನೀನೂ ನದಿಯಾಗಿ ಹುಟ್ಟು ಎಂದು

---

241. ಪದ್ಮ ಪುರಾಣ : ಅಧ್ಯಾಯ 16, ಶ್ಲೋಕ – 306 ರಿಂದ 312
242. ಪದ್ಮ ಪುರಾಣ : ಅಧ್ಯಾಯ 5, ಶ್ಲೋಕ – 37, 79 ರಿಂದ 80
243. Kanailal Bhattacharyya: Sarasvati - A study on her Concept and Iconography p.54
244. ಬ್ರಹ್ಮವೈವರ್ತಪುರಾಣ, 4. 4
245. ಬ್ರಹ್ಮವೈವರ್ತಪುರಾಣ, 4. 11–28

ಶಾಪ ಕೊಡುತ್ತಾಳೆ. ಇವರಿಬ್ಬರ ಮಧ್ಯೆ ಬಂದ ಲಕ್ಷ್ಮಿಯೂ ನದಿಯಾಗಿ ಹುಟ್ಟುವಂತೆ ಶಾಪಕ್ಕೆ ಗುರಿಯಾಗಬೇಕಾಗುತ್ತದೆ. ಕೊನೆಗೆ ಲಕ್ಷ್ಮಿಯು ಪ್ರಾರ್ಥಿಸಿದ್ದರಿಂದ ನಾರಾಯಣನು, ನಿಮ್ಮ ನಿಮ್ಮ ಅಂಶದಿಂದ ಭಾರತದಲ್ಲಿ ನದಿಗಳಾಗಿ ಹುಟ್ಟಿದರೂ ಪೂರ್ಣಾಂಶದಲ್ಲಿ ನನ್ನಲ್ಲಿಯೇ ಇರುತ್ತೀರಿ. ಸರಸ್ವತೀ ನದಿಯಾಗಿ ಹುಟ್ಟುವ ಸರಸ್ವತಿಯು, ಅರ್ಧಾಂಶದಿಂದ ಬ್ರಹ್ಮನ ಪತ್ನಿಯಾಗಿಯೂ ಇರುತ್ತಾಳೆ. ಗಂಗಾನದಿಯಾಗಿ ಗಂಗೆಯು ಅರ್ಧಾಂಶದಿಂದ ಶಿವನ ಪತ್ನಿಯಾಗಿ ಇರುತ್ತಾಳೆ. ಪದ್ಮಾವತಿ ನದಿಯಾಗಿ ಹುಟ್ಟುವ ಲಕ್ಷ್ಮಿಯು ಅರ್ಧಾಂಶದಿಂದ ತುಳಸಿ ಗಿಡವಾಗಿ ಇರುತ್ತಾಳೆ ಎಂದು ಎಲ್ಲರನ್ನೂ ಸಮಾಧಾನ ಪಡಿಸುತ್ತಾನೆ' ಎಂಬ ಕಥೆಯೂ ಇದೆ. ಭಾರತದಲ್ಲಿ ಹುಟ್ಟಿದ ಸರಸ್ವತಿಗೆ ಭಾರತಿ ಎಂಬ ಹೆಸರೂ ಇದೆ.[246]

2.3.5.3. ದೇವೀ ಭಾಗವತ ಮಹಾಪುರಾಣ

ಈ ಪುರಾಣದಲ್ಲಿ ಸರಸ್ವತಿಯ ಬಗ್ಗೆ ಅನೇಕ ಗೊಂದಲಮಯವಾದ ವಿಚಾರಗಳು ಪ್ರಾಪ್ತವಾಗುತ್ತವೆ. ಅವು ಹೀಗಿವೆ: ದುರ್ಗಾ, ರಾಧಾ, ಲಕ್ಷ್ಮಿ, ಸರಸ್ವತಿ ಮತ್ತು ಸಾವಿತ್ರಿ ಐವರು ಪ್ರಕೃತಿಮಾತೆಯರು.[247] ಮತಿ, ಬುದ್ಧಿ, ವಿದ್ಯೆ ಮತ್ತು ಜ್ಞಾನಕ್ಕೆ ಆಶ್ರಯವಾದವಳು, ಸಮಸ್ತ ವಿದ್ಯಾಸ್ವರೂಪಳು, ಮಾನವರಿಗೆ ವಿವೇಚನೆ, ಕವಿತಾ, ಜ್ಞಾಪಕ, ವಿಷಯಸ್ಫುರಣ ಮತ್ತು ಗ್ರಂಥಧಾರಣ ಸಾಮರ್ಥ್ಯವನ್ನು ಕೊಡುವವಳು ಸರಸ್ವತಿ.[248] ಈಕೆ ಸಂಗೀತಶಾಸ್ತ್ರಕ್ಕೆ ಕಾರಣಳಾಗಿರುವವಳು.[249] ಕೃಷ್ಣನ ಪತ್ನಿಯಾದ ರಾಧೆಯ ನಾಲಿಗೆಯ ತುದಿಯಿಂದ ಮನೋಹರಳಾದ, ಬಿಳಿಯ ವಸ್ತ್ರವನ್ನೂ, ಸರ್ವಾಭರಣಗಳನ್ನೂ ಧರಿಸಿ, ಪುಸ್ತಕ ವೀಣೆಗಳನ್ನು ಕೈಗಳಲ್ಲಿ ಹಿಡಿದು ಹುಟ್ಟಿದ ಕನ್ಯೆಯೇ ಸರಸ್ವತಿ. ಕೃಷ್ಣನ ಆದೇಶದಂತೆ, ಆತನ ಎಡಭಾಗದಿಂದ ಹುಟ್ಟಿದ ಚತುರ್ಭುಜನಾದ ನಾರಾಯಣನನ್ನು, ಸರಸ್ವತಿ–ಲಕ್ಷ್ಮಿಯರಿಬ್ಬರೂ ಮದುವೆಯಾಗಿ ವೈಕುಂಠಕ್ಕೆ ಹೋಗಿ ನೆಲೆಸುತ್ತಾರೆ.[250] ರಾಧೆಯು ತನಗೆ ಹುಟ್ಟಿದ ದೊಡ್ಡದಾದ ಮಗುವನ್ನು ಕಂಡು ಭಯಪಟ್ಟು ನೀರಿಗೆ ಹಾಕುತ್ತಾಳೆ. ಆಗ ಕೃಷ್ಣ ಅವಳಿಗೆ ನಿನ್ನ ಅಂಶದಿಂದ ಹುಟ್ಟುವ ಯಾವ ಸ್ತ್ರೀಯರಿಗೂ ಮಕ್ಕಳಾಗದಿರಲಿ ಎಂದು ಶಾಪ ಕೊಡುತ್ತಾನೆ. ಆದ್ದರಿಂದ ಸರಸ್ವತಿ ಮತ್ತು ಲಕ್ಷ್ಮಿಯರಿಬ್ಬರಿಗೂ ಮಕ್ಕಳಾಗುವುದಿಲ್ಲ.[251] ರಾಧೆಯ ನಾಲಗೆಯ ತುದಿಯಿಂದ ಹುಟ್ಟಿದ ಸರಸ್ವತಿಯನ್ನು ಕೃಷ್ಣ ಮೊದಲು ಪೂಜಿಸುತ್ತಾನೆ. ಸರಸ್ವತಿಯು ಕೃಷ್ಣನನ್ನೇ ಕಾಮಿಸುತ್ತಾಳೆ. ಆದರೆ ಕೃಷ್ಣ ಅವಳಿಗೆ ಬುದ್ಧಿ ಹೇಳಿ ನಾರಾಯಣನೊಂದಿಗೆ ಮದುವೆ ಮಾಡಿಸಿ ವೈಕುಂಠಕ್ಕೆ ಕಳುಹಿಸುತ್ತಾನೆ.[252]

---

246. ಬ್ರಹ್ಮವೈವರ್ತಪುರಾಣ, 6. 17–89
247. ದೇವೀ ಭಾಗವತ ಮಹಾಪುರಾಣ 9.1.1; 9.4.4; 9.6.68
248. ದೇವೀ ಭಾಗವತ ಮಹಾಪುರಾಣ 9.1.29–30
249. ದೇವೀ ಭಾಗವತ ಮಹಾಪುರಾಣ 9.1.32
250. ದೇವೀ ಭಾಗವತ ಮಹಾಪುರಾಣ 9.2.52–58; 9.1.33
251. ದೇವೀ ಭಾಗವತ ಮಹಾಪುರಾಣ 9.1.47–49
252. ದೇವೀ ಭಾಗವತ ಮಹಾಪುರಾಣ 9.4.9–25

ಇಲ್ಲಿಂದ ಮುಂದಕ್ಕೆ 'ಬ್ರಹ್ಮವೈವರ್ತಪುರಾಣ'ದ[253] ಕಥೆಯೇ ನಿರೂಪಿತವಾಗಿದೆ.[254] ಒಂದು ಕಡೆ ಮಾತ್ರ ಸರಸ್ವತಿಯು ನದಿಯಾಗಿ ವರ್ಣಿತಗೊಂಡಿದ್ದಾಳೆ.[255]

ಬಹುಶಃ ರಾಧಾ-ಕೃಷ್ಣಪಾರಮ್ಯ ಪ್ರಬಲವಾದ ನಂತರದ ರಚನೆ ಇದಾಗಿರಬಹುದು. ಸರಸ್ವತಿಯನ್ನು ವಿಷ್ಣುವಿನ ಪತ್ನಿ ಎಂದು ಚಿತ್ರಿಸಿರುವ ಈ ಕಥೆಯ ಪರಿಣಾಮದಿಂದಾಗಿ, ಉತ್ತರಭಾರತ ಮತ್ತು ಬಾಂಗ್ಲಾದೇಶದಲ್ಲಿ ಸಿಗುವ ಕೆಲವು ವಿಷ್ಣುವಿನ ಶಿಲ್ಪಗಳ ಇಕ್ಕೆಲಗಳಲ್ಲಿ ಲಕ್ಷ್ಮಿ ಮತ್ತು ಸರಸ್ವತಿಯರು ಇರುವುದನ್ನು ಗಮನಿಸಬಹುದು.

2.3.5.4. ಮಾರ್ಕಂಡೇಯ ಪುರಾಣ

'ಮಾರ್ಕಂಡೇಯ ಪುರಾಣ'ದ[256] 4, 24 ಮತ್ತು 72 ನೇ ಅಧ್ಯಾಯಗಳಲ್ಲಿ ಹಾಗೂ 'ದೇವೀಮಹಾತ್ಮೆ' ಭಾಗಗಳಲ್ಲಿ ಅಲ್ಲಲ್ಲಿ ಸರಸ್ವತೀ ಉಲ್ಲೇಖಗಳಿವೆ. ಅವುಗಳನ್ನುಹೀಗೆ ಸಂಗ್ರಹಿಸಬಹುದು:

'ದೇವಿಮಹಾತ್ಮೆ'ಯ ಭಾಗದಲ್ಲಿ ಮಹಾಲಕ್ಷ್ಮಿ ಸರ್ವೋಚ್ಚದೇವತೆ. ಮಹಾಲಕ್ಷ್ಮಿಯ ಸತ್ವಗುಣ ಮಹಾಸರಸ್ವತಿಯಾಗಿಯೂ, ರಾಜಸಗುಣ ಮಹಾಲಕ್ಷ್ಮಿಯಾಗಿಯೂ ಮತ್ತು ತಾಮಸಗುಣ ಮಹಾಕಾಳಿಯಾಗಿಯೂ ರೂಪಗೊಳ್ಳುತ್ತದೆ. ನಂತರ ಸರಸ್ವತಿಯಿಂದ ಗೌರಿ-ವಿಷ್ಣು, ಲಕ್ಷ್ಮಿಯಿಂದ ಲಕ್ಷ್ಮಿ-ಹಿರಣ್ಯಗರ್ಭ(ಬ್ರಹ್ಮ) ಹಾಗೂ ಮಹಾಲಕ್ಷ್ಮಿಯಿಂದ ಸರಸ್ವತಿ-ರುದ್ರ ಉತ್ಪನ್ನರಾಗುತ್ತಾರೆ. ಕೊನೆಯಲ್ಲಿ, ಜಗದ್ಧಾತ್ರಿಯಾದ ಮಹಾಲಕ್ಷ್ಮಿಯ ಆದೇಶದಂತೆ ವಿಷ್ಣು ಲಕ್ಷ್ಮಿಯನ್ನು, ಬ್ರಹ್ಮ ಸರಸ್ವತಿಯನ್ನು ಮತ್ತು ರುದ್ರ ಗೌರಿಯನ್ನು ತಮ್ಮ ತಮ್ಮ ಶಕ್ತಿಭಾಗವನ್ನಾಗಿ ಸ್ವೀಕರಿಸುತ್ತಾರೆ.

ನಾಗದೊರೆ ಅಶ್ವತಾರ ಎಂಬುವವನು ಸರಸ್ವತಿಯನ್ನು ಮಾತ್ರಾತ್ರಯಂ, ಲೋಕತ್ರಯಂ ಮತ್ತು ಪಾವಕತ್ರಯಂ ಎಂದು ಸ್ತುತಿಸಿರುವುದೂ ಇದೆ. ಪಾವಕತ್ರಯಂ ಎಂಬುದು ನದಿದೇವತೆಯನ್ನು ಸೂಚಿಸುತ್ತದೆ. ವಿಷ್ಣುಜಿಹ್ವಾಸರಸ್ವತೀ ಎಂಬ ಹೆಸರೂ ಇಲ್ಲಿ ಸರಸ್ವತಿಗೆ ಸಂದಿದೆ. ವಿಷ್ಣುವಿನ ನಾಲಗೆಯಿಂದ ಹುಟ್ಟಿದವಳು ಸರಸ್ವತಿ ಅಥವಾ ವಿಷ್ಣುವಿನ ಮಾತೇ ಸರಸ್ವತಿ ಎಂಬರ್ಥದ ಮಾತು ಇದಾಗಿದೆ.

'ದೇವೀಮಹಾತ್ಮ್ಯ'ದ 'ನಾರಾಯಣೀ-ಸ್ತುತಿ'ಯಲ್ಲಿ ದೇವಿಯು ಮಹಾಕಾಳೀ, ಮಹಾಲಕ್ಷ್ಮೀ, ಮಹಾವಿದ್ಯಾ, ಮಹಾವಾಣೀ ಭಾರತೀ, ವಾಕ್, ಬ್ರಹ್ಮಾ, ವೇದಗರ್ಭಾ ಮೊದಲಾದ ರೂಪಗಳನ್ನು ಧರಿಸಿ ರಾಕ್ಷಸರನ್ನು ಸಂಹರಿಸಿದ ವಿಚಾರಗಳಿವೆ. ಇವೆಲ್ಲವುಗಳು ಒಂದೇ ದೇವತೆಯ ವಿವಿಧ ನಾಮಗಳಾಗಿವೆಯಲ್ಲದೆ, ಹೆಚ್ಚಿನವು ಸರಸ್ವತಿಗೆ ಸಂಬಂಧಿಸಿದವುಗಳಾಗಿವೆ. ಆ ಏಕದೇವತೆ ಸರಸ್ವತಿಯೇ

---

253. ಬ್ರಹ್ಮವೈವರ್ತಪುರಾಣ, 6. 17-89
254. ದೇವೀ ಭಾಗವತ ಮಹಾಪುರಾಣ 9.6.17-67
255. ದೇವೀ ಭಾಗವತ ಮಹಾಪುರಾಣ 9.6.1-7
256. Markandeya Purana, Motilal Banarasidas Publishers, Delhi. 2004

ಆಗಿದ್ದಾಳೆ ಎಂಬ ಅಭಿಪ್ರಾಯವೂ ಇದೆ.[257] ಈ ಪುರಾಣದಲ್ಲಿ ಸರಸ್ವತಿಯ ವಿಚಾರ, ಬೇರೆ ಬೇರೆ ಕಾಲದಲ್ಲಿ ವಿವಿಧ ವಿಷಯಗಳು ಸೇರಿಕೊಂಡಿರುವುದರಿಂದ ಒಂದಕ್ಕೊಂದು ಸಂಬಂಧವಿಲ್ಲದೆ ಗೊಂದಲವಾಗಿದೆ.

2.3.5.5. ಬ್ರಹ್ಮಾಂಡಪುರಾಣ

'ಮಾರ್ಕಂಡೇಯಪುರಾಣ'ದ ಕಥೆಯೇ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ 'ಬ್ರಹ್ಮಾಂಡಪುರಾಣ'ದಲ್ಲಿಯೂ ಬಂದಿದೆ. ಸರ್ವೋಚ್ಚದೇವತೆಯಾದ ಮಹಾಲಕ್ಷ್ಮಿ ಮೂರು ಮೊಟ್ಟೆಗಳನ್ನು ಸೃಷ್ಟಿಸುತ್ತಾಳೆ. ಒಂದರಲ್ಲಿ ಬ್ರಹ್ಮನು ಲಕ್ಷ್ಮಿಯೊಂದಿಗೂ, ಎರಡನೆಯದರಲ್ಲಿ ಶಿವನು ಸರಸ್ವತಿಯೊಂದಿಗೂ, ಮೂರನೆಯದರಲ್ಲಿ ವಿಷ್ಣುವು ಅಂಬಿಕಾ (ದುರ್ಗಾ) ಜೊತೆಯಲ್ಲಿ ರೂಪ ತಾಳುತ್ತಾರೆ. ಇಲ್ಲಿಯೂ ಸರಸ್ವತಿಯು ಸಾತ್ವಿಕಗುಣಾತ್ಮಿಕೆಯಾಗಿದ್ದು[258], ಮಹಾವಿದ್ಯಾ, ಮಹಾವಾಣಿ, ಭಾರತಿ, ವಾಕ್, ಆರ್ಯಾ, ಬ್ರಾಹ್ಮಿ, ಕಾಮಧೇನು ಮೊದಲಾದ ಹೆಸರುಗಳಿಂದ ಸ್ತುತಿಗೊಂಡಿದ್ದಾಳೆ. ಬಹುತೇಕ ವಿಶೇಷಣಗಳು ಲಕ್ಷ್ಮಿ ಮತ್ತು ಅಂಬಿಕೆಯರಿಗೂ ಅನ್ವಯವಾಗಿವೆ. ಬಹುಶಃ ಏಕದೇವಿಯು ಬೇರೆಬೇರೆ ಸ್ತ್ರೀಸ್ವರೂಪಧಾರಣೆ ಮಾಡಿದ್ದರಿಂದ ವಿಶೇಷಣಗಳಲ್ಲಿ ಸಾಮ್ಯತೆ ಕಂಡುಬರುತ್ತದೆ ಎನ್ನಬಹುದು.

2.3.5.6. ವಾಮನಪುರಾಣ

ಮಾರ್ಕಂಡೇಯ ಮಹರ್ಷಿಯು ಸರಸ್ವತೀ ನದಿಯ ದಂಡೆಯಲ್ಲಿ ನೆಲೆಸಿ, ಸರಸ್ವತಿಯನ್ನು ಮತ್ತು ಅವಳ ಮಹತ್ವವನ್ನು ಸ್ತುತಿಸಿದ ವಿಚಾರಗಳು 'ವಾಮನಪುರಾಣ'ದಲ್ಲಿ ಬರುತ್ತವೆ.[259] ಇಡೀ ವಿಶ್ವದ ಒಳಿತಿಗಾಗಿ ಮಾರ್ಕಂಡೇಯನು ಸರಸ್ವತಿಯನ್ನು ಪೂಜಿಸಿ, ಸರ್ವಸೃಷ್ಟಿಗೂ ವೇದಗಳಿಗೂ ಮಾತೃಸ್ವರೂಪಳೆಂದು ಸ್ತುತಿಸಿದ್ದಾನೆ. ಇಲ್ಲಿ ನದಿಯು ದೇವತೆಯಂತೆ ಸ್ತುತಿಗೊಂಡಿದ್ದರೂ, ಶಾಶ್ವತವಾದ ವಾಕ್ ಮತ್ತು ಜ್ಞಾನ ಸರಸ್ವತಿಯಿಂದ ಸಂಯೋಜಿಸಲ್ಪಟ್ಟವು ಎಂಬ ಮಾತು ಸರಸ್ವತಿಯ ವಾಗ್ದೇವಿಯ ಸ್ವರೂಪವನ್ನು ಸೂಚಿಸುತ್ತದೆ. ಸರಸ್ವತಿಯನ್ನು 'ಮಾರ್ಕಂಡೇಯಪುರಾಣ'ದಲ್ಲಿ ಇರುವಂತೆಯೇ ಲೋಕತ್ರಯಂ, ವೇದತ್ರಯಂ, ಪಾವಕತ್ರಯಂ, ವರ್ಣತ್ರಯಂ, ಕಾಲತ್ರಯಂ ಎಂದು ಮುಂತಾಗಿ ಸ್ತುತಿಸಲಾಗಿದೆ. 'ಮಾರ್ಕಂಡೇಯಪುರಾಣ'ದಲ್ಲಿ[260] ಸರಸ್ವತಿಗೆ ಪ್ರಾಪ್ತವಾಗಿರುವ 'ಜಗದ್ಧಾತ್ರಿ ಸರಸ್ವತಿ' ಎಂಬ ಸ್ವರೂಪ ಈ ಪುರಾಣದಲ್ಲೂ ವ್ಯಕ್ತವಾಗಿದೆ. ಸರಸ್ವತೀ ನದಿಯ ದಂಡೆಯ ಮೇಲಿನ ಸ್ಥಾನುತೀರ್ಥ

---

257. Kanailal Bhattacharyya: Sarasvati : A study on her Concept and Iconography, P.45-46
258. Dr. Niranjan Ghosh: Sri Sarasvati in Indian Art and Literature, p.11
259. ವಾಮನಪುರಾಣ, ಅಧ್ಯಾಯ –33, ಶ್ಲೋಕ 7–12
260. Markandeya Purana, Chapter 23 - Motilal Banarasidas Publishers, Delhi. 2004

ಎಂಬ ಸ್ಥಳದಲ್ಲಿ ಸ್ವತಃ ಶಿವನೇ ಸರಸ್ವತಿಯನ್ನು ಲಿಂಗರೂಪದಲ್ಲಿ ಪ್ರತಿಷ್ಠಾಪಿಸಿ ಪೂಜಿಸಿದ ವಿಚಾರವೂ ಈ ಪುರಾಣದಲ್ಲಿ ಬಂದಿದೆ.[261] ಸರಸ್ವತಿಯೂ ಒಬ್ಬ ಪ್ರಮುಖ ದೇವತೆಯಾಗಿ ರೂಪಗೊಂಡಿದ್ದನ್ನು ಇದು ಸೂಚಿಸುತ್ತದೆ.

2.3.5.7. ಮತ್ಸ್ಯಪುರಾಣ

'ಮತ್ಸ್ಯಪುರಾಣ'ದ 3, 4, 66 ಮತ್ತು 171ನೇ ಅಧ್ಯಾಯಗಳಲ್ಲಿ ವಿರಳವಾಗಿ ಸರಸ್ವತಿಯ ವಿಚಾರಗಳು ಪ್ರಸ್ತಾಪವಾಗಿವೆ.[262] ಅವುಗಳನ್ನು ಕೆಳಕಂಡಂತೆ ಕ್ರೋಡೀಕರಿಸಬಹುದು. ಹಂಸವಾಹನೆಯಾದ ಸರಸ್ವತಿಯು ಚತುರ್ಭುಜಳಾಗಿದ್ದು, ವೀಣೆ, ಕಮಂಡಲು, ಅಕ್ಷಮಾಲೆ ಮತ್ತು ಪುಸ್ತಕಗಳನ್ನು ಧರಿಸಿರುತ್ತಾಳೆ. ಪಂಚಮಿಯ ದಿನಗಳಂದು ಶ್ವೇತಾಹಾರ, ಘೃತ, ಅಕ್ಷತೆ, ಕ್ಷೀರ, ಚಿನ್ನ, ಗಂಧ ಮೊದಲಾದವುಗಳಿಂದ ಪೂಜೆಗೊಳ್ಳುತ್ತಾಳೆ. ಸರಸ್ವತಿಯು ವೇದಜ್ಞಾನ, ನೃತ್ಯ, ಸಾಹಿತ್ಯ, ಧನ, ಭೂಮಿ, ಆರೋಗ್ಯ, ಬುದ್ಧಿ, ತೃಪ್ತಿ ಮೊದಲಾದವುಗಳನ್ನು ಅನುಗ್ರಹಿಸುವ ದೇವತೆಯಾಗಿದ್ದಾಳೆ.

ಸೃಷ್ಟಿಕರ್ತನಾದ ಬ್ರಹ್ಮನು ಸಕಲ ಶಾಸ್ತ್ರಗಳನ್ನೂ, ವೇದಗಳನ್ನೂ ತನ್ನ ಬಾಯಿಯಿಂದ ಸೃಷ್ಟಿಸುತ್ತಾನೆ. ಮಾರೀಚಿ, ಅತ್ರಿಯೇ ಮೊದಲಾದ ಹತ್ತು ಜನ ಮಾನಸ ಪುತ್ರರನ್ನು ಸೃಷ್ಟಿಸಿದ ನಂತರ ಶತರೂಪೆಯನ್ನು ಸೃಷ್ಟಿಸುತ್ತಾನೆ. ಶತರೂಪೆಯ ಸೌಂದರ್ಯಕ್ಕೆ ಮಾರು ಹೋದ ಬ್ರಹ್ಮ ಅವಳನ್ನು ಕಾಮಿಸಿ ನೋಡುತ್ತಾನೆ. ಬ್ರಹ್ಮನ ಕಾಮುಕದೃಷ್ಟಿಯನ್ನು ತಪ್ಪಿಸಿಕೊಳ್ಳಲು ಶತರೂಪೆಯು ಎಡಭಾಗಕ್ಕೆ ಓಡುತ್ತಾಳೆ, ಆಗ ಬ್ರಹ್ಮನಿಗೆ ಎರಡನೆಯ ತಲೆ ಮೂಡುತ್ತದೆ. ಹೀಗೆ ಶತರೂಪೆಯು ಬಲಕ್ಕೆ, ಹಿಂದಕ್ಕೆ ಓಡಿದಾಗ ಒಂದೊಂದು ತಲೆ ಮೂಡಿ ಬ್ರಹ್ಮನಿಗೆ ನಾಲ್ಕು ತಲೆಗಳಾಗುತ್ತವೆ. ಕೊನೆಯದಾಗಿ ಶತರೂಪೆಯು ಮೇಲಕ್ಕೆ ಹಾರಿದಾಗ ಬ್ರಹ್ಮನಿಗೆ ಮೇಲೊಂದು ತಲೆ ಮೂಡಿ ಪಂಚಮುಖ ಸ್ವರೂಪ ಪ್ರಾಪ್ತವಾಗುತ್ತದೆ. ಅಂತಿಮವಾಗಿ ಶತರೂಪೆಯನ್ನು ಬ್ರಹ್ಮ ವರಿಸುತ್ತಾನೆ. ಶತರೂಪೆಗೆ ಸರಸ್ವತಿ, ಗಾಯತ್ರಿ, ಸಾವಿತ್ರಿ, ಬ್ರಾಹ್ಮಿ ಮೊದಲಾದ ಹೆಸರುಗಳನ್ನೂ ಹೇಳಲಾಗಿದೆ. ಬ್ರಹ್ಮನ ಸೃಷ್ಟಿಕರ್ತನ ಸ್ವರೂಪಕ್ಕೆ ತಕ್ಕುದಲ್ಲದ ಘಟನೆಗಳಿಂದ ಈ ಪುರಾಣದ ಕಥೆ ರೂಪಗೊಂಡಿದೆ. ಇದು ಬ್ರಹ್ಮ ತಾನು ಸೃಷ್ಟಿಸಿದ ಸರಸ್ವತಿಯನ್ನು ತನ್ನ ಶಕ್ತಿಯನ್ನಾಗಿ ಸ್ವೀಕರಿಸಿದ ಜನಪ್ರಿಯ ಕಲ್ಪನೆಯ ಅತಿರಂಜಿತ ಕಥೆ. ವೈದಿಕ ಧರ್ಮವನ್ನು ಖಂಡಿಸುವವರು, ವಿರೋಧಿಸುವವರು ಇಂತಹ ಘಟನೆಗಳನ್ನು ಉಲ್ಲೇಖಿಸಿ, ಪುರಾಣಗಳನ್ನು ತಿರಸ್ಕರಿಸುವಂತೆ ಕರೆಕೊಟ್ಟಿರುವುದನ್ನು ಗಮನಿಸಬಹುದು.[263]

---

261. ವಾಮನಪುರಾಣ, ಅಧ್ಯಾಯ –40, ಶ್ಲೋಕ 4
262. Matsya Purana, Motilal Banarasidas Publishers, Delhi. 2004
263. Abraham T Kovoor (Dr.) – Gods, Demons and Spirits', Jaico Publishing House, Bombay 1990 and Puranography or Pornography, Modern Rationalist, Vol. 23 (April 1998), No. 4

2.3.5.8. ಸ್ಕಂದಪುರಾಣ

ಕಶ್ಯಪನು ಗಾಯತ್ರಿ ಮತ್ತು ಸರಸ್ವತಿಯರನ್ನು ಪ್ರಾರ್ಥಿಸಿದ ವಿಚಾರ ಹಾಗೂ ಸ್ವತಃ ಅವರಿಬ್ಬರೂ ನಾವು ಬ್ರಹ್ಮನ ಸತಿಯರೆಂದು ಪರಿಚಯಿಸಿಕೊಳ್ಳುವ ವಿಚಾರ 'ಸ್ಕಂದಪುರಾಣ'ದಲ್ಲಿ ಬರುತ್ತದೆ.[264] ನಾಗರಖಂಡದ ಅಧ್ಯಾಯ 46ರಲ್ಲಿ ವಸಿಷ್ಠನ ಮಾತಿನಂತೆ ರಾಜ ಬಲವರ್ಧನನು ಸರಸ್ವತಿಯನ್ನು ಪ್ರಾರ್ಥಿಸಿ, ತನ್ನ ಮಗ ಅಂಭೂಚಿಗೆ ಮಾತನಾಡುವ ಶಕ್ತಿಯನ್ನು ಕೊಡಿಸುತ್ತಾನೆ. ನಂತರ ಸರಸ್ವತಿಯ ಒಂದು ಮಣ್ಣಿನ ವಿಗ್ರಹವನ್ನೂ ಮಾಡಿಸುತ್ತಾನೆ. ಚತುರ್ಭುಜಳಾದ ಸರಸ್ವತಿಯು, ಕೈಗಳಲ್ಲಿ ಕಮಲ, ಅಕ್ಷಮಾಲಾ, ಕಮಂಡಲು ಮತ್ತು ಪುಸ್ತಕವನ್ನು ಧರಿಸಿರುತ್ತಾಳೆ. ಅದರಲ್ಲೇ 172ನೇ ಅಧ್ಯಾಯದಲ್ಲಿ, ವಸಿಷ್ಠನನ್ನು ಹೊತ್ತು ತರುವಂತೆ ಕೇಳಿದ ವಿಶ್ವಾಮಿತ್ರನ ಕೋರಿಕೆಯನ್ನು ಸರಸ್ವತಿಯು ತಿರಸ್ಕರಿಸಿ, ಅವನಿಂದ ರಕ್ತನದಿಯಾಗುವಂತೆ ಶಾಪ ಪಡೆದ ಕಥೆ ನಿರೂಪಿತವಾಗಿದೆ. ನಂತರ ವಸಿಷ್ಠನಿಂದಲೇ ಶಾಪವಿಮೋಚನೆಯನ್ನೂ ಪಡೆಯುತ್ತಾಳೆ. ಇದು ಮಹಾಭಾರತದ ಶಲ್ಯಪರ್ವದಲ್ಲಿಯೂ ನಿರೂಪಿತವಾಗಿರುವುದನ್ನು ಕಾಣಬಹುದು. ಈ ಪುರಾಣದ ವೈಶಿಷ್ಟ್ಯವೆಂದರೆ, ಗಾಯತ್ರೀ, ಸರಸ್ವತೀ ಮತ್ತು ಸಾವಿತ್ರೀ ಈ ಮೂವರನ್ನೂ ಬ್ರಹ್ಮನ ಸತಿಯರೆಂದು ಹೇಳಿರುವುದು. ಸರಸ್ವತಿಯ ಪ್ರತಿಮೆಯ ವಿಚಾರ ಬರುವುದು ಇದೊಂದೇ ಪುರಾಣದಲ್ಲಿ.

2.3.5.9. ಭಾಗವತಪುರಾಣ

ಜಗದಂಬಿಕೆಯು ಬ್ರಹ್ಮ ವಿಷ್ಣು ಮತ್ತು ಮಹೇಶ್ವರರನ್ನು ಸೃಷ್ಟಿಸಿದ ಮೇಲೆ, ತಾನೇ ಸರಸ್ವತೀ, ಲಕ್ಷ್ಮೀ ಮತ್ತು ಉಮಾ ಆಗಿ ಪರಿವರ್ತನೆಗೊಳ್ಳುತ್ತಾಳೆ.[265] ತ್ರಿಮೂರ್ತಿಗಳು ತಮ್ಮ ಹೆಂಡತಿಯರ ಜೊತೆಯಲ್ಲಿ ಈ ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಲಯಕರ್ತರಾಗಿ ಕೆಲಸ ನಿರ್ವಹಿಸುವಂತೆ ಆದೇಶಿಸುತ್ತಾಳೆ. ಸರಸ್ವತಿಯನ್ನೇ ಜಗದಂಬಿಕೆ ಎಂದು ಈ ಪುರಾಣದಲ್ಲಿ ಸ್ತುತಿಸಲಾಗಿದೆ. 'ವಾಮನಪುರಾಣ'[266] ಮತ್ತು 'ಮಾರ್ಕಂಡೇಯಪುರಾಣ'ಗಳಲ್ಲಿ[267] ಬಂದಿರುವ 'ಜಗದ್ಧಾತ್ರೀ ಸರಸ್ವತೀ' ಎಂಬ ಕಲ್ಪನೆ ಹೆಚ್ಚು ವಿಸ್ತೃತಗೊಂಡಂತೆ ಕಾಣುತ್ತದೆ.

2.3.5.10. ಲಿಂಗ ಪುರಾಣ

'ಲಿಂಗಪುರಾಣ'ದಲ್ಲಿ[268] ಸರಸ್ವತಿಯು, ಗಾಯತ್ರೀ ಎಂಬ ಹೆಸರಿನಲ್ಲಿ ಬ್ರಹ್ಮನ ಸತಿಯಾಗಿ ಕಾಣಿಸಿಕೊಂಡಿದ್ದಾಳೆ. 'ವಿಶ್ವಮಾತಾ' ಎಂಬ ವಿಶೇಷ ಅಭಿದಾನವೂ ಇದೆ. ಬ್ರಹ್ಮನನ್ನು 'ವಿಶ್ವರೂಪ'

---

264. ಸ್ಕಂದಪುರಾಣ – ಮಹೇಶ್ವರ ಕಾಂಡ : 41, 46 ಮತ್ತು 172
265. ಭಾಗವಾತ ಪುರಾಣ : 3 – 13 ರಿಂದ 16 ಮತ್ತು 24 ರಿಂದ 32
266. ವಾಮನಪುರಾಣ : 33
267. Markandeya Purana, Chapter 23 - Motilal Banarasidas Publishers, Delhi. 2004
268. ಲಿಂಗಪುರಾಣ: 16 ಮತ್ತು 23

ಎಂದೂ ಗಾಯತ್ರಿಯನ್ನು 'ವಿಶ್ವರೂಪಾ' ಮತ್ತು 'ವೇದಮಾತಾ' ಎಂದೂ ಸ್ತುತಿಸಲಾಗಿದೆ. ಇಲ್ಲಿ ಗಾಯಿತ್ರಿಯ ಬಣ್ಣ ಕಪ್ಪು. ಕೃಷ್ಣಾಂಗೀ, ಕೃಷ್ಣಲೋಹಿತಾ, ಕೃಷ್ಣರೂಪಾ ಮೊದಲಾದ ವಿಶೇಷಣಗಳಿಂದ ಆಕೆಯನ್ನು ಉಲ್ಲೇಖಿಸಲಾಗಿದೆ. ಆಕೆ ಬಿಳಿಯ ಶಿರವಸ್ತ್ರ ಧರಿಸಿದ್ದಾಳೆ. ಇಲ್ಲಿ ಗಾಯತ್ರಿಯನ್ನು ರುದ್ರನ ಮಗಳಾಗಿ ಚಿತ್ರಿಸಿದ್ದು 'ರುದ್ರಸುತಾ' ಎಂದೂ ಕರೆಯಲಾಗಿದೆ. 'ಬ್ರಹ್ಮವೈವರ್ತಪುರಾಣ'ದಲ್ಲಿ 'ವಿಷ್ಣುಜಿಹ್ವಾ ಸರಸ್ವತಿ' ಎಂದು ಕೃಷ್ಣಪಾರಮ್ಯವನ್ನು ಎತ್ತಿಹಿಡಿಯುವಾಗ ಕಾಣುವ ಆತುರ 'ಲಿಂಗಪುರಾಣ'ದಲ್ಲಿ 'ರುದ್ರಸುತಾ ಗಾಯತ್ರಿ' ಎಂದು ಶಿವಪಾರಮ್ಯವನ್ನು ಎತ್ತಿಹಿಡಿಯುವಾಗ ಕಾಣಿಸಿಕೊಂಡಿದೆ. ಆದರೆ 'ವಾಮನಪುರಾಣ'ದಲ್ಲಿ ಶಿವನೇ ಸರಸ್ವತಿಯನ್ನು ಲಿಂಗರೂಪದಲ್ಲಿ ಪೂಜಿಸುವ ಕಥೆಯು ಸರಸ್ವತೀಪಾರಮ್ಯವನ್ನು ಎತ್ತಿ ಹಿಡಿಯಲು ರಚಿತವಾಗಿರುವಂತೆ ತೋರುತ್ತದೆ.

2.3.5.11. ವರಾಹ ಪುರಾಣ

ಈ ಪುರಾಣದ 2ನೇ ಅಧ್ಯಾಯದಲ್ಲಿ ಸರಸ್ವತಿಯ ವಿಚಾರಗಳಿವೆ. ಇಲ್ಲಿ ಸರಸ್ವತಿಯು ವೇದಮಾತೆಯಾಗಿ, ಜ್ಞಾನದೇವತೆಯಾಗಿ ಸಾವಿತ್ರೀ ಎಂಬ ಹೆಸರಿನಲ್ಲಿ ಸ್ತುತಿಗೊಂಡಿದ್ದಾಳೆ. ಒಮ್ಮೆ ನಾರದನು ಶ್ವೇತರೂಪದ ಸರೋವರದ ದಂಡೆಯಲ್ಲಿ, ಸಾವಿತ್ರಿಯ ಮುನಿಸಿನಿಂದ ತನ್ನ ಜ್ಞಾನವನ್ನೆಲ್ಲಾ ಕಳೆದುಕೊಳ್ಳುತ್ತಾನೆ. ಅವಳಲ್ಲಿ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರು ಕಂಡಿದ್ದರಿಂದ, ಅವಳನ್ನು ಪ್ರಾರ್ಥಿಸಿ ಆಕೆಯ ಆಣತಿಯಂತೆ ವೇದಸರೋವರದಲ್ಲಿ ಸ್ನಾನ ಮಾಡಿ ತನ್ನ ಜ್ಞಾನವನ್ನು ಮರಳಿ ಪಡೆಯುತ್ತಾನೆ ಎಂಬ ಪ್ರಸಂಗವೂ ಇದೆ. ವೇದಗಳು ದೇವತೆಗಳ ಸೃಷ್ಟಿ ಎಂದು ಅವುಗಳನ್ನು ದೈವತ್ವಕ್ಕೆ ಏರಿಸುವ ಪ್ರಯತ್ನದಂತೆ ಕಾಣುತ್ತದೆ ಈ ಪ್ರಸಂಗ.

2.3.5.12. ವಿಷ್ಣುಧರ್ಮೋತ್ತರ ಪುರಾಣ

ಈ ಪುರಾಣದ ಒಂದು ಮತ್ತು ಐದನೇ ಅಧ್ಯಾಯದಲ್ಲಿ ಸರಸ್ವತಿಯ ಲಕ್ಷಣಗಳ ಬಗ್ಗೆ ವಿವರಗಳಿವೆ. ಚತುರ್ಭುಜಳಾದ ಈಕೆ ಬಲಭಾಗದ ಕೈಗಳಲ್ಲಿ ಅಕ್ಷಮಾಲಾ ಮತ್ತು ಪುಸ್ತಕ, ಎಡಭಾಗದ ಕೈಯಲ್ಲಿ ಕಮಂಡಲು ಮತ್ತು ವೀಣೆಯನ್ನು ಹಿಡಿದಿರುತ್ತಾಳೆ ಎಂದಿದೆ. ಕೆಲವು ಕಡೆ ಇದರ ಕ್ರಮ ಬದಲಾಗಿಯೂ ಬಂದಿರುತ್ತದೆ.[269]

2.3.5.13. ಅಗ್ನಿ ಪುರಾಣ

ಈ ಪುರಾಣದ ಒಂದು ಶ್ಲೋಕವು[270] ಸರಸ್ವತಿಯನ್ನು, 'ಪುಸ್ತಕಾಕ್ಷಮಾಲಿಕಾಹಸ್ತಾ ವೀಣಾಹಸ್ತಾ ಸರಸ್ವತೀ' ಎಂದು ವರ್ಣಿಸುತ್ತದೆ. ಸರಸ್ವತಿಯ ಕೈಗಳಲ್ಲಿ ಪುಸ್ತಕ, ಅಕ್ಷಮಾಲಾ ಮತ್ತು

---

269. Mohammad Israil Khan: Sarasvti in Sanskrit Literature, 131p

270. ಅಗ್ನಿ ಪುರಾಣ : ಅಧ್ಯಾಯ 50, ಶ್ಲೋಕ 16

ವೀಣೆಯಿರುವುದನ್ನು ಹೇಳಿರುವ ಹಿನ್ನೆಲೆಯನ್ನು ಗಮನಿಸಿದರೆ, 'ಅಗ್ನಿಪುರಾಣ'ದ ರಚನೆಯ ಹೊತ್ತಿಗೆ ಸರಸ್ವತಿಗೆ ಒಂದು ಸ್ಪಷ್ಟವಾದ ಆಕೃತಿ ಬಂದಿರುವಂತೆ ಕಾಣುತ್ತದೆ. ಪ್ರಸ್ತುತ ಪುರಾಣೋಕ್ತ ಸರಸ್ವತೀ ಲಕ್ಷಣಗಳು, ಇಂದಿಗೂ ಶಿಲ್ಪ ಹಾಗೂ ಚಿತ್ರಕಲೆಯಲ್ಲಿ ಕಂಡುಬರುವುದು ಗಮನಾರ್ಹವಾಗಿದೆ.

ಪ್ರಸ್ತುತ ಪುರಾಣಗಳ ಅಧ್ಯಯನದ ತೀರ್ಮಾನಗಳನ್ನು ಕೆಳಕಂಡಂತೆ ಸಂಗ್ರಹಿಸಬಹುದು:

- ಸರಸ್ವತಿಯು 'ಬ್ರಹ್ಮಾಂಡಪುರಾಣ'ದಲ್ಲಿ ಪರಮಾತ್ಮ ಮತ್ತು ಪ್ರಕೃತಿಯಾದ ಮಹಾಲಕ್ಷ್ಮಿಯಿಂದ, ವಿಷ್ಣುವಿನ ಜೊತೆಯಲ್ಲಿ ಜನಿಸಿ, ಬ್ರಹ್ಮನನ್ನು ಮದುವೆಯಾಗುತ್ತಾಳೆ. 'ಅಗ್ನಿಪುರಾಣ'ದಲ್ಲಿ ಬ್ರಹ್ಮನ ಮಗಳಾಗಿ, 'ಸ್ಕಂದಪುರಾಣ'ದಲ್ಲಿ ಬ್ರಹ್ಮನ ಹೆಂಡತಿಯಾಗಿ ಮತ್ತು 'ಮತ್ಸ್ಯ' ಮತ್ತು 'ಲಿಂಗಪುರಾಣ'ಗಳಲ್ಲಿ ಬ್ರಹ್ಮನ ಸತಿ ಮತ್ತು ಮಗಳಾಗಿಯೂ ಕಾಣಿಸಿಕೊಳ್ಳುತ್ತಾಳೆ. 'ಭಾಗವತ' ಮತ್ತು 'ಮಾರ್ಕಂಡೇಯಪುರಾಣ'ಗಳಲ್ಲಿ ಕೃಷ್ಣ ಮತ್ತು ವಿಷ್ಣುವಿನ (ವಿಷ್ಣುಜಿಹ್ವಾ ಸರಸ್ವತೀ) ಮಗಳಾಗಿದ್ದರೆ, 'ಭಾಗವತಪುರಾಣ'ದಲ್ಲಿ ಸರಸ್ವತಿಯು ವಿಷ್ಣುವಿನ ಹೆಂಡತಿಯಾಗಿ, ನಂತರ ಬ್ರಹ್ಮನ ಸತಿಯಾಗಿ ಹೋಗುತ್ತಾಳೆ. 'ಲಿಂಗಪುರಾಣ'ದಲ್ಲಿ ರುದ್ರನ (ರುದ್ರಸುತಾ) ಮಗಳಾಗಿದ್ದಾಳೆ.
- 'ಅಗ್ನಿ', 'ಭಾಗವತ', 'ಮತ್ಸ್ಯ', 'ಮಾರ್ಕಂಡೇಯ' ಮತ್ತು 'ಲಿಂಗಪುರಾಣ'ಗಳಲ್ಲಿ ವೇದಮಾತೆಯಾಗಿ, ಜ್ಞಾನದೇವತೆಯಾಗಿ ಹಾಗೂ 'ವರಾಹಪುರಾಣ'ದಲ್ಲಿ ನದೀದೇವತೆಯಾಗಿ ಮತ್ತು 'ಪದ್ಮ', 'ಬ್ರಹ್ಮ', 'ವಾಮನ' ಮತ್ತು 'ಸ್ಕಂದಪುರಾಣ'ಗಳಲ್ಲಿ ನದೀದೇವತೆ, ವೇದ ಮಾತೆ ಮತ್ತು ಜ್ಞಾನದೇವತೆಯಾಗಿ ಕಾಣಿಸಿಕೊಂಡಿದ್ದಾಳೆ.
- 'ಅಗ್ನಿಪುರಾಣ'ದಲ್ಲಿ ಚತುರ್ಭುಜೆಯಾಗಿ ಪುಸ್ತಕ, ಅಕ್ಷಮಾಲಾ ಮತ್ತು ವೀಣೆಯೊಂದಿಗೆ, 'ಪದ್ಮಪುರಾಣ'ದಲ್ಲಿ ದ್ವಿಭುಜೆಯಾಗಿ ಶಂಖ ಮತ್ತು ಬೆಳ್ದಾವರೆಯೊಂದಿಗೆ, ಹಾಗೂ 'ಸ್ಕಂದಪುರಾಣ'ದಲ್ಲಿ ಚತುರ್ಭುಜೆಯಾಗಿ ಕಮಲ, ಅಕ್ಷಮಾಲಾ, ಕಮಂಡಲು ಮತ್ತು ಪುಸ್ತಕದೊಂದಿಗೆ ಚಿತ್ರಿತಳಾಗಿದ್ದಾಳೆ. 'ವಿಷ್ಣುಧರ್ಮೋತ್ತರಪುರಾಣ'ದಲ್ಲಿ ಚತುರ್ಭುಜೆಯಾಗಿದ್ದು, ಬಲಗೈಗಳಲ್ಲಿ ಅಕ್ಷಮಾಲಾ ಮತ್ತು ಪುಸ್ತಕ, ಎಡಗೈಗಳಲ್ಲಿ ಕಮಂಡಲು ಮತ್ತು ವೀಣೆ ಧರಿಸಿರುವಂತೆ ಚಿತ್ರಿತಳಾಗಿದ್ದಾಳೆ. 'ವಾಯುಪುರಾಣ'ದಲ್ಲಿ[271] ನಾಲ್ಕು ಬಾಯಿಗಳು, ಕೊಂಬುಗಳು, ನಾಲ್ಕು ಹಲ್ಲುಗಳು ನಾಲ್ಕು ಕಣ್ಣುಗಳು ಮತ್ತು ನಾಲ್ಕು ಕೈಗಳೆಂದು ಹೇಳಿದೆ. ಇಲ್ಲಿ ಸರಸ್ವತೀ ಎಲ್ಲಾ ಪ್ರಾಣಿಗಳಿಗೂ ತಾಯಿಯಾಗಿದ್ದರಿಂದ 'ಪ್ರಕೃತಿಗಾವು' ಎಂದು ಕರೆಸಿಕೊಂಡಿದ್ದಾಳೆ.[272] 'ಮತ್ಸ್ಯಪುರಾಣ'ದ ಪ್ರಕಾರ ಸರಸ್ವತಿಯ ವಾಹನ ಹಂಸ. ಸರಸ್ವತಿಯು ಅಗ್ನಿಸಂಬಂಧದ ದೇವತೆಯೆಂದು ಋಗ್ವೇದದಲ್ಲಿಯೇ ನಿರೂಪಿತವಾಗಿದೆ. 'ವಾಮನಪುರಾಣ'ದಲ್ಲಿಯೂ ಪಾವಕತ್ರಯಂ ಎಂದು ಅಗ್ನಿಸಂಬಂಧವಾಗಿಯೇ ಹೇಳಲಾಗಿದೆ. ಅಗ್ನಿಯ ಸಂಕೇತವಾಗಿರುವ ನವಿಲನ್ನು ಸರಸ್ವತಿಯ ವಾಹನವನ್ನಾಗಿ ಜಾನಪದರು ಸ್ವೀಕರಿಸಿದ್ದಾರೆ.[273] ಆದರೆ ಯಾವುದೇ ಪುರಾಣದಲ್ಲಿಯೂ ನವಿಲನ್ನು ಸರಸ್ವತಿಯ ವಾಹನವೆಂದು ಹೇಳಿಲ್ಲ.

---

271. ವಾಯುಪುರಾಣ: ಅಧ್ಯಾಯ 23 – ಶ್ಲೋಕ 44 ರಿಂದ 45
272. Mohammad Israil Khan: Sarasvti in Sanskrit Literature, P.131
273. Mohammad Israil Khan: Sarasvti in Sanskrit Literature P.125

- 'ಸ್ಕಂದಪುರಾಣ'ದಲ್ಲಿ ಸರಸ್ವತಿಯ ಮಣ್ಣಿನ ವಿಗ್ರಹದ ಉಲ್ಲೇಖ ಬರುತ್ತದೆ.
- ಸಾಮಾನ್ಯವಾಗಿ ಸರಸ್ವತಿಗೆ ಶುಭ್ರವರ್ಣವನ್ನೇ ಹೇಳಲಾಗಿದೆ. 'ಲಿಂಗಪುರಾಣ'ದಲ್ಲಿ 'ಕೃಷ್ಣವರ್ಣಾ' ಎಂದು ವರ್ಣಿಸಿದೆ. 'ಮತ್ಸ್ಯಪುರಾಣ'ದಲ್ಲಿಯೂ 'ಶ್ಯಾಮವರ್ಣೇ' ಎಂದು ಹೇಳಲಾಗಿದೆ. 'ಬ್ರಹ್ಮವೈವರ್ತಪುರಾಣ'ದಲ್ಲಿ ಹಳದಿ ವಸ್ತ್ರಧಾರಿಣಿಯೆಂದು ಹೇಳಿದೆ.

ಈ ಪ್ರಮುಖ ಪುರಾಣಗಳಲ್ಲದೆ, 'ಭವಿಷ್ಯೋತ್ತರಪುರಾಣ', 'ದೇವೀಪುರಾಣ', 'ಕಾಳಿಕಾಪುರಾಣ', 'ಮಹಾಭಾಗವತಪುರಾಣ' ಮತ್ತು 'ಬೃಹದ್‌ಧರ್ಮಪುರಾಣ'ಗಳಲ್ಲಿ ಸಾಂದರ್ಭಿಕವಾಗಿ ಸರಸ್ವತಿಯ ವಿಚಾರಗಳು ಬರುತ್ತವೆಯಾದರೂ, ಹೆಚ್ಚಿನವು ಪೂಜಾವಿಧಾನಗಳಿಗೆ ಸಂಬಂಧಿಸಿದವುಗಳಾಗಿವೆ.

2.3.6. ಶ್ರೀತತ್ವನಿಧಿ

ಕನ್ನಡ ವೇದಾಂತ ಸಾಹಿತ್ಯದಲ್ಲಿ 'ಶ್ರೀತತ್ವನಿಧಿ'ಗೆ ವಿಶಿಷ್ಟವಾದ ಸ್ಥಾನವಿದೆ. ಮುಮ್ಮಡಿ ಕೃಷ್ಣರಾಜ ಒಡೆಯರು ರಚಿಸಿರುವ ಈ ಕೃತಿಯಲ್ಲಿ ವಿಶೇಷವಾಗಿ ಮಹಾಸರಸ್ವತಿಯ ಪ್ರಸ್ತಾಪವಿದೆ. ಇಲ್ಲಿ ಪ್ರಸ್ತಾಪವಾಗಿರುವ ಮಹಾಸರಸ್ವತಿಯ ಪರಿಕಲ್ಪನೆಗೆ ದೇವಿಯು ಮಹಾಕಾಳಿ, ಮಹಾಲಕ್ಷ್ಮಿ ಮತ್ತು ಮಹಾಸರಸ್ವತಿಯರಾಗಿ ಅವತರಿಸಿದ ಕಥೆಯೇ ಮೂಲ ಎನ್ನಲಾಗಿದೆ.[274] 'ಶ್ರೀತತ್ವನಿಧಿ'ಯಲ್ಲಿ ಕೊಟ್ಟಿರುವ ಮಹಾಸರಸ್ವತಿಯ ಚಿತ್ರಣ ಹೀಗಿದೆ: ಮಹಾಸರಸ್ವತಿಯು ಅಷ್ಟಭುಜ ದೇವತೆಯಾಗಿದ್ದು ಶುಭ್ರವರ್ಣದವಳಾಗಿದ್ದಾಳೆ. ಒಂದು ಚಿತ್ರದಲ್ಲಿ ಸ್ಥಾನಕ ಭಂಗಿಯಲ್ಲಿ ಚಿತ್ರಿಸಿದ್ದರೆ, ಇನ್ನೊಂದರಲ್ಲಿ ಆಸೀನ ಭಂಗಿಯಲ್ಲಿ ಚಿತ್ರಿಸಲಾಗಿದೆ. ಆದರೆ ಕೈಯಲ್ಲಿ ಹಿಡಿದಿರುವ ಆಯುಧಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಬಲಭಾಗದ ಕೈಗಳಲ್ಲಿ ಮುಸಲ (ಒನಕೆ ಅಥವಾ ದಂಡ), ಬಾಣ, ಚಕ್ರ ಮತ್ತು ತ್ರಿಶೂಲಗಳಿದ್ದರೆ ಎಡಭಾಗದ ಕೈಗಳಲ್ಲಿ ಹಲಾ (ನೇಗಿಲು), ಶಂಖ, ಬಿಲ್ಲು ಮತ್ತು ಘಂಟೆಗಳಿವೆ.

2.3.7

ಬೌದ್ಧಧರ್ಮದಲ್ಲಿ ಸರಸ್ವತಿಯು ಆದಿಬುದ್ಧನ ಹಲ್ಲುಗಳಿಂದಲೂ, ಜೈನಧರ್ಮದಲ್ಲಿ ಆದಿಜಿನರ ಮುಖದಿಂದಲೂ, ಹಿಂದೂಧರ್ಮದಲ್ಲಿ ಆದಿಬ್ರಹ್ಮನ ನಾಲಗೆ ಅಥವಾ ಮುಖದಿಂದಲೂ ಸೃಷ್ಟಿಯಾದಳು ಎಂದಿರುವುದನ್ನು ಗಮನಿಸಿದರೆ, ಸರಸ್ವತಿಯ ಜನನಸ್ಥಾನ ವಾಕ್ ಅಂದರೆ ಮಾತು ಜನಿಸುವ ಸ್ಥಳವೇ ಆಗಿದೆ. ಆದ್ದರಿಂದ ಸರಸ್ವತಿಯ ವಾಗ್ದೇವಿಯ ಸ್ವರೂಪ ಮೂರೂ ಧರ್ಮಗಳಿಗೂ ಸ್ವೀಕೃತ ಆಗಿದೆ ಎನ್ನಬಹುದು. ಮೂರೂ ಧರ್ಮಗಳಲ್ಲಿ ಸರಸ್ವತಿಗಿರುವ ಇನ್ನೊಂದು ಸಮಾನ ವಿಚಾರವೆಂದರೆ ವಿದ್ಯಾದೇವತೆ ಮತ್ತು ಜ್ಞಾನದೇವತೆ ಎಂಬ ಅಂಶಗಳು. ಹಾಗೆಯೇ ಆಯಾಯ ಧರ್ಮದ ಧಾರ್ಮಿಕ ಗ್ರಂಥಗಳೇ ಸರಸ್ವತಿ ಎಂಬ ವಿಚಾರದಲ್ಲೂ ಸಾಮ್ಯತೆಯಿದೆ. ಬೌದ್ಧಧರ್ಮದಲ್ಲಿ ಮಂಜುಶ್ರೀಯ

---

274. ಎಸ್.ಕೆ.ರಾಮಚಂದ್ರರಾವ್: ಮುಮ್ಮಡಿ ಕೃಷ್ಣರಾಜ ವಡೆಯರ ಶ್ರೀತತ್ವನಿಧಿ, ಪು.52-54

ಕೈಯಲ್ಲಿರುವ 'ಪ್ರಜ್ಞಾಪಾರಮಿತ' (ಬೌದ್ಧಧರ್ಮದ ಶಾಸ್ತ್ರಗ್ರಂಥ) ಗ್ರಂಥವೇ ಸರಸ್ವತಿಯಾಗಿದ್ದರೆ, ಜೈನಧರ್ಮದಲ್ಲಿ ಆದಿಜಿನೇಶ್ವರರ ವಾಣಿ ಮತ್ತು ಅದರಿಂದ ಉತ್ಪನ್ನವಾದ 'ಜೈನವೇದ'ಗಳಾದ 'ಶ್ರುತ'ಗಳೇ ಸರಸ್ವತಿಯಾಗಿವೆ. ವೈದಿಕಪರಂಪರೆಯಲ್ಲೂ ಬ್ರಹ್ಮನ ಸೃಷ್ಟಿಯಾದ 'ವೇದ'ಗಳ ಅಧಿದೇವತೆ ಸರಸ್ವತಿಯೇ ಆಗಿದ್ದಾಳೆ. ಮೂರೂ ಧರ್ಮಗಳಲ್ಲೂ ಸರಸ್ವತಿಯನ್ನು ಒಳ್ಳೆಯ ವಾಕ್ಕಿಗೆ, ವಿದ್ಯೆಗೆ, ಜ್ಞಾನಕ್ಕೆ, ಕಾವ್ಯಾವೇಶಕ್ಕೆ ಪ್ರಾರ್ಥಿಸಲಾಗುತ್ತದೆ. ಭಾರತದ ಹೊರಗೂ, ಪ್ರಚಲಿತವಿರುವ ಬೌದ್ಧಧರ್ಮದ ಪ್ರಭಾವದಿಂದಾಗಿ, ಸರಸ್ವತಿಯ ಆರಾಧನೆ ಕಂಡುಬರುತ್ತದೆ. ಹೆಸರುಗಳು ಬೇರೆಬೇರೆಯಾಗಿದ್ದರೂ ಸರಸ್ವತಿಯು ಅಲ್ಲೆಲ್ಲಾ ವಿದ್ಯಾದೇವತೆಯಾಗಿಯೇ ಆರಾಧನೆಗೊಳ್ಳುತ್ತಿದ್ದಾಳೆ. ಶುಭ್ರವರ್ಣೆ, ಹಂಸವಾಹಿನಿ, ಕಮಲಪೀಠಸ್ಥೆ ಹೀಗೆ ಸರಸ್ವತಿಯ ಸ್ವರೂಪದಲ್ಲೂ ಸಾಕಷ್ಟು ಸಾಮ್ಯತೆಯಿದೆ. ದ್ವಿಭುಜ ಮತ್ತು ಚತುರ್ಭುಜ ಸರಸ್ವತಿಯನ್ನು ಚಿತ್ರಿಸುವಾಗ ಆಕೆಯ ಕೈಗಳಲ್ಲಿ ಸಾಮಾನ್ಯವಾಗಿ ವೀಣೆ ಮತ್ತು ಪುಸ್ತಕ ಇರುವುದು ಕಂಡುಬರುತ್ತದೆ. ಧರ್ಮಗಳ ಒಳಪಂಗಡಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳು, ತಾಂತ್ರಿಕ ಆಚರಣೆಯಲ್ಲಿ ಕಂಡುಬರುವ ಪ್ರಾದೇಶಿಕ ವೈವಿಧ್ಯತೆಗಳು ಇವುಗಳನ್ನು ಬಿಟ್ಟರೆ, ಒಟ್ಟಾರೆ ಭಾರತೀಯ ಸಂದರ್ಭದಲ್ಲಿ ಸರಸ್ವತಿಯ ಸ್ವರೂಪ **'ಒಂದೇ'** ಆಗಿದೆ.

2.4. ಅನ್ಯನಾಗರಿಕತೆಗಳಲ್ಲಿ ಸರಸ್ವತಿಗೆ ಸಮಾನವಾದ ದೇವತೆಗಳು

ಈಜಿಪ್ಟ್ ಮತ್ತು ಗ್ರೀಕ್ ನಾಗರಿಕತೆಗಳನ್ನು ಅತ್ಯಂತ ಪ್ರಾಚೀನ ನಾಗರಿಕತೆಗಳೆಂದು ಗುರುತಿಸುತ್ತಾರೆ. ಈಜಿಪ್ಟ್‌ನಲ್ಲಿ ಈಸಿಸ್ (Isis) ದೇವತೆ ಸರಸ್ವತಿಯ ಲಕ್ಷಣಗಳನ್ನು ಸ್ವಲ್ಪಮಟ್ಟಿಗೆ ಹೊಂದಿದ್ದರೆ, ಗ್ರೀಕ್ ನಾಗರಿಕತೆಯಲ್ಲಿ ಅಥೀನಾ ದೇವತೆ ಸರಸ್ವತಿಗೆ ಸಂವಾದಿಯಾದ ದೇವತೆಯಾಗಿದ್ದಾಳೆ. ಈಸಿಸ್ ಮತ್ತು ಅಥೀನಾ (Athena) ದೇವತೆಗಳ ಲಕ್ಷಣಗಳನ್ನು ಕೆಳಗಿನಂತೆ ಕ್ರೋಢಿಕರಿಸಬಹುದು.

2.4.1. ಈಸಿಸ್ (Isis): ಈಜಿಪ್ಷಿಯನ್ ದೇವತೆ

ಈಸಿಸ್ ಈಜಿಪ್ಷಿಯನ್ನರು ಆರಾಧಿಸುತ್ತಿದ್ದ ಮಾತೃದೇವತೆ. ಸುಮಾರು ಕ್ರಿ.ಪೂ. 2350ರಿಂದ 2100ರಷ್ಟು ಪ್ರಾಚೀನತೆಯಿರುವ ದೇವತೆ. ಓಸಿರಿಸ್ (Osiris) ಅವಳ ಪತಿ; ಹೋರಸ್ (Horus) ಅವಳ ಮಗ. ಈಸಿಸ್ ಇಲ್ಲಿ ಮುಖ್ಯವಾಗಿ ಸಮೃದ್ಧಿಗೆ ಸಂಬಂಧಿಸಿದ ಹಾಗೂ ರಕ್ಷಣೆಗೆ ಸಂಬಂಧಿಸಿದ ದೇವತೆಯಾಗಿದ್ದಾಳೆ. ಓಸಿರಿಸ್‌ನನ್ನು ಕೊಂದ ಸೆಥ್ (Seth) ಎಂಬುವವನಿಂದ ತನ್ನ ಮಗನನ್ನು ರಕ್ಷಿಸಿ, ಬೆಳೆಸಿ ಮಾತೃದೇವತೆಯಾಗುತ್ತಾಳೆ. ಆದ್ದರಿಂದ ಈಜಿಪ್ಷಿಯನ್ನರು ಈಸಿಸ್–ಹೋರಸ್‌ರನ್ನು ಮಾದರಿ

ತಾಯಿ–ಮಗ ಎಂದು ಆರಾಧಿಸುತ್ತಾರೆ. ಮಗುವನ್ನು (ಹೋರಸ್‌ನನ್ನು) ಎತ್ತಿಕೊಂಡಿರುವ ಈಸಿಸ್‌ದೇವತೆಯ ಶಿಲ್ಪ ಮತ್ತು ಚಿತ್ರಕಲಾಕೃತಿಗಳು ಇವೆ.[275]

ಈಸಿಸ್ ದೇವತೆಯು ನೈಲ್‌ನದಿಯ ಮೂಲದ ದೇವತೆ ಎಂದೂ ಹೇಳಲಾಗಿದೆ. ಕೈಯಲ್ಲಿ ಕಮಂಡಲು ಹಿಡಿದಿರುವ ಶಿಲ್ಪಗಳು ಈ ಅಭಿಪ್ರಾಯಕ್ಕೆ ಪೋಷಕವಾಗಿರಬಹುದು. ಈಸಿಸ್ ಸಮೃದ್ಧಿಗೆ ಸಂಬಂಧಿಸಿದ ದೇವತೆ ಎಂಬುದನ್ನು ಗಮನಿಸಿದರೆ, ನೈಲ್‌ನದಿಯ ಸಂಬಂಧೀ ದೇವತೆ ಎಂಬ ಅಭಿಪ್ರಾಯಕ್ಕೇ ಹೆಚ್ಚು ಒತ್ತು ಸಿಗುತ್ತದೆ.[276] ನದಿಮೂಲದ ದೇವತೆ ಎಂಬುದೂ ಈಸಿಸ್‌ಳನ್ನು ಸರಸ್ವತಿಗೆ ಹೋಲಿಸಲು ಸಹಾಯಕವಾಗಿದೆ. ಬುಕ್ ಆಪ್ ದಿ ಡೆಡ್ (Book of the Dead, Chapter No. CLVI.) ಎಂಬ ಗ್ರಂಥದಲ್ಲಿ ಈಸಿಸ್‌ಳನ್ನು 'ಬಡವರ ಪಕ್ಷಪಾತಿ, ಬಡವರಿಗೆ ಮನೆಗಳನ್ನು ಒದಗಿಸುವವಳು, ಸ್ವರ್ಗ ಮತ್ತು ಭೂಲೋಕಗಳನ್ನು ಸೃಷ್ಟಿಸಿದವಳು' ಎಂದು ಚಿತ್ರಿಸಲಾಗಿದೆ. ಅವುಗಳಲ್ಲದೆ, ದೇವತೆಗಳ ತಾಯಿ, ಐಂದ್ರಜಾಲಿಕ ದೇವತೆ, ಪದಗಳ ಶಕ್ತಿದೇವತೆ ಮೊದಲಾದ ಮಾತುಗಳಲ್ಲಿ ವರ್ಣಿಸಲಾಗಿದೆ.[277] ಸ್ವರ್ಗ ಮತ್ತು ಭೂಲೋಕಗಳ ಸೃಷ್ಟಿಕರ್ತೆ ಎಂಬುದಂತೂ ವೈದಿಕ ಪರಿಕಲ್ಪನೆಯ ಜಗದ್ಧಾತ್ರಿ ಸರಸ್ವತಿಗೆ ಬಹಳ ಹತ್ತಿರದ್ದಾಗಿದೆ. ದೇವತೆಗಳ ತಾಯಿ ಎಂಬುದು ಋಗ್ವೇದದ ದೇವಿತಮೆ–ಅಂಬಿತಮೆ ಋಕ್ಕನ್ನು ನೆನಪಿಸುತ್ತದೆ. ಪದಗಳ ಶಕ್ತಿದೇವತೆ ಎಂಬುದು ಸರಸ್ವತಿಯ ವಾಗ್ದೇವಿಯ ಸ್ವರೂಪಕ್ಕೆ ತೀರಾ ಹತ್ತಿರದ್ದಾಗಿದೆ. ಆದ್ದರಿಂದ ಭಾರತೀಯ ಸರಸ್ವತಿಯ ಕಲ್ಪನೆಗೆ ಸಮೀಪವಾದ, ಮಧ್ಯಪ್ರಾಚ್ಯದ ನಾಗರೀಕತೆಯೊಂದರ ಈಸಿಸ್ ದೇವತೆ ಗಮನಾರ್ಹವಾಗಿದೆ. ಸೌದಿ ಅರೇಬಿಯಾದಲ್ಲಿ ಸಿಕ್ಕಿದ, ಈಗ ಬ್ರಿಟಿಷ್ ಮ್ಯೂಸಿಯಂನಲ್ಲಿರುವ ಹಂಸವಾಹಿನಿ ಸರಸ್ವತಿಯ ಶಿಲ್ಪವನ್ನು 'ಇಸ್ಲಾಂಪೂರ್ವ ಸರಸ್ವತೀ ಶಿಲ್ಪ'[278] ಎನ್ನಲಾಗಿದೆ. ಹಂಸದ ಮೇಲೆ ಕುಳಿತಿರುವ ದ್ವಿಭುಜ ಶಿಲ್ಪವನ್ನು, ತನ್ನ ಎರಡೂ ಕೈಗಳಲ್ಲಿ ತಲೆಯ ಮೇಲೆ ಹೊದ್ದಿರುವ ಹೊದಿಕೆಯನ್ನು ಹಿಡಿದಿರುವಂತೆ ಕೆತ್ತಲಾಗಿದೆ.

2.4.2. ಅಥೀನಾ (Athena or Athene): ಗ್ರೀಕ್ ದೇವತೆ

ಗ್ರೀಕ್ ನಾಗರಿಕತೆಯಲ್ಲಿ ಕಾಣಿಸಿಕೊಳ್ಳುವ ಮೊದಲನೇ ತಲೆಮಾರಿನ ಆದಿದೇವತೆಯಾದ ಸ್ಯೂಸ್(Zeus)ದೇವನ ಹಿರಿಯಮಗಳು ಅಥೀನಾ. ಸ್ಯೂಸ್‌ದೇವನು ಒಮ್ಮೆ ದೇವಸಭೆಯಲ್ಲಿದ್ದಾಗ ತಲೆಶೂಲೆಯಿಂದ ಒದ್ದಾಡಬೇಕಾಗುತ್ತದೆ. ಆಗ ಆತನ ಮಗ ತಲೆಗೆ ಹೊಡೆದಿದ್ದರಿಂದ ಅಥೀನಾ ಸ್ಯೂಸ್‌ದೇವನ ತಲೆಯಿಂದ ಹೊರಬರುತ್ತಾಳೆ. ತಲೆಯಿಂದ ಹೊರಬಂದಿದ್ದರಿಂದ ಜ್ಞಾನಕ್ಕೆ ದೇವತೆಯನ್ನಾಗಿ ಅಥೀನಾಳನ್ನು ಸ್ಯೂಸ್‌ದೇವ ನೇಮಿಸುತ್ತಾನೆ. ಹುಟ್ಟುವಾಗಲೇ ಕವಚವನ್ನು ತೊಟ್ಟು, ಆಯುಧವನ್ನು

275 . Encyclopaedia Britanica (2002 Edn.) Vo6. 1 p.408-409
276. Richard H. Wilkinson (2003): The Complete Gods and Goddesses of Ancient Egypt P.256, 276-95
277. C.f . Wikipedia Web Pages
278. C.f. www.thebritishmuseum.ac.uk

ಹಿಡಿದು ಬಂದಿದ್ದರಿಂದ ಅಥೀನಾ ವೀರರದೇವತೆಯೂ ಆಗುತ್ತಾಳೆ. ಅಥೀನ ಜ್ಞಾನದೇವತೆ ಮಾತ್ರವಲ್ಲದೆ, ಮಹಿಳೆಯರ ಕೆಲಸಗಳ, ಕರಕುಶಲಕಲೆಗಳ, ನೇಕಾರರ ದೇವತೆಯೂ ಹೌದು. ಅಥಿನಾ ನಗರರಕ್ಷಕದೇವತೆಯೂ ಆಗಿದ್ದಾಳೆ. ಅಥೆನ್ಸ್ ನಗರದ ರಕ್ಷಣೆಗಾಗಿಯೇ ಅಥೀನಾಳ ಜನನವಾಯಿತು ಎಂಬ ಪರಿಕಲ್ಪನೆಯೂ ಇದೆ. ಹೋಮರ್‌ನ ಈಲಿಯಡ್‌ನಲ್ಲಿ ಅಥೀನಾ ಯುದ್ಧದೇವತೆಯಂತೆ ಚಿತ್ರಿತಳಾಗಿದ್ದಾಳೆ. ಗ್ರೀಕ್ ಟ್ರೋಜಾನ್ ಯುದ್ಧದಲ್ಲಿ ಅಥೀನಾ ಟ್ರೋಜಾನ್‌ರ ಪರವಾಗಿರುತ್ತಾಳೆ.[279]

ಅಥೀನಾ ಕನ್ಯಾದೇವತೆ. ಅವಳ ಜೊತೆಗಾರ ದೇವತೆಗಳಾಗಿ ಯಾವ ಪುರುಷದೇವತೆಯ ಹೆಸರೂ ಇಲ್ಲ. ಅತ್ಯಂತ ಸುಂದರಳಾದ ಅಥೀನಾಳನ್ನು ಹೆಫಾಸ್ಟಸ್ (Hephaestus) ಎಂಬ ಆಯುಧಗಳ ದೇವತೆ ಮೋಹಿಸುತ್ತಾನೆ. ಆದರೆ ಅಥೀನಾ ಅವನನ್ನು ತಿರಸ್ಕರಿಸುತ್ತಾಳೆ. ಒಮ್ಮೆ ತನ್ನ ಆಯುಧವನ್ನು ಸರಿಪಡಿಸಲು ಬಂದ ಅಥೀನಾಳಿಗೆ ಮುಜುಗರವಾಗುವಂತೆ ಹೆಫಾಸ್ಟಸ್ ವರ್ತಿಸುತ್ತಾನೆ. ಅವನಿಂದ ತಪ್ಪಿಸಿಕೊಳ್ಳುವ ಭರದಲ್ಲಿ ಮಣ್ಣಾದ ತನ್ನ ತೊಡೆಯನ್ನು ಒರೆಸಿದ ಬಟ್ಟೆಯನ್ನು ಅಥೀನಾ ನೆಲಕ್ಕೆಸೆಯುತ್ತಾಳೆ. ಆಗ ಎರಿಕ್ಥೋನಿಯಸ್ (Erichthonius) ಎಂಬ ವೀರ ಹುಟ್ಟುತ್ತಾನೆ. ಅವನನ್ನು ಅಥೀನಾಳ ಮಗನೆಂದು ತಿಳಿಯಲಾಗುತ್ತದೆ.[280] ಹೀಗೆ ಸ್ವತಃ ಕನ್ಯೆಯಾದರೂ ಅಥೀನಾ ಮಾತೃದೇವತೆಯೂ ಆಗಬೇಕಾಗುತ್ತದೆ.

ಅಥೀನಾ ದೇವತೆಯ ಶಿಲ್ಪಗಳು ಅತ್ಯಂತ ಸುಂದರವಾಗಿರುತ್ತವೆ. ಅಥೀನಾ ಕವಚ, ಶಿರಸ್ತ್ರಾಣಗಳನ್ನು ಧರಿಸಿರುತ್ತಾಳೆ. ಎಡಗೈಯಲ್ಲಿ ಗುರಾಣಿಯಿದ್ದರೆ, ಬಲಗೈಯಲ್ಲಿ ಈಟಿಯಿರುತ್ತದೆ.[281] ಜ್ಞಾನದೇವತೆಗೆ ಸಂಬಂಧಿಸಿದ ಯಾವುದೇ ಕುರುಹುಗಳಿಲ್ಲ. ಆದರೆ, ಅಥೀನಾ ಸ್ಯೂಸ್ ದೇವನ ತಲೆಯಿಂದ ಜನಿಸುತ್ತಾಳೆ ಎಂಬ ಪರಿಕಲ್ಪನೆ ಬೌದ್ಧ, ಜೈನ ಮತ್ತು ವೈದಿಕಧರ್ಮಗಳ ಕ್ರಮವಾಗಿ ಹಲ್ಲು, ಮುಖ ಮತ್ತು ನಾಲಗೆಯಿಂದ ಸರಸ್ವತಿಯು ಜನಿಸಿದ ಪರಿಕಲ್ಪನೆಗೆ ತೀರಾ ಹತ್ತಿರವಾದದ್ದಾಗಿದೆ. ಅಥೀನಾ ಕರಕುಶಲಕಲೆಗಳ ದೇವತೆಯಾಗಿರುವುದು ಕೂಡಾ ಸರಸ್ವತಿಯ ಸಂವಾದಿ ದೇವತೆಯನ್ನಾಗಿ ಆಕೆಯನ್ನು ಪರಿಕಲ್ಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಅಥೀನಾಳನ್ನು ರೋಮನ್ನರ ಮಿನರ್ವಾಳೊಂದಿಗೆ ಹೋಲಿಸಲಾಗಿದೆ.[282] ಮಿನರ್ವಾ ಪರಿಕಲ್ಪನೆಯೇ ಗ್ರೀಕ್‌ದೇವತೆ ಅಥೀನಾಳಿಂದ ಬಂದದ್ದು ಎನ್ನಲಾಗಿದೆ. ಮಿನರ್ವಾ ರೋಮನ್ನರ ಜ್ಯೂಪಿಟರ್ ಮತ್ತು ಜುನೊ ದೇವತೆಗಳ ಸಹವರ್ತಿಯಾಗಿದ್ದಾಳೆ. ಮಿನರ್ವಾ ಕೂಡಾ ಅಥೀನಾಳಂತೆ ಯುದ್ಧ ಮತ್ತು ಕಲೆಯ ದೇವತೆಯೇ ಆಗಿದ್ದಾಳೆ. ಶಿಲ್ಪಲಕ್ಷಣಗಳೂ ಸಹ ಅಥೀನಾಳನ್ನೇ ಹೋಲುತ್ತವೆಯಾದರೂ, ಮಿನರ್ವಾಳಿಗೆ ಎಡಗೈಯಲ್ಲಿ ಗುರಾಣಿಯಿರುವುದಿಲ್ಲ.

---

279. Encyclopaedia Britanica (2002 Edn.) Vol. 1 P.666-667; Frederique Vivier: Greek Mythology p.63-64
280. Frederique Vivier: Greek Mythology p.64
281. Encyclopaedia Britanica (2002 Edn.) Vol. 1, p.666
282 . Encyclopaedia Britanica (2002 Edn.) Vol. 8, p.155

ಅಧ್ಯಾಯ 3 ಸಾಹಿತ್ಯದಲ್ಲಿ ಸರಸ್ವತಿ

ಸಂಸ್ಕೃತ ಸಾಹಿತ್ಯದಲ್ಲಿ ಸರಸ್ವತೀ ಪರಿಕಲ್ಪನೆ

ಕನ್ನಡ ಸಾಹಿತ್ಯದಲ್ಲಿ ಸರಸ್ವತೀ ಪರಿಕಲ್ಪನೆ: ಶ್ರೀವಿಜಯ; ಪಂಪ; ಪೊನ್ನ; ಒಂದನೆಯ ನಾಗವರ್ಮ; ರನ್ನ; ದುರ್ಗಸಿಂಹ; ಎರಡನೆಯ ನಾಗವರ್ಮ; ನಾಗಚಂದ್ರ; ನಯಸೇನ; ವಚನಕಾರರು; ರುದ್ರಭಟ್ಟ; ಅಗ್ಗಳ; ಹರಿಹರ; ನೇಮಿಚಂದ್ರ; ಬಂಧುವರ್ಮ; ಕವಿಕಾಮ(ದೇವ); ಜನ್ನ; ರಾಘವಾಂಕ; ಆಂಡಯ್ಯ; ಮಲ್ಲಿಕಾರ್ಜುನ; ಮಹಾಬಲಕವಿ; ಕುಮುದೇಂದು; ವೃತ್ತವಿಲಾಸ; ಬಾಹುಬಲಿಪಂಡಿತ; ಕುಮಾರವ್ಯಾಸ; ಈಶ್ವರಕವಿ; ಮಧುರ; ಭಾಸ್ಕರ; ರಾಮರಸ ವಿರೂಪಾಕ್ಷ; ಕುಮಾರವಾಲ್ಮೀಕಿ; ಸೋಮನಾಥ; ಶಿಶುಮಾಯಣ; ಮೂರನೆಯ ಮಂಗರಸ; ಕನಕದಾಸರು; ಪುರಂದರದಾಸರು ಮತ್ತು ಇತರ ಹರಿದಾಸರ ಕೃತಿಗಳು; ಲಕ್ಷ್ಮೀಶ; ಗೋಪಕವಿ; ಪಾರ್ಶ್ವಕವಿ; ಗೋವಿಂದವೈದ್ಯ; ಸೋಮನಾಥ; ಲಕ್ಷ್ಮಯ್ಯ; ವಿಜಯವೆಂಕಟರಮಣ; ಅನಂತಕವಿ; ನೇಮರಸ; ಮುದ್ದಣ; ಇಬ್ರಾಹಿಮ್ ಆದಿಲ್ ಷಾ; ಸಂತ ಶಿಶುನಾಳ ಶರೀಫ

ಆಧುನಿಕ ಕನ್ನಡ ಸಾಹಿತ್ಯ

ಅಧ್ಯಾಯ 3

ಸಾಹಿತ್ಯದಲ್ಲಿ ಸರಸ್ವತಿ

ಕನ್ನಡ ಸಾಹಿತ್ಯದಲ್ಲಿ ಸರಸ್ವತೀ ಪರಿಕಲ್ಪನೆಯನ್ನು ಕುರಿತು ಅಧ್ಯಯನ ಮಾಡಬೇಕಾದರೆ, ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಕಾರಣಗಳಿಂದಾಗಿ ಮೊದಲು ಸಂಸ್ಕೃತ ಸಾಹಿತ್ಯದಲ್ಲಿರುವ ಸರಸ್ವತೀ ಪರಿಕಲ್ಪನೆಯ ಪರಿಚಯವನ್ನು ಮಾಡಿಕೊಳ್ಳಬೇಕಾಗುತ್ತದೆ. ಪ್ರಾರಂಭದ ಕನ್ನಡ ಸಾಹಿತ್ಯ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಸಂಸ್ಕೃತ ಸಾಹಿತ್ಯದ ಪ್ರಭಾವಕ್ಕೆ ಒಳಗಾಗಿಯೇ ಬೆಳೆದು ಬಂದಿದೆ. ವಸ್ತು, ಛಂದಸ್ಸು ಮತ್ತು ಮೀಮಾಂಸೆ ಹೀಗೆ ಎಲ್ಲವೂ ಒಂದಲ್ಲ ಒಂದು ಕಾರಣದಿಂದ ಸಂಸ್ಕೃತ ಸಾಹಿತ್ಯದ ನೆರಳಿನಲ್ಲಿಯೇ ಬೆಳೆದು ಬಂದಿದೆ. ಆದರ ನಡುವೆಯೂ ಕನ್ನಡ ಸಾಹಿತ್ಯಕ್ಕೆ ಹತ್ತು ಹಲವಾರು ಕಾರಣಗಳಿಂದ ತನ್ನದೇ ಆದ ಸ್ವಂತಿಕೆ ಇದೆ ಎಂಬುದನ್ನು ಮರೆಯುವಂತಿಲ್ಲ.

ಮುಖ್ಯ ಅಧ್ಯಯನಕ್ಕೆ ಪೂರಕವಾಗಿ ಸಂಸ್ಕೃತ ಸಾಹಿತ್ಯದಲ್ಲಿ ಸರಸ್ವತೀ ಪರಿಕಲ್ಪನೆಯ ಬಗ್ಗೆ ಗಮನಿಸುತ್ತಿರುವುದರಿಂದ, ಸವಿವರವಾಗಿ ಅಧ್ಯಯನ ಕೈಗೊಳ್ಳದೇ ಕೆಲವು ಮುಖ್ಯ ಕವಿಗಳ ಕೃತಿಗಳನ್ನಷ್ಟೇ ಗಮನಿಸಿ ಮುಂದುವರೆಯಲಾಗುವುದು.[1]

ಸಂಸ್ಕೃತ ಸಾಹಿತ್ಯದಲ್ಲಿ ಸರಸ್ವತೀ ಪರಿಕಲ್ಪನೆ

ಭರತನ 'ನಾಟ್ಯಶಾಸ್ತ್ರ'ವು ಕಾಳಿದಾಸಾದಿ ಕವಿಗಳ ಕೃತಿಗಳಿಗಿಂತ ಮುಂಚಿನದು.[2] ಕ್ರಿ.ಶ. ಸುಮಾರು 2-3ನೇ ಶತಮಾನದ ರಚನೆಯಾದ 'ನಾಟ್ಯಶಾಸ್ತ್ರ'ದಲ್ಲಿ ಸರಸ್ವತಿಗೆ ಸಂಬಂಧಿಸಿದ ಕೆಲವು ವಿಚಾರಗಳಿವೆ. ಇಲ್ಲಿ ಸರಸ್ವತಿಯು ವಾಗ್ದೇವತೆಯಾಗಿಯೋ ಕಾವ್ಯದೇವತೆಯಾಗಿಯೋ ಸ್ತುತಿಗೊಂಡಿಲ್ಲ. ದೇವತೆಗಳೆಲ್ಲ ಸೇರಿ ಒಂದು ನಾಟಕ ಆಡಲು ತೀರ್ಮಾನಿಸಿ ಬ್ರಹ್ಮನಲ್ಲಿ ಹೇಳುತ್ತಾರೆ. ಬ್ರಹ್ಮನು ವೇದಗಳನ್ನು ಆಶ್ರಯಿಸಿ ಬರೆದ ನಾಟಕವನ್ನು ಭರತನು ದೇವತೆಗಳಿಗೆ ಅಭ್ಯಾಸ ಮಾಡಿಸುತ್ತಾನೆ. ಆಗ ದೇವತೆಗಳ ಪ್ರಾರ್ಥನೆಯಂತೆ ಇಂದ್ರ ಮೊದಲಾದ ದೇವತೆಗಳು, ಧ್ವಜಸ್ತಂಭ, ಭೂಮಿ, ಕೊಡೆ ಮೊದಲಾದವುಗಳನ್ನು ಕೊಡುತ್ತಾರೆ. **ಸರಸ್ವತಿಯು ಶುದ್ಧವಾದ ಶಬ್ದಗಳನ್ನು ಧ್ವನಿಯನ್ನು ಕೊಡುತ್ತಾಳೆ.**[3] ಇಲ್ಲಿ, ಸರಸ್ವತಿಯು ವಾಗ್ದೇವಿ ಎಂಬುದು ಸ್ಪಷ್ಟವಾಗಿದೆ. ಅದೇ ನಾಟಕಕ್ಕೆ ರಾಕ್ಷಸರಿಂದ ತೊಂದರೆಯಾಗುವುದನ್ನು ಅರಿತ ಭರತ ಬ್ರಹ್ಮನ

---

1. ಏಕೆಂದರೆ ಸಂಸ್ಕೃತ ಸಾಹಿತ್ಯದಲ್ಲಿ ಸರಸ್ವತಿಯ ಬಗ್ಗೆ ಅಧ್ಯಯನ ಮಾಡುವುದಾದರೆ ಅದೇ ಒಂದು ಪ್ರತ್ಯೇಕ ಬೃಹತ್ ಅಧ್ಯಯನವಾಗುತ್ತದೆ.
2. ಭರತನ 'ನಾಟ್ಯಶಾಸ್ತ್ರ'ದ ಕಾಲವಿಚಾರಕ್ಕೆ ತೀ.ನಂ.ಶ್ರೀ.ಯವರ 'ಭಾರತೀಯ ಕಾವ್ಯ ಮೀಮಾಂಸೆ'ಯನ್ನು ನೋಡಬಹುದಾಗಿದೆ. ಪು.9-11
3. Adya Rangacharya (Ed): The Natyasastra. Chapter I, Lines 52-63. P.3

ಸಲಹೆಯನ್ನು ಕೇಳುತ್ತಾನೆ. ಆಗ ಸ್ವತಃ ಬ್ರಹ್ಮ ನಾಟ್ಯಗೃಹದ ಮಧ್ಯದಲ್ಲಿ ರಕ್ಷಕನಾಗಿ ನಿಲ್ಲುತ್ತಾನೆ. ಇಂದ್ರನನ್ನು ನಾಯಕನ ರಕ್ಷಕನನ್ನಾಗಿಯೂ, ಸರಸ್ವತಿಯನ್ನು ನಾಯಕಿಯ ರಕ್ಷಕಿಯಾಗಿಯೂ ಆಯ್ಕೆ ಮಾಡಲಾಗುತ್ತದೆ.[4]

ನಾಟಕದ ಪ್ರಾರಂಭದಲ್ಲಿ ಎಲ್ಲರೂ ದೇವತೆಗಳಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ. ಶಿವ, ಬ್ರಹ್ಮ, ವಿಷ್ಣು, ಇಂದ್ರ, ಲಕ್ಷ್ಮಿ, ಬೃಹಸ್ಪತಿ ಮೊದಲಾದ ದೇವತೆಗಳ ಸಾಲಿನಲ್ಲಿಯೇ ಸರಸ್ವತಿಯು ಸ್ತುತಿಗೊಳ್ಳುತ್ತಾಳೆ.[5] ನಾಟ್ಯಗೃಹದಲ್ಲಿ ದೇವತಾ ಸ್ಥಾಪನೆ ಮಾಡುವಾಗ ಸರಸ್ವತಿಯನ್ನು ಇಂದ್ರ, ನಾರಾಯಣ, ಲಕ್ಷ್ಮಿ, ಸೂರ್ಯ, ಚಂದ್ರ, ಅಶ್ವಿನಿ, ಶ್ರದ್ಧಾ, ಮೇಧಾ ಮೊದಲಾದ ದೇವತೆಗಳೊಂದಿಗೆ ಆಗ್ನೇಯ ದಿಕ್ಕಿನ ಚೌಕದಲ್ಲಿ ಸ್ಥಾಪಿಸಲಾಗುತ್ತದೆ.[6] ದೇವತೆಗಳಿಗೆ ಇಷ್ಟವಾದ ಆಹಾರವನ್ನು ಅರ್ಪಿಸುವಾಗ, ಬ್ರಹ್ಮನಿಗೆ ಮಧುಪರ್ಕವನ್ನು, ಸರಸ್ವತಿಗೆ ಹಾಲಿನಿಂದ ಮಾಡಿದ ಪಾಯಸವನ್ನು 'ಮಂತ್ರಗಳಿಂದ ಶುದ್ಧವಾಗಿರುವ ಈ ಬಲಿಯನ್ನು ಸ್ವೀಕರಿಸಿ' ಎಂದು ಪ್ರಾರ್ಥಿಸಿ ಅರ್ಪಿಸಲಾಗುತ್ತದೆ.[7] ನಂತರ ಲಕ್ಷ್ಮಿ ಮತಿ ಮೊದಲಾದ ದೇವತೆಗಳೊಂದಿಗೆ ಸರಸ್ವತಿಯನ್ನು 'ನಮ್ಮ ತಾಯಂದಿರಾದ ನೀವು ನಮಗೆ ಯಶಸ್ಸನ್ನು ಕರುಣಿಸಿ' ಎಂದು ಪ್ರಾರ್ಥಿಸಲಾಗುತ್ತದೆ.[8]

ಭರತನು ಆಡಿಸಿದ ನಾಟಕದಲ್ಲಿ ಸರಸ್ವತಿಯು ನಟಿಯಾಗಿ ಅಲ್ಲದಿದ್ದರೂ, ನಟಿಯ ಮತ್ತು ನಾಟ್ಯಗೃಹದ ರಕ್ಷಕಿಯಾಗಿ ಹಾಗೂ ಪ್ರಮುಖ ದೇವತೆಯಾಗಿ ಚಿತ್ರಿತಳಾಗಿದ್ದಾಳೆ. ಇದು ಮುಂದೆ ಸರಸ್ವತಿಗೆ, ನಾಟ್ಯವೇ ಮೊದಲಾದ ಕಲೆಗಳಿಗೆ ಅಧಿದೇವತೆ ಎಂಬ ವಿಶೇಷಣ ಬರಲು ಕಾರಣವಾಗಿರಬಹುದು.

ಕನ್ನಡದ ಬಹುತೇಕ ಚಂಪೂ ಕವಿಗಳು, ವಿರಳವಾಗಿ ಇತರ ಕವಿಗಳು ಕಾಳಿದಾಸನಿಗೆ ವಿಶೇಷ ಮನ್ನಣೆ ಕೊಟ್ಟಿರುವುದನ್ನು ಕಾಣಬಹುದು. ತಮ್ಮ ಕಾವ್ಯಸಮರ್ಥನೆಗೆ ಆತನನ್ನು ಒಂದು ಅಳತೆಗೋಲಾಗಿ ಸ್ವೀಕರಿಸಿರುವುದನ್ನೂ ಕಾಣಬಹುದು. ಕನ್ನಡ ಸಾಹಿತಿಗಳು ಮತ್ತು ಸಾಹಿತ್ಯದ ಮೇಲೆ ವಿಶೇಷ ಪ್ರಭಾವ ಬೀರಿರುವ ಕಾಳಿದಾಸನು ಸರಸ್ವತಿಯ ಬಗ್ಗೆ ಏನು ಹೇಳಿದ್ದಾನೆ ಎಂಬುದು ಕುತೂಹಲಕಾರಿಯಾಗಿದೆ. ಕಾಳಿದಾಸನು ತನ್ನ 'ರಘುವಂಶ', 'ಕುಮಾರಸಂಭವ', 'ವಿಕ್ರಮೋರ್ವಶೀಯ', 'ಮಾಳವಿಕಾಗ್ನಿಮಿತ್ರ' ಮತ್ತು 'ಮೇಘದೂತ' ಕೃತಿಗಳಲ್ಲಿ ಸರಸ್ವತಿಯನ್ನು ಉಲ್ಲೇಖಿಸಿದ್ದಾನೆ. ಆತ ಸರಸ್ವತಿಯ ಹೆಸರನ್ನು ಬೇರೆ ಬೇರೆ ಸಂದರ್ಭದಲ್ಲಿ ಬೇರೆ ಬೇರೆ ಅರ್ಥದಲ್ಲಿ ಬಳಸಿರುವುದನ್ನು ಕಾಣಬಹುದು. ಹೆಚ್ಚಿನ ಸಂದರ್ಭಗಳಲ್ಲಿ ವಾಕ್‌ದೇವತೆಯಾಗಿ ಸರಸ್ವತಿಯನ್ನು ಉಲ್ಲೇಖಿಸಿದ್ದಾನೆ.

---

4. Ibid, Lines 76-97. P3
5. Ibid, Chapter III. Lines 4-9. P.16
6. Ibid, Lines 17-32. P.17
7. Ibid, Lines 33-71a. P.18
8. Ibid, Lines 71b-89 P.19-20

'ಸಾಹಿತ್ಯ'ವನ್ನು ಸರಸ್ವತಿಯ ಪ್ರಾತಿನಿಧಿಕ ರೂಪ ಎಂದು ಕರೆದಿರುವ ಕಾಳಿದಾಸ, 'ಕುಮಾರಸಂಭವ'ದಲ್ಲಿ ನವವಧೂವರರಾದ ಪಾರ್ವತಿ ಮತ್ತು ಶಿವನನ್ನು ಕ್ರಮವಾಗಿ ಪ್ರಾಕೃತ ಮತ್ತು ಸಂಸ್ಕೃತ ಭಾಷೆಗಳಲ್ಲಿ ಸರಸ್ವತಿ(ವಾಕ್‌ದೇವತೆ)ಯು ಸ್ತುತಿಸುತ್ತಿರುವಂತೆ ಚಿತ್ರಿಸಿದ್ದಾನೆ.

ದ್ವಿಧಾಪ್ರಯುಕ್ತೇನ ಚವಾಙ್ಮಯೇನ।
ಸರಸ್ವತೀ ತನ್ಮಿಥುನಂ ನುನಾವ॥
ಸಂಸ್ಕಾರ ಪೂತೇನ ವರಂ ವರೇಣ್ಯಂ।
ವಧೂಂ ಸುಖಗ್ರಾಹ್ಯಬಂಧನೇನ॥[9]

ಅಕ್ಷರಬ್ರಹ್ಮಳೂ ಶಬ್ದಬ್ರಹ್ಮಳೂ ಆದ ಸರಸ್ವತಿಯು, ವರನಿಗೆ ತಕ್ಕುದಾದ ಸಂಸ್ಕೃತ ಶಬ್ದಜಾಲಗಳಿಂದಲೂ, ವಧುವಿಗೆ ಸುಲಭವಾಗಿ ಅರ್ಥವಾಗುವಂತೆ ನಿತ್ಯಬಳಕೆಯ ಪ್ರಾಕೃತ ಭಾಷೆಯಿಂದಲೂ ಶಿವ-ಪಾರ್ವತಿಯರ ಗುಣಗಾನ ಮಾಡುತ್ತಾಳೆ. ಇದೇ ಕಾವ್ಯದಲ್ಲಿ ರತಿಯು ದೇಹತ್ಯಾಗಕ್ಕೆ ಸಿದ್ಧಳಾದಾಗ ಕೇಳಿಸಿದ ವಾಣಿ ಸರಸ್ವತೀ ಎಂದು,[10] ವಾಣಿ ಮತ್ತು ಸರಸ್ವತೀ ಪದಗಳಲ್ಲಿ ಅಭೇದ ಕಲ್ಪಿಸಿದ್ದಾನೆ.

'ರಘುವಂಶ'ದಲ್ಲಿಯೂ ಸರಸ್ವತಿಯು ವಾಕ್‌ದೇವತೆಯಾಗಿದ್ದಾಳೆ.[11] 'ಮಾಳವಿಕಾಗ್ನಿಮಿತ್ರ'ದಲ್ಲಿ 'ಸಂಗೀತ ಶಿಕ್ಷಕಿ'ಯಾಗಿ ಚಿತ್ರಿತಳಾಗಿದ್ದಾಳೆ. ಅಲ್ಲಿ ಸರಸ್ವತಿಯು ಸಂಗೀತವನ್ನು ಉಪದೇಶ ಮಾಡಿದ್ದಕ್ಕೆ ಕಡುಬನ್ನು ಸಮರ್ಪಿಸಿದ್ದನ್ನು ವಿದೂಷಕ ಹೇಳುವ ಚಿತ್ರಣವಿದೆ.[12] 'ವಿಕ್ರಮೋರ್ವಶೀ'ಯಾದಲ್ಲಿ ಸರಸ್ವತೀ ಕವಯಿತ್ರಿಯೂ ಹೌದು. ಸರಸ್ವತೀ **'ಲಕ್ಷ್ಮೀಸ್ವಯಂವರ'**[13] ಎಂಬ ಕಾವ್ಯವನ್ನು ರಚಿಸಿದ್ದಂತೆ ಉಲ್ಲೇಖವಿದೆ.

'ರಘುವಂಶ' ಕಾವ್ಯದ ಪ್ರಥಮ ಸರ್ಗದ ಮೊದಲ ಪದ್ಯದಲ್ಲಿಯೇ[14] ಕಾಳಿದಾಸ ವಾಕ್ ಮಹಿಮೆಯನ್ನು ಕುರಿತು ಹಾಡಿದ್ದಾನೆ. ಜಗದ ತಾಯಿತಂದೆಯರಾದ ಶಿವಪಾರ್ವತಿಯರನ್ನು ವಾಕ್ ಮತ್ತು ಅರ್ಥದ ಅರಿವಿಗಾಗಿ ಬೇಡುತ್ತಾನೆ. ವಾಕ್ ಮತ್ತು ಅರ್ಥ ಎರಡೂ ಒಂದನ್ನು ಬಿಟ್ಟು ಇನ್ನೊಂದು ಇರಲಾರದು; ಹಾಗೆಯೇ ಶಿವಪಾರ್ವತಿಯರೂ ಸಹ ಎಂಬುದು ಆತನ ಅಭಿಮತ. **'ಅನ್ಯಾದೃಶ**

---

9. ಗೋಪಾಲರಾವ್ ಬಿ.: ಕುಮಾರಸಂಭವ ಮಹಾಕಾವ್ಯ ಸಮಗ್ರ ಗದ್ಯಾನುವಾದ, ಪು.562-63
10. ಅದೇ, ಪು.299 (ಇತಿ ದೇಹ ವಿಮುಕ್ತಯೇಸ್ಥಿತಾಂರತಿ ಮಾಕಾಶಭವಾ ಸರಸ್ವತೀ)
11. ರಘುವಂಶ, 4-6. (ಪರಮೇಶ್ವರಭಟ್ಟ ಎಸ್.ವಿ.: ಕನ್ನಡ ಕಾಳಿದಾಸ ಮಹಾಸಂಪುಟ. ಪು.208) (ಅರ್ಥಯುತ ವಚನದಿಂ ಸೇವಿಸಿದಳಾ ವಾಣಿ ಮುದದೆ)
12. ಮಾಳವಿಕಾಗ್ನಿ ಮಿತ್ರ, ಮೊದಲನೆಯ ಅಂಕ, ಸಾಲುಗಳು: 16-17 (ಪರಮೇಶ್ವರಭಟ್ಟ ಎಸ್.ವಿ:ಕನ್ನಡ ಕಾಳಿದಾಸ ಮಹಾಸಂಪುಟ. ಪು.401)
13. ವಿಕ್ರಮೋರ್ವಶೀಯ ಮೂರನೆಯ ಅಂಕ (ಪರಮೇಶ್ವರಭಟ್ಟ ಎಸ್.ವಿ: ಕನ್ನಡ ಕಾಳಿದಾಸ ಮಹಾಸಂಪುಟ. ಪು.487) (ಸರಸ್ವತೀ ಕೃತ ಕಾವ್ಯಬಂಧೇ ಲಕ್ಷ್ಮೀಸ್ವಯಂವರೇ)
14. ರಘುವಂಶ, ಸರ್ಗ, 1-1 (ಪರಮೇಶ್ವರಭಟ್ಟ ಎಸ್.ವಿ.: ಕನ್ನಡ ಕಾಳಿದಾಸ ಮಹಾಸಂಪುಟ. ಪು. 197)

ಸಂಸರ್ಗಕ್ಕೆ ಸಮುಚಿತವಾದ ಹೋಲಿಕೆಯಾಗಿ ವಾಕ್ಕು, ಅರ್ಥ ಅವುಗಳ ಸಂಬಂಧವನ್ನು ಕಾಳಿದಾಸನು ಕೊಟ್ಟು ಇದಕ್ಕೊಂದು ಮಹಿಮಾ ವಿಶೇಷವನ್ನು ಒದಗಿಸಿದ್ದಾನೆ'[15].

ಕಾಳಿದಾಸ ತನ್ನ 'ಮೇಘದೂತ' ಕಾವ್ಯದಲ್ಲಿ ಸರಸ್ವತೀ ನದಿಯ ಮಹಿಮೆಯನ್ನು ಕೊಂಡಾಡಿದ್ದಾನೆ. ಮಹಾಭಾರತದ ಶಲ್ಯಪರ್ವದಲ್ಲಿ ಬರುವ ಬಲರಾಮನ ತೀರ್ಥಯಾತ್ರೆಯ ಕಥೆಯನ್ನು ಆಧರಿಸಿ, 'ಬಲರಾಮನು ಅಂದು ಸರಸ್ವತಿನದಿಯ ಜಲಸೇವನೆ ಮಾಡಿ ಶುಚಿಯಾದನು; ಇಂದು ನೀನೂ ಆ ಪುಣ್ಯಜಲವನ್ನು ಆಸ್ವಾದಿಸಿ ಹೃದಯಶುದ್ಧಿಯನ್ನು ಹೊಂದಿ, ನಿನ್ನ ಬಣ್ಣಮಾತ್ರವೇ ಕಪ್ಪು ಎನ್ನುವುದನ್ನು ನಿಜ ಮಾಡು'[16] ಎಂದು ಯಕ್ಷನು ಮೋಡಕ್ಕೆ ಹೇಳುತ್ತಾನೆ. 'ಮೇಘದೂತ'ದಲ್ಲಿ ಸರಸ್ವತಿನದಿ ಇದೆಯೆಂದು ಹೇಳಿದ ಕಾಳಿದಾಸ ರಘುವಂಶದಲ್ಲಿ ಅದು **'ಒಳಗೊಳಗೆ ಜಲ ಪರಿಯುವ ಸರಸ್ವತಿ...'**[17] ಎಂದು ಸರಸ್ವತೀ ನದಿ ಅಂತರ್ಗಾಮಿಯಾಗಿದ್ದುದನ್ನು ಸೂಚಿಸಿದ್ದಾನೆ.

ಅಶ್ವಘೋಷ ತನ್ನ 'ಬುದ್ಧಚರಿತ'[18] ಮತ್ತು 'ಸೌಂದರಾನಂದ'[19] ಕೃತಿಗಳಲ್ಲಿ ಮಹಾಭಾರತದ ಶಲ್ಯಪರ್ವದಲ್ಲಿ ಉಲ್ಲೇಖಗೊಂಡಿರುವ ಕಥೆಯನ್ನು ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಸಂಕ್ಷೇಪಿಸಿದ್ದಾನೆ. ಸರಸ್ವತಿಗೆ ದೇವರಿಂದ ಜನಿಸಿದ 'ಸಾರಸ್ವತ' ಎಂಬ ಮಗನಿರುತ್ತಾನೆ. ಹನ್ನೆರಡು ವರ್ಷಗಳಷ್ಟು ದೀರ್ಘವಾದ ಬರಗಾಲದಲ್ಲಿ ವೇದಗಳೂ ಸೇರಿದಂತೆ ಎಲ್ಲವೂ ನಾಶವಾಗುತ್ತಿದ್ದಾಗ, ಸಾರಸ್ವತನೊಬ್ಬನೇ ವೇದಗಳನ್ನು ಉಳಿಸಿಕೊಳ್ಳುತ್ತಾನೆ. ಇದಕ್ಕಾಗಿ ಬರಗಾಲದಲ್ಲಿ ಅವನ ತಾಯಿ ಸರಸ್ವತೀ ನದಿಯು ಆತನಿಗೆ ಮೀನುಗಳನ್ನು ಆಹಾರವಾಗಿ ಕೊಡುತ್ತಿದ್ದಳು. ಬರಗಾಲದ ನಂತರ ಸಾರಸ್ವತ ವೇದಗಳನ್ನು ಬ್ರಾಹ್ಮಣರಿಗೆ ಕಲಿಸಿ ಉಳಿಸಿದ ಕತೆಯನ್ನು ಅಶ್ವಘೋಷ ಸಂಕ್ಷೇಪವಾಗಿ ನಿರೂಪಿಸಿದ್ದಾನೆ.

ಭಾರವಿಯು ತನ್ನ 'ಕಿರಾತಾರ್ಜುನೀಯ'ದಲ್ಲಿ ಸರಸ್ವತಿಯನ್ನು, ಸರಸ್ವತೀ, ಭಾರತೀ ಎಂದು ಕರೆದು ವರ್ಣಿಸಿದ್ದಾನೆ. ಎರಡೂ ಹೆಸರುಗಳೂ ವಾಕ್ **(ವಾಣೀ)** ಸಂಬಂಧಿಯಾಗಿಯೇ ಇವೆ. ಅಕ್ಷರಗಳನ್ನೇ ಆಭರಣಗಳನ್ನಾಗಿ ಧರಿಸಿರುವವಳು **(ವಿವಕ್ತವರ್ಣಾಭರಣಾ)**; ಕಿವಿಗೆ ಇಂಪನ್ನು ಉಂಟುಮಾಡುವವಳು **(ಸುಖಶ್ರುತಿಃ ಪ್ರಸಾದಯಂತೀ)**; ಶತ್ರುವಿನ ಹೃದಯಗಳನ್ನೂ ಒಲಿಸಿಕೊಳ್ಳಬಲ್ಲವಳು **(ಹೃದಯಾನ್ಯ ಅಪಿ ದ್ವಿಷಾಂ)** ಕಾವ್ಯದಲ್ಲಿ ಪ್ರಸನ್ನವಾದ ಗಂಭೀರವಾದ ಪಾದಗಳನ್ನುಳ್ಳವಳೂ **(ಪ್ರಸನ್ನ ಗಂಭೀರಪಾದಾ ಸರಸ್ವತೀ)** ಎಂದು ಸರಸ್ವತಿಯನ್ನು ಸ್ತುತಿಸಿದ್ದಾನೆ. **'ಇಷ್ಟಗುಣಾಯ ರೋಚತಾಂ**

---

15. ಶ್ರೀಕಂಠಯ್ಯ ತೀ.ನಂ.: ಭಾರತೀಯ ಕಾವ್ಯಮೀಮಾಂಸೆ. ಪು 179
16. ಮೇಘದೂತ. ಪದ್ಯ 49 (ಪರಮೇಶ್ವರಭಟ್ಟ ಎಸ್.ವಿ.: ಕನ್ನಡ ಕಾಳಿದಾಸ ಮಹಾಸಂಪುಟ. ಪು. 51)
17. ರಘುವಂಶ, ಸರ್ಗ –3; ಪದ್ಯ –9 (ಪರಮೇಶ್ವರಭಟ್ಟ ಎಸ್.ವಿ.: ಕನ್ನಡ ಕಾಳಿದಾಸ ಮಹಾಸಂಪುಟ. ಪು. 197)
18. C.f. Mohammad Israil Khan: Sarasvati in Sanskrit Literature, P.153
19. Ibid. P.153

ರುಚಿತಾರ್ಥ ಭವತೇ ಪಿ ಭಾರತೀ' ಎಂಬ ವರ್ಣನೆಯಲ್ಲಿ ಭಾರತಿ ವಾಕ್‌ದೇವತೆಯಾಗಿರುವುದನ್ನು ಗಮನಿಸಬಹುದು.[20]

ಮಾಘ ಕವಿಯೂ ಸಹ ತನ್ನ 'ಶಿಶುಪಾಲವಧಾ'[21] ಕೃತಿಯಲ್ಲಿ ಭಾರತೀ ಎಂಬ ಹೆಸರಿನಿಂದ ಸರಸ್ವತಿಯನ್ನು ವರ್ಣಿಸಿರುವುದನ್ನು ಕಾಣಬಹುದು. ಆತ ಇನ್ನೊಂದು ಪದ್ಯದಲ್ಲಿ **"ಶುದ್ಧವರ್ಣಾ ಸರಸ್ವತೀ"**[22] ಎಂದು ಸ್ತುತಿಸಿರುವುದು ವಿಶೇಷವಾಗಿದೆ. ಸರಸ್ವತಿಯದು ಶ್ವೇತವರ್ಣ. ಆಕೆಯ ವಸ್ತ್ರಗಳೂ ಶ್ವೇತವರ್ಣದವು. ಬಿಳಿ ಆಕೆಯ ಪ್ರಾತಿನಿಧಿಕ ಬಣ್ಣ. ಇಲ್ಲಿ ವರ್ಣ ಎಂದರೆ ಬಣ್ಣ ಎಂಬರ್ಥದ ಜೊತೆಗೆ ಅಕ್ಷರ ಎಂಬ ಅರ್ಥವೂ ಇರುವುದರಿಂದ ಶುದ್ಧವಾದ ಅಕ್ಷರ ದೇವತೆಯೆಂದು ಅಥವಾ ಶುದ್ಧವಾದ ಅಕ್ಷರಗಳನ್ನುಳ್ಳವಳೂ ಎಂದರ್ಥವಾಗುತ್ತದೆ.

ಭವಭೂತಿಯು ತನ್ನ 'ಮಹಾವೀರಚರಿತೆ'ಯಲ್ಲಿ **'ವಿಪುಲಾರ್ಥ ಭಾರತೀ ತೋರಿ ಮೆರೆವಳು ಓಜದ ಪ್ರಸಾದ ಗುಣವನು'**[23] ಎಂದು ಸರಸ್ವತಿಯನ್ನು ವಾಗ್ದೇವತೆಯಾಗಿ ಭಾರತೀ ಎಂಬ ಹೆಸರಿನಲ್ಲಿ ಸ್ತುತಿಸಿದ್ದಾನೆ. 'ಉತ್ತರರಾಮಚರಿತೆ'ಯಲ್ಲಿ **'ಅಮೃತ ಕಲಾಸ್ವರೂಪಿಣಿ ವಾಣಿ ಭಗವತಿ'**[24] ಎಂದು ವಾಗ್ದೇವತೆಯಾಗಿ ಸ್ತುತಿಸಿದ್ದಾನೆ. 'ಸರಸ್ವತಿ(ಬ್ರಹ್ಮನ ದೇವಿ)ಯು ವಾಗ್‌ರೂಪದಲ್ಲಿ ದಾಸಿಯ ತೆರದೆ (ನನ್ನನ್ನು) ಅನುಸರಿಸುವಳು' ಎಂದು ಹೆಮ್ಮೆಪಟ್ಟುಕೊಳ್ಳುತ್ತಾನೆ.

ಶ್ರೀಹರ್ಷ ಕವಿಯು ತನ್ನ 'ನೈಷಧಮಹಾಕಾವ್ಯ'ದಲ್ಲಿ, ವಿಷ್ಣುವಿನ ಆಜ್ಞೆಯ ಮೇರೆಗೆ ದಮಯಂತೀ ಸ್ವಯಂವರದಲ್ಲಿ ಸರಸ್ವತೀ ಭಾಗವಹಿಸುವ ಚಿತ್ರಣವನ್ನು ನೀಡಿದ್ದಾನೆ.[25]

ಬ್ರಹ್ಮನ ಮುಖಕಮಲವನದಲ್ಲಿಯ ಹಂಸವಧುವೂ ತನ್ನದೆಲ್ಲ ಶುಭ್ರವರ್ಣೆಯೂ ಆಗಿರುವ ಸರಸ್ವತಿಯು ನನ್ನ ಮಾನಸದಲ್ಲಿ ನಿತ್ಯವೂ ನಲಿಯಲಿ ಎಂಬುದು ದಂಡಿಯ 'ಕಾವ್ಯಾದರ್ಶ'ದಲ್ಲಿ ಬಂದಿರುವ ಸರಸ್ವತಿಯ ಪ್ರಾರ್ಥನೆ.

> **ಚತುರ್ಮುಖ ಮುಖಾಂಭೋಜ ವನಹಂಸವಧೂರ್ಮಮ।**
> **ಮಾನಸೇ ರಮತಾಂ ನಿತ್ಯಂ ಸರ್ವಶುಕ್ಲಾ ಸರಸ್ವತೀ॥**[26]

ಬ್ರಹ್ಮನ ಮುಖಕಮಲದಲ್ಲಿ ಸರಸ್ವತಿಯು ಸರ್ವದಾ ನೆಲೆಸಿದ್ದಾಳೆ ಎಂಬುದು ವೈದಿಕ ಸಂಪ್ರದಾಯದ ನಂಬಿಕೆ. ಬ್ರಹ್ಮನ ಬಾಯಿಂದ (ನಾಲಗೆ) ಜನಿಸಿದವಳು ಸರಸ್ವತೀ ಎಂಬ ಕಲ್ಪನೆಯ ಮುಂದುವರೆದ ಭಾಗವಾಗಿದೆ ದಂಡಿಯ ಕಲ್ಪನೆ. ಆದರೆ, ಬ್ರಹ್ಮನ ಮುಖದಲ್ಲಿ ಯಾವಾಗಲೂ

---

20. Ibid. P.153-54
21. Ibid. P.154
22. Ibid. P.154
23. ಪರಮೇಶ್ವರಭಟ್ಟ ಎಸ್.ವಿ.: ಕನ್ನಡ ಭವಭೂತಿ ಮಹಾಸಂಪುಟ ಪು.5
24. ಅದೇ, ಪು.259 (ದೇವತಾಂ ವಾಚಮಮೃತಾಮಾತ್ಮನಃ ಕಲಾಂ)
25. c.f. Mohammad Israil Khan: Sarasvati in Sanskrit Literature, P.156
26. ಶಂಕರ್ ಕೆದಿಲಾಯ: ಕರ್ನಾಟಕ ಕವಿರಾಜಮಾರ್ಗಂ, ಪರಿಶಿಷ್ಟಂ –3, ಪು.123

ಇರತಕ್ಕವಳು, ನಿತ್ಯವೂ ಕವಿಯ ಮಾನಸದಲ್ಲಿ ರಮಿಸಲಿ ಎಂಬುದು ಕೆಲಮಟ್ಟಿನ ವಿರೋಧಾಭಾಸದಿಂದ ಕೂಡಿದೆ.[27] ದಂಡಿ ಹೇಳುವ 'ಸರ್ವಶುಕ್ಲಾ ಸರಸ್ವತೀ' ಎಂಬುದು ಸರಸ್ವತಿಯು ಶ್ವೇತವರ್ಣೆ, ಶುಭ್ರವರ್ಣೆ ಎಂಬುದನ್ನು ಸೂಚಿಸುತ್ತದೆ. ಈ ಸ್ತುತಿಯು 'ಸರಸ್ವತೀರಹಸ್ಯೋಪನಿಷತ್ತು' ಸಂಕಲನದಲ್ಲಿ ಸೇರಿದೆ.[28]

ದಂಡಿಯ 'ಸರ್ವಶುಕ್ಲಾ ಸರಸ್ವತೀ' ಎಂಬ ಪರಿಕಲ್ಪನೆಯನ್ನು ಒಪ್ಪದ ವಿಜ್ಜಿಕಾ ಎಂಬ ಕವಯಿತ್ರಿ (ಬಾದಾಮಿ ಚಾಲುಕ್ಯರ ಇಮ್ಮಡಿ ಪುಲಿಕೇಶಿಯ ಸೊಸೆ. ಚಂದ್ರಾದಿತ್ಯನ ಪತ್ನಿ) 'ಕನ್ನೈದಿಲೆಯ ದಳದಂತೆ ಶ್ಯಾಮಲೆಯಾದ ನನ್ನನ್ನು –ವಿಜ್ಜಿಕೆಯನ್ನು– ಅರಿಯದೆಯೇ ಸರಸ್ವತೀ ಸರ್ವಶುಕ್ಲೆಯೆಂದು ದಂಡಿ ವ್ಯರ್ಥವಾಗಿ ಹೇಳಿದನು' ಎಂದು ಮೂದಲಿಸಿರುವುದನ್ನು ಕಾಣಬಹುದು. ಇದು ಇಷ್ಟಕ್ಕೇ ನಿಲ್ಲದೆ, **'ಕರ್ಣಾಟ ದೇಶದ ವಿಜಯಾ ಎಂಬ ಹೆಸರಿನಾಕೆ ಸರಸ್ವತಿಯಂತೆ ಪ್ರಸಿದ್ಧಳು; ಕಾಳಿದಾಸನ ತರುವಾಯ ವೈದರ್ಭೀ ಮಾರ್ಗದ ಕವಿತೆಗೆ ಈಕೆಯೇ ನೆಲೆವೀಡು'** ಎಂದು ವಿಜ್ಜಿಕೆಯನ್ನು ಸರಸ್ವತಿಗೆ ಸಮಾನಳಾಗಿ ಚಿತ್ರಿಸಿರುವುದನ್ನು ಕಾಣಬಹುದು.[29]

ಸುಬಂಧು ಕವಿಯು ತನ್ನ 'ವಾಸವದತ್ತಾ'ದಲ್ಲಿ ಸರಸ್ವತಿಯನ್ನು ವಾಗ್ದೇವತೆಯಾಗಿ ಸ್ತುತಿಸಿದ್ದಾನೆ.[30] ಈತನ **'ಆಕಾಶ ಸರಸ್ವತೀ'** ಎಂಬ ವರ್ಣನೆ ಋಗ್ವೇದದಲ್ಲಿ ಸರಸ್ವತಿಯನ್ನು ಆಕಾಶಾಭಿಮಾನಿ ದೇವತೆ ಎಂದು ಕರೆದಿರುವುದನ್ನು ನೆನಪಿಸುತ್ತದೆ.[31]

ಬಾಣನ ಸರಸ್ವತೀ ಪರಿಕಲ್ಪನೆ ಕುತೂಹಲಕಾರಿಯಾಗಿದೆ. ಬಾಣನ 'ಕಾದಂಬರಿ' ಮತ್ತು 'ಹರ್ಷಚರಿತ' ಕೃತಿಗಳನ್ನು ಆಧರಿಸಿ ಬಾಣನ ಸರಸ್ವತೀ ಪರಿಕಲ್ಪನೆಯನ್ನು ಮೊಹಮದ್ ಇಸ್ರೈಲ್ ಖಾನ್ ಅವರು ಸಮಗ್ರವಾಗಿ ಪರಿಶೀಲಿಸಿದ್ದಾರೆ. ಅದನ್ನು ಕೆಳಕಂಡಂತೆ ಸಂಗ್ರಹಿಸಬಹುದು. ಮೊದಲನೆಯದಾಗಿ 'ಕಾದಂಬರಿ'ಯಲ್ಲಿ ಕವಿಯು ತನ್ನ ವಂಶವೃಕ್ಷವನ್ನು ಹೇಳುವಾಗ, ತನ್ನ ವಂಶದವರಿಗೂ ಸರಸ್ವತಿಗೂ ಇದ್ದ ನಂಟನ್ನು ವಿವರವಾಗಿ ತಿಳಿಸುತ್ತಾನೆ. ವಾತ್ಸ್ಯಾಯನ ಕುಟುಂಬದಲ್ಲಿನ ಕುಬೇರ ಎಂಬುವವನಿಂದ ಪ್ರಾರಂಭವಾಗುವ ಈತನ ವಂಶಾವಳಿಯಲ್ಲಿ ಕ್ರಮವಾಗಿ ಕುಬೇರ, ಅಹರ್ಪತಿ, ಚಿತ್ರಭಾನು, ಬಾಣ ಎಂಬುವವರಿದ್ದಾರೆ. ಹರ್ಷಚರಿತದಲ್ಲಿ ಬೇರೆಯದೇ ಆದ ಕಥೆಯಿದೆ. ಅಕ್ಷಮಾಲೆಯ ಮಗ ವತ್ಸ ಎಂಬುವವನ ವಂಶದಲ್ಲಿಯೇ ವಾತ್ಸ್ಯಾಯನ ಹುಟ್ಟುತ್ತಾನೆ. ಇವನಿಂದ ವಂಶ ಮುಂದುವರೆದು

---

27. ಮುಗಳಿ ರಂ.ಶ್ರೀ.: ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ. ಪು.2
28. ಲಕ್ಷ್ಮೀನರಸಿಂಹಮೂರ್ತಿ ಹೆಚ್.ಎಸ್.: ಸರಸ್ವತೀ ರಹಸ್ಯೋಪನಿಷಚ್ಚಂದ್ರಿಕೆ, ಆಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ. 1985
29. ಶ್ರೀಕಂಠಯ್ಯ ತೀ.ನಂ.: ಭಾರತೀಯ ಕಾವ್ಯಮೀಮಾಂಸೆ. ಪು.20–21ರ ಅಡಿಟಿಪ್ಪಣಿ ಸಂಖ್ಯೆ 10
30. c.f. Mohammad Israil Khan: Sarasvati in Sanskrit Literature, P.158 (ಕವಿಚಿದ್ ವಾಲ್ಮೀಕಿಸರಸ್ವತೀಂ ಇವ ದರ್ಶಿತೆ ಇಕ್ಷ್ವಾಕುವಂಶಾಂ ಮತ್ತು ಆಕಾಶಸರಸ್ವತೀ ಸಮುದಚರತ್)
31. ಋಗ್ವೇದ 2.1.11; 7.2.8

ಚಿತ್ರಭಾನು ಎಂಬುವವನ ಮಗನಾಗಿ ಬಾಣ ಜನಿಸುತ್ತಾನೆ. ಈತನ ವಂಶಜನಾದ ಕುಬೇರ ಸರಸ್ವತಿಯ ಆರಾಧಕನಾಗಿದ್ದನು. ಸರಸ್ವತೀ ಯಾವಾಗಲೂ ಕುಬೇರನ ಬಾಯಿಯಲ್ಲಿಯೇ (ವಾಕ್‌ದೇವತೆ) ನೆಲೆಸಿರುತ್ತಿದ್ದಳು. ಈ ವಂಶದ ವತ್ಸ, ಸರಸ್ವತಿಯ ಸವತಿಯ ಮಗ. ದಧೀಚನಿಗೆ ಅಕ್ಷಮಾಲೆ ಮತ್ತು ಸರಸ್ವತೀ ಎಂಬ ಇಬ್ಬರು ಪತ್ನಿಯರು. ಆತನಿಗೆ ಅಕ್ಷಮಾಲೆಯಿಂದ ವತ್ಸ ಎಂಬ ಮಗನಿದ್ದಂತೆ ಸರಸ್ವತಿಯಿಂದ ಸಾರಸ್ವತ ಎಂಬ ಮಗನೂ ಇರುತ್ತಾನೆ. ವತ್ಸ ಮತ್ತು ಸಾರಸ್ವತರು ಸಹೋದರರಷ್ಟೇ ಆಗಿರದೆ ಉತ್ತಮ ಗೆಳೆಯರೂ ಕೂಡಾ ಹೌದು. ಸರಸ್ವತಿಯ ಅನುಗ್ರಹದಿಂದ ವೇದಪಂಡಿತನಾದ ಸಾರಸ್ವತ ತನ್ನ ಜ್ಞಾನವನ್ನು ವತ್ಸನಿಗೂ ಬರುವಂತೆ ನೋಡಿಕೊಳ್ಳುತ್ತಾನೆ. ಒಟ್ಟಿನಲ್ಲಿ ಬಾಣ ಸರಸ್ವತಿಯ ವಂಶಸ್ಥ.

'ಹರ್ಷಚರಿತೆ'ಯಲ್ಲಿನ ಸರಸ್ವತಿಯ ಬಗೆಗಿನ ಕಥೆಯೊಂದು ಹೀಗಿದೆ. ಸರಸ್ವತೀ ಬ್ರಹ್ಮನ ಮಗಳು; ಬ್ರಹ್ಮಲೋಕದಲ್ಲಿಯೇ ವಾಸ. ಒಮ್ಮೆ ಬ್ರಹ್ಮನು ದೇವತೆಗಳೊಂದಿಗೆ ವಿದ್ಯೆಯೊಂದರ ಬಗ್ಗೆ ಚರ್ಚೆ ನಡೆಸುತ್ತಿರುತ್ತಾನೆ. ಭಿನ್ನಾಭಿಪ್ರಾಯಗಳಿಂದಾಗಿ ವಿವಾದವುಂಟಾಗಿ, ದೂರ್ವಾಸನು ಉಪಮನ್ಯು ಎಂಬ ಮುನಿಯೊಂದಿಗೆ ಜಗಳವಾಡುತ್ತಾನೆ. ಅಲ್ಲಿಯೇ ತಂದೆಯ ಬಳಿ ಇದ್ದ ಸರಸ್ವತಿಗೆ ಅದನ್ನು ನೋಡಿ ನಗು ತಡೆಯಲಾಗದೆ ನಕ್ಕುಬಿಡುತ್ತಾಳೆ. ಅದರಿಂದ ಕುಪಿತನಾದ ದೂರ್ವಾಸ, ಸರಸ್ವತಿಗೆ ಭೂಮಿಯಲ್ಲಿ ಹುಟ್ಟುವಂತೆ ಶಾಪ ಕೊಡುತ್ತಾನೆ. ಆದರೆ ಬ್ರಹ್ಮನ ಬೇಡಿಕೆಯಂತೆ, ಅವಳಿಗೆ ಒಬ್ಬ ಮಗ ಹುಟ್ಟುವವರೆಗೆ ಮಾತ್ರ ಇದ್ದು, ನಂತರ ಬ್ರಹ್ಮಲೋಕಕ್ಕೆ ಬರಬಹುದು ಎಂದು ಶಾಪವನ್ನು ಬದಲಿಸುತ್ತಾನೆ. ಅದರಂತೆ ಸರಸ್ವತೀ ಹಿರಣ್ಯವಾಹ ಎಂಬಲ್ಲಿ ದಧೀಚನ ಪ್ರೀತಿಗೆ ಪಾತ್ರಳಾಗಿ ಸಾರಸ್ವತ ಎಂಬ ಮಗನನ್ನು ಪಡೆಯುತ್ತಾಳೆ.[32]

ಬಾಣನ ಈ ನಿರೂಪಣೆಗೆ 'ಮಹಾಭಾರತ'ದ ಶಲ್ಯಪರ್ವತದಲ್ಲಿ ಬರುವ ಕಥೆಯೇ ಪ್ರೇರಕ. 'ವಾಯುಪುರಾಣ'[33] ಮತ್ತು 'ಬ್ರಹ್ಮಾಂಡಪುರಾಣ'[34]ಗಳಲ್ಲಿ ಸಾರಸ್ವತನು ಸರಸ್ವತೀ ಮತ್ತು ದಧೀಚನ ಮಗನೆಂದು ಹೇಳಿದೆ.

ಮೇಲಿನ ಮಾತುಗಳಿಂದ ಸ್ಪಷ್ಟವಾಗುವ ಸರಸ್ವತಿಯ ವಿಚಾರಗಳು ಎರಡು. ಒಂದು, ಆಕೆ ಬ್ರಹ್ಮನ ಮಗಳು; ದೂರ್ವಾಸನ ಶಾಪನಿಮಿತ್ತವಾಗಿ ಭೂಮಿಗೆ ಬಂದು ದಧೀಚನಿಂದ ಸಾರಸ್ವತ ಎಂಬ ಮಗನನ್ನು ಪಡೆದು ಬ್ರಹ್ಮಲೋಕಕ್ಕೆ ಹಿಂತಿರುಗಿದ್ದಳು. ಎರಡು, ಆಕೆ ವಾಗ್ದೇವತೆ.

---

32. Suryanarayana Rao M.K. (Ed): Harshacharitha, Chapter -2, P.46-85
33. c.f. Mohammad Israil Khan: Sarasvati in Sanskrit Literature, P.158 (ಸಾರಸ್ವತಃ ಸರಸ್ವತ್ಯಾಮ್ ದಧೀಚಾತ ಚೊ ಉಪಪದ್ಯತೇ)
34. Ibid., P.162 (ಸರಸ್ವತಃ ಸರಸ್ವತ್ಯಾಮ್ ದಧೀಚಸ್ಯೊ ಇದಪಾದ್ಯತ್)

ರಾಜಶೇಖರನು ತನ್ನ 'ಕಾವ್ಯಮೀಮಾಂಸಾ' ಕೃತಿಯಲ್ಲಿ ಸರಸ್ವತೀ ವಿದ್ಯಾದೇವತೆ, ಜ್ಞಾನದೇವತೆ ಎಂಬುದಕ್ಕೆ ಒಂದು ತಾತ್ವಿಕ ಕಲ್ಪನೆಯನ್ನು ಒದಗಿಸಿದ್ದಾನೆ. ಕಾವ್ಯಮೀಮಾಂಸೆಯಲ್ಲಿ (1–14 ಸಾಲುಗಳಲ್ಲಿ) ಬರುವ ಸರಸ್ವತೀ ವಿಚಾರಗಳನ್ನು ಕೆಳಕಂಡಂತೆ ಕ್ರೋಡೀಕರಿಸಲಾಗಿದೆ. ಸರಸ್ವತಿಯು ಜ್ಞಾನದ ಅಧಿದೇವತೆ. ಆಕೆಯು ಭೂಮಿಯಲ್ಲಿದ್ದಾಗ ಪುತ್ರಾಪೇಕ್ಷೆಯಿಂದ ಹಿಮಾಲಯದಲ್ಲಿ ತಪಸ್ಸನ್ನು ಮಾಡಿ ಬ್ರಹ್ಮನಿಂದ ಕಾವ್ಯಪುರುಷ (ಸಾರಸ್ವತ) ಎಂಬ ಮಗನನ್ನು ಪಡೆದಳು. ಒಮ್ಮೆ ಋಷಿಗಳು ಮತ್ತು ದೇವತೆಗಳ ನಡುವೆ ಶ್ರುತಿಗಳ ವಿಚಾರವಾಗಿ ಭಿನ್ನಾಭಿಪ್ರಾಯ ಮೂಡಿದಾಗ, ಬ್ರಹ್ಮನು ಸರಸ್ವತಿಯನ್ನು ನ್ಯಾಯಾಧೀಶಳನ್ನಾಗಿ ನೇಮಿಸಿದ್ದರಿಂದ ಆಕೆಯು ಬ್ರಹ್ಮಲೋಕಕ್ಕೆ ಹೋಗಬೇಕಾಗುತ್ತದೆ. ತಾಯಿಯ ಅಗಲಿಕೆಯಿಂದ ವಿಚಲಿತನಾದ ಕಾವ್ಯಪುರುಷ ಮನೆಯನ್ನು ಬಿಟ್ಟು ಹೊರಡುತ್ತಾನೆ. ಆಗ ಗೌರಿಯು, ಸಾಹಿತ್ಯವಿದ್ಯಾ ಎಂಬ ಮಗಳನ್ನು ಸೃಷ್ಟಿಸಿ, ಕಾವ್ಯಪುರುಷನನ್ನು ಹುಡುಕಿ ಮದುವೆಯಾಗುವಂತೆ ಹೇಳುತ್ತಾಳೆ. ಆಗ ಸಾಹಿತ್ಯವಿದ್ಯಾ ಋಷಿಗಳೊಂದಿಗೆ ದೇಶವಿದೇಶಗಳನ್ನು ಸುತ್ತಿ, ತನ್ನ ಭಾವೀ ಪತಿಯನ್ನು ಹುಡುಕುತ್ತಾ ಬರುತ್ತಾಳೆ. ವಿದರ್ಭದೇಶದ ವತ್ಸಗುಲ್ಮನಗರದಲ್ಲಿ ಕಾವ್ಯಪುರುಷನನ್ನು ಗಾಂಧರ್ವವಿಧಿಯಲ್ಲಿ ಮದುವೆಯಾಗಿ, ಹಿಮಾಲಯದಲ್ಲಿ ಜೊತೆಯಾಗಿ ಕುಳಿತಿದ್ದ ಗೌರೀ ಮತ್ತು ಸರಸ್ವತಿಯರನ್ನು ಸೇರಿಕೊಳ್ಳುತ್ತಾರೆ.[35]

ರಾಜಶೇಖರನ ಕಥೆಯಿಂದ ತಿಳಿಯುವ ವಿಚಾರಗಳು ಇಂತಿವೆ: ಸರಸ್ವತೀ ತಪಸ್ಸನ್ನು ಮಾಡಿ ಬ್ರಹ್ಮನಿಂದ ಕಾವ್ಯಪುರುಷ (ಸಾರಸ್ವತ) ಎಂಬ ಮಗನನ್ನು ಪಡೆದದ್ದು. ಆಕೆ ವಿದ್ಯಾಧಿದೇವತೆ ಮತ್ತು ಜ್ಞಾನದೇವತೆ; ನ್ಯಾಯಾಧೀಶಳೂ ಹೌದು. ಗೌರಿಯ ಮಾನಸಪುತ್ರಿಯಾದ 'ಸಾಹಿತ್ಯವಿದ್ಯಾ' ಸರಸ್ವತಿಯ ಸೊಸೆ. ವಿದ್ಯಾಧಿದೇವತೆಯಾದ ಸರಸ್ವತಿಯ ಅನುಗ್ರಹದಿಂದ ಮಾತ್ರ ಕಾವ್ಯಪುರುಷನನ್ನು ಒಲಿಸಿಕೊಂಡು ಕಾವ್ಯರಚನೆ ಮಾಡಲು ಸಾಧ್ಯ. ಕಾವ್ಯಪುರುಷನನ್ನು ಒಲಿಸಿಕೊಳ್ಳಲು ಸಾಹಿತ್ಯವಿದ್ಯೆ ಗೊತ್ತಿರಬೇಕು.

ರಾಜಶೇಖರನು ಕವಿಯ ದಿನಚರಿ ಹೇಗಿರಬೇಕೆಂಬುದನ್ನೂ ಹೇಳಿದ್ದಾನೆ. ಆತನು ಹೇಳುವ ದಿನಚರಿಗಳಲ್ಲಿ ಅತಿ ಮುಖ್ಯವಾದುದು, ಕವಿಯಾದವನು ಮೊದಲೇ ಯೋಚಿಸಿದ್ದನ್ನು ಬರೆಯಲು ಪ್ರಾರಂಭಿಸುವ ಮೊದಲು, **'ಸಂಜೆಯಲ್ಲಿ ಸಂಧ್ಯೆಯನ್ನೂ ಸರಸ್ವತಿಯನ್ನೂ ಉಪಾಸನೆ ಮಾಡಬೇಕು. ಬಳಿಕ ಹಗಲಿನಲ್ಲಿ ರಚಿಸಿ ಪರೀಕ್ಷಿಸಿದ್ದನ್ನು ಹೊತ್ತು ಮುಳುಗುವವರೆಗೆ ಬರೆದಿಡಬೇಕು**.......ಇತ್ಯಾದಿ.[36] ಇಲ್ಲಿ ಸರಸ್ವತಿಯು ಕಾವ್ಯಾಧಿದೇವತೆ; ಆಕೆಯನ್ನು ಉಪಾಸಿಸಬೇಕೆನ್ನುವುದು ರಾಜಶೇಖರನ ಅಭಿಪ್ರಾಯವಾಗಿರುವಂತಿದೆ.

---

35. Ibid. , P162
36. ಶ್ರೀಕಂಠಯ್ಯ ತೀ.ನಂ.: ಭಾರತೀಯ ಕಾವ್ಯಮೀಮಾಂಸೆ ಕೃತಿಯಲ್ಲಿ ಉದ್ಧೃತ. ಪು.139–140

ಭರ್ತೃಹರಿಯು ತನ್ನ 'ನೀತಿಶತಕ'ದಲ್ಲಿ ವಾಕ್‌ಮಹಿಮೆಯನ್ನು ಕುರಿತು **'ವಾಗ್ಭೂಷಣಂ ಭೂಷಣಮ್'**[37] ಎನ್ನುತ್ತಾನೆ. ಬೇರೆಲ್ಲಾ ಆಭರಣಗಳಿಗಿಂತ ಮಾತೆಂಬ ಆಭರಣವೇ ನಿಜವಾದ ಮತ್ತು ಶಾಶ್ವತವಾದ ಆಭರಣ ಎಂಬುದು ಆತನ ಅಭಿಮತ. **ವಿದ್ಯೆಯೇ ಸರ್ವಶ್ರೇಷ್ಠ; ವಿದ್ಯೆಯಿಲ್ಲದವನು ಪಶು ಸಮಾನ**[38] ಎಂದು ಘೋಷಿಸುತ್ತಾನೆ. ಈ ಆಲೋಚನಾ ಧಾಟಿಯೇ ಮುಂದುವರಿದು ವಿದ್ಯೆ ಸಂಗೀತ ಕಲೆ ಜ್ಞಾನ ಇವುಗಳ ಸಂಗಮವೇ ಸರಸ್ವತೀ ಎಂಬ ಕಲ್ಪನೆಯು ಸಿದ್ಧವಾಯಿತು.

'ಹಲಾಯುಧ ನಿಘಂಟು' ಎಂದು ಹೆಸರಾಗಿರುವ 'ಅಭಿದಾನ ರತ್ನಮಾಲಾ'ದಲ್ಲಿ ಸರಸ್ವತಿಯನ್ನು 'ಯಾರು ಅದ್ವಿತೀಯವಾದ ಶಬ್ದಬ್ರಹ್ಮನೆನಿಸಿದ್ದಾಳೋ **(ಶಬ್ದಬ್ರಹ್ಮಯದೇತಂ)**, ಯಾರು ಸಮಸ್ತ ಪ್ರಾಣಿಗಳಿಗೂ ಚೈತನ್ಯರೂಪಳಾಗಿದ್ದಾಳೋ **(ಚೈತನ್ಯಂ ಚ ಸರ್ವಭೂತಾನಾಮ್)**, ಈ ಮೂರು ಲೋಕವೂ ಯಾರ ಪರಿಣಾಮ ಅಥವಾ ಬದಲಾವಣೆಯೆನಿಸಿದೆಯೋ **(ಪರಿಣಾಮ ಸ್ತ್ರೀಭುವನಮಖಿಲಮಿದಂ ಜಯತಿ ಸಾ ವಾಣಿ)** ಅಂತಹ ಸರಸ್ವತಿಯು ಸರ್ವೋತ್ಕೃಷ್ಟಳಾಗಿದ್ದಾಳೆ'[39] ಎಂದು ಸ್ತುತಿಸಿದೆ. ಮಾತಿನ ಅಧಿದೇವತೆ ಸರಸ್ವತಿಯೆಂಬುದನ್ನು 'ಅದ್ವಿತೀಯವಾದ ಶಬ್ದಬ್ರಹ್ಮಳು' ಎಂಬ ಮಾತು ಸ್ಪಷ್ಟವಾಗಿ ಪ್ರತಿಪಾದಿಸುತ್ತದೆ. ಸರಸ್ವತಿಯು ಚೈತನ್ಯರೂಪಿ ಎಂಬುದು ವೇದಗಳಲ್ಲೂ ವ್ಯಕ್ತವಾಗಿರುವ ವಿಚಾರವಾಗಿದೆ.

ಬಿಲ್ಹಣ ಮತ್ತು ಕಲ್ಹಣ ಇಬ್ಬರೂ ಕಾಶ್ಮೀರದ ಮಹಾಕವಿಗಳು. 'ವಿಕ್ರಮಾಂಕದೇವಚರಿತ' ಬಿಲ್ಹಣನ ಮಹಾಕಾವ್ಯವಾದರೆ ಕಲ್ಹಣನದು 'ರಾಜತರಂಗಿಣಿ'. ಇಬ್ಬರೂ ತಮ್ಮ ಕಾವ್ಯಗಳಲ್ಲಿ ಸರಸ್ವತಿಯನ್ನು ಶಾರದೆಯೆಂದು ಸ್ತುತಿಸಿದ್ದಾರೆ. ಭಾರತೀ ಮತ್ತು ವಾಗ್ದೇವೀ ಎಂಬ ಹೆಸರುಗಳನ್ನೂ ಬಳಸಿದ್ದಾರೆ. ಬಿಲ್ಹಣ ಮತ್ತು ಕಲ್ಹಣರ ಸರಸ್ವತೀ ಪರಿಕಲ್ಪನೆಯನ್ನು ಕೆಳಕಂಡಂತೆ ಗುರುತಿಸಬಹುದು. ಬಿಲ್ಹಣನು **'ಅನಭ್ರವೃಷ್ಟಿಃ ಶ್ರವಣಾಮೃತಸ್ಯ ಸರಸ್ವತೀವಿಬ್ರಹ್ಮಜನ್ಮಭೂಮಿಃ'** ಮತ್ತು **'ಕೋಮಲಪದಮ್ ಸರಸ್ವತೀಂ'** ಎಂದು ವಾಕ್‌ದೇವತೆಯನ್ನು ಸ್ತುತಿಸುತ್ತಾನೆ. ಹಾಗೆಯೇ ಸರಸ್ವತಿಯೇ ಕಾವ್ಯ ಮತ್ತು ಪ್ರತಿಭೆಯ ಅಧಿದೇವತೆ ಎಂದು ಹೇಳುತ್ತಾನೆ. ಕಾಶ್ಮೀರದ ಅಧಿದೇವತೆಯಾದ ಶಾರದೆಯು ಕೈಲಾಸ ಪರ್ವತದ ಮಧುಮತಿ ಎಂಬ ನದಿಯ ದಂಡೆಯಲ್ಲಿರುವ ಪ್ರವರಪುರ ಎಂಬಲ್ಲಿ ನೆಲೆ ನಿಂತಿದ್ದಾಳೆ. **'ಸರಸ್ವತೀ ಯದ್ ವದನೇಶು ನಿತ್ಯಮ್ ಆಭಾತಿ ವೀಣಾಮ್ ಇವ ವಾದಯಂತೀ'** ಅಂದರೆ ಸರಸ್ವತಿಯು ವೀಣಾವಾದಕಿಯೂ ಹೌದು. ಹಂಸ ಅವಳ ವಾಹನ. ಶ್ವೇತವಸ್ತ್ರಹಾರಗಳನ್ನು ಸರಸ್ವತೀ ಧರಿಸಿರುತ್ತಾಳೆ.[40]

---

37. ಭರ್ತೃಹರಿಯ ನೀತಿ ಶತಕ, ಸೂಕ್ತಿ 16 (ಸಂ. ಬಿ.ಎಸ್.ರಾಮಕೃಷ್ಣರಾವ್)
38. ಅದೇ, ಸೂಕ್ತಿ 17 (ವಿದ್ಯಾವಿಹೀನಃ ಪಶುಃ)
39. ಮಹಾದೇವಚ್ಚು ಟಿ.ಆರ್.: ನಾಂದಿ, ಪು.35ರಲ್ಲಿ ಉಧೃತ
40. C.f. Mohammad Israil Khan: Sarasvati in Sanskrit Literature, P.168-170

ಸರಸ್ವತೀ ಮತ್ತು ಶಾರದೆ ಬೇರೆಬೇರೆಯಲ್ಲ. ಕಾಶ್ಮೀರದ ಭೇದ ಎಂಬ ಪರ್ವತದಲ್ಲಿರುವ ಸರೋವರದಲ್ಲಿ ಈಗಲೂ ಸರಸ್ವತೀ ಹಂಸರೂಪದಲ್ಲಿ ನೆಲೆಸಿದ್ದಾಳೆ ಎಂದು ಸರಸ್ವತಿಯನ್ನು 'ಹಂಸರೂಪಾ ಸರಸ್ವತೀ' ಎಂದು ಕಲ್ಹಣನು ಕರೆದಿದ್ದಾನೆ. ಶಾರದೆಯು ಸದಾ ಕವಿಗಳಿಂದ ಸೇವಿತಳಾಗುತ್ತಾಳೆ ಎಂಬುದು ಕಲ್ಹಣನ ಅಭಿಪ್ರಾಯ.[41]

ಆದಿಜಿನರ ಮುಖದಿಂದುದಯಿಸಿದ, ಜಿನರ ಮುಖದಲ್ಲಿ ನೆಲೆನಿಂತ ಸರಸ್ವತಿಯ ಉಗಮ ಮತ್ತು ಶ್ರೇಷ್ಠತೆಯ ಬಗ್ಗೆ ಜೈನರ ಪವಿತ್ರಗ್ರಂಥವಾದ 'ಮಹಾಪುರಾಣ'ದಲ್ಲಿ ವಿವರವಾಗಿ ವರ್ಣಿಸಲಾಗಿದೆ. ಜೈನತತ್ವದ ಬಗ್ಗೆ ಭರತನಿಗುಂಟಾದ ಸಂಶಯವನ್ನು ನಿವಾರಿಸಲು ಆದಿಜಿನನಾದ ವೃಷಭದೇವನು ಮಾತನಾಡುತ್ತಾನೆ.

ಅಪರಿಸ್ಪಂದತಾಲ್ವಾದೇರಸ್ಪಷ್ಟದಶನದ್ಯುತೇಃ
ಸ್ವಯಂಭುವೋ ಮುಖಾಂಭೋಜಾಜ್ಜಾತಾ ಚಿತ್ರಂ ಸರಸ್ವತೀ।[42]

'ಅಕ್ಷರೋತ್ಪತ್ತಿಸ್ಥಾನವಾದ ತಾಲು (ದವಡೆ) ಮೊದಲಾದವುಗಳ ಚಲನೆಯಿಲ್ಲದಿರುವುದೂ, ಹಲ್ಲುಗಳ ಕಾಂತಿಯೂ ಸ್ಪಷ್ಟವಾಗಿ ತೋರದಿರುವುದೂ ಆದ ಸ್ವಯಂಭೂ (ಆದಿಬ್ರಹ್ಮ)ನ ಮುಖಕಮಲದಿಂದ ಸರಸ್ವತಿಯು ಹೊರಟಳು.' ಅಂದರೆ ಇಲ್ಲಿ ಸರಸ್ವತಿಯು ಆದಿಜಿನರ ನಾಲಗೆಯಿಂದ ಜನಿಸಲಿಲ್ಲ; ಬದಲಿಗೆ ನೇರವಾಗಿ ಮುಖದಿಂದಲೇ ಜನಿಸಿದ್ದಾಳೆ. ಜೈನರಲ್ಲಿ ಸರಸ್ವತಿಯು ವಾಗ್ದೇವತೆಯಾದರೂ ವಾಕ್ ಅಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಸರಸ್ವತಿಯ ವಾಸಸ್ಥಾನ ವಿದ್ವಜ್ಜನರ ನಾಲಗೆಯ ತುದಿ; ಜಿನರ ನಾಲಗೆಯ ತುದಿಯಲ್ಲ. ಆದರೆ ಜಿನರ ಮುಖವೇ ಸರಸ್ವತಿಯ ಉತ್ಪತ್ತಿಸ್ಥಾನ ಮತ್ತು ತವರುಮನೆ ಎಂಬುದು **"ಆದಿಬ್ರಹ್ಮರ ಮುಖಕಮಲದಲ್ಲಿ ಉದ್ಭವಿಸಿದ ಆ ಸರಸ್ವತಿಯು ಜಗತ್ತನ್ನು ವಶಮಾಡಿದುದರಿಂದ ನಿಜವಾಗಿಯೂ ಈ ಸರಸ್ವತಿಗೆ ಆದಿಬ್ರಹ್ಮರ ಮುಖಕಮಲವು ಉತ್ಪತ್ತಿಸ್ಥಾನ (ತವರ್ಮನೆ) ಆಗಿದೆ"**[43] ಎಂಬ ಮಾತುಗಳಿಂದ ಸ್ಪಷ್ಟವಾಗುತ್ತದೆ. 'ಮಹಾಪುರಾಣ'ದ ಈ ಬಗೆಯ ಸರಸ್ವತಿಯ ಪರಿಕಲ್ಪನೆಯೇ ಕನ್ನಡದ ಪಂಪನ 'ಪರಮಜಿನೇಂದ್ರವಾಣಿಯೆ ಸರಸ್ವತಿ'[44] ಎಂಬ ಮಾತಿಗೆ ಪ್ರಮಾಣವಾಗಿದೆ.

ಏಕರೂಪಾಪಿ ತದ್ಭಾಷಾಶ್ರೋತೄನ್ಪ್ರಾಪ್ಯ ಪೃಥಗ್ವಿಧಾನ್
ಭೇಜೇನಾನಾತ್ಮತಾಂ ಕುಲ್ಯಾಜಲಸ್ರುತಿರಿವಾಂಘ್ರಿಪಾನ್।[45]

---

41. Ibid. P.170 (ಆಲೋಕ್ಯ ಶಾರದಾಮ್ ದೇವೀಮ್ ಯತ್ರ ಸಂಪ್ರಾಪ್ಯತೆ ಕ್ಷಣಾತ್ ತರಂಗಿಣೀ ಮಧುಮತೀ ವಾಣೀ ಚ ಕವಿಸೇವಿತಾ)
42. ಮಹಾಪುರಾಣ 1-184
43. ಮಹಾಪುರಾಣ 1-185
44. ಪಂಪಭಾರತಂ 1-9
45. ಮಹಾಪುರಾಣ 1-187

ಆದಿಜಿನರ ಮುಖದಿಂದ ಒಂದೇ ವಿಧವಾದ ದಿವ್ಯಭಾಷೆ ಹೊರಟರೂ, ಒಂದೇ ಜಲಪ್ರವಾಹವು ಬೇರೆ ಬೇರೆ ಕಾಲುವೆಗಳನ್ನು ಆಶ್ರಯಿಸಿ ಬೇರೆ ಬೇರೆ ಜಲಗಳಾಗಿಯೇ ಪರಿವರ್ತಿಸುವಂತೆ, ಬೇರೆ ಬೇರೆ ಶ್ರೋತೃಗಳನ್ನು ತಲುಪಿದ್ದರಿಂದ ಅದು (ಸರಸ್ವತಿ) ನಾನಾ ರೂಪ ತಾಳಿತು. ಮಹಾಪುರಾಣದ ಈ ಮಾತು ಸರಸ್ವತಿಯ ಅಂದರೆ ವಾಗ್ದೇವಿಯ ಸರ್ವವ್ಯಾಪಕತೆಯನ್ನು ತೋರಿಸುತ್ತದೆ. ನಾಗವರ್ಮನ "ಸರ್ವಭಾಷಾಸರಸ್ವತೀ" ಮತ್ತು ಭಟ್ಟಾಕಳಂಕನ "ಸರ್ವಭಾಷಾಮಯೀ ಭಾಷಾ" ಎಂಬ ಪರಿಕಲ್ಪನೆಗೆ ಈ ಶ್ಲೋಕವೇ ಆಧಾರವಾಗಿದೆ.

ಎರಡನೆಯ ನಾಗವರ್ಮನು ತನ್ನ 'ಭಾಷಾಭೂಷಣ'ದಲ್ಲಿ ಸರಸ್ವತಿಯನ್ನು ಸರ್ವಭಾಷಾ ದೇವಿಯಾಗಿಸಿದ್ದಾನೆ.

ಸರ್ವಜ್ಞಂ ತದಹಂ ವಂದೇ ಪರಂಜ್ಯೋತಿಸ್ತಮೋಪಹ।
ಪ್ರವೃತ್ತಾ ಯನ್ಮುಖಾದ್ದೇವಿ ಸರ್ವಭಾಷಾಸರಸ್ವತೀ॥

ಜಿನೇಂದ್ರನ ಮಾತೇ ಸರಸ್ವತೀ ಎಂಬುದು ಜೈನರ ನಂಬಿಕೆ. ಅಂತೆಯೇ ಎರಡನೆಯ ನಾಗವರ್ಮನು ಸರಸ್ವತಿಯನ್ನು ನೇರವಾಗಿ ಸ್ತುತಿಸದೆ, ಜಿನಸ್ತುತಿಯ ಜೊತೆಗೇ ಸ್ತುತಿಸಿ, "ಯಾರ ಮುಖದಿಂದ ಸರ್ವಭಾಷಾಸರಸ್ವತೀ (ಎಲ್ಲ ಭಾಷೆಗೂ ಅದಿದೇವತೆ ವಾಗ್ದೇವಿ) ಹೊರಬಿದ್ದಿತೋ ಅವನಿಗೆ, ಪರಮಜ್ಯೋತಿಸ್ವರೂಪನಾದ ಆ ಸರ್ವಜ್ಞ(ಜಿನ)ನಿಗೆ ನಮಸ್ಕರಿಸುತ್ತೇನೆ" ಎಂದಿದ್ದಾನೆ. ಇಲ್ಲಿ ಬಳಸಿರುವ "ಸರ್ವಭಾಷಾಸರಸ್ವತೀ" ಎಂಬ ವಿಶೇಷಣಕ್ಕೆ ಬಹುಭಾಷೆಗಳನ್ನಾಡುವ ಭಾರತದಂತಹ ದೇಶದಲ್ಲಿ ಹೆಚ್ಚಿನ ಮಹತ್ವವಿದೆ. ಯಾವ ಭಾಷೆಯ ವಾಕ್(ಮಾತು) ಆದರೂ ಸರಿಯೇ, ಅದು ಸರಸ್ವತಿಯೇ ಎಂಬುದು ಭಾಷಾಸಾಮರಸ್ಯವನ್ನು ಎತ್ತಿಹಿಡಿಯುವಲ್ಲಿ ಸಫಲವಾಗಿದೆ.

ನಾಗವರ್ಮನನ್ನು ಅನುಸರಿಸಿಯೇ ಭಟ್ಟಾಕಳಂಕನು ತನ್ನ 'ಕರ್ಣಾಟಕ ಶಬ್ದಾನುಶಾಸನ' ಗ್ರಂಥದಲ್ಲಿ ಹೀಗೆ ಪ್ರಾರ್ಥಿಸಿದ್ದಾನೆ.

ನಮಃ ಶ್ರೀವರ್ಧಮಾನಾಯ ವಿಶ್ವವಿದ್ಯಾಭಾಸಿನೇ।
ಸರ್ವಭಾಷಾಮಯೀ ಭಾಷಾ ಪ್ರವೃತ್ತಾ ಯನ್ಮುಖಾಂಬುಜಾತ್॥

"ವಿಶ್ವವಿದ್ಯೆಯಿಂದ ಸದಾ ಹೊಳೆಯುತ್ತಿರುವ ವರ್ಧಮಾನನ ಮುಖಕಮಲದಿಂದ ಸರ್ವಭಾಷಾಮಯಿಯಾದ ಭಾಷಾ(ಸರಸ್ವತಿ) ಹೊರಟಿದ್ದಾಳೆ. ಇಂತಹ ವರ್ಧಮಾನನಿಗೆ ನಮಸ್ಕಾರ." ವರ್ಧಮಾನನ ಮುಖಕಮಲದಿಂದ ಹೊರಟ ಸರಸ್ವತಿ ಎಂಬ ಕಲ್ಪನೆ ಜೈನಮತಕ್ಕನುಗುಣವಾಗಿ ಇದೆ. ಸರ್ವಭಾಷಾಮಯಿ ಭಾಷಾ(ಸರಸ್ವತಿ) ಎಂಬ ಮಾತು ನಾಗವರ್ಮನ ಪರಿಕಲ್ಪನೆಯನ್ನು ಹೋಲುತ್ತದೆ. ಆದರೆ ಸರಸ್ವತಿಯನ್ನು ಭಾಷಾ ಎಂಬ ಹೆಸರಿನಿಂದ ವಿಶೇಷವಾಗಿ ಭಟ್ಟಾಕಳಂಕ ಕರೆದಿರುತ್ತಾನೆ. ಇವರಿಬ್ಬರ ಈ ಪರಿಕಲ್ಪನೆಗೆ ಸಂಸ್ಕೃತ 'ಮಹಾಪುರಾಣ'ವೇ ಆಕರವಾಗಿದೆ. ಎರಡನೆಯ ನಾಗವರ್ಮ

ಮತ್ತು ಭಟ್ಟಾಕಳಂಕರು ಸರಸ್ವತಿಯನ್ನು ಸರ್ವಭಾಷೆಗಳಿಗೂ ಅಧಿದೇವತೆಯನ್ನಾಗಿಸಿ, ಸರಸ್ವತಿಯ ಕಲ್ಪನೆಯನ್ನು ಮತ್ತಷ್ಟು ವಿಸ್ತರಿಸಿದ್ದಾರೆಂದು ಹೇಳಬಹುದು.

ಮಮ್ಮಟನ 'ಕಾವ್ಯಪ್ರಕಾಶ' ಒಂದು ಅಲಂಕಾರ ಶಾಸ್ತ್ರ ಕೃತಿ. ಅದರಲ್ಲಿ ಉಲ್ಲೇಖಿಸಿರುವ ಪ್ರಾಕೃತ ಪದ್ಯವೊಂದರ ಸಂಸ್ಕೃತಚ್ಛಾಯೆ ಮತ್ತು ಕನ್ನಡ ಅನುವಾದವನ್ನು ತೀನಂಶ್ರೀಯವರು ಕೆಳಕಂಡಂತೆ ಕೊಟ್ಟಿದ್ದಾರೆ.

ಯಾ ಸ್ಥವಿರಮಿವ ಹಸಂತೀ ಕವಿವದನಾಂಬುರುಹಬದ್ಧವಿನಿವೇಶಾ।
ದರ್ಶಯತಿ ಭುವನಮಂಡಲಮನ್ಯದಿವ ಜಯತಿ ಸಾ ವಾಣೀ॥[46]

'ವಾಣಿಯ ನೆಲೆವೀಡು ಬ್ರಹ್ಮನ ವದನವಷ್ಟೆ; ಅದರಲ್ಲಿ ಅವಳು ಬೇಸರಗೊಂಡು ಕವಿಯ ವದನಕಮಲಕ್ಕೆ ಮನಸೋತು ಬಂದು ನೆಲೆಸಿ, ಬ್ರಹ್ಮನ ಮುದಿ ಸೃಷ್ಟಿಯನ್ನು ಹಾಸ್ಯಮಾಡುವ ರೀತಿಯಲ್ಲಿ ಹೊಸದೊಂದು ಭುವನಮಂಡಲವನ್ನೇ ತೋರ್ಪಡಿಸುವಳಂತೆ'[47] ಸರಸ್ವತಿಯು ಕವಿಮುಖದಿಂದ ಪ್ರಕಟವಾಗುತ್ತಾಳೆ; ಅದು ಶಾಸ್ತ್ರಕೃತಿಯಾದರೂ ಸರಿ, ಕಾವ್ಯವಾದರೂ ಸರಿ. ಸರಸ್ವತಿಯ ಸೃಷ್ಟಿಕರ್ತ ಬ್ರಹ್ಮನಾದರೂ ಆಕೆಯು ಪ್ರಕಟವಾಗುವುದು ಅಭಿನವ ಸೃಷ್ಟಿಕರ್ತನಾದ ಕವಿಮುಖದಿಂದಲೇ! ಸರಸ್ವತಿಯು 'ಸರ್ವಭಾಷಾಮಯಿ'. ಸಂಸ್ಕೃತವಿರಲಿ, ಪ್ರಾಕೃತವಿರಲಿ, ಭಾಷೆ ಯಾವುದೇ ಇರಲಿ ಕವಿಸೃಷ್ಟಿಗೆ ಮನಸೋತ ಆಕೆ ಬ್ರಹ್ಮನ ವದನಕಮಲದಿಂದ ಇಳಿದು ಕವಿಯ ವದನಕಮಲಕ್ಕೆ ಬರಲೇಬೇಕು!

ಸಂಸ್ಕೃತ ಕವಿಗಳ ಸರಸ್ವತೀ ಕಲ್ಪನೆಯನ್ನು ಕೆಳಕಂಡಂತೆ ಕ್ರೋಡೀಕರಿಸಬಹುದು. ಸರಸ್ವತಿಯನ್ನು ನದಿಯಾಗಿ ಸ್ತುತಿಸಿದ್ದರೂ ಆ ವೇಳೆಗಾಗಲೇ ಸರಸ್ವತೀ ನದಿ ಪೂರ್ಣ ಬತ್ತಿ ಹೋಗಿತ್ತು. ಸರಸ್ವತಿಯು ವಾಗ್ದೇವತೆಯಾಗಿ ಹೆಚ್ಚು ಪ್ರಚಲಿತದಲ್ಲಿದ್ದಾಳೆ. ಶಬ್ದ ಮತ್ತು ಅರ್ಥಗಳಿಗೆ ಅಧಿದೇವತೆ. **'ಶಬ್ದಾರ್ಥೌಸಹಿತೌಕಾವ್ಯಂ'** ಎಂಬಂತೆ ಕಾವ್ಯದ ಅಧಿದೇವತೆಯೂ ಹೌದು. ಅಕ್ಷರ, ಭಾಷೆ, ವಿದ್ಯೆ, ವಿಜ್ಞಾನ, ಕಲೆ, ಸಾಹಿತ್ಯ, ಸಂಗೀತ ಮೊದಲಾದವಕ್ಕೂ ಸರಸ್ವತೀ ಅಧಿದೇವತೆ. ಸರಸ್ವತಿಯ ಕಟಾಕ್ಷವಿಲ್ಲದವನು ಪಶುವಿಗೆ ಸಮಾನ. ಸರಸ್ವತಿಯು ಬ್ರಹ್ಮನಿಗೆ ಮಗಳು. ಆದರೆ ತಪಸ್ಸು ಮಾಡಿ ಅವನಿಂದ ಕಾವ್ಯಪುರುಷ ಎಂಬ ಮಗನನ್ನು ಪಡೆಯುತ್ತಾಳೆ. ಅವನನ್ನು ಗೌರಿಯ ಮಾನಸಪುತ್ರಿ ಕಾವ್ಯವಿದ್ಯಾವಧೂ ವರಿಸುತ್ತಾಳೆ. ಪುರಾಣಗಳ ಕಲ್ಪನೆಯಂತೆ ಆಕೆ ದೇವಲೋಕದಿಂದ ಶಾಪವಿಮೋಚನೆಗಾಗಿ ಭೂಲೋಕಕ್ಕೆ ಬರುತ್ತಾಳೆ. ಇಲ್ಲಿಯ ಋಷಿ ದಧೀಚನಿಂದ ಸಾರಸ್ವತ ಎಂಬ ಮಗನನ್ನು ಪಡೆದು ಆತನನ್ನು ವೇದಪಂಡಿತನನ್ನಾಗಿ ಮಾಡುತ್ತಾಳೆ. ಅವಳು ವೀಣಾವಾದಕಿ, ಸಂಗೀತ ಶಿಕ್ಷಕಿ, ಮಹಾ ಕವಯಿತ್ರಿ ಮತ್ತು ನ್ಯಾಯಧೀಶೆ. ಅಭಿನವಬ್ರಹ್ಮರಾದ ಕವಿಗಳ ಮುಖದಲ್ಲಿ ಸದಾ ನೆಲೆಸಿರುತ್ತಾಳೆ ಎಂಬುದು ಕವಿಗಳ ಸಾರ್ವತ್ರಿಕ

---

46. ಶ್ರೀಕಂಠಯ್ಯ ತೀ.ನಂ.: ಭಾರತೀಯ ಕಾವ್ಯಮೀಮಾಂಸೆ, ಪು.148ರ ಅಡಿ ಟಿಪ್ಪಣಿ.

47. ಅದೇ ಪು.147–148

ಅಭಿಪ್ರಾಯ. 'ಸರ್ವಭಾಷಾಸರಸ್ವತೀ' ಎಂಬುದು ಮೀಮಾಂಸಕರ ಮತ್ತು ಕವಿಗಳ ಅಭಿಮತ. ಕಾಶ್ಮೀರದ ಅಧಿದೇವತೆಯಾಗಿರುವ ಶಾರದೆ, ಕಾಶ್ಮೀರದಲ್ಲಿ ಹಂಸರೂಪಿಯಾಗಿ ನೆಲೆನಿಂತಿದ್ದಾಳೆ ಎಂಬುದು ಕಾಶ್ಮೀರಿಮೂಲದ ಕವಿಗಳ ನಂಬಿಕೆ. ಹಂಸ ಅವಳ ವಾಹನ. ಸರ್ವಶುಕ್ಲೆಯಾದ ಆಕೆಯ ವಸ್ತ್ರಾಭರಣಗಳೂ ಶ್ವೇತವರ್ಣದವುಗಳು. ಆದಿಜಿನರ ಮುಖದಿಂದುಯಿಸಿದ ಸರಸ್ವತಿಯು ಸರ್ವಲೋಕವನ್ನೂ ವ್ಯಾಪಿಸಿದಳು ಎಂಬುದು ಜೈನಕವಿಗಳ ಅಭಿಪ್ರಾಯ.

ಕನ್ನಡ ಸಾಹಿತ್ಯದಲ್ಲಿ ಸರಸ್ವತೀ ಪರಿಕಲ್ಪನೆ

ವಿವಿಧ ಆಕರಗಳ ಆಧಾರದ ಮೇಲೆ, ಕನ್ನಡ ಸಾಹಿತ್ಯಕ್ಕೆ ಸುಮಾರು ಒಂದೂವರೆ ಸಾವಿರ ವರ್ಷಗಳ ಇತಿಹಾಸವಿದೆ ಎಂದು ಭಾವಿಸಲಾಗಿದ್ದರೂ ಕನ್ನಡದ ಮೊದಲ ಉಪಲಬ್ಧ ಗ್ರಂಥ ಸುಮಾರು ಕ್ರಿ.ಶ.850ರ ಕವಿರಾಜಮಾರ್ಗ. ಕವಿರಾಜಮಾರ್ಗವು ಮೂಲತಃ ಒಂದು ಅಲಂಕಾರ ಶಾಸ್ತ್ರ ಕೃತಿ. ಅದರಲ್ಲಿ ಪ್ರಸ್ತಾಪಿಸಿರುವ, ಕವಿರಾಜಮಾರ್ಗಕ್ಕಿಂತ ಹಿಂದಿನ ಯಾವ ಕನ್ನಡ ಕೃತಿಯೂ ಇದುವರೆಗೆ ದೊರೆತಿಲ್ಲ. ಅದಕ್ಕೆ ಮೊದಲು ಇದ್ದಿರಬಹುದಾದ ವಿಪುಲವಾದ ಗದ್ಯಪದ್ಯವಾಙ್ಮಯವು ಸರಸ್ವತಿಯ ವಿಷಯದಲ್ಲಿಯೂ ಸರಸ್ವತೀ ನದಿಯಂತೆ ಗುಪ್ತಗಾಮಿನಿಯಾಗಿದೆ.[48] 'ಕವಿರಾಜಮಾರ್ಗ' ಮತ್ತು ನಂತರದ ಪ್ರಾಚೀನ ಕನ್ನಡ ಸಾಹಿತ್ಯದ ಹಲವಾರು ಮಹತ್ವದ ಕವಿಗಳು ತಮ್ಮ ಕಾವ್ಯಗಳಲ್ಲಿ ಸರಸ್ವತಿಯ ದರ್ಶನವನ್ನು ಚಿತ್ರಿಸಿದ್ದಾರೆ. ಧಾರ್ಮಿಕ, ಸಾಮಾಜಿಕ ಕಾರಣಗಳಿಂದ ಕೆಲವು ಕವಿಗಳು ತಮ್ಮ ಇಷ್ಟದೇವತೆಯನ್ನು ಮಾತ್ರ ಸ್ತುತಿಸಿ ಮುಂದುವರೆದಿರುವುದೂ ಉಂಟು. ಸರಸ್ವತಿಯ ವಿಚಾರವನ್ನು ಪ್ರಸ್ತಾಪಿಸಿರುವ ಪ್ರಮುಖ ಕವಿಗಳು ವಿಶೇಷವಾಗಿ ಏನನ್ನು ಹೇಳಿದ್ದಾರೆ, ಅವರ ಸರಸ್ವತಿಯ ದರ್ಶನ ಎಂಥದ್ದು ಎಂಬುದನ್ನು ನಾವು ಮನಗಾಣಬಹುದು.

ಶ್ರೀವಿಜಯ (ಸುಮಾರು ಕ್ರಿ.ಶ.850)

ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ವಿಚಾರದ ಅಧ್ಯಯನ ಅಲಂಕಾರಶಾಸ್ತ್ರಗ್ರಂಥವಾದ 'ಕವಿರಾಜಮಾರ್ಗ'ದಿಂದ ಪ್ರಾರಂಭವಾಗುತ್ತದೆ. ದಂಡಿಯ 'ಕಾವ್ಯಾದರ್ಶ' ಸಂಸ್ಕೃತ ಭಾಷೆಯಲ್ಲಿರುವ ಅಲಂಕಾರ ಶಾಸ್ತ್ರಗ್ರಂಥ. ಕವಿರಾಜಮಾರ್ಗಕಾರನು 'ಕಾವ್ಯಾದರ್ಶ'ವನ್ನು ಕನ್ನಡ ಕಾವ್ಯ ಸಂದರ್ಭಗಳಿಗೆ ಅನುಗುಣವಾಗಿ ಅನುವಾದ ಮಾಡಿದ್ದಾನೆ. ಇದು ಅನುವಾದ ಗ್ರಂಥವಾದರೂ ಒಂದು ಸ್ವತಂತ್ರ ಕೃತಿಯೆಂಬಂತೆ ರಚನೆಯಾಗಿರುವುದಕ್ಕೆ ಸಾಕಷ್ಟು ಆಧಾರಗಳಿವೆ. ಇಂತಹ ಒಂದು ಆಧಾರ ಸರಸ್ವತಿಯ ಪ್ರಾರ್ಥನೆಯ ರೂಪದಲ್ಲಿಯೇ ದೊರೆಯುತ್ತದೆ.

---

48. ಮುಗಳಿ ರಂ.ಶ್ರೀ.: ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ. ಪು.1

ಚತುರ್ಮುಖ ಮುಖಾಂಭೋಜ ವನಹಂಸವಧೂರ್ಮಮ।
ಮಾನಸೇ ರಮತಾಂ ನಿತ್ಯಂ ಸರ್ವಶುಕ್ಲಾ ಸರಸ್ವತೀ॥[49]

ಇದು 'ಕಾವ್ಯಾದರ್ಶ'ದಲ್ಲಿರುವ ಸರಸ್ವತಿಯ ಪರವಾದ ಶ್ಲೋಕ. ಅದನ್ನು ಶ್ರೀವಿಜಯನು,

ಶ್ರೀ ವಿಶದವರ್ಣೆ ಮಧುರಾ
ರಾವೋಚಿತೆ ಚತುರರುಚಿರಪದರಚನೆ ಚಿರಂ।
ದೇವಿ ಸರಸ್ವತಿ ಹಂಸೀ
ಭಾವದೆ ನೆಲೆಗೊಳ್ಗೆ ಕೂರ್ತು ಮನ್ಮಾನಸದೊಳ್॥[50]

ಎಂದು ಅನುವಾದಿಸಿದ್ದಾನೆ. ಇದನ್ನು ಅನುವಾದ ಎನ್ನುವುದಕ್ಕಿಂತ ರೂಪಾಂತರ ಎನ್ನುವುದೇ ಹೆಚ್ಚು ಸಮಂಜಸ. 'ಚತುರ್ಮುಖ ಮುಖಾಂಭೋಜ ವನಹಂಸವಧೂರ್ಮಮ ಮಾನಸೇ ರಮತಾಂ' ಎಂಬುದು 'ಹಂಸೀಭಾವದೆ ನೆಲೆಗೊಳ್ಗೆ ಕೂರ್ತು ಮನ್ಮಾನಸದೊಳ್' ಎಂದು ಅನುವಾದವಾಗಿದೆ. ಸರಸ್ವತಿಯು ಬ್ರಹ್ಮನ ಮುಖವಾಸಿನಿ ಎಂಬ ವೈದಿಕ ಕಲ್ಪನೆ ಜೈನಮತಕ್ಕೆ ಅನುಗುಣವಾಗಿಲ್ಲದಿರುವುದು ಇದಕ್ಕೆ ಕಾರಣ. ಶ್ರೀವಿಜಯನು ತನ್ನ ಸಂಪ್ರದಾಯಕ್ಕೆ ಅನುಗುಣವಾಗಿ 'ಸರ್ವಶುಕ್ಲಾ' ಎಂಬುದನ್ನು ಉಳಿಸಿಕೊಂಡು ಸರಸ್ವತಿಯನ್ನು 'ವಿಶದವರ್ಣೆ'ಯಾಗಿಸಿದ್ದಾನೆ. ಜೈನಪರಂಪರೆಯಲ್ಲಿ ಸರಸ್ವತಿಯು 'ಪರಮಜಿನೇಂದ್ರನ ವಾಣಿ'ಯೇ ಹೊರತು, ಜಿನಮುಖದಲ್ಲಿ ಮಾತ್ರ ನೆಲೆಸಿರುವವಳಲ್ಲ. ಆದರೆ ಆಕೆ ವೈದಿಕ ಸಂಪ್ರದಾಯದಂತೆಯೇ ಶುಭ್ರವರ್ಣೆ. ಸರಸ್ವತಿಯು ವಾಗ್ದೇವತೆ, ಆಕೆಯ ವಾಕ್ ಮಧುರವಾಗಿಯೂ ಔಚಿತ್ಯಪೂರ್ಣವಾಗಿಯೂ ಇರುತ್ತದೆ ಎಂಬುದನ್ನು ಶ್ರೀವಿಜಯ 'ಮಧುರಾರಾವೋಚಿತೆ' ಮತ್ತು 'ಚತುರರುಚಿರಪದರಚನೆ' ಎಂಬ ಎರಡು ವಿಶೇಷಣಗಳನ್ನು ಬಳಸಿ ಸಾಧಿಸಿದ್ದಾನೆ. ಕಾವ್ಯದಲ್ಲಿ ಮಧುರವಾದ ಧ್ವನಿ, ಚತುರತೆಯಿಂದ ಕೂಡಿದ ಸುಂದರ ಪದಗಳ ಮಹತ್ವವನ್ನು ಮನಗಂಡಿರುವ ಕವಿಯು, ಅಂತಹ ಸಂಪತ್ತಿಯನ್ನು ದಯಪಾಲಿಸುವ ಸರಸ್ವತಿಯನ್ನು ಸ್ತುತಿಸುತ್ತಾನೆ. ವಿಶದವರ್ಣೆಯೂ, ವಾಗ್ದೇವತೆಯೂ ಆದ ಸರಸ್ವತಿಯು ಹಂಸೀಭಾವದಿಂದ ತನ್ನ ಮಾನಸದಲ್ಲಿ ನೆಲಸಲಿ ಎಂಬುದು ಕವಿಯ ಆಶಯ. 'ಹಂಸೀಭಾವ' ಎಂಬ ಪರಿಕಲ್ಪನೆ ಸರಸ್ವತಿಯ ವಾಹನ ಹಂಸವನ್ನೂ ಪ್ರತಿನಿಧಿಸುತ್ತದೆ. ಹಂಸವು ಸರೋವರದಲ್ಲಿ ನೆಲೆಸಿರುತ್ತದೆ. ಇಲ್ಲಿ ಕವಿಯ ಮಾನಸಸರೋವರದಲ್ಲಿ ನೆಲೆಸಲಿ ಎಂಬುದು ಕವಿಯ ಕೋರಿಕೆ. ಮೂರನೇ ಪರಿಚ್ಛೇದ 'ಅರ್ಥಾಲಂಕಾರ ಪ್ರಕರಣಂ' ಕೊನೆಯಲ್ಲಿ '**ಪರಮ ಸರಸ್ವತೀ ತೀರ್ಥಾವತಾರ ನೃಪತುಂಗದೇವಾ.....**'[51] ಎಂಬ ವಾಕ್ಯವಿದೆ; ಹೆಚ್ಚಿನ ವಿವರಗಳಿಲ್ಲ. ಆದರೆ ನೃಪತುಂಗನನ್ನು ಸರಸ್ವತೀ ತೀರ್ಥದ ಅಂದರೆ ಸರಸ್ವತೀ ನದಿಯ

---

49. ಶಂಕರ್ ಕೆದಿಲಾಯ: ಕರ್ನಾಟಕ ಕವಿರಾಜಮಾರ್ಗಂ, ಪರಿಶಿಷ್ಟಂ –3, ಪು.123
50. ಅದೇ, ಮಂಗಳಾಚರಣಂ, ಪದ್ಯ –3, ಪು.1
51. ಅದೇ. ಪು.104

ಅವತಾರವೆಂದು ಕರೆದಿರುವುದು ವಿಶೇಷವಾಗಿದೆ. 'ಒಟ್ಟಿನಲ್ಲಿ ಕವಿರಾಜಮಾರ್ಗಕಾರನು ತನ್ನ ಸರಸ್ವತಿಯನ್ನು ಪದರಚನೆಯ ನಿರ್ದೋಷತೆ–ನಿರ್ಮಲತೆ–ಪ್ರಸನ್ನತೆ, ಮಾಧುರ್ಯ ಮತ್ತು ಸೌಷ್ಠವದಲ್ಲಿ ಕಂಡಿದ್ದಾನೆ. ಮಾತೇ ಸರಸ್ವತಿಯ ಪೀಠ, ಮಾತಿನ ಮೇಲ್ಮೆಯಿಂದಲೇ ಅವಳ ಸಾನ್ನಿಧ್ಯದ ಮತ್ತು ಅನುಗ್ರಹದ ಅರಿವನ್ನು ಪಡೆಯಬಹುದು ಎಂಬ ಸೂಚನೆ ಅವನ ಮಾತುಗಳಿಂದ ದೊರೆಯುತ್ತದೆ.'[52] ಶ್ರೀವಿಜಯನ ಪ್ರಕಾರ ಸರಸ್ವತಿ, ವಾಗ್ದೇವತೆ ಮತ್ತು ಕಾವ್ಯದ ಅಧಿದೇವತೆ. ಅವಳ ಅನುಗ್ರಹದಿಂದ ಮಾತ್ರವೇ ಕಾವ್ಯಕ್ಕೆ ಅಗತ್ಯವಾದ ಪರಿಕರಗಳನ್ನು ಹೊಂದಲು ಸಾಧ್ಯ.

ಪಂಪ (ಕ್ರಿ.ಶ. 941)

ಪಂಪ ಕನ್ನಡದ ಆದಿಕವಿ. 'ಆದಿಪುರಾಣ' ಮತ್ತು 'ಪಂಪಭಾರತ' ಆತನ ಕೃತಿಗಳು. ಅವನೇ ಹೇಳಿರುವಂತೆ,[53] ಭಾರತವೂ 'ಆದಿಪುರಾಣ'ವೂ ಸಮಸ್ತ ಕ್ಷಿತಿಗೆ ಅಲಂಕಾರದಂತಿವೆ. ಸರಸ್ವತಿಗೆ ಅವು ಹೊಸ ವಿಲಾಸವನ್ನುಂಟುಮಾಡಿವೆ. ಸರಸ್ವತಿಗೇ ಹೊಸ ವಿಲಾಸವನ್ನುಂಟುಮಾಡಿದ ಪಂಪನ ವಾಗ್ವಿಳಾಸ ಸರಸ್ವತಿಯ ವಿಷಯದಲ್ಲಿಯೂ ಉದಾರವಾಗಿಯೇ ಇದೆ. 'ಆದಿಪುರಾಣ' ಕೃತಿರಚನೆಯ ಶಿಸ್ತಿನಲ್ಲೇ ಸರಸ್ವತಿಯು ನೆಲೆಯಾಗಿರುವುದನ್ನು ಕಾಣಬಹುದು. ಮೊದಲನೆಯ ಆಶ್ವಾಸವೊಂದನ್ನು ಉಳಿದು ಪ್ರತಿ ಆಶ್ವಾಸದ ಪ್ರಾರಂಭದ ಪದ್ಯದಲ್ಲಿ ತನ್ನ ಕಾವ್ಯದ ಮುಖ್ಯಪಾತ್ರಗಳಾದ ಮಹಾಬಲ, ಲಲಿತಾಂಗ, ವಜ್ರಜಂಘ, ಸುವಿಧಿ, ಪುರುದೇವ, ಶ್ರೀಪತಿ, ಆದಿನಾಥ, ಭರತ ಮೊದಲಾದವರನ್ನು ಸರಸ್ವತಿಗೆ ಮಣಿಹಾರವನ್ನಾಗಿಸಿದ್ದಾನೆ. ಸ್ವತಃ ತನ್ನನ್ನೇ ಮೂರು ಪದ್ಯಗಳಲ್ಲಿ ಸರಸ್ವತೀಮಣಿಹಾರನೆಂದು ಕರೆದುಕೊಳ್ಳುತ್ತಾನೆ. ಅದರಲ್ಲಿ ಒಂದು ಪದ್ಯವಂತೂ ಆತನ ಸರಸ್ವತಿಯ ದರ್ಶನಕ್ಕೆ ಮುನ್ನುಡಿಯಂತಿದೆ.

> **ಅತಿಸುಭಗೆಗೆ ಸಂದಂ ಸರ**
> **ಸ್ವತಿಗೀತನ ಲಲಿತಾವಾಗ್ವಿಳಾಸಮೆ ದಲಂ।**
> **ಕೃತಿಯವೊಲೆಸೆದಪುದು ಜಗ**
> **ತ್ಪ್ರತೀತನೀತನೆ ಸರಸ್ವತೀ ಮಣಿಹಾರಂ॥**[54]

ಈತನ ಲಲಿತವಾದ ವಾಗ್ವಿಳಾಸ, ಅತಿಸುಭಗಳಾದ ಸರಸ್ವತಿಗೆ ವಿಶೇಷವಾದ ಅಲಂಕಾರವಾಗುತ್ತದೆ. ಜಗತ್ಪ್ರಸಿದ್ಧನಾದ ಪಂಪ ಸರಸ್ವತಿಯ ಕಂಠದ ಮಣಿಹಾರ. 'ಆದಿಪುರಾಣ'ದ ಪ್ರಾರಂಭದಲ್ಲಿಯೇ ಬಂದಿರುವ ಸರಸ್ವತಿಯ ಸ್ತುತಿ ಜೈನ ಕಾವ್ಯಪ್ರಪಂಚಕ್ಕೆ ದಿಕ್ಸೂಚಿಯಾಗಿ, ಜೈನಪರಂಪರೆಯ ಸರಸ್ವತಿಯ ಪರಿಕಲ್ಪನೆಯನ್ನು ಒಂದು ಸೂತ್ರಬದ್ಧವಾಗಿಸಿದೆ.

---

52. ― ಅದೇ. ಪು.3
53. ಪಂಪಭಾರತಂ, 14–61
54. ಪಂಪಭಾರತಂ, 1–28

ಪರಮಜಿನೇಂದ್ರವಾಣಿಯೆ ಸರಸ್ವತಿ ಬೇಱದು ಪೆಣ್ಣರೂಪಮಂ
ಧರಿಯಿಸಿ ನಿಂದುದಲ್ತದುವೆ ಭಾವಿಸಿಯೋದುವ ಕೇಳ್ವ ಪೂಜಿಪಾ
ದರಿಸುವ ಭವ್ಯಕೋಟಿಗೆ ನಿರಂತರಸೌಖ್ಯಮನೀವುದಾನದ
ರ್ಕೆರೆದಪೆನಾ ಸರಸ್ವತಿಯ ಮಾಟಕ್ಕಿಮಗಿಲ್ಲಿಯೆ ವಾಗ್ವಿಳಾಸಮಂ॥[55]

'ಪರಮಜಿನೇಂದ್ರವಾಣಿಯೇ ಸರಸ್ವತಿ, ಅದು ಬೇರೆಯಲ್ಲ. ಹೆಣ್ಣಿನ ರೂಪವನ್ನು ಧರಿಸಿ ನಿಂತಿಲ್ಲ. ಅಂತಹ ಜಿನವಾಣಿಯು ಭಾವಿಸಿ ಓದುವ ಕೇಳುವ ಪೂಜಿಸುವ ಆದರಿಸುವ ಭವ್ಯಕೋಟಿಗೆ (ಜಿನಭಕ್ತರಿಗೆ) ನಿರಂತರ ಸೌಖ್ಯವನ್ನು ಕೊಡುವುದು. ಅಂತಹ ಸರಸ್ವತಿಯು ನಮಗೆ ವಾಗ್ವಿಳಾಸವನ್ನು ಮಾಡಲಿ' ಎಂದು ಬೇಡಿಕೊಳ್ಳುತ್ತಾನೆ. ನದಿಯಾಗಿ, ನದಿದೇವತೆಯಾಗಿ ಮೊದಮೊದಲು ಪ್ರಚಲಿತದಲ್ಲಿದ್ದ ಸರಸ್ವತಿಯು ವಾಗ್ದೇವತೆಯಾಗಿ, ವಿದ್ಯಾದೇವತೆಯಾಗಿ ನಂತರ ಹೆಚ್ಚು ಪ್ರಸಿದ್ಧಳಾಗಿದ್ದಾಳೆ. ವಾಗ್ದೇವತೆಯನ್ನು ಸ್ತ್ರೀರೂಪದಲ್ಲಿಯೇ ಆರಾಧಿಸುತ್ತಾ ಬಂದಿರುವವರಿಗೆ ಪಂಪನ 'ಪರಮಜಿನೇಂದ್ರನವಾಣಿಯೆ ಸರಸ್ವತಿ, ಕೇವಲ ಹೆಣ್ಣಿನ ರೂಪವನ್ನು ಧರಿಸಿ ನಿಂತಿರುವುದಲ್ಲ' ಎಂಬ ಪರಿಕಲ್ಪನೆ ಆಶ್ಚರ್ಯವನ್ನುಂಟುಮಾಡುತ್ತದೆ. ಆದರೆ ಜೈನ ಪರಿಕಲ್ಪನೆಯಲ್ಲಿ, ಜೈನವೇದವೇ ಸರಸ್ವತಿ. ಅವುಗಳು ಶ್ರೇಷ್ಠರಾದ ತೀರ್ಥಂಕರರ ವಾಣಿಯಲ್ಲದೆ ಬೇರೆಯಲ್ಲ. ಸಂಸ್ಕೃತ 'ಮಹಾಪುರಾಣ'ದಲ್ಲಿ ಆದಿಜಿನನ ಮೊಗದಿಂದ ಉದಯಿಸಿದ ಮಾತೇ ಸರಸ್ವತಿಯಾಯಿತು ಎಂಬ ಪರಿಕಲ್ಪನೆಯಿದೆ. ಜಿನನು ರಾಗದ್ವೇಷದಿಂದ ಮುಕ್ತನಾದ ಸಿದ್ಧ. ಅವನು ಕಾವ್ಯವನ್ನಾಗಲಿ, ಶಾಸ್ತ್ರವನ್ನಾಗಲಿ ಸೃಷ್ಟಿಸುವುದಿಲ್ಲ. ಅವನು ಮಾತನಾಡಿದ್ದೆಲ್ಲ ಕಾವ್ಯವಾಗುತ್ತದೆ ಹಾಗೂ ಶಾಸ್ತ್ರವಾಗುತ್ತದೆ. ಜೈನರ ನಂಬಿಕೆಯಂತೆ ಆ ಶಾಸ್ತ್ರಗಳೇ ಸರಸ್ವತಿ. ವೈದಿಕ ಪರಂಪರೆಯಲ್ಲೂ ಸರಸ್ವತಿಯ ಸೃಷ್ಟಿಕರ್ತ ಬ್ರಹ್ಮನೇ ಆಗಿದ್ದಾನೆ. ಬ್ರಹ್ಮ ಸರಸ್ವತಿಯ ಸೃಷ್ಟಿಕರ್ತನಾದರೆ, ಕವಿಗಳು ಸರಸ್ವತಿಯ ರೂಪಗಳಾದ ಕಾವ್ಯಗಳ ಸೃಷ್ಟಿಕರ್ತರು. ಆದ್ದರಿಂದ ಕವಿಗಳು ಅಭಿನವ ಸೃಷ್ಟಿಕರ್ತರು.

ಸರಸ್ವತಿ ಎಂದರೆ ಹೆಣ್ಣರೂಪವನ್ನು ಧರಿಸಿದ ದೇವತೆ ಎಂಬ ಪೌರಾಣಿಕ ಕಲ್ಪನೆಯನ್ನು ನಿರಾಕರಿಸಿ, ಪಂಪನು ಜೈನಪರಂಪರೆಗೆ ಅನುಗುಣವಾಗಿ ಸರಸ್ವತಿಯನ್ನು ಪರಿಭಾವಿಸಿದ್ದಾನೆ. ಆದರೆ ವೈದಿಕ ಪಂರಂಪರೆಯಂತೆಯೇ ಜೈನರಲ್ಲಿಯೂ ಸರಸ್ವತಿಯು ವಾಗ್ದೇವತೆ; ವಿದ್ಯಾಧಿದೇವತೆಯೂ ಹೌದು. ಭಾವಿಸುವ, ಓದುವ, ಆಲಿಸುವ ಪೂಜಿಸುವ ಆದರಿಸುವವರಿಗೆ ನಿತ್ಯಸೌಖ್ಯವನ್ನು ಉಂಟುಮಾಡುವುದು ವಾಕ್. ಆ ವಾಕ್ಕಿಗೆ ದೇವತೆಯಾದ ಸರಸ್ವತಿಯು ಎಲ್ಲರಿಗೂ ವಾಗ್ವಿಳಾಸವನ್ನು ಮಾಡಲಿ ಎಂಬಲ್ಲಿ ಸರಸ್ವತಿಯನ್ನು ಕುರಿತಾದ ವೈದಿಕ ಪರಿಕಲ್ಪನೆ ಮುಂದುವರೆದಿದೆ.

---

55. ಪಂಪಭಾರತಂ, 1-9

'ಪರಮಜಿನೇಂದ್ರವಾಣಿಯೆ ಸರಸ್ವತಿ, ಅವಳು ಕೇವಲ ಹೆಣ್ಣಿನ ರೂಪವನ್ನು ಧರಿಸಿ ನಿಂತವಳಲ್ಲ' ಎಂದು ಸಾರಿದ ಪಂಪ ತನ್ನ ಕಾವ್ಯಗಳಲ್ಲಿಯೇ ಸರಸ್ವತಿಗೆ ಹೆಣ್ಣಿನ ರೂಪವನ್ನು ತೊಡಿಸಿರುವುದುಂಟು. **'ಅತಿಸುಭಗಗೆ ಸಂದ.......'** ಎಂಬ ಪದ್ಯದಲ್ಲಿ ಪಂಪ ಮಾಡಿಕೊಂಡಿರುವ ಆತ್ಮಶ್ಲಾಘನೆಯಲ್ಲಿ ಸರಸ್ವತಿಯು ಸ್ತ್ರೀರೂಪದಲ್ಲಿದ್ದಾಳೆ. ಆತನು 'ತಾನೇ ಆಕೆಗೆ ಮಣಿಹಾರ' ಎನ್ನುತ್ತಾನೆ. ಪ್ರತಿ ಅಧ್ಯಾಯದ ಮೊದಲ ಪದ್ಯದಿಂದಲೇ ಚಕ್ರವರ್ತಿಯಾದ ಭರತ, ಜಿನನಾದ ಆದಿನಾಥ ಮೊದಲಾದವರನ್ನೆಲ್ಲಾ ಸರಸ್ವತಿಯ ಕೊರಳಿನ ಮಣಿಹಾರವಾಗಿಸುತ್ತಾನೆ. ಹೀಗೇಕೆ? ಆದರೆ, ಆತನೆಲ್ಲೂ 'ಸರಸ್ವತಿಯನ್ನು ಸ್ತ್ರೀರೂಪದಲ್ಲಿ ಚಿತ್ರಿಸುವುದಿಲ್ಲ' ಎಂದು ಹೇಳಿಲ್ಲ. **'ಹೆಣ್ಣರೂಪದಲ್ಲಿ ಸರಸ್ವತಿಯನ್ನು ಬಣ್ಣಿಸಲೇಬಾರದೆಂದು ಅವನೇನು ಹಟತೊಟ್ಟರಲಿಲ್ಲವೆಂದೂ, ಮೂಲಭೂತ ಅರ್ಥವನ್ನು ನಿರ್ವಚನ ಮಾಡಬೇಕೆಂದು ಬಯಸಿದ್ದನೆಂದೂ ತಿಳಿದುಕೊಳ್ಳಬಹುದು.'**[56] ಕವಿ ಪ್ರತಿಮಾಪ್ರಿಯ ಮತ್ತು ಪ್ರಯೋಗಪ್ರಿಯ. ಕವಿ ಹೊಸಹೊಸತನ್ನು ಸೃಷ್ಟಿಸುವ ಅಭಿನವ ಸೃಷ್ಟಿಕರ್ತ ಎಂಬ ಮಾತಿಗೆ ಪಂಪನೇ ಸಾಕ್ಷಿ. ಪರಮಜಿನೇಂದ್ರವಾಣಿಯೆ ಸರಸ್ವತಿ ಎಂದು ಹೇಳಿದ 'ಆದಿಪುರಾಣ'ದಲ್ಲಿಯೇ ಪಂಪ, ಸರಸ್ವತಿಯನ್ನು ವಾಗ್ವಧುವನ್ನಾಗಿಯೂ ಚಿತ್ರಿಸಿದ್ದಾನೆ. **'ವಾಗ್ವಧೂಮುದ್ರೆಯೊಳ್ ಮುದ್ರಿಸಿ ನಿಂದತ್ತು ಆದಿತೀರ್ಥೇಶ್ವರ ಚರಿತದೊಳ್ ವಾಕ್ಯಮಾಣಿಕ್ಯಕೋಶಂ'**[57] ಎನ್ನುತ್ತಾನೆ. ಆದಿತೀರ್ಥೇಶ್ವರ ಚರಿತ್ರೆಯಲ್ಲಿ ವಾಕ್ಯಗಳೆಂಬ ಮಾಣಿಕ್ಯಗಳ ಕೋಶಕ್ಕೆ ವಾಗ್ವಧೂ ಅಂದರೆ ಸರಸ್ವತಿಯೇ ಮುದ್ರೆಯೊತ್ತಿದ್ದಾಳಂತೆ! ಪಂಪನಿಗೆ ತನ್ನ ಕಾವ್ಯಗಳ ಶ್ರೇಷ್ಠತೆಯ ಬಗ್ಗೆ ಅಷ್ಟೊಂದು ವಿಶ್ವಾಸ.

ಪಂಪನು ತನ್ನ 'ವಿಕ್ರಮಾರ್ಜುನವಿಜಯ' ಕೃತಿಯಲ್ಲಿ,

> **ಕ್ಷಯಮಣಮಿಲ್ಲ ಕೇಟ್ಟು ಕಡೆಗಂಡವನಾನಾವನುಮಿಲ್ಲೆನಲ್ ತದ**
> **ಕ್ಷಯನಿಧಿ ತಾನೆ ತನ್ನನೊಸೆದೋಲಗಿಪಂಗರಿದಿಲ್ಲೆನಿಪ್ಪ ವಾ**
> **ಙ್ಮಯಮನಿತರ್ಕಮಂಬಿಕೆ ಸರಸ್ವತಿ ಮನ್ಮುಖಪದ್ಮರಂಗದೇ**
> **ಟ್ಗಿಯನೆಡೆಗೊಂಡು ಕೊಂಡುಕೊನೆದೀಗರಿಗಂಗೆ ವಿಶುದ್ಧ ಬುದ್ಧಿಯಂ॥**

ಎಂದು ಪ್ರಾರ್ಥಿಸಿದ್ದಾನೆ. ಸರಸ್ವತಿಯು, ಅರಿಗ ಅಂದರೆ ಅರಿಕೇಸರಿಗೆ ನಿಷ್ಕಲ್ಮಷವಾದ ಬುದ್ಧಿಯನ್ನು ಕೊಡಲಿ ಎಂಬುದು ಕವಿಯ ಆಶಯ. ಆದರೆ ಆತ ಸರಸ್ವತಿಗೆ ಆರೋಪಿಸಿರುವ ಒಂದೊಂದು ಗುಣವೂ ವಿಚಾರಯೋಗ್ಯ. ವಾಙ್ಮಯಕ್ಕೆ ನಾಶವೆಂಬುದು ಒಂದಿನಿತೂ ಇಲ್ಲ. ಕೇಳಿದ ಮಾತ್ರಕ್ಕೇ ವಾಙ್ಮಯದ ಕೊನೆಯನ್ನು ತಿಳದವನು ಯಾವನೂ ಇಲ್ಲ. ವಾಙ್ಮಯ ಎಂಬುದು ತನಗೆ ತಾನೇ ಅಕ್ಷಯನಿಧಿ ಆಗಿರುವುದು. ಪ್ರೀತಿಯಿಂದ ಸೇವಿಸಿದವರಿಗೆ ಅಸಾಧ್ಯವಾದುದು ಯಾವುದೂ ಇಲ್ಲವೆನ್ನಿಸುವುದು ವಾಙ್ಮಯ. ಅಂತಹ ಸಮಸ್ತ ವಾಙ್ಮಯಕ್ಕೆ ಸರಸ್ವತಿಯು ತಾಯಿಯಾಗಿದ್ದಾಳೆ. ಒಬ್ಬ ವ್ಯಕ್ತಿ ಗಳಿಸಿದ

---

56. ಮುಗಳಿ ರಂ.ಶ್ರೀ.: ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ. ಪು.8

57. ಪಂಪಭಾರತಂ, 16-79

ಆಸ್ತಿಯನ್ನು ಕಳೆದುಕೊಳ್ಳಬಹುದು. ಬೇರೆಯವರು ಕಿತ್ತುಕೊಳ್ಳಬಹುದು. ಅದು ತನ್ನಿಂದ ತಾನೇ ನಾಶವಾಗಬಹುದು. ಗಳಿಸಿದಾತನ ಮರಣಾನಂತರ ಅದು ಬೇರೆಯವರಿಗೆ ವರ್ಗವಾಗಬಹುದು. ಆದರೆ, ವಿದ್ಯೆ ಎಂಬ ಅಕ್ಷಯ ನಿಧಿ ಮಾತ್ರ ಮನುಷ್ಯ ತಾನು ಬದುಕಿರುವವರೆಗೂ ಕಳೆದುಕೊಳ್ಳಲಾರದ ಸಂಪತ್ತು. ಅದನ್ನು ಬೇರೆಯವರಿಗೆ ವರ್ಗಾಯಿಸಿದಷ್ಟೂ ಬೆಳೆಯುತ್ತಲೇ ಇರುತ್ತದೆ. ಪಿತ್ರಾರ್ಜಿತ ಆಸ್ತಿಯಂತೆ ಮುಂದಿನ ತಲೆಮಾರಿಗೆ ಬಿಡಲಾಗುವುದಿಲ್ಲ. ಅಂತಹ ವಾಙ್ಮಯಕ್ಕೆ ಸರಸ್ವತಿಯು 'ತಾಯಿ' ಎಂಬ ಪರಿಕಲ್ಪನೆ ಪಂಪನದು. 'ಅಂಬಿಕೆ ಸರಸ್ವತಿ' ಎಂಬಲ್ಲಿ ತಾಯಿಯಂತೆ ಅವಳು ಪ್ರೇಮಮಯಿ. ಹೀಗೆ ಜಿನೇಂದ್ರವಾಣಿಯಾಗಿ ಕಾಣಿಸಿಕೊಂಡ ಸರಸ್ವತಿ, ಆದಿಪುರಾಣದಲ್ಲಿ ವಾಗ್ವಧು ಆಗಿ, ಪಂಪಭಾರತದಲ್ಲಿ ಅಂಬಿಕೆಯಾಗಿ ಪರಿಪೂರ್ಣತೆಯತ್ತ ಸಾಗುತ್ತಾಳೆ.

ಸುಮಾರು ಹತ್ತನೇ ಶತಮಾನದಲ್ಲಿಯೇ, 'ಮಾನವಜಾತಿ ತಾನೊಂದೆ ವಲಂ' ಎಂದು ಸಾರಿದ ಪಂಪ ಮಹಾನ್ ಮಾನವತಾವಾದಿ; ಒಬ್ಬ ಶ್ರೇಷ್ಠ ಕವಿ. ಅವನ ಕಾವ್ಯಗಳು ಈ ಲೋಕಕ್ಕೆ ಅಲಂಕಾರಪ್ರಾಯವಾಗಿರುವವು. **'ಸರಸ್ವತಿಗೆ ವಿಳಾಸಮಂ ಪೊಸತುಮಾಡುವ ಪಂಪನ ವಾಗ್ವಿಲಾಸ'**[58] ಶ್ರೇಷ್ಠ ತರಗತಿಯದ್ದು. ಅಂತೆಯೇ ಆತನ ಸರಸ್ವತೀ ದರ್ಶನವೂ ಸಹ.

ಪೊನ್ನ (ಕ್ರಿ.ಶ. 950)

ಕವಿಚಕ್ರವರ್ತಿಗಳಲ್ಲಿ ಒಬ್ಬನಾದ ಪೊನ್ನನ ಏಕೈಕ ಉಪಲಬ್ಧ ಕೃತಿ 'ಶಾಂತಿಪುರಾಣ'. ಅದರಲ್ಲಿರುವ ಸರಸ್ವತಿಯ ಸ್ತುತಿ ಕೆಳಗಿನಂತಿದೆ.

> **ಅತಿಗಂಭೀರ ಮೃದೂಕ್ತಿ ವಕ್ತ್ರದೊಳೊಡಂಬಟ್ಟೊಪ್ಪೆ ಕೇಳ್ದಂ ಬಹು**
> **ಶ್ರುತನಲ್ಪಶ್ರುತನೆನ್ನದಾರ ಕಿವಿಗಂ ನುಣ್ಪಿಂಪಿನೊಳ್ ಕೂಡೆ ಪಂ**
> **ಡಿತರುಂ ಮೂರ್ಖರುಮೆಕ್ಕೆಯಿಂ ಪೊಗೞ್ದೆಬಿಲ್ ಬಾಜಿಸಲ್ಕುಂ ಸರ**
> **ಸ್ವತಿಯಂ ಸಾಧಿಸೆ ಸಂದ ಸಯ್ಪು ಸವಣಂಗಕ್ಕುಂ ಪೆಱಂಗಕ್ಕುಮೇ॥**[59]

ಅತಿಗಂಭೀರತೆಯ ಗುಣದಿಂದ ಕೂಡಿದ ಮೃದೂಕ್ತಿಗಳು (ಕಾವ್ಯ)ಮುಖದಲ್ಲಿಯೇ ಹೊಂದಿಕೊಂಡು ಶೋಭಿಸುತ್ತಿದ್ದರೆ, ಬಹುಶ್ರುತರು ಅಲ್ಪಶ್ರುತರು ಎನ್ನದೆ ಕೇಳಿದ ಯಾರ ಕಿವಿಗಾದರೂ ನುಣ್ಪಿನಿಂಪನ್ನು ಉಂಟುಮಾಡುತ್ತವೆ ಎನ್ನುವ ಪೊನ್ನನ ಮಾತುಗಳು ಆತನ ಕಾವ್ಯದ ಮಹತಿಯನ್ನು ಹೇಳುತ್ತವೆ; ಅದೊಂದು ಕಾವ್ಯಲಕ್ಷಣ. ಆದರೆ, ಪಂಡಿತರನ್ನು ಮೂರ್ಖರನ್ನು ಜೊತೆಯಾಗಿ ಹೊಗಳಿ ಹೇಳಿ, ವಾಚಿಸಿದಂತಲ್ಲ. ಸರಸ್ವತಿಯನ್ನು ಒಲಿಸಿಕೊಂಡು ಬಂದ ಪುಣ್ಯ ಸವಣನಿಗೆ ಆಗುತ್ತದೆ; ಅಲ್ಲದೆ ಬೇರೆಯವರಿಗೆ ಆಗುತ್ತದೆಯೇ? ಎಂಬ ಮಾತನ್ನು ವಿಚಾರ ಮಾಡಬೇಕಿದೆ. ಇದೊಂದು ಕುಕವಿ

---

58. ಪಂಪಭಾರತಂ, 14–61

59. ಶಾಂತಿನಾಥಪುರಾಣ, 1–2

ನಿಂದನೆಯಂತೆ ಕಾಣುತ್ತದೆ. 'ಕುರುಳ್ಗಳ ಸವಣಂ' ಅಂದರೆ, ಸಾಹಿತ್ಯರಸಿಕನಾದ ಯತಿ ಎಂಬ ಬಿರುದು ಪೊನ್ನನಿಗಿದೆ. ಆದ್ದರಿಂದ ಸ್ವತಃ ಸವಣನಾದ ಪೊನ್ನನಿಗೆ ಮಾತ್ರ ಸರಸ್ವತಿಯನ್ನು ಸಾಧಿಸಿದ ಪುಣ್ಯ ದೊರೆಯುತ್ತದೆ ಬೇರೆಯವರಿಗಲ್ಲ ಎಂದಾಗುತ್ತದೆ. ಪಂಡಿತರನ್ನು ಮೂರ್ಖರನ್ನು ಹೊಗಳಿ ಹೇಳಿದ ಕಾವ್ಯವನ್ನು ವಾಚಿಸಿದರೆ ಸರಸ್ವತಿಯು ಒಲಿಯುತ್ತಾಳೆಯೆ? ಪೊನ್ನನ ಈ ಪದ್ಯದಲ್ಲಿ ಸ್ವಕಾವ್ಯ ಮತ್ತು ಸ್ವಸಾಮರ್ಥ್ಯ ಸಮರ್ಥನೆ ಮತ್ತು ಅನ್ಯಕವಿ ನಿಂದನೆ ಇರುವಂತಿದೆ. ಸರಸ್ವತಿಯ ದರ್ಶನವಿಲ್ಲ.

ಒಂದನೆಯ ನಾಗವರ್ಮ (ಸುಮಾರು ಕ್ರಿ.ಶ. 990)

ಒಂದನೆಯ ನಾಗವರ್ಮನ 'ಕರ್ಣಾಟಕ ಕಾದಂಬರಿ' ಮತ್ತು 'ಛಂದೋಂಬುಧಿ' ಕೃತಿಗಳೆರಡರಲ್ಲೂ ಸರಸ್ವತೀ ಸ್ತುತಿಯಿದೆ. ಕಾದಂಬರಿಯಲ್ಲಿ ಸರಸ್ವತಿಯ ಪರವಾದ ಎರಡು ಪದ್ಯಗಳಿವೆ. ಬಾಣನ ಸಂಸ್ಕೃತ ಕೃತಿ 'ಕಾದಂಬರಿ'ಯನ್ನು ನಾಗವರ್ಮನು ಕನ್ನಡಿಸಿದ್ದಾನೆ. ಸ್ವತಃ ಬಾಣನೇ ಸರಸ್ವತಿಗೂ ತನ್ನ ವಂಶದವರಿಗೂ ಇದ್ದ ಸಂಬಂಧಗಳನ್ನೂ, ತನ್ನ ವಂಶದವರೆಲ್ಲರೂ ಸರಸ್ವತಿಯ ಆರಾಧಕರಾಗಿರುವುದನ್ನು ಹೇಳಿಕೊಂಡಿದ್ದಾನೆ. ಸರಸ್ವತಿಯ ಬಗೆಗಿನ ಬಾಣನ ಸ್ವತಂತ್ರ ಮನೋಭಾವದಿಂದ ಸ್ಫೂರ್ತಿ ಹೊಂದಿರುವವನಂತೆ ನಾಗವರ್ಮನೂ ಒಂದು ಚಮತ್ಕಾರವನ್ನು ಮಾಡಿದ್ದಾನೆ.

ಬಾಣಂ ವಲ್ಲಭನಕ್ಕುಮೆಂದು ಪಡೆದಾ ವಾಗ್ದೇವಿಗಬ್ಜೋದ್ಭವಂ
ಜಾಣಿಂ ಬಾಣೆಯೆನಿಪ್ಪದೊಂದು ಪೆಸರಂ ಮುನ್ನಿತ್ತನೆಂದಂದು ಪೋ
ಮಾಣೆನ್ನನ್ಯ ಕವಿಸ್ತುತಿವ್ಯಸನಮಂ ವಾಗ್ಜಾತ ಚಾತುರ್ಯಗೀ
ರ್ವಾಣಂ ತಾನೆನೆ ಸಂದ ಬಾಣನೆ ವಲಂ ವಂದ್ಯಂ ಪೆರರ್ವಂದ್ಯರೇ॥[60]

ಬಾಣಕವಿಯನ್ನು ಸ್ತುತಿಸುತ್ತಿರುವಂತೆ ಕಾಣುವ ಈ ಪದ್ಯ ಪರೋಕ್ಷವಾಗಿ ಸರಸ್ವತಿಯನ್ನೇ ಸ್ತುತಿಸಿದೆ. ಅಬ್ಜೋದ್ಭವನು ಪಡೆದ ವಾಗ್ದೇವಿ ಎಂಬಲ್ಲಿ ಸರಸ್ವತಿಯು ಬ್ರಹ್ಮನ ಮಗಳು ಎಂಬ ಪೌರಾಣಿಕ ಕಲ್ಪನೆ ಯಥಾವತ್ತಾಗಿದೆ. ಬ್ರಹ್ಮನು ಮಗಳಿಗೆ ಹೆಸರಿಡುವಾಗ, ಮುಂದೆ ಅವಳ ವಲ್ಲಭನಾಗುವವನು ಬಾಣ ಎಂಬುದನ್ನು ಅರಿತು, ಆಕೆಗೆ ಬಾ(ವಾ)ಣಿ ಎಂದು ಹೆಸರಿಟ್ಟನು. ಹೀಗೆ ಬ್ರಹ್ಮನು 'ವಾಗ್ಜಾತಚಾತುರ್ಯಗೀರ್ವಾಣ'ನಾದ ಬಾಣನೇ ಸರಸ್ವತಿಗೆ 'ವಲ್ಲಭ'ನಾಗಲು ತಕ್ಕವನೆಂದು ನಿರ್ಧರಿಸಿರುವಾಗ, ಬಾಣ ಮಾತ್ರ ವಂದನಾರ್ಹ, ಬೇರೆ ಕವಿಗಳು ಯಾರೂ ವಂದನೆಗೆ ಅರ್ಹರಲ್ಲ ಎನ್ನುತ್ತಾನೆ ನಾಗವರ್ಮ. ಬ್ರಹ್ಮ ತಾನು ಪಡೆದ ಮಗಳನ್ನು ತಾನೇ ಮದುವೆಯಾಗಿ, ತನ್ನ ನಾಲಗೆಯಲ್ಲಿರಿಸಿಕೊಂಡ ಎಂಬ ಪೌರಾಣಿಕ ಕಲ್ಪನೆಗಿಂತ ಇದು ಭಿನ್ನವಾಗಿದೆ. ವಲ್ಲಭ ಎಂಬ ಪದಕ್ಕೆ 'ಗಂಡ' ಎಂಬ ಅರ್ಥವೂ ಇದೆ. ಈ ಅರ್ಥವನ್ನು ಇಲ್ಲಿ ಆರೋಪಿಸಿದರೆ, ಸರಸ್ವತಿಯು ಬಾಣನ

---

60. ಕರ್ಣಾಟಕ ಕಾದಂಬರಿ, ಕಥಾವತರಣಂ, ಪದ್ಯ –3

ಪತ್ನಿಯಾಗಬೇಕಾಗುತ್ತದೆ. ಸ್ವತಃ ಬಾಣನೇ ತನ್ನ ವಂಶಸ್ಥನಾದ ದಧೀಚನ ಪತ್ನಿ ಸರಸ್ವತಿಯೆಂದು ಹೇಳಿಕೊಂಡಿದ್ದಾನೆ. ದಧೀಚ-ಸರಸ್ವತಿಯರ ಕಥೆ ಮಹಾಭಾರತದಲ್ಲೂ ಬರುತ್ತದೆ. ಸರಸ್ವತಿಯು ಬಾಣನ ಪತ್ನಿಯಾಗುವುದಾದರೆ ಬೇರೆಲ್ಲಾ ಕವಿಗಳು ಸರಸ್ವತಿಯನ್ನು ಸ್ತುತಿಸುವುದಾಗಲೀ, ಸರಸ್ವತಿಯು ನಮ್ಮ ಮುಖದಲ್ಲಿ ಬಂದು ನೆಲೆಸಲಿ ಎಂದು ಪ್ರಾರ್ಥಿಸುವುದಾಗಲೀ ಅರ್ಥವಿಲ್ಲದಂತಾಗುತ್ತದೆ. ವಲ್ಲಭ ಎಂಬುದಕ್ಕೆ 'ಒಡೆಯ' ಎಂಬ ಅರ್ಥವೂ ಇದೆ. ಆದ್ದರಿಂದ ಇಲ್ಲಿ 'ವಲ್ಲಭ' ಎಂದರೆ 'ಪ್ರೀತಿಗೆ ಪಾತ್ರನಾದವನು' ಎಂದಷ್ಟೇ ಅರ್ಥ ಹೇಳಬೇಕಾಗುತ್ತದೆ. ಸರಸ್ವತಿಯ ಪ್ರತಿರೂಪವಾದ ಕಾವ್ಯಕಲೆಯನ್ನು ಸಿದ್ಧಿಸಿಕೊಂಡವನು, ಸಾಕ್ಷಾತ್ಕಾರ ಮಾಡಿಕೊಂಡವನು ಎಂದೂ ಅರ್ಥೈಸಬಹುದು. ವಾಗ್ಜಾತ ಚಾತುರ್ಯಗೀರ್ವಾಣನಾದ ಬಾಣನ ಕಾವ್ಯಶಕ್ತಿಯನ್ನು ನೇರವಾಗಿ ನಾಗವರ್ಮ ಹೊಗಳಿದ್ದರೆ ಈ ಅನುಮಾನಗಳೇ ಇರುತ್ತಿರಲಿಲ್ಲ. ಪ್ರತಿಭಾಶಾಲಿಯಾದ ಕವಿಯು ನೇರವಾಗಿ ಹೇಳದೇ ವಕ್ರವ್ಯಾಪಾರವನ್ನೇ ಕೈಗೊಳ್ಳುತ್ತಾನೆ; ಅದರಿಂದಲೇ ನವನವೀನವಾದುದನ್ನು ಸಾಧಿಸುತ್ತಾನೆ. ಅಂತೆಯೇ ಬಾಣನ ಕಾವ್ಯಪ್ರತಿಭೆಗೆ, ಸರಸ್ವತಿಯ ಸಂಪತ್ತಿಗೆ ಸುವರ್ಣ ಚೌಕಟ್ಟನ್ನು ನಾಗವರ್ಮ ಹಾಕಿದ್ದಾನೆ.

ಬಾಣನ ವಿಷಯದಲ್ಲಿ ಸರಸ್ವತಿಗಿದ್ದ ವಿಶೇಷ ಪ್ರೀತಿಯನ್ನು ನಮಗೆ ಮನಗಾಣಿಸುವ ಮೊದಲೇ, ನಾಗವರ್ಮನು 'ಕಾದಂಬರಿ'ಯ ಎರಡನೆಯ ಪದ್ಯದಲ್ಲಿಯೇ ಶ್ಲೇಷೆಯಿಂದ ಕಾವ್ಯಸರಸ್ವತಿಯನ್ನು ಸರಸ್ವತೀ ನದಿಗೆ ಹೋಲಿಸಿ ಸ್ತುತಿಸಿದ್ದಾನೆ.

> **ಸತತ ಗಂಭೀರವೃತ್ತಿಯಿನುದಾರತೆಯಿಂ ಜಗದೇಕ ಜೀವನ**
> **ಸ್ಥಿತಿಯಿನತಿಪ್ರಸಾದಗುಣದಿಂ ರಸಭಾವವಿಳಾಸದಿಂ ಕವಿ**
> **ಪ್ರತತಿನಿತಾಂತ ಸೇವ್ಯತೆಯನೊಂದಿ ಸರಸ್ವತಿಯಂದದಿಂ ಸರ**
> **ಸ್ವತಿ ದಯೆಗೆಯ್ಗೆ ನಮ್ಮೊಳನುಕೂಲತೆಯಿಂದವೆ ನಿರ್ಮಳತ್ವಮಂ॥**[61]

ಸರಸ್ವತೀ ದೇವಿಯು ಪ್ರತಿಭೆಯನ್ನು ಅನುಗ್ರಹಿಸುವವಳು. ತನ್ಮೂಲಕ ನಮ್ಮ ವಾಕ್ ಅರ್ಥಪೂರ್ಣವಾಗಿಯೂ, ದೋಷವಿಲ್ಲದೆಯೂ, ಪರಿಶುದ್ಧವಾಗಿಯೂ ಇರುವಂತೆ ನೋಡಿಕೊಳ್ಳುವವಳು. ದೋಷಗಳಿಲ್ಲದ, ಕಾವ್ಯಕ್ಕೆ ಅಗತ್ಯವಾದ ಅಭಿದಾ, ಲಕ್ಷಣಾ, ವ್ಯಂಜನಾ ಎಂಬ ಮೂರು ವೃತ್ತಿಗಳನ್ನು ದಯಪಾಲಿಸುವವಳು; ರಸೋಚಿತವಾದ ಕೈಶಿಕೀ ಮೊದಲಾದ ವೃತ್ತಿಗಳಿಂದ ಕೂಡಿರುವವಳು. ಉದಾರ, ಪ್ರಸಾದ ಮೊದಲಾದ ಕಾವ್ಯಗುಣಗಳಿಂದ ಅಲಂಕೃತಳಾಗಿ ಕಾಣುವವಳು. ಕವಿಗಳಿಂದ ಸೇವಿತಳಾಗುವವಳು. ಅಂತಹ ಸರಸ್ವತಿಯು, ಆ ಸರಸ್ವತೀ ನದಿಯಂತೆಯೇ ಇರುವವಳು. ಸರಸ್ವತೀ ನದಿಯು ಒಂದು ಜೀವನದಿ. ಬದುಕಿನ ಮೂಲಭೂತ ಆಧಾರಗಳಲ್ಲಿ ಜಲವೂ ಒಂದು. ಜಗದೇಕಜೀವನ ಸ್ಥಿತಿಯಿಂದ ನಿಶ್ಚಿತವಾದ ಮಾರ್ಗದಲ್ಲಿ, ನಿಶ್ಚಿತವಾದ ಗುರಿಯೆಡೆಗೆ ಹರಿಯುವ ಸರಸ್ವತೀ

---

61. ಕರ್ಣಾಟಕ ಕಾದಂಬರಿ, ಕಥಾವತರಣಂ, ಪದ್ಯ -2

ನದಿಯಂತೆ, ಕಾವ್ಯದೇವತೆಯಾದ ಸರಸ್ವತಿಯಿಂದ ನಮಗೆ ಕಾವ್ಯನಿರ್ಮಾಣಕ್ಕೆ ಸಂಪತ್ತು ದೊರೆಯಲಿ ಎಂದು ಕವಿ ಸ್ತುತಿಸಿದ್ದಾನೆ. ನದಿಯ ಓಟದಂತೆ ಕಾವ್ಯದ ಓಟವೂ ಇರಬೇಕು. ನದಿಯ ಸ್ವಚ್ಛತೆ ಕಾವ್ಯಕ್ಕೂ ಇರಬೇಕು. ನದಿಯಿಂದ ಜಗತ್ತಿಗೆ ಆಗುವ ನಾನಾ ಉಪಕಾರಗಳಂತೆ, ಕಾವ್ಯದಿಂದಲೂ ಪ್ರಯೋಜನಗಳಾಗಬೇಕು. ಒಟ್ಟಾರೆಯಾಗಿ ಒಂದು ಒಳ್ಳೆಯ ಕಾವ್ಯಕ್ಕೆ ಇರಬೇಕಾದ ರಸ, ಅಲಂಕಾರ, ರೀತಿ ಪ್ರತಿಯೊಂದಕ್ಕೂ ಕಾವ್ಯಾಧಿದೇವತೆಯಾದ ಸರಸ್ವತಿಯೇ ಕಾರಣ ಎಂಬುದು ನಾಗವರ್ಮನ ಅಭಿಪ್ರಾಯ. ಸರಸ್ವತೀ ನದಿಯ ದೇವತೆ ಮತ್ತು ಕಾವ್ಯದೇವತೆ ಎರಡೂ ಆಗಿರುವುದು, ನಾಗವರ್ಮನ ಆಶಯಕ್ಕೆ ಪೂರಕವಾಗಿ ಇದೆ.

ಇದೇ ನಾಗವರ್ಮನ 'ಛಂದೋಂಬುಧಿ'ಯಲ್ಲಿ ಬಂದಿರುವ ಸರಸ್ವತಿಯ ಸ್ತುತಿ ಹೀಗಿದೆ.

ಅತಿಮಧುರಪ್ರಸನ್ನೆ ಪರಿಪೂರ್ಣರಸೋಚಿತೆ ರಂಜಿತಾರ್ಥಸಂ
ಯುತೆ ಸಕಲಾಗಮೋಕ್ತಿಯುತೆ ಲಕ್ಷಣಲಕ್ಷ್ಯಸಮಸ್ತ ವಸ್ತು ಸಂ
ಯುತೆ ಸರಸೀಜಗರ್ಭನ ಮುಖಾಂಬುಜದಿಂದಂ ಅಗಲ್ದು ಬಂದು ವಾಕ್
ಸತಿ ನೆಲಸಿರ್ಕೆ ಕೂರ್ತು ಮುಖಪಂಕಜದೊಳ್ ಕವಿನಾಗವರ್ಮನಾ॥[62]

ಇಲ್ಲಿ ಬಂದಿರುವ ಮಧುರ, ಪ್ರಸನ್ನ, ರಸ, ರಂಜಿತಾರ್ಥ ಎಲ್ಲವೂ ಕಾವ್ಯದ ಅಗತ್ಯಗಳೆ. ಎಲ್ಲಾ ಆಗಮಗಳಲ್ಲಿರುವ ಉಕ್ತಿಗಳು, ಹೋಲಿಸಬೇಕಾದ ಮತ್ತು ಹೋಲಿಸಬಹುದಾದ ಸಮಸ್ತ ವಸ್ತುಗಳಿಂದ ಸರಸ್ವತಿಯು ಕೂಡಿರುತ್ತಾಳೆ. ಅಂತಹ ಸರಸ್ವತಿಯು ಕಮಲಜನಾದ ಬ್ರಹ್ಮನ ಮುಖದಿಂದ ಬಂದು ನಾಗವರ್ಮನ ಮುಖಕಮಲದಲ್ಲಿ ನೆಲೆಸಲಿ ಎಂಬುದು ಕವಿಯ ಪ್ರಾರ್ಥನೆ. ಕಾದಂಬರಿಯಲ್ಲಿ ಬಂದಿರುವಂತೆ ಇಲ್ಲಿಯೂ ಸರಸ್ವತಿಯು ಕಾವ್ಯದೇವತೆ, ಬ್ರಹ್ಮನ ಮುಖದಲ್ಲಿ ನೆಲೆ ನಿಂತಿರುವವಳು, ಇತ್ಯಾದಿ. ಆದರೆ 'ಸರಸೀಜಗರ್ಭನ ಮುಖಾಂಬುಜದಿಂದಂ ಅಗಲ್ದು ಬಂದು ವಾಕ್‌ಸತಿ ಕವಿನಾಗವರ್ಮನಾ ಮುಖಪಂಕಜದೊಳ್ ಕೂರ್ತು ನೆಲೆಸಲಿ' ಎಂಬುದಕ್ಕೆ ಮುಗಳಿಯವರು ಆಕ್ಷೇಪವನ್ನೆತ್ತಿದ್ದಾರೆ. **'..... ಬ್ರಹ್ಮನ ಪತ್ನಿಯಾಗಿ ಅವನ ಮುಖದಲ್ಲಿ ನೆಲಸಿದ್ದ ಸರಸ್ವತಿಯು ಪತಿಯನ್ನು ಬಿಟ್ಟು, ನಾಗವರ್ಮನ ಮುಖಪಂಕಜದಲ್ಲಿ ನೆಲಸಿದರೆ ಅವಳು ವಾಕ್‌ಸತಿಯಾಗಿ ಉಳಿಯುವಳೇ?** .....(ಹೀಗೆಲ್ಲಾ ಆಗುವುದಾದರೆ) **ಸರಸ್ವತಿಯು ಚಂಚಲೆಯಾಗಿ ಕ್ಷಣಿಕ ಬೆಲೆಯುಳ್ಳವಳೂ ಆಗಬಹುದು.'**[63] ಎಂಬುದೇ ಆ ಆಕ್ಷೇಪಣೆ. ಸ್ತನಭಾರದಿಂದ ಬಾಗಿದ ಗಣಿಕೆಯ ಸ್ತನತಟಕ್ಕೆ ಹಾರವಾಗ ಬಯಸುವ ಪಂಪನೇ,[64] ಇನ್ನೊಂದು ಕಡೆ ವಾಕ್‌ವಧೂ ಆದ ಸರಸ್ವತಿಯ ಕೊರಳಿಗೆ ಮಣಿಹಾರವಾಗಲು ಬಯಸುತ್ತಾನೆ. ಮಿಕ್ಕ ಸ್ತ್ರೀಯರಿಗಿಂತ ಸುಂದರಿಯಾದ ವಾಕ್‌ಸುಂದರಿ ಸರಸ್ವತಿಯು ಎನ್ನ ಈ ಮುಖಾಂಭೋಜದೊಳ್

---

62. ಮುಗಳಿ ರಂ.ಶ್ರೀ.: ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ ಕೃತಿಯಲ್ಲಿ ಉದ್ಧೃತ ಪು.13
63. ಅದೇ ಪು.13
64. ಪಂಪಭಾರತಂ, 1-31 ಮತ್ತು 32

ನೆಲೆಸಲಿ ಎಂದು ರನ್ನನು ನೇರವಾಗಿಯೇ ಸ್ತುತಿಸಿದ್ದಾನೆ.[65] 'ಕರ್ಣಾಟಕ ಪಂಚತಂತ್ರ'ದ ಕರ್ತೃವಾದ ದುರ್ಗಸಿಂಹನು ತನ್ನೊಂದು ಪದ್ಯದಲ್ಲಿ, 'ದುರ್ಗಸಿಂಹಾನನಪದ್ಮದೊಳ್ ನೆಲೆಸಿ ನಿಲ್ಗೆ ಸರಸ್ವತಿ ಬಂದು ರಾಗದಿಂ'[66] ಎಂದು ಸ್ತುತಿಸಿದ್ದಾನೆ. ಸರಸ್ವತಿಯನ್ನು ವಾಕ್ಸುಂದರಿ ಎಂದು ಕರೆದಿರುವ ನಯಸೇನನು ತನ್ನ 'ಧರ್ಮಾಮೃತ'ದಲ್ಲಿ '**ವಾಕ್ಸುಂದರಿ ಕೂರ್ತು ನಿಲ್ಕೆ ನಯಸೇನಮುನೀಂದ್ರಮುಖಾಬ್ಜದೊಳ್**'[67] ಎಂದೇ ಪ್ರಾರ್ಥಿಸಿದ್ದಾನೆ. 'ವಾಗ್ದೇವಿಯು ತನ್ನ ಮುಖಪದ್ಮದಲ್ಲಿ ನೆಲಸಲಿ' ಎಂದು ಕವಿಗಳು ಪ್ರಾರ್ಥಿಸುವುದು ಒಂದು ಕವಿಸಮಯವೇ ಆಗಿದೆ. ಇದಿಷ್ಟರಿಂದಲೇ, ಸರಸ್ವತಿಯ ಮಹತ್ವ ಕಡಿಮೆಯಾಗುತ್ತದೆ ಎಂದು ಭಾವಿಸಲಾಗದು. ಅಲ್ಲದೆ,

'ನಿಯತಿಕೃತನಿಯಮರಹಿತಾಂ ಹ್ಲಾದೈಕಮಯೀಮನನ್ಯಪರತಂತ್ರಾಂ।
ನವರಸರುಚಿರಾಂ ನಿರ್ಮಿತಿಮಾದಧತೀ ಭಾರತೀ ಕವೇರ್ಜಯತಿ॥

ಎಂದು ಮಮ್ಮಟನು 'ಕಾವ್ಯಪ್ರಕಾಶ'ದ ಆದಿಯಲ್ಲಿ (1.1) ಕವಿವಾಣಿಯನ್ನು ಸ್ತುತಿಸುತ್ತಾ, ಅದರ ಉತ್ಕರ್ಷವನ್ನು ಹೇಳುವ ಬಗೆಯಲ್ಲೇ ಅದು ಹೇಗೆ ಬ್ರಹ್ಮಸೃಷ್ಟಿಗಿಂತ ಅಂಶ ಅಂಶದಲ್ಲೂ ಮೇಲೆಂಬುದನ್ನು ಕೌಶಲದಿಂದ ಸೂಚಿಸಿದ್ದಾನೆ' ಎಂಬ ಅಭಿಪ್ರಾಯವನ್ನು ಗಮನಿಸಿದಾಗ ನಾಗವರ್ಮನು ಸರಸ್ವತಿಯ ಸ್ತುತಿಯಲ್ಲಿ ತೋರಿಸಿರುವ ಅಭಿಪ್ರಾಯವನ್ನು ಗೌರವಿಸಬೇಕಾಗುತ್ತದೆ.

ರನ್ನ (ಕ್ರಿ.ಶ. 993)

ಕವಿ ರನ್ನನು 'ಗದಾಯುದ್ಧ' ಮತ್ತು 'ಅಜಿತತೀರ್ಥಂಕರಪುರಾಣ' ಕಾವ್ಯಗಳಲ್ಲಿ ಸರಸ್ವತಿಯ ವಿಷಯವನ್ನು ಪ್ರಸ್ತಾಪಿಸಿದ್ದಾನೆ. 'ಗದಾಯುದ್ಧ'ದಲ್ಲಿ ಬ್ರಹ್ಮಸ್ತುತಿಯನ್ನು ಮಾಡುವಾಗ '**ಬ್ರಾಹ್ಮಿಯೊಳ್ ಪರಮಶ್ರೀ**'[68] –ಸರಸ್ವತಿಯೇ ಮುಕ್ತಿ ಸಂಪತ್ತು– ಎಂದಿದ್ದಾನೆ.

ಪದಿನಾಱಿಲ್ಲವಲಂಕ್ರಿಯಾರಚನೆ ಮೂವತ್ತಾಱು ನೇರ್ಪಟ್ಟುವೊಂ
ದಿದ ಶೃಂಗಾರಮದಲ್ಲಮೊಂದೆ ರಸಮೊಂಬತ್ತೆಯ್ದೊಡಂಬಟ್ಟುವೆಂ।
ಬುದನೆಂಬನ್ನೆಗಮಂಗನೋಚಿತ ರಸಾಲಂಕಾರಮಂ ತಾಳ್ದದೊ
ಪ್ಪಿದ ವಾಕ್ಸುಂದರಿ ಬಂದು ಸನ್ನಿಹಿತೆಯಕ್ಕೆನ್ನೀ ಮುಖಾಂಭೋಜದೊಳ್॥[69]

ಒಳ್ಳೆಯ ಕಾವ್ಯಕ್ಕೆ ರಸ ಮತ್ತು ಅಲಂಕಾರಗಳು ಅತ್ಯವಶ್ಯಕ. ಅಂತೆಯೇ ಆ ಕಾವ್ಯದ ಅಧಿದೇವತೆಯಾದ ಸರಸ್ವತಿಯು ಸರ್ವಾಲಂಕಾರಗಳಿಂದ ಕೂಡಿದ ಸೌಂದರ್ಯವತಿಯೂ ಆಗಿರಬೇಕು. ಆಕೆಯ ಅಲಂಕಾರಕ್ಕೆ ಕಾವ್ಯದ ಅಗತ್ಯಗಳಾದ ನವರಸಗಳೂ ಅಲಂಕಾರಗಳೂ ಬೇಕು. ಆದ್ದರಿಂದಲೇ

---

65. ಸಾಹಸಭೀಮವಿಜಯಂ, 1–7
66. ಕರ್ಣಾಟಕ ಪಂಚತಂತ್ರಂ, ಪೀಠಿಕಾ ಪ್ರಕರಣಂ, ಪದ್ಯ –4
67. ಧರ್ಮಾಮೃತಂ, 1–8
68. ಸಾಹಸಭೀಮವಿಜಯಂ, 1–3
69. ಸಾಹಸಭೀಮವಿಜಯಂ, 1–7

ಸರಸ್ವತಿಯು ಕಾವ್ಯಾಂಗನೆಗೆ ಉಚಿತವಾದ 'ರಸಾಲಂಕಾರಮಂ ತಾಳ್ದೊಪ್ಪಿದ ವಾಕ್ಸುಂದರಿ'ಯಾಗಿದ್ದಾಳೆ. ಇಂತಹ ಕಾವ್ಯಸರಸ್ವತಿಯು ತನ್ನ ಮುಖದಲ್ಲಿ ನೆಲೆಸಲಿ ಎಂಬುದು ಕವಿ ರನ್ನನ ಬಯಕೆ.

ಇರಿವಬೆಡಂಗನನ್ನು ಸ್ತುತಿಸುವ 'ಗದಾಯುದ್ಧ'ದ ದ್ವಿತಿಯಾಶ್ವಾಸದಲ್ಲಿನ ಒಂದು ಪದ್ಯದಲ್ಲಿ ಸರಸ್ವತಿಯ ವಿಚಾರವನ್ನೂ ಉಲ್ಲೇಖಿಸುವುದರಿಂದ ವಿಶೇಷವಾಗಿದೆ.

ಕಾನನದಿಂದಗಲ್ದಂಬುಜ
ಕಾನನಮಂ ಬಿಟ್ಟು ಬಂದು ಸರಸತಿ ಸಿರಿ ತ
ನ್ನಾನನದೊಳುರದೊಳಿರೆ ಚತು
ರಾನನುಂ ಕೃಷ್ಣನ್ ಎನಿಪನ್ ಇಱಿವಬೆಡಂಗಂ॥[70]

ಕನ್ನಡ ಕವಿಗಳ ರಾಜಾಶ್ರಯದ ಪ್ರೀತಿ ಅತಿಯಾದುದು! 'ತಮ್ಮ ಮುಖಗಳಲ್ಲಿ ಸರಸ್ವತಿಯು ನೆಲಸಲಿ' ಎಂಬ ಆಶಯವನ್ನೂ ಮೀರಿ, 'ತಮ್ಮ ಆಶ್ರಯದಾತರ ಮುಖವನ್ನೂ ಸರಸ್ವತಿಯು ಅಲಂಕರಿಸಲಿ' ಎಂಬ ಕಲ್ಪನೆ ಇಲ್ಲಿದೆ. ಪ್ರಸ್ತುತ ಪದ್ಯದಲ್ಲಿ ರನ್ನ 'ಕಾಡನ್ನೂ ಕಮಲವನವನ್ನೂ ಬಿಟ್ಟು ಬಂದ ಸರಸ್ವತಿ ಮತ್ತು ಲಕ್ಷ್ಮಿಯರು ತನ್ನ ಆಶ್ರಯದಾತ ಇರಿವಬೆಡಂಗನ ಮುಖದಲ್ಲಿ ಮತ್ತು ಎದೆಯಲ್ಲಿ ನೆಲಸಿದರು' ಎಂದು ಹೇಳಿ, 'ಹಾಗೆ ಸರಸ್ವತಿ ಲಕ್ಷ್ಮಿಯರು ನೆಲಸಿದ್ದರಿಂದ ಇರಿವಬೆಡಂಗನೇ ಬ್ರಹ್ಮನಾದನು; ವಿಷ್ಣುವಾದನು' ಎಂದು ಉತ್ಪ್ರೇಕ್ಷೆ ಮಾಡಿದ್ದಾನೆ.

'ಅಜಿತತೀರ್ಥಂಕರಪುರಾಣ'ದಲ್ಲಿ ತನ್ನನ್ನು ತಾನು **'ಸರಸ್ವತೀರತ್ನಮಂಡನಂ'**[71] ಎಂದು ಕರೆದುಕೊಂಡಿರುವ ರನ್ನ, ಸರಸ್ವತಿಯನ್ನು ಅಬಲೆ ಎಂದು ಕರೆದಿದ್ದಾನೆ.

ಸರಸತಿಯನಬಲೆಯಂ ಗೋ
ಣ್ಮುರಿಗೊಂಡರ್ಥಕ್ಕೆ ಕುದಿದು ನೋಯಿಸುವವನ।
ಕ್ಕರಿಗನೆ ಪಾತಕನಾತನೆ
ಸರಸ್ವತೀದ್ರೋಹನವನನಾರ್ ಮುಟ್ಟುವರೋ॥[72]

ಕವಿಮುಖದಿಂದ ಕಾವ್ಯರೂಪದಲ್ಲಿ ಪ್ರಕಟವಾಗುವ ಸರಸ್ವತಿಯು ಅಬಲೆ. ಲಾಭಗೌರವಗಳಿಗೆ ಆಸೆಪಟ್ಟು ಸಹಜ ಸಾಮರ್ಥ್ಯವಿಲ್ಲದ ಅಕ್ಕರಿಗರು, ಅಬಲೆಯಾದ ಸರಸ್ವತಿಯ ಗೋಣನ್ನು ಮುರಿಯುವ ಅಂದರೆ, ಅರ್ಥಹೀನ ಕಾವ್ಯರಚನೆ ಮಾಡುವುದು ಸರಸ್ವತಿಗೆ ದ್ರೋಹವನ್ನೆಸಗಿದಂತೆ. ಇಲ್ಲಿ ಅಬಲೆ ಎಂದರೆ, ಕುಕವಿಗಳ ಕಾರಣದಿಂದಾಗಿ ತನ್ನ ಶಕ್ತಿಯನ್ನು ಕಳೆದುಕೊಂಡ ಸರಸ್ವತಿ ಎಂದು ಅರ್ಥ ಮಾಡಲೂ ಸಾಧ್ಯವಿದೆ. ಆದರೆ ಯಾರೋ ಒಬ್ಬ ಕುಕವಿಯ ಕಾರಣದಿಂದಾಗಿ ಅಬಲೆಯಾಗುವಷ್ಟು ಸರಸ್ವತಿಯು ದುರ್ಬಲಳೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಈ ಅಬಲೆ ಸಾಮಾನ್ಯ ಸ್ತ್ರೀಯಾಗಿದ್ದರೆ

---

70. ಸಾಹಸಭೀಮವಿಜಯಂ, 2–45
71. ಅಜಿತತೀರ್ಥಂಕರಪುರಾಣಂ, 12-49
72. ಅಜಿತತೀರ್ಥಂಕರಪುರಾಣಂ, 1–89

ಒಪ್ಪಬಹುದಿತ್ತೇನೊ. ಆದರೆ ಕಾವ್ಯಪ್ರೇರಣಾಶಕ್ತಿಯಾದ, ಕಾವ್ಯಾಧಿದೇವತೆಯಾದ ಸರ್ವಭಾಷಾಮಯೀ ಸರಸ್ವತಿಯು ಕೇವಲ ಕುಕವಿಯ ಕಾರಣದಿಂದಾಗಿ ಅಬಲೆಯಾಗಲಾರಳು.

ದುರ್ಗಸಿಂಹ (ಕ್ರಿ.ಶ. 1031)

'ಕರ್ಣಾಟಕ ಪಂಚತಂತ್ರಂ' ಕೃತಿಯ ಕರ್ತೃವಾದ ದುರ್ಗಸಿಂಹನು, ತನ್ನ ಕಾವ್ಯದ ಪ್ರಾರಂಭದ ಮೂರು ಪದ್ಯಗಳಲ್ಲಿ ತ್ರಿಮೂರ್ತಿಗಳನ್ನು ಸ್ತುತಿಸಿದ್ದಾನೆ. ಬ್ರಹ್ಮನನ್ನು ಸ್ತುತಿಸುವ ಪದ್ಯದಲ್ಲಿ ಪ್ರಾಸಂಗಿಕವಾಗಿ ಸರಸ್ವತಿಯ ಕಣ್ಣುಗಳನ್ನು ಹೆಣ್ಣುದುಂಬಿಗೆ ಹೋಲಿಸುತ್ತಾನೆ. **"ಸರಸ್ವತೀ ವ್ಯಾಯತಲೋಲಲೋಚನ ಮದಾಳಿನಿಪೀತಮುಖಾಬ್ಜನ್....."**[73] ಅಂದರೆ 'ಸರಸ್ವತಿಯ ವಿಶಾಲವಾದ ಹಾಗೂ ಚಂಚಲವಾದ ಕಣ್ಣುಗಳೆಂಬ ಹೆಣ್ಣುದುಂಬಿಗಳು ಆಸ್ವಾದಿಸಿದ ಮುಖಕಮಲ ಬ್ರಹ್ಮನದೆಂದು' ಕವಿಯು ವರ್ಣಿಸಿದ್ದಾನೆ. ಸರಸ್ವತಿ–ಬ್ರಹ್ಮರ ನಡುವೆ ಶೃಂಗಾರ ಚಿತ್ರವನ್ನು ಕಲ್ಪಿಸಿರುವುದು ಇಲ್ಲಿ ಗಮನಿಸಬೇಕಾದ ಮುಖ್ಯವಾದ ಅಂಶ. ಯಾವ ಕವಿಯೂ ಸಾಮಾನ್ಯವಾಗಿ ಬ್ರಹ್ಮ ಮತ್ತು ಸರಸ್ವತಿಯರ ನಡುವೆ ಶೃಂಗಾರವನ್ನು ಚಿತ್ರಿಸಿಲ್ಲ. ಅದಕ್ಕೆ ಸರಸ್ವತಿಯು ಬ್ರಹ್ಮನ ಮಗಳು; ಮಗಳನ್ನೇ ಬ್ರಹ್ಮ ವರಿಸಿ, ಮುಖದಲ್ಲಿ ಧರಿಸಿದ ಎಂಬ ಪೌರಾಣಿಕ ಕಲ್ಪನೆ ಕಾರಣವಿರಬೇಕು. ಜೊತೆಗೆ ಬ್ರಹ್ಮ **'ಪಿತಾಮಹ'** ಎಂಬ ಸ್ಥೂಲ ಕಲ್ಪನೆ ಸಾಮಾನ್ಯವಾಗಿ ಎಲ್ಲರಲ್ಲಿಯೂ ಇರುವುದು. ಸ್ವತಃ ದುರ್ಗಸಿಂಹನೇ ಅದೇ ಪದ್ಯದಲ್ಲಿ ಬ್ರಹ್ಮನನ್ನು ಪಿತಾಮಹ ಎಂದೇ ಕರೆದಿರುವುದನ್ನು ಕಾಣಬಹುದು.

ಎರಡನೆಯ ನಾಗವರ್ಮ (ಕ್ರಿ.ಶ. 1042)

ಎರಡನೆಯ ನಾಗವರ್ಮನ 'ಕಾವ್ಯಾವಲೋಕನ' ಮತ್ತು 'ವರ್ಧಮಾನಪುರಾಣ'ಗಳಲ್ಲಿ ಸರಸ್ವತಿಯ ಸ್ತುತಿಗಳಿವೆ. ಕವಿಯು 'ಕಾವ್ಯಾವಲೋಕನ'ದಲ್ಲಿ ಮೂರು ವಿಶೇಷಣಗಳಿಂದ ಸರಸ್ವತಿಯನ್ನು ಪ್ರಾರ್ಥಿಸಿ ವರವನ್ನು ದಯಪಾಲಿಸಲಿ ಎನ್ನುತ್ತಾನೆ.

ಪರಮಾಗಮಮೂರ್ತಿ ಚರಾ
ಚರಲೋಕಾಲೋಕಸಂಪ್ರದಾಯಿನಿ ವಿಬುಧೋ
ತ್ಕರಮಾನಸಾಬ್ಜವಾಸಿನಿ
ಸರಸ್ವತೀದೇವಿ ವರದೆಯಕ್ಕೆಮಗೆಂದುಂ॥[74]

ಪರಮಾಗಮ ಮೂರ್ತಿ ಎಂದರೆ, ಎಲ್ಲಾ ಆಗಮಗಳಿಗೂ ಅಧಿದೇವತೆ ಎಂದರ್ಥ. ಚರಾಚರ ಲೋಕಾಲೋಕ ಸಂಪ್ರದಾಯಿನಿ ಎಂಬುದು ಹೊಸದಾಗಿ ಬಂದಿದೆ. ಜೀವ ಜಡಗಳೆರಡರಲ್ಲೂ, ಲೋಕ ಮತ್ತು ಲೋಕವಲ್ಲದರಲ್ಲೂ ವಾಕ್‌ಚೈತನ್ಯವನ್ನು ಉಂಟು ಮಾಡುವವಳು ಸರಸ್ವತಿ. ವಾಗ್ದೇವಿಯ ಮಹತ್ವವನ್ನು ವ್ಯಕ್ತಗೊಳಿಸುವಲ್ಲಿ ಈ ವಿಶೇಷಣ ಯಶಸ್ವಿಯಾಗಿದೆ. ವಿಬುಧೋತ್ಕರಮಾನಸಾಬ್ಜವಾಸಿನಿ ಎಂಬ ವಿಶೇಷಣ,

---

73. ಕರ್ಣಾಟಕ ಪಂಚತಂತ್ರಂ, ಪೀಠಿಕಾ ಪ್ರಕರಣಂ, ಪದ್ಯ –3
74. ಕಾವ್ಯಾವಲೋಕನಂ. ಪೀಠಿಕೆ, ಪದ್ಯ –2

ಸರಸ್ವತಿಯ ವಾಸಸ್ಥಾನ ಪಂಡಿತರ, ವಿದ್ಯಾವಂತರ ಮನಸ್ಸೆಂಬ ಕಮಲವೇ ಹೊರೆತು ಸರಸಿಜವಲ್ಲ ಎಂಬುದನ್ನು ಧ್ವನಿಸುತ್ತದೆ.

ಕವಿಗಳ್ಗಿದು ಕೈಗನ್ನಡಿ
ಕವಿತೆಗೆ ಬಾಟಿಕ್ಕೊದಲುದಾತ್ತ ವಾಗ್ದೇವತೆಗು
ದ್ಭವಹೇತು ಕೋಶಗೃಹಮೆನೆ
ಭುವನದೊಳಿದು ಪರೆದು ನಿಲ್ವುದೊಂದಚ್ಚರಿಯೇ॥[75]

ನಾಗವರ್ಮನ ಕೃತಿ ಕವಿಗಳಿಗೆ ಕೈಗನ್ನಡಿ, ಕವಿತೆಗೆ ಜೀವರೂಪಳಾದ, ಉದಾತ್ತಳಾದ ವಾಗ್ದೇವತೆಯ ಉದ್ಭವಕ್ಕೆ ಕಾರಣವಾದ ಕೋಶಗೃಹ ಎಂಬಂತಿರುವ ಈ ಕಾವ್ಯ ಪ್ರಸಿದ್ಧಿ ಪಡೆಯುವುದೊಂದು ಆಶ್ಚರ್ಯದ ಮಾತೇ' ಎಂಬ ಕಲ್ಪನೆ ನವೀನವಾಗಿದೆ. ಇನ್ನೊದು ಪದ್ಯದಲ್ಲಿ ಕವಿಯು ತನ್ನನ್ನು **'ಸುಕವಿ ಸರಸ್ವತೀವದನ ಮಂಗಳದರ್ಪಣನ್'**[76] ಎಂದು ಕರೆದುಕೊಂಡಿದ್ದಾನೆ. ವಾಗ್ದೇವಿಯು ಬಂದು ನಲಿವಿಂದ ಒಲವಿಂದ ನಮ್ಮ ಮುಖಕಮಲದಲ್ಲಿ, ನಾಲಗೆಯಲ್ಲಿ ನೆಲಸಲಿ ಎಂಬ ಪ್ರಾರ್ಥನೆ ಸಾಮಾನ್ಯವಾದುದಾಗಿದೆ. ಆದರೆ ನಾಗವರ್ಮನು ತನ್ನನ್ನು ತಾನು 'ಸರಸ್ವತಿಯ ವದನವನ್ನು ಪ್ರತಿಬಿಂಬಿಸುವ ಮಂಗಳದರ್ಪಣ' ಎಂದು ಕರೆದುಕೊಂಡಿರುವುದು ವಿನೂತನವಾಗಿದೆ. ಇನ್ನೊಂದು ಪದ್ಯದಲ್ಲಿ **'ವಾಕ್‌ಶ್ರೀಸುಂದರಿಗೆ ರತ್ನಮಂಡನದಂದದೊಳ್ ಇರ್ದಪುವು ನಾಗವರ್ಮನ ಕೃತಿಗಳ್'**[77] ಎಂದು ಕರೆದುಕೊಂಡಿದ್ದಾನೆ. ಕಾವ್ಯಾವಲೋಕನ ಸ್ವತಂತ್ರ ಕಾವ್ಯಕೃತಿಯಲ್ಲ; ಬೇರೆ ಕವಿಗಳ ಕಾವ್ಯಗಳಿಂದ ಆಯ್ದ ಪದ್ಯಗಳ ಅವಲೋಕನ. ಸಹೃದಯನಿಗೆ ಕವಿಸಹಜವಾದ ಹೃದಯವಿರಬೇಕೆಂಬ ಮಾತಿದೆ. ಆದ್ದರಿಂದ ಸ್ವತಃ ಕವಿಯೂ ಸಹೃದಯನೂ ಆದ ನಾಗವರ್ಮನಿಗೆ ಕಾವ್ಯಗಳು ಸರಸ್ವತಿಯ ಅವತಾರದಂತೆ ಕಂಡಿರುವುದು ಸಮಂಜಸವಾಗಿಯೇ ಇದೆ. ಬೇರೆ ಕವಿಗಳ ಕಾವ್ಯಸರಸ್ವತಿಯ ಸೌಂದರ್ಯವನ್ನು ಸಹೃದಯರಿಗೆ ಪರಿಚಯಿಸುತ್ತಿರುವ ನಾಗವರ್ಮನ 'ಕಾವ್ಯಾವಲೋಕ'ನ ಕೃತಿ ಸರಸ್ವತಿಯ ವದನವನ್ನು ತೋರಿಸುವ ದರ್ಪಣ ಎಂಬ ಕಲ್ಪನೆ ನವೀನವಾಗಿದೆ.

'ವರ್ಧಮಾನಪುರಾಣ'ದಲ್ಲಿ ಬಂದಿರುವ ಸರಸ್ವತಿಯ ಸ್ತುತಿ ಹೀಗಿದೆ.

ಒಡವುಟ್ಟಿದುದಱುತಕ್ಕದ
ಮೊಡನಾಡಿದುದೊಡನೆ ತಿಳಿವು ಬಳೆದುದು ಗೆಡೆಗೊಂ
ಡೊಡನೋದಿದಳ್ ಸರಸ್ವತಿ
ಗಡಿವಿನುತಂ ಪ್ರಣಿಧಿ ಸುಕವಿರತ್ನಾಕರನಾ॥[78]

---

75. ಅದೇ, ಪೀಠಿಕೆ, ಪದ್ಯ –4
76. ಕಾವ್ಯಾವಲೋಕನಂ, ಪದ್ಯ –962
77. ಕಾವ್ಯಾವಲೋಕನಂ, ಪದ್ಯ –965
78. ವರ್ಧಮಾನ ಪುರಾಣಂ, 1–29

ಸಭ್ಯನಾಗಿ ಪ್ರಾರ್ಥಿಸುವ ಸುಕವಿರತ್ನಾಕರನಿಗೆ ಜ್ಞಾನ ಜೊತೆಯಲ್ಲಿ ಹುಟ್ಟಿತು. ಪ್ರೀತಿ ಜೊತೆಯಾಟವಾಡಿತು. ತಿಳುವಳಿಕೆ ಜೊತೆಯಲ್ಲಿಯೇ ಬೆಳೆಯಿತು. ಕವಿಗೆ ಸ್ನೇಹಿತಳಾಗಿ ಸರಸ್ವತಿಯು ಜೊತೆಯಲ್ಲಿಯೇ ಓದಿದಳಂತೆ! ಒಡಹುಟ್ಟಿದುದೂ, ಸ್ನೇಹಕ್ಕೆ ತಕ್ಕದ್ದೂ, ಒಡನಾಡಿದೊಡನೆ ಅರಿವನ್ನು ಬೆಳೆಸುವುದೂ ಆದ ಕಾವ್ಯರಚನಾಪ್ರತಿಭೆಯನ್ನು ತನ್ನ ಗೆಳೆತನವಾದೊಡನೆಯೇ ಉಡುಗೊರೆಯಾಗಿ ನೀಡಿದ ಸರಸ್ವತಿಯು, ತನ್ನ ಕಾವ್ಯಕ್ಕೂ ಆಶ್ರಯವನ್ನು ನೀಡಲಿ ಎಂದು ಕವಿ ಪ್ರಾರ್ಥಿಸಿದ್ದಾನೆ. ನಾಗವರ್ಮ ಸರಸ್ವತಿಯನ್ನು ತನ್ನ ಒಡಹುಟ್ಟಿದವಳೆಂಬಂತೆ ಗೆಳತಿಯೆಂಬಂತೆ ಭಾವಿಸಿರುವುದು ಹೊಸದಾಗಿದೆ. ಜೊತೆಗೆ ಜ್ಞಾನ, ಪ್ರೀತಿ, ವಿವೇಕ ಇವು ಆತನಿಗೆ ಹುಟ್ಟಿನಿಂದ ಇದ್ದವುಗಳು ಎಂಬ ಅರ್ಥ ಇಲ್ಲಿ ಸ್ಫುರಿಸುತ್ತದೆ.

ನಾಗಚಂದ್ರ (ಸುಮಾರು ಕ್ರಿ.ಶ. 1100)

'ಅಭಿನವಪಂಪ'ನೆಂದೇ ಖ್ಯಾತನಾಗಿರುವ ನಾಗಚಂದ್ರನು ಸರಸ್ವತಿಯ ವಿಷಯದಲ್ಲಿಯೂ ಅಭಿನವಪಂಪನೇ ಆಗಿರುವುದು, ಅವನ ಎರಡೂ ಕಾವ್ಯಗಳಲ್ಲಿ ಪ್ರಕಟಗೊಂಡಿರುವ ಸರಸ್ವತೀ ದರ್ಶನದಿಂದ ವ್ಯಕ್ತವಾಗುತ್ತದೆ. 'ಮಲ್ಲಿನಾಥಪುರಾಣ' ಮತ್ತು 'ರಾಮಚಂದ್ರಚರಿತಪುರಾಣ' (ಪಂಪರಾಮಾಯಣ) ಈತನ ಕೃತಿಗಳು. "ನಾಗಚಂದ್ರನು 'ಮಲ್ಲಿನಾಥಪುರಾಣ'ದಲ್ಲಿ ತನ್ನ (ಸರಸ್ವತಿ) ದರ್ಶನದ ಪ್ರಥಮದರ್ಶನ ಮಾಡಿಸಿ ಅದರ ಪರಿಣಿತಸ್ವರೂಪವನ್ನು 'ಪಂಪರಾಮಾಯಣ'ದಲ್ಲಿ ತೋರಿದ್ದಾನೆ.[79] 'ಮಲ್ಲಿನಾಥಪುರಾಣ'ದಲ್ಲಿ ಬರುವ ಸರಸ್ವತೀ ಸ್ತುತಿ ಹೀಗಿದೆ.

ಪದವಿನ್ಯಾಸವಿಲಾಸಮಂಗವಿಭವಂ ಚೆಲ್ವಾದ ದೃಷ್ಟಿಪ್ರಸಾ
ದದೊಳೊಂದಾದ ನಯಂ ಮೃದೂಕ್ತಿ ವನಿತಾಸಾಮಾನ್ಯವಲ್ತೆಂಬ ಕುಂ
ದದ ವರ್ಣಂ ನಿಜವೆಂಬ ರೂಪೆಸೆಯೆ ನಾನಾಭಂಗಿಯಂ ಬೇಱೆ ತಾ
ಳ್ದಿ ವಾಗ್ದೇವತೆ ಮಾಟಕ್ಕೆ ಮತ್ಕೃತಿಗೆ ಲೋಕಾಶ್ಚರ್ಯಚಾತುರ್ಯಮಂ॥[80]

ಪದಗಳ ವಿನ್ಯಾಸ, ವಿಲಾಸ, ಅಂಗವೈಭವ, ಚೆಲುವನ್ನು ಹೆಚ್ಚಿಸುವ ನಯ-ನಾಜೂಕು, ಮೃದುವಾದ ಉಕ್ತಿ, ವನಿತೆಯರಿಗೆ ಸಾಮಾನ್ಯವಾಗಿಯೇ ಇರುವ ವರ್ಣಕ್ಕಿಂತಲೂ ಹೆಚ್ಚು ತೇಜಸ್ಸುಳ್ಳ, ಆದರೆ ಕುಂದದ ನಿಜವಾದ ಸೌಂದರ್ಯವನ್ನು ವಾಗ್ದೇವತೆ ಪಡೆದಿದ್ದಾಳೆ. ವರ್ಣ ಎಂದರೆ ಅಕ್ಷರ ಎಂಬ ಅರ್ಥವೂ ಇದೆ. ಕಾವ್ಯ ಕವಿಸೃಷ್ಟಿಯಾದರೂ ಅದೂ ಪೂರ್ಣ ಸಾಕಾರಗೊಳ್ಳುವುದು ಅಕ್ಷರರೂಪದಲ್ಲಿಯೆ. ಇವೆಲ್ಲವುಗಳನ್ನು ಒಳಗೊಂಡ ಕಾವ್ಯದ ದೃಷ್ಟಿಯೇ ಸರಸ್ವತಿಯ ಮುಖಲಕ್ಷಣ. 'ನಾನಾಭಂಗಿಯಂ ಬೇಱೆ

---

79. ಮುಗಳಿ ರಂ.ಶ್ರೀ: ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ. ಪು.13

80. ಮಲ್ಲಿನಾಥಪುರಾಣಂ, 1-7

ತಾಳ್ದಿ' ಎಂಬಲ್ಲಿ ಸರಸ್ವತಿಯ ವ್ಯಾಪಕತೆ ಪ್ರಕಟವಾಗಿದೆ. 'ಸರ್ವಭಾಷಾಸರಸ್ವತಿ' ವಿವಿಧಪ್ರಕಾರಗಳನ್ನು ತಾಳಿ ಪ್ರಕಟವಾಗುವ ಚಿತ್ರ, ನಾಟ್ಯಸರಸ್ವತಿಯನ್ನು ಕಣ್ಣಮುಂದೆ ತಂದು ನಿಲ್ಲಿಸುತ್ತದೆ.

'ಮಲ್ಲಿನಾಥಪುರಾಣ'ದ ಕೊನೆಯ ಪದ್ಯ ಹೀಗಿದೆ.

ಸುಕೃತಿಪ್ರೀತಿಲತಾಸಮುತ್ಕಳಿಕೆ ವಿದ್ವನ್ಮಂಡಳೀರತ್ನಕಂ
ಠಿಕೆ ಧರ್ಮಾಮೃತಮೇಘಮಾಳಿಕೆ ವಚಶ್ರೀನರ್ತಕೀ ನೃತ್ಯವೇ
ದಿಕೆ ಸಾಹಿತ್ಯಸರೋಜಕರ್ಣಿಕೆ ಯಶಶ್ಶ್ರೀಕೇಕರಾಳೋಕ ಚಂ
ದ್ರಿಕೆ ನಿಲ್ಕೀಕೃತಿ ಕಲ್ಪಕೋಟಿವರೆಗಂ ಭದ್ರಂ ಶುಭಂ ಮಂಗಳಂ॥[81]

ಪುಣ್ಯವಂತರಾದ ರಸಿಕರ ಪ್ರೀತಿಯ ಬಳ್ಳಿಗೆ ಬಿಟ್ಟ ಮೊಗ್ಗೆ, ವಿದ್ವಾಂಸರ ಮಂಡಳಿಯ ಕೊರಳಲ್ಲಿಯ ರತ್ನಹಾರ, ಧರ್ಮವೆಂಬ ಅಮೃತದ ಮಳೆಗರೆಯುವ ಮೇಘಮಾಲೆ, ಮಾತಿನ ಲಕ್ಷ್ಮಿಯೆಂಬ ನರ್ತಕಿ ಕುಣಿಯುವ ನೃತ್ಯವೇದಿಕೆ, ಸಾಹಿತ್ಯವೆಂಬ ಕಮಲದ ಬೀಜಕೋಶ, ಯಶೋಲಕ್ಷ್ಮಿಯ ಕುಡಿಗಣ್ಣಿನ ಬೆಳದಿಂಗಳು ಆಗಿರುವ ಈ ಕೃತಿ ಕಲ್ಪಕೋಟಿಯವರೆಗೆ ನಿಲ್ಲಲಿ. ಭದ್ರಂ ಶುಭಂ ಮಂಗಳಂ.[82] ತನ್ನ ಕಾವ್ಯವನ್ನು ತಾನೇ ಸ್ತುತಿಸಿಕೊಳ್ಳುತ್ತಿರುವ ನಾಗವರ್ಮನ ಈ ಪದ್ಯ, ಸ್ವಕಾವ್ಯಸ್ತುತಿ ಮಾತ್ರವಾಗಿರದೇ, ಯಾವುದೇ ಒಂದು ಒಳ್ಳೆಯ ಕಾವ್ಯದ ಹಿಂದಿನ ಮಹೋದ್ದೇಶವನ್ನು ನಿರೂಪಿಸುತ್ತದೆ. ಇಲ್ಲಿ ನಮಗೆ ಮುಖ್ಯವಾಗಿರುವುದು 'ವಚಶ್ರೀನರ್ತಕೀನೃತ್ಯವೇದಿಕೆ' ಎಂಬ ವಿಶೇಷಣ. ಒಂದು ಒಳ್ಳೆಯ ಕಾವ್ಯದ ಹುಟ್ಟಿಗೆ ಒಳ್ಳೆಯ ವಾಕ್ ಹಾಗೂ ಒಳ್ಳೆಯ ಭಾಷೆ ಬಹಳ ಮುಖ್ಯ. ಲಯಬದ್ಧವಾದ ಪದಗಳ ವಿಲಾಸವು ಕಾವ್ಯದ ಓದಿಗೆ ಅನುಕೂಲವನ್ನು ಒದಗಿಸುತ್ತದೆ. ಲಕ್ಷ್ಮಿ ಸಂಪತ್ತಿಗೆ ಅಧಿದೇವತೆ. ಒಳ್ಳೆಯ ಮಾತೂ ಸಹ ಒಂದು ಸಂಪತ್ತು. ಆದರೆ ಧನಸಂಪತ್ತಿನಂತೆ ನಾಶವಾಗುವುದಿಲ್ಲ. ನಾಗವರ್ಮನು ಧನಸಂಪತ್ತಿನಂತೆ ನಾಶವಾಗದ ಮಾತಿಗೆ ಅಧಿದೇವತೆಯಾದ ಸರಸ್ವತಿಯನ್ನು ವಚಶ್ರೀ ಅಂದರೆ ಮಾತಿನ ಲಕ್ಷ್ಮಿ ಎಂದು ಕರೆದಿದ್ದಾನೆ. 'ತನ್ನ ಕಾವ್ಯವು ವಚಶ್ರೀ ಅಂದರೆ ಮಾತಿನ ಲಕ್ಷ್ಮಿಯಾದ ಸರಸ್ವತಿಯು ನರ್ತನ ಮಾಡುವ ನೃತ್ಯವೇದಿಕೆ' ಎಂದು ಹೇಳಿರುವುದು ವಿನೂತನವಾಗಿದೆ.

ಪರಿಣತಕವೀಂದ್ರವದನಾ
ಜಿರದೊಳ್ ಮೃದುಪದವಿಲಾಸ ವಿನ್ಯಾಸಾಲಂ
ಕರಣಂ ರಂಜಿಸೆ ನರ್ತಿಪ
ಸರಸ್ವತೀಲಾಸ್ಯ ಭೇದಮಂ ಜಡನಱಿಯಂ॥[83]

ಮೃದುವಾದ ಪದಗಳ ವಿಲಾಸ ವಿನ್ಯಾಸದಿಂ ಆಲಂಕೃತಳಾಗಿರುವ ಸರಸ್ವತಿಯು ಪರಿಣಿತರಾದ ಕವಿಗಳ ಮೊಗದಲ್ಲಿ ಲಾಸ್ಯವಾಡುತ್ತಿರುತ್ತಾಳೆ; ಆದರೆ ಅದನ್ನು ಜಡರು ಅರಿಯಲಾಗುವುದಿಲ್ಲ. ಸರಸ್ವತಿಯ

---

81. ಅದೇ, 1-212
82. ಮುಗಳಿ ರಂ.ಶ್ರೀ: ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ. ಪು.15
83. ಮಲ್ಲಿನಾಥಪುರಾಣಂ, 1-34.

ನರ್ತನಕ್ಕೆ ತನ್ನ ಕಾವ್ಯವನ್ನೇ ವೇದಿಕೆಯನ್ನಾಗಿಸಿರುವ ನಾಗಚಂದ್ರನ ಈ ಕಲ್ಪನೆಯೂ ವಿನೂತನವಾಗಿಯೇ ಇದೆ. ಬ್ರಹ್ಮನ ಮುಖಕಮಲದಲ್ಲಿ ವಾಸವಾಗಿರುವ ಸರಸ್ವತಿಯು ತಮ್ಮ ಮುಖದಲ್ಲಿ ಬಂದು ನೆಲಸಲಿ ಎಂಬ ಕಲ್ಪನೆಗಿಂತ, 'ಮೃದುಪದವಿಲಾಸವಿನ್ಯಾಸಾಲಂಕರಣ'ದಿಂದ ಪರಿಣಿತ ಕವಿಗಳ ಮೊಗದಲ್ಲಿ ಲಾಸ್ಯವಾಡಲಿ ಎಂಬ ಪರಿಕಲ್ಪನೆ ಹೊಸದಾಗಿಯೂ, ಅರ್ಥಪೂರ್ಣವಾಗಿಯೂ ಕಾಣಿಸುತ್ತದೆ.

ನಾಗಚಂದ್ರನ ಸರಸ್ವತಿಯ ದರ್ಶನ ಆತನ 'ಪಂಪರಾಮಾಯಣ'ದಲ್ಲೂ ಮುಂದುವರೆದಿದೆ. ಆ ಕೃತಿಯ ಆರಂಭದ ಪ್ರಾರ್ಥನಾಪದ್ಯದಲ್ಲಿಯೇ **'ವಿದ್ಯಾನಟೀನಾಟ್ಯವೇದೀಕಲ್ಪಂ ಮುಖಚಂದ್ರಬಿಂಬಂ'**[84] ಎಂಬ ವಿವರಣೆಯಿದೆ.

ಪರಬ್ರಹ್ಮ ಶರೀರಪುಷ್ಟಿ ಜನತಾಂತರ್ದೃಷ್ಟಿ ಕೈವಲ್ಯಬೋ
ಧರಮಾ ಮೌಕ್ತಿಕಹಾರಯಷ್ಟಿ ಕವಿತಾವಲ್ಲೀ ಸುಧಾವೃಷ್ಟಿ ಸ
ರ್ವರಸೋತ್ಪಾದ ನವೀನಸೃಷ್ಟಿ ಬುಧಹರ್ಷಾಕೃಷ್ಟಿ ಸರ್ವಾಂಗಸುಂ
ದರಿ ವಿದ್ಯಾನಟಿನಾಟಕಂ ನಲಿಗೆ ಮತ್ಕಾವ್ಯಸ್ಥಲೀರಂಗದೊಳ್॥[85]

ಈ ಪದ್ಯ 'ಸರಸ್ವತಿಗೆ ತೊಡಿಸಿದ ರತ್ನಕಿರೀಟ' ಎನ್ನಬಹುದು. 'ಮಲ್ಲಿನಾಥಪುರಾಣ'ವನ್ನು ವಚಶ್ರೀ ನರ್ತಕಿಯ ನರ್ತನಕ್ಕೆ ನೃತ್ಯವೇದಿಕೆಯನ್ನಾಗಿ ಮಾಡಿದ್ದ ನಾಗಚಂದ್ರ, 'ಪಂಪರಾಮಾಯಣ'ದಲ್ಲಿ ಇನ್ನೂ ಮುಂದುವರೆದು, 'ಸರ್ವಾಂಗಸುಂದರಿಯಾದ ವಾಗ್ದೇವತೆ ಎಂಬ ವಿದ್ಯಾನಟಿಯ ನಾಟಕ ತನ್ನ ಕಾವ್ಯ' ಎಂದು ಹೇಳಿ ಕಾವ್ಯಸರಸ್ವತಿಗೆ ರತ್ನಕಿರೀಟವನ್ನು ತೊಡಿಸಿದ್ದಾನೆ. ಈ ಪದ್ಯದ ಸರಸ್ವತಿಯ ದರ್ಶನದ ಬಗ್ಗೆ ಕನ್ನಡದ ಇಬ್ಬರು ಹಿರಿಯ ಕವಿಗಳಾದ, ದ.ರಾ.ಬೇಂದ್ರೆ ಮತ್ತು ರಂ.ಶ್ರೀ.ಮುಗಳಿ ವಿಸ್ತಾರವಾಗಿ ಚರ್ಚಿಸಿದ್ದಾರೆ. ಸಮಗ್ರವಾಗಿ ಪದ್ಯದ ದರ್ಶನಾಂಶವನ್ನು ವ್ಯಾಖ್ಯಾನಿದ್ದಾರೆ. ಅವರಿಬ್ಬರ ದರ್ಶನಮೀಮಾಂಸೆಯ ವಿವರಗಳನ್ನು ಕೆಳಗಿನಂತೆ ಸಂಗ್ರಹಿಸಲಾಗಿದೆ.

ರಂ.ಶ್ರೀ.ಮುಗಳಿಯವರು[86] 'ಮಲ್ಲಿನಾಥಪುರಾಣದ ವಚಶ್ರೀನರ್ತಕೀನೃತ್ಯವೇದಿಕೆ ಎಂಬಲ್ಲಿ ವಿಶಿಷ್ಟಕೃತಿಯೊಂದನ್ನು ಮೆಚ್ಚಿದ ಮಾತು ವಿಸ್ತರಗೊಂಡು 'ವಿದ್ಯಾನಟಿನಾಟಕ'ದ ಸಮಗ್ರರೂಪವಾಗಿ ಇಲ್ಲಿ (ಪಂಪರಾಮಾಯಣ) ಅವತಾರ ತಾಳಿದೆ. ಇಡಿಯ ಪದ್ಯವು ನಾಗಚಂದ್ರನು ಪಡೆದ ಸರಸ್ವತಿಯ ಭವ್ಯದರ್ಶನವನ್ನು ಸಮಗ್ರವಾಗಿ ನಿರೂಪಿಸುತ್ತದೆ. ವಿದ್ಯಾನಟಿನಾಟಕ ಎಂದರೆ ಸರಸ್ವತಿ ಎಂಬ ನಟಿಯ ನೃತ್ಯನಾಟಕ.' ಎನ್ನುತ್ತಾರೆ. ಅವರು ಮುಂದುವರೆದು ಆರು ಹಂತಗಳಲ್ಲಿ ಪದ್ಯವನ್ನು ವಿಶ್ಲೇಷಿಸಿದ್ದಾರೆ.

'ಪರಬ್ರಹ್ಮ ಶರೀರಪುಷ್ಟಿ' – ಪರಮಜಿನನ ಶರೀರಕ್ಕೆ, ಸರಸ್ವತಿಯಿಂದ ದೊರೆಯುವ ಆನಂದದ ಅನ್ನ, ರಸದ ಅಮೃತ ಪುಷ್ಟಿಯನ್ನು ಒದಗಿಸುತ್ತದೆ. ಈ ಜಗತ್ತು ಅಥವಾ ಸೃಷ್ಟಿಯೇ ಪರಮಾತ್ಮನ

---

84. ರಾಮಚಂದ್ರಚರಿತ ಪುರಾಣ, 1-1

85. ಅದೇ, 1-6

86. ಮುಗಳಿ ರಂ.ಶ್ರೀ: ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ. ಪು.15-19

ಶರೀರ. ಸರಸ್ವತಿಯು ಆನಂದದ ಆಹಾರದಿಂದ ಈ ಸೃಷ್ಟಿಯನ್ನು ಪೋಷಿಸುತ್ತಾಳೆ. 'ಪ್ರಜಾಪತಿಯು ವಾಕ್ಕಿನಿಂದಲೇ ಶಕ್ತಿಯನ್ನು ತೃಪ್ತಿಯನ್ನು ಪಡೆಯುತ್ತಾನೆ'[87] ಎಂಬುದು ವೈದಿಕಮತದ ನಂಬುಗೆಯೂ ಆಗಿದೆ.

'ಜನತಾಂತರ್ದೃಷ್ಟಿ' – ಜನಸಾಮಾನ್ಯನ ಒಳಗಣ್ಣು. ಹೊರಗಣ್ಣಿನಿಂದ ನೋಡಿದರೆ ಕಾಣದ ಕಾವ್ಯಸತ್ಯ ಮತ್ತು ಸೌಂದರ್ಯ ಒಳಗಣ್ಣಿಗೆ ಕಾಣುತ್ತದೆ. 'ಜನತೆಯ ಅಂತರ್ದೃಷ್ಟಿ ಎಂದರೆ ಸರಸ್ವತಿ.' ಆದರೆ 'ಮುಕ್ತರಿಗೆ ಮಾತ್ರ ಅಂತರ್ದೃಷ್ಟಿ, ಅವರಿಗೇ ಸರಸ್ವತಿಯು ಪ್ರಸನ್ನವಾಗುವವಳು.'[88]

'ಕೈವಲ್ಯಬೋಧರಮಾ ಮೌಕ್ತಿಕಹಾರಯಷ್ಟಿ' – ಕೇವಲಜ್ಞಾನವೆಂಬ ಲಕ್ಷ್ಮಿಯ ಕೊರಳಿಗೆ ಮುತ್ತಿನಹಾರದಂತೆ ಸರಸ್ವತಿಯು ಇದ್ದಾಳೆ. ಮುಕ್ತಾವಸ್ಥೆಯಲ್ಲಿ ಪಡೆಯುವ ಜ್ಞಾನಕ್ಕೆ ಸರಸ್ವತಿಯು ಒಂದು ಅಲಂಕಾರ. ಜ್ಞಾನವು ಹೆಚ್ಚುತ್ತಾ ಹೋದಂತೆ ಆನಂದವು ಅದರೊಡನೆ ಸೇರಿಕೊಂಡು ಶೋಭೆಯನ್ನು ಹೆಚ್ಚಿಸುತ್ತದೆ. ಕೈವಲ್ಯಬೋಧಲಕ್ಷ್ಮಿ ತನ್ನಷ್ಟಕ್ಕೆ ತಾನು ಸುಂದರಿಯಾದರೂ, ಸರಸ್ವತಿಯೆಂಬ ಮುತ್ತಿನಹಾರದ ತೊಡುಗೆಯಿಂದ ಮಾತ್ರ ಅವಳ ಸೌಂದರ್ಯಕ್ಕೆ ಪರಿಪೂರ್ಣತೆ ಲಭಿಸುತ್ತದೆ.

'ಕವಿತಾವಲ್ಲೀ ಸುಧಾವೃಷ್ಟಿ' – ಕವಿತೆ ಎಂಬ ಬಳ್ಳಿಗೆ ಅಮೃತದ ಮಳೆಗರೆಯುವವಳು ಸರಸ್ವತಿ. ವಸ್ತು ವಿಷಯ ಪ್ರತಿಭೆ ಎಲ್ಲಾ ಇದ್ದರೂ, ಸರಸ್ವತಿಯ ಸುಧಾವೃಷ್ಟಿ ಇಲ್ಲದಿದ್ದರೆ ಕವಿತೆ ಎಂಬ ಬಳ್ಳಿ ಬಾಡಿಹೋಗುತ್ತದೆ. ಒಂದು ಪಕ್ಷ ಅದು ಉಳಿದರೂ ಅದರ ಹೂವುಗಳಿಗೆ ಸುವಾಸನೆಯಿರುವುದಿಲ್ಲ. ಸರಸ್ವತಿಯ ಕೃಪೆಯಿದ್ದರಷ್ಟೇ ಕಾವ್ಯ ಅಮರವಾಗುವುದು.

'ಸರ್ವರಸೋತ್ಪಾದ ನವೀನ ಸೃಷ್ಟಿ' – ಸರಸ್ವತಿಯು ಸರ್ವರಸಗಳಿಂದ ಕೂಡಿದ ನವೀನಸೃಷ್ಟಿಯನ್ನೇ ಬೆಳಕಿಗೆ ತರುವವಳು. ಜೀವನದ ಸರ್ವವಿಧ ಚಿತ್ರಣ, ಸಮಗ್ರದರ್ಶನ, ಆಳ–ಅಗಲಗಳ ನಿರೂಪಣ ಸರ್ವರಸೋತ್ಪಾದದಿಂದ ಆಗುತ್ತದೆ. ಅವುಗಳನ್ನೆಲ್ಲ ಒಟ್ಟುಗೂಡಿಸಿ ಕವಿಯಾದವನು ನವೀನಸೃಷ್ಟಿಯನ್ನು ನಿರ್ಮಿಸುತ್ತಾನೆ. ಪ್ರತಿ ಕವಿಗೂ ಅದು ನವನವೀನವಾಗಿಯೇ ಇರುತ್ತದೆ.

'ಬುಧಹರ್ಷಾಕೃಷ್ಟಿ' – ಬಲ್ಲವರ, ಸಹೃದಯರ ಹರ್ಷವನ್ನು ಆಕರ್ಷಿಸುವ ಶಕ್ತಿಯಾಗಿರುವವಳು ಸರಸ್ವತಿ. ಕಾವ್ಯ ಒಳ್ಳೆಯವರನ್ನಷ್ಟೇ ಆಕರ್ಷಿಸುವುದಿಲ್ಲ. ಆದರೆ ಕಾವ್ಯದಿಂದ ಆಕರ್ಷಿತರಾದವರೆಲ್ಲಾ ಒಳ್ಳೆಯವರಾಗುತ್ತಾರೆ, ಸಹೃದಯರಾಗುತ್ತಾರೆ. 'ಸಮಸ್ತಚೆಲುವನ್ನು ಹೊಂದಿರುವ

87. ಶ.ಬ್ರಾ. 3.9.1.9 (ವಾಗ್ವೈ ಸರಸ್ವತೀ) (ವಾಚೈವ ತತ್ಪ್ರಜಾಪತಿಃ ಪುನರಾತ್ಮಾನಮಾಪ್ಯಾಯಯತ)

88. ಅದೇ, ಪು. 17

ಸರ್ವಾಂಗಸುಂದರಿಯಾದ ವಿದ್ಯಾನಟಿಯ ನಾಟಕವು ತನ್ನ ಕಾವ್ಯವೆಂಬ ರಂಗಸ್ಥಳದಲ್ಲಿ ನಡೆಯಲಿ' ಎಂಬುದು ನಾಗಚಂದ್ರನ ಆಶಯ.

ದ.ರಾ.ಬೇಂದ್ರೆಯವರು[89] ಈ ಪದ್ಯದ ದರ್ಶನವನ್ನು ಗ್ರಹಿಸಿರುವ, ತನ್ಮೂಲಕ ಸರಸ್ವತಿಗೆ ಸುವರ್ಣಕಿರೀಟವನ್ನು ತೊಡಿಸಿರುವ ರೀತಿ ಕೆಳಗಿನಂತಿದೆ.

1. ಈ ಸೃಷ್ಟಿಯೆಂಬ ಕೃತಿಯನ್ನು ರಚಿಸುವಲ್ಲಿ ವಿದ್ಯೆಯೇ ಒಳಗಿಂದ ಪೋಷಣೆ ಕೊಡುವವಳು.
2. ಆಕೃತಿಯ ರಸರಹಸ್ಯದ ಅರಿಕೆಯುಂಟಾಗುವಂತೆ ಜನತೆಯಲ್ಲಿ ಅಂತರ್ದೃಷ್ಟಿಯಾಗುವಳು.
3. ತಾನೇ ತಾನಾದ ತನ್ಮಯತೆಯಲ್ಲಿ ಬೋಧರೂಪವಾಗುವವಳು.
4. ಬ್ರಹ್ಮಪ್ರಕೃತಿಗೆ ಪ್ರತಿಬಿಂಬವಾದ ಕಲಾಸೀಮೆಯಾದ ಕಾವ್ಯಕೃತಿಗಳ ವಿವಿಧರೂಪ ತಳೆವಳು.
5. ನವೋನವರಸಸೃಷ್ಟಿಯಾಗುವಳು.
6. ಬಲ್ಲವರಿಗೂ ವಲ್ಲಭೆಯಂತೆ ಸೋಲಿಸುವಳು.
7. ಅಂಗಾಂಗದಲ್ಲಿ ಸುಂದರಿಯಾಗಿರುವಳು.

ಇಂತು ಈ ಸಪ್ತಭಂಗಿ ನಯದಲ್ಲಿ ನಯವಾಗಿ ನೃತ್ಯವಾಡುವ ವಿದ್ಯಾನಟಿಯು ಕವಿಗಳ ಉಪಾಸನಾದೇವತೆಯಾಗಿರುವಳು.

'ಮಲ್ಲಿನಾಥಪುರಾಣ'ದಲ್ಲಿ 'ಪರಿಣಿತ ಕವಿಗಳ ಮುಖದಲ್ಲಿ ಲಾಸ್ಯವಾಡುವ ಮೃದುಪದವಿಲಾಸವಿನ್ಯಾಸಗಳಿಂದ ಆಲಂಕೃತಗೊಂಡ ಸರಸ್ವತಿಯು ಲಾಸ್ಯವಾಡುವುದನ್ನು ಜಡರು ಅರಿಯಲಾರರು' ಎಂದಿದ್ದ ನಾಗಚಂದ್ರನೇ 'ಜನತಾಂತರ್ದೃಷ್ಟಿ'ಯನ್ನು ಸರಸ್ವತಿಗೆ ಸಮೀಕರಿಸಿರುವುದು ಆತನ ಸರಸ್ವತಿಯ ಭವ್ಯದರ್ಶನಕ್ಕೆ ಸಾಕ್ಷಿಯಾಗಿದೆ. ಸರಸ್ವತಿದರ್ಶನದ ವಿಚಾರವೈಭವದಲ್ಲಿ ಪಂಪನಿಗಿಂತ ನಾಗಚಂದ್ರ ಒಂದು ಹೆಜ್ಜೆ ಮುಂದೆಯೇ ಇದ್ದಾನೆ; ಉಳಿದೆಲ್ಲಾ ಕವಿಗಳಿಗಿಂತ ಹಲವಾರು ಹೆಜ್ಜೆ ಮುಂದಿದ್ದಾನೆ.

ನಯಸೇನ (ಕ್ರಿ.ಶ. 1112)

'ಧರ್ಮಾಮೃತ'ದಲ್ಲಿ ನಯಸೇನನು ಮೇಲಿಂದ ಮೇಲೆ ತನ್ನನ್ನು **'ವಾಗ್ವಧೂವಲ್ಲಭನ್'** ಎಂದು ಕರೆದುಕೊಂಡಿದ್ದಾನೆ. ಪ್ರತಿ ಆಶ್ವಾಸಗಳ ಅಂತ್ಯದಲ್ಲಿ ನಯಸೇನನ ಸ್ವಸ್ತುತಿಯಿದೆ. 3, 4, 5 ಮತ್ತು 7ನೇ ಆಶ್ವಾಸಗಳ ಅಂತ್ಯದಲ್ಲಿ ತನ್ನ ಹಲವಾರು ವಿಶೇಷಗಳನ್ನು ಹೇಳಿಕೊಳ್ಳುವಾಗ 'ವಾಗ್ವಧೂವಲ್ಲಭನ್' ಎಂಬುದನ್ನೂ ಸೇರಿಸಿದ್ದಾನೆ. ಪ್ರಥಮಾಶ್ವಾಸದಲ್ಲಿ ಕಾವ್ಯ ಮತ್ತು ಸರಸ್ವತಿ ಎರಡನ್ನೂ ಸೇರಿಸಿ ಸ್ತುತಿಸುತ್ತಾನೆ.

ಕುಂದದ ಕೋಮಲಾಂಗರುಚಿಯಿಂ ಚೆಲುವಿಂಗೆಡೆಯಾಗಿ ವೃತ್ತದೊಂ
ದಂದದೊಳಿರ್ದ ಪೆರ್ಮೊಲೆಯಿನಂತೆಸೆದೊಪ್ಪವನೇಕಛಂದದೊಂ

---

89. ದ.ರಾ.ಬೇಂದ್ರೆ: ಸಾಹಿತ್ಯ ಮತ್ತು ವಿಮರ್ಶೆ, ಪು.27

ದಂದದ ಯಾನದೊಂದು ರಮಣೀಯತೆಯಿಂ ಕಡುಗಾಡಿವೆತ್ತ ವಾ
ಕ್ಸುಂದರಿ ಕೂರ್ತು ನಿಲ್ಕೆ ನಯಸೇನಮುನೀಂದ್ರಮುಖಾಬ್ಜಷಂಡದೊಳ್॥[90]

ಮಲ್ಲಿಗೆಯಂತಹ ಕೋಮಲವಾದ ಶರೀರದ, ಕ್ಷೀಣಿಸದ ಕಾಂತಿಯಿಂದ ಚೆಲುವಿಗೆ ತಾಣವಾಗಿ, ದುಂಡಾಗಿ ಕೂಡಿಕೊಂಡು ಅಂದವಾಗಿರುವ ಹಿರಿದಾದ ಸ್ತನಗಳಿಗೆ ಸೊಗಸಾಗಿ ಒಪ್ಪುವ ನಡೆಯಂತೆಯೇ, ಅನೇಕ ಛಂದಸ್ಸಿನಿಂದ ಕೂಡಿಕೊಂಡು ಅಂದವಾದ ಚಲನೆಯಿಂದ ಕಾವ್ಯಕ್ಕೆ ರಮಣೀಯತೆಯಿಂದ ವಿಶೇಷವಾದ ಚೆಲುವನ್ನು ಪಡೆದಿರುವ ವಾಕ್ಸುಂದರಿಯಾದ ಸರಸ್ವತಿಯು ನಯಸೇನಮುನೀಂದ್ರನ ಮುಖಕಮಲದಲ್ಲಿ ಪ್ರೀತಿಯಿಂದ ನಿಲ್ಲಲಿ ಎಂಬುದೇ ಕವಿಯ ಪ್ರಾರ್ಥನೆ. ಇಲ್ಲಿ ಶ್ಲೇಷೆಯಿದೆ. ಸರಸ್ವತಿಯ ಸೌಂದರ್ಯ ಎಂದೂ ಕ್ಷೀಣಿಸುವುದಿಲ್ಲ; ಹಾಗೇ ಕಾವ್ಯದ ಮಹತ್ವವೂ ಕಡಿಮೆಯಾಗುವುದಿಲ್ಲ. ಚೆಲುವಾದ ಅಂಗಾಂಗಗಳಿಂದ ಕೂಡಿದ ಸರಸ್ವತಿಯ ಸುಂದರವಾದ ನಡೆ; ಶ್ರೇಷ್ಠವಾದ ವಿವಿಧ ಛಂದಸ್ಸಿನಿಂದ ಕೂಡಿದ ಕಾವ್ಯದ ನಡೆ ಎರಡೂ ಒಂದೆ. ಆದರೆ ಈತ ಮೇಲಿಂದ ಮೇಲೆ 'ವಾಗ್ವಧೂವಲ್ಲಭ' ಎಂದು ತನ್ನನ್ನು ತಾನು ಕರೆದುಕೊಳ್ಳುವುದು, ಪ್ರಾರ್ಥನಾ ಪದ್ಯದಲ್ಲಿ ಪ್ರಯತ್ನಪೂರ್ವಕವಾಗಿ (ಕಾವ್ಯದ ನಡೆಯನ್ನು ಸರಸ್ವತಿಯ ನಡೆಗೆ ಹೋಲಿಸಿ) ತಂದಿರುವ ಶ್ಲೇಷೆ ಇವುಗಳನ್ನು ಬಿಟ್ಟರೆ ಸರಸ್ವತಿಯನ್ನು ಕುರಿತಾದ ಬೇರೇನೂ ವಿಶೇಷವಿಲ್ಲ.

ವಚನಕಾರರು (ಕ್ರಿ.ಶ.11–12ನೆಯ ಶತಮಾನ)

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಾತ್ರವಲ್ಲದೆ ವಿಶ್ವ ಸಾಹಿತ್ಯ ಚರಿತ್ರೆಯಲ್ಲಿಯೇ ಒಂದು ವಿಶೇಷವಾದ ಸ್ಥಾನ ವಚನ ಸಾಹಿತ್ಯಕ್ಕಿದೆ. ಇದು ಸಾಹಿತ್ಯವೆಂದು ರಚನೆಯಾಗದಿದ್ದರೂ ಒಂದು ಸಾಹಿತ್ಯಕ ಪ್ರಕಾರವಾಗಿ ರೂಪಗೊಂಡಿದ್ದೇ ಆ ವಿಶೇಷಕ್ಕೆ ಕಾರಣವೆನ್ನಬಹುದು. ರಾಜಾಶ್ರಯದಲ್ಲಿದ್ದ ಕನ್ನಡ ಸಾಹಿತ್ಯ ಜನಾಶ್ರಯಕ್ಕೆ ಬಂದಿದ್ದೇ ವಚನಕಾರರಿಂದ. ಮಾರ್ಗದಿಂದ ದೇಸಿಗೆ ಕಾವ್ಯಶೈಲಿ ಪಲ್ಲಟಗೊಂಡಿದ್ದು ವಚನಕಾರರಿಂದಲೇ. ಅದೊಂದು ರೀತಿಯಲ್ಲಿ ಸಂಕ್ರಮಣ ಯುಗ. ಪಟ್ಟಭದ್ರ ಹಿತಾಸಕ್ತಿಗಳನ್ನು ಕಿತ್ತೊಗೆಯುತ್ತ, ಅದೇ ಕಾಲಕ್ಕೆ ಹೊಸತರ ಕಡೆಗೆ ಮುಖ ಮಾಡಿದ್ದ ಸಾಮಾಜಿಕ ಕ್ರಾಂತಿಯ ಉಪಉತ್ಪನ್ನಗಳೇ ವಚನಗಳು.

ವೇದವೆಂಬುದು ಓದಿನ ಮಾತು
ಶಾಸ್ತ್ರವೆಂಬುದು ಸಂತೆಯ ಸುದ್ದಿ
ಪುರಾಣವೆಂಬುದು ಪುಂಡರ ಗೋಷ್ಠಿ
ತರ್ಕವೆಂಬುದು ತಗರ ಹೋರಟೆ
ಭಕ್ತಿ ಎಂಬುದು ತೋರಿ ಉಂಬ ಲಾಭ[91]

90. ಧರ್ಮಾಮೃತಂ, 1–8

ಎಂಬ ಅಲ್ಲಮನ ಮಾತುಗಳು, ಮತ್ತು

ವೇದಪ್ರಿಯ ಶಿವನೆಂಬರು, ವೇದಪ್ರಿಯ ಶಿವನಲ್ಲಯ್ಯಾ[92]

ವೇದ ಸ್ವಯಂಭುವೆಂಬ ವಾದಿ ಕೇಳೆಲವೋ

ಏಕೋ ದೇವೋ ರುದ್ರೋ ನ ದ್ವಿತೀಯಃ

ಎಂದು ನಂಬುವುದು ಕಾಣಿರಣ್ಣ[93]

ವೇದವನೋದಿದ ವಿಪ್ರರು ಹೊನಲಲ್ಲಿ ಹೋದ ಕೇಡ ನೋಡಿರೇ[94]

ವೇದವನೋದಿದಡೇನು? ಶಾಸ್ತ್ರವ ಕೇಳಿದಡೇನಯ್ಯಾ?

ಜಪವ ಮಾಡಿದಡೇನು? ತಪವ ಮಾಡಿದರೇನಯ್ಯಾ?

....

ನಮ್ಮ ಕೂಡಲ ಸಂಗಯ್ಯನ ಮನಮುಟ್ಟದನ್ನಕ್ಕ?[95]

ನಿಮ್ಮ ವೇದ ಶಾಸ್ತ್ರಂಗಳು ಆರ ಹೊಗಳುತ್ತಿದ್ದಾವು?

ವೇದವನೋದಿದವರು ಲಿಂಗವನೊಲಿಸಿ ತೋರಿರೋ[96]

ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನ್ನಿಕ್ಕುವೆ

ತರ್ಕದ ಬೆನ್ನ ಬಾರನ್ನೆತ್ತುವೆ, ಆಗಮದ ಮೂಗ ಕೊಯ್ಯುವೆ[97]

ಎಂಬ ಬಸವಣ್ಣನ ಮಾತುಗಳು, ಮತ್ತು

ಶಿವನಿಲ್ಲದೆ ಮತ್ತೆ ದೈವವಿಲ್ಲೆಂಬುದಕ್ಕೆ ಶ್ರುತಿ:

"ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೇ"

ಕೂಡಲ ಚೆನ್ನಸಂಗಯ್ಯನ ವೇದಿಸಿಹೆವೆನುತ ವೇದಮಗಳಾದವು.[98]

ಎಂಬ ಚೆನ್ನಬಸವಣ್ಣನ ಮಾತುಗಳು... ಹೀಗೆ ಹಲವಾರು ವಚನಕಾರರ ನೂರಾರು ಮಾತುಗಳಲ್ಲಿ ಸ್ಥಾಪಿತ ವ್ಯವಸ್ಥೆಯ ನಿರಾಕರಣೆ, ಬಹುದೇವತಾ ಆರಾಧನೆಯ ನಿರಾಕರಣೆ ಮತ್ತು ಏಕದೇವತಾ ಆರಾಧನೆಯ ಅಂಶಗಳು ಎದ್ದು ಕಾಣುತ್ತವೆ. 'ಶಿವನಲ್ಲದೆ ಅನ್ಯ ದೇವರಿಲ್ಲ'ವೆಂಬುದು ಅವರ ಸಾಂಸ್ಕೃತಿಕ ಎಚ್ಚರವಾಗಿದ್ದಂತೆ ಕಾಣುತ್ತದೆ. ಆದ್ದರಿಂದಲೇ ಕಾವ್ಯರಚನೆಯಲ್ಲಿ ಆಗಿನವರೆಗೆ ಇದ್ದ ಎಲ್ಲಾ ಸಂಪ್ರದಾಯಗಳೂ ನಿರಾಕರಿಸಲ್ಪಟ್ಟವು. ಅದಕ್ಕೆ ಸರಸ್ವತೀ ಸ್ತುತಿಯೂ ಹೊರತಲ್ಲ. ಸರಸ್ವತಿಯನ್ನು ಸ್ತುತಿಸಿರುವ ಒಂದೇ ಒಂದು ವಚನವೂ ಇಲ್ಲ! ಇಷ್ಟಾದರೂ ವಚನಕಾರರು ತಮ್ಮ ವಚನಗಳಲ್ಲಿ ಜ್ಞಾನದ,

---

91. ಮಲ್ಲಾಪುರ ಬಿ.ವ್ಹಿ. (ಸಂ): ಅಲ್ಲಮ ಪ್ರಭುದೇವರ ವಚನಸಂಪುಟ, ವಚನ ಸಂಖ್ಯೆ –465
92. ಕಲಬುರ್ಗಿ ಎಂ.ಎಂ. (ಸಂ): ಬಸವಣ್ಣನವರ ವಚನಸಂಪುಟ, ವಚನ ಸಂಖ್ಯೆ –181
93. ಅದೇ, ವಚನ ಸಂಖ್ಯೆ –533
94. ಅದೇ, ವಚನ ಸಂಖ್ಯೆ –586
95. ಅದೇ, ವಚನ ಸಂಖ್ಯೆ –599
96. ಅದೇ, ವಚನ ಸಂಖ್ಯೆ –601
97. ಅದೇ, ವಚನ ಸಂಖ್ಯೆ –712
98. ಮಲ್ಲಾಪುರ ಬಿ.ವ್ಹಿ. (ಸಂ): ಚೆನ್ನಬಸವಣ್ಣನವರ ವಚನಸಂಪುಟ, ವಚನ ಸಂಖ್ಯೆ –141

ಮಾತಿನ ಮಹತ್ವವನ್ನು ಅಲ್ಲಗಳೆದಿಲ್ಲ. ಮಾತೆಂದರೆ ವಾಕ್; ವಾಕ್ ಎಂದರೆ ವಾಗ್ದೇವಿ ಎಂಬ ಪಾರಂಪರಿಕ ನಂಬಿಕೆಯ ಹಿನ್ನೆಲೆಯಲ್ಲಿ ವಚನಕಾರರು ವಾಕ್ಕಿಗೆ ಕೊಟ್ಟಿರುವ ಮಹತ್ವವನ್ನು ನಾವಿಲ್ಲಿ ಅರಿಯಬೇಕಾಗಿದೆ.

"ಮಾತೆಂಬುದು ಜ್ಯೋತಿರ್ಲಿಂಗ"[99] ಎಂಬ ಅಲ್ಲಮನ ಒಂದೇ ಒಂದು ಮಾತು, ಮಾತಿನ ಮಹತ್ವವನ್ನು ಸ್ಪಷ್ಟಪಡಿಸುತ್ತದೆ. ಶಿವಭಕ್ತರಾದ ವಚನಕಾರರು, ಲಿಂಗಪೂಜಕರಾದ ವಚನಕಾರರು 'ಮಾತು ಲಿಂಗಸ್ವರೂಪ' ಎಂದು ಹೊಸ ಭಾಷ್ಯವನ್ನೇ ಬರೆದಿದ್ದಾರೆ. ಅಲ್ಲಿಯವರೆಗೂ ವಾಕ್ ಎಂಬುದಕ್ಕೆ ಇದ್ದ ಸಾಂಪ್ರದಾಯಿಕ ನಂಬಿಕೆಗಳಾದ, 'ಜಿನೇಂದ್ರವಾಣಿಯೇ ಸರಸ್ವತೀ' 'ಚತುರ್ಮುಖನ ಮುಖದಿಂದ ಉದ್ಭವಿಸಿದ್ದು ವಾಕ್' ಮೊದಲಾದವುಗಳನ್ನು ಬದಿಗೆ ಸರಿಸಿ 'ಮಾತೆಂಬುದು ಜ್ಯೋತಿರ್ಲಿಂಗ' ಎಂಬ ಮಾತು ನೆಲೆಗೊಳ್ಳುತ್ತದೆ. 'ಮಾತೆಂಬುದು ಜ್ಯೋತಿರ್ಲಿಂಗ'ವಾಗಿದ್ದರಿಂದಲೇ, ಬಸವಣ್ಣನವರು ಜ್ಯೋತಿರ್ಲಿಂಗಸ್ವರೂಪವಾದ ಮಾತನ್ನುಳಿದು **'ಮತ್ತೊಂದು ಕೇಳದಂತೆ ಕಿವುಡನ ಮಾಡಯ್ಯ ತಂದೆ'**[100] ಎಂದು ಕೇಳುತ್ತಾರೆ. ಬಸವಣ್ಣನವರ ಪ್ರಕಾರ ಮಾತು ಹೇಗಿರಬೇಕೆಂಬುದು ಸ್ಪಷ್ಟವಾಗಿಯೇ ಇದೆ.

ನುಡಿದಡೆ ಮುತ್ತಿನ ಹಾರದಂತಿರಬೇಕು
ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದಡೆ ಸ್ಫಟಿಕದ ಸಲಾಕೆಯಂತಿರಬೇಕು
ನುಡಿದಡೆ ಲಿಂಗ ಮೆಚ್ಚಿ ಅಹುದಹುದೆನಬೇಕು[101]

ಎಂಬ ಬಸವಣ್ಣನ ವಚನವಂತೂ ನುಡಿ ಅಂದರೆ ಮಾತು ಹೇಗಿರಬೇಕೆಂಬುದನ್ನು ಸ್ಪಷ್ಟವಾಗಿ ತಿಳಿಸುತ್ತದೆ. ದೇವರ, ಜನರ ಮಾತುಗಳೇ ವಾಕ್; ಅದೇ ಸರಸ್ವತೀ ಎಂಬ ಸಾಂಪ್ರದಾಯಿಕ ನಂಬಿಕೆಗಿಂತ ಇದು ಭಿನ್ನವಾಗಿದೆ. ಜನಸಾಮಾನ್ಯರೂ ತಮ್ಮ ಮಾತಿನಿಂದ ಪರಮಾತ್ಮನನ್ನು ಮೆಚ್ಚಿಸಬಹುದೆಂಬ ಜನಮುಖೀ ಅಭಿಪ್ರಾಯ ಇದಾಗಿದೆ. 'ನುಡಿದಡೆ ಲಿಂಗ ಮೆಚ್ಚಿ ಅಹುದಹುದೆನಬೇಕು' ಎನ್ನುವಲ್ಲಿ ದೇವರು ಅಲ್ಲೆಲ್ಲೂ ಇಲ್ಲ. ನಾವು ಆಡುವ ಮಾತಿನಲ್ಲಿಯೇ ಇದ್ದಾನೆ ಎಂಬ ಭಾವ ಸ್ಫುರಿಸುತ್ತದೆ. ನುಡಿಯೊಳಗಾಗಿ ನಡೆಯದಿದ್ದಡೆ ಆ ದೇವರು ಒಲಿಯುವುದಿಲ್ಲ ಎಂಬ ಎಚ್ಚರಿಕೆಯನ್ನೂ ಬಸವಣ್ಣ ನೀಡಿದ್ದಾನೆ. **'ಹುಸಿಯ ನುಡಿಯಲು ಬೇಡ, ತನ್ನ ಬಣ್ಣಿಸಬೇಡ ಇದಿರು ಹಳಿಯಲು ಬೇಡ'**[102] ಎಂಬಲ್ಲಿಯೂ ಈ ಎಚ್ಚರಿಕೆಯನ್ನು ಗಮನಿಸಬಹುದಾಗಿದೆ. ಅವರ ಇನ್ನೊಂದು ವಚನದಲ್ಲಿ ಸಕಲವೂ ಮೃದುವಚನವೇ ಎಂಬುದು ವೇದ್ಯವಾಗುತ್ತದೆ.

---

99. ಮಲ್ಲಾಪುರ ಬಿ.ವ್ಹಿ. (ಸಂ): ಅಲ್ಲಮ ಪ್ರಭುದೇವರ ವಚನಸಂಪುಟ, ವಚನ ಸಂಖ್ಯೆ –1463
100. ಕಲಬುರ್ಗಿ ಎಂ.ಎಂ. (ಸಂ): ಬಸವಣ್ಣನವರ ವಚನಸಂಪುಟ, ವಚನ ಸಂಖ್ಯೆ –59
101. ಅದೇ, ವಚನ ಸಂಖ್ಯೆ –803
102. ಅದೇ, ವಚನ ಸಂಖ್ಯೆ –235

ಮೃದುವಚನವೇ ಸಕಲ ಜಪಂಗಳಯ್ಯಾ,
ಮೃದುವಚನವೆ ಸಕಲ ತಪಂಗಳಯ್ಯ[103]

ಕೇವಲ ಒಳ್ಳೆಯ ವಾಕ್ ಮಾತ್ರ ಸರ್ವಸ್ವವನ್ನೂ ಒದಗಿಸಬಲ್ಲದು. ಮಾತು ಬಲ್ಲವನಿಗೆ ಜಗಳವಿಲ್ಲ ಎಂಬ ಗಾದೆಯಂತೆ ಮಾತೇ ಸರ್ವಸ್ವ ಹೌದು! **ನಿಜಭಾವ ಲಕ್ಷ್ಮಿಸರಸ್ವತಿ ಒಲಿದಡೆ ಕುಲವನರಸಲದೇಕೆ?**[104] ಎಂಬ ವಚನದಲ್ಲಿ ಬಸವಣ್ಣ ಹಣ ಮತ್ತು ವಿದ್ಯೆಯ ಮಹತ್ವವನ್ನು ಸ್ಪಷ್ಟಪಡಿಸುತ್ತಾನೆ. ನಿಜವಾದ ವಿದ್ಯಾವಂತನಿಗೆ ಅಂದರೆ ಸರಸ್ವತಿಯ ಸಾಕ್ಷಾತ್ಕಾರವಾದವನಿಗೆ ಜಾತಿ ಕುಲಗಳ ವ್ಯಾಮೋಹವಿರುವುದಿಲ್ಲ. ಕುಲ ಕುಲವೆನ್ನದವನಿಗೆ ಮಾತ್ರ ನಿಜಭಾವ ಸರಸ್ವತಿಯು ಒಲಿವಳು ಎಂಬ ಬಸವಣ್ಣನ ಕಲ್ಪನೆ, ಬೂಟಾಟಿಕೆಯ ಮಾತುಗಾರರಿಗೆ ಎಚ್ಚರಿಕೆಯಂತಿದೆ. **'ಆದ್ಯರ ವಚನ ಪರುಷ ಕಂಡಯ್ಯಾ'**[105], **'ಆದ್ಯರ ವಚನ ಪರುಷವೆಂಬೆನು, ಆ ಪರುಷವೆನಗೆಂತು ದೊರೆಕೊಂಬುದಯ್ಯಾ?'**[106] ಹಿರಿಯರ, ಹಿರಿಯ ವಚನಕಾರರ ನುಡಿಗಳನ್ನು ದೈವತ್ವಕ್ಕೆ ಏರಿಸಿ 'ಆದ್ಯರ ನುಡಿ' ಎಂಬ ಪರಿಕಲ್ಪನೆಯನ್ನು ಸೃಷ್ಟಿಸಿರುವುದು ವಾಕ್‌ಮಹಿಮೆಗೆ ವಚನಕಾರರು ಕೊಟ್ಟಿರುವ ಗೌರವ ಎನ್ನಬಹುದಾಗಿದೆ. ಸಾಂಪ್ರದಾಯಿಕ ಸರಸ್ವತಿಯ ಸ್ತುತಿ ಇಲ್ಲ; ಆದರೆ ವಚನಕಾರರು ವಾಕ್‌ಅನ್ನು ನಿರಾಕರಿಸಿಲ್ಲ.

ರುದ್ರಭಟ್ಟ (ಸುಮಾರು ಕ್ರಿ.ಶ. 1200)

ರುದ್ರಭಟ್ಟ ತನ್ನ 'ಜಗನ್ನಾಥವಿಜಯ'ದಲ್ಲಿ ಸರಸ್ವತೀ ಕಮಲವಾಸಿನಿ ಎಂಬ ಸಾಂಪ್ರದಾಯಿಕ ಕಲ್ಪನೆಯನ್ನು ಆಧರಿಸಿಯೇ ಸರಸ್ವತಿಯನ್ನು ಸ್ತುತಿಸಿದ್ದಾನೆ.

ಕೆಸಱೊಳ್ ಪುಟ್ಟಿದುದಂತುಮಲ್ಲದೆ ರಜಸ್ಸಂಲೀಢಂಮೆಂತುಂ ಜಡಾ
ವಸಥಂ ಚೀ: ಮಧುಪಪ್ರಸಂಗಿ ಖರದಂಡಂ ಮತ್ತೆನುತ್ತಬ್ಜಮಂ
ಬಿಸುಟತ್ಯುತ್ತಮಮಿಂತುಟೆಂದು ಪಿರಿದುಂ ಸಂತೋಷದಿಂ ವಾಣಿ ಬಂ
ದು ಸಮಂತಿರ್ಕೆ ನವೀನಸೌರಭದವೊಲ್ ಜಿಹ್ವಾಗ್ರದೊಳ್ ರುದ್ರನಾ॥[107]

ಕಮಲವು ಕೆಸರಿನಲ್ಲಿ ಹುಟ್ಟಿದ್ದೆಂದು, ರಜಸ್ಸಿನಿಂದ ಕೂಡಿದ್ದೆಂದು, ಜಡವಾದ ವಾಸಸ್ಥಾನವೆಂದು, ನೀರಿನ ಸಹವಾಸಿಯೆಂದು, ಖರದಂಡ(ಕತ್ತೆಯಂತೆ ವ್ಯರ್ಥ!)ವೆಂದು ಭಾವಿಸಿ ಚೀಃ ಎಂದು ಕಮಲವನ್ನು ತ್ಯಜಿಸಿದ ವಾಗ್ದೇವಿ, ಹಿರಿದಾದ ಸಂತೋಷದಿಂದ ಸೊಗಸಾಗಿ, ಹೊಸಸೌರಭದೊಂದಿಗೆ ರುದ್ರಭಟ್ಟನ ನಾಲಿಗೆಯ ತುದಿಯೇ ಅತ್ಯುತ್ತಮವಾದುದೆಂದು ಭಾವಿಸಿ ನೆಲೆ ನಿಲ್ಲಲಿ ಎಂಬುದು ಕವಿಯ ಆಗ್ರಹ.

---

103. ಅದೇ, ವಚನ ಸಂಖ್ಯೆ –244
104. ಅದೇ, ವಚನ ಸಂಖ್ಯೆ –601
105. ಅದೇ, ವಚನ ಸಂಖ್ಯೆ –172
106. ಅದೇ, ವಚನ ಸಂಖ್ಯೆ –313
107. ಜಗನ್ನಾಥ ವಿಜಯಂ, 1–6

ಆದರೆ, ನೀರಿನ ಸಹವಾಸಿಯಾದ, ಕೆಸರಿನಿಂದ ಹುಟ್ಟಿದರೂ ಕೆಸರನ್ನು ಅಂಟಿಸಿಕೊಳ್ಳದ ಕಮಲಕ್ಕಿಂತ, ಸದಾ ಎಂಜಲಿನಲ್ಲಿ ಹೊರಳುತ್ತಿರುವ ನಾಲಿಗೆಯ ತುದಿ ಹೇಗೆ ಅತ್ಯುತ್ತಮವಾದುದಾಗುತ್ತದೆ? ಜಿಹ್ವಾಗ್ರ ಎಂಬುದರ ಬದಲು ಮುಖಕಮಲ ಎಂದಿದ್ದರೆ, ಆ ಸರಸಿಜವನ್ನು ಅಗಲಿ ರುದ್ರಭಟ್ಟನ ಮುಖಕಮಲದಲ್ಲಿ ನೆಲೆ ನಿಲ್ಲಲಿ ಎಂದಾಗುತ್ತಿರಲಿಲ್ಲವೆ? ಅರ್ಥವೈಶಾಲ್ಯವೂ ದೊರೆಯುತ್ತಿರಲಿಲ್ಲವೆ? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ಆದರೆ, ನೀರಿನಲ್ಲಿದ್ದರೂ ನೀರನ್ನು ಅಂಟಿಸಿಕೊಳ್ಳದ ಕಮಲಕ್ಕಿಂತ, ಎಂಜಲಿನಲ್ಲಿದ್ದರೂ, ಬದುಕಿಗೆ ಅಗತ್ಯವಾದ ಮತ್ತು ಪವಿತ್ರವಾದ ವಾಕ್ ಸೃಷ್ಟಿಗೆ ಕಾರಣವಾಗುವ ನಾಲಗೆಯ ತುದಿಯೇ ಉತ್ತಮ ಎಂಬುದನ್ನು ಮನಗಂಡರೆ ರುದ್ರಭಟ್ಟನ ಕಲ್ಪನೆಗೆ ಅರ್ಥವೈಶಾಲ್ಯ ದೊರೆಯುತ್ತದೆ. **'ವಿಬುಧೋತ್ಕರ ಮಾನಸಾಬ್ಜವಾಸಿನಿ'** ಎಂಬ ನಾಗವರ್ಮನ ಮಾತು ಅದನ್ನೇ ಧ್ವನಿಸುತ್ತದೆ. ವಿಷ್ಣುವು ಅವತಾರವೆತ್ತುತ್ತಿರುವ ದೇವಕಿಯ ಗರ್ಭದ ಮಹತ್ವವನ್ನು ಅಂತರಿಕ್ಷದಲ್ಲಿ ನೆರೆದ ದೇವತೆಗಳು ಹೇಳುವಾಗ, **'ವೇದಗರ್ಭ ವಾಣಿಯಂತೆಯುಂ'**[108] ಎಂದು ಹೇಳುತ್ತಾರೆ. ವೇದವನ್ನು ಗರ್ಭದಲ್ಲಿ ಧರಿಸಿರುವ ವಾಗ್ದೇವತೆ ಎಂಬ ಕಲ್ಪನೆ ನವೀನವಾಗಿದೆ. ಸರಸ್ವತಿಯು ವೇದಾಧಿದೇವತೆ ಎಂಬ ಸಾಂಪ್ರದಾಯಿಕ ಕಲ್ಪನೆಯನ್ನೂ ಸ್ಫುರಿಸುತ್ತದೆ.

ಅಗ್ಗಳ (ಸುಮಾರು ಕ್ರಿ.ಶ. 1200)

ಅಗ್ಗಳನ 'ಚಂದ್ರಪ್ರಭಪುರಾಣ'ದ ಈ ಸರಸ್ವತೀ ಸ್ತುತಿಯನ್ನು ಮಲ್ಲಿಕಾರ್ಜುನನು ತನ್ನ 'ಸೂಕ್ತಿಸುಧಾರ್ಣವ' ಕೃತಿಯಲ್ಲಿ ಉಲ್ಲೇಖಿಸಿದ್ದಾನೆ. ಸರಸ್ವತಿಯ ವಿಷಯವಾಗಿ ಇದೊಂದು ವಿಶಿಷ್ಟ ಪದ್ಯವಾಗಿದೆ.

ದುರಿತವ್ರಾತಲತಾಕೃಪಾಣಿ ವಿಸರದ್ದುರ್ಭೋಧರೋದಸ್ವಿನೀ
ತರಣದ್ರೋಣಿ ಸಮುನ್ನತಾಕ್ಷಯಪದ ಪ್ರಾಸಾದ ನಿಶ್ರೇಣಿ ಬಂ
ಧುರಸಾಹಿತ್ಯ ಸುರತ್ನರೋಹಣಮಹೇಂದ್ರಕ್ಷೋಣಿ ತಾಳ್ದಿರ್ಕೆ ವಿ
ಸ್ತರದಿಂ ವಾಣಿ ಮದೀಯ ಮಾನಿತ ಮುಖಶ್ರೀಯೊಳ್ ಸಖೀಲೀಲೇಯಂ॥[109]

ಪಾಪಸಮೂಹವೆಂಬ ಬಳ್ಳಿಯನ್ನು ಕತ್ತರಿಸುವ ದಯೆಯಿಲ್ಲದ ಕತ್ತಿಯಾದ, ಹರಿಯುವ ಅಜ್ಞಾನದ ನದಿಯನ್ನು ದಾಟಿಸುವ ದೋಣಿಯಾದ, ಶ್ರೇಷ್ಠವಾದ ಮತ್ತು ಕ್ಷಯವಾಗದ ಶಬ್ದಗಳೆಂಬ ಮಹಡಿಯನ್ನು ಏರುವ ಏಣಿಯಾದ, ಮನೋಹರವಾದ ಸಾಹಿತ್ಯರತ್ನವನ್ನು ಹೊತ್ತುಕೊಂಡಿರುವ ಮಹೇಂದ್ರಪರ್ವತವಾದ ಸರಸ್ವತಿಯು ನನ್ನ ಗೌರವದ ಮುಖಸಂಪತ್ತಿನಲ್ಲಿ ವಿಸ್ತಾರವಾಗಿ ಸ್ನೇಹಭಾವವನ್ನು ತಳೆದು ನೆಲೆಸಲಿ ಎಂಬುದು ಅಗ್ಗಳನ ಪ್ರಾರ್ಥನೆ. ಪಾಪವೆಂಬ ಬಳ್ಳಿಗೆ

---

108. ಅದೇ 2-96ರ ವಚನ

109. ಚಂದ್ರಪ್ರಭಪುರಾಣ 1-11

ಕುಠಾರಪ್ರಾಯಳು ಎಂಬ ಮಾತು ಕಾವ್ಯ ವಾಚನದಿಂದ, ಶ್ರವಣದಿಂದ ಪಾಪ ಕಳೆದು ಪುಣ್ಯ ದೊರೆಯುತ್ತದೆ ಎಂಬ ಸಾಂಪ್ರದಾಯಿಕ ಕಲ್ಪನೆಯನ್ನು ಧ್ವನಿಸುತ್ತದೆ. ಅಜ್ಞಾನದ ನದಿಯನ್ನು ದಾಟಿಸುವ ದೋಣಿ ಎಂಬುದು, ಸರಸ್ವತಿಯು ಜ್ಞಾನದ ಅಧಿದೇವತೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ವಿಸರದ್ದುರ್ಭೋರ್ಧರೋದಸ್ವಿನೀ ತರಣದ್ರೋಣಿ ಎಂಬುದಕ್ಕೆ ಅಜ್ಞಾನದ ಪ್ರಸರಣಕ್ಕೆ ತಡೆಯೊಡ್ಡುವವಳು ಎಂಬ ಅರ್ಥವೂ ಬರುತ್ತದೆ. ಸರಸ್ವತೀ ಶಿಲ್ಪಗಳಲ್ಲಿ ಕಂಡುಬರುವ ಅಂಕುಶ ಮತ್ತು ಪಾಶಗಳನ್ನು ಗಮನಿಸಿದರೆ, ಈ ಕವಿಯ ಕಲ್ಪನೆಗೆ ಹೆಚ್ಚಿನ ಮಹತ್ವ ಬರುತ್ತದೆ. ಅಂಕುಶವೆಂಬುದು ತಡೆಯೊಡ್ಡುವ ಸಾಧನ. ಪಾಶವೂ ಅಷ್ಟೆ; ಅದು ನಿಯಂತ್ರಣ ಸಾಧನವೂ ಹೌದು, ನಿಗ್ರಹದ ಸಾಧನವೂ ಹೌದು. ಅಂದರೆ, ಸರಸ್ವತಿಯು ಅಜ್ಞಾನದ ಪ್ರಸರಣವನ್ನು ತಡೆದು ಜ್ಞಾನವನ್ನು ಹಂಚುವವಳು ಎಂದು ಪರಿಭಾವಿಸಬಹುದು. 'ಕ್ಷಯವಾಗದ ಶಬ್ದಗಳೆಂಬ ಮಹಡಿಗೆ ಏಣಿ' ಎಂಬ ಮಾತು ವಿಶೇಷವಾಗಿದೆ. ವಾಗ್ದೇವಿ ಎಂಬ ಏಣಿಯಿಲ್ಲದಿದ್ದರೆ, ಶಬ್ದಭಂಡಾರ ದೊರೆಯುವುದಿಲ್ಲ. ಆ ಶಬ್ದ ಭಂಡಾರವಿಲ್ಲದ ಕಾವ್ಯ ಬರಡಾಗುತ್ತದೆ. ಹಾಗೆಯೇ ಅಕ್ಷಯಪದ ಎಂಬುದಕ್ಕೆ ಅಂತಿಮ ಪದವಿಯಾದ ಮುಕ್ತಿಪದ ಎಂಬುದನ್ನು ಅರ್ಥೈಸಿದರೆ, ಆ ಮುಕ್ತಿಪದವಿಗೆ ಏರಲು ಸರಸ್ವತಿ ಎಂಬ ಏಣಿ ಬೇಕು ಎಂದೂ ಅರ್ಥವಾಗುತ್ತದೆ. ಈ ಕವಿಯ 'ವಾಣಿಯು, ತನ್ನ ಮುಖವೆಂಬ ಲಕ್ಷ್ಮಿಯಲ್ಲಿ ಸಖೀಲೀಲೆಯನ್ನುಂಟು ಮಾಡಲಿ' ಎಂಬ ಕೊನೆಯ ಮಾತು ಹೊಸದಾಗಿದೆ. ತನ್ನ ಮುಖವೆಂಬ ಲಕ್ಷ್ಮಿಗೆ ಒಬ್ಬ ಸಖಿ ಬೇಕೆನ್ನುತ್ತಾ, ಆಕೆ ಎಂತಹ ಸಖಿ ಎಂಬುದನ್ನು ಕವಿಯು ನಿರೂಪಿಸಿದ್ದಾನೆ. ಈ ಪದ್ಯದ ಮಹತ್ವವನ್ನು ಗಮನಿಸಿಯೇ ಮಲ್ಲಿಕಾರ್ಜುನನು ತನ್ನ ಸೂಕ್ತಿ ಸುಧಾರ್ಣವದಲ್ಲಿ ಸೇರಿಸಿದ್ದಾನೆ ಎನ್ನಬಹುದು. ಮೂರನೆಯ ಮಂಗರಸ ಹಾಗೂ ಅನಂತಕವಿಯ ಸರಸ್ವತೀ ಸ್ತುತಿಗಳ ಮೇಲೆ ಈ ಪದ್ಯದ ಪ್ರಭಾವವನ್ನು ಗುರುತಿಸಬಹುದು.

ಹರಿಹರ (ಸುಮಾರು ಕ್ರಿ.ಶ. 1200)

ವಚನ ಸಾಹಿತ್ಯ ಮೂಡಿಸಿದ ಹೊಸ ಸಾಧ್ಯತೆಗಳು, ಹುಟ್ಟು ಹಾಕಿದ ಹೊಸ ಸಂಪ್ರದಾಯಗಳು ಮುಂದಿನ ಕವಿಗಳ ಮೇಲೆ ಬೀರಿದ ಪ್ರಭಾವ ಮಹತ್ವದ್ದು. ಸಾಹಿತ್ಯವೆಂದು ರಚಿತವಾಗದೇ, ಮಹಾನ್ ಉದ್ದೇಶವೊಂದರ ಉಪಉತ್ಪನ್ನಗಳಾಗಿ ಮೂಡಿಬಂದ ವಚನಗಳು ಕನ್ನಡ ಸಾಹಿತ್ಯವನ್ನು ರಾಜಾಸ್ಥಾನದಿಂದ ಜನಾಸ್ಥಾನದ ಕಡೆಗೆ ತಿರುಗಿಸಿದ್ದನ್ನು ಹಿಂದೆ ಗಮನಿಸಿದ್ದೇವೆ. ಅದುವರೆಗೆ ಕನ್ನಡ ಸಾಹಿತ್ಯ ನಿರ್ಮಿತಿಗೆ ಇದ್ದ ಎಲ್ಲಾ ಕಟ್ಟುಪಾಡುಗಳು ವಚನಸಾಹಿತ್ಯ ನಿರ್ಮಾಣದಿಂದ ಮುರಿದು ಬಿದ್ದುದನ್ನು ಕಾಣುತ್ತೇವೆ. **'ಪುಣ್ಯದಾಗರವೆನಿಪ ಸಿದ್ಧರಾಮನ ಕಥೆಗೆ ಕಾವ್ಯಮಂ ವಿರಚಿಸುವಡಷ್ಟಾದಶಸ್ಥಲವ ಪೊಗಳಲೇಕೆ?'**[110] ಎಂಬ ರಾಘವಾಂಕನ ಮಾತುಗಳು ಅದಕ್ಕೆ ಸಾಕ್ಷಿಯಾಗಿದೆ.

---

110. ಸಿದ್ಧರಾಮ ಚಾರಿತ್ರ, 1-4

ಹರಿಹರ ಕನ್ನಡ ಸಾಹಿತ್ಯದ ದಿಕ್ಕು-ದೆಸೆಗಳನ್ನು ಬದಲಿಸಿದ ಕವಿ. 'ಗಿರಿಜಾಕಲ್ಯಾಣ' ಚಂಪೂಕೃತಿಯನ್ನು ಬಿಟ್ಟರೆ ಆತ ರಚಿಸಿರುವುದು ರಗಳೆಗಳನ್ನು ಮಾತ್ರ. ಮಹಾನ್ ಶಿವಭಕ್ತನಾದ ಆತ ನೇರವಾಗಿ ಸರಸ್ವತಿಯನ್ನು ಸ್ತುತಿಸಿಲ್ಲ. ಆದರೆ ಕಾವ್ಯಕ್ಕೆ ಅನುಗ್ರಹವನ್ನು ಸರಸ್ವತಿಯೇ ದಯಪಾಲಿಸಬೇಕೆಂಬುದು ಆತನ ಹಠ. ಅದಕ್ಕಾಗಿ ಆತ ಬೇರೆ ಮಾರ್ಗವನ್ನು ಹಿಡಿಯುತ್ತಾನೆ. ಅದು ಸರಸ್ವತೀ ಸ್ತುತಿಯ ಸಾಂಪ್ರದಾಯಿಕ ಶೈಲಿಯನ್ನು ಮೀರಿನಿಂತು, ಪರ್ಯಾಯ ಮಾರ್ಗಕ್ಕೆ ನಾಂದಿಯೂ ಆಯಿತೆಂಬುದನ್ನು ನಾವು ಒಪ್ಪಿಕೊಳ್ಳಲೇಬೇಕಾಗಿದೆ.

ಚತುರ ಚತುರ್ಮುಖನೆಲ್ಲಾ
ಶ್ರುತಿಗಳನೊಲವಿಂದೆ ಕಲ್ತ ಶಿವನ ವಿವಾಹೋ
ನ್ನತಿಯಾ ಕೃತಿಯೆಂದನೆ ಭಾ
ರತಿಯೆನಗನುಕೂಲೆಯಾಗದಿರಲಣ್ಮುವಳೇ॥[111]

ವೇದ ಶ್ರುತಿಗಳೆಲ್ಲಾ ಬ್ರಹ್ಮನ ಸೃಷ್ಟಿ ಎಂಬುದು ಪೌರಾಣಿಕ ಕಲ್ಪನೆ. ಬ್ರಹ್ಮನ ನಾಲಗೆಯಲ್ಲಿ ಅಥವಾ ಮುಖದಲ್ಲಿ ನೆಲೆನಿಂತ ವಾಣಿಯಿಂದ ಅವುಗಳು ರಚನೆಯಾಗಿದೆ ಎಂಬುದೂ ಅದೇ ಕಲ್ಪನೆಯ ಮುಂದುವರೆದ ಭಾಗ. ಆದರೆ, ಅವುಗಳನ್ನು ಬ್ರಹ್ಮ ಪರಶಿವನಿಂದ ಕಲಿತ ಎಂಬ ಹರಿಹರನ ಕಲ್ಪನೆ ನೂತನವಾಗಿದೆ. ಹೀಗೆ ಪರಶಿವನಿಂದ ಶ್ರುತಿಗಳನ್ನು ಕಲಿತಿರುವ ಬ್ರಹ್ಮನ ಹೆಂಡತಿಯಾದ 'ಭಾರತಿ' ಅಂದರೆ ಸರಸ್ವತಿ, ಅದೇ ಶಿವನ ವಿವಾಹಮಹೋತ್ಸವವನ್ನು ವರ್ಣಿಸುವ ತನ್ನ ಕಾವ್ಯದ ರಚನೆಗೆ ಅನುಕೂಲವಾಗದಿರುವಳೇ ಎಂಬುದು ಹರಿಹರನ ಪ್ರಶ್ನೆ; ಪರೋಕ್ಷ ಪ್ರಾರ್ಥನೆ! ಭಾರತಿ ಎಂಬುದು ಸರಸ್ವತಿಯ ಇನ್ನೊಂದು ಹೆಸರಾದರೂ ಹಳಗನ್ನಡದ ಸಾಹಿತ್ಯದ ಮಟ್ಟಿಗೆ ಅದರ ಬಳಕೆ ಕಡಿಮೆಯೆಂದೇ ಹೇಳಬೇಕು. ಹೆಚ್ಚಾಗಿ ಸರಸ್ವತಿ, ಶಾರದೆ, ವಾಣಿ, ವಾಗ್ದೇವಿ ಮೊದಲಾದ ಹೆಸರುಗಳೇ ಹೆಚ್ಚು ಬಳಕೆಯಾಗಿವೆ ಎನ್ನಬಹುದು. ಹರಿಹರನದು ನವಮಾರ್ಗ ಎಂಬುದಕ್ಕೆ ಸರಸ್ವತಿಗೆ ಆತ ಬಳಸಿರುವ, ಆದರೆ ಮೊದಲೇ ಇದ್ದ 'ಭಾರತಿ' ಎಂಬ ಹೆಸರು ಸಾಕ್ಷಿಯಾಗುತ್ತದೆ.

ಸರಸ್ವತಿಯ ವಿಚಾರದಲ್ಲಿ ಹರಿಹರನ ಇನ್ನೊಂದು ಕ್ರಾಂತಿಕಾರಕ ಬದಲಾವಣೆಯೆಂದರೆ, ಗಣಪತಿಯನ್ನು ಕಾವ್ಯದೇವತೆಯನ್ನಾಗಿಸಿರುವುದು. ಯಾವುದೇ ಕೆಲಸದ ಪ್ರಾರಂಭದಲ್ಲಿ ಗಣಪತಿಯನ್ನು ಸ್ತುತಿಸುವಂತೆ, ಕಾವ್ಯಾರಂಭದಲ್ಲಿಯೂ ವಿಘ್ನನಿವಾರಕನ ಸ್ತುತಿ ಸಾಮಾನ್ಯ. ಆದರೆ, ಹರಿಹರ **'ಎನ್ನೀ ಕಾವ್ಯಕ್ಕೆ ನಿರ್ವಿಘ್ನದಿನತುಳ ನವೀನಾರ್ಥವಾಕ್ಯ ಪ್ರಸನ್ನೋತ್ಪನ್ನಾಲಂಕಾರಮಂ ಕೊಡುಗೆ'**[112] ಎಂದು ಗಣಪತಿಯನ್ನು ಪ್ರಾರ್ಥಿಸುತ್ತಾನೆ. ತನ್ನ ಕಾವ್ಯಕ್ಕೆ ನಿರ್ವಿಘ್ನತೆಯ ಜೊತೆಗೆ, ನವೀನವಾದ ಅರ್ಥ, ವಾಕ್ಯ,

---

111. ಗಿರಿಜಾಕಲ್ಯಾಣ ಮಹಾಪ್ರಬಂಧಂ, 1-9
112. ಅದೇ, 1-5

ಪ್ರಸನ್ನವಾದ ಕಾವ್ಯಾಲಂಕಾರ ಸೌಭಾಗ್ಯವನ್ನು ಬೇಡುವುದರ ಮೂಲಕ ವಿಘ್ನನಿವಾರಕನನ್ನು ಕಾವ್ಯಗಣಪತಿಯನ್ನಾಗಿ ಮಾಡಿದ್ದಾನೆ. ಇಷ್ಟು ಮಾತ್ರಕ್ಕೆ ಹರಿಹರನು ಸರಸ್ವತಿಗೆ ಕಾವ್ಯದೇವತೆಯ ಪಟ್ಟವನ್ನು ನಿರಾಕರಿಸಿದ್ದಾನೆಂದು ಅರ್ಥವಲ್ಲ. ಎಷ್ಟಾದರೂ ಹರಿಹರ ಭಕ್ತಕವಿ. ನಿಜಭಕ್ತನಿಗೆ ಎಲ್ಲಾ ದೈವವೂ ಒಂದೇ ಆಗಿರುತ್ತದೆ. ಅಂತೆಯೇ ಹರಿಹರನು ತನ್ನ ಕಾವ್ಯವನ್ನು ವಾಗ್ದೇವಿಯ ವಾಸಸ್ಥಾನ ಎಂದು ಕರೆದಿದ್ದಾನೆ.

ಸೇವ್ಯಂ ಸೌಖ್ಯಂ ಪ್ರಸನ್ನಂ ನವರಸವಿಭವಂ ಪುಣ್ಯಪುಂಜಂ ಶುಭಂ ವಾ
ಗ್ದೇವ್ಯಾವಾಸಂ ವಿವೇಕೋನ್ನತಜಲನಿಧಿ ಸಂಸಾರ ವಿಶ್ರಮದೇಶಂ
ದಿವ್ಯಜ್ಞಾನೋಕ್ತಿಮಾರ್ಗಂ ನಿರತಿಶಯಪದಂ ಕೂರ್ತುಪೇಟ್ವಿಟ್ಟೆಯಿಂದಂ
ಕಾವ್ಯಂ ಕಲ್ಪಾಂತರಸ್ಥಾಯಿಯೆನಿಪ ನುಡಿ ಸತ್ಯಂ ಕವೀಶಾಧಿಪತ್ಯಂ॥

ಕಾವ್ಯ ಕಲ್ಪಾಂತರಸ್ಥಾಯಿ ಎಂದು ಹೇಳಿರುವ ಹರಿಹರ ತನ್ನ ಕಾವ್ಯದ ಗುಣಗಳನ್ನು ಪಟ್ಟಿ ಮಾಡಿದ್ದಾನೆ. ಅವುಗಳಲ್ಲಿ ಮುಖ್ಯವಾಗಿ ಪ್ರಸನ್ನತೆ, ನವರಸ, ವಿವೇಕ, ದಿವ್ಯಜ್ಞಾನ ಇವೆಲ್ಲಾ ಕಾವ್ಯಲಕ್ಷಣಗಳೇ ಆಗಿವೆ. ಅಂಥ ಕಾವ್ಯವನ್ನು ವಾಗ್ದೇವಿಯ ವಾಸಸ್ಥಾನ (ವಾಗ್ದೇವ್ಯವಾಸಂ) ಎಂದು ಹರಿಹರ ಕರೆದಿರುವುದು ವಿಶೇಷವಾಗಿದೆ. ನಾಗಚಂದ್ರ, ತನ್ನ ಒಂದು ಕಾವ್ಯವನ್ನು ಸರಸ್ವತಿಯ ನೃತ್ಯಕ್ಕೆ ವೇದಿಕೆಯನ್ನಾಗಿಸಿದ್ದರೆ ('ವಚಶ್ರೀನರ್ತಕೀನೃತ್ಯವೇದಿಕೆ'), ಇನ್ನೊಂದು ಕಾವ್ಯವನ್ನು ಸರಸ್ವತಿ ಎಂಬ ನಟಿಯ ನಾಟಕ ('ವಿದ್ಯಾನಟಿನಾಟಕಂ') ಎಂದೇ ಕರೆದಿದ್ದಾನೆ. ಹರಿಹರನು ತನ್ನ ಕಾವ್ಯವನ್ನು 'ವಾಗ್ದೇವ್ಯಾವಾಸಂ' ಎಂದು ಕರೆಯುವುದರ ಮೂಲಕ ನಾಗಚಂದ್ರನ ಸರಸ್ವತೀ ದರ್ಶನವನ್ನು ವಿಸ್ತರಿಸಿದ್ದಾನೆ.

ಶಿವ–ಗಿರಿಜೆಯರ ಕಲ್ಯಾಣಕ್ಕೆ ಬ್ರಹ್ಮನು **'ತನ್ನ ಬಲಂಬೆರಸೊಲವಿಂ ಹಂಸೆಯೇಜಿ......'**[113] ಬಂದನು. ಇಲ್ಲಿ ಹರಿಹರನು ಸರಸ್ವತಿಯನ್ನು ಬ್ರಹ್ಮನ ಬಲ ಅಂದರೆ, ಬ್ರಹ್ಮನ ಶಕ್ತಿ ಎಂದು ಕರೆದಿರುವುದು ಪೌರಾಣಿಕ ಕಲ್ಪನೆಯಂತೆಯೇ ಇದೆ. ಹಂಸೆಯನೇಜಿ ಎಂಬುದರಿಂದ ಬ್ರಹ್ಮ–ಸರಸ್ವತಿಯರ ವಾಹನ ಹಂಸವೆಂಬುದು ಸ್ಪಷ್ಟವಾಗುತ್ತದೆ. ಮದುವೆಯ ಮಂಟಪದಲ್ಲಿ ಸರಸ್ವತಿಯು, ಲಕ್ಷ್ಮಿ, ಅರುಂಧತಿ, ಅನಸೂಯಾ, ಗಾಯಿತ್ರಿ, ಸಾವಿತ್ರಿ, ಶಚಿ, ರೋಹಿಣಿ ಮೊದಲಾದವರ ಜೊತೆಯಲ್ಲಿ ನರ್ತನ ಮಾಡುತ್ತಿದ್ದ ವರ್ಣನೆಯಿದೆ. ಅವರೆಲ್ಲರನ್ನೂ ಪರಮಪತಿವ್ರತೆಯರೆಂದು ಹರಿಹರ ವರ್ಣಿಸಿದ್ದಾನೆ.[114]

ಹರಿಹರ ತನ್ನ ರಗಳೆಗಳಲ್ಲಿ ಸರಸ್ವತಿಯನ್ನು ಸ್ತುತಿಸಿರುವುದಿಲ್ಲ. ಗಿರಿಜಾಕಲ್ಯಾಣದಲ್ಲಿ ಆತ ಸರಸ್ವತಿಗೆ ಕೊಟ್ಟಿರುವ ಅಸ್ಪಷ್ಟ ಪ್ರಾಮುಖ್ಯತೆ ಮತ್ತು ರಗಳೆಗಳಲ್ಲಿ ಸರಸ್ವತಿಯನ್ನು ಸಂಪೂರ್ಣ ಮರೆತಿರುವ ಅಂಶವನ್ನು ಗಮನಿಸಿದರೆ ಗಿರಿಜಾಕಲ್ಯಾಣವೇ ಆತನ ಮೊದಲ ರಚನೆ ಎಂಬುದು ಸ್ಪಷ್ಟವಾಗುತ್ತದೆ.

---

113. ಅದೇ, 10–71
114. ಅದೇ, 10–71ರ ವಚನ

ನೇಮಿಚಂದ್ರ (ಸುಮಾರು ಕ್ರಿ.ಶ. 1200)

ಹರಿಹರನ ಸಮಕಾಲೀನ ಹಾಗೂ ಸರಸ್ವತಿಯ ದರ್ಶನವಿದ್ದ ಇನ್ನೊಬ್ಬ ಕವಿಯೆಂದರೆ, ನೇಮಿಚಂದ್ರ. ಲೀಲಾವತಿ ಪ್ರಬಂಧಂ ಮತ್ತು ನೇಮಿನಾಥಪುರಾಣ ಈತನ ಕೃತಿಗಳು. ಶೃಂಗಾರವೇ ಪ್ರಧಾನವಾದ ಕಾವ್ಯ ಲೀಲಾವತಿ ಪ್ರಬಂಧ. ನೇಮಿನಾಥಪುರಾಣ ನೇಮಿನಾಥ ತೀರ್ಥಂಕರನ ಕಥೆಯನ್ನುಳ್ಳದ್ದು. ಲೀಲಾವತಿಯಲ್ಲಿ ಆತನ ಸರಸ್ವತೀ ದರ್ಶನ ವಿಸ್ತೃತವೂ ವಿಶೇಷವೂ ಆಗಿ ಹೊರಹೊಮ್ಮಿದೆ. ಕವಿ ತನ್ನನ್ನು ತಾನು **'ವಿಶ್ವವಿದ್ಯಾವಿನೋದಂ'**[115] **'ಭಾರತೀಚಿತ್ತಚೋರ'**[116] ಎಂದು ಕರೆದುಕೊಂಡಿದ್ದಾನೆ. ತನ್ನ ಕೃತಿಯನ್ನು ಕಲಾನರ್ತಕಿಯ ನೃತ್ಯರಂಗವೇದಿಕೆ (**ಸರಸಕೃತಿ ಕಲಾನರ್ತಕಿ ನೃತ್ಯರಂಗಂ**)[117] ಎಂದು ವರ್ಣಿಸಿಕೊಂಡಿರುವ ನೇಮಿಚಂದ್ರ, ಇನ್ನೊಂದು ಪದ್ಯದಲ್ಲಿ, ತನ್ನ **'ಕೃತಿಯುವತಿ'**ಯನ್ನು[118] ಸರಸ್ವತಿಯ ವಿಶೇಷಣಗಳಿಂದ ವರ್ಣಿಸಿದ್ದಾನೆ. ಈಗಾಗಲೇ ನಾಗಚಂದ್ರ ತನ್ನ ಕೃತಿ 'ಪಂಪರಾಮಾಯಣ'ವನ್ನು 'ವಚಶ್ರೀನರ್ತಕೀ ನೃತ್ಯವೇದಿಕೆ' ಎಂದು ಕರೆದಿರುವುದನ್ನು ಗಮನಿಸಿದ್ದೇವೆ. ಅಲ್ಲಿ ಮಾತೆಂಬ ಲಕ್ಷ್ಮಿ ನರ್ತಿಸುತ್ತಿದ್ದರೆ, ನೇಮಿಚಂದ್ರನಲ್ಲಿ ಸರಸ್ವತಿಯು 'ಕಲಾನರ್ತಕಿ'ಯಾಗಿದ್ದಾಳೆ. ಕಾವ್ಯಾರಂಭದ ಸರಸ್ವತೀ ಸ್ತುತಿಯೇ ಆತನ ಸರಸ್ವತಿಯ ದರ್ಶನಕ್ಕೆ ಮುನ್ನುಡಿಯಂತಿದೆ.

> **ಜಿನಪದಬೋಧವಾರ್ದಿಭವೆ ಭವ್ಯ ಮನೋಹರಕಾಂತೆ ಕಾಮಸಂ**
> **ಜನನಿ ಯಶೋವಿಕಾಸಿನಿ ಗುಣೀಕೃತ ಸಂಸ್ಕೃತಿದೋಷೆ ಪುಣ್ಯ ಭಾ**
> **ಗಿನಿ ಭುವನಪ್ರಬೋಧಿನಿ ಸುಖಾಮೃತದಾಯಿನಿ ಬಂದು ನೇಮಿಚಂ**
> **ದ್ರನ ಮುಖಪದ್ಮದೊಳ್ ಸಿರಿವೊಲಿರ್ಪ ಸರಸ್ವತಿ ನಿಲ್ಕೆ ನಲ್ಮೆಯಿಂ॥**[119]

ಜಿನನ ಮಾತು ಎಂಬ ಜ್ಞಾನಸಮುದ್ರದಲ್ಲಿ ಹುಟ್ಟಿದ, ಜಿನಪದದ ಬಗೆಗಿನ ಅರಿವನ್ನು ಹೆಚ್ಚಿಸುವ, ಜಿನಭಕ್ತರಿಗೆ ಮನೋಹರವಾಗಿ ಕಾಣಿಸುವ ಭವ್ಯಸ್ವರೂಪದ, ಅರಿಷಡ್ವರ್ಗಳಲ್ಲಿ ಮೊದಲನೆಯದಾದ 'ಕಾಮ'ಕ್ಕೆ ಕಾರಣಳಾಗಿರುವ, ಯಶಸ್ಸನ್ನು ಹೆಚ್ಚಿಸುವ, ತಿದ್ದಿದ ಗುಣಶಾಲಿಯಾದ ನಡವಳಿಕೆಯಿಂದ ಸಂತಸಗೊಳ್ಳುವ, ಭುವನಕ್ಕೆ ಸಮೃದ್ಧಿಯನ್ನುಂಟು ಮಾಡುವ, ಸುಖವೆಂಬ ಅಮೃತವನ್ನು ದಯಪಾಲಿಸುವ, ಲಕ್ಷ್ಮಿಯಂತಿರುವ ಸರಸ್ವತಿಯು ನೇಮಿಚಂದ್ರನ ಮುಖಪದ್ಮದಲ್ಲಿ ನೆಲೆಸಲಿ ಎಂಬುದು ಕವಿಯ ಆಶಯ. ಇಲ್ಲಿ ಬಂದಿರುವ ಕಾಮಸಂಜನನಿ ಎಂಬ ವಿಶೇಷಣ ಪ್ರಮುಖವಾದುದು.

---

115. ನೇಮಿಚಂದ್ರನ ಲೀಲಾವತಿ ಪ್ರಬಂಧಂ, 7–118; 8–102
116. ಅದೇ, 13–160
117. ಅದೇ, 1–107; 11–95; 14–144
118. ಅದೇ, 14–147
119. ಅದೇ, 1–5

ಶೃಂಗಾರವೇ ಪ್ರಧಾನವಾದ, ಶೃಂಗಾರಗೃಹವಾದ ತನ್ನ ಕಾವ್ಯದ ಉದ್ದೇಶಕ್ಕೆ ಅನುಗುಣವಾಗಿ ಸರಸ್ವತಿಯನ್ನು ಸ್ತುತಿಸುವುದಕ್ಕಾಗಿ, 'ಕಾಮಸಂಜನನಿ' ಎನ್ನುತ್ತಾನೆ. ಸರಸ್ವತಿಯು ಹುಟ್ಟಿಸುವ ಕಾಮವಾದ್ದರಿಂದ ಅದು ವಿಕೃತವಲ್ಲ ; ಬದಲಿಗೆ ಯಶಸ್ಸನ್ನು ವಿಸ್ತರಿಸುವಂತದ್ದು, ಸಂಸಾರದ ದೋಷಗಳನ್ನು ಗುಣಗಳನ್ನಾಗಿ ಪರಿವರ್ತಿಸಿ ತೋರಿಸುವಂತದ್ದು. ಸಂಸಾರದಲ್ಲಿ ಕಾಮವು ನಗಣ್ಯವಲ್ಲ ಎಂಬುದು ಕಾವ್ಯದುದ್ದಕ್ಕೂ ನೇಮಿಚಂದ್ರ ಪಾಲಿಸಿಕೊಂಡು ಬಂದಿರುವ ತತ್ವವೇ ಆಗಿದೆ. ಪುಣ್ಯವನ್ನು ದಯಪಾಲಿಸುವವಳು, ಇಡೀ ಜಗತ್ತನ್ನು ಎಚ್ಚರಗೊಳಿಸುವವಳು, ಸುಖವೆಂಬ ಅಮೃತವನ್ನು ದಯಪಾಲಿಸುವವಳು ಆದ ಸರಸ್ವತಿ, ಸಂಪತ್ತಿನಂತೆ ಇರುವ ನೇಮಿಚಂದ್ರನ ಮುಖಕಮಲದಲ್ಲಿ ಪ್ರೀತಿಯಿಂದ ನೆಲಸಲಿ ಎಂಬುದು ಕವಿಯ ಪ್ರಾರ್ಥನೆ. ಋಗ್ವೇದದಲ್ಲಿ ಸರಸ್ವತಿಯು ಪ್ರೇರಣಾದೇವತೆಯಾಗಿರುವುದನ್ನು, ಮತ್ತು ಸರಸ್ವತಿಯನ್ನು 'ಚೋದಯತ್ರೀ' ಅಂದರೆ ಮನುಷ್ಯರನ್ನು ಪ್ರೇರೇಪಿಸುವವಳು ಎಂದು ಕರೆದಿರುವುದನ್ನು ಹಿಂದೆ ಗಮನಿಸಿದ್ದೇವೆ. ಆ ಹಿನ್ನೆಲೆಯಲ್ಲಿ 'ಭುವನಪ್ರಬೋಧಿನಿ' ಎಂಬ ವಿಶೇಷಣ ಮಹತ್ವದ್ದಾಗಿದೆ. ಈಗಾಗಲೇ ನಾಗಚಂದ್ರನ ಸರಸ್ವತಿಯನ್ನು 'ಕೈವಲ್ಯಬೋಧರಮಾ ಮೌಕ್ತಿಕಹಾರಯಷ್ಟಿ' ಎಂದು ಕರೆದಿರುವುದನ್ನು ಗಮನಿಸಿದ್ದೇವೆ. ಜಿನಪದ ಅಂದರೆ ಮೋಕ್ಷ; ಕೈವಲ್ಯ. 'ಜಿನಪದಬೋಧವಾರ್ಧಿಭವೆ' ಎಂಬ ಮಾತು ಸರಸ್ವತಿಯು ಮೋಕ್ಷಕ್ಕೂ ಕಾರಣವಾಗುವವಳು ಎಂಬುದನ್ನು ಸೂಚಿಸುತ್ತದೆ. ಇನ್ನೊಂದು ಪದ್ಯದಲ್ಲಿ ಸರಸ್ವತಿಯು ಕುಕವಿಗಳನ್ನಾಶ್ರಯಿಸದೆ, ನೇಮಿಚಂದ್ರನನ್ನು ಏಕೆ ಆಶ್ರಯಿಸಬೇಕೆಂದು ಶ್ಲೇಷೆಯ ಮೂಲಕ ಹೇಳುತ್ತಾನೆ.

ಬಱಿದೆ ಮರಲ್ದರಲ್ದ ಕುಕವಿವ್ರಜಶಾಲ್ಮಲಿಯಂ ಮಲಂಗದೆ
ಟ್ಟಱಿಸದೆ ದುರ್ವಿವೇಕಮುಖಕುಟ್ಮಲದಿಂದವಗಂಧಮಂ ಮರು
ಳ್ದೆಱಗದೆ ಮುಗ್ಧಚಂಪಕದೊಳೊಲ್ದು ಸರಸ್ವತಿಯೆಂಬ ತುಂಬಿ ಬಂ
ದೆಱಗುಗೆ ನೇಮಿಚಂದ್ರನ ನವಸ್ಮಿತಜಾತಮುಖಾಂಬುಜಾತದೊಳ್॥[120]

'ವ್ಯರ್ಥವಾಗಿ ಅರಳಿರುವ ಬೂರುಗದ ಹೂವಿಗೆ ಮರುಳಾಗದೆ, ಕೆಟ್ಟುಹೋಗಿರುವ ಮೊಗ್ಗಿನಿಂದ ಸುವಾಸನೆಯನ್ನು ಬಯಸದೆ, ಮುಗ್ಧೆ ಎಂದು ಸಂಪಗೆಯ ವಾಸನೆಗೆ ಮರುಳಾಗದೆ 'ಸರಸ್ವತಿ' ಎಂಬ ದುಂಬಿಯು ಮುಗುಳ್ನಗೆಯಿಂದ ಕೂಡಿದ ನೇಮಿಚಂದ್ರನ ಮುಖವೆಂಬ ಕಮಲದ ಹೂವಿನಲ್ಲಿ ಆಟವಾಡಲಿ' ಎಂಬುದು ಕವಿಯ ಪ್ರಾರ್ಥನೆ. ಆದರೆ ಕವಿ ಅದನ್ನು ನಯವಾಗಿ ಕುಕವಿಗಳ ನಿಂದೆಗಾಗಿ ಬಳಸಿಕೊಂಡಿದ್ದಾನೆ. 'ಅಂತಃಶಕ್ತಿಯಿಲ್ಲದ ಕುಕವಿಸಮೂಹವನ್ನು ಆಶ್ರಯಿಸದೆ, ಅವರ ದುರ್ವಿವೇಕದಿಂದ ಕೂಡಿದ ಮುಖದಲ್ಲಿ ಒಡನಾಡದೆ, ಏನೂ ತಿಳಿಯದವರೆಂದು ಭಾವಿಸಿ ಮರುಳಾಗಿ ಅಂತಹವರ

---

120. ನೇಮಿಚಂದ್ರನ ಲೀಲಾವತಿ ಪ್ರಬಂಧಂ, 1–6

ಸಹವಾಸವನ್ನು ಪಡೆಯದೆ ಸರಸ್ವತಿಯು ಮುಗುಳ್ನಗೆಯಿಂದ ಕೂಡಿದ ನೇಮಿಚಂದ್ರನ ಮುಖದಲ್ಲಿ ಬಂದು ಆಟವಾಡಲಿ' ಎಂಬಲ್ಲಿ ಕುಕವಿಗಳಿಗಿರಬೇಕಾದ ಗುಣಗಳ ನಿರೂಪಣೆಯೂ ಇದೆ.

ಸರಸ್ವತಿಯನ್ನು ಕಾವ್ಯಪರಿಕರಗಳಿಗಾಗಿ ಬೇಡುವ ಅವನ ಇನ್ನೊಂದು ಸರಸ್ವತಿಯ ಸ್ತುತಿ ಕೆಳಗಿನಂತಿದೆ.

> **ರಸಭಾವಂ ಪೊಣ್ಮೆ ವಕ್ತ್ರಂ ತೊಳಗೆ ವಿಕಸಿತಂ ಜಾತ್ಯಲಂಕಾರಮಾಳೋ**
> **ಕಿಸೆ ಕೊಂಕು ರೇಖೆಯುಂ ರಂಜಿಸೆ ಮಿಸುಗೆ ಪದನ್ಯಾಸಮಿಂಬಾಗೆ**
> **ವೃತ್ತಿ ಪ್ರಸರಂ ದೃಷ್ಟಿಪ್ರಸಾದಂ ಪಸರಿಸೆ ಸತತಂ ಭಾರತೀದೇವಿಯೆನ್ನೀ**
> **ರಸನಾರಂಗಾಗ್ರದೊಳ್ ನರ್ತಿಸುಗೆ ಬುಧಜನಸ್ತೋತ್ರತೂರ್ಯಂಗಂಳಿಂದಂ॥**[121]

ರಸಭಾವಗಳು ಹೊಮ್ಮುತ್ತಿರುವುದರಿಂದ ಮುಖವು ಬೆಳಗುತ್ತಿರಲು, ಪ್ರಕಾಶ ಹೆಚ್ಚಾಯಿತು. ನೃತ್ಯದ ಬೇರೆ ಬೇರೆ ಭಂಗಿಗಳು ದೃಷ್ಟಿಯ ಮೂಲಕ ಹೊಮ್ಮುತ್ತಿರಲು, ದೇಹದ ಚಲನೆಯ ವಕ್ರ(ಸೌಂದರ್ಯ)ರೇಖೆಗಳು ರಂಜಿಸುತ್ತಿರಲು, ಪದಚಲನೆಯ ಭಂಗಿ ವಿಜೃಂಭಿಸುತ್ತಿರಲು ಕಣ್ಣಿಗೆ ನೋಟದ ಗುಣ ಹರಡುತ್ತಿರಲು, ವ್ಯಾಖ್ಯಾನ ಮಾಡುವುದು ಆ ಭಂಗಿಗಳಿಗೆ ಒತ್ತಾಸೆ ನೀಡುತ್ತಿರಲು, ವಿದ್ವಾಂಸರು ಮಾಡುವ ಸ್ತುತಿಗಳ ತೂರ್ಯಶಬ್ದಗಳ ಹಿನ್ನೆಲೆಯಲ್ಲಿ ಭಾರತಿಯು ರಸೋತ್ಪತ್ತಿ ಸ್ಥಾನವಾದ ನಾಲಗೆಯ ತುದಿಯಲ್ಲಿ ನಿರಂತರವಾಗಿ ನರ್ತಿಸುತ್ತಿರಲಿ. ಕಾವ್ಯಗುಣಗಳನ್ನು ಅನ್ವಯಿಸಿಯೂ ಈ ಪದ್ಯವನ್ನು ಅರ್ಥೈಸಬಹುದು. ವಕ್ರವ್ಯಾಪಾರದಿಂದ ಶೋಭಿಸುವ ಸ್ವಭಾವಾಲಂಕಾರಗಳನ್ನು, ಕಂಗೊಳಿಸುವ ಪದಗಳ ರಚನೆಗೆ ಅನುಕೂಲಕರವಾಗಿ ವಾಚ್ಯ, ಲಕ್ಷ್ಯ ಮತ್ತು ವ್ಯಂಗ್ಯಾರ್ಥಗಳನ್ನು ಕೊಡುವ ಶಬ್ದದ ಸಾಮರ್ಥ್ಯ; 'ವೃತ್ತಿ'ಯನ್ನು ಹರಡಿ, ಕೃಪಾದೃಷ್ಟಿಯನ್ನು ಸುರಿಸಿ, ಭಾರತಿದೇವಿಯು ಬುಧರ ಸ್ತೋತ್ರವೆಂಬ ತುತ್ತೂರಿಯ ದನಿಗಳೊಂದಿಗೆ ನಿರಂತರವಾಗಿ ನನ್ನ ನಾಲಗೆಯ ತುದಿಯಲ್ಲಿ ನರ್ತಿಸಲಿ. ಜಾತ್ಯಾಲಂಕಾರ ಎಂದರೆ ಸ್ವಭಾವಾಲಂಕಾರವೆಂದರ್ಥ. ನೋಡುವುದಕ್ಕೆ ಸ್ವಭಾವಾಲಂಕಾರದಂತಿದ್ದರೂ ಕೊಂಕು ರೇಖೆ ಅಂದರೆ ವಕ್ರವ್ಯಾಪಾರದಿಂದ ಕೂಡಿರಬೇಕು. ವೃತ್ತಿ ಎಂದರೆ ವಾಚ್ಯ, ಲಕ್ಷ್ಯ ಮತ್ತು ವ್ಯಂಗ್ಯಾರ್ಥಗಳನ್ನು ಕೊಡುವ ಶಬ್ದದ ಸಾಮರ್ಥ್ಯ. ಅದನ್ನು ತನ್ನ ಕಾವ್ಯಕ್ಕಾಗಿ ಕವಿ ಬೇಡುತ್ತಾನೆ. ಅಂತಹ ಕಲಾನರ್ತಕಿಯನ್ನು, ಪಂಡಿತರ ಸ್ತೋತ್ರತೂರ್ಯಗಳೊಂದಿಗೆ ತನ್ನ ನಾಲಗೆಯ ತುದಿಯಲ್ಲಿ ನರ್ತಿಸುವುದಕ್ಕೆ ಕೋರುತ್ತಾನೆ. ಆ ಅಧ್ಯಾಯದ ಮತ್ತು ಕಾವ್ಯದ ಕೊನೆಗೆ ಕಲಾನರ್ತಕಿ ನೃತ್ಯ ಮಾಡುವ ರಂಗಭೂಮಿ ತನ್ನ ಕೃತಿ ಎನ್ನುತ್ತಾನೆ. ಕವಿಯ ಕೋರಿಕೆಯಂತೆ ಸರಸ್ವತಿಯು ನಾಲಗೆಯ ತುದಿಯಲ್ಲಿ ನರ್ತಿಸಿದ್ದರಿಂದಲೇ, ಕಲಾನರ್ತಕಿಯ ನರ್ತನಕ್ಕೆ ರಂಗಭೂಮಿಯಾಗುವಂತೆ ಆತನ ಕಾವ್ಯರಚನೆ ಮುಂದುವರಿಯುತ್ತಿದೆ; ಮುಂದುವರೆದು ನರ್ತನಕ್ಕೆ ಭೂಮಿಕೆಯೂ ಆಯಿತು ಎನ್ನಬಹುದಲ್ಲವೆ!?

---

121. ಅದೇ, 1-72

ಸರಸ್ವತಿಯ ನರ್ತನಕ್ಕೆ ವೇದಿಕೆಯಾದ ಕೃತಿಯನ್ನು 'ಕೃತಿಯುವತಿ' ಎಂದು ಕರೆದು, ಕಾವ್ಯಸರಸ್ವತಿಯ ವಿಶೇಷಣಗಳಿಂದ ಕೃತಿಯುವತಿಯನ್ನು ಹೊಗಳುತ್ತಾ ಹೆಮ್ಮೆಪಡುವ ಪದ್ಯ ಸೊಗಸಾಗಿದೆ.

ಲಳಿತಾಲಂಕಾರೆಯಂ ಚಾತುರವಚನೆಯನತ್ಯಾಯತೋತ್ಪ್ರೇಕ್ಷೆಯಂ ಕೋ
ಮಳೆಯಂ ವೃತ್ತಸ್ತನಾಕ್ರಾಂತೆಯನಖಿಲ ಕಲಾಪ್ರೌಢೆಯಂ ಕಾಮ ಕೇಳೀ
ಕಳೆಯೊಳ್ ಜಾಣ್ಬೆತ್ತುವಂದೀ ಕೃತಿಯುವತಿಯನಾರ್ ಕಂಡು ಕಣ್ಬೇಟದಿಂ ತಾ
ಮೊಳಗಾಗರ್ ಕೂರ್ತು ಕೇಳ್ದಾರ್ ಬಗೆವುಗೆ ಕಿವಿವೇಟಕ್ಕೆ ಪಕ್ಕಾಗದಿರ್ಪರ್॥[122]

ಲಲಿತವಾದ ಅಲಂಕಾರ, ಚತುರವಾದ ಮಾತುಗಳು, ಅತಿಸುಂದರವಾದ ಉತ್ಪ್ರೇಕ್ಷೆ, ಕೋಮಳೆ, ವೃತ್ತಾಕಾರದ ಸ್ತನ (ವೃತ್ತಾದಿ ಪದ್ಯಗಳನ್ನು), ಸಕಲಕಲಾಪ್ರೌಢಿಮೆ ಇವುಗಳೆಲ್ಲವನ್ನೂ ಸೊಗಸಾದ ಪಂಕ್ತಿಗಳ ತೇಜಸ್ಸಿನಲ್ಲಿ ಚಾತುರ್ಯದಿಂದ ಕಟ್ಟಿದಂತಿರುವ, ಕಾಮಕೇಳಿ ಕಲೆಯಲ್ಲಿ ಜಾಣತನವನ್ನು ಪಡೆದು ಬಂದ ಈ ಕೃತಿಸ್ವರೂಪದ ಯುವತಿಯನ್ನು ಕಂಡು ಕಣ್ಣಿನ ಆಕರ್ಷಣೆಗೆ ಯಾರು ಒಳಗಾಗುವುದಿಲ್ಲ? ಕುಳಿತು ಕೃತಿಯನ್ನು ಕೇಳಿದ ಯಾರ ಮನಸ್ಸು ಉತ್ಸಾಹಗೊಳ್ಳುವುದಿಲ್ಲ? ಅವರು ಕಿವಿಯಾಕರ್ಷಣೆಗೆ ಒಳಗಾಗದಿರುತ್ತಾರೆಯೇ? ಎಂದು ಪ್ರಶ್ನಿಸುತ್ತಾನೆ ಕವಿ. ಶೃಂಗಾರಪ್ರಧಾನವಾದ ಕೃತಿ ರಚನೆಗೆ ತೊಡಗಿಕೊಂಡ ಕವಿ, ಸರಸ್ವತಿಯನ್ನು ಕಾಮಸಂಜನನಿ ಎಂದು ಕರೆಯುವುದರಲ್ಲಿನ ಪ್ರಾರಂಭದ ಉತ್ಸಾಹ ಕೊನೆಯವರೆಗೂ, ತನ್ನ ಕೃತಿಯನ್ನು ಶೃಂಗಾರರಸಪೂರ್ಣವಾಗಿ ಸಿಂಗರಿಸುವವರೆಗೂ ವಿರಮಿಸುವುದಿಲ್ಲ. 'ಭಾರತೀಚಿತ್ತಚೋರ'ನಾದ ಕವಿ '**ತನ್ನ ಮುಖಚಂದ್ರಿಕೆಯು ಭಾರತಿಯ ಚಂದ್ರಿಕೆಯಂತೆ ಭೂಲೋಕವನ್ನು ನಿತ್ಯವೂ ಬೆಳಗಲಿ**'[123] ಎಂದು ಆಶಿಸುತ್ತಾನೆ.

ನೇಮಿಚಂದ್ರನು ತನ್ನ ಇನ್ನೊಂದು ಕಾವ್ಯ 'ನೇಮಿನಾಥಪುರಾಣ'ದಲ್ಲಿ ಪೌರಾಣಿಕ ಘಟನೆಯೊಂದರ ಮೂಲಕ ಸರಸ್ವತಿಯನ್ನು ಕಾಮಧೇನು ರೂಪದಲ್ಲಿ ಸ್ತುತಿಸಿದ್ದಾನೆ. ಋಗ್ವೇದ ಮತ್ತು ಬೃಹದಾರಣ್ಯಕಗಳ ಪರಿಶೀಲನೆಯಿಂದ ಸರಸ್ವತಿಗೆ ಕಾಮಧೇನು ಸ್ವರೂಪ ಇತ್ತೆಂಬುದನ್ನು ಈಗಾಗಲೇ ಗಮನಿಸಿದ್ದೇವೆ.

ಪರಮತಮತ್ತಹೈಹಯಮುಖಚ್ಯುತೆ ವಿಶ್ರುತ ಜೈನಶಾಸನಾ
ಮರಭುವನಪ್ರತಿಷ್ಠಿತೆ ರಸಾನುಭವೋಚಿತೆ ವತ್ಸಲತ್ವದಿಂ
ತೊರೆದ ಕುಚಂಬೊಲ್ ಒಪ್ಪುವ ಚತುರ್ವಿಧಭಾಷೆಯೊಳಂ ಸರಸ್ವತೀ
ಸುರಭಿ ನಿರಂತರಂ ಕಱೆಗೆ ಕಾಮಿತಮಂ ಕವಿರಾಜಮಲ್ಲನಾ[124]

ಪರಧರ್ಮದ ಮದದಿಂದ ಕೂಡಿದ ಹೈಹಯ ವಂಶದ ದೊರೆಗಳಿಂದ ದೂರವಾದವಳು, ಪ್ರಸಿದ್ಧವಾದ ಜೈನಧರ್ಮದ ಶಾಶ್ವತವಾದ ಲೋಕದಲ್ಲಿ ಪ್ರತಿಷ್ಠೆಗೊಂಡವಳು, ರಸಾನುಭವದಿಂದ

---

122. ಅದೇ, 14-147
123. ಅದೇ, 14-149
124. ನೇಮಿನಾಥ ಪುರಾಣ 1-3

ಔಚಿತ್ಯವನ್ನು ಪಡೆದವಳಾದ ಸರಸ್ವತಿಯು ವಾತ್ಸಲ್ಯ(ತಾಯಿ)ಭಾವದಿಂದ ತುಂಬಿದ ಕುಚಗಳಿಂದ ಹಾಲನ್ನು ಕರೆಯುವ ಸುರಭಿ(ಕಾಮಧೇನು)ಯಂತೆ ನಾಲ್ಕುಭಾಷೆಯಲ್ಲಿಯೂ ಕವಿರಾಜಮಲ್ಲನಾದ ನೇಮಿನಾಥನ ಇಷ್ಟಾರ್ಥವನ್ನು ಸದಾ ನೆರವೇರಿಸುತ್ತಿರಲಿ ಎಂಬುದು ನೇಮಿನಾಥನ ಪ್ರಾರ್ಥನೆ. ಆತನಿಗೆ ನಾಲ್ಕುಭಾಷೆಗಳಲ್ಲಿ ಪರಿಶ್ರಮವಿತ್ತೆಂದು ಊಹಿಸಲು ಸಾಧ್ಯವಿದೆ. ಜೈನಮತಕ್ಕನುಗುಣವಾಗಿ ಸರ್ವಭಾಷಾಮಯಿಯಾದ ಸರಸ್ವತಿಯನ್ನು ನಾಲ್ಕೂ ಭಾಷೆಗಳಲ್ಲಿ ಇಷ್ಟಾರ್ಥವನ್ನು ನೆರವೇರಿಸುವಂತೆ ಕೋರಿರುವುದು ಸಮಂಜಸವಾಗಿದೆ. ಸರಸ್ವತಿಯನ್ನು ಸುರಭಿ ಎಂಬ ಧೇನುವಿಗೆ ಹೋಲಿಸಿರುವುದಕ್ಕೆ ಸರಸ್ವತಿಗಿರುವ ಕಾಮಧೇನು ಸ್ವರೂಪವೂ ಕಾರಣ. ಹೈಹಯವಂಶದ ದೊರೆಯಾದ ಕಾರ್ತವೀರ್ಯನು ಜಮದಗ್ನಿಯ ಆಶ್ರಮದಲ್ಲಿದ್ದ ಕಪಿಲೆ ಎಂಬ ಹೋಮಧೇನುವನ್ನು ಬಯಸಿ ಅಪಹರಿಸಿದರೂ ಅದು ಆತನಿಗೆ ದಕ್ಕಲಿಲ್ಲ.[125] 'ಹೈಹಯಮುಖಚ್ಯುತೆ' ಎಂಬ ಮಾತು ಮೇಲಿನ ಕಥೆಯಿಂದ ಪ್ರೇರಿತವಾಗಿರುವಂತಿದೆ. ಪರಮತಮತ್ತನಾದ ಹೈಹಯನಿಗೆ ಒಲಿಯದೇ ಪ್ರಸಿದ್ಧವಾದ ಜೈನಧರ್ಮದ ಶಾಶ್ವತವಾದ ಲೋಕದಲ್ಲಿ ಪ್ರತಿಷ್ಠಾಪಿತಳಾಗಿದ್ದಾಳೆ ಎಂಬುದು ಜೈನಧರ್ಮೀಯನಾದ ನೇಮಿನಾಥನ ಕಲ್ಪನೆ.

ಬಂಧುವರ್ಮ (ಸುಮಾರು ಕ್ರಿ.ಶ. 1200)

ನೇಮಿಚಂದ್ರ ಸರಸ್ವತಿಯನ್ನು ಕಾಮಸಂಜನನಿ ಎಂದು ಕರೆದಿದ್ದರೆ, ಬಂಧುವರ್ಮ 'ಕಾಮಕಳಾನಿತಂಬಿನಿ' ಎಂದು ಕರೆದಿರುವ 'ಹರಿವಂಶಾಭ್ಯುದಯಂ' ಕಾವ್ಯದಲ್ಲಿ ಬಂದಿರುವ ಸರಸ್ವತಿಯ ಸ್ತುತಿ, ಸರಸ್ವತಿಯ ಚೆಲುವು, ಸಾಮರ್ಥ್ಯಗಳಿಗೆ ಹಲವಾರು ವಿಶೇಷಣಗಳನ್ನೂ ಹೇಳಿದೆ.

ಕಾಮಕಳಾನಿತಂಬಿನಿಯೆ ಪಾದಪಯೋಧರಯುಗ್ಮೆ ನಾಟ್ಯವಿ
ದ್ಯಾಮುಖಿ ರಾಜನೀತಿ ಪದಲಕ್ಷಣ ಲೋಚನೆ ಸಾರಹಸ್ತೆ ಧ
ರ್ಮಾಮೃತವಾಕ್ಯೆ ಕಾವ್ಯರಸಭಾವೆ ಸರಸ್ವತಿ ಬಂಧುವರ್ಮ ವ
ಕ್ತ್ರಾಮಳ ಕೋಮಳಾಂಬುರುಹದೊಳ್ ನೆಲಸಿರ್ಕೆ ಮನೋನುರಾಗದಿಂ॥[126]

ಸುಂದರವಾದ, ಕಲಾತ್ಮಕವಾದ ಕಟಿಪ್ರದೇಶವನ್ನುಳ್ಳ ಚೆಲುವೆ, ಪ್ರಕಾಶಮಾನವಾದ ಸ್ತನದ್ವಯವನ್ನುಳ್ಳವಳು (ಅಥವಾ ಪಾದದ್ವಯ ಮತ್ತು ಸ್ತನದ್ವಯವನ್ನುಳ್ಳವಳು) ಎಂಬ ವಿಶೇಷಣಗಳು ಸರಸ್ವತಿಯ ಸೌಂದರ್ಯವನ್ನು ಕಟ್ಟಿಕೊಟ್ಟರೆ, ನಾಟ್ಯವಿದ್ಯೆಯಲ್ಲಿ ನಿರತಳಾಗಿರುವವಳು ಎಂಬ ವಿಶೇಷಣ ನಾಟ್ಯಸರಸ್ವತಿಯನ್ನು ಸಂಕೇತಿಸುತ್ತದೆ. ಸರಿಯಾದ ರಾಜನೀತಿಯನ್ನು ಪ್ರಕಟಪಡಿಸುವವಳು, ಉದಾರಿ

---

125. ಪುರಾಣಭಾರತಕೋಶ, ಪು.111-112

126. ಹರಿವಂಶಾಭ್ಯುದಯಂ, 1-8

ಎಂಬ ಮಾತುಗಳು, ಸರಸ್ವತಿಯ ಸಾಮರ್ಥ್ಯವನ್ನು ತೋರಿಸುತ್ತವೆ. ಮಾತನ್ನೇ ಧರ್ಮಾಮೃತವನ್ನಾಗಿ ಉಳ್ಳವಳು ಎಂಬುದು ವಾಗ್ದೇವಿಯನ್ನು, ಕಾವ್ಯಕ್ಕೆ ರಸಭಾವವನ್ನು ಉಂಟುಮಾಡುವವಳು ಎಂಬುದು ಕಾವ್ಯಸರಸ್ವತಿಯನ್ನು ಧ್ವನಿಸುತ್ತದೆ. ಅಂತಹ ಸರಸ್ವತಿಯಾದ ನೀನು ಮನೋನುರಾಗದಿಂದ ಬಂಧುವರ್ಮನ ಕೋಮಲವಾದ ಮುಖಕಮಲದಲ್ಲಿ ನೆಲಸು ಎಂಬುದು ಕವಿಯ ಪ್ರಾರ್ಥನೆ. ಇನ್ನೊಂದು ಪದ್ಯದಲ್ಲಿ ಕಾವ್ಯ ಮತ್ತು ಸರಸ್ವತಿಯರನ್ನು ಒಟ್ಟಿಗೆ ಶ್ಲೇಷೆಯಿಂದ ಹೊಗಳಿದ್ದಾನೆ.

ಪದ್ಯಾಂಗಿ ವಚನೆ ಸನ್ಮುಖಿ
ಗದ್ಯ ಮಹಾರಚನೆ ವಿಳಸದುಭಯಾಳಂಕಾ
ರೋದ್ಯತ್ಕುಚೆ ಮತ್ಕೃತಿವಧು
ವಿದ್ಯಾವಿಜ್ಜನದ ಮನದೊಳಿರೆ ವಿರಚಿಸುವೆಂ॥[127]

ಪದ್ಯ ವಚನಗಳನ್ನು ಹೊಂದಿರುವ (ಚಂಪೂ) ಸನ್ಮುಖಿ ಸರಸ್ವತಿ, ಗದ್ಯಪದ್ಯಗಳೆರಡಕ್ಕೂ ನಿನ್ನ ಕುಚದ್ವಯಗಳಂತೆ ಅಲಂಕಾರಪ್ರಾಯವಾಗಿರುವ ಅಲಂಕಾರಗಳನ್ನು ಹೊಂದಿರುವ, ವಿದ್ವಜ್ಜನರ ಮನಸ್ಸಿನಲ್ಲಿರುವ ವಿದ್ಯೆಯೆಂಬ ಕೃತಿವಧುವನ್ನು ರಚಿಸುತ್ತೇನೆ ಎಂದು ಕಾವ್ಯವನ್ನು ಕೃತಿವಧುವಿಗೆ ಹೋಲಿಸಿದೆ. ತಾನು ಬರೆಯುತ್ತಿರುವುದು ಗದ್ಯಪದ್ಯಗಳಿಂದ ಕೂಡಿದ ಚಂಪೂಕಾವ್ಯ ಎಂಬುದನ್ನು ಸುತ್ತಿ ಬಳಸಿ ಸರಸ್ವತಿಯ ಕುಚವರ್ಣನೆಯ ಮೂಲಕ ಹೇಳುವ ಚಮತ್ಕೃತಿ ಇಲ್ಲಿ ಕಾಣುತ್ತದೆ.

'ಜೀವಸಂಬೋಧನೆ' ಬಂಧುವರ್ಮನ ಇನ್ನೊಂದು ಕಾವ್ಯ. ನಿಜವಾದ ಕಾವ್ಯಾಸಕ್ತನಾದ, ಒಳ್ಳೆಯವನಾದ ನನ್ನನ್ನು ಸರಸ್ವತಿಯು ಆಶ್ರಯಿಸಿದ್ದಾಳೆ ಎಂದು ಹೆಮ್ಮೆ ಪಟ್ಟುಕೊಂಡಿದ್ದಾನೆ.

ಅನುಪಮ ಕಾವ್ಯಧರ್ಮದಱಿವಿಲ್ಲದನಂ ಜಡನೆಂದು ಪಾಪಕ
ರ್ಮನ ದೆಸೆವೊಲ್ಲೆನೆಂದು ಪುಸಿವಾತನನೇಟಿದನೆಂದು ಕಾವ್ಯಚೋ
ರನನುಜಿದೇವೆನೆಂದು ಮನಸಂದು ಸರಸ್ವತಿ ಬಂದು ಬಂಧುವ
ರ್ಮನ ಮುಖಪದ್ಮದೊಳ್ ನೆಲಸಿ ನಿಂದು ವಿರಾಜಿಸುತಿರ್ಕೆ ರಾಗದಿಂ॥[128]

ಅನುಪಮವಾದ ಕಾವ್ಯಧರ್ಮದ ತಿಳುವಳಿಕೆಯಿಲ್ಲದವನನ್ನು ಜಡನೆಂದು, ಪಾಪಕರ್ಮನಾದವನ ಗೊಡವೆಯನ್ನೇ ಒಲ್ಲೆನೆಂದು, ಸುಳ್ಳು ಹೇಳುವವನನ್ನು ತಿರಸ್ಕರಿಸಿದನೆಂದು, ಕಾವ್ಯಚೋರನನ್ನು ಲೆಕ್ಕಿಸುವುದಿಲ್ಲವೆಂದು, ಸರಸ್ವತಿಯು ಮನಃಪೂರ್ವಕವಾಗಿ ಪ್ರೇಮದಿಂದ ಬಂದು ಬಂಧುವರ್ಮನ ಮುಖಕಮಲದಲ್ಲಿ ವಿರಾಜಿಸುತ್ತಿದ್ದಾಳೆ. ನಾಗಚಂದ್ರನ 'ಸರಸ್ವತೀಲಾಸ್ಯ ಭೇದಮಂ ಜಡನಱಿಯಂ' ಎಂಬ ಮಾತನ್ನು 'ಅನುಪಮ ಕಾವ್ಯಧರ್ಮದಱಿವಿಲ್ಲದನಂ ಜಡನೆಂದು' ಕರೆಯುವರು ಎಂಬುದು ನೆನಪಿಸುತ್ತದೆ. ಕಾವ್ಯಚೋರರನ್ನು, ಸುಳ್ಳು ಹೇಳುವವರನ್ನು ತಿರಸ್ಕರಿಸಬೇಕೆಂಬುದು ಕವಿಯ ಆಶಯ. ಅದೂ ಒಂದು ರೀತಿಯಲ್ಲಿ ಸರಸ್ವತಿಯ ಸೇವೆಯೇ!

---

127. ಅದೇ, 1-9

128. ಜೀವಸಂಬೋಧನೆ 1-6

ಕವಿಕಾಮ(ದೇವ) (ಸುಮಾರು ಕ್ರಿ.ಶ. 1200)

ಕವಿಕಾಮನ 'ಶೃಂಗಾರರತ್ನಾಕರ' ಹೆಸರೇ ಸೂಚಿಸುವಂತೆ ಶೃಂಗಾರ ರಸಾತ್ಮಕವಾದ ಕಾವ್ಯ. ಶೃಂಗಾರಪ್ರಧಾನವಾದ ಕಾವ್ಯದಲ್ಲೂ ಸಂಸಾರ ಸಂಭಾವಿತಾತ್ಮೆಯಾಗಿ ಸರಸ್ವತಿಯನ್ನು ಸ್ತುತಿಸಿರುವ ರೀತಿ ನವೀನವಾಗಿದೆ. ಸಂಸಾರದ ಯಶಸ್ಸಿಗೆ ಶೃಂಗಾರವೆಂಬುದೊಂದು ಮಾರ್ಗವಲ್ಲವೆ?!

ನಿಯತಾರ್ಥಂ ಶ್ರುತಂ ಆ ಶ್ರುತವ್ಯಸನದಿಂದ ಜ್ಞಾನಂ ಆ ಜ್ಞಾನನಿ
ರ್ಣಯದಿಂದಂ ಚತುರತ್ವ ಆ ಚತುರತಾಸದ್ವೃತ್ತಿಯಿಂ ನೀತಿ ನೀ
ತಿಯಿಂ ಆದಂ ಸುಖಮಕ್ಕುಂ ಎಂಬರ್ ಅದಱಿಂ ಸಂಸಾರಸಂಭಾವಿತಾ
ತ್ಮೆಯೆ ಆ ವಾಗ್ವಧು ತಾನೆ ಸನ್ನಿಹಿತೆಯಕ್ಕೆ ಎನ್ನೀ ಮುಖಾಂಭೋಜದೊಳ್॥[129]

ನಿಶ್ಚಿತವಾದ ಅರ್ಥವೇ ಶ್ರುತಿ (ವೇದ), ವೇದಾಧ್ಯಯನದಿಂದ ಜ್ಞಾನ, ಜ್ಞಾನದಿಂದ ನಿರ್ಣಯವಾಗುವುದು ಚತುರತೆ ಅಂದರೆ ವಿವೇಕ, ವಿವೇಕದ ಸದ್ಬಳಕೆಯಿಂದ ನೀತಿ (ಬಾಳ್ವೆಗೆ ಬೇಕಾಗುವಂತಹ ಮಾರ್ಗ), ಅದರಿಂದ ಸುಖ ಸಂತೋಷ ಉಂಟಾಗುತ್ತದೆ. ಆದ್ದರಿಂದ ಸಂಸಾರಸಂಭಾವಿತಾತ್ಮೆಯಾದ ವಾಗ್ವಧು (ಸರಸ್ವತಿ) ನನ್ನ ಮುಖಕಮಲದಲ್ಲಿ ನೆಲಸಲಿ ಎಂಬುದು ಕವಿಕಾಮನ ಆಶಯ. 'ಸಂಸಾರಸಂಭಾವಿತಾತ್ಮೆ' ಎಂಬ ಮಾತು ಕಾವ್ಯದ, ತನ್ಮೂಲಕ ಸರಸ್ವತಿಯ ಮಹತ್ವವನ್ನು ಪ್ರಕಟಿಸುತ್ತದೆ. ಈ ಕವಿಯ ಸಮಕಾಲಿನರಾದ ನೇಮಿಚಂದ್ರ ಮತ್ತು ಬಂಧುವರ್ಮರಿಬ್ಬರೂ ಸರಸ್ವತಿಯನ್ನು, 'ಕಾಮಸಂಜನನಿ' 'ಕಾಮಕಳಾನಿತಂಬಿನಿ' ಎಂದು ವರ್ಣಿಸಿರುವುದನ್ನು ನೋಡಿದ್ದೇವೆ. ಕವಿಗಳ ದೃಷ್ಟಿಯಲ್ಲಿ ಸರಸ್ವತಿಯು ಪ್ರೇರೇಪಿಸುವ ಕಾಮ ವಿಕೃತದ್ದಲ್ಲ; ಸುಕೃತದ್ದು. ಸಂಸಾರದಲ್ಲಿ ತಲೆದೋರುವ ದೋಷಗಳನ್ನು ಗುಣಗಳಂತೆ ಕಾಣಿಸುವಂತದ್ದು. ಸಂಸಾರವೆಂಬುದು ಕಾಟಾಚಾರಕ್ಕೆ ನಡೆಸುವ ಬದುಕಿನ ಆಟವಲ್ಲ. ಅದರ ಯಶಸ್ಸಿಗೆ ವಿವೇಕ ಜಾಣ್ಮೆ ಸನ್ಮಾರ್ಗ ಮುಂತಾದವುಗಳ ಅಗತ್ಯವಿದೆ. ಆದರೆ ಅವೆಲ್ಲ ಸಿಗುವುದು ಎಲ್ಲಿ? ಸರಸ್ವತಿಯ ಅವತಾರವೆನಿಸಿರುವ ವೇದಗಳಲ್ಲಿ, ಶ್ರುತಿಗಳಲ್ಲಿ, ಕಾವ್ಯಗಳಲ್ಲಿ. ಸಂಸಾರದ ಬಾಳಿಕೆಗೆ, ಆನಂದಕ್ಕೆ (ಸಾಹಿತ್ಯ)ಸರಸ್ವತಿಯ ಆಶೀರ್ವಾದ ಬೇಕೇ ಬೇಕು. ಈ ದೃಷ್ಟಿಯಿಂದ, ನೇಮಿಚಂದ್ರ ಮತ್ತು ಬಂಧುವರ್ಮರ ಕಲ್ಪನೆಯನ್ನು ಹಿಗ್ಗಿಸಿ, ಸರಸ್ವತಿಯನ್ನು 'ಸಂಸಾರಸಂಭಾವಿತಾತ್ಮೆ'ಯನ್ನಾಗಿಸಿದ ಕವಿಕಾಮ ದೂರದೃಷ್ಟಿಯುಳ್ಳವನು ಎನ್ನಬಹುದು.

ಜನ್ನ ಕ್ರಿ.ಶ. 1222)

ಕವಿಚಕ್ರವರ್ತಿತ್ರಯರಲ್ಲಿ ಒಬ್ಬನಾದ ಜನ್ನನು 'ಯಶೋಧರ ಚರಿತ್ರೆ'ಯ ಪ್ರಾರಂಭದಲ್ಲಿ ಸರಸ್ವತಿಯನ್ನು ಸ್ತುತಿಸಿಲ್ಲ. ಆದರೆ, ಸರಸ್ವತಿಗೆ ತನ್ನ ಮೇಲೆ ವಿಶೇಷ ಪ್ರೀತಿ ಎಂದು ಹೇಳಿಕೊಂಡಿದ್ದಾನೆ.

---

129. ಮುಗಳಿ ರಂ.ಶ್ರೀ. : ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ, ಪು.23 (ಉದ್ಧೃತ)

ವಾಣಿ ಪಾರ್ವತಿ ಮಾಡಿದ
ಜಾಣೆಂತುಟೊ ಭಾಳಲೋಚನಂ ಕವಿಸುಮನೋ
ಬಾಣನ ಮಗನೆಂದಖಿಳ
ಕ್ಷೋಣಿಗೆ ಪೆಸರಾಯ್ತು ಕೂರ್ಮೆಗಿದು ಕೌತುಕಮೇ॥[130]

ಸರಸ್ವತಿ ಮತ್ತು ಪಾರ್ವತಿಯರು ಸೇರಿ ಮಾಡಿದ ಜಾಣತನದಿಂದ ಭಾಳಲೋಚನನು (ಜನ್ನನು) ಕವಿಸುಮನೋಬಾಣನ ಮಗನೆಂದು ಅಖಿಲಕ್ಷೋಣಿಗೆ ಹೆಸರಾಯ್ತು; ಈ ಪ್ರೀತಿಗೆ ಆಶ್ಚರ್ಯವೇಕೆ? ಎನ್ನುತ್ತಾನೆ ಜನ್ನ.

'ಯಶೋಧರ ಚರಿತ್ರೆ'ಯ ಕೊನೆಯ ಪದ್ಯದಲ್ಲಿ ಆತ ಸರಸ್ವತಿಯನ್ನು ಪ್ರಾರ್ಥಿಸಿರುವ ರೀತಿ ಅನನ್ಯವಾಗಿದೆ.

ಪರಮಜಿನೇಂದ್ರಶಾಸನವಸಂತದೊಳೀ ಕೃತಿಕೋಕಿಲಸ್ವನಂ
ಪರೆಗಸಹಾಯಶೂರನ ಭುಜಕ್ಕೆ ಜಯಂ ಸಮಸಲ್ಗೆ ಸಂತತಂ
ಪರಿಮಳದಂತೆ ವಾಣಿ ನೆಲಸಿರ್ಕೆ ವಿಕಾಸವಿಲಾಸದಂತೆವೊಲ್
ಸಿರಿ ನೆರೆದಿರ್ಕೆ ನಾಟ್ಯಪ್ರಭು ಜನಾರ್ದನದೇವನ ವಕ್ತ್ರಪದ್ಮದೊಳ್॥[131]

ಪರಮಜಿನೇಂದ್ರನ ಶಾಸನ ಅಂದರೆ ಮಾತು ಅಥವಾ ಆಜ್ಞೆ ಎಂಬ ವಸಂತದಲ್ಲಿ ಜನ್ನನ ಕಾವ್ಯವೆಂಬ ಕೋಗಿಲೆಯ ಧ್ವನಿ ಕೇಳಲಿ ಎಂಬುದು ಕವಿಯ ಆಶಯ. 'ನಾಟ್ಯಪ್ರಭು ಜನಾರ್ದನದೇವನ ವಕ್ತ್ರಪದ್ಮದೊಳ್ ಪರಿಮಳದಂತೆ ವಾಣಿ ನೆಲಸಿರ್ಕೆ' ಎಂಬ ಮಾತು ನವೀನವಾಗಿದೆ. ಈಗಾಗಲೇ ನಾವು ಗಮನಿಸಿರುವಂತೆ ಕೆಲವು ಕವಿಗಳು 'ಸರಸ್ವತಿಯೇ ತಮ್ಮ ಮುಖಕಮಲದಲ್ಲಿ ನೆಲಸಲಿ' ಎಂದು ಪ್ರಾರ್ಥಿಸಿರುವುದುಂಟು. ಅವುಗಳಿಗಿಂತ, 'ಸರಸ್ವತಿಯು ತನ್ನ ಮುಖಕಮಲದಲ್ಲಿ ಪರಿಮಳದಂತೆ ನೆಲಸಿರಲಿ' ಎಂದು ಪ್ರಾರ್ಥಿಸಿರುವ ಜನ್ನನ ಕಲ್ಪನೆ ನವೀನವಾಗಿದೆ.

ಜನ್ನ 'ಅನಂತನಾಥಪುರಾಣ' ಕಾವ್ಯದಲ್ಲಿ ಸರಸ್ವತಿಯನ್ನು 'ಜಿನೇಂದ್ರವಾಗ್ವನಿತೆ' ಎಂದು ಸ್ತುತಿಸಿದ್ದಾನೆ.

ಪದವಿನ್ಯಾಸ ವಿಶೇಷದೊಳ್ ಪದವಿಲಾಸಂ ಸೊಂಪುವೆತ್ತಿರ್ದ ಕಾ
ವ್ಯದ ಮೆಯ್ಯೊಳ್ ಸಮುದಾಯಶೋಭೆ ವಿನುತಸ್ಯಾದರ್ಥದೊಳ್ ಮಧ್ಯ ಭಾ
ಗದ ಕಾಶ್ಯಂ ನಯಯುಗ್ಮದೊಳ್ ನಯನಭಾವಂ ಭಂಗಿಯಂ ತಾಳ್ದಿ ಸ
ನ್ನಿಧಿಯಾಗಿರ್ದ ಜಿನೇಂದ್ರವಾಗ್ವನಿತೆ ನಿಲ್ಕನ್ಮನ್ಮುಖಾಂಭೋಜದೊಳ್॥[132]

'ಜಿನೇಂದ್ರ ವಾಗ್ವನಿತೆ' ಎಂಬುದು ಪಂಪನ 'ಪರಮಜಿನೇಂದ್ರವಾಣಿಯೆ ಸರಸ್ವತಿ' ಎಂಬ ಪರಿಕಲ್ಪನೆಯಂತೆಯೇ ಇದೆ. ಪದಗಳ ವಿನ್ಯಾಸ ಮತ್ತು ವಿಶೇಷದಲ್ಲಿ ಪದಗಳ ವಿಲಾಸ ಮತ್ತು

---

130. ಯಶೋಧರ ಚರಿತ್ರೆ, 1-23
131. ಅದೇ, 4-87
132. ಅನಂತನಾಥಪುರಾಣಂ, 1-7

ಸಮೃದ್ಧಿಯಾಗಿರುವ ತನ್ನ ಕಾವ್ಯಕ್ಕೆ ಸಮುದಾಯ ಶೋಭೆಯನ್ನು ಸರಸ್ವತಿಯು ನೀಡಬೇಕೆಂದು ಪ್ರಾರ್ಥಿಸಿರುವುದು ಹೊಸದಾಗಿದೆ. ಕಾವ್ಯವು ಕವಿಯ ರಚನೆಯಾದರೂ, ಒಂದು ಜನಾಂಗದ ಸಮುದಾಯದ ಅಭಿವ್ಯಕ್ತಿಯಾಗಿರುತ್ತದೆ. ಆದ್ದರಿಂದ ಕಾವ್ಯಕ್ಕೆ ಸಮುದಾಯದ ಮನ್ನಣೆ ಅಗತ್ಯವಾಗಿರುತ್ತದೆ. ಈ ದೃಷ್ಟಿಯಿಂದ ಜನ್ನನ ಬೇಡಿಕೆ ನ್ಯಾಯಸಮ್ಮತವೂ ನವೀನವೂ ಆಗಿದೆ. ಹೊಸದಂಪತಿಗಳ ಕಣ್ಣಿನ ಭಾವಕ್ಕೂ ಭಂಗಿಗೂ ಆಶ್ರಯಸ್ಥಾನವಾಗಿರುವವಳು ಎಂಬುದಂತೂ ಅತ್ಯಂತ ಹೊಸ ಕಲ್ಪನೆ. ಅಂತಹ ಜಿನೇಂದ್ರವಾಗ್ವನಿತೆಯಾದ ಸರಸ್ವತಿಯು ತನ್ನ ನಗುಮುಖಕಮಲದಲ್ಲಿ ನಿಲ್ಲಬೇಕು ಎಂಬುದು ಜನ್ನನ ಪ್ರಾರ್ಥನೆ. ಗ್ರಂಥರಚನೆಯ ಕಾಲದ ದೃಷ್ಟಿಯಿಂದ, ಕ್ರಿ.ಶ.1209ರಲ್ಲಿ ರಚಿತವಾದ 'ಯಶೋಧರ ಚರಿತ್ರೆ'ಯಲ್ಲಿ, ವಾಣಿ ಪರಿಮಳದಂತೆ ತನ್ನ ಮುಖಕಮಲದಲ್ಲಿ ನೆಲಸಲಿ ಎಂದು ನವೀನ ಕಲ್ಪನೆಯನ್ನು ಸೃಷ್ಟಿಸಿದ್ದ ಜನ್ನ, ಕ್ರಿ.ಶ.ಸುಮಾರು 1230ರ ರಚನೆಯಾದ 'ಅನಂತನಾಥಪುರಾಣ'ದಲ್ಲಿ 'ವಾಗ್ದೇವಿಯು ತನ್ನ ಮುಖಕಮಲದಲ್ಲಿ ನೆಲಸಲಿ' ಎಂಬ ಕವಿಸಮಯದ ಸಾಂಪ್ರದಾಯಿಕ ಜಾಡನ್ನೇ ಹಿಡಿದಿರುವುದು ಆಶ್ಚರ್ಯವಾಗಿದೆ. 'ವಾಗ್ದೇವಿಯು ತನ್ನ ಮುಖಕಮಲದಲ್ಲಿ ನೆಲಸಲಿ' ಎಂದು ಪ್ರಾರ್ಥಿಸಿದ ಜನ್ನ ಮುಂದುವರೆದು, ತನ್ನ ಮುಖಕಮಲವನ್ನು ಸಮೀಪಿಸಿದ್ದರಿಂದಲೇ ಸರಸ್ವತಿಗೆ ವಿಶ್ವಭೂಚಕ್ರದಲ್ಲಿ ಸ್ಥಾನ ಸಿಕ್ಕಿತೆಂದು ಹೆಮ್ಮೆ ಪಟ್ಟುಕೊಳ್ಳುತ್ತಾನೆ.

> **ಚತುರಂ ನೀಜನುದಾರನುಜ್ವಲ ಯಶಂ ಸೌಭಾಗ್ಯಸಂಪನ್ನನೂ**
> **ರ್ಜಿತ ಪುಣ್ಯೋದಯನೀ ಜನಾರ್ದನನ ವಕ್ತ್ರಾಂಭೋಜಮಂ ಸಾರ್ದು ಸು**
> **ಸ್ಥಿತೆಯಾಗಿರ್ದುದಱಿಂದೆ ತಾ ಸೊಬಗೆಯಾದಳ್ ಜಾಣೆಯಾದಳ್ ಸರ**
> **ಸ್ವತಿ ಸಮ್ಮೋಹಿತೆಯಾದಳಗ್ಗಳೆಯೆಯಾದಳ್ ವಿಶ್ವಭೂಚಕ್ರದೊಳ್॥**[133]

ಚತುರನೂ ಸುಂದರನೂ ಉದಾರನೂ ಉಜ್ವಲನೂ ಯಶವಂತನೂ ಸೌಭಾಗ್ಯಸಂಪನ್ನನೂ ಏಳಿಗೆ ಹೊಂದಿದ ಪುಣ್ಯೋದಯನೂ ಆದ ಜನ್ನನ ಮುಖಕಮಲವನ್ನು ಸಮೀಪಿಸಿ, ಅಲ್ಲಿ ಸುಸ್ಥಿರವಾಗಿ ನಿಂತಿದ್ದರಿಂದಲೇ ಸರಸ್ವತಿಗೆ, ಈ ವಿಶ್ವಭೂಚಕ್ರದಲ್ಲಿ ಸೊಬಗು, ಜಾಣತನ ಹಾಗೂ ಆಕರ್ಷಣೆಯುಂಟಾಯಿತು ಮತ್ತು ಅವುಗಳಿಂದಾಗಿ ಅವಳ ಶ್ರೇಷ್ಠತೆ ಹೆಚ್ಚಿತು ಎಂಬುದು ಜನ್ನಕವಿಯ ಸ್ವಸ್ತುತಿ. ಆದರೆ, ಕಾವ್ಯದ ಇನ್ನೆರಡು ಪದ್ಯಗಳಲ್ಲಿ ಜನ್ನ, **ಸಾಹಿತ್ಯನಟಿ**[134]ಯೂ **ವಚಶ್ರೀ**[135]ಯೂ ತನ್ನ ಮುಖತಿಲಕವನ್ನು ಅಲಂಕರಿಸಲಿ ಎನ್ನುತ್ತಾನೆ. 'ಸಾಹಿತ್ಯನಟಿ' ಎಂಬುದು ನಾಗಚಂದ್ರನ 'ವಿದ್ಯಾನಟಿ'ಯ ಇನ್ನೊಂದು ಅವತಾರದಂತಿದೆ.

ಕವಿಯು ಬೆಳೆದಂತೆ ಆತನ ಆತ್ಮವಿಶ್ವಾಸವೂ ಹೆಚ್ಚುತ್ತಾ ಹೋಗುತ್ತದೆ ಎಂಬುದಕ್ಕೆ ಜನ್ನನ ಸರಸ್ವತೀ ದರ್ಶನ ಒಂದು ಉತ್ತಮ ಉದಾಹರಣೆ. ಪ್ರಾರಂಭದಲ್ಲಿ, ಸರಸ್ವತಿಯು ತನ್ನ ಮುಖಕಮಲದಲ್ಲಿ

---

133. ಅದೇ, 1-51
134. ಅದೇ, 2-1
135. ಅದೇ, 8-1

ಪರಿಮಳದಂತೆ ವ್ಯಾಪಿಸಿರಲಿ ಎಂದಿದ್ದ ಜನ್ನ, ನಂತರ ನನ್ನ ಮುಖಕಮಲದಲ್ಲಿ ನೆಲಸಲಿ ಎನ್ನುತ್ತಾನೆ. ಕವಿಯ ಪ್ರೌಢಿಮೆ ಹೆಚ್ಚಿದಂತೆ, ಕೀರ್ತಿ ಶಿಖರವನ್ನು ಏರಿದಂತೆ, ಆತನ ಆತ್ಮವಿಶ್ವಾಸ ವೃದ್ಧಿಸಿದಂತೆ, ಜನ್ನ 'ತನ್ನಿಂದಲೇ ಸರಸ್ವತಿಗೆ ವಿಶ್ವಭೂಚಕ್ರದಲ್ಲಿ ಶ್ರೇಷ್ಠತೆ ಹೆಚ್ಚಾಗಿದೆ' ಎಂದು ಭಾವಿಸುತ್ತಾನೆ. ಮೇಲ್ನೋಟಕ್ಕೆ ಇದು ಹುಂಬತವೆನಿಸಬಹುದು. ಆದರೆ ಅದು ಹುಂಬತನವಾಗಿರದೆ, ಬಡಾಯಿಯಾಗಿರದೆ, ಸಶಕ್ತ ಕವಿಯೊಬ್ಬನ ಆತ್ಮವಿಶ್ವಾಸದ ನುಡಿಗಳಾಗಿವೆ ಎಂಬುದನ್ನು ಗಮನಿಸಬೇಕು. ಪ್ರತಿಯೊಂದು ಶ್ರೇಷ್ಠ ಸಾಹಿತ್ಯಕೃತಿಯೂ ಸರಸ್ವತಿಯ ಅವತಾರವೇ ಆಗಿರುತ್ತದೆ. ಹೀಗೆ ಎತ್ತಿದ ಹೊಸ ಅವತಾರಗಳೆಲ್ಲವೂ ಸರಸ್ವತಿಯ ಶ್ರೇಷ್ಠತೆಯನ್ನು ಹೆಚ್ಚಿಸುತ್ತಲೇ ಇರುತ್ತವೆ. ಆತನ ಸಾಹಿತ್ಯನಟಿ ಎಂಬ ಕಲ್ಪನೆಯೂ ಅದನ್ನೇ ಪುಷ್ಟೀಕರಿಸುತ್ತದೆ.

ರಾಘವಾಂಕ (ಸುಮಾರು ಕ್ರಿ.ಶ. 1225)

ಸಾಹಿತ್ಯನಿರ್ಮಿತಿಯ ವಿಷಯದಂತೆಯೇ, ಸರಸ್ವತಿಯ ವಿಷಯದಲ್ಲೂ ಹರಿಹರನು ಹೊಸ ಮಾರ್ಗವೊಂದನ್ನು ಸೃಷ್ಟಿಸಿಬಿಟ್ಟಿದ್ದಾನೆ. ಏಕೆಂದರೆ, ಹರಿಹರನ ನಂತರ ಬಂದ ಯಾವುದೇ ವೀರಶೈವ ಕವಿಯೂ ಸರಸ್ವತಿಯನ್ನು ಸ್ತುತಿಸಿರುವುದಿಲ್ಲ. ಆದರೆ, ತಮ್ಮ ಕಾವ್ಯಗಳಲ್ಲಿ ಸಾಂದರ್ಭಿಕವಾಗಿ ಸರಸ್ವತಿಯ ಹೆಸರನ್ನಷ್ಟೇ ಉಲ್ಲೇಖಿಸುತ್ತಾರೆ. ಈ ಮಾತಿಗೆ ಷಟ್ಪದಿಯಬ್ರಹ್ಮ ಎಂದು ಖ್ಯಾತನಾದ ರಾಘವಾಂಕನೂ ಹೊರತಲ್ಲ. 'ಹರಿಶ್ಚಂದ್ರಕಾವ್ಯ'ದ ಮೊದಲ ಪದ್ಯದಲ್ಲಿ **'.... ವಾಣೀಪತಿಗೆ ಚಾತುರ್ಯಮಂ... .... ಕೊಟ್ಟ ಗುರುಮೂರ್ತಿ ಪಂಪಾಪತಿ ವಿರೂಪಾಕ್ಷನೆಮಗಿಷ್ಟಸಿದ್ಧಿಯಂ ಮಾಳ್ಕೆ ಸಂತೋಷದಿಂದ'**[136] ಎಂಬ ಮಾತಿದೆ. ಹರಿಹರನ 'ಪರಶಿವನಿಂದ ವೇದವನ್ನು ಕಲಿತ ಬ್ರಹ್ಮನ ಪತ್ನಿ ಸರಸ್ವತಿ' ಎಂಬ ಕಲ್ಪನೆಯಂತೆಯೇ ರಾಘವಾಂಕನ ಕಲ್ಪನೆಯೂ ಇದೆ. ಇಲ್ಲಿ ಪಂಪಾಪತಿ ಅಂದರೆ ಪರಶಿವನು ಬ್ರಹ್ಮನಿಗೆ ವಾಕ್‌ಚಾತುರ್ಯವನ್ನು ಕೊಟ್ಟಿದ್ದಾನೆ ಅಷ್ಟೆ.

'ವಾಣಿಯಜೆವಿನ ಬೆಳಗು ಮುಕುತಿವನಿತೆಯ ಮುಡಿಯ ಮಾಣಿಕಂ ...... ಮದೀಯ ಮತಿಗೀಗೆ ಪ್ರಸನ್ನತೆಯನುತ್ಸವದೊಳು'[137] ಎಂದು ರಾಘವಾಂಕ ವಾಕ್‌ಮಹಿಮೆಯನ್ನು ಹೇಳುತ್ತಾನೆ. 'ಮಾತೇ ಮುತ್ತು' ಎಂಬುದು ಜನಪದರ ಕಲ್ಪನೆ. ಮಾತು ಆಡಿದರೆ ಹೋಯಿತು; ಮುತ್ತು ಒಡೆದರೆ ಹೋಯಿತು ಎಂಬ ಗಾದೆಯೂ ಇದೆ. ಅಂತಹ ಮಾತಿನ ಅರಿವು ಎಲ್ಲರಿಗೂ ಬೇಕು. ಆಡುವ ಮಾತಿನ ಮೇಲೆ ಎಚ್ಚರವಿರಬೇಕು. ಸತ್ಯದ ಮಹಿಮೆಯನ್ನು ಪ್ರತಿಷ್ಠಾಪಿಸುವುದಕ್ಕೋಸ್ಕರವೇ ಹರಿಶ್ಚಂದ್ರಕಾವ್ಯವನ್ನು ಬರೆಯುತ್ತಿರುವ ರಾಘವಾಂಕ ಮಾತಿನ ಮಹತ್ವವನ್ನು ಬಲ್ಲವನೇ ಆಗಿದ್ದಾನೆ. ಆದ್ದರಿಂದಲೇ ವಾಣಿಯ ಅರಿವಿನ ಬೆಳಕನ್ನು ಮುಕ್ತಿಶ್ರೀ ಎಂಬ ಸ್ತ್ರೀಯ ಮುಡಿಯಲ್ಲಿರುವ ಮಾಣಿಕ್ಯಕ್ಕೆ ಹೋಲಿಸುತ್ತಿದ್ದಾನೆ. ತನ್ನ

136. ಹರಿಶ್ಚಂದ್ರ ಕಾವ್ಯಂ, 1-1
137. ಅದೇ, 1-7

ಮಾತಿನ ಮಹಿಮೆಯಿಂದ ಸತ್ಯವನ್ನು ಕಾಪಾಡಿಕೊಂಡ ಹರಿಶ್ಚಂದ್ರನಿಗೆ **'ವೇದಪ್ರಮಾಣಪುರುಷ'**[138] ಎಂದು ಹೊಗಳಿದ್ದಾನೆ. ವೇದಕ್ಕೆ ಅಧಿದೇವತೆ ಸರಸ್ವತಿ; ವೇದವೇ ಸರಸ್ವತಿ ಎಂಬ ಕಲ್ಪನೆಯು ಇಲ್ಲಿ ಗಮನಾರ್ಹ.

'ಗಿರಿಜಾತೆ ಸಿರಿಸರಸ್ವತಿ........... ನೆರೆದು ಪಂಪಾವಿರೂಪಾಕ್ಷ ಲಿಂಗಪ್ರಭುವೆ ವರಕುಮಾರನು ಏಳಬಹುದೇ?'[139] ಎಂದು, ಹರನ ಸಮ್ಮತಿಯನ್ನು ಪಡೆದು ಲೋಹಿತಾಶ್ವನನ್ನು ಎಬ್ಬಿಸುವಾಗ, ಲಕ್ಷ್ಮೀ ಪಾರ್ವತಿಯರ ಜೊತೆಯಲ್ಲಿ ಸರಸ್ವತಿಯು ಇರುತ್ತಾಳಾದರೂ, ಸರಸ್ವತಿಗೆ ಸಂಬಂಧಿಸಿದ ಯಾವುದೇ ವಿಶೇಷವಿಲ್ಲ. ಲಕ್ಷ್ಮೀ-ಪಾರ್ವತಿಯರ ಜೊತೆ ಸರಸ್ವತಿಯೂ ಬರುವ ಸನ್ನಿವೇಶವೊಂದು 'ಸಿದ್ಧರಾಮ ಚಾರಿತ್ರ'ದಲ್ಲಿದೆ. ನವಜಾತಶಿಶುವಾದ ಸಿದ್ಧರಾಮನನ್ನು ನೋಡಲು **'ಸಿರಿಸರಸ್ವತಿವೆರಸಿ ಗಿರಿಜೆ ಬಿಜಯಂಗೈದಳು'**. ಇಲ್ಲಿಯೂ ಸರಸ್ವತಿಗೆ ಸಂಬಂಧಿಸಿದ ಯಾವುದೇ ವಿಶೇಷವಿಲ್ಲ.

ರಾಘವಾಂಕನ ಕಾಲದಿಂದ ಮುಂದಕ್ಕೆ ಬರೆದ ವೀರಶೈವ ಕವಿಗಳಾರು ಸರಸ್ವತಿಯ ಸ್ತುತಿಯನ್ನು ಮಾಡಿಲ್ಲ. ಆಗೊಮ್ಮೆ ಈಗೊಮ್ಮೆ, ಸರಸ್ವತಿಯ ಹೆಸರಿನ ಉಲ್ಲೇಖವಷ್ಟೇ ಬರುತ್ತದೆ. ಸರಸ್ವತಿಯ ಬದಲಿಗೆ ಪಾರ್ವತಿ ಮತ್ತು ಗಣಪತಿಯರ ಸ್ತುತಿ ಸಾಮಾನ್ಯವಾಗಿ ಬರುತ್ತದೆ. ಗಣಪತಿಗೇ ಕಾವ್ಯದೇವತೆಯ ಪಟ್ಟ ಪ್ರಾಪ್ತವಾಗಿದೆ. ಸುಮಾರು 1654ಕ್ಕೆ ಸೇರಿದ ಷಡಕ್ಷರದೇವಕವಿಯ **'ಶಬರಶಂಕರವಿಳಾಸ'** ಕಾವ್ಯದಲ್ಲಿ ಸರಸ್ವತಿಯನ್ನು ನದಿದೇವತೆಯಾಗಿ, ತುಂಗಭದ್ರೆ, ಕಪಿಲೆ, ಭೀಮೆ, ಹೇಮಾವತಿ ಮೊದಲಾದ ನದಿಗಳ ಜೊತೆಯಲ್ಲಿ ಸೇರಿಸಲಾಗಿದೆ. ನದಿದೇವತೆ ಸರಸ್ವತಿಯನ್ನು **'ವಿಕಸಿತ ಕೃಷ್ಣವೇಣಿ ಸುಸರಸ್ವತಿ'**[140] ಎಂದು ಕರೆಯಲಾಗಿದೆ. ಬೇರೇನೂ ವಿಶೇಷವಿಲ್ಲ. ಭಾಗಶಃ ಎಲ್ಲಾ ವೀರಶೈವ ಕವಿಗಳಿಗೂ, ಕಾವ್ಯವಿಚಾರಕ್ಕಾಗಿರುವಂತೆ ಸರಸ್ವತಿಯ ವಿಚಾರಕ್ಕೂ ಹರಿಹರ-ರಾಘವಾಂಕರೇ ಮಾದರಿಯೆನ್ನಬಹುದು.

ಆಂಡಯ್ಯ (ಸುಮಾರು ಕ್ರಿ.ಶ. 1225)

ಆಂಡಯ್ಯ ತನ್ನ 'ಕಬ್ಬಿಗರ ಕಾವಂ'ನಲ್ಲಿ ತ್ರಿಮೂರ್ತಿಗಳನ್ನು ಸ್ಮರಿಸುವ ಪದ್ಯದಲ್ಲಿ ಬ್ರಹ್ಮನ ಹೆಸರನ್ನು ನೇರವಾಗಿ ಹೇಳದೆ, **'ಸರಸತಿಯೆಱೆಯರ್ಕ'**[141] ಎಂದು ಹೇಳಿರುವುದು ವಿಶೇಷವಾಗಿದೆ.[142] ಇನ್ನೊಂದು ಪದ್ಯದಲ್ಲಿ ಕವಿಯು ಸರಸ್ವತಿಯನ್ನು ಕಾವ್ಯ ಪ್ರೌಢಿಮೆಗಾಗಿ ಸ್ತುತಿಸಿದ್ದಾನೆ.

---

138. ಅದೇ, 14-33

139. ಅದೇ, 14-6

140. ಶಬರಶಂಕರವಿಳಾಸಂ, 1-2

141. ಕಬ್ಬಿಗರ ಕಾವಂ, ಪದ್ಯ -2

142 . ಕರ್ನಾಟಕದ ಕೆಲವು ತ್ರಿಕೂಟದೇವಾಲಯಗಳಲ್ಲಿ ಲಿಂಗ ಮತ್ತು ವಿಷ್ಣುವಿನ ಶಿಲ್ಪಗಳ ಜತೆಯಲ್ಲಿ ಸರಸ್ವತಿಯನ್ನು ಸ್ಥಾಪಿಸಿರುವುದನ್ನು ಕಾಣಬಹುದು. ಬ್ರಹ್ಮನಿಗೆ ಮೂರ್ತಿಪೂಜೆಯ ಸಂಪ್ರದಾಯವಿಲ್ಲದಿರುವುದರಿಂದ, ಬ್ರಹ್ಮನ ಬದಲಾಗಿ ಆತನ ಶಕ್ತಿಯಾದ ಸರಸ್ವತಿಯನ್ನು ಪ್ರತಿಷ್ಠಾಪಿಸಿರಬಹುದು. ಲಿಂಗವು 'ಬ್ರಹ್ಮಲಿಂಗ'ವಾಗಿದ್ದರೆ, ಸರಸ್ವತಿಯನ್ನು ಶಕ್ತಿದೇವತೆಯಾಗಿ ಅಲ್ಲಿ ಪ್ರತಿಷ್ಠಾಪಿಸಲಾಗಿರುತ್ತದೆ.

ಗರುವಿಕೆಗಿಂಬು ಗಾಡಿಗೆ ತವರ್ಮನೆ ಮೈಮೆಗೆ ಮೇರೆ ನನ್ನಿಗಾ
ಗರಮಜಿತಕ್ಕೆ ಗೊತ್ತು ಪೆಸರ್ವೆತ್ತ ನೆಗಟ್ತೆಗೆ ತಾಣಮಾಗಿ ಬ
ಲ್ಲರ ಬಗೆಯಲ್ಲಿ ಕೂಡಿ ನೆಲೆಸಿರ್ದು ಪೊಗಟ್ತೆಯನಾಂತಳಾವಳಾ
ಸರಸತಿ ಕೂರ್ಮೆಯಿಂದೊಸೆದು ಮಾಡುಗೆ ಕಬ್ಬದ ಬರ್ದಿನೇಟ್ಗಿಯಂ॥[143]

ಅಚ್ಚಗನ್ನಡ ಪದ್ಯದಲ್ಲಿ ಆಂಡಯ್ಯ ಸರಸತಿಗೆ ಹೇಳಿರುವ ವಿಶೇಷಣಗಳು ಸ್ಪಷ್ಟವಾಗಿವೆ. 'ಗರುವಿಕೆಗಿಂಬು' ಅಂದರೆ ಗೌರವಕ್ಕೆ ನೆಲೆ ಎಂದರ್ಥ. ಸರಸ್ವತಿಯ ಕೃಪೆಯಿದ್ದವನಿಗೆ ಗೌರವ ದೊರೆಯುತ್ತದೆ. 'ವಿದ್ಯಾವಂತನಿಗೆ ಎಲ್ಲೇ ಹೋದರು ಮರ್ಯಾದೆ' ಎಂಬ ನಾಣ್ಣುಡಿಯೂ ಇದೇ ಅರ್ಥವನ್ನು ಸ್ಫುರಿಸುತ್ತದೆ. 'ಗಾಡಿಗೆ ತವರ್ಮನೆ' ಅಂದರೆ ಸೌಂದರ್ಯಕ್ಕೆ ತವರುಮನೆಯಾಗಿರುವವಳು. ಹೆಣ್ಣಿಗೆ ತವರುಮನೆಯೆಂದರೆ ವಿಶೇಷ. ಹೆಣ್ಣಿಗೂ ಚೆಲುವಿಗೂ ಸಂಬಂಧವಿದೆ. ಅಂತಹ ಚೆಲುವಿಗೆ, ಚೆಲುವೆಯಾದ ಸರಸ್ವತಿಯೇ ತವರುಮನೆ. 'ಮೈಮೆಗೆ ಮೇರೆ' ಅಂದರೆ ಕೀರ್ತಿಯ ತುತ್ತ ತುದಿಯಂತೆ ಇರುವವಳು. ಸರಸ್ವತಿಯ ವರಪ್ರಸಾದವೇ ಕೊನೆ ಅದರಿಂದಾಚೆಗೆ ಏನೂ ಇಲ್ಲ. 'ನನ್ನಿಗಾಗರಂ' ಅಂದರೆ ಸತ್ಯಕ್ಕೆ ಆಶ್ರಯವಾಗಿರುವವಳು ಎಂದರ್ಥ. 'ಅಜಿತಕ್ಕೆ ಗೊತ್ತು' ಅಂದರೆ ಜ್ಞಾನಕ್ಕೆ ನೆಲೆಯಾಗಿರುವವಳು ಸರಸ್ವತಿ. ಮೂಲತಃ ಸರಸ್ವತಿಯು ಜ್ಞಾನದೇವತೆಯೇ ಆಗಿದ್ದಾಳೆ. 'ಪೆಸರ್ವೆತ್ತ ನೆಗಟ್ತೆಗೆ ತಾಣಂ' ಅಂದರೆ ವಿಶೇಷವಾದ ಕೀರ್ತಿಗೆ ನೆಲೆ ಎಂದರ್ಥ. ಇಂತಹ ಸರಸ್ವತಿಯು ಬಲ್ಲವರ ಮನಸ್ಸನ್ನು ಸೇರಿ, ನೆಲಸಿ ಹೊಗಳಿಸಿಕೊಳ್ಳುತ್ತಿದ್ದಾಳೆ. ಆಕೆ ನಮ್ಮ ಕಾವ್ಯಕ್ಕೆ ಪ್ರೌಢಿಮೆಯನ್ನು ಪ್ರೀತಿಯಿಂದ ಅನುಗ್ರಹಿಸಲಿ ಎಂಬುದು ಕವಿಯ ಆಶಯ. ಇಲ್ಲಿ ಆಂಡಯ್ಯನು ಸರಸ್ವತಿಗೆ ಬಳಸಿರುವ ವಿಶೇಷಣಗಳಲ್ಲಿ ಹೆಚ್ಚಿನವು ಸಾಂಪ್ರಸಾಯಿಕ ಕಲ್ಪನೆಗಳೇ ಆಗಿವೆ. ಅಚ್ಚಗನ್ನಡ ಪದಗಳನ್ನೇ ಬಳಸಿ ಸರಸ್ವತಿಯನ್ನು ಸ್ತುತಿಸಿರುವ ಆಂಡಯ್ಯನ ಕನ್ನಡದ ಅಭಿಮಾನ ಸುವಿದಿತ.

ಮಲ್ಲಿಕಾರ್ಜುನ (ಸುಮಾರು ಕ್ರಿ.ಶ. 1250)

ಮಲ್ಲಿಕಾರ್ಜುನನು ತನ್ನ 'ಸೂಕ್ತಿಸುಧಾರ್ಣವ' ಕೃತಿಯ ನಾಂದಿಯಲ್ಲಿ ಸರಸ್ವತಿಗೆ ಕೆಳಕಂಡಂತೆ ಅರ್ಘ್ಯವೆತ್ತಿದ್ದಾನೆ. ಆತನ ಸರಸ್ವತಿಯು ವಿದ್ಯಾದೇವತೆಯೂ, ಚತುರ ವಾಗ್ವಿಲಾಸಿನಿಯೂ, ವಾಗ್ವಧುವೂ ಆಗಿದ್ದಾಳೆ.

ಆವಳ ಕಯ್ಯ ಪುಸ್ತಕದೊಳಿರ್ಪುವು ಲೋಕದ ಸಾರಸೂಕ್ತಿಯಿ
ನ್ನಾವಳ ವಾಗ್ವಿಲಾಸಚತುರತ್ವದ ಪೋದುದು ಪದ್ಮಜಂಗೆ ಮು
ನ್ನಾವರಿಸಿರ್ದ ಛಾಂದಸಿಕೆಯಾವಳ ಪೋಲ್ವೆಯ ಪುತ್ರಿ ಕೀರ್ತಿ ಲ
ಕ್ಷ್ಮೀವಧುವಾದಳಾ ವಧುಗೆ ಕಾವ್ಯದ ನಾಂದಿಯೊಳರ್ಘ್ಯವೆತ್ತುವೆಂ॥[144]

143. ಅದೇ, ಪದ್ಯ –3
144. ಸೂಕ್ತಿಸುಧಾರ್ಣವಂ, ಪೀಠಿಕಾಪ್ರಕರಣಂ, ಪದ್ಯ –6

ಲೋಕದ ಸಾರಸೂಕ್ತಿಸಮಸ್ತವನ್ನು ಹೊಂದಿರುವ ಪುಸ್ತಕವನ್ನು ಕೈಯಲ್ಲಿ ಧರಿಸಿರುವವಳು ಎಂಬುದು ಸರಸ್ವತಿಯ ಜನಪ್ರಿಯ ಕಲ್ಪನೆ. ಆದರೆ, ವಾಗ್ವಿಲಾಸದ ಚತುರತೆಯಿಂದ, ಬ್ರಹ್ಮನನ್ನು ಆವರಿಸಿದ್ದ ಆಲಸ್ಯವನ್ನು ದೂರಮಾಡುವ ಸರಸ್ವತಿಯ ಚಿತ್ರಣ ಶೃಂಗಾರರಸಾತ್ಮಕವಾಗಿದೆ. ಯಾರನ್ನು ಹೋಲುವ ಪುತ್ರಿ ಕೀರ್ತಿಲಕ್ಷ್ಮೀವಧುವಾದಳೋ ಆ ವಧುವಿಗೆ ಅಂದರೆ ಸರಸ್ವತಿಗೆ ಕವಿ ನಮಸ್ಕರಿಸುತ್ತಾನೆ. ಸರಸ್ವತಿಯು ವಿದ್ಯಾಲಕ್ಷ್ಮಿ, ಜ್ಞಾನಲಕ್ಷ್ಮಿ. ಆದ್ದರಿಂದ ಸರಸ್ವತಿಯ ಅನುಗ್ರಹವಿದ್ದವನಿಗೆ ಕೀರ್ತಿಲಕ್ಷ್ಮಿ ಒಲಿಯುತ್ತಾಳೆ ಎಂಬುದು ಕವಿಯ ಆಶಯ; ಜನಸಾಮಾನ್ಯರ ನಂಬಿಕೆಯೂ ಕೂಡ ಅದೇ ಆಗಿದೆ. ಕೀರ್ತಿಲಕ್ಷ್ಮಿಯನ್ನು ಹೋಲುವ ವಧುವಾಗಿ ನಿಂತಿರುವ ಸರಸ್ವತಿಗೆ ತನ್ನ ಕಾವ್ಯದ ನಾಂದಿಯಲ್ಲಿಯೇ ಕವಿ ಅರ್ಘ್ಯವನ್ನೆತ್ತಿದ್ದಾನೆ.

ಮಹಾಬಲಕವಿ (ಸುಮಾರು ಕ್ರಿ.ಶ. 1250)

ಮಹಾಬಲಕವಿಯ ಕೃತಿ 'ನೇಮಿನಾಥ ಪುರಾಣ'ದಲ್ಲಿ ಸರಸ್ವತಿಯ ಸೌಂದರ್ಯ ವರ್ಣನೆ ಆಕೆಯ ದರ್ಶನದೊಂದಿಗೇ ಮಿಳಿತವಾಗಿ ಬಂದಿದೆ.

ಪ್ರವಚನದಿವ್ಯದೇಹಿಯನುಯೋಗ ಚತುಷ್ಟಯಹಸ್ತೆ ಶುದ್ಧತ
ತ್ತ್ವವಿಮಲವಕ್ತ್ರೆಯಂಗನಿವಹಾರುಚಿರಾನುಗತಾವಯವಾಗೆ ಪೂರ್ವಸೌ
ಷ್ಠವಯುತೆ ಸದ್ವಿಲಾಸವತಿ ದೇವಿ ಸರಸ್ವತಿ ಮಾಡುಗುತ್ಸವೋ
ತ್ಸವಮನನಾರತಂ ಕೃತಿಗೆ ಕಾವ್ಯಚಮತ್ಕೃತಿಯಿಂ ಪ್ರಬಂಧದೊಳ್॥[145]

ಸ್ತುತ್ಯರ್ಹವಾದ ದಿವ್ಯದೇಹವನ್ನುಳ್ಳವಳು, ಯೋಗಮುದ್ರೆಯಲ್ಲಿರುವ ನಾಲ್ಕು ಕೈಗಳ ಮೂರ್ತಿ, ಪರಿಶುದ್ಧವಾದ ತತ್ವದಿಂದ ಕೂಡಿದ ನಿರ್ಮಲವಾದ ಮುಖವುಳ್ಳವಳು, ಮನೋಹರವಾದ ಅಂಗವುಳ್ಳವಳು, ಹೊಗಳಲು ಅಸಾಧ್ಯವಾದ ದೇಹಸೌಂದರ್ಯವುಳ್ಳವಳು, ಸಹಜಸುಂದರಿಯೂ ಆದ ಸರಸ್ವತಿ ದೇವಿಯು ಯಾವಾಗಲೂ ಕಾವ್ಯಚಮತ್ಕೃತಿಯನ್ನು, ನೂತನತೆಯನ್ನು ನಮ್ಮ ಈ ಕೃತಿಯಲ್ಲಿ ಉಂಟುಮಾಡಲಿ ಎಂಬುದು ಕವಿಯ ಆಶಯ. ಇದೇ ಪದ್ಯವನ್ನು ಹೀಗೂ ಅರ್ಥೈಸಬಹುದು. ಒಳ್ಳೆಯ ಮಾತು ದಿವ್ಯದೇಹಿಯ ಆತ್ಮಧ್ಯಾನವಾಗಿರುವಂತೆ, ಶುದ್ಧತತ್ವದಂತೆ ಸ್ವಚ್ಛವಾದ ಮುಖವನ್ನು ಅನುಸರಿಸಿ, ಸೌಂದರ್ಯವೇ ಅವಯವಗಳಾದಂತಹ ಅಂಗಸಮೂಹವನ್ನುಳ್ಳ ಅಪೂರ್ವವಾದ ಸೌಷ್ಠವ ಇರುವವಳೂ ಸದ್ವಿಲಾಸವತಿಯೂ ಚತುರ್ಭುಜೆಯೂ ಆದ ಸರಸ್ವತಿಯು ನಿರಂತರವಾಗಿ ಸಂಭ್ರಮವನ್ನು ಸಡಗರವನ್ನುಂಟು ಮಾಡಲಿ, ನಮ್ಮ ಕಾವ್ಯಕ್ಕೆ ಕಾವ್ಯಚಮತ್ಕೃತಿಯನ್ನುಂಟು ಮಾಡಲಿ ಎಂಬುದು ಕವಿಯ ಪ್ರಾರ್ಥನೆ.

---

145. ನೇಮಿನಾಥ ಪುರಾಣಂ, 1-9

ಇಲ್ಲಿ ಕವಿಯು 'ತನ್ನ ಪ್ರಬಂಧದಲ್ಲಿ ಸರಸ್ವತಿಯು ಕಾವ್ಯ ಚಮತ್ಕೃತಿಯನ್ನು ಉಂಟುಮಾಡಲಿ' ಎಂದು ಪ್ರಾರ್ಥಿಸುವ ಮೊದಲೇ 'ದೇವಿ ಸರಸ್ವತಿ ಮಾಡುಗುತ್ಸವೋತ್ಸವಮನನಾರತಂ' ಎಂದಿರುವುದು ವಿಶೇಷವಾಗಿದೆ. ಕೇವಲ ಕಾವ್ಯರಚನೆಗೆ ಮಾತ್ರವಲ್ಲ, ಕಾವ್ಯಕೃಷಿಯಲ್ಲಿ ಪ್ರತ್ಯಕ್ಷವಾಗಿ ಪರೋಕ್ಷವಾಗಿ ತೊಡಗಿಕೊಂಡವರೆಲ್ಲರಿಗೂ ಒಂದು ರೀತಿ ಸಂತೋಷವಿರುತ್ತದೆ. ಕಾವ್ಯದ ಓದಿನಿಂದ ಆನಂದ ದೊರಕುತ್ತದೆ. ಆದ್ದರಿಂದ 'ನಿರಂತರವಾಗಿ ಸರಸ್ವತಿಯು ಸಂಭ್ರಮವನ್ನು ಸಡಗರವನ್ನು ಉಂಟುಮಾಡಲಿ' ಎಂಬ ಕವಿಯ ಆಶಯ ಹೊಸತೆರನಾಗಿದೆ. ಇನ್ನೊಂದು ಪದ್ಯದಲ್ಲಿ ಶ್ರೀ ಜಿನನ ಮಾತಿನಿಂದ ಹುಟ್ಟಿದ ವಾಗ್ದೇವಿ ವಾಕ್ ಚಾತುರ್ಯವನ್ನುಂಟು ಮಾಡಲಿ ಎಂದು ನಾನು ಯಾವಾಗಲೂ ಪ್ರಾರ್ಥಿಸುತ್ತೇನೆ ಎಂದಿದ್ದಾನೆ.

ಅನವದ್ಯಂ ಹೃದ್ಯಮಾಸ್ಯಾವಿಕೃತಮಖಿಲಭಾಷಾತ್ಮಕಂ ಸಪ್ತಭಂಗೀ
ಜನಕಂ ಜಾತ್ಯಾದಿ ದುಃಶ್ರುತ್ಯಪಗತಮಮರೇಂದ್ರಾದಿತಾಸನ್ನ ದೂರಾ
ವನಿಸಾಮ್ಯಂ ಸರ್ವವಸ್ತು ಪ್ರಕಟನಪಟು ಸಾಶ್ಚರ್ಯಸಂಧಾನಿತಂ ಶ್ರೀ
ಜಿನವಾಕ್ ವಾಗ್ಜಾತಚಾತುರ್ಯಮನೊದವಿಸುಗಸ್ಮದ್ವಚಃಶ್ರೀಯೊಳೆಂದುಂ॥[146]

ಈ ಪದ್ಯದಲ್ಲಿ ಬಳಸಿರುವ ಅನವದ್ಯಂ (ನಿರ್ದೋಷವಾದ, ಸ್ಪಷ್ಟವಾದ), ಹೃದ್ಯಂ (ಹೃದಯಕ್ಕೆ ಹತ್ತಿರವಾದ), ಅವಿಕೃತಂ (ಸುಂದರವಾದುದು), ಅಖಿಲ ಭಾಷಾತ್ಮಕಂ (ಸರ್ವಭಾಷೆಗಳನ್ನು ಒಳಗೊಂಡಿರುವ) ಸರ್ವವಸ್ತು ಪ್ರಕಟಣ ಪಟು (ಸರ್ವವಸ್ತುಗಳನ್ನೂ ಪ್ರಕಟನಗೊಳಿಸುವ ಸಾಮರ್ಥ್ಯವುಳ್ಳ) ಎಂಬ ವಿಶೇಷಣಗಳು ನವೀನವಾಗಿವೆ. 'ಅಖಿಲ ಭಾಷಾತ್ಮಕಂ' ಎಂಬುದು ಎರಡನೆಯ ನಾಗವರ್ಮನ 'ಸರ್ವಭಾಷಾಸರಸ್ವತೀ' ಮತ್ತು ಭಟ್ಟಾಕಳಂಕನ 'ಸರ್ವಭಾಷಾಮಯೀ ಭಾಷಾ' ಎಂಬ ಪರಿಕಲ್ಪನೆಯನ್ನು ನೆನಪಿಸುತ್ತದೆ. ನನ್ನ ಈ ಕೃತಿಗೆ ವಾಕ್‌ನಿಂದ ಹುಟ್ಟುವ ಚಾತುರ್ಯವನ್ನು, ನುಡಿಜಾಣ್ಮೆಯನ್ನು ವಾಗ್ದೇವಿಯು ಉಂಟುಮಾಡಲಿ ಎಂದು ಕವಿ ಪ್ರಾರ್ಥಿಸಿದ್ದಾನೆ.

ಕೇಶಿರಾಜ (ಸುಮಾರು ಕ್ರಿ.ಶ. 1275)

ಕೇಶಿರಾಜನು ತನ್ನ 'ಶಬ್ದಮಣಿದರ್ಪಣಂ' ಗ್ರಂಥದ ಪ್ರಥಮ ಪದ್ಯದಲ್ಲಿಯೇ (ಶಾಸ್ತ್ರಮುಖದಲ್ಲಿಯೇ) ಸರಸ್ವತಿಗೆ ಶಿರಬಾಗಿ ವಂದಿಸುತ್ತಾನೆ.

ಶ್ರೀವಾಗ್ದೇವಿಗೆ ಶಬ್ದದಿ
ನಾವಾವಿಂದ್ರಿಯದ ವಿಷಯಮಂ ಶ್ರೋತ್ರದೊಳು
ದ್ಭಾವಿಪ ನಿರ್ಮಳಮೂರ್ತಿಗಿ
ಳಾವಂದ್ಯೆಗೆ ಶಾಸ್ತ್ರಮುಖದೊಳವನತನಪ್ಪೆಂ॥[147]

146. ಅದೇ, 1–10
147. ಶಬ್ದಮಣಿದರ್ಪಣಂ, ಪದ್ಯ –1

ಶಬ್ದಾರ್ಥ ಸಂಗಮವೇ ವಾಕ್(ಮಾತು). ಶಬ್ದಾರ್ಥಗಳೊಡನೆ ಆಟವಾಡುವ ವೈಯಾಕರಣಿ ಕೇಶಿರಾಜನ ಸರಸ್ವತೀ ಸ್ತುತಿ ಅವನ ಗ್ರಂಥದಂತೆ ವಿಶೇಷವೂ ಹೌದು; ನವೀನವೂ ಹೌದು. ಪಂಚೇಂದ್ರೀಯಗಳ ವ್ಯಾಪಾರೋತ್ಪನ್ನವಾದ 'ವಾಕ್' ಅನ್ನು (ಶ್ರೋತ್ರೇಂದ್ರಿಯಂ ಒಂದಾದ) ಕಿವಿಗೆ ಶಬ್ದರೂಪದಲ್ಲಿ ತಂದು ನಿಲ್ಲಿಸುವ ಸರಸ್ವತಿಯನ್ನು ನಿರ್ಮಳಮೂರ್ತಿ ಮತ್ತು ಇಳಾ(ಲೋಕ)ವಂದಿತೆ ಎಂಬ ಎರಡು ಶಬ್ದವಿಶೇಷಣಗಳಿಂದ ಗೌರವಿಸಿ, ಶಾಸ್ತ್ರಮುಖದಲ್ಲಿಯೇ ನಮಸ್ಕರಿಸಿದ್ದಾನೆ.

ಗ್ರಂಥದ ಸಮಾಪ್ತಿವಾಕ್ಯಗಳಲ್ಲಿ ಬಂದಿರುವ ಪದ್ಯವೊಂದರಲ್ಲಿ ತನ್ನ ಕೃತಿಯನ್ನು ಸರಸ್ವತಿಗೆ ಎರಡನೆಯ ವೀಣೆ ಎಂದು ಕರೆದುಕೊಂಡಿದ್ದಾನೆ.

ಸಿರಿಗೀಕ್ಷಿಪ ರಸಚಿತ್ರಂ
ಸರಸತಿಗೆರಡನೆಯ ಬೀಣೆಯೆನೆ ಸೌಭಾಗ್ಯಂ
ಕರಮಾದುದೆಂದು ಬುಧರಾ
ದರಿಪರ್ ಮೆಚ್ಚುಂದೆ ಶಬ್ದಮಣಿದರ್ಪಣಂ॥[148]

ಲಕ್ಷ್ಮಿಯು ನೋಡುವ ರಸಾತ್ಮಕವಾದ ಚಿತ್ರವೂ, ಸರಸ್ವತಿಗೆ ಎರಡನೆಯ ವೀಣೆಯೂ, ಸೌಭಾಗ್ಯವನ್ನು ಉಂಟುಮಾಡುವಂತಹದೂ ಆದ ತನ್ನ ಕೃತಿಯನ್ನು ಪಂಡಿತರು ಆದರಿಸುತ್ತಾರೆ ಎಂಬ ನಂಬಿಕೆ ಕೇಶಿರಾಜನದು. ಅದು ನಿಜವೂ ಆಗಿದೆ! ಸರಸ್ವತಿಗೆ ಎರಡನೆಯ ವೀಣೆ ಎಂಬ ಕಲ್ಪನೆ ನವೀನವಾಗಿಯೂ ಇದೆ. ಶಬ್ದಮಣಿದರ್ಪಣದ ಅಧಿಕಪಾಠವೆನ್ನುವ ಒಂದು ಪದ್ಯದಲ್ಲಿಯೂ ಸರಸ್ವತಿಯ ಉಲ್ಲೇಖವಿದೆ.

ನಡೆಯಿಸುವ ಕಥೆಗಳೊಳಗೇಂ(ಳಂ)
[ತಡೆಯದೆ] ಸೈತಾಗಿ ಚೆನ್ನಕೇಶವ ದೇವಂ
ನುಡಿಯಿಸಿದ ತೆಱದೆ ಭಾರತಿ
ನುಡಿವಳ್ ಸೌಭಾಗ್ಯವಿಂತು ಸೊಗಯಿಸವೇಡಾ[149]

ಹೇಳುವ ಕತೆಯೊಳಗೆ ಏನೂ ತಡೆಯಿಲ್ಲದೆ, ನೇರವಾಗಿ ಚೆನ್ನಕೇಶವದೇವ(ಕೇಶಿರಾಜ)ನು ನುಡಿಸಿದ ಎಂಬಂತೆ ಭಾರತಿ(ಸರಸ್ವತಿ) ನುಡಿದಿರುತ್ತಾಳೆ. ಆದ್ದರಿಂದ ಕೇಶಿರಾಜನ ಮತ್ತು ಆತನ ಕೃತಿಯ ಸೌಭಾಗ್ಯ ಎಷ್ಟು ಸೊಗಸಾಗಿರಬೇಡ? ಕೇಶಿರಾಜ ಮೂಲತಃ ವೈಯಾಕರಣಿ. ಆತ ಕಾವ್ಯಗಳನ್ನೂ ರಚಿಸಿದ್ದಾನೆ. ಅವನ 'ಚೋಳಪಾಲಕಚರಿತೆ' ಅನುಪಲಬ್ಧ. ಆದಕಾರಣ ಆತನ ಕಾವ್ಯಶಕ್ತಿಯನ್ನ, ಜೊತೆಗೆ ಸರಸ್ವತಿಯ ವಿಚಾರವನ್ನೂ ಶಬ್ದಮಣಿದರ್ಪಣವೊಂದರಿಂದಲೇ ತಿಳಿಯಬೇಕಾಗಿದೆ.

---

148. ಅದೇ, ಪದ್ಯ 241

149. ಅದೇ, ಇನ್ನೊಂದು ಹಸ್ತಪ್ರತಿಯಲ್ಲಿನ ಪದ್ಯಗಳ ಪಟ್ಟಿಕೆ, ಪದ್ಯ -4, ಪು. 314

ಕುಮುದೇಂದು (ಸುಮಾರು ಕ್ರಿ.ಶ. 1275)

'ಕುಮದೇಂದು ರಾಮಾಯಣ'ದಲ್ಲಿ ಸರಸ್ವತಿಯನ್ನು ಕುರಿತ ಪದ್ಯ ಹೀಗಿದೆ.

ಮೃದುಪದವಿನ್ಯಾಸದ ಚೆಲುವಿಂದ
ರ್ಥದ ಸಾಮರ್ಥ್ಯಮನೀವುದಜಿಂ ಭಾ
ವದ ರಸದಿಂಪಿನಲಂಪಂ ಪೊಂಪುಳಿಯಾಗಿರೆ ಮಾಳ್ಪುದರಿಂ
ಸದಮಳ ಗುಣಮಣಿಗಣದಿನಲಂಕಾ
ರದ ಸೊಗಸಿ(ನೊಳ)ಂ ಸೊಗಯಿಪ ಭಾರತಿ ಜಿನ
ವದನಾಂಭೋಜ ವಿರಾಜಿತೆ ಮನ್ಮುಖ ಲಕ್ಷ್ಮೀಮಂಡನಮೆನಿಸಿರಲಿ[150]

ಮೃದುವಾದ ಪದಗಳ ವಿನ್ಯಾಸದ ಚೆಲುವಿನಿಂದ, ಅರ್ಥದ ಸಾಮರ್ಥ್ಯವನ್ನು ನೀಡುವುದರಿಂದ, ಭಾವ ಮತ್ತು ರಸದಿಂದ ಹಿತವಾದ ಸಂತೋಷ ಮತ್ತು ರೋಮಾಂಚನವಾಗಿರುವಾಗ, ನಿರ್ಮಲವಾದ ಗುಣಮಣಿಯ ಸಮೂಹದಿಂದ, ಅಲಂಕಾರದ ಸೊಗಸಿನಿಂದ ಜಿನನ ವದನಕಮಲದಲ್ಲಿ ವಿರಾಜಿತಳಾಗಿ ಕಾಣುತ್ತಿರುವ ಭಾರತಿಯು ನಮಗೆ ಮುಖಲಕ್ಷ್ಮಿಯಂತೆ ಇರಲಿ. ಜಿನನ ಮುಖಕಮಲವಾಸಿನಿಯಾದ ಸರಸ್ವತಿಯು ತನ್ನ ಮುಖಕ್ಕೆ ಬರಲಿ ಎಂಬುದಷ್ಟೇ ಕವಿಯ ಪ್ರಾರ್ಥನೆ. ಕಾವ್ಯಕ್ಕೆ ಮೃದುಪದಗಳ ವಿನ್ಯಾಸದಿಂದ ಚೆಲುವನ್ನು, ಅರ್ಥದ ಸಾಮರ್ಥ್ಯವನ್ನು ಸರಸ್ವತಿಯು ನೀಡುತ್ತಾಳೆ ಎಂಬುದು ಸಾಂಪ್ರದಾಯಕ ನಿರೂಪಣೆಯಾಗಿದೆ.

ವೃತ್ತವಿಲಾಸ (ಸುಮಾರು ಕ್ರಿ.ಶ. 1350)

ಪರಧರ್ಮವನ್ನು ಪ್ರಶ್ನಿಸುತ್ತಾ. ಸ್ವಧರ್ಮವನ್ನು ಕೀರ್ತಿಸುವ ಕಾವ್ಯಗಳ ಸಾಲಿನಲ್ಲಿ ಬರುವ 'ಧರ್ಮಪರೀಕ್ಷೆ'ಯ ಕರ್ತೃ ವೃತ್ತವಿಲಾಸ. ಆತನ ಸರಸ್ವತಿಯ ಪ್ರಾರ್ಥನೆ ಹೀಗಿದೆ.

ಘನಗುಣ ಸಮುದಯದೆ ಸುವ
ರ್ಣನಿಚಯದಿಂದಖಿಳ ವಚನಮಣಿಗಣದಿಂ ನೆ
ಟ್ಟನೆ ಛಂದದೋಳಿಯಿಂ ವಾ
ಗ್ವನಿತೆಯಲಂಕರಿಸುಗೆಮ್ಮ ಕೃತಿಕಾಮಿನಿಯಂ[151]

'ದಟ್ಟವಾದ ಮೋಡಗಳ ಸಮೂಹದ ನಡುವೆ ಸೂರ್ಯ ಮೂಡುವಾಗಿನ ಹೊಂಬಣ್ಣದ ರಾಶಿಯಿಂದ ಸೂಸುವ ಸರ್ವವಚನ ಮಣಿರಾಶಿಯೆಲ್ಲೆವೂ ನೇರವಾಗಿ ಛಂದಸ್ಸಿನ ಓಕಳಿಯಂತೆ ನಮ್ಮ ಈ ಕೃತಿಕಾಮಿನಿಯನ್ನು ಅಲಂಕರಿಸಲಿ' ಎಂಬುದು ಕವಿಯ ಆಶಯ. ತನ್ನ ಕಾವ್ಯವನ್ನು 'ಕೃತಿಕಾಮಿನಿ' ಎಂದಿರುವ ವೃತ್ತವಿಲಾಸನ ಕಲ್ಪನೆ ನವೀನವಾಗಿದೆ. ವಾಗ್ವನಿತೆ ಛಂದಸ್ಸಿನ ಓಕಳಿಯಿಂದ ತನ್ನ ಕಾವ್ಯವನ್ನು ಅಲಂಕರಿಸಲಿ ಎಂದರೆ ಛಂದೋವೈವಿಧ್ಯವನ್ನು ಒದಗಿಸಲಿ ಎಂದರ್ಥ. ಕಾವ್ಯದ ಅಧಿದೇವತೆಯಾದ ಸರಸ್ವತಿಯು ಛಂದಸ್ಸಿಗೂ ಅಧಿದೇವತೆ ಎಂಬುದು ಸಹಜವಾಗಿಯೇ ಇದೆ.

---

150. ಕುಮುದೇಂದು ರಾಮಾಯಣ, 1-10
151. ಧರ್ಮಪರೀಕ್ಷೆ, 1-9

ಮೇಲಿನ ಪ್ರಾರ್ಥನಾ ಪದ್ಯವಲ್ಲದೆ, ವೃತ್ತವಿಲಾಸನು ಸರಸ್ವತಿಯ ಹುಟ್ಟು ಮತ್ತು ತಂದೆಯೇ ಮಗಳನ್ನು ವರಿಸುವುದನ್ನು ವಿಡಂಬನಾತ್ಮಕವಾಗಿ ಚಿತ್ರಿಸಿದ್ದಾನೆ. ಅದನ್ನು ಸಮರ್ಥಿಸುವ ವೈದಿಕ ಸಾಹಿತ್ಯವನ್ನು ನಿರಾಕರಿಸುವುದು ಆತನ ಸ್ಪಷ್ಟ ಉದ್ದೇಶವಾಗಿದೆ. ಪುರಾಣೋಕ್ತ ಕಥೆಯನ್ನೇ ವೃತ್ತವಿಲಾಸನು ಹೇಳಿದ್ದರೂ ಪರಧರ್ಮ ವಿಡಂಬನೆ ಮತ್ತು ಸ್ವಧರ್ಮ ಸ್ಥಾಪನೆ ಅವನ ಉದ್ದೇಶವಾಗಿರುವುದರಿಂದ ವಿಡಂಬನೆ ಎದ್ದು ಕಾಣುತ್ತದೆ. ಆತ ನಿರೂಪಿಸಿರುವ ಕಥೆಯನ್ನು ಕೆಳಗಿನಂತೆ ಸಂಗ್ರಹಿಸಬಹುದು.

ಶಿವ-ಪಾರ್ವತಿಯರ ಮದುವೆಗೆ ಪುರೋಹಿತನಾಗಿದ್ದ ಬ್ರಹ್ಮ, ಶಿವನೊಂದಿಗೆ ಹೋಮಕುಂಡವನ್ನು ಸುತ್ತುತ್ತಿದ್ದ **'ಗಿರಿಜೆಯೊಳದೊಡೆಯ ಚೆಲ್ವಂ'** ಕಂಡು ಉದ್ರೇಕಗೊಳ್ಳುತ್ತಾನೆ. ಆಗ ಬ್ರಹ್ಮನಿಗೆ ಸ್ಖಲನವಾಗುತ್ತದೆ. ಸ್ಖಲನವಾದ ವೀರ್ಯವನ್ನು ಕಳಶ, ವೃಷಭನ ಹೆಜ್ಜೆ, ಹುತ್ತ, ಭಸ್ಮ, ಶಲ್ಯ, ಸರೋವರ ಮತ್ತು ಪದ್ಮಗಳಲ್ಲಿ ಚೆಲ್ಲುತ್ತಾನೆ. ಕೊನೆಯಲ್ಲಿ ಪದ್ಮದಿಂದ ಪದ್ಮಳು (ಸರಸ್ವತಿ) ಜನಿಸುತ್ತಾಳೆ. ಅವಳು ಬ್ರಹ್ಮನ ಸ್ಪರ್ಶಮಾತ್ರದಿಂದ ನವಯುವತಿಯಾಗುತ್ತಾಳೆ. ಹಾಗೆ ನವಯುವತಿಯಾದ ಸರಸ್ವತಿಯನ್ನು ಬ್ರಹ್ಮನೇ ಬಯಸುತ್ತಾನೆ. **'ಎಲೆ ಮಗಳೆ ಎನ್ನೊಳೊಲವಿಂ ಕೂಡು'** ಎನ್ನುತ್ತಾನೆ. **'ನೀಂ ಪಿತಂ ನಿನ್ನೊಳೆಂತು ಕೂಡಲಕ್ಕುಂ'** ಎಂದು ಸರಸ್ವತಿ ಪ್ರಶ್ನಿಸುತ್ತಾಳೆ. **'ಪುತ್ರಾರ್ಥದಿಂ ತಾಯಿಯನಾದೊಡಂ ತಂಗಿಯನಾದೊಡಂ ಸೊಸೆಯನಾದೊಡಂ ಮಗಳನಾದೊಡಂ ಮತ್ತಮಾರನಾದೊಡಂ ಸಂತಾನಾಭಿವೃದ್ಧಿ ನಿಮಿತ್ತಂ ಕೂಡಿದೊಡೆ ದೋಷಮಿಲ್ಲೆಂದು ಪೇಳ್ದ ವೇದವಾಕ್ಯ ಕ್ರಮಮಂ ಕೇಳ್ದಱಿದುದಿಲ್ಲಕ್ಕುಂ'** ಎನ್ನುತ್ತಾನೆ ಬ್ರಹ್ಮ. **'ನಾಂ ಕೇಳ್ದಱಿದುದಿಲ್ಲಾ, ವೇದೋಕ್ತ ಕ್ರಮಮೆಂತು ಪೇಳಿಂ'** ಎನ್ನುತ್ತಾಳೆ ಸರಸ್ವತಿ. ಆಗ ಬ್ರಹ್ಮನು **'ಮಾತರಮುಪೈತಿ ಸ್ವಸಾರಮುಪೈತಿ ಪುತ್ರಾರ್ಥೀ ನ ಚ ಕಾಮಾರ್ಥೀ ನಾಪುತ್ರಸ್ಯ ಲೋಕೋऽಸ್ತಿ ತತ್ಸರ್ವಂ ಪಶುವೋ ವಿದುಃ ತಸ್ಮಾತ್ಪುತ್ರಾರ್ಥಂ ಮಾತರಂ ಸ್ವಸಾರಂ ಚಾಧಿರೋಹತಿ'** ಎಂಬ ವೇದವಾಕ್ಯವನ್ನು ಹೇಳಿ ಸರಸ್ವತಿಯನ್ನು ವರಿಸುತ್ತಾನೆ.[152] ಕೇವಲ ಪರಧರ್ಮ ಪರೀಕ್ಷೆಗಾಗಿ, ಜನಸಾಮಾನ್ಯರ ದೃಷ್ಟಿಯಲ್ಲಿ ತಪ್ಪಾಗಿ ಕಾಣುವ, ಪುರಾಣೋಕ್ತವಾದ ಇಂತಹ ದೃಶ್ಯವನ್ನು ಹೇಳಿ ಬ್ರಹ್ಮನ ಕೃತ್ಯವನ್ನು ಖಂಡಿಸುತ್ತಿದ್ದಾನೆ ವೃತ್ತವಿಲಾಸ ಕವಿ. ಸರಸ್ವತಿಯ ವಿಚಾರದಲ್ಲಿ ಹೊಸ ದರ್ಶನವೇನೂ ಈತನ ಕಥೆಯಲ್ಲಿ ಕಂಡುಬರುವುದಿಲ್ಲ. ಸರಸ್ವತಿಯು ಬ್ರಹ್ಮನ ಜತೆಯಲ್ಲಿ ವಾದ ಮಾಡುವ ದೃಶ್ಯ ಚೆನ್ನಾಗಿ ಮೂಡಿಬಂದಿದೆ.

---

152. ಅದೇ, 1-68 ರಿಂದ 78

ಬಾಹುಬಲಿಪಂಡಿತ ಕ್ರಿ.ಶ. 1352)

ಬಾಹುಬಲಿಪಂಡಿತನು ತನ್ನ 'ಧರ್ಮನಾಥಪ್ಮರಾಣ'ದಲ್ಲಿ ಸರಸ್ವತಿಯನ್ನು ಸ್ತುತಿಸಿರುವ ಪದ್ಯ ಹೀಗಿದೆ.

> **ವಿಮಳತರೋದ್ಧ ಬೋಧಬಿಸಶಾಲಿನಿ ಪನ್ನೆರಡಂಗಮೆಂಬನು**
> **ತ್ತಮದಳರಾಜಿರಾಜಿನಿ ಲಸದ್ಗುಣಭಾಗ್ಭುವನ ಪ್ರವೃದ್ಧಿ ಸಂ**
> **ಭ್ರಮ ಪರಿಶೋಭನಿರ್ವೃತಿ ಮಧುವ್ರತಮೋದಿನಿ ತತ್ಸರಸ್ವತೀ**
> **ಕಮಳಿನಿ ತೋರ್ಕೆ ಮುಕ್ತಿಕಮಳಾಮುಖಮಂ ನಮಗೊಲ್ದು ಲೀಲೆಯಿಂ**[153]

ಈ ಪದ್ಯದಲ್ಲಿ ಸರಸ್ವತೀ ನದಿಯನ್ನೂ ವಾಗ್ದೇವಿಯನ್ನೂ ಶ್ಲೇಷೆಯಿಂದ ಸ್ತುತಿಸಲಾಗಿದೆ. ಪರಮಪವಿತ್ರವಾದ, ಶ್ರೇಷ್ಠವಾದ ಜಲವನ್ನು ಹೊಂದಿರುವವಳು, ಹನ್ನೆರಡು ಸುತ್ತಿನ ಉತ್ತಮ ದಳಗಳನ್ನುಳ್ಳ ಪದ್ಮಸಮೂಹದಿಂದ ಕಂಗೊಳಿಸುವವಳು, ಲೋಕದ ಸಂಪತ್ತನ್ನು ಹೆಚ್ಚಿಸುವವಳು, ಸಂಭ್ರಮ, ಆನಂದ ಮತ್ತು ಮನೋಹರತೆಯನ್ನುಂಟು ಮಾಡುವವಳು, ಮಧುವ್ರತಮೋದಿನಿ (ವಸಂತಮಾಸಕ್ಕೆ ಮಕರಂದದಂತೆ ಇದ್ದು ಸಂತೋಷವನ್ನುಂಟು ಮಾಡುವವಳು) ಕಮಳಿನಿ (ಕಮಲದ ಸಮೂಹವನ್ನೇ ಹೊಂದಿರುವ ಸರೋವರ, ತೊರೆ) ಎಂದು ನದಿದೇವತೆ ಸರಸ್ವತಿಯನ್ನು ಇಲ್ಲಿ ಸ್ತುತಿಸಿದೆ.

ನಿರ್ಮಲವಾದ ಉನ್ನತವಾದ ಜ್ಞಾನಸಾಗರಕ್ಕೆ ಯಜಮಾನಿಯೂ, ಉತ್ತಮದಳಗಳುಳ್ಳ ಕಮಲಾಸನದಲ್ಲಿ ವಿರಾಜಿಸುತ್ತಿರುವವಳು, ಲೋಕವನ್ನು ಬೆಳಗಿಸುವ ಶೋಭೆಯನ್ನು ಪಡೆದಿರುವವಳು, ಮೋಕ್ಷವೆಂಬ ಮಧುವನ್ನು ಹೀರುವುದರಲ್ಲಿ ಸಂತಸಪಡುವವಳು ಎಂದು ವಾಗ್ದೇವಿಯನ್ನು ಸ್ತುತಿಸಿದೆ. ಅಂತಹ ಸರಸ್ವತಿಯು ನಮಗೆ ಒಲಿದು ಲೀಲೆಯಿಂದ ಮುಕ್ತಿ ಎಂಬ ಕಮಲದ ಮುಖವನ್ನು ತೋರಿಸಲಿ ಎಂದು ಕವಿ ಪ್ರಾರ್ಥಿಸಿದ್ದಾನೆ.

ಇನ್ನೊಂದು ಪದ್ಯದಲ್ಲಿ **'ವಾಕ್ಶ್ರೀ ನೆಲಸೆ ನಿಜಪ್ರಸನ್ನಮುಖದೊಳ್'**[154] ಎಂಬ ಸಾಂಪ್ರದಾಯಿಕ ಮಾತಿದೆ. **'ಸರಸಚತುರಕವಿಕುಳತಿಳಕಂ'** ಬಾಹುಬಲಿಪಂಡಿತನು **'ವಿದ್ಯಾಶ್ರೀಗಾಶ್ರಯಮ್'**[155] ಎಂದು ಕರೆದುಕೊಂಡಿರುವುದು, ಜನ್ನನ 'ಜನಾರ್ದನನ ವಕ್ತ್ರಾಂಭೋಜಮಂ ಸಾರ್ದು ಸುಸ್ಥಿತೆಯಾಗಿರ್ದುದಱಿಂದೆ ತಾ ಸೊಬಗೆಯಾದಳ್' ಎಂಬ ಕಲ್ಪನೆಯನ್ನು ನೆನಪಿಸುತ್ತದೆ.

ಕುಮಾರವ್ಯಾಸ (ಸುಮಾರು ಕ್ರಿ.ಶ. 1400)

'ರೂಪಕ ಸಾಮ್ರಾಜ್ಯದ ಚಕ್ರವರ್ತಿ' ಎಂದು ಹೆಸರು ಪಡೆದ ಕುಮಾರವ್ಯಾಸನ ಕಾವ್ಯಪ್ರತಿಭೆ ಸರಸ್ವತಿಯ ವಿಚಾರದಲ್ಲಿ ತೀರಾ ಸಾಮಾನ್ಯವಾಗಿಯೂ ಸಾಂಪ್ರದಾಯಿಕವಾಗಿಯೂ ಇದೆ.

---

153. ಧರ್ಮನಾಥಪುರಾಣಂ, 1–10
154. ಅದೇ, 2–1
155. ಅದೇ, 14–1

ವಾರಿಜಾಸನೆ ಸಕಲಶಾಸ್ತ್ರ ವಿ
ಚಾರದುದ್ಭವೆ ವಚನರಚನೋ
ದ್ಧಾರೆ ಶ್ರುತಿಪೌರಾಣಿಕಾಗಮ ಸಿದ್ಧಿದಾಯಕಿಯೆ।
ಸೂರಿ ಸುರಪತಿಸಕಲಮುನಿಜನ
ಭೂರಿಗುಣಗಣಪದದ ಯುಕ್ತಿಯೆ
ಶಾರದೆಯೆ ನರ್ತಿಸುಗೆ ನಲಿದೊಲಿದೆನ್ನ ಜಿಹ್ವೆಯಲಿ[156]

ಕಮಲಾಸನದಲ್ಲಿ ಕುಳಿತಿರುವವಳು, ಜಗತ್ತಿನ ಸರ್ವಶಾಸ್ತ್ರಗಳಲ್ಲಿರುವ ವಿಚಾರಗಳ ಮೂಲಸ್ವರೂಪಳು, ಮಾತು ವಾಕ್ಯ ಕಾವ್ಯ ಇವುಗಳ ರಚನೆಯಲ್ಲಿ ಪ್ರಭಾವ ಬೀರುವವಳು, ವೇದ ಪುರಾಣ ಆಗಮಗಳ ಸಿದ್ಧಿಯನ್ನು ಉಂಟುಮಾಡುವವಳು, ಪಂಡಿತ ಇಂದ್ರ ಋಷಿಗಳ ಸಮೂಹಕ್ಕೆ ಅಧಿಕವಾದ ಗುಣಗಳುಳ್ಳ ಪದಸಮೂಹವನ್ನು ಹೊಳೆಯಿಸುವ ಯುಕ್ತಿಯುಳ್ಳವಳೇ, ಶಾರದೆಯೇ ನೀನು ಒಲಿದು ನಲಿವಿನಿಂದ ನನ್ನ ನಾಲಗೆಯಲ್ಲಿ ನರ್ತಿಸು ಎಂದು ಇದರ ಅರ್ಥ. **'ಆದಿನಾರಾಯಣಿ.....'**[157] ಎಂದು ಪ್ರಾರಂಭವಾಗುವ ಪದ್ಯದಲ್ಲಿ, ವೇದಮಾತೆಯೆ ಮತ್ತು ನಾದೆ ಶಾರದೆಯೆ ಎಂಬ ಮಾತುಗಳು ಗಮನಸೆಳೆಯುತ್ತವೆ. ತನ್ನ ಕಾವ್ಯಕ್ಕೆ ನಿರ್ವಿಘ್ನದಾಯಕನಾಗಿರು ಎಂದು ಗಣಪತಿಯನ್ನು ಸ್ತುತಿಸುವ ಕುಮಾರವ್ಯಾಸ, **'ವಿದ್ಯೆವಾರಿಧಿಯೆ ಮತಿಗೆ ಮಂಗಳವನ್ನುಂಟು ಮಾಡು'**[158] ಎಂದು ಸ್ತುತಿಸುವ ಮೂಲಕ ಗಣಪತಿಗೂ ವಿದ್ಯಾದೇವತೆಯ ಪಟ್ಟವನ್ನು ತಂದುಕೊಟ್ಟಿದ್ದಾನೆ. ಕುಮಾರವ್ಯಾಸ ಭಕ್ತ ಕವಿ. ಪ್ರಾರಂಭದಲ್ಲಿಯೇ **'ವೀರನಾರಾಯಣನೇ ಕವಿ, ಲಿಪಿಕಾರ ಕುವರವ್ಯಾಸ'**[159] ಎಂದು ಹೇಳಿಕೊಂಡಿರುವ ಆತನಿಗೆ ಸರ್ವಸ್ವವೂ ವೀರನಾರಾಯಣನೇ ಆಗಿದ್ದಾನೆ. 'ಕವಿ ವೀರನಾರಾಯಣನಿಗೆ ಲಿಪಿಕಾರನಾಗಿ ಕಾವ್ಯವನ್ನು ಬರೆಯುತ್ತಿದ್ದೇನೆ' ಎನ್ನುವ ಕುಮಾರವ್ಯಾಸ, ತನ್ನ ಕಾವ್ಯವನ್ನು ತಾನೇ ಹಾಡುತ್ತಿರುವವನಂತೆ, **'ನಲಿದು ಒಲಿದು ನನ್ನ ನಾಲಗೆಯಲ್ಲಿ ನರ್ತಿಸು, ಶಾರದೆಯೇ'** ಎಂದು ಸರಸ್ವತಿಯನ್ನು ಸ್ತುತಿಸುತ್ತಿರುವುದು ಸಾಮಾನ್ಯವಾಗಿದೆ.

ಈಶ್ವರಕವಿ (ಸುಮಾರು ಕ್ರಿ.ಶ. 1400)

ಈಶ್ವರ ಕವಿಯ 'ಕವಿಜಿಹ್ವಾಬಂಧನ' ಕನ್ನಡದ ಪ್ರಾಚೀನ ಛಂದೋಗ್ರಂಥಗಳಲ್ಲಿ ಒಂದು. ಕವಿಯು ಹತ್ತಕ್ಕೂ ಹೆಚ್ಚು ವಿಶೇಷಣಗಳಿಂದ ಸರಸ್ವತಿಯನ್ನು ಸ್ತುತಿಸಿದ್ದಾನೆ.

---

156. ಕುಮಾರವ್ಯಾಸ ಭಾರತ, ಪೀಠಿಕಾಸಂಧಿ, ಪದ್ಯ –5
157. ಅದೇ. ಪದ್ಯ –6
158. ಅದೇ. ಪದ್ಯ –3 & 4
159. ಅದೇ. ಪದ್ಯ –7

ಶಾರದೆ ಸತ್ಯವಾಗ್ಭರಿತೆ ಕಾಮಿತದಾಯಕೆ(ತೆ) ಕಂಜಪೀಠೆ ವಿ
ದ್ಯಾರಸ ಗಾತ್ರೆ ಯುತ್ಪಲಸುನೇತ್ರೆ ಸದಾಸುಪವಿತ್ರೆ ಚಿತ್ರ(ತ್ರ)ಪಂ
ಕೇರುವಕ್ತ್ರೇ ತುಂಗಕುಚರಾಜಿತೆ ಶುಭ್ರ ವಿಕಾಶೆ(ವಿನಮ್ರೆ) ನವ್ಯಲಂ
ಕಾರೆ ಮದೀಯ ಚಿತ್ತಭವನಾಶ್ರಿತೆಯಾಗು(ಗೆ) ಮನೋನುರಾಗದಿಂ[160]

ಶಾರದೆ, ಸತ್ಯವಾಗ್ಭರಿತೆ, ಕಾಮಿತದಾಯಿಕೆ ಎಂಬ ವಿಶೇಷಣಗಳು ಸರಸ್ವತಿಯ ತಾತ್ವಿಕ ನೆಲೆಗಳನ್ನು ಹೇಳುತ್ತಿದ್ದರೆ, ಇನ್ನುಳಿದ ವಿಶೇಷಣಗಳು ಆಕೆಯ ಸೌಂದರ್ಯಕ್ಕೆ ಸಂಬಂಧಿಸಿದವುಗಳಾಗಿವೆ. ಕಮಲಪೀಠದಮೇಲೆ, ವಿದ್ಯಾರಸದಿಂದ ಕೂಡಿದ ಶರೀರದಿಂದ, ಅರಳಿದ ಕಣ್ಣುಗಳಿಂದ, ಕಮಲಮುಖದಿಂದ, ಮೊನಚಾದ ಸ್ತನಗಳಿಂದ, ಶುಭ್ರವಾಗಿರುವ, ಹೊಸ ಅಲಂಕಾರಗಳಿಂದ ಶೋಭಿಸುತ್ತಿರುವ ಶಾರದೆಯು, ಪ್ರೀತಿಯುಳ್ಳ ಮನಸ್ಸಿನಿಂದ ನನ್ನ ಮನಸ್ಸಿನಲ್ಲಿ ನೆಲಸಲಿ ಎಂಬುದು ಕವಿಯ ಪ್ರಾರ್ಥನೆ. ಪ್ರಸಿದ್ಧವಾದ ಸರಸ್ವತಿಯ ಚಿತ್ರವನ್ನು ಮನಸ್ಸಿನಲ್ಲಿಟ್ಟುಕೊಂಡು ಶಬ್ದರೂಪದಲ್ಲಿ ಕವಿ ಕಟ್ಟಿಕೊಟ್ಟಿದ್ದಾನೆ. ಕವಿವರರೆಲ್ಲರು ಸ್ತುತಿಸಿದ್ದರಿಂದ ಸರ್ವಲಕ್ಷಣಗಳನ್ನೊಳಗೊಂಡ ಈ ಕೃತಿಯನ್ನು **'ಭಾರತಿಯ ವರದಿಂದ ತಂನಯ ಸತಿಗುಸುರ್ದ್ದಂ'**[161] ಎಂದು ಪ್ರಾರಂಭದಲ್ಲಿ ಹೇಳಿಕೊಂಡಿದ್ದಾನೆ. ಕೃತಿಯ ಕೊನೆಯಲ್ಲಿ ತನ್ನ ಹೆಂಡತಿಯ ಬಗ್ಗೆ ಹೇಳುತ್ತಾ, **'ನಿಂನ ಬಗೆ ಭಾರತಿಗಾಲಯವಾಗೆ'** ಎಂದಿದ್ದಾನೆ. ಬಾಹುಬಲಿಪಂಡಿತನು ತನ್ನನ್ನು ತಾನು 'ವಿದ್ಯಾಶ್ರೀಗಾಶ್ರಯಂ' ಎಂದು ಕರೆದುಕೊಂಡಿದ್ದರೆ, ಈಶ್ವರಕವಿಯು ತನ್ನ ಹೆಂಡತಿಯ ಮನಸ್ಸು ಭಾರತಿಗೆ ಆಲಯವಾಗಲಿ ಎಂದು ಹಾರೈಸಿದ್ದಾನೆ. ಇದು ಈ ಕವಿದಂಪತಿಗಳಿಬ್ಬರೂ ಸರಸ್ವತಿಯ ಆರಾಧಕರಾಗಿದ್ದರೆಂಬುದನ್ನು ಸೂಚಿಸುತ್ತದೆ.

ಮಧುರ (ಸುಮಾರು ಕ್ರಿಶ. 1400)

ಮಧುರ ಕವಿಯು ತನ್ನ 'ಧರ್ಮನಾಥಪುರಾಣ'ದಲ್ಲಿ ಸರಸ್ವತಿಯ ಶುಭ್ರಾಲಂಕಾರವನ್ನು ವರ್ಣಿಸುವ ಪದ್ಯ ಹೀಗಿದೆ.

ಮಿಱುಗುವ ಮಿಂಚಿನ ಗೊಂಚಲ
ಮಱೆಗಳೆನಿಪವಳ ಧವಳದಶನಾವಳಿಯೆ
ಬ್ಬುಱಿಸಿದುದು ವದನಸದನದೊ
ಳುಱುವ ಸರಸ್ವತಿಯ ಕೊರಲ ಹೀರಾವಳಿಯಂ[162]

---

160. ಕವಿಜಿಹ್ವಾಬಂಧನಂ, 1–4
161. ಅದೇ, 1–7
162. ಕನ್ನಡ ಕೈಪಿಡಿ, ಸಂಪುಟ –1. ಪು. 246–7 (ಉಧೃತ)

ಪ್ರಕಾಶಿಸುವ ಮಿಂಚಿನ ಮರಿಗಳ ಸಮೂಹ ಎನ್ನಿಸುವಂತಹ ಅವಳ ಶುಭ್ರ ದಂತ ಸಮೂಹವೇ ಎಚ್ಚರಗೊಂಡಿತೋ ಎಂಬಂತೆ, ಮುಖವೆಂಬ ಮನೆಯಲ್ಲಿ ನೆಲೆನಿಂತ ಸರಸ್ವತಿಯ ಕೊರಳಿನಲ್ಲಿರುವ ವಜ್ರಹಾರ ಪ್ರಕಾಶಿಸಿತು. ಸರಸ್ವತಿಯ ಬಣ್ಣವೇ ಬಿಳಿ. ಇನ್ನು ಅವಳ ದಂತಪಂಕ್ತಿ ಬೆಳ್ಳಗಿರುವುದರಲ್ಲಿ ಅತಿಶಯೋಕ್ತಿಯೇನಿಲ್ಲ. ಆದರೆ ಸರಸ್ವತಿಯ ಧವಳದಶನಾವಳಿ **'ಮಿಱುಗುವ ಮಿಂಚಿನ ಗೊಂಚಲಮಱಿ'** ಎಂಬ ಆತನ ಹೋಲಿಕೆ ಸಾಂಪ್ರದಾಯಿಕವಾಗಿದ್ದರೂ ಚೆನ್ನಾಗಿದೆ.

ಭಾಸ್ಕರ (ಕ್ರಿ.ಶ. 1423)

ಭಾಸ್ಕರ ಕವಿಯು ತನ್ನ 'ಜೀವಂಧರ ಚರಿತ್ರೆ'ಯಲ್ಲಿ ನಾಗಚಂದ್ರನ 'ಪಂಪರಾಮಾಯಣ'ದ ಪ್ರಸಿದ್ಧವಾದ **'ಪರಬ್ರಹ್ಮ ಶರೀರಪುಷ್ಟಿ ಜನತಾಂತರ್ದೃಷ್ಟಿ.....'** ಎಂಬ ಸರಸ್ವತೀ ಸ್ತುತಿಯನ್ನು ಅನುಸರಿಸಿ ಸರಸ್ವತಿಯನ್ನು ಸ್ತುತಿಸಿದ್ದಾನೆ.

ನುತ ಜನಾಂತರ್ದೃಷ್ಟಿ ಕವಿತೋ
ನ್ನತ ಲತಾಮೃತವೃಷ್ಟಿ ಸರಸೋ
ದಿತ ವಿನೂತನಸೃಷ್ಟಿ ಪರಮ ಬ್ರಹ್ಮತನುಪುಷ್ಟಿ
ಚತುರ ವಿಬುಧೋತ್ಕೃಷ್ಟಿ ರತ್ನ
ತ್ರಿತಯಮಾಲಾಯಷ್ಟಿ ಪರಿಶೋ
ಧಿತ ಸರಸ್ವತಿ ಸಾರ್ದಿರೆನ್ನಯ ಹೃದಯಕಮಲದಲಿ[163]

ನುತಜನಾಂತರ್ದೃಷ್ಟಿ (ಜನತಾಂತರ್ದೃಷ್ಟಿ), ಕವಿತೋನ್ನತಲತಾಮೃತವೃಷ್ಟಿ (ಕವಿತಾವಲ್ಲೀ ಸುಧಾವೃಷ್ಟಿ), ಸರಸೋದಿತವಿನೂತನಸೃಷ್ಟಿ (ಸರ್ವರಸೋತ್ಪಾದ ನವೀನ ಸೃಷ್ಟಿ), ಪರಬ್ರಹ್ಮತನುಪುಷ್ಟಿ (ಪರಬ್ರಹ್ಮ ಶರೀರಪುಷ್ಟಿ), ಚತುರವಿಬುಧೋತ್ಕೃಷ್ಟಿ (ಬುಧಹರ್ಷಾಕೃಷ್ಟಿ) ಎಲ್ಲಾ ವಿಶೇಷಣಗಳು ನಾಗಚಂದ್ರನ ಪದ್ಯದಲ್ಲಿರುವಂತೆಯೇ ಬಂದಿದೆ! ಕೊನೆಯದಾದ **'ರತ್ನ ತ್ರಿತಯಮಾಲಾಯಷ್ಟಿ'** ಎಂಬುದೊಂದೇ ಭಾಸ್ಕರನ ಸೃಷ್ಟಿ! ಕಾವ್ಯದಲ್ಲಿ ಅನುಕರಣೆ ಒಂದು ಸಾಮಾನ್ಯ ಕ್ರಿಯೆ. ಆದರೆ ಸರಸ್ವತಿಯ ಸ್ತುತಿಯಲ್ಲಿ ಇಷ್ಟರಮಟ್ಟಿನ ಅನುಕರಣೆ ಕಂಡುಬರುವುದು ಭಾಸ್ಕರನಲ್ಲಿ ಮಾತ್ರ.

ರಾಮರಸ ವಿರೂಪಾಕ್ಷ (ಸುಮಾರು ಕ್ರಿ.ಶ. 1460)

ಹದಿನೈದನೇ ಶತಮಾನದ ರಾಮರಸ ವಿರೂಪಾಕ್ಷನ **'ಹರಿಶ್ಚಂದ್ರ ಸಾಂಗತ್ಯ'** ಕೃತಿಯಲ್ಲಿ ತೀರಾ ಸಾಧಾರಣವೆನಿಸುವ ಸರಸ್ವತಿಯ ಪ್ರಾರ್ಥನೆ ಬಂದಿದೆ.

ಪರಿಪರಿ ಮುತ್ತಿನಾಭರಣದ ಕಿರಣವು
ಪರಿಮಳ ಕಸ್ತೂರಿ ತಿಲಕ
ಕರದೊಳು ಕಂಠವು ಬರೆವರೆ ಪುಸ್ತಕ
ಕರುಣಿಸು ಭಾರತಿ ಮತಿಯ[164]

---

163. ಜೀವಂಧರಚರಿತೆಯ ಸಂಗ್ರಹ, ಪದ್ಯ –2

164. ಹರಿಶ್ಚಂದ್ರ ಸಾಂಗತ್ಯ, 1–6

ವಿವಿಧ ಮುತ್ತಿನ ಆಭರಣಗಳು ಹೊಮ್ಮಿಸುವ ಕಿರಣಗಳಿಂದಲೂ ಪರಿಮಳವನ್ನು ಸೂಸುವ ಕಸ್ತೂರಿ ತಿಲಕದಿಂದಲೂ ಕೂಡಿದವಳಾಗಿ ಇರುವ ಭಾರತಿಯೇ, ಕೈಯಲ್ಲಿ ಲೇಖನಿಯನ್ನು ಹಿಡಿದು ಪುಸ್ತಕವನ್ನು ಬರೆಯಲು ಮತಿಯನ್ನು ಕರುಣಿಸು ಎಂಬ ಈ ಸ್ತುತಿಯಲ್ಲಿ ಯಾವುದೇ ವಿಶೇಷವಿಲ್ಲ. ಕೇವಲ ಸಂಪ್ರದಾಯಕ್ಕನುಗುಣವಾಗಿ, ಕಾವ್ಯಾರಂಭದಲ್ಲಿ ಸರಸ್ವತಿಯನ್ನು ಸ್ತುತಿಸಿರುವಂತಿದೆ.

ಕುಮಾರವಾಲ್ಮೀಕಿ (ಸುಮಾರು ಕ್ರಿಶ. 1500)

'ತೊರವೆ ರಾಮಾಯಣ'ದಲ್ಲಿ ಕುಮಾರವಾಲ್ಮೀಕಿ ಕಾವ್ಯನಾಮದ, ನರಹರಿ ಕವಿಯು ಸುಂದರವಾದ ಸ್ತ್ರೀಯನ್ನು ವರ್ಣಿಸುವಂತೆ ಸರಸ್ವತಿಯ ಅಂಗವೈಭವವನ್ನು ವರ್ಣಿಸಿದ್ದಾನೆ.

ಸರಸಿಜಾಂಘ್ರಿದ್ವಯದ ಕೋಮಲ
ತರಸಿತಾಂಗದ ಘನನಿತಂಬದ
ನಿರುಪಮಾನದ ನಿಮ್ನನಾಭಿಯ ನಿಬಿಡಕಚಭರದ
ವರಕರಾಭಯಕರದ ಶೋಭಾ
ಕರದ ನಗೆಮೊಗದನುಪಮದ ಬಂ
ಧುರದ ಭಾರತಿ ನಿಲುಗೆ ಮನ್ಮುಖಪದ್ಮಸದ್ಮದಲಿ[165]

ಸರೋವರದಲ್ಲಿ ಹುಟ್ಟಿದ ಕಮಲದಂತಹ ಎರಡು ಪಾದಗಳನ್ನುಳ್ಳ, ಕೋಮಲವಾದಂತಹ ಶ್ವೇತವರ್ಣದ ಶರೀರವನ್ನುಳ್ಳ, ದೊಡ್ಡದಾದ ಕಟಿಪ್ರದೇಶವನ್ನುಳ್ಳ, ಯಾವುದಕ್ಕೂ ಹೋಲಿಸಲಾಗದ ಆಳವಾದ ಹೊಕ್ಕುಳನ್ನುಳ್ಳ, ಸಮೃದ್ಧವಾದ ಕೇಶರಾಶಿಯನ್ನುಳ್ಳ, ವರದಾ ಮತ್ತು ಅಭಯ ಮುದ್ರೆಯಲ್ಲಿ ಕೈಗಳನ್ನು ಚಾಚಿರುವ, ಶೋಭಾಯಮಾನವಾದ ನಗುವನ್ನುಳ್ಳ, ಅನುಪಮವಾದ ಮುಖವನ್ನುಳ್ಳ ಚೆಲುವಾದ ಭಾರತಿ ನನ್ನ ಮುಖಕಮಲದಲ್ಲಿ ನೆಲಸಲಿ ಎಂಬುದಷ್ಟೇ ನರಹರಿಯ ಕೋರಿಕೆ. ಕಾವ್ಯಸರಸ್ವತಿಯ ಯಾವುದೇ ದರ್ಶನಾಂಶವು ಆತನ ವರ್ಣನೆಯಲ್ಲಿಲ್ಲ. ಶ್ವೇತವರ್ಣ, ಸಿತಾಂಗ, ಘನನಿತಂಬ, ನಿಮ್ನನಾಭಿ, ನಿಭಿಡಕಚಭರ ಮತ್ತು ಶೋಭಾಕರದ ನಗುಮೊಗದೊಂದಿಗೆ, ವರದಾ ಮತ್ತು ಅಭಯ ಮುದ್ರೆಯಲ್ಲಿ ಹಿಡಿದಿರುವ ಹಸ್ತಗಳು ಎಂಬ ವಿವರಣೆಗಳು, ಒಂದು ಸುಂದರವಾದ ಸರಸ್ವತಿಯ ಶಿಲ್ಪವನ್ನು ಕಣ್ಣಮುಂದೆ ನಿಲ್ಲಿಸುತ್ತವೆ.

ಸೋಮನಾಥ (ಸುಮಾರು ಕ್ರಿಶ. 1500)

ಸೋಮನಾಥಕವಿಯ 'ಅಕ್ರೂರ ಚರಿತೆ' ಭಾಮಿನಿ ಷಟ್ಪದಿಯಲ್ಲಿರುವ ಸಣ್ಣ ಕಾವ್ಯ. ಅದರಲ್ಲಿರುವ ಸರಸ್ವತಿಯ ಸ್ತುತಿಯಲ್ಲಿ ಸರಸವಾದ ಚತುರೋಕ್ತಿಯನ್ನು ಅನುಗ್ರಹಿಸಲಿ ಎಂದಿದೆ.

---

165. ತೊರವೆ ರಾಮಾಯಣ

ತಾಮರಸಭವನರಸಿ ಭಾರತಿ
ಸಾಮಜಾನನ ವಿಷಮಶರ ನಿ
ಸ್ಸೀಮ ವೇದವ್ಯಾಸಮುನಿ ಸುರಗುರುಗಳೊಲವಿನಲಿ
ರಾಮಣೀಯಕಮತಿಗೆ ನಯಸುಖ
ಕಾಮಿತಾರ್ಥಜ್ಞಾನಸರಸೋ
ದ್ದಾಮಚತುರೋಕ್ತಿಯನು ನೀಡುಗುಪಕ್ರಮಂಗಳಲಿ॥[166]

ಕಮಲಜನಾದ ಬ್ರಹ್ಮನ ರಾಣಿ ಸರಸ್ವತಿ ಮತ್ತು ಆನೆಮುಖದವನಾದ ಗಣಪತಿ ಹಾಗೂ ಅರ್ಥಾಲಂಕಾರಗಳಲ್ಲಿ ನಿಸ್ಸೀಮನಾದ ದೇವತೆಗಳಿಗೂ ಗುರು ಬೃಹಸ್ಪತಿ ಮತ್ತು ವೇದವ್ಯಾಸಮುನಿಯು ಒಲವಿನಿಂದ, ನನ್ನ ಈ ಕಾವ್ಯಕ್ಕೆ, ರಮಣೀಯವಾದ ಆಶಯಕ್ಕೆ ಹೊಸ ಸೊಗಸುಗಾರಿಕೆಯನ್ನೂ ಜ್ಞಾನವನ್ನೂ ಸರಸವಾದ ಉದ್ದಾಮವಾದ ಚತುರೋಕ್ತಿಯನ್ನೂ ನೀಡಿ ಸಹಕರಿಸಲಿ ಎಂಬುದು ಕವಿಯ ಪ್ರಾರ್ಥನೆ. ಸರಸ್ವತಿಗೆ ಸಂಬಂಧಿಸಿದ ಯಾವುದೇ ವಿಶೇಷವಿಲ್ಲ. 'ರಾಮಣೀಯಕಮತಿಗೆ ನಯಸುಖ ಕಾಮಿತಾರ್ಥ ಜ್ಞಾನ ಸರಸೋದ್ದಾಮ ಚತುರೋಕ್ತಿಯನ್ನು ನೀಡಲಿ' ಎಂದು ಸರಸ್ವತಿಯ ಜೊತೆಗೆ ಗಣಪತಿ, ಬೃಹಸ್ಪತಿ ಮತ್ತು ವ್ಯಾಸರನ್ನು ಸ್ತುತಿಸಿರುವುದು ಹೊಸದಾಗಿದೆ. ಹನ್ನೆರಡನೇ ಶತಮಾನದಿಂದೀಚೆಗೆ ಗಣಪತಿಗೆ ಕಾವ್ಯದೇವತೆಯ ಪಟ್ಟವೂ ಇದೆ. ಹರಿಹರನೇ 'ನವೀನಾರ್ಥವಾಕ್ಯಪ್ರಸನ್ನೋತ್ಪನ್ನಾಲಂಕಾರಮಂ ಕೊಡುಗೆ' ಎಂದು ಗಣಪತಿಯನ್ನು ಸ್ತುತಿಸಿದ್ದಾನೆ. ಸೋಮನಾಥಕವಿ ಹರಿಹರನನ್ನು ಅನುಸರಿಸಿದ್ದಾನೆ ಎನ್ನಬಹುದು.

ಶಿಶುಮಾಯಣ (ಸುಮಾರು ಕ್ರಿ.ಶ. 1500)

ಸರಸ್ವತಿಯ ವಿಚಾರದಲ್ಲಿ ಕನ್ನಡದ ಬಹುತೇಕ ಜೈನಕವಿಗಳು ಪಂಪನನ್ನೇ ಅನುಸರಿಸಿದ್ದಾರೆ. ಶಿಶುಮಾಯಣನ 'ತ್ರಿಪುರದಹನ ಸಾಂಗತ್ಯ'ದಲ್ಲಿರುವ ಪದ್ಯ ಮೇಲಿನ ಮಾತನ್ನೇ ಪುಷ್ಟೀಕರಿಸುತ್ತದೆ.

ಆದಿಜಿನರ ಮೊಗದೊಳಗುದಯಿಸಿ ಸರ್ವ
ಮೇದಿನಿಗುಪಕಾರವನು
ಆದರದಿಂದೆಸಗುವ ಶಾರದ ದೇವಿ
ಗಾದಿಯೊಳಾನೆರಗುವೆನು[167]

'ಆದಿಜಿನರ ಮೊಗದಿಂದುದಯಿಸಿ, ಈ ಭೂಮಿಯ ಸರ್ವರಿಗೂ ಪ್ರೀತಿಯಿಂದ ಉಪಕಾರವನ್ನು ಮಾಡುವ ಶಾರದಾದೇವಿಗೆ ಕಾವ್ಯದ ಆದಿಯಲ್ಲಿ ನಾನು ಎರಗುತ್ತೇನೆ' ಎನ್ನುವಲ್ಲಿ ಕೇವಲ ಸರಸ್ವತಿಯ ವಂದನೆಯಿದೆಯೇ ಹೊರತು, ಸರಸ್ವತಿಯ ದರ್ಶನವಿಲ್ಲ.

ಮೂರನೆಯ ಮಂಗರಸ (ಕ್ರಿ.ಶ. 1508)

ಮೂರನೆಯ ಮಂಗರಸಕವಿಯ 'ಜಯನೃಪಕಾವ್ಯ', 'ನೇಮಿಜಿನೇಶ ಸಂಗತಿ', 'ಸಮ್ಯಕ್ತ್ವ ಕೌಮುದಿ' ಮತ್ತು 'ಸೂಪಶಾಸ್ತ್ರ' ನಾಲ್ಕೂ ಕಾವ್ಯಗಳಲ್ಲಿ ಸರಸ್ವತಿಯ ಸ್ತುತಿಯಿದೆ.

---

166. ಅಕ್ರೂರ ಚರಿತ್ರೆ, 1–4
167. ತ್ರಿಪುರದಹನ ಸಾಂಗತ್ಯ

ಪರಬ್ರಹ್ಮಹೃದಯಸರಸಿರುಹೋ
ದರದೊಳಗೊಗೆದಾತನ ಸಿರಿಮೊಗದೊಳು
ಗರುವಿಕೆದಾಳಿ ನೆಱೆದು ಕೈವಲ್ಯಸತಿಗೆ ಸಹಚರಿಯಾಗಿ
ಭರದಿಂ ಭವ್ಯಭುಜಂಗರನವಳೊಳ್
ನೆರಪುವ ಕೋವಿದೆ ನರಸುರವಂದಿತೆ
ತರುಣೀಮಣಿ ಭಾರತಿ ಮನ್ಮತಿಗೀವುದು ಮಾಂಗಲ್ಯವನು[168]

ಯಾರ ಹೃದಯಕಮದಲ್ಲಿ ಜನಿಸಿದಳೋ, ಅಂತಹ ಪರಬ್ರಹ್ಮನ ಸಿರಿಮೊಗದಲ್ಲಿ ಚೆಲುವನ್ನು ತಾಳಿ ಸರಸ್ವತಿಯು ನೆಲಸಿದ್ದಾಳೆ. ಕೈವಲ್ಯಸತಿಗೆ ಸಹಚಾರಿಣಿಯಾಗಿ, ಸಡಗರದಿಂದ ಭವ್ಯಭುಜಂಗರೊಂದಿಗೆ ಸೇರಿಸುವ ನೈಪುಣ್ಯವತಿಯೂ, ನರ ಮತ್ತು ಸುರರಿಂದ ಪೂಜಿಸಲ್ಪಡುವವಳೂ ಆದ ತರುಣೀಮಣಿ ಭಾರತಿ ನೀನು ನಮ್ಮ ಮತಿಗೀವುದು ಮಂಗಳವನು ಎಂಬುದು ಕವಿಯ ಆಶಯ. ಆದರೆ 'ಭುಜಂಗ' ಎಂಬ ಪದಕ್ಕೆ ವಿಟ, ಜಾರ, ಹಾವು ಮೊದಲಾದ ಅರ್ಥಗಳನ್ನು ಪದಕೋಶದಲ್ಲಿ ಹೇಳಲಾಗಿದೆ. ಆದ್ದರಿಂದ 'ಕೈವಲ್ಯಸತಿಗೆ ಸಹಚರಿಯಾಗಿ ಭರದಿಂ ಭವ್ಯಭುಜಂಗರನವಳೊಳ್' ಎಂಬ ಮಾತು ಅಪಾರ್ಥಕ್ಕೆ ಎಡೆ ಮಾಡಿಕೊಡುತ್ತದೆ. **'ಸತಿಯೊಡನೆ ಚೆಲ್ಲಾಟ ವಿಟರಿಗೇನೋ ಸ್ವಾಭಾವಿಕ. ಆದರೆ ಕೈವಲ್ಯ ಸತಿಯೊಡನೆ ಭವ್ಯಭುಜಂಗರು ಚೆಲ್ಲಾಟವಾಡಬಹುದೆ? ಹಾಗಾದರೆ ಅವರು ಭವ್ಯರು ಅಂದರೆ ಜಿನಭಕ್ತರು ಹೇಗೆ? ಕೈವಲ್ಯಸತಿ ಹೇಗೆ? ಮತ್ತು ಇವರನ್ನು ನೆರಪುವುದಕ್ಕೆ ತರುಣೀಮಣಿ ಭಾರತಿ ಕೋವಿದೆಯಾಗಿ ಕೆಲಸ ಮಾಡಬೇಕೆ?'**[169] ಎಂಬ ಪ್ರಶ್ನೆಗಳನ್ನು ರಂ.ಶ್ರೀ.ಮುಗಳಿಯವರು ಎತ್ತಿದ್ದಾರೆ. ಭುಜಂಗ ಪದಕ್ಕೆ ಪತಿ, ಒಡೆಯ ಎಂಬ ಅರ್ಥಗಳು ಇರುವುದನ್ನೂ ನಾವು ಗಮನಿಸಬೇಕಾಗಿದೆ. ಇಲ್ಲಿ ಬರುವವರು ಕೇವಲ ಭುಜಂಗರಲ್ಲ; ಭವ್ಯ ಭುಜಂಗರು. ಅಂದರೆ ಜಿನಭಕ್ತರಾದ ಪತಿಗಳು, ಒಡೆಯರು ಎಂದರ್ಥ. ಆದರೂ 'ಭವ್ಯರೆಂಬ ಪತಿಗಳು' ಎಂಬ ಅರ್ಥ ಬರುವುದರಿಂದ, **'ಒಬ್ಬ ಸತಿಗೆ ಬಹುಪತಿಗಳು ಎಂಬ ವಿಪರೀತಾರ್ಥವಾಗುತ್ತದೆ'** ಎಂಬ ಮುಗಳಿಯವರ ಪ್ರಶ್ನೆ ಹಾಗೇ ಉಳಿಯುತ್ತದೆ. ನಾವು ಅದನ್ನು ಬೇರೊಂದು ರೀತಿಯಲ್ಲಿ ಪರಿಶೀಲಿಸಬಹುದಾಗಿದೆ. ನಾಗಚಂದ್ರನ **'ಕೈವಲ್ಯಬೋಧರಮಾ ಮೌಕ್ತಿಕಹಾರಯಷ್ಟಿ'**, ಪಾರ್ಶ್ವಕವಿಯ **'ಅತನುಜಿತಜಿನವದನದಿಂ ನಿರ್ವೃತಿಪಥವ ತೋರಲ್ಕೆತಾಸರಸತಿಯೆನಿಸಿ ಪೊರಮಟ್ಟು ನಿರ್ಮಳರೂಪನಾಂತೀಗ'** ಮತ್ತು ಬಾಹುಬಲಿ ಪಂಡಿತನ **'ಸರಸ್ವತೀ ಕಮಳಿನಿ ತೋರ್ಕೆ ಮುಕ್ತಿಕಮಳಾಮುಖಮಂ ನಮಗೊಲ್ದು ಲೀಲೆಯಿಂ'** ಎಂಬ ಪರಿಕಲ್ಪನೆಗಳನ್ನು ಗಮನಿಸಿದಾಗ, ಸರಸ್ವತಿಯನ್ನು ಮುಕ್ತಿಲಕ್ಷ್ಮಿಗಾಗಿ ಪ್ರಾರ್ಥಿಸುವುದು ಒಂದು ಸಂಪ್ರದಾಯವಾಗಿಯೇ ಬಂದಿರುವುದನ್ನು ಗಮನಿಸಬಹುದು. ಮುಕ್ತಿಸಂಪಾದನೆಗೆ ಸರಸ್ವತಿಯು ನೆರವಾಗುತ್ತಾಳೆ ಎಂಬುದು ಆಶಯ. ಆದ್ದರಿಂದ

168. ಜಯನೃಪಕಾವ್ಯ

169. ಮುಗಳಿ ರಂ.ಶ್ರೀ.: ಕನ್ನಡ ಸಾಹಿತ್ಯದಲ್ಲಿ ಸರಸ್ವತಿ ದರ್ಶನ, ಪುಟ.35-36

ಪ್ರಸ್ತುತ ಪದ್ಯದ ವಾಚ್ಯಾರ್ಥವನ್ನು ಮಾತ್ರ ಗಮನಿಸದೆ, ಜಿನಭಕ್ತ(ಭವ್ಯ)ರಾದ ಪತಿಗಳಿಗೆ, ಒಡೆಯರಿಗೆ (ಭುಜಂಗರಿಗೆ) ಮುಕ್ತಿಪದವಿಯನ್ನು ಸೇರುವುದಕ್ಕೆ ನೆರವಾಗುವವಳು ಸರಸ್ವತಿ ಎಂದು ಅರ್ಥೈಸುವುದೇ ಸೂಕ್ತ. ಇವರು ಕೇವಲ ಪತಿಗಳು ಅಥವಾ ಒಡೆಯರು ಮಾತ್ರ ಆಗಿರದೆ ಜಿನಭಕ್ತ(ಭವ್ಯ)ರಾದವರು ಎಂಬುದನ್ನು, ಜಿನಭಕ್ತರಿಗೆ ಮೋಕ್ಷಪದವಿ ಸಿಗುತ್ತದೆ ಎಂಬ ಕಲ್ಪನೆಯನ್ನು ಗಮನಿಸಿ, ಪ್ರಸ್ತುತ ಪದ್ಯದಲ್ಲಿ ಮೇಲ್ನೋಟಕ್ಕೆ ಕಾಣುವ ವಿಪರೀತಾರ್ಥನ್ನು ತೊಡೆದು ಹಾಕಬಹುದಾಗಿದೆ. ಮಂಗರಸ ತನ್ನ 'ನೇಮಿಜಿನೇಶನ ಸಂಗತಿ'ಯಲ್ಲಿ ಸರಸ್ವತಿಯನ್ನು 'ನಿರ್ಮಲನಿಶ್ರೇಯೋಮಾರ್ಗ ನಿಶ್ರೇಣಿ' ಎಂದು ಕರೆದಿದ್ದಾನೆ.

ವಾಣಿ ವೃಜಿನ ಘನತರಕಾಂತಾರ ಕೃ
ಪಾಣಿ ಸಂಸಾರವಾರಿಧಿಗೆ
ದ್ರೋಣಿ ನಿರ್ಮಲನಿಶ್ರೇಯೋಮಾರ್ಗ ನಿ
ಶ್ರೇಣಿಗೆ ನಾನೆರಗುವೆನು[170]

ಕಡಿದಾದ ಕಾಡಿನಂತಿರುವ ಕ್ಲೇಶಗಳಿಗೆ ಕಠಾರಿಯಂತೆ ಇರುವವಳು, ಸಂಸಾರವೆಂಬ ಸಮುದ್ರಕ್ಕೆ ದೋಣಿಯಂತೆ ಇರುವವಳು, ನಿರ್ಮಲವಾದ ಯಶಸ್ಸ(ಮುಕ್ತಿಪದವಿಯ)ನ್ನು ಗಳಿಸಲು ಇರುವ ಮಾರ್ಗಕ್ಕೆ ಏಣಿಯಂತಿರುವವಳು ವಾಗ್ದೇವಿ. ಅವಳಿಗೆ ನಾನು ನಮಸ್ಕರಿಸುತ್ತೇನೆ. ಇಡೀ ಪದ್ಯ ಅಗ್ಗಳನ **'ಚಂದ್ರಪ್ರಭಪುರಾಣಂ'** ಕಾವ್ಯದ **'ದುರಿತವ್ರಾತಲತಾಕೃಪಾಣಿ ವಿಸರದ್ದುರ್ಬೋಧರೋದಸ್ವಿನೀ ತರಣದ್ರೋಣಿ ಸಮುನ್ನತಾಕ್ಷಯಪದ ಪ್ರಾಸಾದ ನಿಶ್ರೇಣಿ'** ಎಂಬ ಪದ್ಯದಿಂದ ಪ್ರಭಾವಿತವಾಗಿದೆ. 'ಸಮ್ಯಕ್ತ್ವ ಕೌಮುದಿ'ಯಲ್ಲಿ ಬಂದಿರುವ **'ವಾಣಿವೀಣಾಪಾಣಿ... ಜಿನಮುಖಜನಿತವಾಣಿ ಶಾಸ್ತ್ರಕ್ಷೋಣಿ ಮಾಣದೆನ್ನೆದೆಯಲಿ ನೆಲಸಿ ಸನ್ಮತಿಯೀವುದು'** ಎಂಬ ಪದ್ಯದ ಮೇಲೂ 'ಚಂದ್ರಪ್ರಭಪುರಾಣಂ' ಕಾವ್ಯದ **'ದುರಿತವ್ರಾತಲತಾಕೃಪಾಣಿ....'** ಪದ್ಯದ ಪ್ರಭಾವವಿದೆ. ಜಯನೃಪಕಾವ್ಯದ 'ಮುಕ್ತಿಪದವಿಯನ್ನು ಸೇರುವುದಕ್ಕೆ ನೆರವಾಗುವವಳು ಸರಸ್ವತಿ' ಎಂಬುದಕ್ಕೆ ಪೂರಕವಾಗಿ 'ನಿರ್ಮಲನಿಶ್ರೇಯೋಮಾರ್ಗ ನಿಶ್ರೇಣಿ ಅಂದರೆ ನಿರ್ಮಲವಾದ ಯಶಸ್ಸ(ಮುಕ್ತಿಪದವಿಯ)ನ್ನು ಗಳಿಸಲು ಇರುವ ಮಾರ್ಗಕ್ಕೆ ಏಣಿಯಂತಿರುವವಳು ವಾಗ್ದೇವಿ' ಎಂಬ ಮಾತು ಬಂದಿದೆ.

ಅಡಿಗೆಯನ್ನು ಕುರಿತ ಕನ್ನಡದ ಮೊದಲ ಸ್ವತಂತ್ರ ಕೃತಿ 'ಸೂಪಶಾಸ್ತ್ರ'ವನ್ನು ಮಂಗರಸನು ರಚಿಸಿದ್ದಾನೆ. ಕೃತಿಯ ಎರಡನೇ ಪದ್ಯದಲ್ಲಿಯೇ ಸೂಪಶಾಸ್ತ್ರಕ್ಕನುಗುಣವಾಗಿ ಸರಸ್ವತಿಯನ್ನು ನೆನೆಯುತ್ತಾನೆ.

ನವ ಕವೀಶ್ವರ ವಿಕಸಿತಾನನ ಘಟಂಗಳೊಳು
ನವರಸವನಿಟ್ಟು ಪರಿಣತೆ ಪ್ರೇಕ್ಷೆ ಮೊದಲಾದ
ವಿವಿಧ ಪರಿಕರಮನೊಡಗಲೆಸಿ ಬಳಿಕವರ ನಾಲಗೆಯೆಂಬ ದರ್ವಿವಿಡಿದು

---

170. ನೇಮಿಜಿನೇಶ ಸಂಗತಿ

ತವೆ ಪಾಕಮಂ ಮಾಡಿ ರಸಿಕಜನಸಂತತಿಯ
ಕಿವಿಗೆ ತೀವುವ ಭಾರತೀದೇವಿಯಂ ನೆನೆದು
ಸವಿವಡೆದ ಷಡ್ರಸವಿಪಾಕಭೇದಮನೆನ್ನ ಬಲ್ಲಂದದಿಂ ಪೇಳ್ವೆನು[171]

ಹೊಸ ಕವೀಶ್ವರರ ನಗುವಿನಿಂದ ಬಿರಿದ ಮುಖಗಳೆಂಬ ಪಾತ್ರೆಗಳಲ್ಲಿ ನವರಸಗಳನ್ನು ಹಾಕಿ, ಚಾತುರ್ಯ, ದರ್ಶನ (ಶೋಭೆ) ಮೊದಲಾದ (ಕಾವ್ಯ) ಪರಿಕರಗಳೊಂದಿಗೆ ಕಲೆಸಿ, ಬಳಿಕ ಅವರ (ಹೊಸ ಕವೀಶ್ವರರ) ನಾಲಗೆಯೆಂಬ ಸೌಟಿನಿಂದ ತಿರುಗಿಸುತ್ತಾ, ಒಳ್ಳೆಯ ಅಡುಗೆಯನ್ನು (ಕಾವ್ಯವನ್ನು) ಮಾಡಿ (ಹೇಳಿಸಿ), ರಸಿಕ ಜನರ ಬಾಯಿಗೆ (ಕಿವಿಗೆ) ತುಂಬುವ ಭಾರತಿ(ಸರಸ್ವತಿ)ಯನ್ನು ಸ್ತುತಿಸಿ, ರುಚಿಯಿಂದ, ಷಡ್ರಸಗಳಿಂದ ಕೂಡಿದ ಪಾಕ ವಿಶೇಷಗಳನ್ನು ತಿಳಿದ ಮಟ್ಟಿಗೆ ಹೇಳುತ್ತೇನೆ ಎಂಬುದು ಮಂಗರಸನ ನಿವೇದನೆ. ಸರಸ್ವತಿಯನ್ನು (ಕಾವ್ಯವೆಂಬ) ಪಾಕಶಾಸ್ತ್ರಪ್ರವೀಣೆಯಾಗಿಸಿರುವುದು ಕವಿಯ ಚಮತ್ಕಾರವನ್ನು ತೋರಿಸುತ್ತದೆ. ಜೊತೆಗೆ ಸರಸ್ವತಿಗೆ ಹೊಸತೆರನಾದ ಆದರೆ ವಿಶೇಷವಾದ ಪಾತ್ರವನ್ನೂ ಕಲ್ಪಿಸುತ್ತದೆ.

ಕನಕದಾಸರು (ಸುಮಾರು ಕ್ರಿ.ಶ. 1550)

ಕನಕದಾಸರು ತಮ್ಮ 'ನಳಚರಿತ್ರೆ'ಯಲ್ಲಿ ಸರಸ್ವತಿಯ ಸೌಂದರ್ಯವನ್ನು ಶಕ್ತಿಯನ್ನು ಹೇಳುತ್ತಾ, ಸಂತೋಷದಿಂದ ಪ್ರೀತಿಯಿಂದ ನನ್ನ ನಾಲಿಗೆಯಲ್ಲಿ ನೆಲಸು ಎಂದು ಆಕೆಯನ್ನು ಪ್ರಾರ್ಥಿಸಿದ್ದಾರೆ.

ನಾರಿ ನಳಿನದಳಾಕ್ಷಿ ವರ ಜಂ
ಭಾರಿನುತೆ ಚತುರಾನನ ಪ್ರಿಯೆ
ಭೂರಿ ಶುಭಗುಣಭರಿತೆ ಭಕ್ತಾಶ್ರಿತಜನಾಧಾರೆ
ನೀರೆ ನಿಗಮ ವಿಚಾರೆ ಘನಶೃಂ
ಗಾರೆ ಭಕ್ತರಿಗೊರೆವ ಕೊಡುವ ಉ
ದಾರೆ ಶಾರದೆ ನಲಿದೊಲಿದು ನೆಲಸೆನ್ನ ಜಿಹ್ವೆಯಲಿ[172]

ನಳಿನದಳಾಕ್ಷಿ, ಶುಭಗುಣಭರಿತೆ ಮತ್ತು ಘನಶೃಂಗಾರೆ ಎಂಬವುಗಳು ಸರಸ್ವತಿಯ ಸೌಂದರ್ಯಕ್ಕೆ ಸಂಬಂಧಿಸಿದ ವಿಶೇಷಣಗಳಾಗಿದ್ದರೆ, ಭಕ್ತಾಶ್ರಿತಜನಾಧಾರೆ, ಭಕ್ತರಿಗೊರೆವ ಕೊಡುವ ಉದಾರೆ ಎಂಬ ವಿಶೇಷಣಗಳು ಆಕೆಯ ಸಾಮರ್ಥ್ಯವನ್ನು ಹೇಳುತ್ತವೆ. ನಿಗಮ ವಿಚಾರೆ ಎಂಬುದು ಸರಸ್ವತಿಯು ವೇದಗಳಿಗೆ ಅಧಿದೇವತೆ ಎಂಬುದನ್ನು ನೆನಪಿಸುತ್ತದೆ. ನಾರಿ, ನೀರೆ ಎಂಬ ಸಾಮಾನ್ಯವಾದ ವಿಶೇಷಣಗಳೂ ಇವೆ. ಆದರೆ 'ಜಂಭಾರಿನುತೆ' ಎಂಬುದನ್ನು ಪ್ರತ್ಯೇಕವಾಗಿ ಗಮನಿಸಬೇಕಾಗಿದೆ. ಜಂಭಾ(ಜಮ್ಭಾ)ಸುರ ಎಂಬ ಹೆಸರಿನ ರಾಕ್ಷಸ ಕಯಾದುವಿನ ತಂದೆ; ಪ್ರಹ್ಲಾದನ ತಾತ.

---

171. ಸೂಪಶಾಸ್ತ್ರ, ಪೀಠಿಕೆ, ಪದ್ಯ –2

172. ನಳಚರಿತ್ರೆ, 1–5

ತಾರಕಾಸುರನೊಂದಿಗೆ ಯುದ್ಧ ಮಾಡುವಾಗ ವಿಷ್ಣು ಜಂಭಾಸುರನನ್ನು ಕೊಲ್ಲುತ್ತಾನೆ.[173] ಆದ್ದರಿಂದ ವಿಷ್ಣುವಿಗೆ ಜಂಭಾರಿ ಎಂಬ ಮಾತು ಒಪ್ಪುತ್ತದೆ. ಜಂಭಾರಿನುತೆ ಎಂದರೆ ವಿಷ್ಣುವಿನಿಂದ ಸ್ತುತಿಗೊಂಡವಳು ಸರಸ್ವತಿ ಎಂದಾಗುತ್ತದೆ. ಇಂದ್ರನಿಗೂ ಜಂಭಾರಿ ಎಂಬ ಮಾತು ಅನ್ವಯವಾಗುವುದರಿಂದ, ನಳಚರಿತ್ರೆಯ ಗದ್ಯಾನುವಾದದಲ್ಲಿ **'ಜಂಭಾಸುರನನ್ನು ಕೊಂದ ಇಂದ್ರನಿಂದ ಹೊಗಳಿಸಿಕೊಂಡವಳು'**[174] ಎಂದು ಅನುವಾದ ಇದೆ.

ಕನಕದಾಸರ 'ರಾಮಧಾನ್ಯ ಚರಿತ್ರೆ'ಯಲ್ಲಿ ಸರಸ್ವತಿಯ ಪ್ರತ್ಯೇಕ ಸ್ತುತಿಯಿಲ್ಲ. ಆದರೆ ಶಿವ, ವಿಷ್ಣು, ಗಣಪತಿಯರ ಜೊತೆಗೆ ಗೀರ್ವಾಣಿ(ಸರಸ್ವತಿ)ಗೆ ನಮಸ್ಕರಿಸುತ್ತೇನೆ[175] ಎಂದಷ್ಟೇ ಹೇಳಿದೆ. ಕನಕದಾಸರ **'ನಮ್ಮಮ್ಮ ಶಾರದೆ ಉಮಾಮಹೇಶ್ವರಿ ನಿಮ್ಮೊಳಗಿಹನ್ಯಾರಮ್ಮ'**[176] ಎಂಬ ಗಣಪತಿಯನ್ನು ಕುರಿತ ಹಾಡಿನಲ್ಲಿ, ಸರಸ್ವತಿಯು ಉಮಾಮಹೇಶ್ವರಿಯೊಂದಿಗೆ ಮಾತೃದೇವತೆಯಾಗಿ ಪ್ರಾರ್ಥನೆಗೊಂಡಿದ್ದಾಳೆ.

ಪುರಂದರದಾಸರು ಮತ್ತು ಇತರ ಹರಿದಾಸರ ಕೃತಿಗಳು (ಸುಮಾರು ಕ್ರಿ.ಶ. 1550ರಿಂದ)

ಪುರಂದರದಾಸರು ಸರಸ್ವತಿಯನ್ನು ಕುರಿತು ಐದು ಮತ್ತು ಭಾರತಿಯನ್ನು ಕುರಿತು ಒಂದು ಕೀರ್ತನೆಯನ್ನು ರಚಿಸಿದ್ದಾರೆ. **'ಒಂದೇ ಮನದಲ್ಲಿ ಭಜಿಸು ವಾಗ್ದೇವಿಯ'**[177] ಎಂಬ ಕೃತಿ ಪ್ರತ್ಯಕ್ಷವಾಗಿ ಸರಸ್ವತಿಯ ಸ್ತುತಿಯಂತೆ ಕಂಡರೂ, ಪರೋಕ್ಷವಾಗಿ **(ಇಂದುಮತಿ ಕೊಡುವಳು ಶ್ರೀಹರಿಯ ಧ್ಯಾನದೊಳು)** ಶ್ರೀಹರಿಯ ಸ್ತುತಿಯೇ ಆಗಿದೆ. ಇಲ್ಲಿ ಪೌರಾಣಿಕ ಕಥೆಗಳಲ್ಲಿ ಬರುವ ಎರಡು ಘಟನೆಗಳನ್ನು ಬಳಸಿಕೊಳ್ಳಲಾಗಿದೆ. ಒಂದರಲ್ಲಿ, **'ಪ್ರಹ್ಲಾದನು ಕಮಲಜನ ಸತಿಗೆರಗಿ'** ವಿದ್ಯಾಭ್ಯಾಸವನ್ನು ಪ್ರಾರಂಭಿಸಿದ್ದರಿಂದ, ಸರಸ್ವತಿಯು ಪ್ರಹ್ಲಾದನಿಗೆ ಹರಿಯೇ ವಿಶ್ವಮಯನು ಎಂಬ ಭಾವಶುದ್ಧಿಯನಿತ್ತು ಹರಿಯ ಚರಣ ದೊರಕುವುಂತೆ ಮಾಡಿದಳು ಎಂಬ ಕಥೆಯಿದೆ. ಇನ್ನೊಂದರಲ್ಲಿ, **'ದಶಮುಖನನುಜ ವಂದಿಸದೆ ವಾಣಿಯನು'** ತಪಸ್ಸನ್ನು ಮಾಡಿದ್ದಕ್ಕೆ, ಬ್ರಹ್ಮನಿಂದ ವರವನ್ನು ಬೇಡುವ ಕಾಲದಲ್ಲಿ, ಕುಂಭಕರ್ಣನ ನಾಲಿಗೆಯ ತುದಿಯಲ್ಲಿ ನಿಂತು **'ನಿದ್ರೆಯನು ಬೇಡಿಸಿದಳು'** ಎಂಬ ಕಥೆಯಿದೆ. **'ಅರಿತು ಭಜಿಸಲು ಬಿಡದೆ ಅಜನರಸಿಯ ನಿತ್ಯ'** ವಾಕ್‌ಶುದ್ಧಿ ದೊರೆಯುತ್ತದೆ; ವಾಗ್ದೇವಿಯಿಂದ ಪುರಂದರವಿಠಲನ ಪರತತ್ವದ ಕಥಾಮೃತ ದೊರೆಯುತ್ತದೆ ಎಂಬ ಫಲಶ್ರುತಿಯೂ ಇದೆ.

---

173. ಪುರಾಣನಾಮ ಚೂಡಾಮಣಿ, ಪುಟ –222
174. ಹಾತೂರು ಶಂಕರನಾರಾಯಣ ಭಟ್ಟ: ಕನಕದಾಸರ ನಳಚರಿತ್ರೆ, (ಗದ್ಯಾನುವಾದ) ಪು.2
175. ರಾಮಧಾನ್ಯ ಚರಿತ್ರೆ, ಪದ್ಯ –2
176. ಸಮಗ್ರ ದಾಸ ಸಾಹಿತ್ಯ ಸಂ. 5, ಭಾಗ –1, ಕೀರ್ತನೆ –1
177. ಅದೇ, ಸಂ. 3, ಭಾಗ –1, ಕೀರ್ತನೆ –199

'ಕೊಡುಬೇಗ ದಿವ್ಯ ಮತಿ-ಸರಸ್ವತಿ'[178] ಎಂಬ ಕೀರ್ತನೆಯಲ್ಲಿ, ಬುದ್ಧಿದೇವತೆಯಾದ ಸರಸ್ವತಿಯು ವಿದ್ಯಾಭಿಮಾನಿ ಬ್ರಹ್ಮನ ರಾಣಿ; ಆದ್ದರಿಂದ ಹರಿಯ ಹಿರಿಯ ಸೊಸೆ ಎಂಬ ಚಮತ್ಕೃತಿಯಿದೆ. **'ಬಂದೆನ್ನ ವದನದಿ ನಿಂದು ನಾಮವ ನುಡಿಸು'** ಎಂಬ ಮಾತು ಹಿಂದಿನ ಕವಿಗಳ 'ನನ್ನ ಮುಖಕಮಲದಲ್ಲಿ ನೆಲಸು' ಎಂಬರ್ಥದ ಕಲ್ಪನೆಗಳನ್ನು ನೆನಪಿಸುತ್ತದೆ.

'ನಲಿದಾಡೆ ಎನ್ನ ನಾಲಿಗೆ ಮೇಲೆ ಸರಸ್ವತೀದೇವಿ'[179] ಎಂಬ ಕೀರ್ತನೆಯಲ್ಲೂ ಸರಸ್ವತಿಯು ವಾಗ್ದೇವತೆಯ ರೂಪದಲ್ಲಿ ಪ್ರಕಟಗೊಂಡಿದ್ದಾಳೆ. ಇಲ್ಲಿ ವಾಗ್ದೇವತೆಯ ರೂಪ ಕಣ್ಣಿಗೆ ಕಟ್ಟುವಂತೆ ಇದೆ. ಎಳೆಯ ಮಾವಿನ ಚಿಗುರನ್ನು ಹೋಲುವ ಪಾದಗಳು, ನಲಿವ ಯುಗಳ ಜಂಘೆ, ಚೆಲುವಾದ ಪೆಂಡೆ, ಜಲಗುಳ್ಳೆಯಂತೆ ಅತ್ತಿತ್ತ ಚಲಿಸುವ ಮಂಡಿ, ಥಳಥಳಿಸುವ ತೊಡೆ, ಕೋಟಿ ಸೂರ್ಯಕಾಂತಿಯ ಮುಖ, ಘನನಿತಂಬ, ಸುಳಿನಾಭಿ, ಕರಿರಾಜಪೋತನ ಸೊಂಡಿಲಿನಂತಹ ಭುಜಗಳು, ಘನಸ್ತನ, ನಗುವಿನಿಂದ ಕೂಡಿದ ಮುಖ, ಕಪೋಲ, ಬಿಸಜದಳದಂತೆ ಎಸೆವ ಕಣ್ಣುಗಳು, ಕುಸುಮವನ್ನು ಮುಡಿದ ಮೂರ್ಧಜ ಹೀಗೇ ವಾಗ್ದೇವಿಯ ದೈಹಿಕ ಸೌಂದರ್ಯವನ್ನು ದಾಸರು ವರ್ಣಿಸಿದ್ದಾರೆ. ಕಾಲ್ಗೆಜ್ಜೆಯ ನಾದ, ಅಂದುಗೆಯ ಸದ್ದು, ಬೆರಳುಂಗುರದ ಹೊಳಪು, ದುಂಡಾದ ಮುತ್ತಿನಿಂದ ಮಾಡಿದ ಕೊರಳ ಹಾರ, ಉದ್ದಂಡಮಣಿ ಮತ್ತು ಹೊನ್ನಿನಹಾರ, ಕಂಕಣ, ತೋಳ್ಬಳೆಗಳು, ನಾಸಾಭರಣ, ಹೊಸದಾದ ಕುಂಡಲಗಳು, ಹಸನಾದ ತಿಲಕ, ಜಡೆಬಂಗಾರ, ಮುಡಿದ ಹೊಂಗೇದಗೆ, ರಾಗುಟಿ ಮೊದಲಾದ ಆಭರಣಗಳೂ ಮತ್ತು ಅವುಗಳ ಸೊಬಗೂ ಸಾಲದೆಂಬಂತೆ **'ಶಶಿ ಸೂರ್ಯರಾಭರಣ ಸುಶೋಭಿತೆ'** ಎಂದೂ **'ಮಂಗಳಮೂರ್ತಿ ಶುಭಾಂಗಿ'** ಎಂದೂ ಕರೆದಿದ್ದಾರೆ.

'ಪಾಲಿಸೆಮ್ಮ ಮುದ್ದು ಶಾರದೆ ಎನ್ನ ನಾಲಗೆಯಲಿ ನಿಲ್ಲಬಾರದೆ'[180] ಎಂಬ ಕೃತಿಯಲ್ಲಿ ಶೃಂಗೇರಿಯ ಶಾರದೆಯ ವರ್ಣನೆಯಿದೆ. **'ಶೃಂಗಾರಪುರ ನೆಲೆವಾಸಿನಿ ದೇವೀ ಸಂಗೀತ ಗಾನ ವಿಲಾಸಿನಿ'** ಎಂದು, **'ಅಕ್ಷರಕ್ಷರ ವಿವೇಕವ'** ನೀಡು ಎಂದು ಸ್ತುತಿಸಿದ್ದಾರೆ. ಸರ್ವಾಲಂಕಾರ ಮೂರುತಿ, ಬ್ರಹ್ಮನ ರಾಣಿ ಮೊದಲಾದವು ಪುನರಾವರ್ತಿತವಾಗಿವೆ.

'ಶರಣೆಂಬೆ ವಾಣಿ ಪೊರೆಯೆ ಕಲ್ಯಾಣಿ'[181] ಎಂಬ ಕೀರ್ತನೆಯಲ್ಲಿ ಹರಿಯ ತೋರಿಸೆಂದು ಪುರಂದರವಿಠಲನ ಸೋದರ ಸೊಸೆಯಾದ ಸರಸ್ವತಿಯನ್ನು ಸ್ತುತಿಸಿದ್ದಾರೆ. ವಾಣಿ, ಕಲ್ಯಾಣಿ, ವಾಗಭಿಮಾನಿ, ವರಬ್ರಹ್ಮಾಣಿ, ಸುಂದರವೇಣಿ, ಸಂಚರಿತ್ರಾಣಿ ಎಂಬ ವಿಶೇಷಣಗಳು ಅನುಪ್ರಾಸಗಳ

---

178. ಅದೇ, ಕೀರ್ತನೆ –200
179. ಅದೇ, ಕೀರ್ತನೆ –201
180. ಅದೇ, ಕೀರ್ತನೆ –202
181. ಅದೇ, ಕೀರ್ತನೆ –203

ಮೂಲಕ ಬಂದಿವೆ. ಇಂತಹ ವಾಣಿಯಲ್ಲಿ **'ಶ್ರುತಿಯನ್ನು ಹಾಡಿ, ಮತಿಯನ್ನು ಬೇಡುವೆ'** ಎನ್ನುತ್ತಾರೆ ಪುರಂದರದಾಸರು.

ಪುರಂದರದಾಸರು ಸ್ತುತಿಸಿರುವ (**ಏನು ಮರುಳಾದೆಯೇ ಎಲೆ ಭಾರತೀ ವಾನರ ಕುಲದೊಳಗೆ ಶ್ರೇಷ್ಠನಾದವಗೆ**) **ಭಾರತಿಗೂ,**[182] ಸರಸ್ವತಿಗೂ ಸಂಬಂಧವಿದ್ದಂತೆ ಕಾಣುವುದಿಲ್ಲ. ಇಲ್ಲಿ ಭಾರತಿ ವಾಯುಸಂಬಂಧಿಯಾದ ದೇವತೆಯಾಗಿದ್ದಾಳೆ. ಋಗ್ವೇದದಲ್ಲಿ ಭಾರತಿ ಎಂಬ ದೇವತೆಯನ್ನು ಆದಿತ್ಯಸಂಬಂಧಿಯಾದ ದೇವತೆ; ವಾಕ್ ಎಂದು ಸ್ತುತಿಸಿರುವುದುಂಟು. ಮಾಧ್ವ ಸಂಪ್ರದಾಯದಲ್ಲಿ ಭಾರತಿ ವಾಯುವಿನ ಪತ್ನಿಯಾಗಿದ್ದಾಳೆ. ಆದ್ದರಿಂದ ಕನ್ನಡದ ದಾಸ ಸಾಹಿತ್ಯದಲ್ಲಿ ಸ್ತುತಿಗೊಂಡಿರುವ ಭಾರತಿಗೂ ಸರಸ್ವತಿಗೂ ಯಾವುದೇ ಸಂಬಂಧವಿಲ್ಲ.

ವಾದಿರಾಜರು ಸರಸ್ವತಿ[183] ಮತ್ತು ಭಾರತಿಗೆ[184] ಸಂಬಂಧಿಸಿದ ಒಂದೊಂದು ಕೀರ್ತನೆಯನ್ನು ರಚಿಸಿದ್ದಾರೆ. ಭಾರತಿಯನ್ನು ಸ್ತುತಿಸಿರುವ **'ಭಾರತಿ ದೇವಿಯೆ ಮಾರುತಿ ರಾಣಿಯೆ'** ಕೀರ್ತನೆಯಲ್ಲಿ ಭಾರತಿ ಮಾರುತನ ಸತಿಯಾಗಿ ಚಿತ್ರಿತಳಾಗಿದ್ದಾಳೆ. **'ಮಂದಿ ನಾಲ್ವರನ್ನು ಹೊಂದಿಸಿ ಉದರದಿ ಒಂದೆ ರೂಪದಿ ಜನರಿಗೆ ತೋರುವ ಸತಿ'** ಅಂದರೆ ಪಾರ್ವತಿ, ಶಚಿ, ಶ್ಯಾಮಲಾ ಮತ್ತು ಉಷಾದೇವಿಯರನ್ನೊಳಗೊಂಡು ಅವತರಿಸಿದವಳು ಭಾರತಿ. ಆದರೆ ಇಲ್ಲಿ ವರ್ಣಿತಳಾಗಿರುವ ಭಾರತಿಗೂ ವಾಗ್ದೇವತೆಯ ಸ್ವರೂಪವನ್ನುಳ್ಳ ಭಾರತಿಗೂ ಸಂಬಂಧವಿಲ್ಲ.

ಸರಸ್ವತಿಯನ್ನು ನೇರವಾಗಿ ಸ್ತುತಿಸಿರುವ ಕೀರ್ತನೆಯ ಪಲ್ಲವಿ ಸಾಂಪ್ರದಾಯಕವಾಗಿದೆ. **'ವಾಣಿ ಪರಮಕಲ್ಯಾಣಿ ನಮೋನಮೋ ಅಜನ ರಾಣಿ ಪಂಕಜ ಪಾಣಿ'** ವಾಣಿ, ಕಲ್ಯಾಣಿ, ಬ್ರಹ್ಮನ ರಾಣಿ ಮತ್ತು ಪಂಕಜಪಾಣಿ ಎಂಬ ವಿಶೇಷಣಗಳು ಸಾಂಪ್ರದಾಯಕವಾಗಿಯೇ ಇವೆ. ಕೈಯಲ್ಲಿ ಕಮಲವನ್ನು ಹಿಡಿದಿರುವ ಸರಸ್ವತೀ ಶಿಲ್ಪಗಳೂ ಸಿಗುತ್ತವೆ. 'ಶುಭನಿತಂಬೆ' ಮತ್ತು 'ಹೊಳೆ ಹೊಳೆವ ಮುಖ ಮುಕುರ ಬಿಂಬೆ' ಎಂಬವುಗಳು 'ಇಳೆಯೊಳಗೆ ಸರಿಗಾಣೆ ಶಾರದಾಂಬೆ ಪುತ್ಥಳಿಬೊಂಬೆ' ಎಂದು ವರ್ಣಿಸಲು ಬಳಸಿರುವ ವಿಶೇಷಣಗಳು, 'ಚರಣದಂದುಗೆಯ ಠೀವಿ ನಳನಳಿಸುವಾಭರಣಗಳನ್ನಿಟ್ಟು ಸುಖವೀವ' ವಾಗ್ದೇವಿಯ ಕಣ್ಣುಗಳು ಹರಿಣವನ್ನು ಹೋಲುತ್ತವೆ. 'ದಯಮಾಡು ಧವಳಗೀತೆ' ಎಂಬುದು ವಾಕ್ ಶುಚಿತ್ವವನ್ನು ಸೂಚಿಸುತ್ತಿರುವಂತಿದೆ.

ಒಟ್ಟಿನಲ್ಲಿ, ಸುಮಾರು 20ಕ್ಕೂ ಹೆಚ್ಚು ಕೀರ್ತನೆಕಾರರ 75ಕ್ಕೂ ಹೆಚ್ಚು ಸರಸ್ವತಿಗೆ ಸಂಬಂಧಿಸಿದ ಕೀರ್ತನೆಗಳು ದೊರೆತಿವೆ. ಅವುಗಳನ್ನು ಕೆಳಕಂಡಂತೆ ಮೂರು ಭಾಗಗಳನ್ನಾಗಿ ಮಾಡಬಹುದು.

---

182. ಅದೇ, ಕೀರ್ತನೆ –204

183. ಸಮಗ್ರ ದಾಸ ಸಾಹಿತ್ಯ ಸಂ. 2, ಕೀರ್ತನೆ –136

184. ಅದೇ, ಕೀರ್ತನೆ –137

1. ಸರಸ್ವತಿಗೆ ನೇರವಾಗಿ ಸಂಬಂಧಿಸಿದ ಕೀರ್ತನೆಗಳು
2. ಭಾರತಿ ಹೆಸರಿನಲ್ಲಿ ಸರಸ್ವತಿಯನ್ನು ಸ್ತುತಿಸಿರುವ ಕೀರ್ತನೆಗಳು
3. ಸರಸ್ವತಿಗೆ ಸಂಬಂಧಿಸಿದ ವಿಶೇಷಣಗಳಿಂದ ಭಾರತಿಯನ್ನು ಮಾರುತಸತಿಯೆಂದು ಸ್ತುತಿಸಿರುವ ಕೀರ್ತನೆಗಳು

ಈ ಮೂರೂ ವಿಭಾಗದ ಕೀರ್ತನೆಗಳ ಕೃತಿಕಾರರು, ಮೊದಲಸಾಲು ಮತ್ತು ವಿಶೇಷಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಿದೆ. ಹೆಚ್ಚಿನ ಕೃತಿಗಳಲ್ಲಿ ಪುನರಾವರ್ತನೆ ಎದ್ದು ಕಾಣುತ್ತದೆ. ವಾಣಿ, ವೀಣಾಪಾಣಿ, ಬ್ರಹ್ಮನ ರಾಣಿ, ನೀಳವೇಣಿ, ಪುಸ್ತಕಪಾಣಿ, ಹರಿಯ ಹಿರಿಯ ಸೊಸೆ ಇವೇ ಮೊದಲಾದ ಕೆಲವು ವಿಶೇಷಣಗಳು ಭಾಗಶಃ ಎಲ್ಲ ಕೃತಿಗಳಲ್ಲೂ ಕಂಡುಬರುತ್ತವೆ. ಅಕ್ಷರಕ್ಷರ ವಿವೇಕಿ, ವೇದಪ್ರಮಾಣೆ, ಕವಿಜನ ಸೇವಿತೆ ಎಂಬ ವಿಶೇಷಣಗಳೂ ಕಂಡು ಬರುತ್ತವೆ. ಒಂದೆರಡು ಕೃತಿಗಳಲ್ಲಿ ಗಾಯತ್ರಿ ಸಾವಿತ್ರಿ ಬ್ರಾಹ್ಮಿ ಎಂದು ಸರಸ್ವತಿಯನ್ನು ಕರೆಯಲಾಗಿದೆ. 'ಮಾನ್ಯ ಮಧ್ವರ ಶಾಸ್ತ್ರ ಕನ್ಯೆಗೆ ಚೆನ್ನ ಕನ್ನಡ ಕವಚತೊಡಿಸಿದ ಶಾರದೆ' ಎಂಬುದು ಸರಸ್ವತಿಯನ್ನು ಕನ್ನಡತಿಯನ್ನಾಗಿಸಿದೆ. ಶೃಂಗೇರಿಯ ಶಾರದೆಗೂ ಸರಸ್ವತಿಗೂ ನಡುವೆ ಯಾವ ವ್ಯತ್ಯಾಸವೂ ಕೀರ್ತನೆಗಳಲ್ಲಿ ಕಂಡುಬರುವುದಿಲ್ಲ. ಹಂಸ ಮತ್ತು ನವಿಲು ಎರಡನ್ನು ಸರಸ್ವತಿಗೆ ವಾಹನವನ್ನಾಗಿಸಿ ಸ್ತುತಿಸಲಾಗಿದೆ. 'ಗಂಗೆ ಯಮುನೆ ಉಭಯ ಸಂಗಮೆ' ಎಂಬ ವಿಶೇಷಣವೂ ಬಳಕೆಯಾಗಿದೆ.

ಸರಸ್ವತಿಗೆ ನೇರವಾಗಿ ಸಂಬಂಧಿಸಿದ ಕೀರ್ತನೆಗಳು ಮತ್ತು ವಿಶೇಷಗಳು

ಸಮಗ್ರ ದಾಸಸಾಹಿತ್ಯ ಸಂಪುಟ.ಭಾಗ/ ಕೃತಿಸಂಖ್ಯೆ	ಕೃತಿಕಾರ	ಕೃತಿಯ ಮೊದಲ ಸಾಲು	ವಿಶೇಷ
2/136	ವಾದಿರಾಜ	ವಾಣಿ ಪರಮಕಲ್ಯಾಣಿ	
3.1/199	ಪುರಂದರದಾಸ	ಒಂದೆ ಮನದಲಿ ಭಜಿಸು ವಾಗ್ದೇವಿಯ	ಪ್ರಹ್ಲಾದ ಮತ್ತು ಕುಂಭಕರ್ಣರ ಕಥೆ
3.1/200		ಕೊಡು ಬೇಗ ದಿವ್ಯ ಮತಿ -ಸರಸ್ವತಿ	ಇಂದಿರಾರಮಣನ ಹಿರಿಯಸೊಸೆ; ಅಜನ ಪಟ್ಟದ ರಾಣಿ
3.1/201		ನಲಿದಾಡ ಎನ್ನ ನಾಲಿಗೆ ಮೇಲೆ - ಸರಸ್ವತಿ ದೇವಿ	ಸರಸ್ವತಿಯ ಸೌಂದರ್ಯ ಮತ್ತು ಅಲಂಕಾರಗಳ ವರ್ಣನೆ
3.1/202		ಪಾಲಿಸೆಮ್ಮ ಮುದ್ದು ಶಾರದೆ	ಅಕ್ಷರಕ್ಷರ ವಿವೇಕ; ಶೃಮಗಾರಪುರ ನೆಲೆವಾಸಿನಿ
3.1/203	-	ಶರಣೆಂಬೆ ವಾಣಿ ಪೊರೆಯೆ ಕಲ್ಯಾಣಿ	ಪುರಂದರ ವಿಠಲನ ಸೋದರ ಸೊಸೆ
5.1/52	ಕನಕದಾಸ	ವರವ ಕೊಡು ಎನಗೆ ವಾಗ್ದೇವಿ	ಮಹಾಕವಿ ಜನರ ಹೃತ್ಕಮಲ ವಾಸೆ
7/9	ಗಲಗಲಿ ಅವ್ವನವರು	ಪಾಲಿಸೆ ಸರಸ್ವತಿ ಪಾಲಿಸೆ	
9.1/256	ವಿಜಯದಾಸ	ಕಿಂಕರನ ಧ್ವನಿಗೆ ಕೊಡು ಮತಿಯನು	ಗಂಗೆ ಯಮುನೆ ಉಭಯ ಸಂಗಮೆ
9.1/257		ವಾಣೀ ನೀ ತೋರೆ ವಾರಿಜನಾಭನ	
9.1/258		ವಾಣಿ ಪರಮ ಕಲ್ಯಾಣಿ	ಸರಸ್ವತಿ-ಗಾಯತ್ರಿ-ಸಾವಿತ್ರಿಯರನ್ನು ಒಟ್ಟಿಗೆ ಸ್ತುತಿಸಿದೆ
9.1/259		ಶಾರದಾಂಬಿಕೆ ನಿತ್ಯ ಶಾರದಾ	
9.1/260		ಶಾರದೆಯೆ ಕರುಣಾವಾರಿಧಿಯೇ	ವಿಜಯ ವಿಠಲನ ಸೊಸೆ
11.1/66	ಕಾಖಂಡಕಿ ಕೃಷ್ಣದಾಸ	ಶರಣು ಶಾರದೆ ಶರಣು	
11.1/67		ಶರಣು ಶಾರದೆ ವಾಣೀ ಸರಸಿಜಾಸನ ರಾಣಿ	
14/83	ಜಗನ್ನಾಥದಾಸ	ದಯಮಾಡೆ ದಯಮಾಡೆ ತಾಯಿ ವಾಗ್ದೇವಿ	ಸರಸ್ವತಿಗೆ ಭಾರತಿ ಎಂಬ ಹೆಸರನ್ನು ಬಳಸಿದೆ
14/84		ವಂದಿಪೆನಮ್ಮ ಮುದ್ದು ಶಾರದೆ	ಕವಿಸೇವಿತೆ

ಸಮಗ್ರ ದಾಸಸಾಹಿತ್ಯ ಸಂಪುಟ.ಭಾಗ/ ಕೃತಿಸಂಖ್ಯೆ	ಕೃತಿಕಾರ	ಕೃತಿಯ ಮೊದಲ ಸಾಲು	ವಿಶೇಷ
15/62	ಕೃಷ್ಣವಿಠಲದಾಸ	ಹಾಟ ಗರ್ಭನ ರಾಣಿ	ಮಾನ್ಯ ಮಧ್ವರ ಶಾಸ್ತ್ರ ಕನ್ಯೆಗೆ ಚೆನ್ನ ಕನ್ನಡ ಕವಚತೊಡಿಸಿ ಎಂಬುದು ಸರಸ್ವತಿಯನ್ನು ಕನ್ನಡತಿಯನ್ನಾಗಿಸಿದೆ. ಬೃಹತೀ ಖ್ಯಾತ ಭಾರತೀ ಎಂಬುದು ಬೃಹತೀ ಛಂದಸ್ಸಿಗೆ ಖ್ಯಾತವಾದ ಭಾರತೀ ದೇವಿಯನ್ನು ಸೂಚಿಸುತ್ತಿದೆ
17/86		ಸರಸೀಜಾಸನ ವಾಣಿ ತರುಣೀ	
17/118	ಪ್ರಾಣೇಶದಾಸ	ಪಾಹಿ ಸರಸ್ವತಿ ಸುಗಾಯತ್ರಿ ಶ್ರೀಸಾವಿತ್ರಿ	ವಾಣಿ ವೀಣಾಪಾಣಿ
17/119		ಸರಸ್ವತೀ ಶ್ರೀ ಗಾಯತ್ರಿ ಪರಮೇಷ್ಠಿಜೆ ಸಾವಿತ್ರಿ	ಹಂಸ ವರೂಢೆ
18.4/102	ಸರಸ್ವತಿಬಾಯಿ	ಕಮಲಜಭವ ರಾಣಿ ಫಣಿವೇಣಿ	ಸಂಪೂರ್ಣವಾಗಿ ವಾಗ್ದೇವತೆಯದೇ ಆದ ಈ ಕೀರ್ತನೆಯಲ್ಲಿ ಪ್ರಾಣದೇವನ ಸತಿ ಜಾಣೆ ಭಾರತಿಯೆ ಎಂಬ ಸಾಲು ಸರಸ್ವತಿಗೂ, ಮಾರುತ ಸತಿ ಭಾರತಿಗೂ ಅಭೇದ್ಯ ಕಲ್ಪಸಿದೆ.
18.4/103		ವಾಣಿ ಬಾರೆ ಬೇಗ ವದನದಿ	
18.4/104		ಸ್ತುತಿಸಿ ಪ್ರಾರ್ಥಿಪೆ ನಿನ್ನನು ಸರಸ್ವತಿ	ಅಕ್ಷರಕ್ಷರವಿವೇಕವ ಮೂಡಿಸು
24/22	ವಿಶ್ವೇಂದ್ರತೀರ್ಥ	ವಾಣಿ ವೀಣಾ ಪಾಣಿ	ಮಾಲಾಪುಸ್ತಕ ಶೋಭಿತ ಹಸ್ತೆ
24/119	ಸದಾನಂದ	ವಾಣಿ ಬ್ರಹ್ಮನ ರಾಣಿ ಕಲ್ಯಾಣಿ	ವೇದಪ್ರಮಾಣೆ, ಅಕ್ಷರಸ್ವರೂಪೆ
24/120		ನಿನ್ನ ನಂಬಿದೆ ಶಾರದೆ	
24/265		ನಾಗರಾಜ ನರಸುರ ನಮಿತೇ	ಶೃಂಗಪುರಿನಿಲಯೇ, ಪುಸ್ತಕಹಸ್ತೇ
24/266	ಗೋವಿಂದದಾಸ	ಪಾಹಿಸರಸುತೆ ಪಾಲಿಸೆನ್ನ ಮಾತೆ	
24/267		ಶಾರದಾಂಬೆಯೆ ನಾರಿ ಲಕುಮೀ	ಸರಸ್ವತೀ ಲಕ್ಷ್ಮೀ ಮತ್ತು ಪಾರ್ವತಿಯನ್ನು ಒಟ್ಟಾಗಿ ಸ್ತುತಿಸಲಾಗಿದೆ.
24/268		ಶಾರದೆ ಜಗದ್ಭರಿತೆ ಸರಸ್ವತೆ	ಮಯೂರವಾಹಿನಿ
26/75	ಗುರುಜಗನ್ನಾಥದಾಸ	ವಾಣಿ ಬೊಮ್ಮನ ರಾಣೀ ಗುಣಗಣ ಶ್ರೇಣಿ	
26/76		ಸರಸಿಜೋದ್ಭವ ರಾಣಿ ಸರಸಕೋಕಿಲವಾಣಿ	ಭಾರತಿ ಎಂಬುದನ್ನು ಸರಸ್ವತಿಗೆ ಸಮಾನಂತರವಾಗಿ ಬಳಸಿದೆ
27/171		ನೆಲಸೆನ್ನ ವದನದಿ ವಾಣಿ ಬ್ರಹ್ಮಾಣಿ	
27/172	ರಂಗೇಶವಿಠಲ	ವಾಣಿ ನೀ ಬಾರೆ ಪನ್ನಗವೇಣಿ ಓ ಪುಸ್ತಕಪಾಣಿ	ಪೂರ್ವಭಾರತಿ
27/173		ವಾರಿಜನ ಹೃದಯೇಶ್ವರಿ ಸರ್ವವಿದ್ಯಕಾಧಾರಿ	ಮಯೂರವಾಹಿನಿ
27/257	ದಾಸರ ಲಕ್ಷ್ಮೀನಾರಾಯಣ	ಆರತಿ ಬೆಳಗಿರೆ ಶಾರದೆಗೆ	
28/241	ವಿದ್ಯಾಪ್ರಸನ್ನತೀರ್ಥ	ನಲಿಯೆ ನೀ ಜಿಹ್ವೆಯಲಿ	ಪನ್ನಗವೇಣಿ ಮಧುರ ಸುವಾಣಿ ಕರ ಧೃತ ವೀಣಾಪಣಿ
28/379	ಪ್ರದ್ಯುಮ್ನತೀರ್ಥ	ದೇವಿ ಸರಸ್ವತಿ ನಿತ್ಯ ಕಾವುದೆಮ್ಮನು	ಬ್ರಾಹ್ಮಿ ಗಾಯತ್ರಿ ಸಾವಿತ್ರಿ ಹೆಸರುಗಳು
29.2/20	ಕಾರ್ಪರ ನರಹರಿದಾಸ	ವಂದಿಪೆ ವಾಗ್ದೇವಿ ಭಾರತಿ	
30/20	ಶ್ರೀ ಶ್ಯಾಮಸುಂದರ ವಿಠಲ	ವಾಣಿಯೇ ವೀಣಾಪಾಣಿಯೇ	ನಾರದ ಸೇವಿತೆ; ಶ್ಯಾಮಸುಂದರನ ಸೊಸೆ
31.1/213	ಗುರುಗೋವಿಂದವಿಠಲದಾಸ	ಗಾಯಿತ್ರಿ ಶುಭಗಾತ್ರಿ	ಆರ್ಯನ ಪ್ರಿಯಸತಿ

ಸಮಗ್ರ ದಾಸಸಾಹಿತ್ಯ ಸಂಪುಟ.ಭಾಗ/ ಕೃತಿಸಂಖ್ಯೆ	ಕೃತಿಕಾರ	ಕೃತಿಯ ಮೊದಲ ಸಾಲು	ವಿಶೇಷ
31.1/214		ದೇವಿ ಶ್ರೀ ಸರಸ್ವತಿಯೆ	ವಿದ್ಯಗಳಿಗಭಿಮಾನಿ
31.1/215		ಬಾಲಕನ ಮೊರೆ ಕೇಳು	
31.1/216		ಶಾರದೆ ಪೊರೆಯೆನ್ನಾ	ವೇದಾತ್ಮಿಕೆ, ಬ್ರಾಹ್ಮಿ ಸರಸ್ವತೀ ಗಾಯಿತ್ರೀ
31.1/217		ಶಾರದೆ ಮಜ್ಜನನಿಯೆ	
31.1/218		ಶ್ರದ್ಧಾ ಪಾಲಿಸೆ ಮಾತೆ	ವೇದಾದಿಗಳ ಮಾನಿ, ಚತುಃಷಷ್ಟಿಕಲಾ ವಿದ್ಯಾದಾಯಿನಿ
31.1/219		ಸರೋಜದಳನೇತ್ರೆ	ಹಂಸವಾಹಿನಿ
31.1/220		ಹಂಸವಾಹನ ಜಾಯೆ ಕಾಯೆ	
33/15	ಕವಿಪರಮದೇವ	ಪಾಲಿಸು ನಮ್ಮಮ್ಮ ಮುದ್ದು ಶಾರದೆ	ಅಕ್ಷರಾಕ್ಷರವಿವೇಕಿ, ಮೋಕ್ಷದಾಯಕಿ
33/16		ಪಾಲಿಸು ಶಾರದೆ ಪರಮ ಪಾವನೆ	ಕೊಡಚಾದ್ರಿಯಲ್ಲಿ ನೆಲೆಸಿದ ಮೂಕಾಂಬೆ ಶಾರದೆ ಎಂದಿದೆ
33/17		ಬೆಳಗಿರೇ ಆರತಿಯ	
33/18		ಬೇಡುವೆ ನಿಮ್ಮ ಪಾದಕೆ ಕರಗಳ ನೀಡಿ	ಸುರಮುನಿವಂದಿತೆ
34/145	ಗುರುರಾಮವಿಠಲ	ದೇವಿ ಸರಸ್ವತಿ ಲೋಕಮಾತೆ	ಗುರುರಾಮವಿಠಲನ ಹಿರಿಯಸೊಸೆ

ಭಾರತಿ ಹೆಸರಿನಲ್ಲಿ ಸರಸ್ವತಿಯನ್ನು ಸ್ತುತಿಸಿರುವ ಕೀರ್ತನೆಗಳು ಮತ್ತು ವಿಶೇಷಗಳು

ಸಮಗ್ರ ದಾಸಸಾಹಿತ್ಯ ಸಂಪುಟ.ಭಾಗ/ ಕೃತಿಸಂಖ್ಯೆ	ಕೃತಿಕಾರ	ಕೃತಿಯ ಮೊದಲ ಸಾಲು	ವಿಶೇಷ
12/70	ಗೋಪಾಲದಾಸ	ಭಾರತಿ ನೀ ಪರಿಪಾಲಿಸೆ ವಾರಿಜಾಂಬಕಿ	ವಾಗ್ವಾಣಿ ಪಲ್ಲವ ಪಾಣಿ ಪನ್ನಗವೇಣಿ
22/72	ಪ್ರಸನ್ನ ಶ್ರೀನಿವಾಸದಾಸ	ಭಾರತಿ ತವ ಚರಣಾಂಬುರುಹವ ನಂಬಿದೆ	ಬಲ ಕರದಲಿ ಜ್ಞಾನ ಊರ್ಧ್ವದಿ ಅಭಯಮುದ್ರೆಯ ಶುಭದ ಒಲಿವ ವರಮುದ್ರೆ ಪುಸ್ತಕ ವಾಮದಿ ವಿದ್ಯಾಪ್ರದೆ ಸುಖದೆ

ಭಾರತೀ(ಮಾರುತ ಸತಿ)ಯನ್ನು ಸ್ತುತಿಸುವಾಗ ಸರಸ್ವತಿಯ ವಿಶೇಷಣಗಳನ್ನು ಹೇಳಿರುವುದು

ಸಮಗ್ರ ದಾಸಸಾಹಿತ್ಯ ಸಂಪುಟ.ಭಾಗ/ ಕೃತಿಸಂಖ್ಯೆ	ಕೃತಿಕಾರ	ಕೃತಿಯ ಮೊದಲ ಸಾಲು	ವಿಶೇಷ
9.1/265	ವಿಜಯದಾಸ	ಶರಣು ಭಾರತಿದೇವಿಗೆ ಶರಣು	ಬುದ್ಧಿ ವರದಾಯಕಳು
9.1/266		ಶ್ರೀ ಮಾರುತನ ಮಾನಿನಿ ಭಾರತೀದೇವಿ	ಮೂಲೋಕದೊಳು ಪಾವನ್ನೆ ಎಂಬುದು ಋಗ್ವೇದದಲ್ಲಿ ತ್ರಿಸ್ರೋದೇವಿಯರಿಗೆ ಹೇಳಿರುವ ವಿಶೇಷಣ
12/69	ಗೋಪಾಲದಾಸ	ಭಾರತಿ ಜನನಿ ಪಾಲಿಸೆ ನಿತ್ಯ	ಜ್ಞಾನಪ್ರದಾಯಕಳು
12/71		ಭರತಿ ಭಕುತಿಯನು ಕೊಡೆನಗೆ	ವಾಣಿ, ಪಮಕಜಪಾಣಿ, ಕೋಕಿಲವಾಣಿ
14/85	ಜಗನ್ನಾಥದಾಸ	ಭಾರತೀ ಮಜ್ಜನನಿಯ ಭಾರತೀ	ವಿದ್ಯವ ಪಾಲಿಸು ಮಾತೇ
16/50	ಉರಗಾದ್ರಿವಾಸ ವಿಠಲದಾಸ	ಪಾಲಿಸು ಭಾರತಿಯೆ ದೇವಿಯೆ	ಪಂಕಜಭವನ ರಾಣಿ: ಚಿತ್ತಶುದ್ಧಿ ಬುದ್ಧಿಯಿತ್ತು ಪಾಲಿಸು
17/120	ಪ್ರಾಣೇಶದಾಸ	ಶರಣು ಶ್ರೀ ಮಾರುತನ ರಾಣಿಯೆ	ಸರಸಿಜಪಾಣಿ, ವಿದ್ಯೆ ಪಾಲಿಸೆ ಭಾರತೀ
17/121		ಶರಣು ಭಾರತೀ ತಾಯೆ	ವಾಣಿ ಪದವೈದುವಳೇ

ಸಮಗ್ರ ದಾಸಸಾಹಿತ್ಯ ಸಂಪುಟ.ಭಾಗ/ ಕೃತಿಸಂಖ್ಯೆ	ಕೃತಿಕಾರ	ಕೃತಿಯ ಮೊದಲ ಸಾಲು	ವಿಶೇಷ
17/122		ದ್ರೌಪದಿ ಕೃಷ್ಣಾ ಪಾಂಚಾಲಿ ದೇವಿ	ವಾಣಿ ಬಕ್ತಿಗೆ ಅಭಿಮಾನಿ.
17/123		ಕಾಳೀ ದ್ರೌಪದಿ ಭಾರತೀ	ವಾಣೀ ಸುಂದರಿ ವರದೆ ಸಾಧ್ವೀ ವೀಣಾಪಾಣಿ
26/74	ಗುರುಜಗನ್ನಾಥದಾಸ	ಭಾರತಿ ಪಾಲಿಸು ನಿತ್ಯ	ಭಾರತಿ ಭಾಸ್ವರಕಾಂತೆ, ಹರಿಯಪಟ್ಟದ ನಿಜರಾಣಿ ಎಂದು ಕೋಕಿಲವಾಣಿ ಸರಸ್ವತಿಯನ್ನು ಕರೆದಿರುವುದು ವಿಚಿತ್ರವಾಗಿದೆ.
27/175	ರಂಗೇಶವಿಠಲ	ತೋರೆ ನಿನ್ನ ಪದಸರಸಿಜವನು ತಾಯೆ	ಚಾರುಮತಿಯನೀಯೆ
28/379	ಪ್ರದ್ಯುಮ್ನತೀರ್ಥ	ನಿರುತದಿ ಭಜಿಪೆನು ಭರತನರಾಣಿಯೆ	ಕಲಾಭಿಮಾನಿಯೆ, ಹರಿಯ ಹಿರಿಯ ಸೊಸೆ
31.1/221		ಕೃತ್ತಿವಾಸ ಪೂಜ್ಯ ಚರಣೇ	ವಿದ್ಯುದ್ವಾಕ್ ದಿಙ್ಮಾನಿಯೆ
31.1/222		ಕೊಡುಮತಿ ದಿವ್ಯಮತಿ	ಸುಜ್ಞಾನ ಕರುಣಿಸಿ ತಜ್ಞನೆನಿಸೆ ತಾಯಿ
31.1/223		ಭಕ್ತಗಭಿಮಾನಿ ಭಾರತೀದೇವಿ	ವೇದಾಣಿ
31.1/224	ಗುರುಗೋವಿಂದವಿಠಲದಾಸ	ಭಾರತಿ ವಂದಿತೆ ಮನಸಿಜ ಮಾತೆ	ಹರಿಮಡದಿಯೆ ಎಂಬುದು ವಿಚಿತ್ರವಾಗಿದೆ.
31.1/226		ಭಿಕ್ಷಾವ ನೀಡ್ವುದು ತಾರ್ಕ್ಯನ ಮಾತೆ	ಜ್ಞಾನ ಭಕುತಿ ವೈರಾಗ್ಯದ ಮೂರುತಿ
31.1/227		ಮಾರುತಸತಿ ಮದ್ಧಾರ ನಿನ್ನದಮ್ಮಾ	ವೇದಾತ್ಮಿಕ ದೇವಿ
31.1/229		ವಿಪಾಹಿ ಶಿವನುತೆ ಭಾರತಿ ಮಾತೆ	ವಾಣಿ ಸುಭಾವದೊಳು
34/146	ಗುರುರಾಮವಿಠಲ	ಭಾರತಿದೇವಿ ಭಕ್ತಸಂಜೀವಿ	ಬುದ್ಧಿಯನು ಪರಿಶುದ್ಧ ಮಾಡಿ

ಹದಿನೆಂಟನೇ ಶತಮಾನಕ್ಕೆ ಸೇರಿದ ಪರಮದೇವ ಕವಿ ಮತ್ತು ಹೆಳವನಕಟ್ಟೆ ಗಿರಿಯಮ್ಮ ಇವರು ಕೀರ್ತನಕಾರರಾದರೂ ಸ್ವತಂತ್ರ ಕಾವ್ಯಗಳನ್ನೂ ರಚಿಸಿದ್ದಾರೆ. ಪರಮದೇವ ಕವಿಯ 'ಶ್ರೀ ತುರಂಗಭಾರತ' ಕೃತಿಯ ಸರಸ್ವತಿ ಸ್ತುತಿ **'ರೂಢಿಸಿದ ಶಾರದಾಂಬಿಕೆ ಎನ್ನ ಜಿಹ್ವೆಯೊಳಗಾಡೆ......'**[185] ಕೀರ್ತನೆಗಳಂತೆಯೇ ಪುನರಾವರ್ತನೆಯಿಂದ ಕೂಡಿದೆ. ಯಾವುದೇ ವಿಶೇಷವಿಲ್ಲ. **'ನಿನಗಿನ್ನಾರು ಜೋಡೆ ಕಮಲಜನರಸಿ, ಕೈನೀಡಿ ನೀಡೆ ದವನ ಸಂಪಿಗೆ ಜಾಜಿಗಳನು'** ಎಂಬ ಸಾಲು, ಆಧುನಿಕ ಯುಗದಲ್ಲಿ ಭಕ್ತರು ದೇವರನ್ನು ಪ್ರಸಾದ ಕೇಳುವ ರೀತಿಯನ್ನು ನೆನಪಿಸುತ್ತದೆ ಅಷ್ಟೆ.

ಹೆಳವನಕಟ್ಟೆ ಗಿರಿಯಮ್ಮ ತನ್ನ 'ಉದ್ದಾಳಿಕ ಕಥೆ' ಮತ್ತು 'ಚಂದ್ರಹಾಸನ ಕಥೆ' ಕೃತಿಗಳಲ್ಲಿ ಸರಸ್ವತಿಯನ್ನು ಸ್ತುತಿಸಿದ್ದಾಳೆ. ಉದ್ದಾಳಿಕನ ಕಥೆಯ **'ವಾಣಿ ಬ್ರಹ್ಮನ ರಾಣಿ ವೀಣೆ ಪುಸ್ತಕಪಾಣಿ.....'**[186] ಎಂಬ ಶೃಂಗೇರಿಯ ಶಾರದೆಯ ರೂಪದ ಸರಸ್ವತಿಯ ಸ್ತುತಿ, ಕೀರ್ತನೆಗಳಲ್ಲಿ ಬರುವಂತೆಯೇ ಬಂದಿದೆ. ಆದರೆ ಸರಸ್ವತಿಯನ್ನು **'ಮಾನಿನಿಕುಲಕೆ ಕಟ್ಟಾಣಿ'** ಎಂದು ಕರೆದಿರುವುದು ಕವಯಿತ್ರಿಯ ಸ್ತ್ರೀಪರ ಧ್ವನಿಯನ್ನು ಸೂಚಿಸುತ್ತದೆ. **'ಶೃಂಗಪುರದ ನೆಲವಾಸೆ'** ಶಾರದೆಯನ್ನು **'ಸಜ್ಜನ ಪೋಷೆ ಸಂಗೀತಲೋಲೆ ಸುಶೀಲೆ ಮಂಗಳಗಾತ್ರೆ'** ಎಂದೆಲ್ಲಾ ತನ್ನ ಚಂದ್ರಹಾಸನ ಕೃತಿಯಲ್ಲಿ ಕೊಂಡಾಡಿದ್ದಾಳೆ.[187]

185. ಶ್ರೀ ತುರಂಗ ಭಾರತ, ಪೀಠಿಕೆ, ಪದ್ಯ –2
186. ಉದ್ದಾಳಿಕನ ಕಥೆ, ಪದ್ಯ –2
187. ಚಂದ್ರಹಾಸನ ಕಥೆ, ಪದ್ಯ –4

ದಾಸ ಸಾಹಿತ್ಯದ ನಂತರದ ಕೃತಿಗಳ ಸರಸ್ವತಿಯ ಸ್ತುತಿಗಳಲ್ಲಿ, ಅದರಲ್ಲೂ ಸಾಂಗತ್ಯ ಕೃತಿಗಳ ಸ್ತುತಿಯಲ್ಲಿ ದಾಸಸಾಹಿತ್ಯದ ಪ್ರಭಾವವನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಸರಸ್ವತಿಯ ಸ್ತುತಿ ಒಂದೇ ವಾಕ್ಯಕ್ಕೆ ಸೀಮಿತವಾಗಿರುವುದಕ್ಕೂ ಸಾಂಗತ್ಯದ ಚಿಕ್ಕ ಗಾತ್ರವೇ ಕಾರಣವಾಗಿದೆ. ವಾಣಿ, ವೀಣಾಪಾಣಿ, ಪನ್ನಗವೇಣಿ, ನೀಳವೇಣಿ, ಕಲ್ಯಾಣಿ, ಬ್ರಹ್ಮನ ರಾಣಿ, ಅಂಬುಜಪಾಣಿ, ಪುಸ್ತಕಪಾಣಿ ಎಂಬ ವಿಶೇಷಣಗಳು ಮೇಲಿಂದ ಮೇಲೆ ಬಳಕೆಯಾಗಿರುವುದನ್ನು ಕಾಣಬಹುದು.

ಲಕ್ಷ್ಮೀಶ (ಸುಮಾರು ಕ್ರಿ.ಶ. 1550)

'ಜೈಮಿನಿ ಭಾರತ'ದಲ್ಲಿ ಲಕ್ಷ್ಮೀಶನು ಸರಸ್ವತಿಯನ್ನು ಬ್ರಹ್ಮನ ಜೊತೆಯಲ್ಲಿಯೇ ಸ್ತುತಿಸುತ್ತಾನೆ.

ಭೂವ್ಯೋಮ ಪಾತಾಳಲೋಕಂಗಳಲ್ಲಿ ಸಂ
ಭಾವ್ಯರೆಂದೆನಿಸಿಕೊಂಬಖಿಳ ದೇವರ್ಕಳಿಂ
ಸೇವ್ಯನಾದಜನ ಪಟ್ಟದರಾಣಿ ವರದೆ ಕಲ್ಯಾಣಿ ಫಣಿವೇಣಿ ವಾಣಿ
ಕಾವ್ಯವಿದು ಭುವನದೊಳ್ ಸಕಲ ಜನರಿಂದೆ ಸು
ಶ್ರಾವ್ಯಮಪ್ಪಂತೆನ್ನ ವದನಾಬ್ಜದಲ್ಲಿ ನೀ
ನೇ ವ್ಯಾಪಿಸಿರ್ದಮಲ ಸುಮತಿಯಂ ತಾಯೆನಗೆ ತಾಯೆ ನಗೆಗೂಡಿ ನೋಡಿ[188]

ಬ್ರಹ್ಮನ ಪಟ್ಟದರಾಣಿ ಎಂಬ ಪೌರಾಣಿಕ ಕಲ್ಪನೆ ಇಲ್ಲಿ ಕವಿತೆಯ ಸಾಲಾಗಿ ಬಂದಿದೆ. ವರವನ್ನು ಕೊಡುವವಳು, ಕಲ್ಯಾಣವನ್ನು ಉಂಟುಮಾಡುವವಳು ವಾಣಿ ಅಂದರೆ ಸರಸ್ವತಿ. 'ಫಣಿವೇಣಿ' ಎಂಬ ಮಾತು, ಸರಸ್ವತಿಯ ಸೌಂದರ್ಯವರ್ಣನೆಗೆ ಬಳಸಿದ ತೀರಾ ಸಾಮಾನ್ಯವಾದ ಹೋಲಿಕೆಯಾಗಿದೆ. ಸರಸ್ವತಿಯ ಕೇಶಾಲಂಕಾರದ ವಿಷಯ ಬಂದಾಗ ಈ ಹೋಲಿಕೆ ಲಕ್ಷ್ಮೀಶನ ವಿಶೇಷ. ಭೂಮಂಡಲದ ಸಕಲರಿಗೆ ಸುಶ್ರಾವ್ಯವಾಗಿ ತಲಪಲು, ನೀನು ನನ್ನ ಮುಖಕಮಲವನ್ನು ಆವರಿಸಿ ಪರಿಶುದ್ಧವಾದ ಮತಿಯನ್ನು ನೀಡು ಎನ್ನುವಲ್ಲಿ ತನ್ನದು ಹಾಡುಗಬ್ಬ ಎಂಬುದನ್ನು ಕವಿ ಸ್ಪಷ್ಟಪಡಿಸುತ್ತಾನೆ. ಆತ ಬೇಡಿದ ಸುಮತಿಯನ್ನು ತಾಯಿ ಸರಸ್ವತಿಯು ಕೊಟ್ಟೇ ಕೊಡುತ್ತಾಳೆ ಎಂಬುದು 'ಅಮಲ ಸುಮತಿಯಂ ತಾ ಎನಗೆ ತಾಯೆ ನಗೆಗೂಡಿ ನೋಡಿ' ಎಂಬ ಮಾತುಗಳಲ್ಲಿ, ಭಕ್ತಕವಿಗೆ ಸಹಜವಾದ ಆರ್ತತೆಯನ್ನು ಬಿಂಬಿಸಿದ್ದಾನೆ.

ಶಾರದೆಯ ಕರುಣದಿಂದ ಹೇಳಿದ ತನ್ನ ಕಾವ್ಯಪ್ರಬಂಧದಲ್ಲಿರುವ ದೋಷಗಳನ್ನು ಬಿಟ್ಟು ಬುಧಜನರು ಕೇಳಬೇಕು (ಶಾರದೆಯ ಕರುಣದಿಂ ನಾಂ ಪೇಳ್ವೆನ್ ಕಾವ್ಯಪ್ರಬಂಧಮಂ, ದೋಷಮಂ ತೊರೆದು ಎಲ್ಲರು ಕೇಳ್ವುದು)[189] ಎನ್ನುವ ಆತನ ಮಾತಿನಲ್ಲಿ, ಭಕ್ತಿಯ ಬೇಡಿಕೆಯಿದೆ. ಆದರೆ ಸರಸ್ವತಿಯ ಕರುಣದಿಂದ ಕಟ್ಟಿದ ಕಾವ್ಯಬಂಧದಲ್ಲಿ ದೋಷಗಳಿವೆ ಎನ್ನುವುದು ಸಂಪ್ರದಾಯ ಶರಣತೆಯಾಗುತ್ತದೆ.

---

188. ಜೈಮಿನಿಭಾರತ, 1–4

189. ಅದೇ, 1–5

ತನ್ನದು ಹಾಡುಗಬ್ಬ ಎಂಬುದು ಲಕ್ಷ್ಮೀಶ ಕವಿಯ ಸ್ಪಷ್ಟ ಅಭಿಮತ. ಅದಕ್ಕೆ ಅನುಗುಣವಾಗಿಯೇ ಆತ ಇನ್ನೊಂದು ಪದ್ಯದಲ್ಲಿ, **'ಗೀರ್ವಾಣಪುರನಿಲಯ ಲಕ್ಷ್ಮೀವರಂ ತಾನೆ ಸಂಗೀತ ಸುಕಲಾನಿಪುಣನು ವೀಣೆಯಿಂ ಗಾನಮಂ ನುಡಿಸುವಂದದೊಳ್ ವಾಣಿಯಿಂ ಕವಿತೆಯಂ ಪೇಳಿಸಿದನ್.....'**[190] ಎಂದು ಹೇಳಿದ್ದಾನೆ. ಮೊದಲು ವರದೆ, ಕಲ್ಯಾಣಿ ವಾಣಿ ನನಗೆ ಸುಮತಿಯನ್ನು ನೀಡಲಿ ಎಂದು ಪ್ರಾರ್ಥಿಸಿ, ಶಾರದೆಯ ಕರುಣದಿಂದ ಕಾವ್ಯಪ್ರಬಂಧವನ್ನು ಕಟ್ಟಿದ ಕವಿ, ಇಲ್ಲಿ ವಾಣಿಯಿಂದ ಕವಿತೆಯನ್ನು ಹೇಳಿಸಿದನು ಎಂದು ಹೇಳಿರುವುದು 'ವಿಚಿತ್ರ'ವಾಗಿದೆ. ಬಹುಶಃ, ಕುಮಾರವ್ಯಾಸನಂತೆ ಈತನೂ ಭಕ್ತಕವಿಯಾಗಿರುವುದು ಇದಕ್ಕೆ ಕಾರಣವಿರಬಹುದು. 'ವೀರನಾರಾಯಣನೆ ಕವಿ' ಎಂದು ತಾನು ರಚಿಸಿದ ಕಾವ್ಯಕ್ಕೆ ನೆಚ್ಚಿನ ದೈವವನ್ನು ರಚನೆಕಾರನನ್ನಾಗಿ ಮಾಡಿದ ಕುಮಾರವ್ಯಾಸ ಪರಂಪರೆಯನ್ನು ಮುಂದುವರೆಸಿದ ಲಕ್ಷ್ಮೀಶ ತನ್ನ ಕಾವ್ಯವನ್ನು ವಾಣಿಯಿಂದ ಹೇಳಿಸಿದ್ದಾಗಿ ನಿರೂಪಿಸಿರಬಹುದು. ಲಕ್ಷ್ಮೀಶನ ನೆಚ್ಚಿನ ದೈವ ಕೃಷ್ಣನಾದರೂ ತನ್ನ ಕಾವ್ಯದ ವಿಷಯಕ್ಕೆ ಬಂದಾಗ ಆತನಿಗೆ ಸರಸ್ವತಿಯೇ ಆರಾಧ್ಯದೈವ ಎಂಬುದು ಕಾವ್ಯದ ಕೊನೆಯ ಪದ್ಯದಲ್ಲಿಯೂ ವ್ಯಕ್ತವಾಗುತ್ತದೆ. **'ನವರಸ ಪ್ರೌಢಿ ಲಾಲಿತ್ಯ ನಾನಾ ವಿಚಿತ್ರಾರ್ಥಂಗಳ ಗಣ್ಯಮಿದು** ಉಂಬಿಯ **ಸನ್ಮೋಹನಾಂಗ ಲಾವಣ್ಯಮಿದು'**[191] ಎಂದು ತನ್ನ ಕಾವ್ಯವನ್ನು ಹೊಗಳಿಕೊಂಡಿದ್ದಾನೆ. ವಿಶಾಲವಾದ ಅರ್ಥದಲ್ಲಿ ಎಲ್ಲಾ ಕಾವ್ಯಗಳೂ ಸರಸ್ವತಿಯ ರಚನೆಗಳೇ ಆಗಿವೆ ಎಂಬುದನ್ನು ಗಮನಿನಿಸಿದಾಗ, ಲಕ್ಷ್ಮೀಶನ ಈ 'ವಿಚಿತ್ರ'ವೂ ಚೆನ್ನಾಗಿಯೇ ಕಾಣುತ್ತದೆ.

ಗೋಪಕವಿ (ಸುಮಾರು ಕ್ರಿ.ಶ. 1581)

'ನಂದಿಮಹಾತ್ಮ್ಯ' ಎಂಬ ಕಾವ್ಯವನ್ನು ರಚಿಸಿರುವ ಗೋಪಕವಿಯು, ವಿಷ್ಣುವಿನ ಹತ್ತು ಅವತಾರಗಳ ಹೆಸರುಗಳು ಹೊರಡಿಸುವ ಶ್ಲೇಷಾರ್ಥಗಳನ್ನು ಬಳಸಿ ಸರಸ್ವತಿಯನ್ನು ಸೌಂದರ್ಯವನ್ನು ವರ್ಣಿಸಿ ಕೃಪೆ ಮಾಡುವಂತೆ ಪ್ರಾರ್ಥಿಸುತ್ತಾನೆ.

ಮಿಱುಪ ಮತ್ಸ್ಯಾಕ್ಷಿಯಂ ಕೂರ್ಮಪದದಿಂ ಸಮು
ದ್ಧುರವರಹಚಕ್ರದಿಂ ಮಿಥುನಕುಚದಿಂ ಸಿಂಹ
ವರಮಧ್ಯದಿಂ ವಾಮನಾಭಿಯಿಂ ರಾಜವಿಜಿತಾಸ್ಯಾಭಿರಾಮತೆಯೊಳ್
ಉರುಕೃಷ್ಣಕಚದಿಂ ಪ್ರಬುದ್ಧೋರುಹಂಸಭಾ
ಸುರಕಲಿತ ಯಾನದಿಂ ಚಕ್ರಿಯವತಾರಾಖ್ಯ
ದಿರವಾಂತು ಮೆಱೆವ ಶಾರದೆಯೆನ್ನ ಕೃತಿಗೆ ಕೃಪೆಯಿಂ ಮಾಳ್ಕೆ ಮಂಗಳವನು[192]

---

190. ಅದೇ, 1-9
191. ಅದೇ, 34-46
192. ನಂದಿಮಹಾತ್ಮ್ಯ 1-3

ಹೊಳೆವ ಮೀನಿನ (ಮತ್ಸ್ಯದ) ಕಣ್ಣುಳ್ಳವಳು (ಮತ್ಸ್ಯಾವತಾರ), ಆಮೆಯ (ಕೂರ್ಮದ) ಪಾದಗಳನ್ನುಳ್ಳವಳು (ಕೂರ್ಮಾವತಾರ), ವರಾಹನು ಧರಿಸಿರುವಂತಹ ಚಕ್ರವನ್ನು ಹೋಲುವ ದುಂಡಾದ ಎರಡು ಸ್ತನಗಳನ್ನುಳ್ಳವಳು (ವರಾಹಾವತಾರ), ಸಿಂಹದ ರೀತಿಯಲ್ಲಿ ಸಣ್ಣ ನಡುವನ್ನು ಉಳ್ಳವಳು (ನರಸಿಂಹಾವತಾರ), ಆಳವಾದ ಅಥವಾ ತಗ್ಗಾದ ಹೊಕ್ಕುಳನ್ನುಳ್ಳವಳು (ವಾಮನಾವತಾರ), ರಾಜರನ್ನು ಜಯಿಸಲ್ಪಟ್ಟಂತಹ ಸೌಂದರ್ಯವುಳ್ಳವಳು (ರಾಮ ಮತ್ತು ಪರಶುರಾಮಾವತಾರ), ಸಮೃದ್ಧವಾದ ಕಪ್ಪು ಕೂದಲನ್ನು ಉಳ್ಳವಳು (ಕೃಷ್ಣಾವತಾರ), ಪ್ರಬುದ್ಧವಾದ (ಬುದ್ಧಾವತಾರ) ತೊಡೆಗಳನ್ನುಳ್ಳ ಹಂಸ(ಹಂಸ ಎಂಬುದಕ್ಕೆ ಕುದುರೆ ಎಂಬ ಅರ್ಥವೂ ಇದೆ; ಹಂಸಭಾಸುರ ಎಂದರೆ ಕಲಿ ಎಂದರ್ಥ)ದಿಂದ ಕಲಿತ ನಡಿಗೆಯಿಂದ (ಕಲ್ಕಿಯ ಅವತಾರ) ವಿಷ್ಣುವಿನ ಅವತಾರಗಳನ್ನು ಸೇರಿಸಿಕೊಂಡು ಪ್ರಸಿದ್ಧಳಾಗಿರುವ ಶಾರದೆಯು ನನ್ನ ಈ ಕೃತಿಗೆ ಕೃಪೆಯನ್ನುಂಟು ಮಾಡಲಿ ಎಂದು ಶ್ಲೇಷೆಯ ಮೂಲಕ ಸ್ತುತಿಸಿದ್ದಾನೆ.

ಪಾರ್ಶ್ವಕವಿ (ಸುಮಾರು ಕ್ರಿ.ಶ. 17ನೆಯ ಶತಮಾನ)

ಸುಮಾರು ಹನ್ನೆರಡನೇ ಶತಮಾನದಲ್ಲಿ ಆಗಿ ಹೋದ 'ನಿಂಬಸಾಮಂತ' ಎಂಬುವವನ ರಾಜಕೀಯ ಚರಿತ್ರೆಯನ್ನು ಬರೆದಿರುವ ಪಾರ್ಶ್ವಕವಿಯು ಸರಸ್ವತಿಯನ್ನು ಭಾರತೀ ಎಂದು ಕರೆದು ಸ್ತುತಿಸಿದ್ದಾನೆ.

ಅತನುಜಿತಜಿನವದನದಿಂ ನಿ
ರ್ವೃತಿಪಥವ ತೋರಲ್ಕೆತಾ ಸರ
ಸತಿಯೆನಿಸಿ ಪೊರಮಟ್ಟು ನಿರ್ಮಳರೂಪನಾಂತೀಗ
ಯತಿಪ್ರತತಿಗುನ್ನತವೆನಿಪ ಸ
ದ್ಗತಿಯನೆಯ್ದಿಸಲಾರ್ಪಳಾ ಭಾ
ರತಿಯ ಪದಕಮಲಂಗಳೆಮಗೊಲಿದೀಗೆ ಸುಖಪದಮಂ[193]

ದೇಹವಿಲ್ಲದವನೂ, ಅಚಲನಾದವನೂ ಆದ ಜಿನನ ಮುಖದಿಂದ ಮುಕ್ತಿ ಪಥವನ್ನು ತೋರಿಸಲಿಕ್ಕೆ ಸರಸ್ವತಿಯೆನಿಸಿ ಬಂದಳು ಎಂಬುದು ಜೈನ ಸಂಪ್ರದಾಯದ ಕಲ್ಪನೆಯಂತೆಯೇ ಇದೆ. ಆದರೆ ಜಿನೇಂದ್ರವಾಣಿಯೆ ಸರಸ್ವತಿ ಎಬ ಕಲ್ಪನೆಗಿಂತ ಭಿನ್ನವಾಗಿದೆ. ನಿರ್ಮಲವಾದ ರೂಪವನ್ನು ಹೊಂದಿ, ಯತಿಸಮೂಹಕ್ಕೆ ಬೇಕಾದ ಉನ್ನತವಾದ ಸದ್ಗತಿಯನ್ನು ಕೊಡಲಿರುವವಳು ಎಂಬ ಕಲ್ಪನೆ ಸರಸ್ವತಿಗೆ ಮುಕ್ತಿಲಕ್ಷ್ಮಿಯ ಪಟ್ಟವನ್ನು ತಂದುಕೊಟ್ಟಿದೆ. ಅಂತಹ ಭಾರತಿಗೆ, ನಮಗೆ ಒಲಿದು ಸುಖಪದವನ್ನು ನೀಡಲಿರುವ ಸರಸ್ವತಿಯ ಪಾದಕಮಲಗಳಿಗೆ ಎರಗುತ್ತೇನೆ ಎಂದು ಕವಿ ಪ್ರಾರ್ಥಿಸಿದ್ದಾನೆ.

ಗೋವಿಂದವೈದ್ಯ (ಸುಮಾರು ಕ್ರಿ.ಶ. 1648)

'ಕಂಠೀರವನರಸರಾಜ ವಿಜಯ' ಎಂಬ ತನ್ನ ಸಾಂಗತ್ಯ ಕೃತಿಯಲ್ಲಿ ಗೋವಿಂದವೈದ್ಯ ಸರಸ್ವತಿಯನ್ನು ಬ್ರಹ್ಮನ ಪಟ್ಟದರಾಣಿ ಎಂದು ವರ್ಣಿಸಿದ್ದಾನೆ.

---

193. ನಿಂಬಸಾಮಂತ ಚರಿತೆ, 1-3

ಕಮಲಸಂಭವನ ಪಟ್ಟದರಾಣಿ ಕಲ್ಯಾಣಿ
ಕಮನೀಯ ವೀಣಾಪಾಣಿ
ಅಮರವಂದಿತೆಯೆನ್ನ ಜಿಹ್ವಾಗ್ರರಂಗದೆ
ಕ್ರಮದಿಂದ ನಟಿಸು ಲೀಲೆಯಲಿ[194]

ಕಮಲಸಂಭವ(ಬ್ರಹ್ಮ)ನ ಪಟ್ಟದರಾಣಿ ಎಂಬ ಮಾತಿನ ಜೊತೆಗೆ ಕಲ್ಯಾಣಿ (ಕಲ್ಯಾಣವನ್ನು ಉಂಟು ಮಾಡುವವಳು), ಕೈಯಲ್ಲಿ ವೀಣೆಯನ್ನು ಹಿಡಿದಿರುವ ಸೌಂದರ್ಯವತಿ ಸರಸ್ವತಿ ಎಂಬ ವರ್ಣನೆಯೂ ಇದೆ. ಆದರೆ ಅಮರವಂದಿತೆ ಎಂಬ ಹೊಸ ವಿಶೇಷಣವನ್ನು ಗೋವಿಂದ ವೈದ್ಯ ಬಳಸಿದ್ದಾನೆ. ಸರಸ್ವತಿಯು ಬ್ರಹ್ಮನ ಪಟ್ಟದರಾಣಿಯಾದ್ದರಿಂದ ಮಾತ್ರ ಅಮರವಂದಿತೆಯೇ? ಅಲ್ಲ ಎಂಬುದು 'ಜಿಹ್ವಾಗ್ರರಂಗದೆ ಕ್ರಮದಿಂದ ನಟಿಸು ಲೀಲೆಯಲಿ' ಎಂಬ ಮಾತಿನಿಂದ ವ್ಯಕ್ತವಾಗುತ್ತದೆ. 'ಜಿಹ್ವಾಗ್ರರಂಗದೆ ನಟಿಸು' ಎನ್ನುವಲ್ಲಿ ನಾಗಚಂದ್ರನ 'ವಿದ್ಯಾನಟಿನಾಟಕಂ ನಲಿಗೆ ಮತ್ಕಾವ್ಯಸ್ಥಲೀರಂಗದೊಳ್' ಎಂಬ ಮಾತು ನೆನಪಾಗದಿರದು. ರುದ್ರಭಟ್ಟನೂ ಜಿಹ್ವಾಗ್ರದಲ್ಲಿ ನೆಲಸುವಂತೆ ಸರಸ್ವತಿಯನ್ನು ಆಹ್ವಾನಿಸುವುದನ್ನು ಹಿಂದೆಯೇ ಗಮನಿಸಿದ್ದೇವೆ.

ಸೋಮನಾಥ (ಸುಮಾರು ಕ್ರಿ.ಶ.1650)

ಸೋಮನಾಥ ಎಂಬ ಕವಿಯ 'ರುಕ್ಮಾಂಗದಚರಿತೆ' ಎಂಬ ಸಾಂಗತ್ಯ ಕೃತಿ 'ಕಂಠೀರವನರಸರಾಜ ವಿಜಯ'ದ ಸಮಕಾಲೀನ ಕೃತಿಯಾಗಿದೆ. ಕ್ರಿ.ಶ.1500ರಲ್ಲಿದ್ದ ಸೋಮನಾಥ ಎಂಬುವವನ ಅಕ್ರೂರ ಚರಿತೆ ಷಟ್ಪದಿ ಕಾವ್ಯವಾದರೆ ಈ ಸೋಮನಾಥನದು ಸಾಂಗತ್ಯ ಕಾವ್ಯ. ಕಾಲದ ಅಂತರದಿಂದ ಇಬ್ಬರೂ ಬೇರೆ ಬೇರೆ. ಆದರೆ ಆತನಂತೆ ಈತನೂ ತನ್ನ ಕೃತಿಯಲ್ಲಿ ಗಣಪತಿ ಮತ್ತು ಸರಸ್ವತಿಯರನ್ನು ಸ್ತುತಿಸಿದ್ದಾನೆ. ಸರಸ್ವತಿಯನ್ನು ಸ್ತುತಿಸಿರುವ ಪದ್ಯ ಹೀಗಿದೆ.

ಈರೇಳು ಜಗವ ಪುಟ್ಟಿಸಿದ ವಿರಂಚಿಯ
- ನಾರಿಯನಾ ವೈಖರಿಯ
ಸೂರಿಜನಾಸ್ಯಸರೋರುಹವಾಸಿಯ
ಶಾರದೆಯನು ಬಲಗೊಂಬೆ॥[195]

ಹದಿನಾಲ್ಕು ಲೋಕವನ್ನು ಸೃಷ್ಟಿಸಿದ ಬ್ರಹ್ಮನ ನಾರಿ ಹಾಗೂ ಪಂಡಿತಜನರ ಮುಖಕಮಲದಲ್ಲಿ ವಾಸವಾಗಿರುವ ಶಾರದೆಗೆ ನಮಸ್ಕರಿಸುತ್ತೇನೆ. ಸರಸ್ವತಿಯನ್ನು ಸೃಷ್ಟಿಸಿದ ಬ್ರಹ್ಮ ತನ್ನ ಮುಖದಲ್ಲಿಯೇ ಸರಸ್ವತಿಯನ್ನು ಇಟ್ಟುಕೊಂಡ ಎಂಬ ಪೌರಾಣಿಕ ಕಲ್ಪನೆಗಿಂತ ಭಿನ್ನವಾಗಿದೆ ಈತನ ಕಲ್ಪನೆ. ಪಂಡಿತ ಜನರ ಮುಖಕಮಲದಲ್ಲಿ ಸುಳಿದಾಡಬೇಕಾದ ಸರಸ್ವತಿ, ಅಲ್ಲಿಯೇ ವಾಸವಾಗಿದ್ದಾಳೆ.!

---

194. ಕಂಠೀರವನರಸರಾಜ ವಿಜಯ, ಪೀಠಿಕಾಸಂಧಿ, ಪದ್ಯ –9
195. ರುಕ್ಮಾಂಗದ ಚರಿತೆ, 1–9

ಲಕ್ಷ್ಮಯ್ಯ (ಸುಮಾರು ಕ್ರಿ.ಶ.1650)

ಸಾಂಗತ್ಯ ಕವಿ ಲಕ್ಷ್ಮಯ್ಯನ ಏಕೈಕ ಕೃತಿ 'ಮದನಮೋಹಿನಿಯ ಕಥೆ'. ಗೋವಿಂದವೈದ್ಯ ಮತ್ತು ಸೋಮನಾಥ ಕವಿಗಳಂತೆ ತ್ರಿಮೂರ್ತಿಗಳನ್ನು ಅವರವರ ಶಕ್ತಿಯರನ್ನು ಮತ್ತು ಗಣಪತಿಯನ್ನು ಸ್ತುತಿಸಿದ್ದಾನೆ. ಈತನ ಸರಸ್ವತಿಯ ಸ್ತುತಿ ಹೀಗಿದೆ.

ವಾಣಿಯ ವಿಶ್ವಶ್ರೇಣಿಯನಂಬುಜ
ಪಾಣಿಯ ನಿಖಿಳ ಗೀರ್ವಾಣಿಯ
ಜಾಣೆಯ ನುತ ಕಲ್ಯಾಣಿಯ ಬ್ರಹ್ಮನ
ರಾಣಿಯನೊಮ್ಮೆ ನಾ ಬಲಗೊಂಬೆ॥[196]

ಇದೊಂದು ಸಾಂಪ್ರದಾಯಕ ಸರಸ್ವತಿಯ ಸ್ತುತಿ. ಆದರೂ ನಿಖಿಳ ಗೀರ್ವಾಣಿ ಎಂಬ ಮಾತು ಮನನೀಯವಾಗಿದೆ. ಸರ್ವಭಾಷಾಮಯೀ ಸರಸ್ವತಿ ಎಂಬ ಮಾತು ಇಲ್ಲಿ ನಿಖಿಳ ಗೀರ್ವಾಣಿಯಾಗಿ ಬಂದಿದೆ. ವಿಶ್ವಶ್ರೇಣಿ ಎಂಬ ಮಾತೂ ಸರಸ್ವತಿಯ ಸರ್ವವ್ಯಾಪಕತೆಯನ್ನು ಸೂಚಿಸುತ್ತದೆ. ಬ್ರಹ್ಮನನ್ನು ಸ್ತುತಿಸಿರುವ ಪದ್ಯದಲ್ಲಿ 'ಮಗಳ ರೂಪನು ಕಂಡು ಮೋಹಿಸಿ ಮಿಗೆ ಪತಿಯಾದ ವಿರಂಚಿ'[197] ಎಂದು ಬ್ರಹ್ಮ-ಸರಸ್ವತಿಗಳು ಸತಿಪತಿಗಳಾದ ಪೌರಾಣಿಕ ಕಥೆಯನ್ನು ಒಂದೇ ವಾಕ್ಯದಲ್ಲಿ ಧ್ವನಿಪೂರ್ಣವಾಗಿ ಬಳಸಿರುವುದು ಗಮನ ಸೆಳೆಯುತ್ತದೆ.

ವಿಜಯವೆಂಕಟರಮಣ (ಸುಮಾರು ಕ್ರಿ.ಶ. 1700)

ಹದಿನೆಂಟನೇ ಶತಮಾನದಲ್ಲಿ ಸರಸ್ವತೀ ದರ್ಶನವನ್ನು ಶ್ಲೇಷೆಯಿಂದ ಸಮರ್ಥವಾಗಿ ಕಟ್ಟಿಕೊಟ್ಟಿರುವ ಕವಿ ವಿಜಯವೆಂಕಟರಮಣ. ಈ ಕವಿಯ 'ಶ್ರೀಭಗವಚ್ಚರಿತ್ರೆ'ಯಲ್ಲಿ ಶ್ಲೇಷೆಯಿಂದ ಕೂಡಿದ ಅತ್ಯಂತ ಸುಂದರವಾದ ಸರಸ್ವತೀ ಸ್ತುತಿಯಿದೆ.

ಜಲಜಾತಜಾಮೋದಕಾರಿಯಂ ಸಂತತೋ
ಜ್ಜ್ವಲ ಹಂಸಗಣ ಸೇವ್ಯಮಾನೆಯನ್ನಮೃತ ಮಂ
ಜುಳ ಹೃದಯಳನ್ನನಿಮಿಷಾಗಾರೆಯಂ ಕುವಲಯಾನಂದವರ್ಧಿನಿಯನು
ಕಲಿತ ಲಸದೂರ್ಮಿಕಾಕರೆಯನನವರತ ಮಂ
ಗಳ ಸುಪ್ರವಾಹೆಯಂ ಕಂಕಣಾಭರಣೆ ನಿ
ರ್ಮಲೆ ಸರಸ್ವತಿಯಹ ಸರಸ್ವತಿಯ ಭಜಿಪೆ ಕವಿಕುಲ ಜೀವನಪ್ರದೆಯನು[198]

---

196. ಮದನಮೋಹಿನಿಯ ಕಥೆ, 1-7
197. ಮದನಮೋಹಿನಿಯ ಕಥೆ 1-4
198. ಶ್ರೀ ಭಗವಚ್ಚರಿತ್ರೆ, ಪೀಠಕಾಧ್ಯಾಯ, ಪದ್ಯ -8

ಸರಸ್ವತಿಯನ್ನು ನದಿ ಮತ್ತು ವಾಗ್ದೇವಿಯನ್ನಾಗಿ ಶ್ಲೇಷೆಯಿಂದ ಸ್ತುತಿಸಿರುವ ಪದ್ಯವಿದು. ನದಿ ದೇವತೆಗೆ ಅನ್ವಯಿಸಿದರೆ, 'ನೀರಿನಲ್ಲಿ ಹುಟ್ಟಿದ ಕಮಲದ ಪರಿಮಳದಿಂದ ಕೂಡಿದವಳು, ನಿರಂತರವಾಗಿ ಹಂಸಸಮೂಹದಿಂದ ಸೇವಿತಳಾಗುತ್ತಿರುವವಳು, ಮಂಜುಳ ಶಬ್ದದಿಂದ ಹರಿಯುತ್ತಿರುವವಳು, ಮೀನುಗಳಿಗೆ ಆಶ್ರಯಸ್ಥಾನವಾಗಿರುವವಳು, ಕನ್ನೈದಿಲೆಯನ್ನು ಅರಳಿಸುವವಳು, ಅಲೆಗಳಿಗೆ ಆಶ್ರಯವಾಗಿರುವವಳು, ಭೂಮಿಗೆ ಕಂಕಣಾಭರಣದಂತಿರುವ, ನಿರ್ಮಲವಾದ, ಜೀವನಪ್ರದೆಯಾದ ಸರಸ್ವತೀ ನದಿಯನ್ನು ನಿರಂತರವಾಗಿ ಭಜಿಪೆನು' ಎಂದಾಗುತ್ತದೆ. ವಾಗ್ದೇವಿಗೆ ಅನ್ವಯಿಸಿದರೆ, 'ಕಮಲದಿಂದ ಹುಟ್ಟಿದ ಬ್ರಹ್ಮನಿಗೆ ಸಂತೋಷ ನೀಡುವಂತಹವಳೂ, ಬುಧರಿಂದ ನಿರಂತರವಾಗಿ ಸೇವಿತಳಾಗುತ್ತಿರುವವಳು, ಮಂಜುಳ ಧ್ವನಿಯನ್ನುಳ್ಳವಳೂ, ದೇವತೆಗಳಿಗೆ ಆಕರವಾಗಿರುವವಳು, ಆನಂದವನ್ನುಂಟು ಮಾಡುವವಳು, ಅತಿಶಯವಾದ ಸಂತೋಷಕ್ಕೆ ಆಕರೆಯಾಗಿರುವವಳು, ವಿಶೇಷವಾಗಿ ಹೊಳೆಯುವ ಉಂಗುರವನ್ನು ಧರಿಸಿರುವ ಬೆರಳಿಗೆ ಆಶ್ರಯವಾದ ಕರವನ್ನು ಉಳ್ಳವಳು ಆದ ನಿರ್ಮಲೆಯಾದ ಸರಸ್ವತಿಯನ್ನು, ಕವಿಕುಲ ಜೀವನಪ್ರದೆಯನ್ನು ನಿರಂತರವಾಗಿ ಭಜಿಸುತ್ತೇನೆ' ಎಂದಾಗುತ್ತದೆ. ಕಾವ್ಯಸರಸ್ವತಿ ಮತ್ತು ನದೀ ಸರಸ್ವತಿಯನ್ನು ಒಟ್ಟಾಗಿ, ಅತ್ಯಂತ ಸುಸಂಬಂಧವಾದ ಶ್ಲೇಷೆಯಿಂದ ಸ್ತುತಿಸಲಾಗಿದೆ. ಬಹುಶಃ ಹದಿನೆಂಟನೇ ಶತಮಾನದಲ್ಲಿ ವಿಶೇಷವಾಗಿ ಕಂಡುಬರುವ ಸರಸ್ವತಿಯ ಸ್ತುತಿ ಇದು.

ಅನಂತಕವಿ (ಸುಮಾರು ಕ್ರಿ.ಶ. 1780)

ಅನಂತಕವಿಯ ಗೊಮ್ಮಟೇಶ್ವರ ಚರಿತೆ ಸಾಂಗತ್ಯ ಕೃತಿಯಲ್ಲಿ ಬಂದಿರುವ ಸರಸ್ವತಿಯ ಸ್ತುತಿ ಸಂಪ್ರದಾಯಬದ್ಧವಾಗಿದೆ. ಆದರೆ ಶಬ್ದಾಲಂಕಾರದಿಂದ ಕೂಡಿರುವುದರಿಂದ ಪದ್ಯ ಗಮನ ಸೆಳೆಯುತ್ತದೆ.

> **ವಾಣಿ ಪನ್ನಗವೇಣಿ ಶ್ರೇಯೋಮಾರ್ಗನಿಃ**
> **ಶ್ರೇಣಿ ವೀಣಾನ್ವಿತಪಾಣಿ**
> **ಮಾಣದೆ ನನ್ನಂತರಂಗದೊಳಿರು ಬುಧ**
> **ಜನಪ್ರಾಣೆ ನಿನಗೆಣೆಗಾಣೆ॥**[199]

'ಪನ್ನಗವೇಣಿ' ಎಂಬುದು ಲಕ್ಷ್ಮೀಶನ 'ಫಣಿವೇಣಿ'ಯನ್ನು ಹೋಲುತ್ತಿದ್ದರೆ, 'ಶ್ರೇಯೋಮಾರ್ಗನಿಃಶ್ರೇಣಿ' ಎಂಬುದು ಮಲ್ಲಿಕಾರ್ಜುನನ 'ಸೂಕ್ತಿಸುಧಾರ್ಣವ' ಗ್ರಂಥದಲ್ಲಿ ಉಲ್ಲೇಖಿತವಾಗಿರುವ ಅಗ್ಗಳನ 'ಚಂದ್ರಪ್ರಭಪುರಾಣಂ' ಕಾವ್ಯದ 'ಸಮುನ್ನತಾಕ್ಷಯಪದ ಪ್ರಾಸಾದ ನಿಶ್ರೇಣಿ' ಎಂಬ ಕಲ್ಪನೆಯನ್ನು ಹೋಲುತ್ತದೆ. ಇಡೀ ಪದ್ಯ, ಮೂರನೆಯ ಮಂಗರಸ ಕವಿಯ 'ನೇಮಿಜಿನೇಶ ಸಂಗತಿ'ಯ 'ವಾಣಿ ವೃಜಿನ ಘನತರಕಾಂತಾರ ಕೃಪಾಣಿ ಸಂಸಾರವಾರಿಧಿಗೆ ದ್ರೋಣಿ ನಿರ್ಮಲನಿಶ್ರೇಯೋಮಾರ್ಗ ನಿಶ್ರೇಣಿ' ಎಂಬ ಪದ್ಯದ ಪಡಿನೆಳಲಾಗಿದೆ. ಆದರೆ 'ಬುಧಜನಪ್ರಾಣೆ' ಎಂಬುದು

---

199. ಗೊಮ್ಮಟೇಶ್ವರ ಚರಿತೆ, 1-3

ನವೀನವಾಗಿದೆ. 'ನಿನಗೆಣೆಗಾಣೆ' ಎಂಬಲ್ಲಿ ಸರಸ್ವತಿಯ ಪ್ರಾಮುಖ್ಯ ವ್ಯಕ್ತವಾಗಿದೆ. ಇನ್ನೊಂದು ಪದ್ಯದಲ್ಲಿರುವ **'ಖಳರ್ಗೆ ಕಾವ್ಯಾಮೃತವೆರೆದೊಡೆಳಸುವರೆ ಮುಳಿವರಲ್ಲದೆ ಮೆಚ್ಚುವರೆ'**[200] ಎಂಬ ಸಾಲನ್ನು ಗಮನಿಸಬಹುದು. ಕಾವ್ಯವೆಂಬ ಅಮೃತವನ್ನೇ ನೀಡಿದರೂ ಖಳರು ಮೆಚ್ಚುವುದಿಲ್ಲ; ಕೋಪಿಸಿಕೊಳ್ಳುತ್ತಾರೆ ಎಂಬುದು ಸಾರ್ವಕಾಲಿಕ ಸತ್ಯ. **'ನರ್ತಿಪ ಸರಸ್ವತೀಲಾಸ್ಯ ಭೇದಮಂ ಜಡನಜೆಯಂ'** ಎಂಬ ನಾಗಚಂದ್ರನ ಮಾತನ್ನು ಅನಂತಕವಿ ಮತ್ತಷ್ಟು ವಿಸ್ತರಿಸಿದ್ದಾನೆ.

ನೇಮರಸ (ಸುಮಾರು 18ನೇ ಶತಮಾನ)

ಸಾಂಗತ್ಯ ಕವಿ ನೇಮರಸನು ಬಹುಶಃ ಅನಂತಕವಿಯ ಸಮಕಾಲೀನ ಎನ್ನಬಹುದು. ಈತನೂ ಅನಂತ ಕವಿಯಂತೆ ಜೈನನೇ. ಈತನ ಕೃತಿ 'ಲೋಭದತ್ತ ಚರಿತೆ'. **'ವಾಣಿಯುದಿಸಿದಾ ಲೇಸಪ್ಪ ಮುಖಬಿಂಬದಿಂದ ಶೋಭಿಪ ಚವ್ವೀಸ ಜಿನರಿಗೆರಗುವೆನು'**[201] ಎನ್ನುತ್ತಾನೆ. ಶಿಶುಮಾಯಣನು **'ಆದಿಜಿನರಮೊಗದೊಳಗುದಯಿಸಿ'**ದ ಸರಸ್ವತಿ ಎಂದರೆ, ನೇಮರಸನು ಇಪ್ಪತ್ತನಾಲ್ಕು ಜಿನರ ಮುಖಕಮಲದಲ್ಲಿ ಉದಯಿಸಿದವಳು ಎನ್ನುತ್ತಾನೆ. ಪಂಪನ **'ಪರಮಜಿನೇಂದ್ರವಾಣಿ'**ಯೆ ಸರಸ್ವತಿ ಎಂಬ ಕಲ್ಪನೆ ಹತ್ತನೇ ಶತಮಾನದಿಂದ ಶಾಶ್ವತವಾಗಿ ನೆಲೆ ನಿಂತಿದ್ದನ್ನು ಗಮನಿಸಬಹುದಾಗಿದೆ. ವಾಣಿಯುದಿಸಿದ್ದರಿಂದ ಇಪ್ಪತ್ತನಾಲ್ಕು ಮಂದಿ ಜಿನರ ಮುಖಗಳು ಶೋಭಿಸುತ್ತಿವೆ ಎಂಬ ಮಾತು ಸರಸ್ವತಿಯ ಪ್ರಭಾವಿ ವ್ಯಕ್ತಿತ್ವವನ್ನು ಧ್ವನಿಸುತ್ತದೆ. ಇನ್ನೊಂದು ಪದ್ಯದಲ್ಲೂ ಈ ಕವಿಯು ಪಂಪನ ಕಲ್ಪನೆಯನ್ನೇ ವಿಸ್ತರಿಸಿದ್ದಾನೆ.

ಶ್ರೀ ಜಿನಮುಖಸರಸಿಯೊಳುದ್ಭವಿಸಿದ
ರಾಜಹಂಸೀ ನಿರ್ಮಲಾಂಗಿ
ಮೂಜಗದಜ್ಞಾನಹಾರಿಣಿ ವಾಗ್ದೇವಿ
ತೇಜವನೀಯೆನ್ನ ಕೃತಿಗೆ॥[202]

ಇಲ್ಲಿ ಜಿನೇಂದ್ರರ ಮಾತೇ ಸರಸ್ವತಿ ಎನ್ನುವ ಬದಲು, ಜಿನರ ಮುಖಕಮಲದಲ್ಲಿ ಹುಟ್ಟಿದವಳು ಸರಸ್ವತಿ ಎಂಬ ಕಲ್ಪನೆಯಿದೆ. ವೈದಿಕರ ಬ್ರಹ್ಮನ ಮುಖದಿಂದ ಉದ್ಭವಿಸಿದ ಸರಸ್ವತಿಯ ಕಲ್ಪನೆಗೆ ತೀರಾ ಹತ್ತಿರವಾದ ಕಲ್ಪನೆ ಇದಾಗಿದೆ. ರಾಜಹಂಸೀ ಎಂಬುದು ಆಕೆಯ ವಾಹನ ಹಂಸವನ್ನು ಸೂಚಿಸುತ್ತದೆ. ಹಂಸೀ ಎಂಬುದೇ ಸ್ವಚ್ಛತೆಯ ಶುದ್ಧತೆಯ ಸಂಕೇತವಾಗಿದ್ದರೂ ನಿರ್ಮಲಾಂಗಿ ಎಂಬ ವಿಶೇಷಣವನ್ನು ಮತ್ತೆ ಬಳಸಿದ್ದಾನೆ. ಕೇವಲ ಭೂಲೋಕದ ಮಾನವರ ಅಜ್ಞಾನವನ್ನು ಮಾತ್ರ ಕಳೆಯುವ ಸರಸ್ವತಿಯಾಗಿರದೆ, ಮೂರುಲೋಕವನ್ನಾವರಿಸಿರುವ ಅಜ್ಞಾನವನ್ನು ಕಳೆಯುವ ಸರಸ್ವತಿಯಾಗಿರುವುದು ಇಲ್ಲಿನ ವಿಶೇಷ.

---

200. ಅದೆ, 1–7
201. ಲೋಭದತ್ತ ಚರಿತೆ, 1–2
202. ಲೋಭದತ್ತ ಚರಿತೆ, 1–8

ಮುದ್ದಣ (ಕ್ರಿ.ಶ. –1901)

ಮುದ್ದಣನ 'ಶ್ರೀರಾಮಪಟ್ಟಾಭಿಷೇಕ'ದಲ್ಲಿರುವ ಶ್ಲೇಷೆಯಿಂದೊಡಗೂಡಿದ ಕಾವ್ಯಸರಸ್ವತಿ ಮತ್ತು ಮೋಕ್ಷಸರಸ್ವತಿಯ ಸ್ತುತಿ ಹೀಗಿದೆ.

> **ಯತಿಗಣಾಶ್ರಯಮೆನಿಸಿ ಶಬ್ದಾರ್ಥಭಾವದಿಂ**
> **ದತಿರಸಾಲಂಕಾರಮೊಪ್ಪೆ ಜೀವಾಕ್ಷರಸು**
> **ಗತಿಗಿರ್ಕೆಯಾಗಿ ನವಪದಪುಂಜರಂಜಿತ ಮನೋಜ್ಞಮೆನೆ ಕೈವಲ್ಯದ।**
> **ನುತಸುಕೃತಪದ್ಯಾವಳಿಯೆ ಇದೆನ್ನಿಸುತ್ತೆ ವಸು**
> **ಮತಿಗೆ ವಿಬುಧರ್ಕಳಿಂ ಸಂಭಾವ್ಯಮಾಗೆ ಭಾ**
> **ರತಿಯೊಲಿದಜಸ್ರಮೆನಗಿಷ್ಟಾರ್ಥಮಿತ್ತು ತಾನಿರ್ಕೆ ಮಜ್ಜಿಹ್ವಾಗ್ರದಿ**[203]

ಮುದ್ದಣನ ಕಾವ್ಯಸರಸ್ವತಿಯು ಯತಿಗಣಕ್ಕೆ ಆಶ್ರಯದಾತಳು, ಶಬ್ದ ಅರ್ಥ ಭಾವಗಳಿಂದ ಅತಿಯಾದ ರಸಾಲಂಕಾರವನ್ನು ಹೊಂದಿ ಶೋಭಿಸುವವಳು. ಯತಿ ಮತ್ತು ಗಣ ಛಂದಸ್ಸಂಬಂಧಿಯಾದವುಗಳು ಹೌದು; ಯತಿಗಣ ಅಂದರೆ ಮುನಿಸಮೂಹವೂ ಹೌದು. ಮುನಿಸಮೂಹಕ್ಕೆ ಆಶ್ರಯದಾತಳಾದ ಸರಸ್ವತಿಯು ಸರ್ವಾಲಂಕಾರಭೂಷಿತೆ. ಜೀವಾಕ್ಷರಸುಗತಿ ಎಂಬ ಮಾತು ವಿಶೇಷವಾಗಿದೆ. ಕಾವ್ಯದಲ್ಲಿ ಅಕ್ಷರಗಳ ಒಳ್ಳೆಯ ನಡೆಗೆ ಇಂಬಾಗಿ ಇರುವವಳು ಕಾವ್ಯಸರಸ್ವತಿ. ಹಾಗೆಯೇ ಜೀವದ ಸದ್ಗತಿಗೆ ಕಾರಣವಾಗುವವಳು ಜ್ಞಾನದೇವಿಯಾದ ಸರಸ್ವತಿ. ಕೈವಲ್ಯದ ನುತಸುಕೃತ ಪದ್ಯಾವಳಿಯೆ ಎಂಬ ಮಾತೂ ಅದನ್ನೇ ಸೂಚಿಸುತ್ತದೆ. ಒಳ್ಳೆಯ ಪದ್ಯಗಳ ಸಮೂಹವನ್ನುಂಟು ಮಾಡುವವಳು ಸರಸ್ವತಿ. ಕೈವಲ್ಯಕ್ಕೆ ಒಳ್ಳೆಯ ದಾರಿಗಳನ್ನು (ಪದ್ಯಾವಳಿ–ದಾರಿ) ನಿರ್ಮಿಸುವವಳು ಮೋಕ್ಷಪ್ರದಾಯಕಿಯಾದ ಸರಸ್ವತಿ. ದಾಸ ಸಾಹಿತ್ಯದಲ್ಲೂ ಸರಸ್ವತಿಯನ್ನು ಮೋಕ್ಷಬ್ರಹ್ಮನರಾಣಿ ಎಂದು ಸ್ತುತಿಸಿರುವುದನ್ನು ನೋಡಿದ್ದೇವೆ. ಕಾವ್ಯ ಮತ್ತು ಮೋಕ್ಷ ಎರಡನ್ನೂ ದಯಪಾಲಿಸುವ ಭಾರತಿಯು ತಮಗಿಷ್ಟಸಿದ್ಧಿಯನ್ನು ಇತ್ತು ಜಿಹ್ವಾಗ್ರದಲ್ಲಿ ನೆಲಸಲಿ ಎಂಬುದು ಮುದ್ದಣನ ಪ್ರಾರ್ಥನೆ. ಇನ್ನೊಂದು ಪದ್ಯದಲ್ಲಿ ಕೈಕೆಯ ಮೌನವನ್ನು ಅರ್ಥಪೂರ್ಣವಾಗಿ ವರ್ಣಿಸಲು ಸರಸ್ವತಿಯನ್ನು ಬಾಸೆವೆಣ್ಣು ಎಂದು ಕರೆದು ಸೊಗಸಾಗಿ ಬಳಸಿಕೊಂಡಿದ್ದಾನೆ.

> **ಕತ್ತುರಿಕರಂಡಬಾಯ್ಮನೆಯೊಳಗೆ ದಾಳಿಂಬ**
> **ವಿತ್ತುವಲ್ಗಾಪಿಟ್ಟು ತೊಂಡೆವಣ್ದುಟಿದೆಱೆಯ**
> **ನೆತ್ತಲುಂ ಬಿಗಿದು ಮುತ್ತುಗದಳಿರ್ನಾಲಗೆವಣೆಯೊಳಿರ್ದು ಬಾಸೆವೆಣ್ಣು**
> **ಮತ್ತೇನನೆಸಗಿದಪಳಿನಿಯನಾಲೋಕದಿಂ**
> **ದಿತ್ತಲೈತಂದೊಡನೆ ನೆಲಸಿರ್ಪುದೆಂದೇಕ**
> **ಚಿತ್ತದಿಂ ಮೌನಗೊಂಡಭವನಂ ಧ್ಯಾನಿಪಳೆ ವ್ರತಮೆನಿತು ಪೊಟ್ಟಿರ್ಪುದು**[204]

ಸರಸ್ವತಿ ಎಂಬ ಹೆಂಗಸು –ಮಾತು ಎಂಬ ಹೆಣ್ಣು– ಕಸ್ತೂರಿಯ ಕರಡಿಗೆಯಂತಿರುವ ಬಾಯಿ ಎಂಬ ಮನೆಯಲ್ಲಿ, ದಾಳಿಂಬೆಯ ಬಿತ್ತುಗಳಂತಿರುವ ಹಲ್ಲುಗಳನ್ನು ಕಾವಲಿರಿಸಿಕೊಂಡು,

---

203. ಶ್ರೀರಾಮಪಟ್ಟಾಭೀಷೇಕಂ, ನಾಂದೀಸಂಧಿ, ಪದ್ಯ –6

204. ಶ್ರೀರಾಮಪಟ್ಟಾಭೀಷೇಕಂ, 5–8

ತೊಂಡೆಹಣ್ಣಿನಂತೆ ಕೆಂಪಾಗಿರುವ ತುಟಿಯೆಂಬ ತೆರೆಯನ್ನು ಎಲ್ಲಾ ಕಡೆಗೂ ಹಾಕಿಕೊಂಡು, ಮುತ್ತುಗದ ಚಿಗುರೆಲೆಯಂತೆ ತೆಳ್ಳಗೆ ಕೆಂಪಾಗಿರುವ ನಾಲಿಗೆಯೆಂಬ ಮಣೆಯಲ್ಲಿ ಕುಳಿತುಕೊಂಡು ಏನು ಮಾಡುತ್ತಿದ್ದಾಳೆ? ತನ್ನ ಗಂಡನ(ಬ್ರಹ್ಮನ) ಸಾನ್ನಿಧ್ಯವನ್ನು ಬಿಟ್ಟು ಬಂದು ನೆಲಸಿರಬೇಕೆಂದು ಒಂದೇ ಮನಸ್ಸಿನಿಂದ ಮೌನವನ್ನು ತಾಳಿ ಈಶ್ವರನನ್ನು ಧ್ಯಾನಿಸುತ್ತಿದ್ದಾಳೆಯೆ? ಅವಳ ಈ ಮೌನವ್ರತ ಎಷ್ಟು ಹೊತ್ತು ಇರುವುದು? ಇದು ರಾಮ ವನವಾಸ ಮುಗಿಸಿ ಬಂದಾಗ, ಸಂಕೋಚದಿಂದ ಮಾತನಾಡದೆ ಮೌನದಿಂದ ಕೂತಿದ್ದ ಕೈಕೆಯಿಯ ವರ್ಣನೆ. ಬ್ರಹ್ಮನ ನಾಲಗೆಯಲ್ಲಿರುವ ಸರಸ್ವತಿಯು ನಮ್ಮ ನಾಲಗೆಯ ತುದಿಯಲ್ಲಿ ನೆಲಸಲಿ ಎಂದು ಕವಿಗಳು ಒಂದೇ ಸಮನೆ ಜಪಿಸುವುದನ್ನು ನೋಡಿದ್ದೇವೆ. ಹಾಗೆ ನೆಲಸಿದ ಸರಸ್ವತಿಯು ಹೊರಗೆ ಬರಲು ಕಷ್ಟ ಪಡುವ ಚಿತ್ರಣ ಕೈಕೆಯ ಮೌನದ ಹಿನ್ನೆಲೆಯಲ್ಲಿ ಸೊಗಸಾಗಿ ಮೂಡಿ ಬಂದಿದೆ. ಬಾಸೆವೆಣ್ಣು ಎಂಬ ಪ್ರಯೋಗವಂತೂ ಸರಸ್ವತಿಗೆ ತೊಡಿಸಿದ ದೇಸಿಯುಡುಗೆಯಾಗಿದೆ. ಇನ್ನೊಂದು ಪದ್ಯದಲ್ಲೂ ತನ್ನ ಬಾಸೆವೆಣ್ಣಿನ ವಿಶೇಷಗಳನ್ನು ಕಟ್ಟಿಕೊಡುತ್ತಾನೆ.

ಮೃದುಪದಾನ್ವಿತೆ ಮಂದಗತಿ ಮಂಜುಭಾಷೆ ಭಾ
ಸ್ವದಮಲಿನಸಂಧಿಶೋಬಿತೆ ವರ್ಣಯುಕ್ತೆ ಷ
ಟ್ಪದವೇಣಿ ನವರಸಭರಿತೆ ಸಚ್ಚರಿತೆ ಸುನಯನಾತಿಕಠಿನಸ್ವಭಾವೆ
ಚದುರೆ ಕನ್ನಡ ಜಾಣೆ ಸತ್ಕಳಾಕೋವಿದರ
ಹೃದಯಮಂ ತೋಷಿಸುವವಳೆನೆ ರಸಹೀನರಿಂ
ಗೊದಗುವಳೆ ದೈವಗತಿಯಿಂದೊರ್ಮೆ ಲಭಿಸಿದೊಡಮೇಂಗೆಯ್ವರಾಗಾಂಪರು

ಇಲ್ಲಿಯೂ ಶ್ಲೇಷೆಯಿದೆ. ಇಲ್ಲಿ ಕವಿಯು ಕಾವ್ಯ, ಭಾಷೆ ಮತ್ತು ಸರಸ್ವತಿಯ ಸೌಂದರ್ಯಗಳನ್ನು ಬೆಸೆದು ವರ್ಣಿಸಿದ್ದಾನೆ. ಮೃದುವಾದ ಪಾದ (ಪದ), ಮಂದ ನಡೆ, ಮಧುರವಾದ ಧ್ವನಿ, ಕಾಂತಿಯುಕ್ತವಾದ, ಮಲಿನವಾಗದ ಸಂಧಿಕಾರ್ಯದಿಂದ ಶೋಭಿಸುತ್ತಿರುವ ಪದಪ್ರಯೋಗ, ಅಕ್ಷರ, ಆರು ಸಾಲಿನ ಪದ್ಯದಲ್ಲಿ ಅಡಕವಾಗಿರುವವಳು ಅಥವಾ ಆರು ಕಾಲಿನ ಜಡೆಯನ್ನು ಹೊಂದಿರುವವಳು, ನವರಸಗಳಿಂದ ಕೂಡಿದವಳು, ಒಳ್ಳೆಯ ಚರಿತ್ರೆಯಿರುವವಳು, ಸುನಯನೆ, ಚದುರೆ ಎಂದೆಲ್ಲಾ ವರ್ಣಿಸಿದ್ದಾನೆ. ಕಠಿನಸ್ವಭಾವೆ ಎಂಬುದು ಸಾಧನೆಯಿಲ್ಲದೆ ಸರಸ್ವತಿಯು ಒಲಿಯುವುದಿಲ್ಲ ಎಂಬುದನ್ನು ಸೂಚಿಸುತ್ತಿರಬಹುದು. ಇಂತಹ ಸರಸ್ವತಿಯು ಕನ್ನಡ ಜಾಣೆ ಮತ್ತು ಸತ್ಕಲಾಕೋವಿದರ ಹೃದಯವನ್ನು ಸಂತೋಷಪಡಿಸುವವಳು. ಈ ಸರಸ್ವತಿಯು ರಸಹೀನರಿಗೆ ಒಲಿಯುತ್ತಾಳೆಯೆ? ಆಗೊಂದು ವೇಳೆ ದೈವಗತಿಯಿಂದ ಒಲಿದರೂ, ರಸಹೀನರಾದ ಆ ಗಾಂಪರು ಏನು ಮಾಡುತ್ತಾರೆ? ಎಂಬುದು ಮುದ್ದಣನ ಪ್ರಶ್ನೆ. 'ಸರಸ್ವತಿಯ ಲಾಸ್ಯವನ್ನು ಜಡರು ಅರಿಯುವುದಿಲ್ಲ' ಎಂಬ ನಾಗಚಂದ್ರನ ಮಾತುಗಳೇ ಮುದ್ದಣನ

ಪ್ರಶ್ನೆಗೆ ಉತ್ತರವಾಗಬಲ್ಲವು. ಸರಸ್ವತಿಯ ಲಾಸ್ಯವನ್ನು ಅರಿತ ಮೇಲಲ್ಲವೇ ಏನಾದರು ಮಾಡಲು ಸಾಧ್ಯ? ಅರಿಯುವುದೇ ಇಲ್ಲ ಎಂದ ಮೇಲೆ ಏನಾದರು ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಇಬ್ರಾಹಿಮ್ ಆದಿಲ್ ಷಾ (ಕ್ರಿ.ಶ. 15ನೇ ಶತಮಾನ)

ಬಹುಮನಿ ಸಾಮ್ರಾಜ್ಯ ಮಧ್ಯಕಾಲೀನ ಕರ್ನಾಟಕದ ಭಾಗವಾಗಿತ್ತು. ಬಹುಮನಿಯ ದೊರೆ ಎರಡನೇ ಇಬ್ರಾಹಿಮ್ ಆದಿಲ್ ಷಾ 'ಕಿತಾಬ್–ಎ–ನವರಸ್' ಎಂಬ ಗ್ರಂಥವನ್ನು ರಚಿಸಿದ್ದಾನೆ. ಇಬ್ರಾಹಿಮ್ ಸೂಫಿಪಂಥದ ಪ್ರತಿಪಾದಕ ಮತ್ತು ಹಿಂದೂ ಮುಸ್ಲಿಮ್ ಐಕ್ಯತೆಯನ್ನು ಪ್ರತಿಪಾದಿಸಿದವನು. 'ಕಿತಾಬ್–ಎ–ನವರಸ್'ದ ಮೊದಲ ಹಾಗೂ ಕೊನೆಯ ದೋಹಾಗಳು ಸರಸ್ವತಿಯ ಸ್ತುತಿಗೆ ಮೀಸಲಾಗಿವೆ. ಸರಸ್ವತಿಯ ಸ್ತುತಿಯಲ್ಲಿ ವಿಶೇಷಗಳಿಲ್ಲ. ಗಣಪತಿಯ ಜೊತೆಗೆ ಸರಸ್ವತಿಯನ್ನು ಉಲ್ಲೇಖಿಸಿದೆ ಅಷ್ಟೆ. ಎರಡನೇ ಇಬ್ರಾಹಿಮನಿಗೆ ಸರಸ್ವತೀ ಆರಾಧನೆಯ ದೀಕ್ಷೆಕೊಟ್ಟ ಗುರು ರುಕ್ಮಾಂಗದ ಪಂಡಿತ. ಇವನನ್ನು ಕುರಿತು 'ರುಕ್ಮಾಂಗದಚರಿತ್ರೆ'[205] ಎಂಬ ಕೃತಿ ರಚನೆಯಾಗಿದೆ. **'ಅರಮನೆ ಆವರಣದಲ್ಲಿ ಸರಸ್ವತಿ ವಿಗ್ರಹ ಪ್ರತಿಷ್ಠಾಪನೆ ಮಾಡುವಷ್ಟು, ತನ್ನ ಕೃತಿ 'ಕಿತಾಬ್–ಎ–ನವರಸ್' ಅನ್ನು ಸರಸ್ವತೀ ಸ್ತುತಿಯಿಂದ ಆರಂಭಿಸುವಷ್ಟು, ಇಬ್ರಾಹೀಮನಿಗೆ ಸರಸ್ವತಿಯ ಹುಚ್ಚು ಹಿಡಿದಿತ್ತು.'**[206] ಮತ್ತು **'ಇಬ್ರಾಹೀಮನ ಸರಸ್ವತಿಯ ಹುಚ್ಚು ಎಷ್ಟಿತ್ತೆಂದರೆ, ಇಸ್ಲಾಮಿ ಉಲೇಮಾಗಳಲ್ಲಿ ತಳಮಳವನ್ನು ಉಂಟು ಮಾಡುವಷ್ಟು. ಅದರಿಂದ ಅವನನ್ನು ಸರಿದಾರಿಗೆ ತರಲು ಒಬ್ಬ ಸಂತನನ್ನು ಕಳುಹಿಸುತ್ತಾರೆ. ಹಾಗೆ ಬಂದ ಸಂತನೇ ರುಕ್ಮಾಂಗದನಿಗೂ ಇಬ್ರಾಹೀಮನಿಗೂ ಶರಣಾಗುತ್ತಾನೆ'**[207] ಎಂಬ ಮಾತುಗಳನ್ನು ಗಮನಿಸಿದರೆ, ಆತನು ಸರಸ್ವತಿಯ ಆರಾಧಕನಾಗಿದ್ದಂತೆ ತೋರುತ್ತದೆ. 'ಕಿತಾಬ್–ಎ–ನವರಸ್' ಕೃತಿಯಲ್ಲಿ ಪ್ರಸ್ತಾಪವಾಗಿರುವ ಸರಸ್ವತಿಯ ವಿಚಾರ ನಂತರ ಕಾಲದ ಜನಪದೀಯ ಕವಿಗಳ ಮೇಲೂ ಪ್ರಭಾವ ಬೀರಿದೆ.

ನೆನಪಾಯಿತು ಒಂದು ಮಾತು ನನಗೆ ಧರ್ಮಜನಂತ ಹಸನಗ
ಕೊಡು ವರವ ಬೇಡುವೆ ಸರಸ್ವತಿ ನಾಲಿಗೆ ಮ್ಯಾಗ[208]

ಈ ಲಾವಣಿಯಲ್ಲಿ, ವರವ ಕೊಡುವಂತೆ ಸರಸ್ವತಿಯನ್ನು ಹಸನ್ ಬೇಡುತ್ತಾನೆ. ಇಬ್ರಾಹಿಮ್ ಮತ್ತು ರುಕ್ಮಾಂಗದನ ವಿಚಾರಗಳೇನೇ ಇರಲಿ. ಅವರಿಬ್ಬರೂ ಸರಸ್ವತಿಯ ಆರಾಧಕರಾಗಿದ್ದರು ಎಂಬುದಷ್ಟೇ ಇಲ್ಲಿ ಮುಖ್ಯವಾಗಿ, ಸರಸ್ವತಿಯು ಸರ್ವಧರ್ಮದವರಿಗೂ ಮಾನ್ಯವಾದ ದೇವತೆಯಾಗಿದ್ದಾಳೆ.

---

205. ಶೇಷಗಿರಿ ಕೆ.ಆರ್(ಸಂ): ಸೋಮನಾಥಕವಿ ವಿರಚಿತ ರುಕ್ಮಾಂಗದ ಚರಿತೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು. 1979

206. ರಹಮತ್ ತರೀಕೆರೆ: ಕರ್ನಾಟಕದ ಸೂಫಿಗಳು, ಪು.71

207. ಅದೇ, ಪು.234

208. ಅದೇ, ಪು.235

ಸಂತ ಶಿಶುನಾಳ ಶರೀಫ (ಕ್ರಿ.ಶ. 19ನೆಯ ಶತಮಾನ)

ಹತ್ತೊಂಬತ್ತನೆಯ ಶತಮಾನದಲ್ಲಿ ಕನ್ನಡದಲ್ಲಿ ಹಾಡಿದ ಶರೀಫ ಒಬ್ಬ ದಾರ್ಶನಿಕ ಕವಿ. ಮಂದಿಯ ಬದುಕನ್ನು ಹಸನು ಮಾಡಲಿಕ್ಕಾಗಿಯೇ ಹಾಡಿದ ಮಹಮ್ಮದೀಯ ಸಂತಕವಿ. ಈತನ ಕೆಲವು ಹಾಡುಗಳಲ್ಲಿ ಸರಸ್ವತಿಯ ವಿಷಯ ಪ್ರಸ್ತಾಪವಾಗಿದೆ. ಈತನ ಕಾಲಕ್ಕಾಗಲೇ, ಗಣಪತಿ ಅತ್ಯಂತ ಜನಪ್ರಿಯನಾಗಿದ್ದರಿಂದಲೋ ಏನೋ, ಸರಸ್ವತಿ-ಗಣಪತಿಯರಿಬ್ಬರೂ ಒಟ್ಟಾಗಿಯೇ ಸ್ತುತಿಗೊಳ್ಳುತ್ತಾರೆ ಈತನ ಹಾಡುಗಳಲ್ಲಿ. 'ಶ್ರೀ ಬಸವೇಶ್ವರ ದಂಡಕ'[209]ದಲ್ಲಿ ವೇದಗಳು ಹುಟ್ಟಿದ್ದರ ಮತ್ತು ಪ್ರಸಾರವಾಗಿದ್ದರ ವಿಚಾರವಿದೆ.

ಬಸವೇಶ್ವರನ ನಾಲ್ಕು ಪಾದಗಳ ಮೇಲೆ ನಾಲ್ಕು ವೇದಗಳು ಹುಟ್ಟಿದವು
ಅದು ಎಂತೆಂದೊಡೆ, ಯಜುರ್ವೇದ, ಋಗ್ವೇದ, ಸಾಮವೇದ, ಅಥರ್ವಣವೇದ
ಈ ನಾಲ್ಕು ವೇದಗಳು ಸ್ವರ್ಗ ಮರ್ತ್ಯ ಪಾತಾಳದೊಳಗೆ ಇದ್ದ ವೇದಗಳಾ
ವಿಷ್ಣು ತಂದು ಬ್ರಹ್ಮನಿಗೆ ಕೊಟ್ಟನು
ಬ್ರಹ್ಮನು ತಂದು ಸರಸ್ವತಿಗೆ ಕೊಟ್ಟನು
ಸರಸ್ವತಿಯು ತಂದು ವಿಘ್ನೇಶ್ವರನಿಗೆ ಕೊಟ್ಟಳು........

ಹೀಗೆ ಮುಂದುವರೆಯುತ್ತದೆ. ಅನುಭಾವ ಕವಿಯಾದ ಈತನ ಮಾತುಗಳು ಅರ್ಥಕ್ಕೆ ನಿಲುಕುವುದು ಕಷ್ಟ. ಒಬ್ಬೊಬ್ಬರಿಗೆ ಒಂದೊಂದು ಅರ್ಥ ಹೊಳೆಯುವ ಸಂಭವವೇ ಜಾಸ್ತಿ. ಅಂತರಾರ್ಥ ಏನೇ ಇರಲಿ, ಈ ದಂಡಕದಲ್ಲಿ ವೇದಗಳು ಸರಸ್ವತಿಗೆ ಬ್ರಹ್ಮನಿಂದ ಬಂದವುಗಳು. ಬ್ರಹ್ಮನ ಮಾತೇ ಸರಸ್ವತಿ, ಸರಸ್ವತಿಯೇ ವೇದ ಎಂಬ ಮಾತುಗಳನ್ನು ಮೇಲಿನ ಸಾಲುಗಳು ಧ್ವನಿಸುತ್ತವೆ. ಸರಸ್ವತಿಯು ವಿಘ್ನೇಶ್ವರನಿಗೆ ಕೊಟ್ಟಳು ಎಂಬುದು ಸರಸ್ವತಿಯ ನಂತರ ಗಣೇಶನಿಗೆ ಸಿಕ್ಕಿರುವ ವಿದ್ಯಾಧಿದೇವತೆಯ ಗೌರವನ್ನು ಸೂಚಿಸುತ್ತಿರುವಂತಿದೆ. ದಂಡಕದ ಮುಂದಿನ ಭಾಗದಲ್ಲಿ,

ಆ ಕಾಲೇಶನಿಗೆ ಮೋಕ್ಷಬ್ರಹ್ಮನ ಕಾವಲವು
ಆ ಮೋಕ್ಷ ಬ್ರಹ್ಮನಿಗೆ ಸರಸ್ವತಿಯ ಕಾವಲವು
ಆ ಸರಸ್ವತಿಗೆ ವೀರಭದ್ರನ ಕಾವಲವು

ಎಂಬ ಸಾಲುಗಳು ಬರುತ್ತವೆ. ಸರಸ್ವತಿಯು ಬ್ರಹ್ಮನ ಶಕ್ತಿಯಾದ್ದರಿಂದ, ಆತನಿಗೆ ಸರಸ್ವತಿಯ ಕಾವಲು ಎಂದಾಗುತ್ತೇನೋ. ಆದರೆ ಸರಸ್ವತಿಗೆ ವೀರಭದ್ರನ ಕಾವಲವು ಏಕೆ ಎಂಬುದು ಅರ್ಥವಾಗುವುದಿಲ್ಲ.

---

209. ಶಿವಾನಂದ ಗುಬ್ಬಣ್ಣವರ (ಸಂ): ಬರಕೋ ಪದಾ ಬರಕೋ, ಪು.168-69

'ಸಾಂಬಗ ಸಾಕ್ಷಾತ್ ಅಂಬ ಕೇಳತಾಳೋ'[210] ಹಾಡಿನಲ್ಲಿ **'ಬ್ಯಾಗ ಬ್ರಹ್ಮ ಸರಸ್ವತಿ ಸಂಯೋಗದಿ ಮೇರು ಕಿರಣದಿಂದ್ರಿಯ ಮೋರಾ'** ಎಂಬ ಸಾಲು ಬರುತ್ತದೆ. ಅದರ ಹಿಂದಿನ ಸಾಲಿನಲ್ಲಿ ನಾರಾಯಣ-ಲಕ್ಷ್ಮಿ, ಮುಂದಿನ ಸಾಲಿನಲ್ಲಿ ರುದ್ರ-ಕಾಳಿಯರ ಉಲ್ಲೇಖವಿದೆ. ಕವಿತೆಯ ಒಟ್ಟು ಆಶಯ ಪ್ರಕಟವಾಗುವುದಿಲ್ಲ. ಆದರೆ ಸರಸ್ವತಿಯು ಬ್ರಹ್ಮನ ಶಕ್ತಿ ಎಂಬುದು ಸುಪ್ರಕಟವಾಗಿದೆ.

'ಮೈಲಾರಲಿಂಗನ ಹೋಳಿಪದ'[211] ಪದದಲ್ಲಿ **'ಸರಸ್ವತಿ ಕರಿಮುಖ ಉಭಯರನು ಬಹುತರದಿ ಬೇಡುವೆ ದಿವ್ಯ ಅಭಯವನು'** ಎಂದು ಗಣಪತಿಯೊಂದಿಗೆ ಸರಸ್ವತಿಯನ್ನು ಸ್ತುತಿಸಿದ್ದಾರೆ. ಬೇರೇನೂ ವಿಚಾರವಿಲ್ಲ. 'ಪ್ರಮೀಲೆಯ ಹೋಳಿಪದ'[212] ಎಂಬ ಪದದಲ್ಲೂ, **'ಕರಿಮುಖಗ ಕರಗಳ ಮುಗಿದು ವರವ ಬೇಡುವೆನು ಶಾರದಿಗೆ...... ಶಾರದಿ ಗಣಪತಿ ಉಭಯ ಮೂರುತಿ ಹದಪೂರ ನುತಿಸಿ ನಮೋಯೆಂದು'** ಏಂದು ಮುಂದೆ ಸಾಗುತ್ತಾರೆ. ಇಲ್ಲೂ ಬೇರೆ ವಿಚಾರಗಳಿಲ್ಲ.

ಆಧುನಿಕ ಕನ್ನಡ ಸಾಹಿತ್ಯ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪಡಿಮೂಡಿರುವ ಸರಸ್ವತಿಯ ಸ್ವರೂಪವನ್ನು ನಿರ್ಧರಿಸುವುದು ಕಷ್ಟ ಸಾಧ್ಯದ ಕೆಲಸ. ಹಲವಾರು ಐತಿಹಾಸಿಕ, ಸಾಹಿತ್ಯಕ ಮತ್ತು ತಾಂತ್ರಿಕ ತೊಂದರೆಗಳು ಈ ನಿಟ್ಟಿನಲ್ಲಿ ಎದುರಾಗುತ್ತವೆ. ಅವುಗಳಲ್ಲಿ ಮುಖ್ಯವಾದವುಗಳನ್ನು ಕೆಳಕಂಡಂತೆ ಕ್ರೋಡೀಕರಿಸಬಹುದು.

1. **ಸಾಹಿತ್ಯ ಪ್ರಕಾರಗಳಲ್ಲಿ ಹೆಚ್ಚಳ ಮತ್ತು ಐಚ್ಚಿಕ ಪ್ರಕಾರದ ಆಯ್ಕೆ ಸ್ವಾತಂತ್ರ್ಯ**
2. **ಸಾಹಿತ್ಯ ಕೃತಿನಿರ್ಮಾಣಕ್ಕೆ ಇದ್ದ ಚೌಕಟ್ಟುಗಳ ಸಡಿಲತೆ ಮತ್ತು ಮುಕ್ತ ಅಭಿವ್ಯಕ್ತಿ**
3. **ಮುಕ್ತ ಛಂದಸ್ಸಿಗೆ ಹೆಚ್ಚಿದ ಒಲವು**
4. **ಮಹಾಕಾವ್ಯಗಳ ಸಂಖ್ಯೆ ಕಡಿಮೆಯಾಗಿ ಬಿಡಿ ಬಿಡಿ ರಚನೆಗಳು ಹೆಚ್ಚಾದದ್ದು**
5. **ಗದ್ಯ ಸಾಹಿತ್ಯ ಜನಪ್ರಿಯವಾದದ್ದು ಮತ್ತು ಮಹಾಕಾವ್ಯದ ವಿಸ್ತಾರವನ್ನು ಕಾದಂಬರಿ ಪ್ರಕಾರ ಪಡೆದುಕೊಂಡಿದ್ದು.**
6. **ಸಾಹಿತ್ಯ ನಿರ್ಮಿತಿಯಲ್ಲಿ ಆದ ಹೆಚ್ಚಳ**

ಕನ್ನಡ ಸಾಹಿತ್ಯ ಚರಿತ್ರೆಯನ್ನು ಸ್ಥೂಲವಾಗಿ ಗಮನಿಸಿದರೆ, ಯಾವುದೇ ವಿಷಯವಾದರೂ, ಗದ್ಯ, ಪದ್ಯ ಅಥವಾ ಗದ್ಯ-ಪದ್ಯಮಿಶ್ರಿತ ಕೃತಿಯಾದರೂ ಒಂದು ಚೌಕಟ್ಟಿಗೆ ಒಳಪಟ್ಟು ರಚನೆಯಾಗುತ್ತಿದ್ದುದು ಕಂಡು ಬರುತ್ತದೆ. ಛಂದಸ್ಸು ಕಾಲ ಕಾಲಕ್ಕೆ ಬದಲಾದರೂ, ಕಾವ್ಯಕ್ಕೆ ಒಂದು ಬಂಧವನ್ನು ಒದಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿತ್ತು. ಇಷ್ಟದೇವತಾ ಸ್ತುತಿ, ಆಶ್ರಿತ ರಾಜನ ಸ್ತುತಿ, ಸರಸ್ವತಿ-ಗಣಪತಿ ಸ್ತುತಿ ಹೀಗೆ ಒಂದು ನಿರ್ದಿಷ್ಟ ಸೂತ್ರವನ್ನು ಆಶ್ರಯಿಸಿ ರಚಿತವಾಗುತ್ತಿತ್ತು. ಆದರೆ ಆಧುನಿಕ ಯುಗದಲ್ಲಿ ಕಾವ್ಯ, ಕಾದಂಬರಿ, ಕಥೆ, ಹರಟೆ, ಪ್ರಬಂಧ, ಪತ್ತೇದಾರಿ ಇತ್ಯಾದಿ ಅಸಂಖ್ಯಾತ ಪ್ರಕಾರಗಳು, ಕಾವ್ಯದಲ್ಲಿಯೇ ನವೋದಯ, ನವ್ಯ, ಪ್ರಗತಿಶೀಲ, ದಲಿತ-ಬಂಡಾಯ ಕಾವ್ಯಪಂಥಗಳು, ನಾಟಕಗಳು, ಸಣ್ಣಕಥೆಗಳು

---

210. ಅದೇ, ಪು.169-70
211. ಅದೇ, ಪು.211-17
212. ಅದೇ, ಪು.218-235

ಮತ್ತು ಕಾದಂಬರಿಗಳು ಸೃಷ್ಟಿಯಾದದ್ದು ಹಾಗೂ ಮಹಾಕಾವ್ಯದ ವಿಸ್ತಾರವನ್ನು ಕಾದಂಬರಿ ಪ್ರಕಾರ ಪಡೆದುಕೊಂಡಿದ್ದು...... ಹೀಗೆ ಆದ ಬದಲಾವಣೆ ಮತ್ತು ಬರೆಯುವವರ ಸಂಖ್ಯೆಯಲ್ಲಿ ಆದ ಹೆಚ್ಚಳ, ವೈಯಕ್ತಿಕ ಅಭಿಪ್ರಾಯಕ್ಕೆ ಸಿಕ್ಕ ಮನ್ನಣೆ ಇವೆಲ್ಲವೂ ಸಾಹಿತ್ಯ ನಿರ್ಮಿತಿಗೆ ವಿಸ್ತಾರವನ್ನು ಒದಗಿಸಿದವು. ಪಾರಂಪರಿಕವಾಗಿ ಬಂದ ಕಾವ್ಯನಿರ್ಮಿತಿಯ ಚೌಕಟ್ಟು ಸಡಿಲವಾಗಿ, ಪರಂಪರೆಯ ಸರಪಳಿ ತುಂಡಾಯಿತು. ಹೊಸಗನ್ನಡದಲ್ಲಿ ರಚಿತವಾದ ಕೆಲವು ಮಹಾಕಾವ್ಯಗಳಲ್ಲಿ ಮಾತ್ರ ಅಲ್ಲಲ್ಲಿ ಸರಸ್ವತಿಯ ದರ್ಶನವನ್ನು ಕಾಣಬಹುದು. ಅದನ್ನು ಬಿಟ್ಟರೆ ಹೊಸಗನ್ನಡ ಕವಿಗಳಲ್ಲಿ ಪ್ರತಿಭಾವಂತರಾದ ಕವಿಗಳು ಬದಲಾದ, ಹೊಸ ಅವತಾರದಲ್ಲಿಯೂ, ಅಂದರೆ ಬಿಡಿ ರಚನೆಗಳಲ್ಲೂ ತಮ್ಮ ತಮ್ಮ ಸರಸ್ವತಿಯ ದರ್ಶನವನ್ನು ಬೆಳಗಿದ್ದಾರೆ. ಅವುಗಳಲ್ಲಿಯೂ ನೇರವಾಗಿ ಸರಸ್ವತಿಯನ್ನು ಕುರಿತ ಪದ್ಯಗಳು ಕಡಿಮೆ ಎಂದೇ ಹೇಳಬೇಕು. ವಿದ್ಯೆ, ವಾಕ್, ವಿವೇಕ, ಅಂತಃಸ್ಫುರಣೆ ಮೊದಲಾದ ರೂಪದಲ್ಲಿ ಸರಸ್ವತಿಯ ದರ್ಶನವನ್ನು ಗಮನಿಸಬೇಕಾಗಿದೆ. ಈಗಂತೂ, ಸರಸ್ವತಿಗೆ 'ಅರ್ಥ ಹಳೆಯದಾದರೂ ರೂಪ ಹೊಸದಾದ' –ಜಾನಪದಸರಸ್ವತಿ, ನಾಟ್ಯಸರಸ್ವತಿ, ಅಕ್ಷರಸರಸ್ವತಿ, ಪುರುಷಸರಸ್ವತಿ, ಜಂಗಮಸರಸ್ವತಿ, ಪುಸ್ತಕಸರಸ್ವತಿ, ಕಲಾಸರಸ್ವತಿ, ಕರ್ನಾಟಕಸರಸ್ವತಿ, ಕಾನನಸರಸ್ವತಿ ಮೊದಲಾದ ವಿಶೇಷಣಗಳು ಹುಟ್ಟಿಕೊಂಡಿವೆ. **'ಸಾಹಿತ್ಯಾರಾಧಕರೆ, ಅಗೋ ನೋಡಿ, ಚಲನೆಯಿಲ್ಲದೆ ನಿಂತಿರುವಳು ಕರ್ಣಾಟಕಸರಸ್ವತೀದೇವೀ'**[213] ಎಂಬ ಬಿ.ಎಂ.ಶ್ರೀಯವರ ಮಾತು ಮೇಲೆ ಹೇಳಿದ ವಿಶೇಷಣಗಳಿಗೆಲ್ಲಾ ಮುನ್ನುಡಿಯಿದ್ದಂತಿದೆ.

ಡಿ.ವಿ.ಜಿ.ಯವರ 'ನಿವೇದನ' ಕವನದ ಒಂದು ಪದ್ಯದ–

ರವಿಗೆ ಬೆಳಕ ಭುವಿಗೆ ಬಲವ
ಜವವ ವಾಯುಗೀವ ತೆರದಿ
ಕವಿಯ ವಚನಕವನೆ ಸರಸಭಾವವೀವನು
ಅವನೆ ಶಿಲ್ಪ ಚಿತ್ರ ಕೃತಿಗೆ ಜೀವವೀವನು

ಎಂಬ ಸಾಲುಗಳು, ಸರಸ್ವತಿಯೆಂದು ಹೆಸರು ಹೇಳದಿದ್ದರೂ, ಪುರುಷವಾಚಕವಾಗಿದ್ದರೂ, ವಾಕ್‌ತತ್ವವನ್ನು, ದರ್ಶನತತ್ವವನ್ನು ನೀಡುವ ಆ 'ಶಕ್ತಿ'ಯನ್ನು ಸೂಚಿಸುತ್ತವೆ.

ಡಿ.ವಿ.ಜಿ.ಯವರ 'ಮರುಳ ಮುನಿಯನ ಕಗ್ಗ'ದ ಒಂದು ಪದ್ಯದಲ್ಲಿ ವಿದ್ಯೆಯು, ಹಣಕ್ಕಿಂತ ಮುಖ್ಯ ಎಂಬುದು ನಿರೂಪಿತವಾಗಿದೆ.

ಸರಸತಿಯ ಸತ್ರ ಬಳಿಯಿರೆ ತೊರೆದು ದೂರದಾ
ಸಿರಿದೇವಿಯಂಗಡಿಯನರಸಿ ತಟವಟಿಸಿ
ಹೊರ ಹೊಳಪಿನಾಸೆಯಿಂದೊಳಮಬ್ಬನಪ್ಪುವನು
ಕುರುಡನೇ ಕಂಡವನೊ – ಮರುಳ ಮುನಿಯ[214]

---

213. ಮುಗಳಿ ರಂ.ಶ್ರೀ: ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ. ಪು.44 (ಉದ್ಧೃತ)

214. ಡಿ.ವಿ.ಜಿ.: ಮರುಳಮುನಿಯನ ಕಗ್ಗ, ಪದ್ಯ 126

ಸರಸ್ವತಿಯ ಸತ್ರ (ವಿದ್ಯೆ ಭಂಡಾರ) ಹತ್ತಿರವಿದ್ದರೂ ಬೇಡವೆಂದು, ದೂರದ ಲಕ್ಷ್ಮಿದೇವಿಯಂಗಡಿಯ (ಹೊನ್ನನ್ನು) ಹುಡುಕಿಕೊಂಡು ಹೋಗಿ ಮೋಸ ಹೋಗುವವನು, ಹೊರಗಿನ ಹೊಳಪಿಗೆ (ಸುಖಕ್ಕೆ) ಮರುಳಾಗಿ ಒಳಗಿನ ಮಬ್ಬನ್ನು (ಕಷ್ಟವನ್ನು) ಅಪ್ಪುತ್ತಾನೆ. ಅಂದರೆ ಲಕ್ಷ್ಮಿ(ಧನಸಂಪತ್ತು)ಗಿಂತ ಸರಸ್ವತಿ(ವಿದ್ಯೆ)ಯೇ ಮೇಲು ಎಂಬುದನ್ನು ಡಿ.ವಿ.ಜಿ.ಯವರು ಸೂಚಿಸುತ್ತಿದ್ದಾರೆ.

ಮಾಸ್ತಿಯವರ 'ಗುರುವಿಗೆ' ಎಂಬ ಪದ್ಯದಲ್ಲಿ **'ವರವಿನಾಯಕನೆಂದು, ವರದೆ ಸರಸತಿಯೆಂದು, ಹರಿಯೆಂದು ಹರನೆಂದು ಹಿರಿಯ ಕವಿಗಳು ಹಿಂದೆ ಎಲ್ಲ ಹೆಸರಿಂದ'** ಕರೆದಿರುವ ಗುರುದೇವನ ಅಡಿಗೆ ಶರಣು ಎನ್ನುತ್ತಾರೆ. ಇಲ್ಲಿ ಹಿಂದಿನವರು ಯಾವುದೇ ಹೆಸರಿನಿಂದ ಕರೆದಿರಲಿ, ಅದೆಲ್ಲವೂ ಗುರುದೇವ ಎಂಬ ಭಾವ ಸರಸ್ವತಿಯನ್ನು ಗುರುವನ್ನಾಗಿಸಿದೆ; ಗುರುದೇವನನ್ನಾಗಿಸಿದೆ.

ಮಾಸ್ತಿಯವರ **'ಹಾರಯಿಕೆ'** ಕವನದ ಸಾಲುಗಳು ಸರಸ್ವತೀ ತತ್ವವನ್ನು ಸಮಾಜವಾದಿ ನೆಲೆಯಲ್ಲಿ ಹೊರಹೊಮ್ಮಿಸಿದೆ.

ವೀಣೆಯಾಗದಿರೆ ಮಧುರನಿನಾದದಿ
ವಾಣಿಯಂದುಗೆಯ ದನಿಯ ಸಿತಾರು
ರಾಣಿಯು ನುಡಿಸುವ ಕೊಳಲು ಆಗದಿರೆ
ಊಣೆಯವಿಲ್ಲದ ಏಕನಾದವ
ಪಂಚಮದ ಕಲಕಂಠದಿಂದೆ ಪ್ರ
ಪಂಚವ ನಲಿಸುವ ಕೋಗಿಲೆ ಬೇಡ
ಅಂಚಿನೊಳಿರಲಹ ಕಾಗೆಯೆ ಆದರೂ
ವಂಚನೆಯಿಲ್ಲದ ದನಿಯನೀಡು.
ನೀನು ನುಡಿಸಲು ಏಕನಾದವು
ವೀಣೆಯಾಗದೆಯೇ ಚೆಂದವಪ್ಪುದು
ಕಾನನ ಗೀತದೆ ಕಾಗೆಯ ದನಿಯನು
ಲೀನಮಾಡಿ ನೀನು ಅಂದವೆ ಎನಿಸುವೆ.

ಸರಸ್ವತಿಯ ಒಲವಿದ್ದರೆ, ಏಕನಾದವು ವೀಣೆಯಾಗುವುದು; ಕಾಗೆಯ ಕೊರಳೂ ಕೋಗಿಯ ದನಿಯನುಲಿಯುವುದು. ಆದ್ದರಿಂದಲೇ ಜ್ಞಾನದರಿವು ಎಲ್ಲರಿಗೂ –ಕಾಗೆ ಕೋಗಿಲೆಯೆನ್ನದೆ– ಬೇಕು. 'ನಿನ್ನ ಗಾನದೊಳು ಎಲ್ಲಾ ದನಿಗಳೂ ಸೇರಿ ಚನ್ನವಾಗುವವು ಗಾನವಿಶಾರದಾ' ಎಂಬ 'ಗಾನ' ಕವಿತೆಯ ಸಾಲುಗಳು ಸರಸ್ವತಿಯ ಮಹತ್ವವನ್ನು ಎತ್ತಿ ಹಿಡಿಯಲು ಸಫಲವಾಗಿವೆ. ಮಾಸ್ತಿಯವರು **'ಶ್ರೀರಾಮಪಟ್ಟಾಭಿಷೇಕ'** ಮಹಾಕಾವ್ಯದಲ್ಲಿ, **'ನಿನ್ನ ನುಡಿಗಟ್ಟುಗಳನೆ ಬಹುತೇಕ ಬಳಸಿದ ಒಂದು ಸರಳ ಸುಂದರ ವಾಣಿಯಿಂದ ಕನ್ನಡವಾಗಿ ಹರಿಯುವಂದವನನುಗ್ರಹಿಸು'** ಎಂದು ವಾಲ್ಮೀಕಿಯನ್ನು ಬೇಡಿ, **'ಕನ್ನಡತಾಯೆ ಈ ನಾಲಗೆಯೊಳಿರ್ದು ನಿನ್ನ ಕಂದನ ಹರಸು'** ಎಂದು ಕನ್ನಡತಾಯಿಯನ್ನು

ಪ್ರಾರ್ಥಿಸುತ್ತಾರೆ.[215] ಇಲ್ಲಿ ಕನ್ನಡ ತಾಯಿ ಸರಸ್ವತಿಯೇ ಆಗಿದ್ದಾಳೆ ಎಂಬುದು 'ನಾಲಗೆಯೊಳಗಿರ್ದು' ಎಂಬ ಮಾತು ಸ್ಪಷ್ಟಪಡಿಸುತ್ತದೆ. ಶ್ರೀಯವರು ಭಾಷಣದಲ್ಲಿ ಪ್ರಸ್ತಾಪಿಸಿದ ಕರ್ನಾಟಕಸರಸ್ವತೀ ದೇವಿ, ಮಾಸ್ತಿಯವರ ಮಹಾಕಾವ್ಯದಲ್ಲಿ ಕನ್ನಡದ ವಾಣಿಯಾಗಿ ಅವತರಿಸಿದ್ದಾಳೆ.

ಬೇಂದ್ರೆಯವರ 'ನಾಲ್ವರು ತಾಯಂದಿರು' ಕವನದ ಪಲ್ಲವಿಯಲ್ಲಿ ಪೌರಾಣಿಕ ಕಲ್ಪನೆಯ ಮಹಾಸರಸ್ವತಿಯನ್ನು ಕಾಣಲು ಸಾಧ್ಯವಿದೆ.

ಬಾರೆ ಬಾ ಮಹೇಶ್ವರೀ
ಬಾ, ಬಾ, ಬಾ, ಬಾ.
ಬಾರೆ ಬಾ ಮಹೇಶ್ವರೀ
ಮಹಾಕಾಳಿ, ಮಹಾಲಕ್ಷ್ಮಿ
ಬಾ ಮಹಾಸರಸ್ವತೀ
ಇಹುದು ನಿಮಗೆ ಶಾಶ್ವತಿ[216]

'ಗಾಯತ್ರೀ ಸೂಕ್ತ'[217] ಕವನದಲ್ಲಿ **'ತಾಳಗತಿಯಲ್ಲಿ ವಿಶ್ವಗಳ ಗೀತ ಹಾಡಿದಾಕೆ'** ಎಂಬ ಸಾಲು ಇಡೀ ವಿಶ್ವಸಾಹಿತ್ಯಕ್ಕೇ ಸರಸ್ವತಿಯನ್ನು ಅಧಿದೇವತೆಯೆಂಬುದನ್ನು ಸೂಚಿಸುತ್ತದೆ. **'ಹಾಡಿದವನ ಕಾಪಾಡಲೆಂದು ಕೈ ಹತ್ತು ಎತ್ತಿದಾಕೆ'** ಎಂಬ ಸಾಲು 'ಕವಿಕುಲದೇವತೆ' ಸರಸ್ವತಿಯನ್ನು ಮತ್ತು ದಶಭುಜ ಸರಸ್ವತಿಯ ಶಿಲ್ಪವನ್ನು ನೆನಪಿಸುತ್ತದೆ.

'ಸರಸ್ವತಿ'[218] ಎಂಬ ಕವನದಲ್ಲಿ, ವಿಷ್ಣುವಿನ ನಾಭಿಯಿಂದ ಹುಟ್ಟಿದ, ಕಮಲಾಸನದಲ್ಲಿ ಕುಳಿತ, ನಾಲ್ಕು ಮುಖದ ಬ್ರಹ್ಮ ನಾಲ್ಕು ವೇದಗಳನ್ನು ಸೃಷ್ಟಿಸಿ ಹಾಡತೊಡಗಿದಾಗ 'ಓಂ'ಕಾರ ಸ್ವರೂಪದ ಸರಸ್ವತಿಯು ಶಂಖವನೂದಿದಂತೆ ಹೊರಟಿತು ಎನ್ನುತ್ತಾರೆ. ಹಾಗೆ ಹೊರಟ ಸರಸ್ವತಿಯು ಸರ್ವವನ್ನೂ ವ್ಯಾಪಿಸುತ್ತಾ ಬಂದಾಗ ಕವಿ ಬೇಂದ್ರೆಯವರು,

ನಾಚು ಮಾಡುತ ಬಂದು ವರದ ಹಸ್ತವನಿಟ್ಟ ಬಾಗಿಸಿದ ತಲೆಯ ಮೇಲೆ।
...............ಹಚ್ಚಿ ಸತ್ಯ ತತ್ವದ ದೀಪವಾನಂದವನ್ನು ಬೀರೆ

ಎಂದು ಸ್ವಾಗತಿಸುತ್ತಾರೆ.

'ಸರಸ್ವತೀ ಸೂಕ್ತ'[219] ಕವನದ

ಅಂಚೆ ಏರಿ ನೀರಿನಾಕೆ
ಗಾಳಿಯಲ್ಲಿ ಸುಳಿದಳೋ
ಬೆಳಕಿನಲ್ಲಿ ಬೆಳೆದಳೋ

---

215. ಶ್ರೀನಿವಾಸ: ಶ್ರೀರಾಮಪಟ್ಟಾಭಿಷೇಕ, ಪ್ರಸ್ತಾವನೆ, 10, ಪು.7
216. ಔದುಂಬರ ಗಾಥೆ, ಸಂಪುಟ -1 ನಮನ, ಪದ್ಯ 107 ಪು.184
217. ಅದೇ, ಪದ್ಯ 108, ಪು.187
218. ಅದೇ, ಪದ್ಯ 112, ಪು.192
219. ಅದೇ, ಪದ್ಯ 113, ಪು.193-94

ಎಂಬ ಸಾಲು ಸರಸ್ವತಿಯ ಸಾರ್ವತ್ರಿಕತೆಯನ್ನು ಮನಗಾಣಿಸುತ್ತದೆ. ನೀರಿನಾಕೆ ಎಂಬ ಪದ ಸರಸ್ವತೀ ನದಿಯನ್ನು, ಗಾಳಿಯಲ್ಲಿ ಸುಳಿದಳೋ ಎಂಬುದು ಉಸಿರಿನ ಸಹಾಯದಿಂದ ಉತ್ಪತ್ತಿಯಾದ ಮಾತನ್ನು, ಬೆಳಕಿನಲ್ಲಿ ಬೆಳೆದಳೋ ಎಂಬುದು ಭಾಷೆಯ ಚಾಕ್ಷುಷರೂಪವಾದ ಬರವಣಿಗೆಯನ್ನು ಸೂಚಿಸುತ್ತವೆ. ಸರಸ್ವತಿಗಿರುವ ನದಿದೇವತೆ, ವಾಗ್ದೇವತೆ ಮತ್ತು ಭಾಷಾ ಎಂಬ ವಿಶೇಷಣಗಳನ್ನು ಅನುಸರಿಸಿ ಮೇಲಿನ ಪರಿಕಲ್ಪನೆ ಮೂಡಿದೆ. ಸರಸ್ವತಿಯ ಪರಿಕಲ್ಪನೆ ವಿಕಾಸವಾದ ಮೂರು ಮುಖ್ಯ ಹಂತಗಳನ್ನು ಈ ಸಾಲುಗಳು ಧ್ವನಿಸುತ್ತವೆ.

'ನೀನಾದಿನೀ-ದೇವತಾ ಸರಸ್ವತಿ'[220] ಕವನದ

.... ಆ ಸ್ವಾದಿನೀ। ವಾಜಿನಿ
ಜೀವಾಜಿನೀ। ವಾಜಿನೀವತೀ। ಸರಸ್ವತೀ
ರಸಸಾರಸ। ಹಂಸೀ। ತಮದ್ಧಂಸೀ
ಉತ್ತಮಾ। ಆದಿಮಾ। ಮಾ। ಆದತೀ

ಎಂಬ ಸಾಲುಗಳು, ವೇದದಲ್ಲಿ ಕಂಡುಬರುವ ಸರಸ್ವತಿಯನ್ನು ಚಿತ್ರಿಸುತ್ತವೆ. ಋಗ್ವೇದದ ಏಳನೇ ಮಂಡಲದ 95 ಮತ್ತು 96ನೇ ಸೂಕ್ತಗಳು ಈ ಪದ್ಯಕ್ಕೆ ಪ್ರೇರಣೆಯಾಗಿರುವಂತೆ ತೋರುತ್ತದೆ. ವಾಜಿನೀವತೀ ಎಂದರೆ ಒಳ್ಳೆ ಅನ್ನವನ್ನು ಕೊಡುವವಳು ಎಂದರ್ಥ; ಅವಳೇ ನದಿದೇವತೆ ಸರಸ್ವತಿ.

ವೇದದಿಂದ ಪ್ರೇರಿತವಾಗಿರುವ ಮತ್ತೊಂದು ಕವಿತೆ **'ಶಾರದೆಯೇ!'**[221] ಎಂಬುದು.

ವೇದದ ಮಂತ್ರವ ವಾದವ ಮಾಡುವ ತಲೆಯಲ್ಲಿ
ನೀರೋ ನೀರೆಯೋ ಎನುವೊಲು ಇಹೆ ರಸ ಶಿಲೆಯಲ್ಲಿ

ಇಲ್ಲಿ 'ನೀರೋ ನೀರೆಯೋ' ಎಂಬುದು ನದಿಯೋ ನದೀದೇವತೆಯೋ ಎಂಬುದನ್ನು ಸೂಚಿಸುತ್ತದೆ. ಮುಂದುವರೆದು, ಬೇಂದ್ರೆಯವರು ತಮ್ಮನ್ನು ತಾವು **'ನಿನ್ನ ಉಪಾಸನೆ ಮಾಡುವ ಸಾರಸ್ವತ ಸುತನು'** ಎಂದು ಕರೆದುಕೊಂಡಿದ್ದಾರೆ. ಸಾರಸ್ವತನು ಕೆಲವೊಮ್ಮೆ ಸರಸ್ವತಿಯ ಪತಿಯಾಗಿಯೂ ಕೆಲವೊಮ್ಮೆ ಸುತನಾಗಿಯೂ ವೇದಪುರಾಣಗಳಲ್ಲಿ ಕಾಣಿಸಿಕೊಳ್ಳುತ್ತಾನೆ. ಆದರೆ ಇಲ್ಲಿ ಕವಿಗಳು ಸರಸ್ವತೀಸುತರು ಎಂಬ ಕಲ್ಪನೆಯ ಹಿನ್ನೆಲೆಯಲ್ಲಿ ನೋಡಿದರೆ, ಸಾರಸ್ವತನು ಸರಸ್ವತಿಗೆ ಪತಿ ಎಂದಾಗುತ್ತದೆ. ಇಲ್ಲದಿದ್ದರೆ, 'ಕವಿ ಬೇಂದ್ರೆ' ಸರಸ್ವತಿಯ ಮೊಮ್ಮಗನಾಗಬೇಕಾಗುತ್ತದೆ!

'ರಾಣಿವಾಸದ ವಾಣಿಗೆ'[222] ಕವಿತೆ ಒಂದು ರೀತಿಯಲ್ಲಿ ಸರಸ್ವತಿಯ ನಿಂದನಾ ಸ್ತುತಿ.

ಸರಸೋತಿ ಅಂತ ನಿನ್ನ
ಅರಸೊತ್ತಿಗೆ ಒಪ್ಪಿಕೊಂಡೆ
ಬರಸೋ ಹೊತ್ತಿಗೆ, ಬರಸು ಇನ್ನ
ಪುರುಸೊತ್ತಿಲ್ಲಾ.

---

220. ಅದೇ, ಪದ್ಯ 114, ಪು.195
221. ಅದೇ, ಪದ್ಯ 116, ಪು.198
222. ಅದೇ, ಪದ್ಯ 115, ಪು.196-97

ಎಂದು ವಾಣಿಯ ಕೃಪೆಗಾಗಿ ಪ್ರೀತಿಪೂರ್ವಕ ಒತ್ತಾಯ ಮಾಡುತ್ತಲೇ,

ಆ ಗಾನ ಈ ಗಾನ ಸಾಕು ಮಾಡು
ವೇದಾನ ಹಾಳತ ಮಾಡಿ, ಅದನ್ನ ಹಾಡು

ಎಂದು ಆಜ್ಞಾಪಿಸುತ್ತಾರೆ. ಆದರೆ ಅದಕ್ಕೆ

ಸಂಬಳ ಕೊಡಲಾರೆ
ಸಂಭಾಳಿಸಿಕೋ ನೀನು

ಎಂದು ಕೈಚೆಲ್ಲುತ್ತಾರೆ. ನಿಜವಾಗಿಯೂ ಇದು ಪ್ರತಿಭಾಶಾಲಿಯಾದ ಕವಿಯ ಆತ್ಮವಿಶ್ವಾಸವನ್ನು ಸೂಚಿಸುತ್ತದೆ. ಮಹಾಕವಿಗಳದ್ದು ಯಾವಾಗಲೂ ಬೇಡುವ ಪ್ರತಿಭೆಯಾಗಿರದೆ, ಪಡೆಯುವ ಪ್ರತಿಭೆಯಾಗಿರುತ್ತದೆ. ಅಂತೆಯೇ ಬೇಂದ್ರೆಯವರದೂ ಸಹ.

ಸರಸ್ವತಿಯನ್ನು ಕಾವ್ಯದೇವತೆಯಾಗಿ ಚಿತ್ರಿಸಿರುವ ಕವಿತೆ 'ಓ ಹಾಡೇ!'.[223]

ಭೋಗಯೋಗದ ಪದವೆ ಜೈನವಾಙ್ಮಯ ಮಧುವೆ
ಯೋಗ ಭೋಗದ ಹದವೆ ವಚನಬ್ರಹ್ಮನ ವಧುವೆ
ಮುದ್ದುವಿಠಲಗೆ ಮಾರಿಕೊಂಡ ದಾಸಿ!
ಮುದ್ದಣ್ಣನ ಲಲ್ಲೆವಾತಿನ ಪ್ರೇಮರಾಶೀ
ಜೀವ ಜೀವಾಳದಲಿ ಬೆರೆತು ಕೂಡೇ

ಕನ್ನಡ ಸಾಹಿತ್ಯ ವಾಙ್ಮಯ ಬೆಳೆದು ಬಂದ ದಾರಿಯನ್ನು ಸರಸ್ವತಿಯ ಸ್ತುತಿಯಲ್ಲಿಯೇ ತೋರಿಸುವ ಶಬ್ದಗಾರುಡಿಗತನ ಬೇಂದ್ರೆಯವರದ್ದು. ಮುದ್ದುವಿಠಲಗೆ ಮಾರಿಕೊಂಡ ದಾಸಿ ಎಂಬುದು, ದಾಸಸಾಹಿತ್ಯದ ಬೃಹತ್ತು–ಮಹತ್ತುಗಳನ್ನು ಸೂಚಿಸಿದರೆ, ಮುದ್ದಣನ ಲಲ್ಲೆವಾತಿನ ಪ್ರೇಮರಾಶಿ ಎಂಬುದು, ಮುದ್ದಣನ ಕಾವ್ಯಗಳ ಸರಸ–ಪ್ರೇಮವನ್ನು ಮನಗಾಣಿಸುತ್ತದೆ. ಪದ್ಯದ ನಾಲ್ಕನೇ ಚರಣದ **'ಮುಂಗೈಯ ಮೇಲೆ ಅಂಗಜನ ಅರಗಿಳಿಯಿರಿಸಿ'** ಎಂಬುದು ಶೃಂಗೇರಿ ಶಾರದೆಯನ್ನು ಚಿತ್ರಿಸಿದರೆ, **'ಚಾರುತಮ ಸರಸ ಅರಸಂಚೆಯನು ಹೂಡಿ, ಬಂದು ನನ್ನಿದಿರಲ್ಲಿ ನಾಟ್ಯವಾಡೆ'** ಸಾಲು ಸರಸ್ವತಿಯ ವಾಹನ ಹಂಸವನ್ನು ಸೂಚಿಸುತ್ತದೆ; ಜತೆಗೆ ನಾಟ್ಯಸರಸ್ವತಿಯನ್ನೂ ಚಿತ್ರಿಸುತ್ತದೆ. ಕೊನೆಯ ಚರಣದ **'ನನ್ನ ನಾಲಗೆ ನಿನ್ನ ಬರಿ ಸೂಲಗಿತ್ತಿ'** ಎಂಬುದು **'ವಾಕ್'** ಜನನಸ್ಥಾನ ನಾಲಗೆ; ನಾಲಗೆ ಬರಿ ಸೂಲಗಿತ್ತಿ ಮಾತ್ರ, ತಾಯಿಯಾಗಲಾರದು. ಆ (ವಾಕ್)ತಾಯಿ ನೀನೇ ಎಂಬ ನವೀನ ಕಲ್ಪನೆಯನ್ನು ಕಟ್ಟಿಕೊಡುತ್ತದೆ.

'ಹಿಂದುಸ್ಥಾನ, ಪಾಕಿಸ್ಥಾನ ಒಂದಾಗಬೇಕು, ಭಾರತ ಹಮಾರ ಮುಂದಾಗಬೇಕು' ಎನ್ನುವ ಆಶಯದ 'ಕವಿಗಳ ಕಾಣಿಕೆ'[224] ಕವನದ ಪ್ರಥಮ ಸಾಲಿನಲ್ಲಿಯೇ **'ಸಲಾಮ್ ಮಾಡ್ತೇವಿ ಶಾಹೀರಿ**

---

223. ಔದುಂಬರ ಗಾಥೆ, ಸಂಪುಟ –2 ದರ್ಶನ, ಪದ್ಯ 363, ಪು.15

224. ಅದೇ, ಪದ್ಯ 376, ಪು.39

ವಾಣೀಗೆ' ಎಂದು ಸರ್ವಭಾಷಾಮಯೀ ಸರಸ್ವತಿಗೆ ನಮಸ್ಕರಿಸುತ್ತಾರೆ. 'ಸಪ್ತಕಲಾ'[225] ಕವಿತೆ ಸಂಗೀತ, ಶಿಲ್ಪ, ನೃತ್ಯ, ನಾಟಕ, ಜೀವನ, ವಾಸ್ತು ಮತ್ತು ಸಾಹಿತ್ಯ ಎಂಬ ಏಳು ಕಲೆಗಳ ಬಗ್ಗೆ ಪ್ರಸ್ತಾಪಿಸುತ್ತದೆ. ಅದರಲ್ಲಿ ಏಳನೆಯದು ಸರ್ವಾತ್ಮಕವಾದ ಸಾಹಿತ್ಯ. ಅದರಲ್ಲಿ, **'ಸಕಲಾಃ ಸಿದ್ಧಾಃ ಸರಸ್ವತಿ ವೀಣಾ ಪಾಣಿ ಪಶ್ಯಂತಿಯ ವಾಣಿ.......'** ಹೀಗೆ ಸಾಹಿತ್ಯವನ್ನು ಸರಸ್ವತಿ ಎಂದೇ ಸ್ತುತಿಸಲಾಗಿದೆ. ಹಾಗೆ ನೋಡಿದರೆ ಬೇಂದ್ರೆಯವರು ಹೇಳಿರುವ ಸಪ್ತಕಲೆಗಳಲ್ಲಿ ಸಾಹಿತ್ಯದ ಜೊತೆಗೆ ಸಂಗೀತ, ಶಿಲ್ಪ, ನೃತ್ಯ, ನಾಟಕ ಇವೆಲ್ಲವೂ ಸರಸ್ವತಿಗೆ ಸಂಬಂಧಿಸಿದವುಗಳೇ ಆಗಿವೆ. ಮಂಗರಸನ ಮತ್ತು ಕವಿಕಾಮನ 'ಸಂಸಾರವಾರಿಧಿಗೆ ದ್ರೋಣಿ' ಮತ್ತು ಕವಿಕಾಮನ 'ಸಂಸಾರ ಸಂಭಾವಿತಾತ್ಮೆ' ಎಂಬ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಸರಸ್ವತಿಯನ್ನು ಗ್ರಹಿಸಿದರೆ, ಜೀವನಕಲೆ ಕೂಡಾ ಸರಸ್ವತಿಗೆ ಸಂಬಂಧಿಸಿದ್ದಾಗಿದೆ. ಆದರೆ, ವಾಸ್ತು ಸಪ್ತಕಲೆಗಳಲ್ಲಿ ಸೇರಿದ್ದು ಹೇಗೆ ಎಂಬುದು ಅರ್ಥವಾಗುವುದಿಲ್ಲ. ಸರಸ್ವತಿಯು **'ಸಕಲಕಲಾಧಾರಿಣಿ'** ಎಂದರೂ, ವಾಸ್ತುವಿಗೇಕೆ ಈ ಪ್ರಾಮುಖ್ಯ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಬಹುಶಃ ಬೇಂದ್ರೆಯವರಿಗಿದ್ದ ಸಂಖ್ಯಾಶಾಸ್ತ್ರದ ಒಲವು ವಾಸ್ತುವನ್ನು ಸಪ್ತಕಲೆಗಳಲ್ಲಿ ಸೇರಿಸಲು ಕಾರಣವಿದ್ದಿರಬೇಕು.

'ನೀ ಹೇಳೆ, ನಾನು ಬರದೆ, ನೀ ಹಾಡೆ ನಾನೊರೆದೆ!'[226] ಎಂದು ಪ್ರಾರಂಭಿಸಿ, ರಾಮಾಯಣದರ್ಶನದ ಕೊನೆಯಲ್ಲಿ ಸರಸ್ವತೀ ತತ್ವವನ್ನು ಅನಾದಿಕವಿಯ ಸ್ಥಾನದ ಉತ್ತುಂಗಕ್ಕೆ ಏರಿಸಿದ ಕವಿ ಕುವೆಂಪು. 'ನಿನ್ನ ವಾಣಿ'[227] ಎಂಬ ಕವಿತೆಯ **'ಕವಿಯ ಗಾನದೊಳಗೆಲ್ಲ ವಾಣಿಗಳು ಹೊಮ್ಮುತಿವೆ'** ಎಂದು ಚಿಕ್ಕ ತೊರೆಯಾಗಿ ಆರಂಭವಾದ ಸರಸ್ವತೀ ದರ್ಶನ ಕಡಲಾಗುವುದು,

> **ಯುಗಯುಗದಿ ಸಂಭವಿಪೆನೆಂಬ ಭಗವದ್ದಿವ್ಯಮಾ**
> **ವಚನಮೇಂ ನರರೂಪ ಮಾತ್ರಕ್ಕೆ ಮುಡಿಪೆ, ಪೇಳ್?**
> ....
> **.........ಕೃತಿರೂಪಮಾ ಭಗವದಾವಿರ್ಭಾವ**
> **ಬಹುರೂಪ ಸೂತ್ರತೆಗೆ?**

ಎಂಬ ಸಾಲುಗಳಲ್ಲಿ. ಕುವೆಂಪು ಕಾವ್ಯದಲ್ಲಿ, ಸರಸ್ವತಿಯ ಸ್ತುತಿ ಎಂಬುದು ಕಾವ್ಯಕ್ಕೆ ಅನಿವಾರ್ಯವಾದ ಕರ್ಮವಾಗಿರದೆ, ಒಂದು ಕಾವ್ಯ ತಂತ್ರವಾಗಿ, ಹಂತ ಹಂತವಾಗಿ ಬೆಳೆದು ಬಂದಿದೆ. ಕವಿಯ ಪ್ರಾರಂಭ ಕವನಗಳಿಂದ ಆರಂಭವಾಗಿ ಹನಿಗವನ, ಕವನ, ಖಂಡಕಾವ್ಯ, ಮಹಾಕಾವ್ಯಗಳಲ್ಲಿ ಬೆಳೆದು ಹೊಸ ದರ್ಶನವಾಗಿ ಸರಸ್ವತೀ ತತ್ವ ವಿಕಾಸವಾಗಿರುವುದನ್ನು ಕಾಣಬಹುದು. 'ಗೊಲ್ಲನ ಬಿನ್ನಹ'[228] ಕವಿತೆಯಲ್ಲಿ, **'ಒಂದೇ ವೀಣೆಯ ತಂತಿಗಳಂತೆ...... ಪರುಷವು ಹರಿದೀ ವೀಣೆಯ ವಾಣಿ'** ಎಂದು ಹಾಡುವ ಮೂಲಕ

---

225. ಔದುಂಬರ ಗಾಥೆ, ಸಂಪುಟ -4 ವಿನ್ಯಾಸ, ಪದ್ಯ 1033, ಪು.406-409
226. ಕುವೆಂಪು ಸಮಗ್ರಕಾವ್ಯ ಸಂಪುಟ -1, ಪು.211 (ಕವಿತೆಯ ಶಿರ್ಷಿಕೆ: ಕವಿತೆಯಲ್ಲಿ)
227. ಅದೇ, ಪು.222
228. ಅದೇ, ಪು.1-5

ಬಿಡಿ ಬಿಡಿ ಕವಿತೆಗಳಾದರೂ ಅಲ್ಲಿ ಎಲ್ಲವೂ (ಸರ್ವಭಾಷಾ ಸಾಹಿತ್ಯವೂ) ಸರಸ್ವತಿಯ ವೀಣೆಯ ವಾಣಿಯೆ ಎಂದು ಪ್ರತಿಪಾದಿಸಿದ್ದಾರೆ.

'ಕಬ್ಬದಂಗನೆ' ಎಂದು ಕಾವ್ಯಸರಸ್ವತಿಯನ್ನು ಸಂಬೋಧಿಸಿರುವ 'ಕವಿತೆಗೆ'[229] ಎಂಬ ಕವನ ಪೂರ್ತಿಯಾಗಿ ಕಾವ್ಯಸರಸ್ವತಿಯ ವೈಶಿಷ್ಟ್ಯವನ್ನು ಮನಗಾಣಿಸುತ್ತದೆ.

.....ರಮಣಿಯೆ!
ನಿನ್ನ ಸಂಗದಿಂದ ತಿರುಕ ರಾಜನಾದನು!
ಮತ್ತು
ನಿನ್ನ ಪುಣ್ಯಸಂಗ ಲಭಿಸೆ ಧನ್ಯನಾದೆನು!
ನಿನ್ನ ಕೂಡೆ ಜನರಿಗೆಲ್ಲ ಗಣ್ಯನಾದೆನು!
ಅಲ್ಲಗಳೆಯುತ್ತಿದ್ದ ಜನಕೆ ಮಾನ್ಯನಾದೆನು!

ಎಂಬ ಮಾತುಗಳಿಂದ 'ಕಾವ್ಯಸರಸ್ವತಿ' ಎಂಬ ಪರುಷಮಣಿಗಿರುವ ಸಾಮರ್ಥ್ಯದ ಪರಿಚಯವಾಗುತ್ತದೆ.

ನೀನೆ ಎನ್ನ ಬಾಳ ಮುಕ್ತಿ, ನೀನೆ ಎನ್ನ ಆತ್ಮಶಕ್ತಿ,
ನೀನೆ ಸೊಗವು, ನೀನೆ ಹರುಷ
ಕಬ್ಬದಂಗನೆ.
ಸಗ್ಗಬೇಡ, ಮುಕ್ತಿಬೇಡ, ಸಿರಿಯನೊಲ್ಲೆ, ನೆವನೊಲ್ಲೆ
ನೀನೆ ಎನಗೆ ಸಾಕು ಸಾಕು
ಮುದ್ದು ಮೋಹಿನಿ!

ಕಾವ್ಯ ಸರಸ್ವತಿಯ ಸಂಗವಿದ್ದರೆ ಬೇರೇನೂ ಬೇಡ ಎನ್ನುವ ಕವಿಯ ಮಾತು ಸರಸ್ವತಿಯ ಪ್ರಭಾವವನ್ನು ಮನಗಾಣಿಸುತ್ತದೆ. ಕಬ್ಬದಂಗನೆ ಎಂಬ ದೇಸಿಪ್ರಯೋಗ ಸರಸ್ವತಿಯನ್ನು ಕನ್ನಡತಿಯನ್ನಾಗಿಸಿದೆ.

'ಕಲಾ ಸುಂದರಿ'[230] ಕವಿತೆಯ ಹನ್ನೆರಡು ಚರಣಗಳಲ್ಲಿ ಸೃಷ್ಟಿದೇವತೆಯ ಶಕ್ತಿ, ಚೆಲುವು, ಒಲವು ಮೊದಲಾದವುಗಳು ವರ್ಣಿತವಾಗಿವೆ. ಕಾವ್ಯಕಾಮಿನಿ, ರಸಮೂರ್ತಿ, ಸರ್ವರಸಪ್ರದಾಯಕಿ, ಅಸೀಮ ಸ್ಫೂರ್ತಿದೇವತೆ, ನಿತ್ಯನೂತನ ಪ್ರಸೂತೆ ಮೊದಲಾದ ವಿಶೇಷಣಗಳು ಗಮನಸೆಳೆಯುತ್ತವೆ.

ನಿನ್ನ ಎದೆಯ ಮರೆಯಲಿ ನನಗೆ ಮುಕುತಿ ದೊರೆಯಲಿ
ನಿತ್ಯ ಹೇ ನಿಃಶ್ರೇಯಸಿ!
ನಿಖಿಲ ಹೃದಯಪದ್ಮಪಾಣಿ, ಮರಣ ಹರಣ ಅಮೃತವಾಣಿ,
ವಿಶ್ವದೇಕಮಾತ್ರ ರಾಣಿ,
ಹೇ ಮಾನಸ ಮಂದಿರೆ!

ಸೃಷ್ಟಿಮಾತೆಯೂ, ಮುಕ್ತಿದಾತೆಯೂ ಆದ ಸರಸ್ವತಿಗೆ ಕವಿ ಶರಣು ಹೋಗುತ್ತಾನೆ. ವಿಶ್ವದೇಕಮಾತ್ರ ರಾಣಿ ಎಂಬುದು ಮಾತು ಜಗತ್ತಿನ ಪ್ರಮುಖ ಸಂಪತ್ತು ಎಂಬುದನ್ನು ಧ್ವನಿಸುತ್ತದೆ.

---

229. ಅದೇ, ಪು.6-11

230. ಅದೇ, ಪು.187-192

'ನರ್ತಿಸಿದಳು ಸ್ವರಸುರನಾರಿ'[231] ಕವಿತೆಯಲ್ಲಿ ಬಳಸಿರುವ **'ರಸಸಂಚಾರಿ'** ವಿಶೇಷಣವೂ ಗಮನಸೆಳೆಯುತ್ತದೆ. ಸ್ವರದೇವತೆಯಾದ ಸರಸ್ವತಿಯು ಇಲ್ಲಿ ರಸವನ್ನು ಹಂಚುವ ಸಂಚಾರಿ! 'ವಿಶ್ವವಿದ್ಯಾನಿಲಯೆ ಭಗವತಿ ಶ್ರೀ ಸರಸ್ವತಿಗೆ'[232] ಎಂಬ ಕವನ ಮಹಾರಾಜ ಕಾಲೇಜಿನ ಶತಮಾನೋತ್ಸವದ ಸಂದರ್ಭದಲ್ಲಿ ಬರೆದದ್ದು. ಹರಿಹರನಿಗೆ ತನ್ನ ಕೃತಿ 'ವಾಗ್ದೇವಿಯ ವಾಸಸ್ಥಾನ'ವಾಗಿ ಕಂಡಿದ್ದರೆ, ಇಲ್ಲಿ ವಿದ್ಯಾಲಯವೇ ಸರಸ್ವತಿಯಾಗಿ ಕವಿಗೆ ಕಂಡಿದೆ. ಉಪನಿಷತ್ ಮಂತ್ರದಿಂದ ಪ್ರೇರಿತವಾದ,

ಅಸತ್ತಿನಿಂದ ಸತ್ತಿನೆಡೆಗೆ
ತಮಸ್ಸಿನಿಂದ ಜ್ಯೋತಿಯೆಡೆಗೆ
ಮೃತ್ಯುವಿನಿಂದ ಅಮೃತದೆಡೆಗೆ
ಕರೆದೊಯ್ಯುವ ತಾರಿಣಿ
ವಿದ್ಯೆಯಾಗಿ ಮುಕ್ತಿಯೀವ
ಅವಿದ್ಯಾಪರಿಹಾರಿಣಿ, ಬಂಧಭವತಾರಿಣಿ

ಎಂದು ವಿದ್ಯಾಲಯೆ ಸರಸ್ವತಿಗೆ ವಂದಿಸುತ್ತಾರೆ. ಈ ಕವಿತೆಯ ಪ್ರತಿ ಚರಣವೂ ಸರಸ್ವತಿಗೇ ಸಂಬಂಧಿಸಿದ್ದಾಗಿದೆ. ಭೌತಿಕವಾಗಿ ಕಾಣುವ ವಿದ್ಯಾಲಯವನ್ನು, ಇಂದಿನ ಜಗತ್ತಿನಲ್ಲಿ ವ್ಯಾಪಾರಿ ತಾಣವಾಗಿರುವ ವಿಶ್ವವಿದ್ಯಾಲಯವನ್ನು ಸರಸ್ವತಿಯಾಗಿ ಕಂಡು ಸ್ತುತಿಸಿದ ಕವಿ, ಕವಿತೆಯುದ್ದಕ್ಕೂ, ಕವಿಪ್ರಾಣಪದ್ಮೆ, ಜಗಜ್ಜೀವವೀಣೆ, ಭವ್ಯಸೃಷ್ಟಿರೂಪಿಣಿ, ಕರ್ನಾಟಕ ಸರಸ್ವತಿ, ಕವಿಯಾತ್ಮ ತೃಷೆಯ ತರು ಮೊದಲಾದ ವಿಶೇಷಣಗಳನ್ನು ಬಳಸಿ ಸ್ತುತಿಸಿದ್ದಾರೆ. **'ವಿಶ್ವಪ್ರಜ್ಞೆಗೆ ವೇದಿಕೆಯಾದುದು ಶ್ರೀ ವಿದ್ಯಾಲಯ!'** ಎಂಬ ಮಾತು ಏಕಕಾಲಕ್ಕೆ ಶಾಲಾಕಾಲೇಜುಗಳ ಮಹತ್ವವನ್ನೂ ಸರಸ್ವತಿಯ ಮಹತ್ವವನ್ನೂ ಸ್ಫುರಿಸುತ್ತದೆ.

'ಪೂರ್ಣದೃಷ್ಟಿಯ ಮಹಾಕಾದಂಬರಿ'[233] ಎನ್ನುವ ಹನಿಗವನದಲ್ಲಿ ಕಾದಂಬರಿಯನ್ನು,

ಸರಸ್ವತಿಯ ಸಹಸ್ರಬಾಹು;
ಸರಸ್ವತಿಯ ಸಹಸ್ರಪಾದ
ಸರಸ್ವತಿಯ ಸಹಸ್ರ ವದನ:
ನಾಟ್ಯಮಾನ ದೇವಿಗೆ
ಪೂರ್ಣದೃಷ್ಟಿಯೀ ಕಾದಂಬರಿಯೆ ಮಹಾಸದನ!

ಎಂದು ಕೊಂಡಾಡಿದ್ದಾರೆ. ಕೃತಿಯೊಂದು 'ವಾಗ್ದೇವಿಯವಾಸಸ್ಥಾನ'ವೆಂಬ ಹರಿಹರನ, 'ವಿದ್ಯಾನಟಿಯ ನಾಟ್ಯವೇದಿಕೆ' ಎಂಬ ನಾಗಚಂದ್ರನ ಕಲ್ಪನೆಯ ಮುಂದುವರೆದ ಭಾಗವಾಗಿ ಈ ಹನಿಗವನ ಮೂಡಿ ಬಂದಿದೆ. ವಾಗ್ದೇವಿಯ ವಾಸಸ್ಥಾನ ಕಾದಂಬರಿ ಎಂಬ ಮಹಾಸದನವಾಗಿದೆ. ವಿದ್ಯಾನಟಿಗೆ ಸಹಸ್ರಬಾಹು, ಸಹಸ್ರಪಾದ, ಸಹಸ್ರವದನಗಳು ಮೂಡಿ ಸರಸ್ವತಿಯ ನೃತ್ಯವನ್ನು ಭವ್ಯವನ್ನಾಗಿಸಿದೆ.

---

231. ಕುವೆಂಪು ಸಮಗ್ರಕಾವ್ಯ ಸಂಪುಟ -2, ಪು.363-364
232. ಅದೇ, ಪು.112-16
233. ಅದೇ, ಪು.303

ಕವಿಗಳು ಸರಸ್ವತಿಯನ್ನು 'ಹೃತ್ಕಮಲದಲ್ಲಿ, ವದನಾರವಿಂದದಲ್ಲಿ, ನಾಲಗೆಯಲ್ಲಿ ನೆಲಸು' ಎಂದು ಪ್ರಾರ್ಥಿಸುತ್ತಾರೆ. ಆದ್ದರಿಂದ ನಿಜಕವಿಯಾದವನೂ ಸರಸ್ವತಿಗೆ ಸದನಸ್ವರೂಪನಾಗಿರುತ್ತಾನೆ. ಈ ಹಿನ್ನೆಲೆಯಲ್ಲಿ **'ಕುವೆಂಪು'**[234] ಎಂಬ ಕವಿತೆಯ **'ನುಡಿರಾಣಿಯ ಗುಡಿ– ಕುವೆಂಪು'** ಎಂಬ ಮಾತು ಗಮನ ಸೆಳೆಯುತ್ತದೆ.

'ಆಸೆ!'[235] ಎಂಬ ಕವಿತೆಯಲ್ಲಿ ಕವಿಯು ತನ್ನ ಆಸೆಗಳನ್ನು ಸರಸ್ವತಿಯಲ್ಲಿ ನಿವೇದಿಸಿಕೊಳ್ಳುತ್ತಾರೆ.

ಸೊಬಗಿನ ಸೆರೆಮನೆಯಾಗಿಹೆ ನೀನು;
ಚೆಲುವೇ, ಸರಸತಿಯೆ!
ಅದರಲಿ ಸಿಲುಕಿದ ಸೆರೆಯಾಳಾನು,
ನನ್ನೆದೆಯಾರತಿಯೆ!

ಎಂದು ಪ್ರಾರಂಭವಾಗುವ ಕವಿತೆಯಲ್ಲಿ ಸರಸ್ವತಿಯ ಸೌಂದರ್ಯವನ್ನು ಕುರಿತಾದ ವಿಶೇಷಣಗಳಿವೆ. ಕವಿಯು ಅಂತಹ ಕೆಲವು ವಿಶೇಷಣಗಳೊಂದಿಗೆ ತನ್ನ ಆಸೆಗಳನ್ನು ಸರಸ್ವತಿಯಲ್ಲಿ ನಿವೇದಿಸಿಕೊಳ್ಳುತ್ತಾನೆ. ಎಳೆಮೊಗದಲ್ಲಿ ನಸುನಗೆಯಾಗುವ ಆಸೆ, ತಾವರೆ ಬಣ್ಣದ ಹಣೆಯಲ್ಲಿ ಕುಂಕುಮವಾಗಿರುವ ಆಸೆ, ಬಳ್ಳಿಯಂತಿರುವ ಕೈಗೆ ಹೊಂಬಳೆಯಾಗಿರುವ ಆಸೆ, ನಿಂತಿರುವ ಪದ್ಮವನ್ನು ಮುಚ್ಚಿ ಶೈವಲದಂತೆ ಕಾಣುತ್ತಿರುವ ಸೀರೆಯ ನಿರಿಗೆಯಾಗಿರುವ ಆಸೆ, ಬಡನಡುವಿಗೆ ಕಟಿಬಂಧವಾಗಿರುವ ಆಸೆ, ಹಿಡಿದಿರುವ ವೀಣೆಯಾಗುವ ಆಸೆ ಮೊದಲಾದವುಗಳನ್ನು ಕವಿ ಹೇಳುತ್ತಾರೆ. ಕೊನೆಯಲ್ಲಿ ಬರುವ ಚೆಲುವೆ, ತರಳೇ, ಮುದ್ದಿನ ಹೆಣ್ಣೆ ಎಂಬ ಮಾತುಗಳು 'ಗಾಡಿಗೆ ತವರ್ಮನೆ' ಎಂಬ ಆಂಡಯ್ಯನ ಮಾತುಗಳನ್ನು ನೆನಪಿಸುತ್ತವೆ. **'ಕಾಮನ ಕಣ್ಣೆ'** ಎಂದು ಸರಸ್ವತಿಯನ್ನು ಕರೆದಿರುವುದು, ನೇಮಿಚಂದ್ರನು ಸರಸ್ವತಿಗೆ ಹೇಳಿರುವ **'ಕಾಮಸಂಜನನಿ'** ಎಂಬ ವಿಶೇಷಣವನ್ನು ಧ್ವನಿಸುತ್ತದೆ.

ನಾಟ್ಯಸರಸ್ವತಿಯ ವಿಗ್ರಹವೊಂದರ ಪ್ರೇರಣೆಯಿಂದಾಗಿ ರಚಿತವಾಗಿರುವ ಕವಿತೆ, 'ನಾಟ್ಯಸರಸ್ವತಿಗೆ'.[236]

ನರ್ತಿಸು, ತಾಯೆ,
ಅಜ ಜಾಯೆ,
ಮಮ ಮಸ್ತಕ ನೀರೇಜದಲಿ!

ಎಂದು ಪ್ರಾರಂಭವಾಗುವ ಕವಿತೆ,

ಅಡಿ ಸೋಂಕಿಗೆ ಮುಡಿ ಅರಳೆ
ಅಜ್ಞಾನದ ಗಡಿ ಉರುಳೆ
ವಿಜ್ಞಾನದ ಕಾಂತಿ
ಅವತರಿಸುತ ಬರೆ ಶಾಂತಿ
....
ಮಮ ಮಸ್ತಕ ನೀರೇಜದಲಿ!

---

234. ಅದೇ, ಪು.378

235. ಅದೇ, ಪು.890

236. ಅದೇ, ಪು.155

ಎಂದು ಮುಕ್ತಾಯವಾಗುತ್ತದೆ. ನಮ್ಮ ಬುದ್ಧಿಯಲ್ಲಿ **'ವಿಜ್ಞಾನದ ಕಾಂತಿ ಅವತರಿಸಿ ಶಾಂತಿ ಬರುವಂತೆ ನರ್ತಿಸು ನಮ್ಮ ಮಸ್ತಕದಲ್ಲಿ'** ಎನ್ನುವ ನುಡಿ ಸೊಗಸಾಗಿ ಮೂಡಿ ಬಂದಿದೆ. ನಾಗಚಂದ್ರನಲ್ಲಿ ಆತನ ಕಾವ್ಯವು 'ವಿದ್ಯಾನಟಿಯ ನಾಟ್ಯವೇದಿಕೆ'ಯಾಗಿದ್ದರೆ, ಇಲ್ಲಿ ಸ್ವತಃ ಕವಿಯ ಮಸ್ತಕವೇ ನೃತ್ಯವೇದಿಕೆಯಾಗಿದೆ. ಸರ್ವರ ಮಸ್ತಕವೂ ಸರಸ್ವತಿಯ ನೃತ್ಯವೇದಿಕೆಯಾಗಬೇಕೆಂಬುದು ಪ್ರಸ್ತುತ ಕವಿತೆಯ ಆಶಯ.

'ಅಖಂಡ ಕರ್ಣಾಟಕ!'[237] ಕವಿತೆಯಲ್ಲಿ ಬರುವ **'ಸರಸ್ವತಿಯೆ ರಚಿಸಿದೊಂದು ನಿತ್ಯ ಸಚಿವ ಮಂಡಲ ತನಗೆ ರುಚಿರಕುಂಡಲ', 'ಸರಸ್ವತಿಯೆ ರಚಿಸಿದೊಂದು ರಾಜಕೀಯ ತ್ರೋಟಕ'** ಎಂಬ ಸಾಲುಗಳು 'ಕರ್ಣಾಟಕಸರಸ್ವತಿ' ಎಂಬ ಪರಿಕಲ್ಪನೆಯ ವಿಸ್ತೃತ ರೂಪಗಳು.

ರಾಮಾಯಣವನ್ನು ಸರಸ್ವತಿಯ ವೀಣೆಯೆಂದೇ ಕುವೆಂಪು ಭಾವಿಸಿದ್ದಾರೆ. ಸಾವಿರಾರು ವರ್ಷಗಳಿಂದ ಸಾವಿರಾರು ಕವಿಗಳಿಗೆ ಪ್ರತ್ಯಕ್ಷ ಪರೋಕ್ಷ ಪ್ರಭಾವ ಬೀರುತ್ತಾ ಬಂದಿರುವ ಕೃತಿಗೆ ಸಿಕ್ಕ ಮನ್ನಣೆ ಅದು. ಕವಿಗೆ ಸರಸ್ವತಿಯು ಎಂದೂ ದೂರದವಳಲ್ಲ. ಸರಸ್ವತಿಯನ್ನು ಯಾವಾಗ ಬೇಕಾದರೂ ಸಂಧಿಸಿ ಮಾತನಾಡುವ ರೀತಿಯಲ್ಲಿರುವ 'ಅದ್ಭುತ ರಾಮಾಯಣ ಅಥವಾ ವಾಲ್ಮೀಕಿಗೊಂದು ಎಚ್ಚರಿಕೆ'[238] ಕವನದ ಮೊದಲ ಸಾಲಿನಲ್ಲಿಗೆ **'ಓ ತಾಯಿ ಸರಸ್ವತಿಯೆ, ನಿನ್ನ ಬೀಣೆಯ ಮೇಲೆ ಕುಳಿತೇನ ಮಾಡುತಿವೆ ಈ ಗೂಬೆಗಳ ಮಾಲೆ'** ಎಂದು ಪ್ರಶ್ನಿಸುತ್ತಾರೆ. ಉತ್ತರರಾಮಾಯಣದಲ್ಲಿ ಮೂಲರಾಮಾಯಣದ ಆಶಯಕ್ಕೆ ವಿರುದ್ಧವಾದ ಅಸಂಗತವಾದ ಪ್ರಕ್ಷಿಪ್ತಗಳು ಸೇರಿರುವುದನ್ನು ಮೇಲಿನ ಸಾಲು ಧ್ವನಿಸುತ್ತದೆ.

'ಪಂಪ'[239] ಕವಿತೆಯ ಮೊದಲ ಕಂದಪದ್ಯ ಹೀಗಿದೆ.

ಶ್ರೀ ವಾಗ್ದೇವಿಯ ವೀಣೆಯಿ
ನಾವಗುಮುಗುವಿಂಚರವೊನಲೆಮ್ಮೀ ಕರ್ನಾ
ಟಾವನಿಯಂ ಪುಗಲಾಯ್ತು ಸ
ರೋವರಮದರೊಳ್ ಸರೋಜವಾದೈ, ಪಂಪಾ!

ವಾಗ್ದೇವಿಯ ವೀಣೆಯ ಇಂಚರವು ಹೊಮ್ಮಿದ್ದರಿಂದಲೇ ಕವಿಗಳ ಸರೋವರದ ಮಧ್ಯದ ಸರೋಜವಾದನು ಪಂಪ ಎಂಬ ಮಾತು 'ಸರಸ್ವತಿಯ ವೀಣೆ ನುಡಿಯುತ್ತಿದ್ದರೇ ಕವಿಗಳು ಬರೆಯಲು ಸಾಧ್ಯ' ಎಂಬ ಕಲ್ಪನೆಯನ್ನು ಮೂಡಿಸುತ್ತದೆ. ಈ ಕಲ್ಪನೆಯ ವಿಸ್ತರಣೆಯ ರೂಪವನ್ನು 'ಮಹಾದರ್ಶನ', 'ಚಿತ್ರಾಂಗದಾ' ಮತ್ತು 'ರಾಮಾಯಣ ದರ್ಶನಂ' ಕಾವ್ಯಗಳಲ್ಲಿ ಕಾಣಬಹುದು.

---

237. ಅದೇ, ಪು.124–126
238. ಅದೇ, ಪು.130–132
239. ಅದೇ, ಪು.540–42

'ಮಹಾದರ್ಶನ'[240] ಸುಮಾರು 805 ಸಾಲುಗಳ ಖಂಡಕಾವ್ಯದ ವಿಸ್ತಾರವನ್ನುಳ್ಳ ನೀಳ್ಗವಿತೆ. ಕಾವ್ಯದ ಆರಂಭದಲ್ಲಿ ಮಹಾಕವಿಗಳ ಮತ್ತು ನಿರಾಕಾರನಾದ ಪರಮಾತ್ಮನ ಸ್ತುತಿಯಾದ ಮೇಲೆ ವಾಗ್ದೇವಿಯನ್ನು ಸ್ತುತಿಸಲಾಗಿದೆ.

ಏಳು, ವಾಣಿಯೆ ಏಳು! ಬಿಜ್ಜೆಯರಸಿಯೆ ಏಳು; ವೀಣೆಯನು ತಾಳು
ನವಯುಗದ ಪರಮಾವತಾರನಂ, ಭಕುತ ಜನರಿಗೆ ಮುದದಿ ಪೇಳು।

ಬಿಜ್ಜೆಯರಸಿ ಎಂಬ ದೇಸಿ ವಿಶೇಷಣ ಗಮನ ಸೆಳೆಯುತ್ತದೆ. ಸರ್ವಸಾಹಿತ್ಯವೂ ಸರಸ್ವತಿಯೆ ಬರೆಸಿದ್ದು. ಸರಸ್ವತಿಯ ವೀಣೆ ನುಡಿದರಷ್ಟೇ ಕವಿಗಳಿಗೆ ಬರೆವುದು ಸಾಧ್ಯ ಎಂಬ ಭಾವ ಪ್ರಕಟವಾಗಿದೆ. ಮಧ್ಯೆ, ಎಲ್ಲೆಲ್ಲಿ ಯಾವುದರ ಮೂಲಕ ದರ್ಶನವನ್ನು ಸರಸ್ವತಿಯು ನೀಡಬಹುದೆಂಬುದರ ದೊಡ್ಡ ಪಟ್ಟಿಯೇ ಇದೆ. ಆದರೆ, ಕೊನೆಯಲ್ಲಿ,

ಹಿಂದೆ ರಾಮನ ಕತೆಯ ವಾಲ್ಮೀಕಿ ವೀಣೆಯಲಿ......,
ಬಾದರಾಯಣನೆಂಬ ತಂತಿಯಲಿ ಭಾರತವ ಹಾಡಿರುವೆ.....
ನವಿಲು ವಾಹನೆ ಏಳು..... ಪಾಣಿಯಲಿ ವೀಣೆಯನು ಪಿಡಿದೇಳು,
ಮಧುರತಮ ವಾಣಿಯಲಿ ಪೇಳು

ಎಂಬ ಸಾಲುಗಳು, ವೀಣೆಯನ್ನು ತಾಳಿ ಕತೆಯನ್ನು ಹೇಳು ಎಂಬುದರ ವಿಸ್ತರಣೆಯಾಗಿವೆ. 'ನವಿಲು ವಾಹನೆ ಏಳು.....' ಎಂಬುದರಿಂದ ಸರಸ್ವತಿಯ ವಾಹನ ನವಿಲು ಎಂದಾಗಿದೆ. ಹೆಚ್ಚಿನ ಸಂದರ್ಭದಲ್ಲಿ ಸರಸ್ವತಿಯು ಹಂಸವಾಹನೆ. ಇಲ್ಲಿ ಸರಸ್ವತಿಯು ಹಂಸವಾಹನೆಯ ಬದಲು ನವಿಲುವಾಹನೆ ಆಗಿದ್ದೇಕೆ ಎಂಬುದನ್ನು,

ನವಿಲುವಾಹನೆ ಏಳು, ವಾಹನದ ಮಳೆಬಿಲ್ಲ ರಾಗಗಳ ಕೀಳು
ಕಣ್ಣುಗಳ ಬಣ್ಣಗಳ ಪದಗಳನು ಸಿಂಗರಿಸುವಂದದಲಿ ಹೂಳು

ಎಂಬ ಸಾಲುಗಳು ಸಮರ್ಥಿಸುತ್ತವೆ. ಕಾವ್ಯಕ್ಕೆ ಅಲಂಕಾರಗಳು ಮುಖ್ಯ. ಅವುಗಳಲ್ಲಿ ವೈವಿಧ್ಯವಿದ್ದರೆ ಇನ್ನೂ ಚೆನ್ನ. ನವಿಲಿನ ಕಣ್ಣು ಮತ್ತು ಬಣ್ಣಗಳಂತಹ ಪದಗಳನ್ನು ಅಂದರೆ ಅಲಂಕಾರಗಳನ್ನು 'ಹೂಳು' ಎಂದರೆ, ನೀನು ನುಡಿಸುವ ವಾಣಿಯಲ್ಲಿ ಬಿತ್ತು, ಸೇರಿಸು ಎಂದರ್ಥ. ಪ್ರಸ್ತುತ ಕವಿತೆಗೆ 'ನವಿಲುವಾಹನೆ' ಎಂಬುದು ಸಾರ್ಥಕ ವಿಶೇಷಣವಾಗಿದೆ.

'ಚಿತ್ರಂಗದಾ' ಕಾವ್ಯದ ಮೊದಲ ಪರ್ವದ ಮೊದಲ ನಲವತ್ತೆರಡು ಸಾಲುಗಳಲ್ಲಿ ಸರಸ್ವತಿಯ ವಿಸ್ತೃತವಾದ ಸ್ತುತಿಯಿದೆ.

ಬ್ರಹ್ಮಮಾನಸ ಮಹದ್‌ಗರ್ಭಸಂಭವೆ, ವಿರಾಟ್
ಪ್ರಭವೆ, ಭವ್ಯಾನಂದ ವಿಭವೆ, ಶಾರದೆ, ವರದೆ,
ಭಾವಚಿಂತಾಖನಿಯೆ, ಶಿಖಿವಾಹಿನಿಯೆ, ವಾಣಿ

---

240. ಅದೇ, ಪು.837-63 (21ರಿಂದ 39ನೇ ಸಾಲುಗಳವರೆಗೆ ಸರಸ್ವತೀ ಸ್ತುತಿಯಿದೆ)

ಭುವನಮೋಹನ ಮಧುರ ದಿವ್ಯ ವೀಣಾಪಾಣಿ
ವಾಗ್ದೇವಿ, ಸರಸ ಕವಿತಾ ಕಲಾ ಕಲ್ಯಾಣಿ,
ತುಂಬುವೆನು ನಿನ್ನಮಲ ಪಾದ ಪಂಕೇಜದಲಿ
ಮುಂಗುರುಳ್ದುಂಬಿಗಳನೆಲೆ ತಾಯೆ, ಕೃಪೆಗೈದು
ಕಂದನಂ ಕಾರುಣ್ಯದಿಂ ಕಂಡು, ಜಡಮತಿಗೆ
ದಿವ್ಯ ವೈದ್ಯುತ್ತ್ವ ಚೇತನವನಿತ್ತು ನಲಿದೊಲಿದು
ನರ್ತನಂಗೈಯೆನ್ನ ಜಿಹ್ವೆಯಲಿ.[241]

ಬ್ರಹ್ಮಮಾನಸ ಮಹದ್‌ಗರ್ಭಸಂಭವೆ ಎಂಬುದು ಸರಸ್ವತಿಯನ್ನು ಬ್ರಹ್ಮನ ಮಾನಸಪುತ್ರಿಯನ್ನಾಗಿಸಿದೆ. ಇಲ್ಲಿ ಸರಸ್ವತಿಯ ವಾಹನ ನವಿಲು (ಶಿಖಿವಾಹಿನಿ). ಶಾರದೆ ಎಂಬುದು ಸರಸ್ವತಿಯ ಹೆಸರಾಗಿ ಬಳಕೆಯಾಗಿದೆ. ಸ್ತುತಿಯ ಎರಡನೇ ಹಂತದಲ್ಲಿ, ಕಾವ್ಯಕಾಮಿನಿಯಾದ ವಾಣಿಯು **'ನಾನುಲಿವ ಗಾನದಲಿ ಕನ್ನಡನಾಡಿನೆರ್ದೆವೂವರಳ್ವವೋಲ್'** ಮಾಧುರ್ಯವನ್ನು, ಸ್ಫೂರ್ತಿಯನ್ನು ದಯಪಾಲಿಸಲಿ ಎಂಬ ಪ್ರಾರ್ಥನೆಯಿದೆ.

ಓ ಕಲ್ಪನಾ ಸುಂದರಿಯೆ, ನಿನ್ನ ಮಹಿಮೆಯೊಳೆ
ವ್ಯಾಧನಾದಂ ಪ್ರಥಮಕವಿ! ಪಸುಳೆ ನಾಂ, ತಾಯೆ,
ನೀನೊರ್ಮೆ ಚುಂಬಿಸಲ್ಕೆನ್ನೀ ತೊದಲ್ವ ತುಟಿ
ಗಾನಗೈಯದೆ ಪೇಳ್ ಬೃಹತ್ ಕಾವ್ಯ ಸಂಗೀತೆಯಂ?[242]

ಸರಸ್ವತಿಯ ಕೃಪೆಯಿಂದ ವ್ಯಾಧ ವಾಲ್ಮೀಕಿ ಪ್ರಥಮಕವಿಯಾಗಿದ್ದಾನೆ. ಇನ್ನೂ ಮಗು ನಾನು; ತಾಯಿ ನೀನು. ನನ್ನ ತೊದಲುವ ತುಟಿಯನ್ನೊಮ್ಮೆ ಚುಂಬಿಸಿದರೆ ಸಾಕು, ಮಹಾಕಾವ್ಯವೇ ಹೊಮ್ಮುತ್ತದೆ ಎಂಬ ಭಾವ ಚೆನ್ನಾಗಿ ಮೂಡಿಬಂದಿದೆ. ವಾಲ್ಮೀಕಿ, ವ್ಯಾಸ, ಪಂಪ, ರನ್ನರ ದಿವ್ಯ ಕಾವ್ಯಗಳೆಂಬ,

ಕೀರ್ತಿಕಾಮಿನಿಯಡಿಗಳಮಲತರ ಧೂಳಿಯಂ
ಶಿರದೊಳಾನುವ ಪುಣ್ಯಮಂ ಬಯಸಿ, ಹೇ ದೇವಿ,
ನಿನ್ನನೆದೆತುಂಬ ಪ್ರಾರ್ಥಿಸುವೆ: ಕೃಪೆದೋರೆನಗೆ
ನಿನ್ನ ವೀಣಾವಾಣಿಯಂ ನೀಡು, ಓ ತಾಯೆ![243]

ಎಂದು, ಇಷ್ಟಕ್ಕೂ ಸುಮ್ಮನಾಗದ ಕವಿಮನಸ್ಸು, ಸರಸ್ವತಿಯಿಂದ, ಸರಸ್ವತಿಯ ವೀಣೆಯ ಕಡೆಗೆ ಹೊರಳುತ್ತದೆ.

ಏಳು, ವೀಣೆಯೆ ಏಳು! ಹೇಳು ಮುಂದಿನ ಕಥೆಯ
ಹೇ ಅಮೃತಭಾಷಿಣಿಯೆ![244]

---

241. ಕುವೆಂಪು: ಚಿತ್ರಾಂಗದಾ, ಸಾಲುಗಳು: 1–10
242. ಅದೇ, ಸಾಲುಗಳು: 17–20
243. ಅದೇ, ಸಾಲುಗಳು: 27–30
244. ಅದೇ, ಸಾಲುಗಳು: 31–32

ಎಂದು ಮತ್ತೆ ಮತ್ತೆ ಪ್ರಾರ್ಥಿಸುತ್ತಾರೆ. 'ಮಹಾದರ್ಶನ' ಕವಿತೆಯಲ್ಲಿ ಸಣ್ಣದಾಗಿ ಕಾಣಿಸಿಕೊಂಡ '**ವೀಣೆಯ ತಾಳಿ ಕಥೆಯ ಹೇಳು**' ಎಂಬ ಕಲ್ಪನೆ ಇಲ್ಲಿ ವಿಸ್ತಾರಗೊಂಡಿದೆ. ತಾನು ಬರೆಯಲು ಉದ್ದೇಶಿಸಿರುವ ಕವಿತೆಯನ್ನು ಸರಸ್ವತಿಯ ವೀಣೆಯು ಹಾಡಲಿ ಎಂಬುದು ಕವಿಯ ಆಶಯ. 'ವೀರನಾರಾಯಣನೆ ಕವಿ ಲಿಪಿಕಾರ ಕುವರವ್ಯಾಸ', ಎಂದು ಕಾವ್ಯ ಮತ್ತು ಕರ್ತೃತ್ವವೆರಡನ್ನೂ ಭಗವಂತನಿಗೇ ಅರ್ಪಿಸುವ ನುಡಿಯ ಮುಂದುವರೆದ ರೂಪ ಈ ಪ್ರಾರ್ಥನೆ. ಅಲ್ಲಿ ಸ್ವತಃ ವೀರನಾರಾಯಣನೇ ಕವಿ. ಇಲ್ಲಿ ಸರಸ್ವತಿಯೇ ಕವಿಯಾದರೂ, ಕತೆಯ ನುಡಿಯುವುದು ಸರಸ್ವತಿಯ ವೀಣೆ!

ಕಾವ್ಯದ ಯಾವುದೋ ಒಂದು ಘಟ್ಟದಲ್ಲಿ, ಸನ್ನಿವೇಶ ಬದಲಾವಣೆಯಾಗುವಾಗ ನಿರಂತರವಾಗಿ ಹರಿಯುತ್ತಿದ್ದ ಕವಿಪ್ರತಿಭೆಗೆ ತತ್ಕಾಲೀನ ಅಡ್ಡಿ ಬಂದಂತಾಗಬಹುದೇನೋ!? ಅಂತಹ ಸಂದರ್ಭದಲ್ಲಿ ಕುವೆಂಪು 'ಮುಂದಿನ ಸನ್ನಿವೇಶವೇನು?' ಎಂಬಂತೆ ಸರಸ್ವತಿಯನ್ನು ಕೇಳುತ್ತಾರೆ. ಇದು ಒಂದು ರೀತಿಯಲ್ಲಿ ಕಾವ್ಯತಂತ್ರವಾಗಿಯೇ ಬಂದಿರುವುದು 'ಚಿತ್ರಾಂಗದಾ' ಕಾವ್ಯದಲ್ಲಿ ಆರಂಭವಾಗಿ 'ರಾಮಾಯಣದರ್ಶನಂ'ನಲ್ಲಿ ವಿಕಸಿತವಾಗಿದೆ ಎನ್ನುವುದನ್ನು ಮುಂದೆ ಗಮನಿಸಲಾಗುವುದು. ಪ್ರಸ್ತುತ '**ಚಿತ್ರ**ಂಗಗಾ'ದಲ್ಲಿ ಆ ರೀತಿಯ ಎರಡು ಪ್ರಸಂಗಗಳನ್ನು ಗುರುತಿಸಬಹುದು.

> **ಮತ್ತಾವ**
> **ಮಾಯೆಯಂ ಮಥಸಿದೌ ನಿದ್ರಾಸಮುದ್ರದಲಿ,**
> **ಓ ಸ್ವಪ್ನ ಸುಂದರಿಯೇ? ಸೃಷ್ಟಿಸಲ್ ತೊಡಗಿದರೆ**
> **ನಿನ್ನ ಮಾಯಾಕುಂಚಿಕಿದಿರೆಲ್ಲಿ? ಎಣೆಯೆಲ್ಲಿ?**
> **ದೇಗುಲದ ಕಲ್ನೆಲದಿ ಮಲಗಿಹ ತಳೋದರಿ**
> **ಅದೇಕಿಂತು ಕಂಪಿಪಳ್? ಕಾಣುತಿಹಳೇನಾಕೆ? ತೋರ್**[245]

ಎಂದು ಕಲೆಗಾರ್ತಿ ಸರಸ್ವತಿಯನ್ನು ಕೇಳುತ್ತಾರೆ. ಮೂರನೆಯ ಪರ್ವಾರಂಭದಲ್ಲಿ

> **ಏಳು,ವೀಣೆಯೆ! ಏಳು, ಶೃಂಗಾರ ಸುಂದರಿಯೆ!**
> **ಏಳು, ಅಂತರ್ಯಾಮಿ ಚಿಂತಾ ಪ್ರಭಾಮಯೀ**
> **ಪ್ರತಿಭಾ ಮನೋಹರಿಯೆ! ಹೇಳು ಮುಂದಣ ಕಥಾ**
> **ಭೋಗಮಂ!............................**
> **..**
> **..........ಜಡಮತಿಗೆ ರಸಮಂತ್ರಮಂ ನೀಡಿ,**
> **ಮಿಡಿದು ನುಡಿಸೆನ್ನೆದೆಯ ನಾದಮಯದಿಂದ್ರಧನು**
> **ತಂತ್ರಿಯಿಂ ಮಾಡಿದ ಮಹಾಕಾಶವೀಣೆಯಿಂ!**[246]

---

245. ಅದೇ, ಸಾಲುಗಳು: 123–28

246. ಅದೇ, ಸಾಲುಗಳು: 826–830

ಎಂದು ಸರಸ್ವತಿಯ ಮಹಾವೀಣೆಯನ್ನು ಪ್ರಾರ್ಥಿಸುತ್ತಾರೆ. ಆಕಾಶವೇ ವೀಣೆ; ಕಾಮನಬಿಲ್ಲೇ ತಂತಿಯಾದ್ದರಿಂದ ಸರಸ್ವತಿಯದ್ದು ಮಹಾವೀಣೆ. ಹೀಗೆ ಸರಸ್ವತಿಯ ವೀಣೆಯನ್ನು ಸ್ತುತಿಸುವಾಗ ಮುಂದಣ ಕತೆಯ ಆಶಯಕ್ಕೆ ಅನುಗುಣವಾಗಿಯೇ ಸರಸ್ವತಿಗೆ ವಿಶೇಷಣಗಳನ್ನು ಬಳಸಿರುವುದು ಉಚಿತವಾಗಿದೆ. ಉದಾಹರಣೆಗೆ ಚಿತ್ರಾಂಗದಾ ಕಾವ್ಯದ ಮೂರನೆಯ ಪರ್ವದಲ್ಲಿ ಶೃಂಗಾರಪ್ರಧಾನವಾದ ದೃಶ್ಯಗಳು ಹೆಚ್ಚಾಗಿ ಬರುತ್ತವೆ. ಪ್ರಾರ್ಥನೆಯಲ್ಲಿ 'ಶೃಂಗಾರ ಸುಂದರಿಯೇ' ಎಂದು ಸ್ತುತಿಸಿರುವುದನ್ನು ಗಮನಿಸಬಹುದಾಗಿದೆ. ಹಳಗನ್ನಡ ಕಾವ್ಯಗಳಲ್ಲಿ, ಷಟ್ಪದಿ ಕಾವ್ಯಗಳಲ್ಲಿ ಆಯಾಯ ಆಶ್ವಾಸದ ಆಶಯವನ್ನು ವ್ಯಕ್ತಪಡಿಸುವ ಪದ್ಯಗಳನ್ನು ಆಶ್ವಾಸದ ಮೊದಲಲ್ಲೇ ತಂದಿರುವುದನ್ನು ನೋಡಬಹುದಾಗಿದೆ. ಆದಿಪುರಾಣದಲ್ಲಿ ಪಂಪನು ಪ್ರಪ್ರಥಮವಾಗಿ ಈ ತಂತ್ರವನ್ನು ಬಳಸಿದ್ದಾನೆ. ಈ ಉದ್ದೇಶಕ್ಕಾಗಿ ಬಳಸಿರುವ ಕಂದಪದ್ಯಗಳೆಲ್ಲವೂ 'ಸರಸ್ವತೀ ಮಣಿಹಾರಂ' ಎಂದು ಕೊನೆಗೊಂಡಿರುವುದನ್ನು, ಪಂಪನ ಸರಸ್ವತೀ ದರ್ಶನವನ್ನು ವಿವೇಚಿಸುವ ಸಂದರ್ಭದಲ್ಲಿ ಗಮನಿಸಿದ್ದೇವೆ.

'ಶ್ರೀರಾಮಾಯಣದರ್ಶನಂ' ಬೃಹತ್ತು ಮತ್ತು ಮಹತ್ತುಗಳೆರಡರಲ್ಲೂ 'ಚಿತ್ರಾಂಗದಾ' ಕಾವ್ಯದ ಮುಂದುವರೆದ ಆವೃತ್ತಿ. ಸರಸ್ವತಿಯ ಪ್ರಾರ್ಥನೆ, ವರ್ಣನೆ ಮತ್ತು ಕಾವ್ಯತಂತ್ರವಾಗಿ ವಾಗ್ದೇವಿಯ ಸ್ತುತಿಯನ್ನು ಬಳಸಿಕೊಂಡಿರುವ ವಿಚಾರದಲ್ಲೂ ಮುಂದುವರೆದ ಆವೃತ್ತಿಯೆ! 'ಶ್ರೀ ವೆಂಕಣ್ಣಯ್ಯನವರಿಗೆ' ಎಂಬ ಅರ್ಪಣೆಯ ಭಾಗದಲ್ಲಿಯೇ ಸರ್ವಭಾಷಾಮಯಿಯಾದ ಸರಸ್ವತಿಯನ್ನು ವಿಶ್ವಭಾಷಾಮಯೀಯಾಗಿಸಿರುವ **'ಕಾವ್ಯಮಂ ವಿಶ್ವವಾಣಿಗೆ ಮುಡಿಯ ಮಣಿ ಮಾಡಿಹೆನ್'**[247] ಮತ್ತು **'ವಾಗರ್ಥ ರಥವೇರಿ, ಭಾವದಗ್ನಿಯ ಪಥಂ ಬಿಡಿದು ಬನ್ನಿಂ'**[248] ಎಂಬ ಸಾಲುಗಳು ಸರಸ್ವತಿಯ ದರ್ಶನಕ್ಕೆ ಮುನ್ನುಡಿಯಂತಿವೆ.

'ಏರುವೆನ್ ವಾಗ್ದೇವಿಯಮೃತ ರಸನೆಯ ಲಸನ್ ನಾವೆಯಂ'[249] ಎನ್ನುತ್ತಾ ಆದಿಕವಿಗೆ ವಂದಿಸಿ, **'ದೇವಕವಿ, ನನ್ನನೊಯ್ಯನೆ ಕಾವ್ಯ ವಿದ್ಯುದ್ ವಿಮಾನದೊಳ್ ನಿರಿಸಿ, ಮೇಣ್ ಸರಸತಿಯನೆನ್ನಾತ್ಮ ಜಿಹ್ವೆಗೆ ಬರಿಸಿ ಹರಕೆಗೆಯ್'**[250] ಎಂದು ಕೇಳುತ್ತಾರೆ. ಸಾಮಾನ್ಯವಾಗಿ ಇದುವರೆಗಿನ ಕವಿಗಳು –'ಚಿತ್ರಾಂಗದಾ'ದಲ್ಲಿ ಕುವೆಂಪೂ ಸಹ– ಸರಸ್ವತಿಯು ನಮ್ಮ ನಾಲಗೆಯಲ್ಲಿ ನೆಲಸಲಿ, ನರ್ತಿಸಲಿ' ಎಂದು ಪ್ರಾರ್ಥಿಸಿರುವುದನ್ನು ನೋಡಿದ್ದೇವೆ. ಇಲ್ಲಿ ನೇರವಾಗಿ ಸರಸ್ವತಿಯನ್ನು ನಾಲಗೆಗೆ ಆಹ್ವಾನಿಸದೆ, ಆದಿಕವಿಯನ್ನು **'ಸರಸತಿಯನೆನ್ನಾತ್ಮ ಜಿಹ್ವೆಗೆ ಬರಿಸಿ ಹರಕೆಗೆಯ್'** ಎಂದು ಪ್ರಾರ್ಥಿಸುತ್ತಿದ್ದಾರೆ. ಇಲ್ಲಿ 'ಆತ್ಮಜಿಹ್ವೆಗೆ' ಎಂಬ

---

247. ಶ್ರೀರಾಮಾಯಣ ದರ್ಶನಂ, 'ಶ್ರೀ ವೆಂಕಣ್ಣಯ್ಯನವರಿಗೆ' ಸಾಲುಗಳು: 15–16
248. ಅದೇ, ಸಾಲುಗಳು: 31–32
249. ಅದೇ, ಕವಿಕ್ರತು ದರ್ಶನ, ಸಾಲುಗಳು: 87–88
250. ಅದೇ, ಸಾಲುಗಳು: 118–120

ಮಾತು ಹೊಸದಾಗಿ ಬಂದಿದೆ. ಆದಿಕವಿಯೇ ಸರಸ್ವತಿಯನ್ನು ಕವಿಯಾತ್ಮಜಿಹ್ವೆಗೆ ಇರಿಸಿದ ಮೇಲೆ ಸರಸ್ವತಿಯ ಪ್ರಾರ್ಥನೆ ಕೆಳಗಿನಂತೆ ಬಂದಿದೆ.

ಬಾಳು, ವೀಣಾಪಾಣಿ; ಬಾಳು, ಬ್ರಹ್ಮನ ರಾಣಿ;
ಗಾನಗೆಯ್, ಹೇಳು, ಓ ಭಾವಗಂಗಾ ವೇಣಿ.
ನಂದನದಿ ತುಂಬಿಯೋಂಕೃತಿ ತುಂಬಿ ಮೊರೆವಂತೆವೋಲ್
ಕರ್ಣಾಟಕದ ಜನದ ಕರ್ಣವೀಣಾ ತುಂಬಿ
ನಿನ್ನ ವಾಣಿಗೆ ವಿಕಂಪಿಸಿ, ಜೇಂಕೃತಿಯ ಬೀರಿ,
ರಸದ ನವನೀತಮಂ ಹೃದಯದಿ ಮಥಿಸುವಂತೆ
ಗಾನಗೆಯ್, ಹೇಳು, ಓ ಭಾವಗಂಗಾವೇಣಿ.[251]

ಈ ಭಾಗದಲ್ಲಿ ಭಾವಗಂಗಾವೇಣಿ ಎಂಬ ವಿಶೇಷಣ ಗಮನ ಸೆಳೆಯುತ್ತದೆ. ಭಾರತೀಯರಿಗೆ ಗಂಗಾನದಿಯೇ ದೊಡ್ಡನದಿ. ಗಂಗಾವೇಣಿ ಎಂದರೂ ಸಮಾಧಾನವಾಗದ ಕವಿಗೆ, ಸರಸ್ವತಿಯನ್ನು ಭಾವಗಂಗಾವೇಣಿಯನ್ನಾಗಿ ನೋಡುವ ಬಯಕೆ. ಈ ವಿಶೇಷಣ ಸರಸ್ವತಿಯ ಅಲೌಕಿಕ ಪ್ರತಿಮೆಗೆ ಭವ್ಯಭೂಮತೆಯನ್ನು ತಂದುಕೊಟ್ಟಿದೆ. 'ತುಂಬಿ' ಎಂಬ ಶಬ್ದಾಲಂಕಾರ ಪರಿಣಾಮಕಾರಿಯಾಗಿದೆ. ಮುಂದಿನ ಭಾಗದಲ್ಲಿ ಸರಸ್ವತಿಯ ಸಾಮರ್ಥ್ಯದ ಅರಿವು ಮೂಡುತ್ತದೆ.

ತೀಡಿದರೆ ನಿನ್ನುಸಿರು, ಮದ್ದಿಗೆ ಕಿಡಿ ತಗುಳ್ದು
ಹೊಮ್ಮುವಂದದಿ ಜ್ಯೋತಿ, ಜಡವೆ ಚಿನ್ಮಯವಾಗಿ
ಚಿಮ್ಮಿದಪುದಯ್. ಮುಟ್ಟಿದರೆ ನಿನ್ನ ಮೆಯ್, ರಾಮಾಂಘ್ರಿ
ಸೋಂಕಿದೊಡನೆಯೆ ಕಲ್ಲು ಕಡುಚೆಲ್ವು ಪೆಣ್ಣಾಗಿ
ಸಂಭವಿಸಿದೋಲ್, ಪಂಕದಿಂ ಕಲಾಪಂಕಜಂ
ಕಂಗೊಳಿಪುದಯ್, ಭುವನ ಮನಮಂ ಮೋಹದಿಂದಪ್ಪಿ
ಸೆಳೆದು. ನಿನ್ನ ಕಯ್ ಪಿಳಿಯೆ ಕಬ್ಬಿಣದಿಂದೆಯುಂ
ಪೊರಸೋಸಿದಪುದು ಕಬ್ಬಿನ ರಸಂ. ಮಂತ್ರಮಯಿ
- ನೀಂ ಬಡಿಯೆ, ಬಂಡೆಯಿಂ ನೀರಿನೊಳ್ಬುಗ್ಗೆಯಂ
ಹೊಮ್ಮಿ ಚಿಮ್ಮುವುದಲ್ತೆ, ಮುತ್ತು ಚಿಪ್ಪೊಡೆವಂತೆವೋಲ್
ಬಿರಿದು. ರಸಚಿತ್ ತಪೋಬಲಕೆಲ್ಲೆ ತಾನೊಳದೆ
ಪೇಳ್, ಕಲಾಲಕ್ಷ್ಮಿ? ಕೃಪೆಗೆಯ್, ತಾಯೆ, ಪುಟ್ಟನಂ,
ಕನ್ನಡದ ಪೊಸಸುಗ್ಗಿ ಬನದ ಈ ಪರಪುಟ್ಟನಂ.[252]

ಕಬ್ಬಿಣದಿಂದಲೂ ಕಬ್ಬಿನ ರಸವುಕ್ಕಿಸುವ ವಾಣಿ ಇಲ್ಲಿ ರಸಸರಸ್ವತಿ. ಮಂತ್ರಮಯೀ ನೀನು ಬಡಿದರೆ ಬಂಡೆಯಿಂದಲೂ ನೀರುಕ್ಕುವುದು ಎಂಬ ಮಾತು ಋಗ್ವೇದದ, ರಭಸವಾಗಿ ಹರಿಯುವ ಸರಸ್ವತಿನದಿಯನ್ನು ಸೂಚಿಸುತ್ತದೆ. ರಸಚಿತ್ ತಪೋಬಲಕ್ಕಿಲ್ಲ ಎಲ್ಲೆ ಎಂಬುದು, ಪ್ರಾರಂಭದಲ್ಲಿ ಬಂದ

---

251. ಅದೇ, ಸಾಲುಗಳು: 121–27
252. ಅದೇ, ಸಾಲುಗಳು: 128–140

ಭಾವಗಂಗಾವೇಣಿ ಎಂಬ ಲೌಕಿಕ ಪ್ರತಿಮೆಯ, ಅಲೌಕಿಕ ಮುಖವನ್ನು ತೆರೆದಿಡುತ್ತದೆ. 'ಕನ್ನಡದ ಪೊಸಸುಗ್ಗಿ ಬನ' ಎಂಬ ಮಾತು ನವೋದಯ ಕಾವ್ಯಸಂದರ್ಭವನ್ನು ಧ್ವನಿಸುತ್ತದೆ. ನವೋದಯದ ಕೋಗಿಲೆಯಾದ ನೀನು ನನಗೆ ಕೃಪೆ ಮಾಡು ಎಂಬುದು ಕವಿಯ ಪ್ರಾರ್ಥನೆ.

'ಶ್ರೀರಾಮಾಯಣದರ್ಶನಂ'ನ ಕೆಲವು ಸಂಚಿಕೆಗಳು (ಉದಾ: ಅಗ್ನಿಯಾತ್ರೆ ಮತ್ತು ಅತ್ತಲಾ ದೈತ್ಯ ಸಭೆಯೊಳ್) ಆರಂಭದಲ್ಲಿ ಸರಸ್ವತಿಯ ಬದಲು ಆದಿಕವಿ ವಾಲ್ಮೀಕಿಯನ್ನು ಕಾವ್ಯಾವೇಶಕ್ಕಾಗಿ ಸರಸ್ವತಿಯನ್ನು ಸ್ತುತಿಸುವಂತೆಯೇ ಸ್ತುತಿಸಿರುವುದುಂಟು. ಕೆಲವು ಸಂಚಿಕೆಯ ಪ್ರಾರಂಭದಲ್ಲಿ, ಒಮ್ಮೊಮ್ಮೆ ಸಂಚಿಕೆಯ ನಡುವೆಯೂ ಸರಸ್ವತಿಯ ಸ್ತುತಿಯಿದೆ. ಎಂಟನೆಯ ಸಂಚಿಕೆಯ ಆರಂಭದಲ್ಲಿ ಬಂದಿರುವ ಸರಸ್ವತಿಯ ಸ್ತುತಿ ಹೀಗಿದೆ.

> **ವಾಣಿ, ಓ ಪ್ರಾಣವೀಣಾಪಾಣಿ, ಕವಿಯೆರ್ದೆಯ**
> **ರಸರಾಣಿ, ಮಿಡಿಯೆನ್ನಾತ್ಮತಂತ್ರಿಯಂ; ನುಡಿಸೆನ್ನ**
> **ಹೃದಯಮಂ; ನಡೆಸೆನ್ನ ಈ ಮಹಾಕಾವ್ಯಮಂ,**
> **ತಾಯಿ ಕಂದನ ಕೈಯನಾನುತೆ ನಡೆಯಿಪಂತೆ.**[253]

ಆತ್ಮವೆಂಬ ವೀಣೆಯ ತಂತಿಯನ್ನು ನುಡಿಸುವಂತೆ ರಸರಾಣಿಯನ್ನು ಕವಿ ಕೋರುತ್ತಾರೆ. ಮೊದಲೇ **'ಪಸುಳೆ ನಾನ್; ತಾಯಿ ನೀನು'** ಎಂದಿರುವುದರಿಂದ **'ತಾಯಿ ಕಂದನ ಕಯ್ಯನಾನುತೆ ನಡೆಯಿಪಂತೆ'** ಎಂಬ ಉಪಮೆ ಅರ್ಥಪೂರ್ಣವಾಗಿದೆ; ಕವಿಗಳೆಲ್ಲರೂ ಸರಸ್ವತಿಯ ಸುತರು ಎಂಬರ್ಥವನ್ನು ಧ್ವನಿಸುತ್ತದೆ. ಮುಂದುವರೆದು, ತನ್ನ ಮುಂದಿರುವ ಕಾವ್ಯದ ದೂರವನ್ನು, ಕಾವ್ಯದ ಉದ್ದೇಶವನ್ನು ಹೇಳಿ, ಅದಕ್ಕೆ ಸಹಕರಿಸುವಂತೆ ಸರಸ್ವತಿಯನ್ನು ಸ್ತುತಿಸುತ್ತಾರೆ.

> **........ಪರಕೆಯಿರಲೆನಗೆ**
> **ನಿನ್ನಮೃತ ವರದ ಕರದಾ, ದೇವಿ ಓ ಶಾರದಾ!**
> **ಕೊಲೆಯ ಕಥೆ ಬಗೆಸೆಳೆಯುವಂತೆ ರಾಮನ ಮನದ**
> **ಕಲೆಯ ಕಥೆ ತಾಂ ಬಗೆಗೊಳಿಪುದೇನಳಿವಗೆಯ ರುಚಿಯ**
> **ದೀನರಿಗೆ? ನನ್ನೀ ಕೃತಿಯನೋದುವಾತ್ಮರಾ**
> **ದಾರಿದ್ರ್ಯಮಂ ಪರಿಹರಿಸಿ, ಓ ಸರಸ್ವತಿಯೆ,**
> **ನೆಲಸಲ್ಲರಸಿಯಾಗಿ, ಸಹೃದಯ ಸರಸಲಕ್ಷ್ಮಿ!**[254]

ಕಾವ್ಯರಚನೆಯಲ್ಲಿ ತೊಡಗಿರುವ ಕವಿಗೆ ಕಾವ್ಯಾವೇಶವನ್ನು ಕೊಡುವಂತೆ, ಕಾವ್ಯವನ್ನು ಓದುವ ಸಹೃದಯರಿಗೂ ಸರಸ್ವತಿಯೆ ಕೃಪೆ ಮಾಡು ಎಂಬುದು ನವೀನವಾಗಿದೆ. ಸಹೃದಯರಿಗೆ ಒಲಿಯುವಳಾದ್ದರಿಂದ ಸರಸ್ವತಿಗೆ 'ಸಹೃದಯ ಸರಸಲಕ್ಷ್ಮಿ' ಎಂಬ ವಿಶೇಷಣ ಚೆನ್ನಾಗಿ ಒಪ್ಪುತ್ತದೆ. 'ಕಿಷ್ಕಿಂಧಾ ಸಂಪುಟ'ದ ಪ್ರಾರಂಭದ ಸಂಚಿಕೆಯಲ್ಲಿ, ಸರಸ್ವತಿಯ ಕಯ್ಯ ವೀಣೆಯನ್ನು ಪ್ರಾರ್ಥಿಸುತ್ತಾರೆ.

---

253. ಅದೇ, ಕುಣಿದಳುರಿಯ ಉರ್ವಶಿ!, ಸಾಲುಗಳು: 1–4

254. ಅದೇ, ಸಾಲುಗಳು: 14–20

ಏಳು, ವೀಣೆಯೆ; ಏಳು, ವಾಕ್ಸುಂದರಿಯ ಕಯ್ಯ
ತ್ರೈಭುವನ ಸಮ್ಮೋಹಿನಿಯೆ, ಕವನಕಮನೀಯೆ!
ಮಂತ್ರದಕ್ಷಿಗಳಿಂದೆ ನೋಳ್ಪ ನೀಂ ಸರ್ವಕ್ಕೆ
ಸಾಕ್ಷಿ. ಕಂಡುದನೆಮಗೆ ಗಾನಗೆಯ್ ಶ್ರೀಕಂಠದಿಂ
ಶತತಂತ್ರಿಯಾ. ಪ್ರತಿಭೆ ತಾಂ ಪ್ರಜ್ವಲಿಸುಗೆಮ್ಮೆರ್ದೆಗೆ
ನಿನ್ನ ದರ್ಶನವೆಮ್ಮ ದರ್ಶನಂ ತಾನಪ್ಪವೋಲ್.[255]

ಕವಿಗೆ ಸರಸ್ವತಿ ಮತ್ತು ಸರಸ್ವತಿಯ ವೀಣೆಯ ಬಗೆಗೆ ಯಾವ ಭೇದಭಾವವೂ ಇಲ್ಲ. ಆದರೆ, ಎರಡನ್ನೂ ಬೇರೆ ಬೇರೆ ಎಂಬಂತೆ ಸ್ತುತಿಸುವುದರಿಂದ ವೈವಿಧ್ಯ ಉಂಟಾಗಿದೆ; ಏಕತಾನತೆಯ ಭಯವಿರುವುದಿಲ್ಲ. ಸರಸ್ವತಿಗೆ 'ಈ' 'ಈಕ್ಷತಿ' 'ಈಕ್ಷಿತಾ' ಎಂಬ ಹೆಸರುಗಳೂ ಇವೆ. ಇವುಗಳಿಗೆ ಈಕ್ಷಿಸು, ಅವಲೋಕಿಸು, ಗ್ರಹಿಸು ಮುಂತಾದ ಅರ್ಥಗಳಿವೆ. 'ನೀಂ ಸರ್ವಕ್ಕೆ ಸಾಕ್ಷಿ' ಮತ್ತು 'ಕಂಡುದನೆಮಗೆ ಶತತಂತ್ರಿಯಾ ಶ್ರೀಕಂಠದಿಂ ಗಾನಗೆಯ್' ಎಂಬ ಪ್ರಯೋಗಗಳಲ್ಲಿ, ಸರಸ್ವತಿಗಿರುವ ಈ ಹೆಸರುಗಳ ಅರ್ಥಪ್ರಸ್ತುತತೆಯನ್ನು ಕಂಡುಕೊಳ್ಳಬಹುದು. ಕಣ್ಣೆದುರಿಗೆ ತಾನು ಕಂಡದ್ದನ್ನು ಕವಿಮನಸ್ಸು ಗ್ರಹಿಸಿ, ಅದನ್ನು ಕಲಾತ್ಮಕವಾಗಿ ಅಭಿವ್ಯಕ್ತಿಸುತ್ತದೆ. ಅದಕ್ಕೆ 'ಪ್ರತಿಭೆ' ಎಂಬ ಸಾಮರ್ಥ್ಯ ಬೇಕು. ಆ ಪ್ರತಿಭೆಯೇ ಸರಸ್ವತಿ. 'ನೀಂ ಸರ್ವಕ್ಕೆ ಸಾಕ್ಷಿ' ಮತ್ತು 'ಕಂಡುದನೆಮಗೆ ಗಾನಗೆಯ್' 'ಸರ್ವಪಾರದರ್ಶಿಕೆ' ಮೊದಲಾದ ಪ್ರಯೋಗಗಳನ್ನು ಈ ಹಿನ್ನೆಲೆಯಲ್ಲಿ ಗ್ರಹಿಸಬಹುದಾಗಿದೆ. ಇಲ್ಲಿ ಹಾಡುತ್ತಿರುವವಳು ವೀಣಾಸರಸ್ವತಿ; ಬರೆಯುತ್ತಿರುವವನು ಕವಿ. ಆದ್ದರಿಂದ ಸರಸ್ವತಿಯ ದರ್ಶನವೇ ಕವಿಯ ದರ್ಶನವೂ ಆಗಿರುತ್ತದೆ. ಇಂತಹುದೇ ಮತ್ತೊಂದು ಪ್ರಸಂಗ 'ರಯ್‌ಗೆ ಕರೆದೊಯ್, ಓ ಅಗ್ನಿ!' ಸಂಚಿಕೆಯ ಪ್ರಾರಂಭದಲ್ಲಿ ಬಂದಿದೆ.

ಕ್ರಾಂತದರ್ಶಿನಿ, ಈ ಜಗತ್‌ಕಾಂತಿಕರೆ, ಶಾಂತೆ,
ಭ್ರಾಂತಿಹರೆ, ಸುಚಿರೆ, ಸುಸ್ಥಿರೆ, ಪರಾತ್ಪರೆ, ವಾಣಿ,
ಓ ಪರಾತ್ಪರವಾಣಿ, ಮಿಡಿ ನಿನ್ನ ಬೀಣೆಯಂ;
ನುಡಿ ಮುಂದೆ ನಡೆದುದಂ, ನಿನಗೆ ಕಾಣ್ಬಂದದಿಂ[256]

ಕಾವ್ಯದ, ಸಾಹಿತ್ಯದ ಅರಿವಿನಿಂದ ನಮ್ಮ ಭ್ರಮೆಗಳು ಕಳೆದು, ಶಾಂತಿ ಲಭಿಸುತ್ತದೆ; ಜಗತ್ತನ್ನು ನೋಡುವ ದೃಷ್ಟಿಯೇ ಬದಲಾಗುತ್ತದೆ. ಆ ಹಿನ್ನೆಲೆಯಲ್ಲಿ 'ಭ್ರಾಂತಿಹರೆ' 'ಶಾಂತೆ' 'ಜಗತ್‌ಕಾಂತಿಕರೆ' ಎಂಬ ವಿಶೇಷಣಗಳು ಗಮನಸೆಳೆಯುತ್ತವೆ.

'ಇರ್ದುದು ಮಹೇಂದ್ರಾಚಲಂ' 'ರಾಮಾಯಣದರ್ಶನಂ'ನಲ್ಲಿ ಒಂದು ಪ್ರಮುಖ ಘಟ್ಟ. ಸೀತಾನ್ವೇಷಣೆಗಾಗಿ ದಿಕ್ಕು ದಿಕ್ಕಿಗೆ ಸುಗ್ರೀವನಾಜ್ಞೆ ಹೊತ್ತು ಹೋಗಿದ್ದ ಕಪಿಸೈನ್ಯದ ಕಾರ್ಯಫಲವನ್ನು

---

255. ಅದೇ, ಲಂಕೇಶನೊಲಿಸಿದನು ಮಾರೀಚನಂ, ಸಾಲುಗಳು: 1–6
256. ಅದೇ, ರಯ್‌ಗೆ ಕರೆದೊಯ್, ಓ ಅಗ್ನಿ!, ಸಾಲುಗಳು: 1–5

ಅರಿತು ಮುಂದಿನ ಸಿದ್ಧತೆಗೆ ತೊಡಗುವ ಸಮಯ. ಕಪಿಸೈನ್ಯದ ಹಲವು ಗುಂಪುಗಳ ಕಾರ್ಯಸಾಹಸವನ್ನು ಅರಿಯಲು ಕವಿ ಆಶ್ರಯಿಸುವುದು ಮತ್ತೆ ವಿಪಂಚಿ ಅಂದರೆ ವೀಣೆಯನ್ನೆ!

ಓ, ಏಳ್, ವಿಪಂಚಿಯೆ, ಕಲಾಲತಾಂಗಿಯ ಬೆರಳ್
ತಳಿರ ಸೋಂಕಿನ ಸೊಮ್ಪು ಸಾಲ್ವುದೇನಿನ್ ನಿನಗೆ?
ಪ್ರಳಯ ಭೈರವ ಡಮರು ರೌರವಾವೇಶಮಂ
ಆಹ್ವಾನಗೆಯ್................ [257]

ಕಲಾಲತಾಂಗಿಯ ಬೆರಳೆಂಬ ತಳಿರಿನಿಂದ ವೀಣೆಯನ್ನು ಮೀಟಿ ಹೊಮ್ಮಿಸಿದ ನಾದ, ಮುಂದಿನ ಸಾಹಸದ ಕಥೆಯನ್ನು ಹೇಳಲಾರದು. ಸಾಹಸದ ಕಥೆಯಾದ್ದರಿಂದ ಡಮರು ರೌರವಾವೇಶವನ್ನು ಆಹ್ವಾನಗೆಯ್ಯುವಂತೆ ಪ್ರಾರ್ಥಿಸುತ್ತಾರೆ. ಮುಂದುವರೆದು,

ತಾಂಡವ ಶಿವನ ಕಯ್ಯ ಡಮರು ಆವೇಶಮಂ
ಆಹ್ವಾನಗೆಯ್! ಸಾಗರೋಪಮಂ ಗಾನಗೆಯ್
ಆಂಜನೇಯನ ಸಾಗರೋಲ್ಲಂಘನದ ಮಹಾ
ಸಾಹಸ ಕಥಾಸರಿತ್ಸಾಗರದ ಸಂಮಥನಮಂ![258]

ಆಂಜನೇಯನ ಸಾಗರೋಲ್ಲಂಘನದ ಸಾಹಸದ ಕಥೆಯಾದ್ದರಿಂದ ಶಿವನ ಡಮರಿನ ಆವೇಶ ಬೇಕೆಂಬುದು ಕವಿಯ ಆಶಯ. ನಿರಂತರವಾಗಿ ಹರಿದ ಕವಿಪ್ರತಿಭೆ ನಿಲುಗಡೆಯ ಬಯಸಿ, ನಿಂತು, ಮುಂದುವರೆಯುವುದಕ್ಕೆ ಮೊದಲು ಮತ್ತೆ ಮತ್ತೆ ಸರಸ್ವತಿಗೆ ಕಾವ್ಯಾವೇಶಕ್ಕಾಗಿ,

........ದರ್ಶನದೋರೆಮಗೆ,
ಓ ವಾಙ್ಮಯಿಯೆ, ನಿತ್ಯಸತ್ಯಂ ನಿಕ್ವಣಿಸುವೋಲ್
ವಚಸ್‌ತಂತ್ರಿ ಕವಿಯ ಚಿದ್ಯಂತ್ರಸಮ ಹೃದ್ವೀಣೆಯಿಂ![259]

ಎಂದು ಬೇಡುತ್ತದೆ. ಸರಸ್ವತಿಯ ಸತ್ಯವಾಣಿ ನಿತ್ಯವಾದುದು. ವಾಣಿಯ ವೀಣೆಯೊರೆದುದನೇ ಹಾಡುವ ಕವಿಯ ಹೃದಯ ವೀಣೆಯೂ ಅದನ್ನೇ ದನಿಗೈಯಬೇಕು. ಆ ದರ್ಶನವನ್ನೇ ಕವಿ ಬೇಡುತ್ತಾನೆ. ಹೀಗೆ ಘಟನೆಯಿಂದ ಘಟನೆಗೆ ಹೊರಳುವ ಮೊದಲು, ಸರಸ್ವತಿಯ ಸ್ತುತಿಯನ್ನು ಪರಿಣಾಮಕಾರಿಯಾಗಿ 'ತಪಸ್ಸಿದ್ಧಿ' ಎಂಬ ಸಂಚಿಕೆಯ ಪ್ರಾರಂಭದಲ್ಲಿ ಬಳಸಿಕೊಳ್ಳಲಾಗಿದೆ. ಲಂಕೆಯಲ್ಲಿನ ಯುದ್ಧ, ಯುದ್ಧಾನಂತರದ ಕಾರ್ಯಭರಗಳ ವರ್ಣನೆಯಲ್ಲಿ ಮುಳುಗಿಹೋಗಿದ್ದ ಕವಿಗೆ, ಒಮ್ಮೆಲೆ ಅಯೋಧ್ಯೆಯ ನೆನಪಾಗುತ್ತದೆ. ಆಗ ವಾಗ್ದೇವಿಯನ್ನೇ ಪ್ರಾಥಿಸುತ್ತಾರೆ.

ಸಾಲದೇನಿನಿತೆ ಸೂಚನೆ ನಿನಗೆ, ಓ ವಾಣಿ,
ವಾಗ್ದೇವಿ? ಯಾಚಿಸುವೆ ಕೈಮುಗಿದು. ಪಿಂತಿರುಗು;

---

257. ಅದೇ, ಇರ್ದುದು ಮಹೇಂದ್ರಾಚಲಂ, ಸಾಲುಗಳು: 1–4

258. ಅದೇ, ಸಾಲುಗಳು: 26–28

259. ಅದೇ, ಕನಕಲಂಕಾನ್ವೇಷಣಂ, ಸಾಲುಗಳು: 10–12

ಬಾ, ತಾಯಿ; ಸಾಲ್ಗಮಾ ಲಂಕೆ, ...

....

ತೋರೆಮಗೆಂತು ಸುವ್ರತನ್ ಭರತದೇವಂ?

....

ಹಾಡಿ ತೋರೆಮಗೆ, ಓ ತಾಯೆ, ಹೇ

ವಾಗ್ದೇವಿ![260]

ಈ ರೀತಿಯ ಕಾವ್ಯತಂತ್ರದ ಭಾಗವಾಗಿ 'ಶ್ರೀರಾಮಾಯಣದರ್ಶನಂ' ಮಹಾಕಾವ್ಯದಲ್ಲಿ ಸರಸ್ವತಿಯ ಸ್ತುತಿ ಮತ್ತೆ ಮತ್ತೆ ಬಳಕೆಯಾಗಿದೆ.

ಏನು ಮೌನವಿದೆನ್ನ ಕೋಮಲೆ? ಕೋಪವೆ ನಿನಗೆ
ಕಾಮಿಸಿದನಿನಿಯನೆಂದನ್ಯ ವಿಷಯ ವಧೂ
ಸರೋಜ ಶಾರದೆಗೆ? ತಂಗೆಗೆ ಕರುಬುವರೆ, ಪೇಳ್,
ಉದಾತ್ತೆ ನೀಂ? ರೂಪಕ ರೂಪಿಯಾದೊಡೇನಾ
ಪ್ರೇಮಮುಂ ರಾಮ ಮಹಿಮಾ ಕೀರ್ತಿ ಕಥೆಯಲ್ತೆ?
ಕವಿಯೊಲ್ಮೆ ಕಡಲಲ್ತೆ? ಬಡಬ ಕುಂಭೋದ್ಭವರ್
ಕುಡಿದು ಪೂರೈಸುವರೆ? ನಿನಗೆ ರಸಮಿರದವೋಲ್
ಪೀರ್ವಳೆಂತೊರ್ವಳ್ ಕೃಶಾಂಗಿ ತಾನದನ್? ಏಳ್
ಮುನಿಸುನುಳಿ; ಏಳ್, ಕೊಳ್ ಸಹಸ್ರತಂತ್ರಿಯ ನಿನ್ನ
ಗೀರ್ವಾಣ ವೀಣೆಯಂ; ಪೇಳ್, ಮೀಂಟು ಮುಂದಣ ಕಥಾ
ಹರಜಟಾ ಜೂಟಪ್ರಪಾತ ಗಂಗಾ ಸ್ತೋತ್ರಮಂ
ಸಂಗೀತಮಂ![261]

ಸರಸ್ವತಿಯ ಸ್ತುತಿ ಕಾವ್ಯತಂತ್ರವಾಗಿ ಬಳಕೆಯಾಗಿರುವುದಕ್ಕೆ ಒಂದು ಉತ್ತಮ ಉದಾಹರಣೆ ಮೇಲಿನ ಭಾಗ. ಕವಿಪ್ರತಿಭೆ ಅಲೌಕಿಕವಾದರೂ, ಕವಿ ಲೌಕಿಕನೇ! ಕಾವ್ಯ ರಚನೆ ನಿಂತು, ಮತ್ತೆ ಪ್ರಾರಂಭವಾಗಬೇಕಾದಾಗ, ಸರಸ್ವತಿಯನ್ನು ರಮಿಸಿ, ನಮಿಸಿ ಮುಂದುವರೆಯುವ ಸುಂದರ ಚಿತ್ರಣ ಇದಾಗಿದೆ. ಇನಿಯನಾದ ಬ್ರಹ್ಮನೇನಾದರೂ ಅನ್ಯ ವಿಷಯ ವಧೂ ಸರೋಜೆಗೆ ಒಲಿದನೆಂದು ಕೋಪವೆ? ಅದೂ ಒಂದು ಮಹಿಮೆಯಲ್ಲವೆ. ಉದಾತ್ತೆಯಾದ ನೀನು ತಂಗೆಗೆ ಕರುಬುವುದೆ? ಸೃಷ್ಟಿಕರ್ತನೊಲ್ಮೆ ಕಡಲಂತೆ. ಅದನ್ನು ಕೃಶಾಂಗಿಯಾದ ನಿನ್ನ ತಂಗೆಯೊಬ್ಬಳು ಎಷ್ಟೆಂದು ಕುಡಿಯಬಲ್ಲಳು? ಕೋಪವನ್ನು ಬಿಡು ಎಂದು ಸಂತೈಸಿ, ರಮಿಸಿ, ವೀಣೆಯನ್ನು ಹಿಡಿದು ಮುಂದಿನ ಕಥೆಯನ್ನು ನುಡಿಸುವಂತೆ ಪ್ರಾರ್ಥಿಸುತ್ತಾರೆ.

ಒಳ್ಳೆಯ ಸಾಹಿತ್ಯದಲ್ಲಿ, ಪಾತ್ರಕ್ಕೆ ಒಂದು ಹೆಸರನ್ನಿಟ್ಟರೆ ಕವಿಯ ಕೆಲಸ ಮುಗಿದಂತೆ; ಆ ಪಾತ್ರಗಳು ತಮ್ಮ ಬದುಕನ್ನು ತಾವೇ ಕಟ್ಟಿಕೊಳ್ಳುತ್ತವೆ. ಅಷ್ಟರ ಮಟ್ಟಿಗೆ ಕವಿ ನಿರ್ಲಿಪ್ತನಾಗಿರಬೇಕು. ಹಾಗೇ,

260. ಅದೇ, ತಪಸ್ಸಿದ್ಧಿ, ಸಾಲುಗಳು: 15–25

261. ಅದೇ, ಸೈನ್ಯಗುಪ್ತಿ, ಸಾಲುಗಳು: 1–12

ತನ್ನದೇ ಕಾವ್ಯದ ಪಾತ್ರವೊಂದು ಏನೋ ಗಹನವಾದ, ರಹಸ್ಯವಾದ (ಬೇರೆ ಪಾತ್ರಗಳಿಗೆ ತಿಳಿಯದಂತೆ) ಕಾರ್ಯವೊಂದನ್ನು ಎಸಗುತ್ತಿರುತ್ತದೆ. ಆಗ ಸ್ವತಃ ಕವಿಯೇ ಅಚ್ಚರಿಪಡುತ್ತಾನೆ. ಅದೇನೆಂದು ತನ್ನ ಸ್ಫೂರ್ತಿಯ ಸೆಲೆಯಾದ, ತನಗೆ ಕಾವ್ಯವನ್ನು ಹೇಳಿ ಬರೆಸುತ್ತಿರುವ ವಾಗ್ದೇವಿಯ ಮೊರೆಹೋಗುತ್ತಾನೆ. ಸಂದರ್ಭಕ್ಕನುಗುಣವಾದ ವಿಶೇಷಣಗಳೊಂದಿಗೆ, ಅಂತಹದೊಂದು ಸನ್ನಿವೇಶ 'ದಶಾನನ ಸ್ವಪ್ನಸಿದ್ಧಿ' ಸಂಚಿಕೆಯ ಆರಂಭದಲ್ಲಿ ಬಂದಿದೆ.

> **ಪೇಳ್ ತಾಯೆ**
> **ಓ ವಾಗಧಿಷ್ಠಾತ್ರಿ, ತೊಡಗಿಹನದೇನಂ**
> **ಮಹತ್ ಪೂಜೆಯಂ ಶರ್ವಮಂದಿರದೊಳೇಕಾಂಗಿ?**
> **ಜ್ಞಾನಾಧಿದೇವಿ ನೀಂ, ಮೇಣ್ ವಿಜ್ಞಾನ ನೇತ್ರಿ:**
> **ಹೊರನನ್ನಿಯೊಂದಲ್ಲದಂತಶ್ಚಕ್ಷು ತಾಂ ಕಾಣ್ಬ**
> **ಲೌಕಿಕಾತೀತಮಹ ನಿತ್ಯಸತ್ಯಂಗಳಂ**
> **ತೋರೆನಗೆ, ದೇವಿ, ವಿಶ್ವಾಂತರಾತ್ಮೆ! ಸ್ಥೂಲಮಂ**
> **ಸೂಕ್ಷ್ಮಮಂ, ಕೋಶಕೋಶಗಳಿತರ ಕಾಲಮಂ**
> **ದೇಶಮಂ, ಕಾರಣವನಂತೆ ಕಾರಣದಾಚೆ**
> **ಲೀಲಾ ಮಹೋದ್ದೇಶ[illegible] ನೀಂ: ಕವಿಗೆ**
> **ಕೃಪೆಗೆಯ್, ಅವಿದ್ಯೆ, ಹೇ ವಿದ್ಯೆ, ವಿದ್ಯಾತೀತೆ!**[262]

ಸರಸ್ವತಿಯು ಜ್ಞಾನದೇವಿ, ವಿಜ್ಞಾನ ನೇತ್ರಿ, ವಿಶ್ವಾಂತರಾತ್ಮೆಯಾದ್ದರಿಂದ ಕಾಲ, ದೇಶ, ಕಾರಣ, ಕಾರಣದಾಚೆಗಿನ ಲೀಲಾ, ಉದ್ದೇಶ ಇವೆಲ್ಲವನ್ನೂ ತೋರಿಸಬಲ್ಲಳು. 'ಅವಿದ್ಯೆ, ವಿದ್ಯೆ ವಿದ್ಯಾತೀತೆ' ಎಂಬ ಮಾತಂತೂ ಸರಸ್ವತಿಯ ಅಲೌಕಿಕ ಪ್ರತಿಮೆಗೆ ತೊಡಿಸಿದ ನುಡಿಯಾಭರಣವಾಗಿದೆ.

ಕುವೆಂಪು ಅವರ ಸರಸ್ವತಿಯ ವಿರಾಡ್‌ದರ್ಶನವಾಗುವುದು, ಋತಚಿತ್ ಸ್ವರೂಪಿಣಿಯರಾದ ಶಿವೆ, ಸರಸ್ವತಿ ಮತ್ತು ಲಕ್ಷ್ಮಿಯರನ್ನು ವಂದಿಸಿ ಪ್ರಾರಂಭಿಸುವ 'ಅಭಿಷೇಕ ವಿರಾಡ್‌ದರ್ಶನ'ವೆಂಬ ಕೊನೆಯ ಸಂಚಿಕೆಯಲ್ಲಿ. ಶ್ರೀರಾಮ ಪಟ್ಟಾಭಿಷೇಕದ ವಿಶ್ವರೂಪವನ್ನು ತೋರಿಸಲ್ ಸ್ವತಃ **'ಅನಾದಿಕವಿ'**ಯೇ ಬರುತ್ತಾನೆ. ಇದುವರೆಗೂ **'ನೀನೊರೆದುದನು ನಾನು ಬರೆವೆನು'** ಎನ್ನುತ್ತಿದ್ದ ಕವಿ, ಆ ಸೃಷ್ಟಿಪ್ರಜ್ಞೆಗೆ **'ಅನಾದಿಕವಿ'** ಎಂಬ ವಿಶೇಷಣವನ್ನು ಇಲ್ಲಿ ತಂದಿದ್ದಾರೆ. ಪುಲ್ಲಿಂಗವಾಚಿಯಾದರೂ, 'ಅನಾದಿಕವಿ' ಕಲ್ಪನೆ ಸರಸ್ವತೀ ತತ್ವದ ವಿಸ್ತೃತ ರೂಪವೇ ಆಗಿದೆ. 'ನೀನಾರು?' ಎಂದ ಕವಿಗೆ,

> **ಅನಾದಿಕವಿ ನಾಂ ಕಣಾ! ವಾಲ್ಮೀಕಿ**
> **ವ್ಯಾಸ ಹೋಮರ್ ದಾಂತೆ ಫಿರ್ದೂಸಿ ಮಿಲ್ಟನ್**
> **ಮಹಾಕವೀಶ್ವರರೆನಗೆ ಬಾಹುಮಾತ್ರಗಳಲ್ತೆ?**
> **ಬಹುನಾಮರೂಪಗಳ್, ಬಹು ಕಾಲದೇಶಗಳ್**
> **ನನಗೆ. ನೀನುಂ ನಾನೆಯೆ, ಕುವೆಂಪು!**[263]

---

262. ಅದೇ, ದಶಾನನ ಸ್ವಪ್ನಸಿದ್ಧಿ, ಸಾಲುಗಳು: 5–15

ಇಲ್ಲಿ ವ್ಯಕ್ತವಾಗುವ ಸರಸ್ವತಿ ಸ್ವರೂಪ ಕಾಲದೇಶಗಳನ್ನು ಮೀರಿದ್ದು. ಕಾವ್ಯದುದ್ದಕ್ಕೂ, ಸರಸ್ವತಿ ಮತ್ತು ಸರಸ್ವತಿಯ ವೀಣೆಯನ್ನು ಕಾವ್ಯಾವೇಶಕ್ಕಾಗಿ ಬೇಡಿದ ಕವಿಪ್ರತಿಭೆ, ಎಲ್ಲ ಕವಿಗಳಿಗೂ ಮಾತೃರೂಪವಾದ ಪ್ರತಿಭಾಸ್ವರೂಪವನ್ನು ಸರಸ್ವತಿಗೆ ನಿರ್ಮಿಸಿದೆ. ಈ ಸರಸ್ವತಿಯು ಸರ್ವಭಾಷಾಮಯೀ ಮಾತ್ರವಲ್ಲ. ವಿಶ್ವಮಾತೆಯೂ ಹೌದು. ಕಾವ್ಯಾರಂಭದಲ್ಲಿ ಬಂದ 'ವಿಶ್ವವಾಣಿ'[264] ಎಂಬ ಒಂದು ಮಾತು, ವೇದವಾಗುವುದು ಈ ಕೊನೆಯ ಸಂಚಿಕೆಯಲ್ಲಿ. ಸರಸ್ವತಿಯು ನುಡಿಸಿದ್ದನ್ನಷ್ಟೇ ಸರಸ್ವತಿಯ ಬಾಹುರೂಪರಾದ ಕವಿಗಳು ಬರೆಯುವುದು. ಆದ್ದರಿಂದ ಕಾವ್ಯವೆಂಬುದು ಸರಸ್ವತಿಯ ಕೃತಿ, ಭಗವಂತನ ಅವತಾರವಾಗುತ್ತದೆ. 'ಕೃತಿರೂಪದಿಂದಲೂ ಭಗವಂತನ ಅವತಾರವಾಗುತ್ತದೆ' ಎಂಬ ಮಾತಿಗೆ ಅನುಗುಣವಾಗಿಯೇ, ಕವಿ ತಾನು ಬರೆದ 'ಕೃತಿಸರಸ್ವತಿ'ಗೆ ತಾನೇ ಮಣಿಯುತ್ತಾನೆ.

'ವೀಣಾ ವಿಶಾರದೆಗೆ' ಎಂಬ ಈ ನಾಲ್ಕು ಸಾಲಿನ ಕವಿತೆ ಸೂಚಿಸುವಂತೆ ಕವಿಗೆ,

ಗಾನಮಧು ತುಂಬಿ ಸಿಡಿಯುವ ತಂತಿ ಮಿಡಿಯಲ್ಕೆ
ಹಾತೊರೆವ ವಲ್ಲಕೀ ವಧುವಿನಂತೆ
ನೀನೆಸೆವುದನು ನೋಡಿ ಕಾತರಿಪ ಕವಿಯೆನಗೆ
ವೈಣಿಕನದಾರೆಂಬುದೊಂದೆ ಚಿಂತೆ![265]

ಕವಿಗೆ ತನ್ನ ಕೈಹಿಡಿದು ಬರೆಸುವ ಶಕ್ತಿಯ ಬಗ್ಗೆ ತಿಳಿಯುವ ಕಾತರ. ಆ ಕಾತರವೇ ಸರಸ್ವತಿಯನ್ನು ಇಷ್ಟೊಂದು ವಿಭಿನ್ನ ನೆಲೆಯಲ್ಲಿ ಕಾಣಲು ಸಾಧ್ಯವಾಗಿಸಿದೆ; ಗಾನಮಧು ತುಂಬಿ ಸಿಡಿಯುವಂತೆ ತಂತಿಯನ್ನು ಮಿಡಿಯುತ್ತಿರುವ ಆ ವೈಣಿಕನ ಹುಡುಕಾಟವೇ ಕುವೆಂಪು ಅವರಿಗೆ ಈ ಮಟ್ಟಿನ ಸರಸ್ವತಿಯ ದರ್ಶನವನ್ನು ಮಾಡಿಸಿದೆ ಎನ್ನಬಹುದು.

ಮಧುರಚೆನ್ನರ 'ಶಾರದೆಗೆ'[266] ಎಂಬ ಕವನದಲ್ಲಿ 'ಸರಸ್ವತಿಯ ವಿಶ್ವವ್ಯಾಪಕ ಶಕ್ತಿ, ಮಂತ್ರಸ್ವರೂಪ, ಅಮೂರ್ತವನ್ನು ಮೂರ್ತಗೊಳಿಸುವ ಸಾಮರ್ಥ್ಯ, ತೇಜಸ್ಸು ಮುಂತಾದವನ್ನು ಸೊಗಸಾಗಿ ಬಣ್ಣಿಸಲಾಗಿದೆ.

ಮೂಡಲದ ಮಾನವರ ಜೀವನದ ಝುರಿಯಾಗಿ,
ನಾಡೆ ಪಡುವಲರಾದಿ ನಾದವೇದವನೂದಿ
ಮೂಡಪಡುವಲ ನಡುವೆ ಮಂಡಿಸಿದ ಮಾದೇವಿ
ಶ್ರೀಸರಸ್ವತಿಯೆ ಶರಣು

---

263. ಅದೇ, ಅಭಿಷೇಕ ವಿರಾಡ್‌ದರ್ಶನಂ, ಸಾಲುಗಳು: 34-38

264. ಶ್ರೀರಾಮಾಯಣ ದರ್ಶನಂ, 'ಶ್ರೀ ವೆಂಕಣ್ಣಯ್ಯನವರಿಗೆ' ಸಾಲುಗಳು: 16

265. ಕುವೆಂಪು ಸಮಗ್ರಕಾವ್ಯ ಸಂಪುಟ -2, ಪು.271

266. ಮುಗಳಿ ರಂ.ಶ್ರೀ: ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ. ಪು.57 (ಉದ್ಧೃತ)

ಸರಸ್ವತಿಯು ಭಾರತೀಯರ ಜೀವನದ ಝುರಿ ಎಂಬ ಮಾತು ಸರಸ್ವತಿಯ ಸಾರ್ವಕಾಲಿತೆಯನ್ನು ಪ್ರಕಟಪಡಿಸಿದರೆ, ಪಡುವಲರಾದಿ ನಾದವೇದವನೂದಿ ಎಂಬ ಮಾತು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ತನ್ನ ಪ್ರಭಾವವನ್ನು ಬೀರಿದ ವೇದಗಳ ಅಂದರೆ ಸರಸ್ವತಿಯ ಮಹತ್ವವನ್ನು ಮನಗಾಣಿಸುತ್ತದೆ. ಮೂಡಪಡುವಲ ನಡುವೆ ಮಂಡಿಸಿದ ಸರಸ್ವತಿಯ ವಿಶ್ವವ್ಯಾಪಕತ್ವವನ್ನು, ಸಾಮರ್ಥ್ಯವನ್ನು ಅರಿಯಲು ಇದಕ್ಕಿಂತ ಬೇರೆ ನುಡಿಗಳು ಬೇಕೆ? **'ಮುಗಿಲಲ್ಲಿ ಮುತ್ತುಗಳ ಮೂಡಿಸುವ ಮಂತ್ರವೇ'**, ಮತ್ತು **'ಬಯಲಬಣ್ಣಿಸುವ ಬಲುಹುಳ್ಳ ಭಾರತಿಯೇ'** ಎಂಬ ಸಾಲುಗಳಂತೂ ಸರ್ವಲೋಕ ಮತ್ತು ಸರ್ವಭಾಷಾಮಯೀ ಸರಸ್ವತಿಗೆ ಕಟ್ಟಿದ ನುಡಿತೋರಣವಾಗಿವೆ.

ತೀನಂಶ್ರೀ ಅವರ 'ಪ್ರತಿಭೆ'[267] ಎಂಬ ಕವನ, ಕವಿತಾಶಕ್ತಿಯನ್ನು ದಯಪಾಲಿಸುವವರಾರು ಎಂಬ ಚಕಿತತೆ, ಪ್ರತಿಭೆಯ ಮಾಯಾವತರಣ ಮತ್ತು ಶಕ್ತಿ ಇವುಗಳ ಮೂಲಕ ಅತ್ಯಂತ ಸರಳವಾಗಿ ಸರಸ್ವತಿಯ ಮಹತ್ವವನ್ನು ಮನಗಾಣಿಸುತ್ತದೆ.

ಕರಿಯ ಮುಗಿಲಿನಿದಿರನಲ್ಲಿ
ಮಿಂಚುಬಳ್ಳಿ ಹೊಳೆಯುವಂತೆ
ನನ್ನ ಮುಂದೆ ಸುಳಿವೆ, ರಮಣಿ
ನೀನು ಯಾರಲೌ?
ಕಣ್ಣು ಮಿಡುಕಿಸುವುದರಲ್ಲೆ
ಮಿಂಚು ಥಟ್ಟನಳಿಯುವಂತೆ
ಒಂದೆ ನಿಮಿಷ ಕುಣಿದದೇಕೆ
ಮಾಯವಾಗುವೆ?
ಇಳೆಯೆ ಮೋಹಗೊಳ್ಳುವಂತೆ
ಹೂವಿನೊಳಗೆ ಕಂಪನಿಡುವ
ದಿವ್ಯಶಕ್ತಿಯೊಂದು ಕಿಡಿಯೊ,
ನಿಜದ ದೇವಿಯೋ?
ದೇವಿ, ನೀನು ದಯವ ತೋರಿ
ಕವಿಯನೊಪ್ಪಿ ಬಂದರವನ
ಕವನದಲ್ಲಿ ಜೀವಕಳೆಯು ಸೂಸಿ ಹರಿವುದು
....
ಮಾತಿನಲ್ಲಿ ಭಾವವೆಲ್ಲ ಹೊಂದಿ ಮೆರೆವುದು

ಸರಸ್ವತಿಯ ದರ್ಶನವಿದ್ದರಷ್ಟೇ ಕವಿ, ಕವಿತೆ ಎಲ್ಲಕ್ಕೂ ಅರ್ಥ; ಇಲ್ಲದಿದ್ದರೆ ಅದು ವಾಗರ್ಥಗಳ ಸರಕು. ಕವನದಲ್ಲಿ ಜೀವಕಳೆ ಸೂಸಿ ಹರಿಯಬೇಕಿದ್ದರೆ, ಕವಿಗೆ ಪ್ರತಿಭೆ ಅಂದರೆ ಸರಸ್ವತಿಯ ದಯೆ ಬೇಕು ಎನ್ನುವುದು ತೀನಂಶ್ರೀಯವರ ಆಶಯ.

---

267. ತೀನಂಶ್ರೀ ಸಮಗ್ರ ಕವಿತೆಗಳು, ಪು.22-23

ವಿ.ಸೀ.ಯವರ 'ಕಾವ್ಯದೇವಿಗೆ'[268] ಕವನವು ಸರಸ್ವತಿಯ ಅವತಾರಕ್ಕೆ ಹಿಡಿದ ಕನ್ನಡಿಯಂತಿದೆ. ಬರೆಯುವ ಕಾವ್ಯಕ್ಕಿಂತ, ಬರೆಸಿಕೊಳ್ಳುವ ಕಾವ್ಯ ಮೇಲು. ಹಾಗೆ ಬರೆಸಿಕೊಳ್ಳುವ ಕಾವ್ಯದ ಸೃಷ್ಟಿಗೆ, ಪ್ರತಿಭೆ ಮತ್ತು ಸಮಯಗಳ ಸಂಗಮವಾಗಬೇಕು.

ಬಂದಾಗ ನೀ ಬರುವೆ, ಹೋದಾಗ ಹೋಗುವೆ
ನಿನ್ನ ಮೇಲಧಿಕಾರವಿಲ್ಲವೆನಗೆ
ನಿನ್ನ ಕೃಪೆ ನಡೆವಾಗ ಜ್ಯೋತಿಯಂತೆ
ಮುಸುಕಿ ಅಂಜಿಸುತ್ತಿದ್ದ ತಿಮಿರ ಕರಗಿ
ಬೆಳ್ಳುರಿಯ ಜ್ವಾಲೆಯಲ್ಲಿ ಸತ್ಯವುರಿವುದು
ನಿನ್ನ ಉಜ್ವಲವಾಣಿ ಘೋಷಿಸುವುದು
ನಿನ್ನಿಚ್ಛೆ ಬಂದಾಗ ಶಾಂತಿ ತರುವೆ
ದಿವ್ಯಗಾನವನೂದಿ ಸಂತೈಸುವೆ

ಎನ್ನುವುದು ಸರಸ್ವತಿಯ ಅವತಾರವನ್ನು, ಸ್ವತಃ ಸರಸ್ವತಿಸುತರಾದ ಕವಿಗಳೂ ನಿಯಂತ್ರಿಸಲಾರರು ಎಂಬುದನ್ನು ಮನಗಾಣಿಸುತ್ತದೆ.

ಆದರೇಂ, ನಾ ನಿನ್ನ ನಿಲಿ[illegible]ಾರೆ,
ನಿನ್ನಾಟ ಕಾಟಗಳ ತಡೆಯಲಾರೆ
ನಿನ್ನಾಜ್ಞೆ ಮುಂದಿಳಿದು ನಡೆಸಲಾರೆ,
ಶರಣು ದೇವೀ ಶರಣು, ರಾಣಿ ನೀನು

ಎಲ್ಲವನ್ನು ಗ್ರಹಿಸಿದ ಮನಸ್ಸು ಅಭಿವ್ಯಕ್ತಿಗೆ ತಹತಹಿಸುತ್ತದೆ. ಏನೋ ಹೊಳೆಯುತ್ತದೆ; ಆದರೆ ರೂಪಗೊಳ್ಳುವುದಿಲ್ಲ. ಹಾಗೆ ಹೊಳೆದದ್ದನ್ನು ಹಿಡಿದು ನಿಲ್ಲಿಸಲೂ ಆಗುವುದಿಲ್ಲ. ಪ್ರತಿಭೆ, ಆ 'ಅಮೃತಗಳಿಗೆ'ಗಾಗಿ ಮಾತ್ರ ಸರಸ್ವತಿಗೆ ಶರಣಾಗಲೇ ಬೇಕಾಗುತ್ತದೆ.

ವಿನೀತ ಎಂಬುವವರ ವಾರ್ಧಕ ಷಟ್ಪದಿಯಲ್ಲಿರುವ, 'ಪ್ರತಿಭೆಗೆ'[269] ಎಂಬ ಕವನದ ಸರಸ್ವತಿಯ ಕುರಿತಾದ ಒಂದು ಪದ್ಯ ಹೀಗಿದೆ.

ಅಕ್ಷರರ ಮುನ್ನ ನೀನಿದ್ದೆಯೌ ಮಾಮಾಯೆ
ಅಕ್ಷಯ್ಯಮಾಗಿರ್ದ ನಕ್ಷತ್ರ ರಾಶಿಗಳ
ಅಕ್ಷರಗಳಂ ಬರೆದ ಪ್ರಭುಸಂಮಿತದ ಪ್ರಭೆಯೆ! ಪ್ರತಿಭೆಯೇ ಪಾಹಿ ಪಾಹಿ!
ಅಕ್ಷಿಯಗಲದಿ ನೀನು ವಿಶ್ವವಂ ನೋಡಿದಡೆ
ಲಕ್ಷಗಟ್ಟಲೆ ಕಣ್ಣುಗಳು ಮೂಡಿ ನೋಡುವವು!
ಲಕ್ಷುಮಿಯೆ! ರಸರಾಜ್ಯಸಾಮ್ರಾಜ್ಞಿ ಸಾವಿತ್ರಿ ಗಾಯಿತ್ರಿಯಲ್ಲೆ ನೀನು?

ಅಕ್ಷಯವಾಗಿರುವ ನಕ್ಷತ್ರಗಳ ಹಾಗೆಯೇ 'ಕ್ಷಯಂ ಅಣುಂ' ಇಲ್ಲದ ಸರಸ್ವತಿಯ ಪ್ರತಿರೂಪಗಳಾದ ಅಕ್ಷರಗಳನ್ನುಳ್ಳ ಮಾಮಾಯೆಗೆ, ಪ್ರತಿಭೆಗೆ ನಮಸ್ಕರಿಸುತ್ತಿದ್ದಾರೆ. ಅಕ್ಷರಗಳನ್ನು ಯಾರು

---

268. ವಿ.ಸೀ.: ಸ್ನೇಹ–ವಿಶ್ವಾಸ, ಸಮಗ್ರ ಕಾವ್ಯ ಸಂಪುಟ, ಪು.175–76

269. ಮುಗಳಿ ರಂ.ಶ್ರೀ : ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ. ಪು.74 (ಉದ್ಧೃತ); ವಿನೀತ ಎಂಬುವವರ 'ಕಳೆದ ಪುಟಗಳು' ಸಂಗ್ರಹದ ಕವಿತೆ ಇದೆಂದು ಹೇಳಲಾಗಿದೆ. ಪೂರ್ಣ ಪಾಠ ಲಭ್ಯವಾಗಿಲ್ಲ.

ಕಂಡು ಹಿಡಿದರೋ ತಿಳಿಯದು. ಆದರೆ ಅಂತಹ ಪ್ರತಿಭೆಯನ್ನು ಸರಸ್ವತಿಯೆಂದು ಗುರುತಿಸಿ ಪಾಹಿ ಎನ್ನುವುದು ಈ ಕವಿಯ ದೊಡ್ಡಗುಣ. ವಿಶಾಲವಾದ ಕಣ್ಣುಗಳಿಂದ ವಿಶ್ವವನ್ನು ಸರಸ್ವತಿಯು ನೋಡಿದರೆ ಲಕ್ಷಗಟ್ಟಲೆ ಕಣ್ಣುಗಳು ಮೂಡಿ ನೋಡುತ್ತವೆ ಅನ್ನುವ ಮಾತು ಸರಸ್ವತಿಯ ದರ್ಶನದ ಮಹತ್ವವನ್ನು ಮನಗಾಣಿಸುತ್ತದೆ. ಸಾಹಿತ್ಯದ ಅಂತಿಮ ಗುರಿಯಾದ ರಸಕ್ಕೆ, ಮತ್ತು ಆ ರಸ ಎನ್ನುವ ಸಾಮ್ರಾಜ್ಯಕ್ಕೆ ಸರಸ್ವತಿಯೇ ಸಾಮ್ರಾಜ್ಞಿ ಎನ್ನುವ ಕಲ್ಪನೆ ನವೀನವಾಗಿದೆ. ಸಾವಿತ್ರಿ ಮತ್ತು ಗಾಯಿತ್ರಿ ವೇದಗಳಲ್ಲಿ ಸರಸ್ವತಿಗಿಂತ ಬೇರೆಯದೇ ಆದ ದೇವತೆಗಳಾದರೂ ನಂತರದ ಪೌರಾಣಿಕ ಕಲ್ಪನೆಗಳಲ್ಲಿ 'ಮೂರೂ ಒಂದೇ' ಎಂಬ ಭಾವ ಬೆಳೆದಿದೆ. ಸಾವಿತ್ರಿ ಗಾಯಿತ್ರಿ ಅಲ್ಲವೇ ನೀನು ಎಂಬ ಮಾತನ್ನು ಆ ಹಿನ್ನೆಲೆಯಲ್ಲಿ ಗಮನಿಸಬೇಕು. ಮೇಲಿನ ಪದ್ಯದ 'ರಸಸಾಮ್ರಾಜ್ಞಿ ಸರಸ್ವತೀ' ಎಂಬ ಕಲ್ಪನೆಯ ವಿಸ್ತರಣೆ ಪುತಿನ ಅವರ 'ರಸಸರಸ್ವತಿ' ನೀಳ್ಗವಿತೆಯಲ್ಲಿ ಆಗಿದೆ ಎನ್ನಬಹುದು.

ಪು.ತಿ.ನ. ಅವರ 'ಬಾ ಕನ್ನಡ ನಾಡಿನ ವಾಣಿ'[270] ಎಂಬ ಕವಿತೆಯ,

''ಸಕಲ ಚೇತನಾರಾಧನ ದೈವವೆ,
ಓ ವಾಗಧಿದೇವಿ'

ಮತ್ತು

'ಓವೋ ಜನನೀ, ಆನಂದ ಸ್ತನ್ಯದಾಯಿನಿ,
ಆತ್ಮಪೋಷಿಣೀ, ಪಾರದರ್ಶಿನೀ,
ಓ ಶುಭಕರೇ, ಕಲ್ಯಾಣೀ
ದಯಗೈ ಕನ್ನಡ ವಾಣಿ'

ಎಂಬ ಸಾಲುಗಳು ಸರಸ್ವತಿಯನ್ನು ಕನ್ನಡನಾಡಸರಸ್ವತಿಯನ್ನಾಗಿಸಿವೆ. ಪುತಿನ ಅವರು ಶಾಲೆಯೊಂದರ ವಾರ್ಷಿಕೋತ್ಸವದ ಸಮಯದಲ್ಲಿ **'ಸವಿನೆನಪಿನ ಕಂಪಿಡಿದ ಈ ನುಡಿಯ ಹಾಸುವೆ ನಾ ವಾಣಿಗೆ ನಡೆಮುಡಿಯ'** ಎಂದು ತಮ್ಮ **'ವಿದ್ಯಾಲಯ'**[271] ಕವಿತೆಯಲ್ಲಿ ಸರಸ್ವತಿಗೆ ಸ್ವಾಗತವನ್ನು ಕೋರುತ್ತಾರೆ. ಮುಂದುವರೆದು, **'ನೆಲೆಯಾಗಲೀ ಸರಸತಿಗೀ ಶಾಲೆ, ಸುತರಿಡಲೀಕೆಗೆ ಸುಯಶೋಮಾಲೆ'** ಎಂದು ಸರಸ್ವತೀ ಸ್ವರೂಪಿಣಿಯಾದ ವಿದ್ಯಾಲಯಕ್ಕೆ ನುಡಿಹರಕೆಯನ್ನು ಕಟ್ಟುತ್ತಾರೆ. ಶಾಲೆಗಳು ಮತ್ತು ವಿಶ್ವವಿದ್ಯಾಲಯಗಳು ವಿದ್ಯಾದೇವತೆಯ ಆರಾಧನಾ ಕೇಂದ್ರಗಳು; ಹರಿಹರನ ಮಾತಿನಲ್ಲಿ ಹೇಳುವುದಾದರೆ 'ವಾಗ್ದೇವಿಯ ವಾಸಸ್ಥಾನ'.

ಹೊಸಗನ್ನಡ ಕವಿತೆಗಳಲ್ಲಿ ಸರಸ್ವತಿಯ ಬಗ್ಗೆಯೇ ರಚಿತವಾದ ಒಂದು ನೀಳ್ಗವಿತೆ ಪುತಿನ ಅವರ 'ರಸಸರಸ್ವತಿ'.[272] ರಸವನ್ನೇ ಸರಸ್ವತಿ ಎಂದು, ಸರ್ವರಸಗಳಿಗೆ ಸರಸ್ವತಿಯೇ ಅಧಿದೇವತೆ ಎಂದು ಪರಿಭಾವಿಸಿ ರಚಿಸಲಾದ ಕವಿತೆ. **'ರಸಸರಸ್ವತಿ ಸರಸ್ವತಿಯನ್ನು ಕುರಿತು ಬರೆಯಲಾದ ಹೊಸಕವನಗಳಲ್ಲಿ**

---

270. ಪು.ತಿ.ನ. ಸಮಗ್ರ ಕವನಗಳು, ಪು.183
271. ಅದೇ, ಪು.305-308
272. ಅದೇ, ಪು.309-313

ವಿಸ್ತಾರವೂ ಪ್ರಗಲ್ಭವೂ ಆದದ್ದು. ಅದರಲ್ಲಿ ಭಾವಪುಷ್ಟಿಯೊಡನೆ ಸೂಕ್ಷ್ಮಸಂಪನ್ನವಾದ ತತ್ವಪ್ರಖ್ಯೆಯಿದೆ, ಅಂತೇ ಸರಸ್ವತಿಯ ದರ್ಶನವಿದೆ. ಆದರೆ ಪದಗಳ ಕ್ಲಿಷ್ಟತೆಯಿಂದ ಸಂಸ್ಕೃತ ಜಡತೆಯಿಂದ ಅರ್ಥವೈಶದ್ಯಕ್ಕೆ ಅಲ್ಲಲ್ಲಿ ಬಾಧೆ ಬಂದಿದೆ'[273] ಎಂಬ ಅಭಿಪ್ರಾಯವೂ ಇದೆ.

ಭವದ ಮೇಲಿಂದೆದ್ದು ಭಾವದೊಳು ಸಂಚರಿಸಿ
ನುಡಿನುಡಿಯ ಕೇಂದ್ರದೊಳು ರೂಪಗೂಡಿ

ಮೇಲಿನ ಸಾಲುಗಳು ಸರಸ್ವತಿಯ ವಿಶ್ವವ್ಯಾಪಕತ್ವವನ್ನು ಹೇಳುತ್ತವೆ.

ನಡೆವೆಡೆಗೆ ನಡೆತರುವ ರವಿಯ ತೆರ
ರಾಮಾದಿ ಮರ್ತ್ಯರೆಮ್ಮನು ಜನ್ಮಜನ್ಮದೊಳಗೆ
ಆದ್ಯಬಂಧುಗಳಂತೆ ಸಮ್ಮುಖದೊಳಿರುವ ತೆರ

ಎಂಬ ಮಾತುಗಳು ಸಾಹಿತ್ಯ ಸರಸ್ವತಿಯ ಶಕ್ತಿಯನ್ನು, ಮಹತ್ವವನ್ನು ಕಟ್ಟಿಕೊಡುತ್ತವೆ. ಯುಗಧರ್ಮಕ್ಕನುಗುಣವಾಗಿ ಸರಸ್ವತಿಯ ಸ್ವರೂಪ ಬದಲಾಗುತ್ತಾ ಬಂದಿದೆ; ವಿಜ್ಞಾನಯುಗವಾದರೇನು? ಸರಸ್ವತಿಯು ಸರ್ವಪಾರದರ್ಶಿಕೆ ಎಂಬುದನ್ನು ಮುಂದಿನ ಸಾಲುಗಳು ಸಾಧಿಸುತ್ತವೆ.

ಪರಿಗಣನ ಮೌಲ್ಯದೀ ವಿಜ್ಞಾನಲೋಕದಿಂ
ಗುಣಮೌಲ್ಯದೊಳಜಗವ ನಿರ್ಮಿಸುವ ತಾಯೆ
ಮೃಣ್ಮಯ ಪ್ರಕೃತಯೀಂ ಮನೋವಿಕೃತಿಯ ರಚಿಸು
ತಾತ್ಮ ವಿಸ್ತಾರವನು ಕಲ್ಪಿಸುವ ಮಾಯೆ

ಜಗವ ನಿರ್ಮಿಸುವ ತಾಯಿ ಸರಸ್ವತಿ ಎಂಬ ಮಾತಂತೂ ಸಾಹಿತ್ಯಸರಸ್ವತಿಗೆ ಇರುವ ವಿಶ್ವವೈಶಾಲ್ಯವನ್ನು, ಸೃಷ್ಟಿಮಾತೆಯ ಸ್ವರೂಪವನ್ನು ಮನಗಾಣಿಸುತ್ತದೆ. ಸರಸ್ವತಿಯು ಕವಿಗಿಷ್ಟವಾದ ಸಪ್ನಸಿದ್ಧಿದಾಯಿಕೆ–

ರಸಸರಸ್ವತಿ, ದೇವಿ ಕವಿಯಿಷ್ಟಸ್ವಪ್ನವೇ
ಕವಿಯ ಹೃತ್ಕುಹರದಿಂ ರಸಿಕಜನ ಹೊರತೆಗೆವ ಭವರತ್ನವೇ,
ಒಳಹೊರಗೆ ಬೆರೆಸಿ ದಿಗ್‌ಭ್ರಮೆಗೊಳಿಸುವಪ್ಸರೇ,
ಇಂದ್ರಿಯ ಮನೋಬುದ್ಧಿ ಧರತಸತ್ಯ ಮತ್ಸರೇ,
ಈರೇಳು ಲೋಕಗಳ ಈ ಲೋಕದಿಂದೆತ್ತಿ ಪದಗೊಂಡ ವಿಕ್ರಮೇ
ತುಳಿಯುವೆಡೆ ಚೆಲುಚೆಲುವ ಕೊನರಿಸುತ ಜಗದೊಲವ ಕೊಳುವ ಹೃದಯಂಗಮೇ

ಸಾಹಿತ್ಯದ ಅಂತಿಮ ಗುರಿ ರಸಾಸ್ವಾದನೆ. ಅದನ್ನು ರಸಿಕಜನ ಭವರತ್ನವೋ ಎಂಬಂತೆ ಹೊರತೆಗೆಯಬೇಕಾಗುತ್ತದೆ. **'ಪರಿಣಿತಕವೀಂದ್ರವದನಾಜಿರದೊಳ್ ಮೃದುಪದವಿಲಾಸ ವಿನ್ಯಾಸಾಲಂಕರಣಂ ರಂಜಿಸೆ ನರ್ತಿಪ ಸರಸ್ವತೀಲಾಸ್ಯ ಭೇದಮಂ ಜಡನಜೆಯಂ'** ಎಂಬ ನಾಗಚಂದ್ರನ ಮಾತುಗಳಂತೆ ಸಾಹಿತ್ಯ ಸರಸ್ವತಿಯನ್ನು, ರಸಸರಸ್ವತಿಯನ್ನು ಜಡರರಿಯರು. ಆದರೆ ರಸಿಕಜನ ಅರಿಯಬಲ್ಲರು; ಭವರತ್ನವನ್ನು ಹೊರತೆಗೆಯಬಲ್ಲರು ಎಂಬುದು ಪುತಿನ ಅವರ ಆಶಯ. **'ತುಳಿಯುವೆಡೆ ಚೆಲುಚೆಲುವ ಕೊನರಿಸುವ'** ಸರಸ್ವತಿ, ಸೃಷ್ಟಿದೇವತೆಯೂ ಚೈತನ್ಯದಾಯಕಿಯೂ ಹೌದು. ಕವಿತೆಯ ಕೊನೆಯ ಭಾಗದಲ್ಲಿ,

---

273. ಮುಗಳಿ ರಂ.ಶ್ರೀ : ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ. ಪು.60

ನಿನ್ನ ದಯೆಯಿಂದೆನ್ನ ಮನಕಾಗಲೌ, ದೇವಿ
ಸತ್ಯ ಶಿವ ಸಂಜನಿತ ಸೌಂದರಮುದಾಗಮಂ
ನೀನೆಯುತ್ಸವಿಪಂತೆ ಪದಪದದಿ ನಡೆಯಲೌ
ವಸ್ತ್ವಾತ್ಮ ಮಧುರ ಸಮ್ಮಿಳನೋತ್ಸವಾಗಮಂ

ಎಂದು ಸಾರ್ವಕಾಲಿಕವಾದ ಸತ್ಯವನ್ನು ಸಾಹಿತ್ಯ ಸರಸ್ವತಿಯಿಂದ ಅಪೇಕ್ಷಿಸುತ್ತಾರೆ. ಸತ್ಯ, ಶಿವ, ಸೌಂದರ್ಯ ಇವು ಜೀವನದ ಮೂಲಭೂತ ಸತ್ಯಗಳು. ಇವುಗಳ ಸಮಗ್ರ ಅಭಿವ್ಯಕ್ತಿಯನ್ನು ಕವಿ ರಸಸರಸ್ವತಿಯಲ್ಲಿ ವರವಾಗಿ ಬೇಡುತ್ತಾರೆ. ಸತ್ಯ, ಶಿವ, ಸೌಂದರ್ಯ ಇವುಗಳನ್ನು 'ಪದಪದದಿ' ತೋರಿಸಬಲ್ಲದು ಸಾಹಿತ್ಯ. ಆ ಸಾಹಿತ್ಯಕ್ಕೆ ಅಧಿದೇವತೆ ಪುತಿನ ಅವರ 'ರಸಸರಸ್ವತಿ'.

ಸಮಯ ಕೂಡಿ ಬರುವವರೆಗೆ ಪ್ರತಿಭೆ ಚಡಪಡಿಸುತ್ತದೆ ಎಂಬುದಕ್ಕೆ ಜಿ.ಎಸ್.ಎಸ್. ಅವರ 'ಕವಿತೆಗೆ'[274] ಕವನದ ಕೊನೆಯ ನುಡಿಯನ್ನು ನೋಡಬಹುದಾಗಿದೆ.

ಬೇಡ ಬೇಡ ಬೇಡ ನನಗೆ
ನಿನ್ನ ಕೃಪೆಯ ಸಂಕಲೆ,
ಇನ್ನೇತಕೆ ನಿನ್ನ ಹಂಗು
ಕಾವ್ಯಸ್ಫೂರ್ತಿ ಚಂಚಲೆ

ಹಾಗೆ ಬಂದು ಹಾಗೆ ಹೋಗುವ ಕಾವ್ಯಸ್ಫೂರ್ತಿಯನ್ನು ಕಾವ್ಯ ಚಂಚಲೆ ಎಂದು ಕರೆದಿದ್ದಾರೆ. ಜಿ.ಎಸ್.ಎಸ್. ಅವರು 'ಸರಸ್ವತಿಗೆ'[275] ಎಂಬ ಕವನದಲ್ಲಿ,

'ಓ ತಾಯಿ ಸರಸ್ವತೀ
ನಿನ್ನ ಬೆನ್ನ ನೆರಳಿನಲ್ಲಿ
ವ್ಯಾಪಾರವೆ ಸಾಗಿದೆ
ನಿನ್ನ ಹೆಸರಿನಲ್ಲಿ ಇಗೋ
ಹಂಸಯಜ್ಞ ನಡೆದಿದೆ

ಎಂದು ಸಾಹಿತ್ಯ ವ್ಯಾಪಾರವಾಗುತ್ತಿರುವುದನ್ನು ಚಿತ್ರಿಸುತ್ತಾರೆ. ಅದಕ್ಕೆ ಅವರು ಕೊಡುವ ಸರಸ್ವತಿಯ ಚಿತ್ರ ಕಣ್ಣಿಗೆ ಕಟ್ಟುವುದು ಹೀಗೆ.

ಓ ತಾಯಿ ಸರಸ್ವತೀ
ನಿನ್ನ ವೀಣೆ ತಂತಿಗಳಲಿ ಜೇಡ ಬಲೆಯ ನೂತಿದೆ
ನಿನ್ನ ಪಾದಪೀಠದ ಕೆಳಗಿಲಿ ಹೆಗ್ಗಣ ಸೇರಿವೆ
ನಿನ್ನ ಕೈಯ ಪುಸ್ತಕವನು ಗೆದ್ದಲರ್ಥ ತಿಂದಿದೆ
ನಿನ್ನ ಗುಡಿಯ ಗಂಟೆಗಳಿಗೆ ತುಕ್ಕು ಹಿಡಿಯತೊಡಗಿದೆ
ಓ ತಾಯಿ ಸರಸ್ವತೀ ಏನಿದೆಂಥ ದುರ್ಗತಿ

ಈ ದುರ್ಗತಿಯ ಕಳೆವುದಕ್ಕಾಗಿ ಸರಸ್ವತಿಯು ತನ್ನ ಸೌಮ್ಯರೂಪವನ್ನು ತೊರೆದು ಅವತಾರ ಎತ್ತಬೇಕೆಂಬುದು ಕವಿಯ ಆಶಯ.

---

274. ಜಿ.ಎಸ್.ಶಿವರುದ್ರಪ್ಪ: ಸಮಗ್ರ ಕಾವ್ಯ, ಪು. 26-27
275. ಅದೇ. ಪು.459-60

ಕಾಳಿಯಾಗಿ ಏಳು ತಾಯಿ
ಶೂಲವನ್ನು ತಾಳು ತಾಯಿ,
ಕಲ್ಲಾದರೆ ನೀನೆ ಹೀಗೆ
ಹೇಳಿಕೊಳುವುದಾರಿಗೆ?'

ಎಂದು ಅಸಹಾಯಕತೆಯನ್ನು ಪ್ರಕಟಿಸುತ್ತದೆ ಕವಿಯ ಮನ.

ಹೊಸಗನ್ನಡ ಸಾಹಿತ್ಯದಲ್ಲಿ ವ್ಯಕ್ತವಾಗುವ ಸರಸ್ವತಿಯ ಸ್ವರೂಪ ಪ್ರಧಾನವಾಗಿ ವಾಗ್ದೇವತೆ ಮತ್ತು ಕಾವ್ಯದೇವತೆಯದ್ದು. ನದೀದೇವತೆಯ ಸ್ವರೂಪವನ್ನು ನೆನಪಿಸುವಂತೆ ಅಲ್ಲೊಂದು ಇಲ್ಲೊಂದು ನದಿದೇವತೆಗೆ ಸಂಬಂಧಿಸಿದ ವಿಶೇಷಣಗಳ ಬಳಕೆಯಗಿವೆ ಅಷ್ಟೆ. ಸರಸ್ವತಿಯು ಬ್ರಹ್ಮನ ಶಕ್ತಿ ಎಂಬುದಕ್ಕೆ ಹೆಚ್ಚಿನ ಮಹತ್ವ ಹೊಸಗನ್ನಡ ಸಾಹಿತ್ಯದಲ್ಲಿ ಕಂಡುಬರುತ್ತದೆ. ಅಪರೂಪಕ್ಕೊಮ್ಮೆ ಬ್ರಹ್ಮನ ಮಾನಸಪುತ್ರಿಯನ್ನಾಗಿಯೂ ಗ್ರಹಿಸಲಾಗಿದೆ. ಹಂಸ ಮತ್ತು ನವಿಲುಗಳೆರಡನ್ನೂ ಸರಸ್ವತಿಯ ವಾಹನವೆಂಬಂತೆ ಚಿತ್ರಿಸಲಾಗಿದೆ. ಸಾಹಿತ್ಯವೇ ಸರಸ್ವತಿ, ಸಾಹಿತ್ಯಕೃತಿಯೇ ಸರಸ್ವತಿ ಎಂಬ ಪರಿಭಾವನೆ ಹೊಸಗನ್ನಡದಲ್ಲೂ ಮುಂದುವರೆದಿದೆ. ಸರಸ್ವತಿಯನ್ನು ವಿಶ್ವಭಾಷಾಮಯಿಯನ್ನಾಗಿಯೂ ಪರಿಭಾವಿಸಲಾಗಿದೆ. 'ಕಾವ್ಯಪ್ರತಿಭೆಯೇ ಸರಸ್ವತಿ' ಎಂಬ ಅರ್ಥದಲ್ಲಿ, ಹೊಸಗನ್ನಡ ಸಾಹಿತ್ಯದಲ್ಲಿ ಸರಸ್ವತಿಗೆ 'ಅನಾದಿಕವಿ'ಯ ಗೌರವವೂ ಪ್ರಾಪ್ತವಾಗಿದೆ.

ಸುಮಾರು ಒಂದು ಸಾವಿರದ ಇನ್ನೂರು ವರ್ಷಗಳಷ್ಟು ಸುದೀರ್ಘವಾದ ಹಾದಿಯನ್ನು ಸವೆಸಿರುವ ಕನ್ನಡ ಕಾವ್ಯ ಮತ್ತು ಆ ಮೂಲಕ ಕವಿಗಳು ಕಂಡ ಸರಸ್ವತಿಯ ದರ್ಶನ ಏನೆಂಬುದನ್ನು ಗಮನಿಸಿದ್ದೇವೆ. ಜೈನ ವೈದಿಕ ವೀರಶೈವ ಪರಂಪರೆಯ ಕವಿಗಳು ತಮ್ಮ ತಮ್ಮ ದರ್ಶನಗಳಿಗನುಗುಣವಾಗಿ ಸರಸ್ವತಿಯನ್ನು ಸ್ತುತಿಸಿದ್ದಾರೆ. ಎಲ್ಲಾ ಧರ್ಮಗಳನ್ನು ಮೀರಿದ ಮಾನವಧರ್ಮವೊಂದಿದೆ. ಆ ಹಿನ್ನೆಲೆಯಲ್ಲೂ ಸರಸ್ವತಿಯನ್ನು ಪ್ರತಿಭಾವಂತರಾದ ಕವಿಗಳು ಕಂಡಿದ್ದಾರೆ. ಸರಸ್ವತಿಯು ವಾಗ್ದೇವತೆ, ಕಾವ್ಯದೇವತೆ, ಜ್ಞಾನದೇವತೆ ಎಂಬ ಪ್ರಾರಂಭದ ಸೀಮಿತ ಚೌಕಟ್ಟನ್ನು ಮೀರಿ, ಸಂಸಾರಸಂಭಾವಿತಾತ್ಮೆ, ಕಾಮಸಂಜನನಿ, ಪ್ರೇಮಭೈರವಿ, ಶೃಂಗಾರಮೂರ್ತಿ, ರಸರಾಣಿ, ರಸಸರಸ್ವತಿ, ಕಲಾಸುಂದರಿ, ವಾಕ್ಸುಂದರಿ, ನುಡಿರಾಣಿ, ವಿಜ್ಞಾನನೇತ್ರಿ, ಸರ್ವಪಾರದರ್ಶಿಕೆ ಎಂದು ಮೊದಲಾದ ವಿಶೇಷಣಗಳನ್ನು ಧರಿಸಿ ಸರಸ್ವತಿಯು ಬೆಳೆದಿದ್ದಾಳೆ. ಕಾವ್ಯವಾಸಿಯಾಗಿದ್ದ ಸರಸ್ವತಿಯು ವಿದ್ಯಾಲಯವಾಸಿಯೂ, ವಿದ್ಯಾಲಯೆಯೂ, ಕವಿದೇಹವಾಸಿಯೂ ಆಗಿದ್ದಾಳೆ. ಕಾವ್ಯರಂಗಸ್ಥಳದಲ್ಲಿ, ಕವಿಗಳ ನಾಲಗೆಯಲ್ಲಿ ಮಾತ್ರ ನಟಿಸುತ್ತಿದ್ದ ಸರಸ್ವತಿಯು ಕವಿಮನೋಮಂದಿರದಲ್ಲಿ, ಕವಿಯಾತ್ಮಜಿಹ್ವೆಯಲ್ಲಿ ನರ್ತಿಸಿದ್ದಾಳೆ. ಹಂಸವಾಹನೆ ಮಾತ್ರವಲ್ಲದೆ, ನವಿಲುವಾಹನೆಯಾಗಿಯೂ ದರ್ಶನವಿತ್ತಿದ್ದಾಳೆ. ಸರ್ವಭಾಷಾಮಯಿಯೂ, ವಿಶ್ವಮಾತೆಯೂ ಆಗಿ ಸರಸ್ವತಿಯ ದರ್ಶನ ಬೆಳೆದಿದೆ. ಬಹುಶಃ, ಬೇರಾವ ಭಾಷೆಗಳಲ್ಲೂ ಸಿಗದಿದ್ದ 'ಅನಾದಿಕವಿ'ಯ 'ಪಟ್ಟಗೌರವ' ಕನ್ನಡ ಸಾಹಿತ್ಯದಲ್ಲಿ ಸರಸ್ವತಿಗೆ ಸಿಕ್ಕಿದೆ.

ಅಧ್ಯಾಯ 4 ಶಾಸನಗಳಲ್ಲಿ ಸರಸ್ವತಿ

ಸರಸ್ವತಿಯ ಸ್ತುತಿ; ಕಾವ್ಯಸರಸ್ವತಿ; ಸತ್ಪ್ರೇರಣಾಶಕ್ತಿಯ ಅಧಿದೇವತೆ; ಬ್ರಹ್ಮ-ಸರಸ್ವತಿ; ಸರಸ್ವತಿಯ ನೆಲೆ; ವಿಶೇಷ ಕಲ್ಪನೆಗಳು; ಸರಸ್ವತಿಯ ವರಪ್ರಸಾದಿತರು; ಸರಸ್ವತೀ ಸಂಬಂಧವಾದ ಬಿರುದುಗಳು; ಸರಸ್ವತಿ ಹೆಸರಿನ ಊರುಗಳು; ಸರಸ್ವತಿ ಹಬ್ಬ; ಸರಸ್ವತೀ ಭಂಡಾರಿಗ; ಸರಸ್ವತಿ ದೇವಾಲಯ, ಮಂಟಪ, ಶಿಲ್ಪ, ಶಿಲ್ಪಾಚಾರ್ಯರು ಇತ್ಯಾದಿ......

ಅಧ್ಯಾಯ 4

ಶಾಸನಗಳಲ್ಲಿ ಸರಸ್ವತಿ

ಕರ್ನಾಟಕ ಶಾಸನ ಚರಿತ್ರೆಗೆ ಎರಡೂವರೆ ಸಾವಿರ ವರ್ಷಗಳಷ್ಟು ಸುದೀರ್ಘ ಇತಿಹಾಸವಿದೆ. ಕರ್ನಾಟಕದಲ್ಲಿ ದೊರೆತಿರುವ ಮೊದಲ ಶಾಸನ ಮೌರ್ಯ ಚಕ್ರವರ್ತಿ ಅಶೋಕನದು. ಆದರೆ ಕನ್ನಡ ಭಾಷೆಯ ಉಪಲಬ್ಧ ಪ್ರಾಚೀನ ಶಾಸನ ಸುಮಾರು ಕ್ರಿ.ಶ.450ಕ್ಕೆ ಸೇರಿದ ಹಲ್ಮಿಡಿ ಶಾಸನ. ಒಂದು ಅಂದಾಜಿನ ಪ್ರಕಾರ ಸುಮಾರು ಮೂವತ್ತು ಸಾವಿರ ಶಾಸನಗಳು ಕರ್ನಾಟಕದಲ್ಲಿ ಲಭ್ಯವಾಗಿವೆ. 'ಶಾಸನ' ಪದದ ಅರ್ಥವೇ ಸೂಚಿಸುವಂತೆ, ರಾಜಾಜ್ಞೆಯನ್ನು ತಿಳಿಸುವ ಉದ್ದೇಶದಿಂದ ರಚಿತವಾದವುಗಳು ಶಾಸನಗಳು. ಮೂಲದಲ್ಲಿ ಇದ್ದ ಈ ಸೀಮಿತ ಅರ್ಥವನ್ನು ಮೀರಿ, ನಂತರದ ಕಾಲದಲ್ಲಿ ಶಾಸನಗಳಲ್ಲಿ ನೂರಾರು ವಿಷಯಗಳು ಸೇರಿಕೊಂಡವು. ಶಾಸನಗಳಲ್ಲಿ ಉಲ್ಲೇಖವಾಗದ ವಿಷಯಗಳೇ ಇಲ್ಲವೆನ್ನುವಂತಾಗಿದೆ. ಹೀಗೆ ಬೇರೆ ಬೇರೆ ವಿಷಯಗಳು ಶಾಸನಗಳಲ್ಲಿ ಸೇರಿಕೊಂಡರೂ, ಅವುಗಳ ಮೂಲ ಮತ್ತು ಪ್ರಧಾನ ಉದ್ದೇಶ ಮಾತ್ರ ರಾಜಾಜ್ಞೆಯನ್ನು ಪ್ರಕಟಪಡಿಸುವುದೇ ಆಗಿದೆ. ಆದ್ದರಿಂದ ಸಾಂದರ್ಭಿಕವಾಗಿ ಸ್ಥಾನಪಡೆಯುವ ಬೇರೆ ಬೇರೆ ವಿಷಯಗಳ ಪ್ರಮಾಣ, ಒಟ್ಟು ಶಾಸನ ಸಂಖ್ಯೆಗೆ ಹೋಲಿಸಿದರೆ ತುಂಬಾ ಕಡಿಮೆ. ಈ ಮಾತು ಪ್ರಸ್ತುತ ಅಧ್ಯಯನದ ಸರಸ್ವತಿಯ ವಿಷಯಕ್ಕೂ ಅನ್ವಯವಾಗುತ್ತದೆ.

ಶಾಸನಗಳಲ್ಲಿ ಯಾರೋ ಒಬ್ಬ ರಾಣಿಯನ್ನೋ, ಆಶ್ರಿತ ರಾಜರ, ದಂಡನಾಯಕರ, ಮಂತ್ರಿಮಹೋದಯರ ಪತ್ನಿಯರನ್ನೋ- ಲಕ್ಷ್ಮಿ, ಸರಸ್ವತಿ, ರತಿ, ಅರುಂಧತಿ ಮೊದಲಾದವರಿಗೆ ಹೋಲಿಸುವಾಗಷ್ಟೇ ಸರಸ್ವತಿಯ ಹೆಸರು ಬಂದುಹೋಗುತ್ತದೆ. ನೇರವಾಗಿ ಸರಸ್ವತಿಯ ವಿಚಾರವನ್ನು ಹೇಳುವ ಶಾಸನಗಳು ಬೆರಳೆಣಿಕೆಯಲ್ಲಿವೆ. ಇನ್ನುಳಿದ ಶಾಸನಗಳಲ್ಲಿ, ಸರಸ್ವತಿಯ ವಿಶೇಷಣಗಳು, ಸರಸ್ವತಿಯ ಹೆಸರಿನ ಬಿರುದುಗಳು ಇವುಗಳ ಮೂಲಕವಷ್ಟೇ ಸರಸ್ವತಿಯ ಸ್ವರೂಪವನ್ನು ಅರಿಯಲು ಸಾಧ್ಯ. ಇವುಗಳಲ್ಲಿಯೂ ಪುನರಾವರ್ತನೆ ಎದ್ದು ಕಾಣುತ್ತದೆ. ಸರಸ್ವತಿಯ ವಿಷಯವಾಗಿ ಶಾಸನಗಳಿಂದಾಗುವ ಇನ್ನೊಂದು ಅನುಕೂಲಕರ ವಿಚಾರವೆಂದರೆ ಸರಸ್ವತಿಯ ದೇವಾಲಯ, ಮಂಟಪ, ಶಿಲ್ಪ ಮೊದಲಾದವುಗಳ ಐತಿಹಾಸಿಕತೆಯನ್ನು ಅರಿಯಲು ಸಾಧ್ಯವಾಗುವುದು. ಶಿಲ್ಪಗಳ ರೂವಾರಿಗಳು ಯಾರು? ದೇವಾಲಯಗಳು ಎಲ್ಲಿ ಇದ್ದವು? ಜೀರ್ಣೋದ್ಧಾರ ಆಗಿದ್ದು ಯಾವಾಗ? ಮುಂತಾದ ಪ್ರಶ್ನೆಗಳಿಗೆ ಕೆಲವು ಶಾಸನಗಳಲ್ಲಿ ಅಲ್ಪಸ್ವಲ್ಪ ಮಾಹಿತಿ ದೊರೆಯುತ್ತದೆ. ಸರಸ್ವತಿಯ ಪೂಜೆಗೆ ದಾನ

ದತ್ತಿಗಳನ್ನು ಬಿಟ್ಟ ಮಾಹಿತಿಗಳೂ ಸಿಗುತ್ತವೆ. ಈ ಮಿತಿಗಳ ನಡುವೆಯೇ ಕರ್ನಾಟಕದ ಶಾಸನಗಳಲ್ಲಿ ಪ್ರಕಟವಾಗಿರುವ ಸರಸ್ವತಿಯ ವಿಚಾರವನ್ನು ಅರಿಯಲು ಇಲ್ಲಿ ಪ್ರಯತ್ನಿಸಲಾಗಿದೆ.

ಸರಸ್ವತಿಯ ಸ್ತುತಿ

ಶಾಸನಗಳಲ್ಲಿ ಸರಸ್ವತಿಯನ್ನು ಸರಸ್ವತಿ, ವಾಚಾ, ವಾಗ್ದೇವಿ, ಶಾರದಾ, ಭಾರತೀ, ವಾಣಿ ಮೊದಲಾದ ಸಾಂಪ್ರದಾಯಿಕ ಹೆಸರುಗಳಿಂದ ಕರೆಯಲಾಗಿದೆ. ಸರಸ್ವತಿಯ ಸ್ತುತಿ ಎಂದು ಪ್ರತ್ಯೇಕವಾಗಿ ಶಾಸನಗಳಲ್ಲಿ ಕಾಣುವುದಿಲ್ಲ. ಸಾಂದರ್ಭಿಕವಾಗಿ ಮಾತ್ರ ಸರಸ್ವತಿಯನ್ನು ಉಲ್ಲೇಖಗಳು ಕಂಡುಬರುತ್ತವೆ. ಶಾಸನಗಳ ಪ್ರಾರಂಭದಲ್ಲಿ **ಶ್ರೀಸರಸ್ವತ್ಯಾಯ ನಮಃ,**[1] **ಸರಸ್ವತ್ಯೈ ನಮಃ,**[2] **ಸರಸ್ವತೀ ನಮಃ,**[3] **ದೇವೀಂ ಸರಸ್ವತೀನ್ನಮಸ್ಕೃತ್ಯ(ಯ)ಥಾ**[4] ಮೊದಲಾದ ಶುಭವಾಚಕಗಳು ಮಾತ್ರ ಕಂಡುಬರುತ್ತವೆ. ಕನ್ನಡ ಶಾಸನಗಳ ಪ್ರಾರಂಭದಲ್ಲಿ ಸಂಸ್ಕೃತ ಭಾಷೆಯಲ್ಲಿ ಸರಸ್ವತಿಯ ಸ್ತುತಿಯು ಒಂದೆರಡು ಪದ ಅಥವಾ ಸಾಲುಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಅದರಲ್ಲಿಯೂ ವಿಶೇಷಗಳೇನು ಇರುವುದಿಲ್ಲ. ಮೈಸೂರು ಜಿಲ್ಲೆಯ ಕಣ್ಣಯನಹುಂಡಿಯ ಒಂದು ಶಾಸನದ ಪ್ರಾರಂಭದಲ್ಲಿ ದಂಡಿಯ ಪ್ರಸಿದ್ಧವಾದ–

> **ಚತುರ್ಮುಖ ಮುಖಾಂಭೋಜ ವನಹಂಸವಧೂರ್ಮಮ।**
> **ಮಾನಸೇ ರಮತಾಂ ನಿತ್ಯಂ ಸರ್ವಶುಕ್ಲಾ ಸರಸ್ವತೀ॥**[5]

ಎಂಬ ಸರಸ್ವತಿಯ ಸ್ತುತಿಯಿದೆ.[6] ಮೈಸೂರು ಜಿಲ್ಲೆಯ ಸಾಗರೆ ಎಂಬ ಗ್ರಾಮದ ಒಂದು ಶಾಸನದಲ್ಲಿ, **'ಶಾರದಾ ಶಾರದಾಂಭೋಜ ಶರದಿಂದುನಿಭಾನನೇ ಸಾರಸ್ವತ್ಯಂ ಚಮೇ ದೇಹಿ ಶಾಸನಂ ಲಿಖಿತಂ ಮಯಾ'**[7] ಎಂಬ ಸ್ತುತಿಯಿದೆ. 'ಬೆಳ್ದಾವರೆಯಂತಹ ಶರಚ್ಚಂದ್ರನನ್ನು ಹೋಲುವಂತಹ ಮುಖವುಳ್ಳ ಶಾರದೇ ಈ ಶಾಸನವನ್ನು ಬರೆಯುವುದಕ್ಕೆ ಅನುಗ್ರಹಿಸು' ಎಂಬುದಷ್ಟೇ ಶಾಸನಕವಿಯ ಪ್ರಾರ್ಥನೆ.

ಕಾವ್ಯಸರಸ್ವತಿ

ಶಾಸನಗಳಲ್ಲೂ ಸರಸ್ವತಿಗೆ ಕಾವ್ಯಸರಸ್ವತಿಯ ಪಟ್ಟ ಮುಂದುವರೆದಿದೆ. ಒಬ್ಬ ಶಾಸನಕಾರ ತನ್ನ ಶಾಸನದ ರಚನೆಗೆ **'ಚತುರೋಕ್ತಿ'**[8]ಯನ್ನು ಸರಸ್ವತಿಯಿಂದ ಬೇಡಿದ್ದಾನೆ. ಇದನ್ನೇ ಕವಿರಾಜಮಾರ್ಗಕಾರ

---

1. ಎ.ಕ.–6 ಪಾಂಡವಪುರ 262; ಕ್ರಿ.ಶ.1402, ಎ.ಕ.–12 ಕಡೂರು 13, ಎ.ಕ.–12 ಕೊಪ್ಪ 14, 27 ಮತ್ತು 34, ಎ.ಕ.–10 ಅರಸೀಕೆರೆ 38; ಕ್ರಿ.ಶ.1190, KI –II, No. 34 of 1940-41; 1214AD
2. ಕ.ವಿ.ಶಾ.ಸಂ. 9, ಬಾಗಲಕೋಟೆ 18; ಕ್ರಿ.ಶ.12ನೇ ಶತಮಾನ
3. ಎ.ಕ.–7 ಮದ್ದೂರು 79; ಕ್ರಿ.ಶ.1387
4. ಎ.ಕ.–1 ಕೂರ್ಗ್ 20(8) ; ಕ್ರಿ.ಶ. 14ನೇ ಶತಮಾನ
5. ಶಂಕರ್ ಕೆದಿಲಾಯ: ಕರ್ನಾಟಕ ಕವಿರಾಜಮಾರ್ಗಂ, ಪರಿಶಿಷ್ಟಂ –3, ಪು.123
6. ಎ.ಕ.–3 ಹೆಗ್ಗಡದೇವನಕೋಟೆ 16; ಕ್ರಿ.ಶ.1670
7. ಎ.ಕ.–3 ಹೆಗ್ಗಡದೇವನಕೋಟೆ 149
8. ಎ.ಕ.–9 ಸಕಲೇಶಪುರ 45; ಕ್ರಿ.ಶ.1095

'ಚತುರ ರುಚಿರ ಪದರಚನೆ' ಎಂದಿರುವುದು. ಚತುರೋಕ್ತಿ ಕಾವ್ಯದ ಒಂದು ಗುಣ. ಅಂತಹ ಕಾವ್ಯದ ಗುಣವನ್ನು ತನ್ನ ಶಾಸನದ ರಚನೆಗೆ ಬೇಡಿರುವುದು ಶಾಸನಕಾರನ ಶೈಲಿಯ ಆಶಯವನ್ನು ಸೂಚಿಸುತ್ತದೆ. ಇನ್ನೊಬ್ಬ ಶಾಸನಕಾರನಿಗಂತೂ ತಾನು ರಚಿಸುವ ವೃತ್ತಗಳ ಬಗ್ಗೆ ವಿಶೇಷ ಪ್ರೀತಿ. **'ತಾನು ರಚಿಸುವ ವೃತ್ತಗಳು ಸರಸ್ವತಿಯ ಕೊರಳಹಾರದಲ್ಲಿರುವ ಮುತ್ತುಗಳು'**[9] ಎಂದು ಹೇಳಿಕೊಂಡಿದ್ದಾನೆ.

ಸರಸ್ವತಿಯ ಮೂಲಸ್ಥಾನ ಕಾಶ್ಮೀರ

ಬಿಜಾಪುರ ಜಿಲ್ಲೆ ಮುತ್ತಗೆ ಗ್ರಾಮದ ಶಾಸನದಲ್ಲಿ ಕಾಶ್ಮೀರ ಮುನೀಂದ್ರ ಎಂಬುವವನ ವ ವಿದ್ವತ್ತನ್ನು ಹೊಗಳುವಾಗ ಸರಸ್ವತಿಯು ಕಾಶ್ಮೀರದಿಂದ ಬಂದ ವಿಚಾರ ಪ್ರಸ್ತಾಪವಾಗಿದೆ.

ಸೂರಿಜನಂಗಳೊಳ್ ನುಡಿಯನೀ ಜನದೊಳ್ ಜಯವಾದಿಯಾಗೆ ಕೈ
ವಾರದೆ ವೇದಸಾರ ರಚಿತಾಭರಣಾನ್ವಿತೆಯಾಗಿ ವಾಣಿ ಕಾ
ಶ್ಮೀರದೆ ಕೂಡಿಬಂದು ವಿಜಯಾಪುರದೊಳೆ ನೆಲಸನ್ನೆಗಳ್ದ ಕಾ
ಶ್ಮೀರ ಮುನೀಂದ್ರ...[10]

ಕಾಶ್ಮೀರಿಗಳು ಉತ್ತರದಿಂದ ದಕ್ಷಿಣಕ್ಕೆ ವಲಸೆ ಬಂದಿರುವುದು ಎಲ್ಲರಿಗೂ ತಿಳಿದ ವಿಷಯ. ಹೀಗೆ ವಲಸೆ ಬಂದ ಕಾಶ್ಮೀರಿ ಪಂಡಿತನೊಬ್ಬ ಬಿಜಾಪುರ(ವಿಜಯಾಪುರ)ದಲ್ಲಿ ನೆಲೆ ನಿಂತದ್ದನ್ನೂ ಮತ್ತು ಆತ ವೇದವಿದ್ಯಾಪಾರಂಗತನಾಗಿದ್ದನ್ನೂ ಈ ಶಾಸನ ಉಲ್ಲೇಖಿಸುತ್ತದೆ. ಸರಸ್ವತಿಯ ಮೂಲಸ್ಥಾನ ಕಾಶ್ಮೀರ ಎಂಬದೂ ಸ್ಪಷ್ಟವಾಗುತ್ತದೆ. ಇಲ್ಲಿ ಸರಸ್ವತಿಯನ್ನು ಆಲಂಕರಿಸಿರುವ ಆಭರಣಗಳು ವೇದಸಾರದಿಂದ ರಚಿತವಾದವುಗಳು ಎಂಬುದು ಶಾಸನಕಾರನ ಕಾವ್ಯಶಕ್ತಿಯನ್ನು ಧ್ವನಿಸುತ್ತದೆ.

ಸತ್ಪ್ರೇರಣಾಶಕ್ತಿಯ ಅಧಿದೇವತೆ

ಕ್ರಿ.ಶ.1280ಕ್ಕೆ ಸೇರಿದ ದಾವಣಗೆರೆಯ ಶಾಸನವೊಂದರಲ್ಲಿ ಉಲ್ಲೇಖಿಸಿರುವ ಸರಸ್ವತಿಯನ್ನು ಕುರಿತ ಒಂದು ಪದ್ಯ ಹೀಗಿದೆ:

ನೀರಜಜಾತ ವಿಸ್ತರಿಸಿದಂಡಮುಮಂ ಮಣಿಮಾಲೆಯಾಗಿ ಬಿ
ಸ್ತಾರಿಸಿ ಹಸ್ತದಿಂ ಪಿಡಿದು ತನ್ನ ಸರಣ್ಬುಗುವರ್ಗೆ ಲೇಸುಮಂ
ಪ್ರೇರಿಸಲೋಸುಗಂ ಜಪಿಸುತಿರ್ಪಳಿರುಳ್ ಪಗಲಾವಳೊರ್ವಳಾ
ಭಾರತಿ ನಮ್ಮ ಜಿಹ್ವೆಯೊಳನಾವಿಳದಿಂದಿರುತಿರ್ಕೆ ಸಂತತಂ[11]

'ಕಮಲದಿಂದ ಹುಟ್ಟಿದವನು ಅಂದರೆ ಬ್ರಹ್ಮನು ಸೃಷ್ಟಿಸಿದ ಬ್ರಹ್ಮಾಂಡವನ್ನು ಮಣಿಮಾಲೆಯಾಗಿ ಅಂದರೆ ಅಕ್ಷಮಾಲೆಯಾಗಿ ಹಸ್ತದಲ್ಲಿ ಹಿಡಿದು, ತನಗೆ ಶರಣು ಬರುವವರಿಗೆ ಒಳ್ಳೆಯದನ್ನು ಮಾಡುವುದಕ್ಕೋಸ್ಕರ ಹಗಲು ಇರುಳು ಯಾರು ಜಪಿಸುತ್ತಿದ್ದಾರೋ ಆ ಭಾರತಿಯು ಸಂತೋಷವಾಗಿ

---

9. ಎ.ಕ.–10 ಅರಸೀಕೆರೆ 232 ; ಕ್ರಿ.ಶ.1136
10. SII –XV. 32
11. E.C. -11 dg 59; 1280AD [Old Series]

ನಮ್ಮ ನಾಲಗೆಯಲ್ಲಿ ಇರಲಿ' ಎಂಬುದು ಶಾಸನಕರ್ತೃವಿನ ಪ್ರಾರ್ಥನೆ. ಶಾಸನಪದ್ಯದ ಕೊನೆಯ ಭಾಗವಾದ, 'ಭಾರತಿಯು ಸಂತೋಷವಾಗಿ ನಮ್ಮ ನಾಲಗೆಯಲ್ಲಿ ನೆಲಸಲಿ' ಎಂಬುದು ಸಾಂಪ್ರದಾಯಿಕವಾಗಿದ್ದರೂ, ಬ್ರಹ್ಮನು ಸೃಷ್ಟಿಸಿದ ಬ್ರಹ್ಮಾಂಡವನ್ನೇ ಮಣಿಮಾಲೆಯನ್ನಾಗಿ ಮಾಡಿಕೊಂಡ ಸರಸ್ವತಿಯ ಚಿತ್ರಣ ಮಾತ್ರ ನವೀನ ಕಲ್ಪನೆಯಾಗಿದೆ. ಬ್ರಹ್ಮನು ತಾನು ಸೃಷ್ಟಿಸಿದ ಸರಸ್ವತಿಯನ್ನು ತನ್ನ ಮುಖದಲ್ಲಿಯೇ ಧರಿಸಿದ ಎಂಬುದು ಪೌರಾಣಿಕ ಕಲ್ಪನೆ. ಆದರೆ, ಅದನ್ನು ಮೀರಿ, ಬ್ರಹ್ಮನು ಸೃಷ್ಟಿಸಿದ ಬ್ರಹ್ಮಾಂಡವನ್ನು ಸರಸ್ವತಿಯೇ ಮಣಿಮಾಲೆಯಾಗಿ ಧರಿಸಿದಳು ಎಂಬ ಕಲ್ಪನೆ ಸರಸ್ವತಿಗೆ ಒಂದು ಭವ್ಯತೆಯನ್ನು ತಂದುಕೊಟ್ಟಿದೆ. ಆಕೆಯು ತನ್ನನ್ನು ಆಶ್ರಯಿಸಿ ಬಂದವರಿಗೆ ಒಳ್ಳೆಯದನ್ನು ಪ್ರೇರೇಪಿಸಲೋಸುಗ ಆ ಮಣಿಮಾಲೆಯನ್ನು ಹಿಡಿದು ಹಗಲೂ ಇರುಳೂ ಜಪಿಸುತ್ತಿದ್ದಾಳೆ ಎಂಬ ಚಿತ್ರಣವಂತೂ ಸರಸ್ವತಿಯನ್ನು ಭಕ್ತವತ್ಸಲಳನ್ನಾಗಿ ಬಿಂಬಿಸುವಲ್ಲಿ ಯಶಸ್ವಿಯಾಗಿದೆ.

ನಾಗರಿಕ ಜಗತ್ತಿನಲ್ಲಿ ಮಾನವ ಸುಸಂಸ್ಕೃತನಾಗಿ ಬದುಕಬೇಕಾದರೆ ಮೊದಲಿಗೆ ಅವನು ಒಳ್ಳೆಯವನಾಗಿರಬೇಕು. ಒಳ್ಳೆಯತನ ಎಂಬುದು ಹೊರಗಿನಿಂದ ಬರುವುದಿಲ್ಲ; ಒಳಗಿನಿಂದಲೇ ಸ್ಫುರಿಸುವಂತಹದ್ದು. ಹೀಗೆ ಮನುಷ್ಯನಿಗೆ ಒಳ್ಳೆಯತನವನ್ನು ಪ್ರಚೋದಿಸುವ ಅಧಿದೇವತೆ ಸರಸ್ವತಿ ಎಂಬುದು ವೇದಗಳ ಕಾಲದಿಂದಲೂ ಬೆಳೆದು ಬಂದಿರುವ ಕಲ್ಪನೆ. ಕನ್ನಡದ ಹಲವಾರು ಶಾಸನಗಳಲ್ಲಿ ಸರಸ್ವತಿಯು ಹಲವಾರು ಸದ್ಗುಣಗಳನ್ನು ಪ್ರೇರೇಪಿಸುವ ದೇವತೆಯಾಗಿ ಕಾಣಿಸಿಕೊಂಡಿದ್ದಾಳೆ. ವಿಚಿತ್ರವೆಂದರೆ, ಮೇಲೆ ಹೇಳಿದ ಶಾಸನವೊಂದನ್ನು ಬಿಟ್ಟರೆ ಇನ್ನಾವ ಶಾಸನದಲ್ಲೂ, ಸತ್ಪ್ರೇರಣಾದೇವತೆಯ ಸ್ವರೂಪವನ್ನು ನೇರವಾಗಿ ಹೇಳಿಲ್ಲ. ಆದರೆ, ಸರಸ್ವತಿಯ ಹೆಸರನ್ನು ಬಳಸುವಾಗ ಯಾವುದಾದರೊಂದು ಕಲಾವಿಶೇಷಣದ ಜೊತೆಯಲ್ಲಿಯೇ ಬಳಸಿರುವುದು ಕಂಡುಬರುತ್ತದೆ. ಅವುಗಳಲ್ಲಿಯೂ ಪುನರಾವರ್ತನೆ ಕಾಣುತ್ತದೆ. ತಮ್ಮ ಆಶ್ರಿತರಿಗೆ ಇಂತಹ ಗುಣ ಸರಸ್ವತಿಯಿಂದ ಬಂದಿತು, ಎಂದು ಸರಸ್ವತಿಯನ್ನು ಪರೋಕ್ಷವಾಗಿ ಆ ಗುಣದ ಅಧಿದೇವತೆಯನ್ನಾಗಿಸಿದ್ದಾರೆ. ಕೆಲವು ಶಾಸನಕಾರರು ಅತಿಯಾದ ಸ್ವಾಮಿಭಕ್ತಿಯಿಂದ ಅಂತಹ ಗುಣಗಳಲ್ಲಿ ಸರಸ್ವತಿಯು ತನ್ನ ಸ್ವಾಮಿ ಅಥವಾ ಆತನ ಪತ್ನಿಗೆ ಸರಿಸಮಾನಳು ಎಂದೋ, ಮಿಗಿಲು ಎಂದೋ ಹೋಲಿಸಿದ್ದಾರೆ. ಸರಸ್ವತಿಗೆ ಬಳಸಿರುವ ಅಂತಹ ಕೆಲವು ವಿಶೇಷಣಗಳು ಗಮನಾರ್ಹವಾಗಿವೆ.

ಸರಸ್ವತಿಯು ವಾಗ್ದೇವತೆಯಾದಂತೆ ಕಾವ್ಯಾಧಿದೇವತೆಯೂ ಹೌದು. ಆದ್ದರಿಂದ ಕಾವ್ಯದ ಗುಣಗಳಿಗೂ ಸರಸ್ವತಿಯೇ ಅಧಿದೇವತೆ. ಅಂತಹ ಒಂದು ಕಾವ್ಯಗುಣವಾದ **'ಚತುರೋಕ್ತಿ'**[12]ಗೆ ಸರಸ್ವತಿಯನ್ನು ಅಧಿಕೃತ ಆಕರವಾಗಿ ಒಂದು ಶಾಸನದಲ್ಲಿ ಹೇಳಿದೆ. ಇನ್ನೊಂದು ಶಾಸನದಲ್ಲಿ

---

12. ಎ.ಕ.–9 ಸಕಲೇಶಪುರ 45; ಕ್ರಿ.ಶ.1095

'ವಾಕ್‌ಪ್ರೌಢಿಮೆ'[13]ಗೆ ಸರಸ್ವತಿಯೇ ನಿದರ್ಶನವಾಗಿದ್ದಾಳೆ. **'ವಿದ್ಯೆ'**[14]ಯಲ್ಲಿ ಸಾಕ್ಷಾತ್ 'ವಾಗ್ದೇವಿ'ಯೇ ಎಂದು ಶಾಂತಲೆಯನ್ನು ಹೊಗಳಲಾಗಿದೆ. ಸರಸ್ವತಿಯನ್ನು **'ವಾಕ್ಸತಿ'**[15] ಎಂದು ಒಂದು ಶಾಸನ ಕರೆದಿದೆ. ಒಳ್ಳೆಯ **'ಬುದ್ಧಿ'**[16] ಅಥವಾ **'ಮತಿ'**[17]ಗೆ ಮತ್ತು **'ವಿವೇಕ'**[18]ಕ್ಕೆ ಸರಸ್ವತಿಯನ್ನು ಹೋಲಿಸಲಾಗಿದೆ. **'ಸೊಬಗು'**[19] ಕೂಡಾ ಸರಸ್ವತಿಯ ಪಾಲಾಗಿದೆ. ಶಾಸನಗಳಲ್ಲಿ ಸರಸ್ವತಿಯು **'ಸತ್ಯ'**[20] ಎಂಬ ಗುಣವನ್ನು ದಯಪಾಲಿಸುವ ದೇವತೆಯೂ, **'ಸತ್ಯವಾಕ್ಸತಿ'**[21]ಯೂ ಆಗಿದ್ದಾಳೆ. ಹೀಗೆ ಸರಸ್ವತಿಯು ಮೊದಲಿನಿಂದಲೂ ಪ್ರತಿನಿಧಿಸುತ್ತ ಬಂದಿರುವ ವಿದ್ಯೆ, ವಾಕ್, ವಿವೇಕ ಮೊದಲಾದವುಗಳನ್ನು ಶಾಸನಕರ್ತೃಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡಿದ್ದಾರೆ.

ಬ್ರಹ್ಮ-ಸರಸ್ವತಿ

ಶಾಸನಗಳಲ್ಲಿ ಸರಸ್ವತಿ ಮತ್ತು ಬ್ರಹ್ಮ ಸತಿಪತಿಗಳಂತೆ ಚಿತ್ರಿತರಾಗಿದ್ದಾರೆ. ಸರಸ್ವತಿಯು ಬ್ರಹ್ಮನ ಮುಖಕಮಲದಲ್ಲಿ ನೆಲೆಸಿದ್ದಾಳೆ ಎಂಬ ಸಾಂಪ್ರದಾಯಿಕ ಕಲ್ಪನೆಗೆ ಶಾಸನಗಳಲ್ಲಿ ಚ್ಯುತಿ ಬಂದಿಲ್ಲ. ಶಾಸನವೊಂದು **'ತಾನು ಮಲಗಿರುವ ಶೇಷನ ಸಾವಿರ ಹೆಡೆಗಳಲ್ಲಿ ಮಿನುಗುವ ಮಾಣಿಕ್ಯಗಳ ಪ್ರಭೆಯಿಂದ ಹೊಳೆಯುತ್ತಿರುವ ಕೂದಲನ್ನುಳ್ಳ ವಿಷ್ಣುವಿನ ನಾಭಿಕಮಲದಿಂದ ಉದ್ಭವಿಸಿ, ಜಗತ್ತನ್ನೂ ದೇವತೆಗಳನ್ನೂ ಸೃಷ್ಟಿಸಿದ ಬ್ರಹ್ಮನ ಮುಖವೆಂಬ ಕಮಲದಲ್ಲಿ ಹಂಸವನಿತೆ ನೆಲೆಸಿದ್ದಾಳೆ'**[22] ಎಂದು ಸರಸ್ವತಿಯ ನೆಲೆಯನ್ನು ಬಣ್ಣಿಸುತ್ತದೆ. ಹಂಸವನಿತೆ ಎಂಬ ವಿಶೇಷಣದಲ್ಲೇ ಸರಸ್ವತಿಯು ಶುಭ್ರವರ್ಣದವಳೆಂಬುದೂ ಹಾಗೂ ಸರಸ್ವತಿಯ ವಾಹನ ಹಂಸ ಎಂಬುದೂ ಗೋಚರವಾಗುತ್ತದೆ. **'ಬ್ರಹ್ಮನ ಮುಖಕಮಲದಲ್ಲಿ ನೆಲೆಸಿದ್ದರಿಂದಲೇ ಸರಸ್ವತಿಯು ವಿವೇಕಿಯಾದಳು'**[23] ಎಂದು ಒಂದು ಶಾಸನ ಹೇಳುತ್ತದೆ. ಬ್ರಹ್ಮನನ್ನು **'ವಾಗೀಶ'**[24], **'ವಾಣೀಶ'**[25], **'ಭಾರತೀಪತಿ'**[26], **'ವಾಣೀಪತಿ'**[27] ಎಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.

---

13. ಎ.ಕ.-9 ಬೇಲೂರು 317; ಕ್ರಿ.ಶ.1173
14. ಎ.ಕ.-8 ಹಾಸನ 167; ಕ್ರಿ.ಶ.1122
15. ಎ.ಕ.-12 ಕಡೂರು 200
16. ಎ.ಕ.-9 ಬೇಲೂರು 16; ಕ್ರಿ.ಶ.1117
17. ಎ.ಕ.-8 ಹಾಸನ 133
18. ಎ.ಕ.-7 ನಾಮಂ 81; ಕ್ರಿ.ಶ.1223
19. ಎ.ಕ.-10 ಚನ್ನರಾಯಪಟ್ಟಣ 33; 1189
20. ಎ.ಕ.-8 ಹೊಳೇನರಸೀಪುರ 1; ಕ್ರಿ.ಶ.1276, ಎ.ಕ.-10. ಅರಸೀಕೆರೆ 139; ಕ್ರಿ.ಶ.1194 ಮತ್ತು ಎ.ಕ.-7 ನಾಮಂ 73, 74 & 76: ಕ್ರಿ.ಶ.1284
21. ಎ.ಕ.-12 ಕಡೂರು 200
22. ಎ.ಕ.-9 ಬೇಲೂರು 170
23. ಎ.ಕ.-12 ಕಡೂರು 169; ಕ್ರಿ.ಶ.1172
24. ಎ.ಕ.-10 ಅರಸೀಕೆರೆ 161; ಕ್ರಿ.ಶ.1185

ವೇದಶಾಸ್ತ್ರವಿದ್ಯಾಪ್ರವೀಣನಾದ ಮಾತ್ರಕ್ಕೆ ಶಂಕರ ಎಂಬುವನನ್ನು **'ವಾಕ್ಪತಿ'**[28] ಎಂದು ಒಂದು ಶಾಸನದಲ್ಲಿ ಕರೆದಿದೆ. ಇನ್ನು ಕೆಲವರನ್ನು ಶಾಸನಗಳಲ್ಲಿ **ವಾಗ್ವನಿತಾಪತಿ**[29], **ವಾಣೀಕಾನ್ತನ್**[30] ಎಂಬ ವಿಶೇಷಣಗಳಿಂದ ಗುರುತಿಸಲಾಗಿದೆ. ಈ ಬಗೆಯ ವಿಶೇಷಣಗಳು ಬ್ರಹ್ಮನಿಗಾದರೆ ಅರ್ಥಪೂರ್ಣವಾಗಿರುತ್ತವೆ. ಅದೇ ಬೇರೆಯವರಿಗಾದರೆ ಅರ್ಥಕ್ಲೇಶಕ್ಕೆ ಎಡೆ ಮಾಡಿಕೊಡುತ್ತವೆ.

ಸರಸ್ವತಿಯ ನೆಲೆ

'ಸರಸ್ವತಿಯು ಬ್ರಹ್ಮನ ಮುಖಕಮಲದಲ್ಲಿ ನೆಲೆಸಿದ್ದಾಳೆ' ಎಂಬುದು ಅತ್ಯಂತ ಜನಪ್ರಿಯ ಕಲ್ಪನೆ. ಆದರೆ ಕಲ್ಪನಾಚತುರರಾದ ಕವಿಗಳು ಸರಸ್ವತಿಯನ್ನು ತಮ್ಮ ಮುಖದಲ್ಲಿಯೂ ನೆಲೆಸುವಂತೆ ಪ್ರಾರ್ಥಿಸಿದ್ದಾರೆ. ತಮ್ಮ ಮುಖಕಮಲದಲ್ಲಿಯೇ ನೆಲೆಸಿದ್ದಾಳೆ ಎಂದೂ, ಹಾಗೆ ನೆಲೆಸಿದ್ದರಿಂದ ಸರಸ್ವತಿಗೆ ಸುಸ್ಥಿತಿಯುಂಟಾಯಿತು ಎಂದೆಲ್ಲಾ ಕಲ್ಪಿಸಿದ್ದಾರೆ. ಒಂದು ಶಾಸನದ ನಿರೂಪಣೆಯಲ್ಲಿ ಶ್ರೇಷ್ಠಮುನಿಗಳೊಬ್ಬರು ಸರಸ್ವತಿಯನ್ನು ಮುಖದಲ್ಲಿ ಧರಿಸಿದ್ದಾರೆ[31] ಎಂದು ಮುನಿಗಳ ಶ್ರೇಷ್ಠತೆಯನ್ನು ದೃಢೀಕರಿಸಲು ಸರಸ್ವತಿಯನ್ನು ಬಳಸಿಕೊಳ್ಳಲಾಗಿದೆ. ಮುನಿಗಳು ಮಾತ್ರವಲ್ಲದೆ ಆಶ್ರಿತರಾಜರ[32] ಮುಖದಲ್ಲಿಯೂ ಸರಸ್ವತಿಯು ನೆಲೆಸಿದಂತೆ ಶಾಸನಕಾರರು ಕಲ್ಪಿಸಿದ್ದಾರೆ. ಸರಸ್ವತಿಯನ್ನು ಮುಖದಲ್ಲಿ ಧರಿಸುವುದು ಒಂದು ಹೆಮ್ಮೆಯ ಸಂಗತಿಯಾಗಿದ್ದಿರಬಹುದು. ಅದು ವಿದ್ಯೆಗೆ, ವಿವೇಕಕ್ಕೆ ತನ್ಮೂಲಕ ಸರಸ್ವತಿಗೆ ಸಂದ ಗೌರವವೇ ಆಗಿದೆ. **'ವಾಕ್‌ಯುವತಿಯಾದ ಸರಸ್ವತಿಯು ವದನಕಮಲದಲ್ಲಿ ನೆಲೆಸಿದ್ದರಿಂದ ಸಕಳಾರ್ಥಶಾಸ್ತ್ರಕೋವಿದ ಮಧುಪ ಎಂಬುವವನು ಪ್ರಖ್ಯಾತನಾಗಿದ್ದಾನೆ'**[33] ಎಂಬ ಶಾಸನವೊಂದರ ಮಾತು ವಿದ್ಯೆಯ ಪ್ರಭಾವವನ್ನು ಸೂಚಿಸುತ್ತದೆ. **'ಕಲಿಯುಗದಲ್ಲಿ ಲೋಕವೆಲ್ಲವೂ ದುಷ್ಟರಿಂದ ಹತಾಶೆಯಿಂದ ಲೋಭದಿಂದ ಕೂಡಿದ್ದಾಗ ಸಾಲಂಕೃತಸಹಿತ ಸರಸ್ವತಿಯು ಚಂದ್ರಪ್ರಭಾರ್ಯನಲ್ಲಿ ನೆಲೆಸಿರುವಳು'**[34] ಎಂದು ಚಂದ್ರಪ್ರಭಾರ್ಯನನ್ನು ಹೊಗಳಲು ಸರಸ್ವತಿಯನ್ನು ಶಾಸನವೊಂದು ಬಳಸಿಕೊಂಡಿದೆ. ಒಂದು ಹಂತದಲ್ಲಿ ಶಾಸನಕಾರರು ಸರಸ್ವತಿಯನ್ನು ತಮ್ಮ ಆಶ್ರಿತರು ಮುಖದಲ್ಲಿ ಧರಿಸುವುದನ್ನು ಮೀರಿ, ತನ್ನಾಶ್ರಿತರನ್ನು

---

25. ಎ.ಕ.–12 ಕೊಪ್ಪ 17
26. ಎ.ಕ.–10 ಅರಸೀಕೆರೆ 33; ಕ್ರಿ.ಶ.1184
27. ಎ.ಕ.–12 ಕಡೂರು 199; ಕ್ರಿ.ಶ.1202
28. ಎ.ಕ.–10, ಅರಸೀಕೆರೆ 161; ಕ್ರಿ.ಶ. 1191
29. ಎ.ಕ.–9 ಬೇಲೂರು 405
30. ಎ.ಕ.–9 ಬೇಲೂರು 328; ಕ್ರಿ.ಶ. 1136
31. ಎ.ಕ.–2 ಶ್ರವಣಬೆಳಗೊಳ 568 ; 1094
32. ಎ.ಕ.–7 ನಾಮಂ 173; ಕ್ರಿ.ಶ.1230 & ಎ.ಕ.–7, ಮಂಡ್ಯ 30; ಕ್ರಿ.ಶ.1237
33. ಎ.ಕ.–10 ಅರಸೀಕೆರೆ 241; ಕ್ರಿ.ಶ.1158
34. ಎ.ಕ.–5 ತಿ.ನರಸೀಪುರ 38

ಸರಸ್ವತಿಗೇ ನೆಲೆಯಾಗಿಸಿ,[35] ಆಕೆಯ ವಿಳಾಸಕ್ಕೆ ಸದನವಾಗಿಸಿ[36] ತಮ್ಮ ಸ್ವಾಮಿನಿಷ್ಠೆಯನ್ನು ಪ್ರದರ್ಶಿಸಿದ್ದಾರೆ. ಸುಮಾರು ಇದೇ ಕಾಲದವನಾದ ಹರಿಹರನು ತನ್ನ ಗಿರಿಜಾಕಲ್ಯಾಣ ಕಾವ್ಯವನ್ನು 'ವಾಗ್ದೇವ್ಯವಾಸಂ' ಎಂದು ಕರೆದಿದ್ದಾನೆ. 'ಕವಿಯೇ ಸುಡಿರಾಣಿಯ ಗುಡಿ' ಎಂಬ ಕವಿಕಲ್ಪನೆಯನ್ನು ಶಾಸನಕಾರ ನೆನಪಿಸುತ್ತಾನೆ.

ವೀರಬಲ್ಲಾಳನ ಮುಖಪಂಕಜದಲ್ಲಿ ಭಾರತಿ ನರ್ತಿಸುತ್ತಾಳೆ[37] ಎಂದು ಆಶ್ರಿತರಾಜನನ್ನು ಶಾಸನಕವಿಯೊಬ್ಬ ಸ್ತುತಿಸಿರುವುದನ್ನು ಕಾಣಬಹುದು. ವೀರಬಲ್ಲಾಳನ ಆಸ್ಥಾನದಲ್ಲಿದ್ದ ಹಾಗೂ ಅವನಿಂದಲೇ ಕವಿಚಕ್ರವರ್ತಿ ಎಂಬ ಬಿರುದನ್ನು ಸ್ವೀಕರಿಸಿದ ಜನ್ನನು 'ತನ್ನ ಮುಖಕಮಲದಲ್ಲಿ ವಾಣಿ ಪರಿಮಳದಂತೆ ನೆಲಸಿರಲಿ' ಎಂದು ಸ್ತುತಿಸಿರುವುದನ್ನು ಈಗಾಗಲೇ ಗಮನಿಸಿದ್ದೇವೆ. ವಾಮಶಕ್ತಿ ಎಂಬ ಕಾಳಾಮುಖ ಯತಿಯನ್ನು ಶಾಸನವೊಂದು **'ವದನಂ ವಾಣೀನರ್ತನ ಸದನಂ'**[38] ಎಂದು ಹೊಗಳಿದೆ. ಇನ್ನೊಂದು ಶಾಸನದಲ್ಲಿ, ಚತುರ್ಮುಖ ಬ್ರಹ್ಮನ ಮುಖವನ್ನು ಅಗಲಿ ಆಗಮಾಚಾರ್ಯನೂ ಸತ್ಕವಿತೆಯಲ್ಲಿ ಅಭಿಜ್ಞನೂ ಆದ ಮುನಿಯೊಬ್ಬನ ಮುಖಾಂಭೋಜದಲ್ಲಿ ಸರಸ್ವತಿಯು ನೃತ್ಯ ಮಾಡುತ್ತಾಳೆ ಎಂದಿದೆ.[39] ಬ್ರಹ್ಮನ ಮುಖದಲ್ಲಿ ನೆಲೆಸಿರುವ ಸರಸ್ವತಿಯು ನನ್ನ ಮುಖದಾವರೆಯಲ್ಲಿ ನೆಲೆಸಲಿ ಎಂದೋ ಅಥವಾ ನರ್ತಿಸಲಿ ಎಂದೋ ಸರಸ್ವತಿಯನ್ನು ಕವಿಗಳು ಸ್ತುತಿಸುವುದು ಸಂಪ್ರದಾಯ. ಶಾಸನಗಳಲ್ಲೂ ಅದೇ ಪರಿಭಾಷೆಯಿದೆ. ನಾಗಚಂದ್ರನು ತನ್ನ 'ರಾಮಚಂದ್ರಚರಿತಪುರಾಣ' ಕೃತಿಯನ್ನೇ ಸರಸ್ವತಿಯ ನರ್ತನಕ್ಕೆ ವೇದಿಕೆಯಾಗಿಸಿದ್ದರೆ, ಶಾಸನಗಳಲ್ಲಿ ವೀರಬಲ್ಲಾಳ, ವಾಮಶಕ್ತಿ ಮೊದಲಾದವರ ಮುಖಪಂಕಜವೇ ಸರಸ್ವತಿಯ ನರ್ತನಕ್ಕೆ ವೇದಿಕೆಯಾಗಿದೆ.

ಸರಸಿಜಗರ್ಭನಾದ ಬ್ರಹ್ಮನ ಮುಖಪದ್ಮವನ್ನು ಒಲ್ಲದೆ ವೇದವಿದ್ಯಾಪಾಂರಂಗತರಾದವರ ಮುಖದಲ್ಲಿ ಸರಸ್ವತಿಯು ನೆಲೆ ನಿಲ್ಲುತ್ತಾಳೆ[40] ಎಂಬ ಶಾಸನವೊಂದರ ಮಾತಿನಲ್ಲಿ, 'ವಿದ್ಯೆ'ಯೇ ಸರಸ್ವತಿಯಾಗಿದ್ದಾಳೆ. ನಾಗವರ್ಮನ ಛಂದೋಂಬುಧಿಯಲ್ಲಿ ಬಂದಿರುವ 'ಸರಸಿಜಗರ್ಭನ ಮುಖಾಂಬುಜದಿಂದಂ ಅಗಲ್ದು ಬಂದು ವಾಕ್‌ಸತಿ ಕವಿ ನಾಗವರ್ಮನಾ ಮುಖಪಂಕಜದೊಳ್ ಕೂರ್ತು ನೆಲೆಸಲಿ' ಎಂಬ ಸರಸ್ವತಿಯ ಸ್ತುತಿಯಿಂದ ಈ ಸಾಲು ಪ್ರಭಾವಿತವಾಗಿರುವಂತಿದೆ.

---

35. ಎ.ಕ.–10 ಅರಸೀಕೆರೆ 155; ಕ್ರಿ.ಶ.12–14ನೇ ಶತಮಾನ
36. ಎ.ಕ.–10 ಅರಸೀಕೆರೆ 31; ಕ್ರಿ.ಶ.1219
37. ಎ.ಕ.–10 ಅರಸೀಕೆರೆ 161; ಕ್ರಿ.ಶ.1191
38. E.C.–VII-i Sk 102; 1162AD [Old Series]
39. ಎ.ಕ.–2 ಶ್ರವಣಬೆಳಗೊಳ 70(63); ಕ್ರಿ.ಶ.1163
40. ಎ.ಕ.–10 ಅರಸೀಕೆರೆ 160; ಕ್ರಿ.ಶ.1161. ಎ.ಕ.–10. ಅರಸೀಕೆರೆ 163; ಕ್ರಿ.ಶ.12ನೇ ಶತಮಾನ

ವಿಶೇಷ ಕಲ್ಪನೆಗಳು

ಎರಡು ಶಾಸನಗಳಲ್ಲಿ ಮಾತ್ರ ವಿಶೇಷವಾಗಿ ಕ್ಷೀರಸಮುದ್ರಕ್ಕೂ ಅಮೃತಮಂಥನದ ಕಥೆಗೂ ಸರಸ್ವತಿಗೂ ಸಂಬಂಧವನ್ನು ಕಲ್ಪಿಸಲಾಗಿದೆ. ಎರಡನೇ ಬಲ್ಲಾಳನ ಮಹಾಸಾಮಂತ ದುಮ್ಮೆಯ ನಾಯಕನನ್ನು ವೀರನೆಂದು ಹೊಗಳುವಾಗ, **ಕ್ಷೀರ ಸಮುದ್ರದಲ್ಲಿ ಸರಸ್ವತಿಯು ಲಕ್ಷ್ಮಿಯೊಂದಿಗೆ ಜನಿಸಿ ದುಮ್ಮೆಯ ನಾಯಕನ ಭುಜದಲ್ಲಿ ನೆಲೆನಿಂತು ರಕ್ಷಿಸುತ್ತಿದ್ದಳು'**[41] ಎಂದು ಶಾಸನವೊಂದು ಹೇಳುತ್ತದೆ. ಇದು ವೀರನ ಭುಜದಲ್ಲಿ ನೆಲೆಸಿರುವುದರಿಂದ ಸರಸ್ವತಿಯು ವೀರದೇವತೆ, ಯುದ್ಧದೇವತೆ ಎಂಬ ಕಲ್ಪನೆಗೆ ಅನುಗುಣವಾಗಿದೆ. ವೇದಗಳಲ್ಲಿ ಸರಸ್ವತಿಗೆ ರಕ್ಷಣಾದೇವತೆ ಮತ್ತು ಯುದ್ಧದೇವತೆ[42] ಎಂಬ ಸ್ವರೂಪಗಳು ಇರುವುದನ್ನು ಈಗಾಗಲೇ ಗಮನಿಸಿದ್ದೇವೆ. ಆದರೆ, ಸರಸ್ವತಿಯು ಕ್ಷೀರಸಮುದ್ರದಲ್ಲಿ ಹುಟ್ಟಿದವಳು ಎಂಬ ವಿಷಯ ಈ ಶಾಸನದಲ್ಲಿ ಹೊಸದಾಗಿ ಬಂದಿದೆ. ಕೊಪ್ಪಳಜಿಲ್ಲೆ ಗಂಗಾವತಿ ತಾಲ್ಲೂಕು ಆನೆಗೊಂದಿಯ ಒಂದು ಶಾಸನದಲ್ಲಿ ಕುಂಬಾರರ ಸೃಷ್ಟಿಪುರಾಣವಿದೆ.[43] ಅದರಲ್ಲಿ ಬರುವ ಅಮೃತಮಂಥನದ ಕಥೆಯಲ್ಲಿ, ಅಮೃತಮಂಥನದ ಸಂದರ್ಭದಲ್ಲಿ ಹುಟ್ಟಿದ ಪಾಶ ಅಂಕುಶ ಮತ್ತು ಪುಸ್ತಕಗಳನ್ನು ಶಿವನು ಸರಸ್ವತಿಗೆ ಕೊಟ್ಟನೆಂದು ಹೇಳಿದೆ.

ನಯಸೇನಸೂರಿ ಎಂಬುವವನು ಅತ್ಯಂತ ಪ್ರೀತಿಯಿಂದ ತನ್ನ ಮುಖದಲ್ಲಿ ಸರಸ್ವತಿಯನ್ನು ಧರಿಸಿದ್ದರಿಂದ ಕೀರ್ತಿಲಕ್ಷ್ಮಿಯು **'ನಾನಿರೆನ್ ಅವಳಿರ್ಕೆ, ಚಿಃ ಸವತಿಯೊಳ್ ಪುದುವಾಳ್ವುದು ಕಷ್ಟಂ'** ಎಂದು ನಿಷ್ಠುರ ವಚನಗಳಿಂದ ನಯಸೇನಸೂರಿಯನ್ನು ದೂರಿ ಹೊರಟುಹೋದಳು[44] ಎಂಬ ಕಲ್ಪನೆಯನ್ನು ಶಾಸನವೊಂದು ಚಿತ್ರಿಸಿದೆ. ಲಕ್ಷ್ಮಿ-ಸರಸ್ವತಿಯರ ಈ ಜಗಳ ಬ್ರಹ್ಮವೈವರ್ತಪುರಾಣ ಮತ್ತು ದೇವೀ ಭಾಗವತ ಮಹಾಪುರಾಣಗಳಲ್ಲಿ ಬರುವ ಲಕ್ಷ್ಮಿ, ಸರಸ್ವತಿ ಮತ್ತು ಗಂಗೆಯರ ಸವತಿಮತ್ಸರದ ಕಥೆಯನ್ನು ನೆನಪಿಸುತ್ತದೆ.

ಮೈಸೂರಿನ ಚಾಮುಂಡೇಶ್ವರೀ ದೇವಸ್ಥಾನದಲ್ಲಿರುವ 'ನಕ್ಷತ್ರಮಾಲಿಕೆ' ಎಂಬ ಬಂಗಾರದ ವಡವೆಯ ಮೇಲೆ ಚಾಮುಂಡೇಶ್ವರಿಯನ್ನು ಸ್ತುತಿಸಿರುವ ಒಂದು ಶಾಸನವಿದೆ.[45] ಅದರಲ್ಲಿ ಮಹಾಕಾಳೀ ಮಹಾಲಕ್ಷ್ಮೀ ಮಹಾವಾಣೀಸ್ವರೂಪಿಣೀ ಎಂದು ಚಾಮುಂಡೇಶ್ವರಿಯನ್ನು ಸ್ತುತಿಸಲಾಗಿದೆ. ಮೂಲ ಪ್ರಕೃತಿಯ ಸಾತ್ವಿಕಗುಣ ಸರಸ್ವತಿಯಾಗಿ, ರಾಜಸಗುಣ ಲಕ್ಷ್ಮಿಯಾಗಿ ಮತ್ತು ತಾಮಸಗುಣ ಕಾಳಿಯಾಗಿ ರೂಪಗೊಂಡಿತು ಎಂಬ ಮಾರ್ಕಂಡೇಯಪುರಾಣದ ಕಥೆ ಮೇಲಿನ ಸ್ತುತಿಗೆ ಆಧಾರವಾಗಿರುವಂತೆ

---

41. ಎ.ಕ.-7 ನಾಮಂ 132; ಕ್ರಿ.ಶ.1179
42. ಋಗ್ವೇದ 10.65.13 (ಪಾವೀರವೀ -ಆಯುಧವತೀ)
43. ಕ.ವಿ.ಶಾ.ಸಂ.-2 ಗಂಗಾವತಿ 18; ಕ್ರಿ.ಶ.1199
44. EI -XVI, 59; 1081AD
45. ಎ.ಕ.-5 ಮೈಸೂರು 157; ಕ್ರಿ.ಶ.1857

ತೋರುತ್ತದೆ. ತಾಂತ್ರಿಕ ಆಚರಣೆಯಲ್ಲಿ ಮಹಾಸರಸ್ವತಿಯ ರೂಪ ಉಗ್ರವಾಗಿರುತ್ತದೆ. ಅದೇ ಶಾಸನದಲ್ಲಿ ಮತ್ತೊಂದು ಕಡೆ ಸರಸ್ವತಿಯನ್ನು ಉಮಾ ಮತ್ತು ಇಂದ್ರಾಕ್ಷಿಯರ ಜೊತೆಯಲ್ಲಿ ಉಲ್ಲೇಖಿಸಲಾಗಿದೆ. ಮೈಸೂರಿನ ಅರಮನೆಯಲ್ಲಿರುವ ಸಿಂಹಾಸನದ ಛತ್ರಿಯ ಮೇಲಿನ ಶಾಸನದಲ್ಲಿ,[46] ಲಕ್ಷ್ಮಿ-ಪಾರ್ವತಿಯರೊಂದಿಗೆ ಸರಸ್ವತಿಯ ಹೆಸರು ಉಲ್ಲೇಖವಾಗಿದೆ.

ನಕ್ಷತ್ರಮಾಲಿಕೆಯಲ್ಲಿರುವ ಮಹಾಕಾಳೀ ಮಹಾಲಕ್ಷ್ಮೀ ಮಹಾವಾಣೀಸ್ವರೂಪಿಣೀ ಎಂಬ ಮಾತು, ಅದಕ್ಕಿಂತ 39 ವರ್ಷಗಳ ಕಾಲ ಹಳೆಯದಾದ ಕನ್ನಂಬಾಡಿ ಗ್ರಾಮದ ಶಾಸನದಲ್ಲೂ ಬಂದಿದೆ. ಅದೇ ಊರಿನ ಇನ್ನೆರಡು ಶಾಸನಗಳಲ್ಲೂ ಪುನರಾವರ್ತನೆಯಾಗಿದೆ.[47] ಈ ಶಾಸನಗಳಲ್ಲಿ ಮಹಾಲಕ್ಷ್ಮಿ, ಮಹಾಕಾಳಿ ಮತ್ತು ಸರಸ್ವತಿಯರನ್ನು ಭೂತಗಣಕ್ಕೆ ಅಧಿಷ್ಠಾನದೇವತೆಗಳೆಂದು ಕರೆಯಲಾಗಿದೆ.

ಸರಸ್ವತಿಯ ವರಪ್ರಸಾದಿತರು

ಸರಸ್ವತಿಯನ್ನು ಆರಾಧಿಸಿ ವಿದ್ಯೆಯನ್ನು ಗಳಿಸಿದ್ದರಿಂದ ಆದ ಲಾಭಗಳನ್ನು ಕೆಲವು ಶಾಸನಗಳಲ್ಲಿ ಹೇಳಿದೆ. ಕೆಲವರಿಗೆ ಸರಸ್ವತಿಯು **ಸತ್ಯ**[48] ಹೇಳುವ ಗುಣವನ್ನು ದಯಪಾಲಿಸಿದ್ದರೆ, ಇನ್ನು ಕೆಲವರಿಗೆ ವಿವೇಕವನ್ನು ದಯಪಾಲಿಸಿದ್ದಾಳೆ. **ಸರಸ್ವತಿಯ ಆಶೀರ್ವಾದವಿದ್ದುದರಿಂದಲೇ ತನಗೆ ಎಲ್ಲಾ ಅಧಿಕಾರಗಳು**[49] **ಸಿಕ್ಕವೆಂದು** ಒಬ್ಬ ಶಾಸನಕವಿ ಹೇಳಿಕೊಂಡಿದ್ದಾನೆ. ಒಂದು ಶಾಸನದಲ್ಲಿ ಸೇನಾವರ ಮುಖ್ಯಸ್ಥ ಮಾರನನ್ನು **'ಶ್ರೀಸರಸ್ವತಿವರಪ್ರಸಾದಿತ'**[50] ಎಂದು ಕರೆಯಲಾಗಿದೆ. ಯುದ್ಧವೀರ ಬರ್ಮ್ಮ ಎಂಬುವವನ ಹೆಸರನ್ನು ಸರಸ್ವತಿಯೇ ಸ್ವರ್ಗದಲ್ಲಿ ಬರೆದಳಂತೆ **(ವಾಗ್ವಧು ಬರೆದಳು 'ವಿಸಸನಗಲಿ ಬರ್ಮ್ಮ'ನೆಂಬಿವೆಂಟಕ್ಕರಂ)**[51] ಎಂದು ಶಾಸನವೊಂದು ಹೇಳಿದೆ. **'ಮಂಗರಾಜ ಎಂಬ ಕವಿಯ ಮಾತು ಸರಸ್ವತಿಯ ವೀಣೆಯಂತೆ'**[52] ಎಂದು ಶಾಸನವೊಂದು ಹೇಳುತ್ತದೆ. **'ಗಂಗೆ ಎಂಬುವವಳು ಸರಸ್ವತಿಯ ಸಹಚರಿಯಾಗಿ ವಿದ್ಯಾಪರಿಣಿತಿಯನ್ನು ಹೊಂದಿದಳು'**[53] ಎಂದು ಇನ್ನೊಂದು ಶಾಸನದಲ್ಲಿ ಹೇಳಿದೆ. **ಶಂಕರಸ್ವಾಮಿ ಎಂಬುವವನು ವಾಗ್ವಧುವಿಗೆ ಕೈಗನ್ನಡಿಯಂತೆ ಮತ್ತು ಆತನ ನಾಲಗೆಯೇ ಸಾರಸ್ವತಪೀಠ** ಎಂದು ಇನ್ನೊಂದು ಶಾಸನದಲ್ಲಿ ವರ್ಣಿಸಲಾಗಿದೆ.[54]

---

46. ಎ.ಕ.-5 ಮೈಸೂರು 97
47. ಎ.ಕ.-6 ಪಾಂಡವಪುರ 21, 23 & 37; ಕ್ರಿ.ಶ.1818
48. ಎ.ಕ.-8 ಹೊಳೇನರಸೀಪುರ 1; ಕ್ರಿ.ಶ.1276, ಎ.ಕ.-10, ಅರಸೀಕೆರೆ 139; ಕ್ರಿ.ಶ.1194 & ಎ.ಕ.-7 ನಾಮಂ 73, 74 & 76; ಕ್ರಿ.ಶ.1284
49. ಕ.ವಿ.ಶಾ.ಸಂ.-2 ಯಲಬುರ್ಗಾ 16 ; ಕ್ರಿ.ಶ.1132
50. ಎ.ಕ.-11 ಚಿಕ್ಕಮಗಳೂರು 146
51. KI –IV, 10
52. ಎ.ಕ.-2 ಶ್ರವಣಬೆಳಗೊಳ 364
53. EI –XIII, 301; 1125AD
54. EI – XV, 34; 1139AD

ಸರಸ್ವತೀ ಸಂಬಂಧವಾದ ಬಿರುದುಗಳು

ಶಾಸನಗಳಲ್ಲಿ ಬರುವ ಅನೇಕ ವ್ಯಕ್ತಿಗಳ ಬಿರುದುಗಳು ಸರಸ್ವತಿಯ ಗುಣಗಳನ್ನು ಒಳಗೊಂಡಿರುತ್ತವೆ. ಈ ಬಿರುದುಗಳನ್ನು ಗಮನಿಸಿದಾಗ ಅವುಗಳನ್ನು ಬರೆದವರ ಕಾವ್ಯರಚನಾ ಸಾಮರ್ಥ್ಯ, ವಿದ್ವತ್ ಹಾಗೂ ವಾಕ್ಚತುರತೆಗಳು ಬೆರಗನ್ನು ಮೂಡಿಸುತ್ತವೆ. ಈ ಬಿರುದುಗಳ ವಿವಿಧ ರೂಪಗಳನ್ನು ಅರಿಯುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಉದಾಹರಣೆಗೆ ಒಂದು ಶಾಸನದಲ್ಲಿ, ವಿದ್ಯಾವಂತೆ ಮತ್ತು ನೃತ್ಯಗಾರ್ತಿ ಎಂದು ಪ್ರಸಿದ್ಧಳಾದ ಶಾಂತಲೆಯನ್ನು **'ಸರಸ್ವತಿ'**[55] ಎಂದೇ ಕರೆಯಲಾಗಿದೆ. ಹಲವಾರು ಕಡೆ ಉಲ್ಲೇಖವಾಗಿರುವ **'ಸರಸ್ವತೀನಿವಾಸ'**[56] ಎಂಬ ಬಿರುದು ವಿಷ್ಣುವರ್ಧನನಿಗೂ ಇತ್ತು. 'ಸರಸ್ವತೀನಿವಾಸ' ಮತ್ತು **'ಸರಸ್ವತೀನಿಳಯ'**[57] ಎಂಬ ಬಿರುದುಗಳು ಸರಸ್ವತಿಗೆ ಆಶ್ರಯ ನೀಡಿದವರಿಗೆ ಅಂದರೆ ವಿದ್ಯೆ, ಸಾಹಿತ್ಯ, ಮತ್ತು ಸಂಸ್ಕೃತಿಯನ್ನು ಪೋಷಿಸುತ್ತಿದ್ದವರಿಗೆ, ಹಾಗೂ ಒಳ್ಳೆಯ ವಿದ್ಯಾವಂತರಿಗೆ ಸಲ್ಲುತ್ತಿದ್ದವು.

ಮುದ್ದಣ್ಣನಾಯಕ ಎಂಬುವವನ್ನು **'ಸರಸ್ವತೀಸಮಯಸಂರಕ್ಷಣ'**[58] ಎಂದು ಶಾಸನವೊಂದರಲ್ಲಿ ಕರೆಯಲಾಗಿದೆ. ಸಮಯ ಎಂದರೆ ಧರ್ಮ ಎಂಬ ಅರ್ಥವಿದೆ. ಸರಸ್ವತಿಯನ್ನು ಆರಾಧಿಸುವವರನ್ನು ಸಂರಕ್ಷಿಸುವವರಿಗೆ ಅಥವಾ ವಿದ್ಯಾಕೇಂದ್ರಗಳಿಗೆ ಪ್ರೋತ್ಸಾಹ, ರಕ್ಷಣೆ ಕೊಡುತ್ತಿದ್ದವರಿಗೆ ಇಂತಹ ಬಿರುದು ಸಲ್ಲುತ್ತಿತ್ತೆಂದು ಕಾಣುತ್ತದೆ. 'ಸಾರಸ್ವತ ಮತವನ್ನು ಸಂರಕ್ಷಣೆ ಮಾಡಿದವರು' ಎಂದೂ ಅರ್ಥೈಸಬಹುದು.

ಅಮೃತಾಪುರದ ಶಾಸನದಲ್ಲಿ ಜನ್ನನು ತನ್ನನ್ನು **'ಸರಸ್ವತೀಕರ್ಣಪತ್ರಂ'**[59] ಎಂದು ಕರೆದುಕೊಂಡಿದ್ದಾನೆ. ಹೊಯ್ಸಳ ವಿಷ್ಣುವರ್ಧನನಿಗೆ **'ಸರಸ್ವತೀಕರ್ಣಾವತಂಸ'**[60] ಎಂಬ ಬಿರುದು ಇತ್ತು. ಚಾಳುಕ್ಯ ಅರಸ ತ್ರೈಲೋಕ್ಯಮಲ್ಲನ ದಂಡನಾಯಕ ಸೋಮರಸನ ಪತ್ನಿಯನ್ನು ವರ್ಣಿಸುವಾಗ **'ಭಾರತೀಕರ್ಣಾವತಂಸೆ'**[61] ಎನ್ನಲಾಗಿದೆ. ಕೆಲವರಿಗೆ **'ಸರಸ್ವತೀಕುಂಡಲಾಭರಣರುಂ'**[62] ಎಂಬ ಬಿರುದೂ ಬಳಕೆಯಾಗಿದೆ. ಕರ್ಣಪತ್ರ ಎಂಬುದಕ್ಕೆ ಕಿವಿಯೋಲೆ, ಕಿವಿಯಾಭರಣ ಎಂಬ ಅರ್ಥಗಳಿವೆ. ಹಾಗೆಯೇ ಅವತಂಸ ಎಂಬುದಕ್ಕೆ ಲೋಲಾಕು, ತೂಗಾಡುವ ಆಭರಣ, ಬೈತಲೆಗೆ ಧರಿಸುವ ಬೊಟ್ಟು ಎಂಬ

---

55. ಎ.ಕ.–9 ಬೇಲೂರು 96
56. ಎ.ಕ.–9 ಬೇಲೂರು 106
57. ಎ.ಕ.–3 ಗುಂಡ್ಲುಪೇಟೆ 17
58. ಕ.ವಿ.ಶಾ.ಸಂ.–2. ಕುಷ್ಟಗಿ 28; 1095
59. ಎ.ಕ.–12 ತರೀಕೆರೆ 12; ಕ್ರಿ.ಶ.1198
60. ಎ.ಕ. –2 ಶ್ರವಣಬೆಳಗೊಳ 176
61. ಕ.ವಿ.ಶಾ.ಸಂ.–2. ಯಲಬುರ್ಗಾ 32; ಕ್ರಿ.ಶ.11ನೇ ಶತಮಾನ
62. ಎ.ಕ.–3 ಗುಂಡ್ಲುಪೇಟೆ 17

ಅರ್ಥಗಳಿವೆ. ಕರ್ಣಾವತಂಸ ಎಂದರೆ ಕಿವಿಯಲ್ಲಿ ತೂಗಾಡುವ ಆಭರಣ ಎಂದಾಗುತ್ತದೆ. ಸರಸ್ವತಿಯು ಇಂತಹವರ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದಳೆಂದೂ, ಇವರು ಆಕೆಗೆ ಹತ್ತಿರವಾಗಿದ್ದರು ಎಂದೂ ಈ ಬಿರುದು ಸೂಚಿಸುತ್ತದೆ.

ವೀರಬಲ್ಲಾಳನ ರಾಣಿ ಮಹಾದೇವಿಯನ್ನು **'ಜಂಗಮಸರಸ್ವತೀ'**[63] ಎಂದು ಕರೆಯಲಾಗಿದೆ. ಜಂಗಮ ಎಂಬ ಕಲ್ಪನೆಯೇ ಅತ್ಯಂತ ವಿಸ್ತೃತವಾದದ್ದು. ಜಂಗಮ ಎಂದರೆ ಚಲನಶೀಲವಾದದ್ದು, ಚೇತನಶೀಲವಾದದ್ದು, ಕ್ಷಯವಿಲ್ಲದ್ದು, ಶಾಶ್ವತವಾದದ್ದು ಎಂಬ ಹಲವಾರು ಅರ್ಥಗಳಿವೆ. ಜಂಗಮಸರಸ್ವತೀ ಎಂದರೆ ವಿದ್ಯಾವಂತೆ, ನಡೆದಾಡುವ ಜ್ಞಾನಭಂಡಾರ, ಜ್ಞಾನಿ ಎಂದು ಮುಂತಾಗಿ ಅರ್ಥ ಮಾಡಬಹುದು. ಆಧುನಿಕ ಯುಗದಲ್ಲೂ 'ನಡೆದಾಡುವ ವಿಶ್ವಕೋಶ' 'ನಡೆದಾಡುವ ಜ್ಞಾನಭಂಡಾರ' ಎಂಬ ಮಾತುಗಳನ್ನು ಕೆಲವರಿಗೆ ಅನ್ವಯಿಸುತ್ತಾರೆ.

ಸರಸ್ವತೀ ಪಾದೋಂಭೋಜ, ಪಾದಪದ್ಮೋಪಜೀವಿ ಎಂಬ ಬಿರುದುಗಳು ಕೆಲವು ಶಾಸನಗಳಲ್ಲಿ ಬಂದಿವೆ. ಹೆಚ್ಚಿನ ಸಂದರ್ಭಗಳಲ್ಲಿ ಶಿಲ್ಪಾಚಾರ್ಯರು, ರೂವಾರಿಗಳು, ಶಾಸನಗಳ ಕಂಡರಣೆಕಾರರು ಈ ಬಿರುದುಗಳನ್ನು ಬಳಸಿದ್ದಾರೆ. ಬೇಲೂರಿನ ಒಂದು ಶಾಸನದಲ್ಲಿ **'ಸರಸ್ವತೀ ಪಾದೋಂಭೋಜ'**[64]ನಾದ ಕಾಡೋಜನ ಉಲ್ಲೇಖ ಬರುತ್ತದೆ. ಈ ಕಾಡೋಜ ಗದುಗಿನ ಸರಸ್ವತಿಯ ಶಿಲ್ಪವನ್ನು ಮಾಡಿದ ರೂವಾರಿ ಎಂಬುದು ಅದೇ ಶಾಸನದಿಂದ ತಿಳಿಯುತ್ತದೆ.

ವಾಗ್ವನಿತಾಪತಿ[65], **ವಾಕ್ಪತಿ**[66], **ವಾಣೀಕಾನ್ತನ್**[67] ಈ ಬಗೆಯ ಬಿರುದುಗಳನ್ನು ಶಾಸನಗಳಲ್ಲಿ ಕೆಲವರು ಹೇಳಿಕೊಂಡಿದ್ದಾರೆ. ಕುರ್ಕ್ಯಾಲ ಶಾಸನದಲ್ಲಿ ಪಂಪನ ತಮ್ಮ ಜಿನವಲ್ಲಭನಿಗೆ **'ವಾಗ್ವಧೂವರವಲ್ಲಭಂ'**[68] ಎಂಬ ಬಿರುದನ್ನು ಹೇಳಲಾಗಿದೆ. ಇವುಗಳನ್ನು ಬಿರುದುಗಳು ಎನ್ನುವುದಕ್ಕಿಂತ ವಿಶೇಷಣಗಳು ಎನ್ನಬಹುದು. ವೇದಾಂತ ಪಂಡಿತರೇ ಆಗಿರಲಿ, ಸರ್ವಶಾಸ್ತ್ರಪಾರಂಗತರೇ ಆಗಿರಲಿ, ಅವರೆಲ್ಲರೂ ಈ ರೀತಿಯ ವಿಶೇಷಣಗಳನ್ನು ಹಚ್ಚಿಕೊಂಡರೆ ಸರಸ್ವತಿಯ ಗತಿ ಏನಾಗಬೇಡ? ವಾಕ್ಪತಿ ಎಂಬುದಕ್ಕೇನೋ ವಾಕ್ಕಿಗೆ ಒಡೆಯನಾದವನು ಎಂದೋ, ವಾಕ್ಕೋವಿದನೆಂದೋ ಅರ್ಥ ಹೇಳಬಹುದು. ವಾಣೀಕಾನ್ತನ್ ಎಂಬುದಕ್ಕೂ ಹೀಗೆಯೇ ಸಮಾಧಾನ ಹೇಳಬಹುದು. ಆದರೆ ವಾಗ್ವನಿತಾಪತಿ ಎಂಬುದಕ್ಕೆ ಸಮಾಧಾನವೇನು? ಎಂಬ ಪ್ರಶ್ನೆಗಳು ಸಾಮಾನ್ಯವಾಗಿ ಉದ್ಭವಿಸುತ್ತವೆ. ವಾಗ್ವನಿತೆ ಎಂದರೆ ಸರಸ್ವತಿ

---

63. ಎ.ಕ.-10 ಅರಸೀಕೆರೆ 37
64. ಎ.ಕ.-9 ಬೇಲೂರು 88
65. ಎ.ಕ.-9 ಬೇಲೂರು 405
66. ಎ.ಕ.-10 ಅರಸೀಕೆರೆ 161; ಕ್ರಿ.ಶ. 119[illegible]
67. ಎ.ಕ.-9 ಬೇಲೂರು 328; ಕ್ರಿ.ಶ. 113[illegible]
68. ಕ.ವಿ.ಶಾ.ಸಂ.-5, ಭಾಗ -2, 404

ಎಂಬುದು ಸ್ಪಷ್ಟ. ಆದರೆ ಕವಿಗಳು, ಶಾಸನಕಾರರು ಹೇಳುತ್ತಿರುವುದು ಬ್ರಹ್ಮನ ಸತಿ ಸರಸ್ವತಿಯನ್ನು ಕುರಿತಲ್ಲ. ತಾನು ಸೃಷ್ಟಿಸಿದ ವಾಕ್ಸತಿಯನ್ನು ಬ್ರಹ್ಮನು ಸತಿಯಾಗಿ ಸ್ವೀಕರಿಸಿದ ಹಾಗೆ, ತನ್ನಿಂದ ಸೃಷ್ಟಿಯಾದ ಕಾವ್ಯಾತ್ಮಕವಾದ ವಾಕ್ ಅಥವಾ ಕಾವ್ಯ ಎಂಬ ಸರಸ್ವತಿಗೆ ತಾನೇ ಪತಿಯೆಂದು ಕವಿ ಭಾವಿಸುತ್ತಾನೆ. ಪತಿ ಎಂದರೆ ಪ್ರಭುತ್ವ ಸಾಧಿಸಿದವನು ಎಂಬ ಅರ್ಥವೂ ಇದೆ. ಆದ್ದರಿಂದ ವಾಕ್‌ಪತಿ ಎಂದರೆ ಮಾತಿನ ಮೇಲೆ ಪ್ರಭುತ್ವ ಸಾಧಿಸಿದವನು ಎಂದೂ ಅರ್ಥೈಸಬಹುದು. ಮಾತನ್ನೂ ಕಾವ್ಯಶಕ್ತಿಯನ್ನೂ ಸಿದ್ಧಿಸಿಕೊಂಡವನು ಅಥವಾ ಸಾಕ್ಷಾತ್ಕಾರ ಮಾಡಿಕೊಂಡವನು ಎಂದೂ ಮೇಲಿನ ವಿಶೇಷಣಗಳನ್ನು ಅರ್ಥೈಸಬಹುದಾಗಿದೆ. ಬ್ರಹ್ಮನು ಸೃಷ್ಟಿಕರ್ತನಾದರೆ ಕವಿಗಳು ಅಭಿನವ ಸೃಷ್ಟಿಕರ್ತರು. ಸರಸ್ವತಿಯ ಪತಿ ಎಂದುಕೊಳ್ಳುವವರು ತಮ್ಮನ್ನು ತಾವು ಬ್ರಹ್ಮ ಎಂದು ಭಾವಿಸುತ್ತಾರೆ ಎಂಬ ಕವಿಸಮಯ ಕೂಡಾ ಇದೆ.

ಸರಸ್ವತಿ ಹೆಸರಿನ ಊರುಗಳು

ಹಾಸನ ಜಿಲ್ಲೆ ಸಾಲಗಾಮೆ[69] ಮತ್ತು ತರೀಕೆರೆ ತಾಲ್ಲೂಕು ಸಮತಳ[70] ಎಂಬ ಊರುಗಳಿಗೆ **'ಸರಸ್ವತಿಪುರ'** ಎಂಬ ಹೆಸರು ಇದ್ದುದನ್ನು ಎರಡು ಶಾಸನಗಳು ಉಲ್ಲೇಖಿಸಿವೆ. ಬೇರಾವ ವಿಶೇಷಣಗಳು ಸರಸ್ವತಿಗೆ ಈ ಶಾಸನಗಳಲ್ಲಿ ಇಲ್ಲ. ಬಹುಶಃ ಸರಸ್ವತಿಪುರ ಒಂದು ಅಗ್ರಹಾರವಾಗಿದ್ದಿರಬೇಕು.

ಸರಸ್ವತಿ ಹಬ್ಬ

ಸರಸ್ವತಿಯ ಹಬ್ಬ ನಡೆಯುತ್ತಿದ್ದ ದಿನ ಯಾವುದು ಎಂಬುದು ಶಾಸನಗಳಿಂದ ತಿಳಿಯುವ ಮತ್ತೊಂದು ವಿಷಯ. ಮಹಾನವಮಿಯ ಹಬ್ಬದಲ್ಲಿ ಸರಸ್ವತಿಯ ಪೂಜೆ[71] ನಡೆಸುವುದಕ್ಕೆ ದತ್ತಿ ಬಿಟ್ಟ ವಿಚಾರವನ್ನು ಒಂದು ಶಾಸನ ತಿಳಿಸುತ್ತದೆ. ಈಗಲೂ ನವರಾತ್ರಿಗಳಲ್ಲಿ ಏಳನೆಯದಿನ ಸರಸ್ವತಿಯನ್ನು ಪೂಜಿಸುವ ಸಂಪ್ರದಾಯವಿದೆ. ದಸರೆಯ ಈಗಿನ ರೂಪದಲ್ಲಿ ಅಲ್ಲದಿದ್ದರೂ ಅದರ ಆಚರಣೆ ಹದಿಮೂರನೇ ಶತಮಾನದಿಂದಲೂ ಇತ್ತು ಎಂಬುದಕ್ಕೆ ಈ ಸರಸ್ವತಿಹಬ್ಬದ ಉಲ್ಲೇಖ ಆಧಾರವಾಗುತ್ತದೆ.

ಸರಸ್ವತೀ ಭಂಡಾರಿಗ

'ಪುಸ್ತಕಸರಸ್ವತಿ' ಎಂಬುದು ಅತ್ಯಂತ ಜನಪ್ರಿಯ ಕಲ್ಪನೆಯಾಗಿದೆ. ವೈದಿಕರಲ್ಲಿ ವೇದಗಳು ಸರಸ್ವತಿಯಾದರೆ, ಜೈನರಲ್ಲಿ ಜೈನವೇದ-ಶ್ರುತಗಳೇ ಸರಸ್ವತಿಯೆಂಬ ಕಲ್ಪನೆಯಿದೆ. ಬಹುತೇಕ ಎಲ್ಲಾ ಸರಸ್ವತಿಯ ಶಿಲ್ಪಗಳಲ್ಲಿ ಪುಸ್ತಕ ಇದ್ದೇ ಇರುತ್ತದೆ. ಆಧುನಿಕ ಯುಗದಲ್ಲಿ ಸರಸ್ವತಿಯ ಪೂಜೆ ಮಾಡುವಾಗ ಪುಸ್ತಕಗಳನ್ನೇ ಇಡುವುದುಂಟು. ಈ ನಿಟ್ಟಿನಲ್ಲಿ, ಕ್ರಿ.ಶ.1058ರ ನಾಗಾಯಿ ಶಾಸನ,[72]

---

69. ಎ.ಕ.-8, ಹಾಸನ 58; ಕ್ರಿ.ಶ.1258

70. ಎ.ಕ.-12, ತರೀಕೆರೆ 88; ಕ್ರಿ.ಶ.1158

71. ಎ.ಕ.-9, ಬೇಲೂರು 309; ಕ್ರಿ.ಶ. 1221

72. ಹೈದರಾಬಾದ್ ಆರ್ಕಿಯೊಲಾಜಿಕಲ್ ಸೀರೀಸ್ 8. ಪು.5

ಸರಸ್ವತಿಯ ಹೆಸರನ್ನು ವಿಶೇಷವಾಗಿ ಉಲ್ಲೇಖಿಸುತ್ತದೆ. ಆ ಶಾಸನದಲ್ಲಿ ಗ್ರಂಥಾಲಯವನ್ನು ನೋಡಿಕೊಳ್ಳುವ ಗ್ರಂಥಪಾಲಕನನ್ನು **'ಸರಸ್ವತೀ ಭಂಡಾರಿಗ'** ಎಂದು ಕರೆಯಲಾಗಿದೆ. ನಾಗಾಯಿಯು ಪ್ರಾಚೀನ ಕರ್ನಾಟಕದ ಒಂದು ಪ್ರಮುಖ ವಿದ್ಯಾಕೇಂದ್ರವಾಗಿತ್ತು. ಅಲ್ಲಿದ್ದ ಮಧುಸೂದನಾಲಯದಲ್ಲಿದ್ದ ತ್ರೈಪುರುಷ ದೇವಾಲಯದ ಘಟಿಕಾಸ್ಥಾನದಲ್ಲಿ ಇನ್ನೂರೈವತ್ತು ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದರು. ಅಲ್ಲಿ ಆರು ಜನ ಉಪಾಧ್ಯಾಯರೂ ಮತ್ತು ಒಬ್ಬ ಸರಸ್ವತೀ ಭಂಡಾರಿಗನೂ ಇದ್ದರು. ಆಧುನಿಕ ಯುಗದಲ್ಲೂ ಗ್ರಂಥಾಲಯವನ್ನು 'ಸರಸ್ವತೀ ಭಂಡಾರ' ಎಂದು ಕರೆಯುವ ಪರಿಪಾಠವಿರುವುದು ಗಮನಾರ್ಹ.

ಸರಸ್ವತಿ ದೇವಾಲಯ, ಮಂಟಪ, ಶಿಲ್ಪ, ಶಿಲ್ಪಾಚಾರ್ಯರು ಇತ್ಯಾದಿ......

ಸರಸ್ವತಿಯ ದೇವಾಲಯಗಳನ್ನು ಕಟ್ಟಿಸಿದ, ಮಂಟಪ, ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿದ, ಸರಸ್ವತಿಯ ಪ್ರತಿಮೆಯನ್ನು ಮಾಡಿಸಿದ ಹಾಗೂ ಮಾಡಿದ, ಸರಸ್ವತಿಯ ಪೂಜೆಗೆ ಪಾಠಶಾಲೆಗೆ ದಾನ ದತ್ತಿಗಳನ್ನು ಬಿಟ್ಟ ವಿಚಾರ ಇವುಗಳು ಶಾಸನಗಳಿಂದ ತಿಳಿಯುವ ಇತರ ಐತಿಹಾಸಿಕ ವಿಚಾರಗಳು. ದುರದೃಷ್ಟವೆಂದರೆ ಶಾಸನಗಳು ಕೊಡುವ ಮಾಹಿತಿಯನ್ನು ಹಿಡಿದು ಸಂಬಂಧಪಟ್ಟ ಊರಿಗೆ ಹೋದರೆ ಸಾಮಾನ್ಯವಾಗಿ ಅಲ್ಲಿ ಏನೂ ಸಾಕ್ಷಿ ಇಲ್ಲದಂತಾಗಿರುವುದು.

ಕೆಲವು ಶಿಲ್ಪಗಳ ಮೇಲೆ ಕೇವಲ ಒಂದಕ್ಷರ ಅಥವಾ ರೂವಾರಿಯ ಹೆಸರನ್ನು ನಮೂದಿಸಿದ್ದರೆ, ಈ ಅಕ್ಷರ ಅಥವಾ ಹೆಸರನ್ನು ಕೆಲವೊಮ್ಮೆ ಶಾಸನಗಳೆಂದು ಪರಿಗಣಿಸದೆ ಇರುವುದರಿಂದ ಅವು ಶಾಸನಸಂಪುಟಗಳಲ್ಲಿ ದಾಖಲಾಗಿರುವುದಿಲ್ಲ. ಉದಾಹರಣೆಗೆ, ಅರಳಗುಪ್ಪೆಯ ಕೇಶವದೇವಾಲಯದ ಭಿತ್ತಿಯಲ್ಲಿರುವ ಇಪ್ಪತ್ತೊಂದು ವಿಷ್ಣುವಿನ ಶಿಲ್ಪಗಳು ಮತ್ತು ನಾಟ್ಯಸರಸ್ವತಿಯ ಶಿಲ್ಪ ಮೊದಲಾದವುಗಳ ಮೇಲೆ **'ಹೊ'** ಅಥವಾ **'ಹೊನ್ನೋಜ'** ಎಂಬ ಹೆಸರುಗಳಿವೆ. ಇಲ್ಲಿನ ನಾಟ್ಯಸರಸ್ವತಿಯ ಶಿಲ್ಪವನ್ನು ಮಾಡಿದವನು ಹೊನ್ನೋಜ ಎಂಬುದು ಇದರಿಂದ ಸಹಜವಾಗಿ ತಿಳಿಯುತ್ತದೆ.

ಗದುಗಿನ ತ್ರಿಕೂಟೇಶ್ವರ ದೇವಾಲಯದ ಆವರಣದಲ್ಲಿರುವ ಸರಸ್ವತಿಯ ದೇವಾಲಯ ಕಲ್ಯಾಣದ ಚಾಲುಕ್ಯರ ಶೈಲಿಯ ಅತ್ಯುತ್ತಮ ಕಲಾಕೃತಿಗಳಲ್ಲೊಂದು. ಅಲ್ಲಿರುವ ಸರಸ್ವತಿಯ ಶಿಲ್ಪವು ತನ್ನ ಕಲಾವೈಭವದಿಂದಾಗಿ ಹಲವಾರು ಕಲಾವಿಮರ್ಶಕರ ಗಮನ ಸೆಳೆದಿದೆ. ಆ ಶಿಲ್ಪದ ರೂವಾರಿ ಯಾರೆಂಬುದಕ್ಕೆ ಬೇಲೂರಿನ ಒಂದು ಶಾಸನ ಆಧಾರವಾಗಿದೆ. ಬೇಲೂರಿನ ಚೆನ್ನಕೇಶವ ದೇವಾಲಯದ ಕಂಬದ ಮೇಲಿರುವ ಮೂವತ್ತೇಳನೆಯ ಸಾಲಭಂಜಿಕೆಯ ಕೆಳಗಿರುವ ಶಾಸನ[73] ಈ ಪ್ರಶ್ನೆಗೆ ಉತ್ತರ ಹೇಳುತ್ತದೆ. "**ಶ್ರೀಮತು ಗದುಗಿನ ಸ್ವಯಂಭು ತ್ರಿಕುಟೇಶ್ವರದೇವರ ವಿದ್ಯಾಮನ್ತ ಸುಜನಜನಮನೋರಂಜನ**

---

73. ಎ.ಕ.–9 ಬೇಲೂರು 88

ಸರಸ್ವತೀ ಪಾದೋಂಭೋಜ ರೂವಾರಿ ಜಗದಳ ಕಾಡೋಜನ ಪುತ್ರ ನಾಗೋಜನ ಹಸ್ತ ಕೌಶಳ.......". ಮೂವತ್ತೇಳನೆಯ ಸಾಲಭಂಜಿಕೆಯ ರೂವಾರಿ ನಾಗೋಜ ಎಂಬುದು ಸ್ಪಷ್ಟ. ಈ ನಾಗೋಜನ ತಂದೆಯೇ ಜಗದಳ ಕಾಡೋಜ. ಈ ಕಾಡೋಜನೇ ಗದುಗಿನ ಸರಸ್ವತೀ ಶಿಲ್ಪದ ಕಲಾವಿದ. ಬೇಲೂರಿನ ಚೆನ್ನಕೇಶವ ದೇವಾಲಯದ ನಿರ್ಮಾಣ ಕಾಲ ಕ್ರಿ.ಶ. 1117. ಆದ್ದರಿಂದ ಈ ದೇವಾಲಯದ ನಿರ್ಮಾಣ ಕಾರ್ಯದಲ್ಲಿ ಭಾಗವಹಿಸಿದ್ದ ನಾಗೋಜನ ತಂದೆ ಜಗದಳ ಕಾಡೋಜ ರಚಿಸಿದ ಗದುಗಿನ ಸರಸ್ವತಿಯ ಶಿಲ್ಪದ ಕಾಲ ಸುಮಾರು ಕ್ರಿ.ಶ.11–12ನೆ ಶತಮಾನ ಎಂದಾಗುತ್ತದೆ.

ಬಾಗಳಿಯ ಕಲ್ಲೇಶ್ವರ ದೇವಾಲಯದ ಹಿಂಬದಿಯ ಪಟ್ಟಿಕೆಯಲ್ಲಿ ಗಂಗಯ್ಯ ಎಂಬುವವನು ಸರಸ್ವತಿಯ ಪ್ರತಿಮೆಯನ್ನು ಮಾಡಿಸಿದನೆಂದು ಬರೆಯಲಾಗಿದೆ.[74] ಬಾಗಳಿಯ ಮ್ಯೂಸಿಯಮ್ಮಿನಲ್ಲಿರುವ ಒಂದು ಸರಸ್ವತಿಯ ಶಿಲ್ಪ ಸುಮಾರು ಹನ್ನೆರಡನೇ ಶತಮಾನದ ರಚನೆ. ಬಾಗಳಿಯ ಶಾಸನದ ಕಾಲವೂ ಸುಮಾರು ಹನ್ನೆರಡನೇ ಶತಮಾನವೇ ಆಗಿರುವುದರಿಂದ ಮ್ಯೂಸಿಯಂನಲ್ಲಿರುವ ಈ ಶಿಲ್ಪವನ್ನು ಗಂಗಯ್ಯ ಮಾಡಿಸಿದ್ದಿರಬೇಕು ಎನ್ನಬಹುದು. ಅದೇ ಮ್ಯೂಸಿಯಂನಲ್ಲಿ ಸುಮಾರು ಕ್ರಿ.ಶ. ಹತ್ತನೇ ಶತಮಾನಕ್ಕೆ ಸೇರುವ ಮತ್ತೊಂದು ಸರಸ್ವತಿಯ ಶಿಲ್ಪವೂ ಇದೆ.

ಗುಲಬರ್ಗಾ ಜಿಲ್ಲೆ ಚಿತ್ತಾಪುರ ತಾಲ್ಲೂಕು ನಿಪ್ಪಾಣಿಯ ಶಾಸನವೊಂದರಲ್ಲಿ ಸರಸ್ವತೀ ಮಂಟಪವೊಂದರ ಉಲ್ಲೇಖವಿದೆ. ಶಾಸನದ ಕಾಲ ಕ್ರಿ.ಶ. 1037.[75] ಕಲ್ಯಾಣದ ಚಾಲುಕ್ಯರ ದೊರೆ ಜಗದೇಕಮಲ್ಲನ ರಾಣಿ ಸೋಮಲಾದೇವಿಯು ಸುಪಾಣಿಯನ್ನು (ನಿಪ್ಪಾಣಿಯ ಶಾಸನೋಕ್ತ ಹೆಸರು) ಆಳುತ್ತಿದ್ದಾಗ ಸರಸ್ವತಿಯನ್ನು ಪ್ರತಿಷ್ಠಾಪಿಸಿ, ದೇವಿಯ ಆರಾಧನೆಗೆ ಹಾಗೂ ಅಲ್ಲಿಯ ವಿದ್ಯಾರ್ಥಿಗಳ ಊಟ ವಸತಿಗೆಂದು 32 ಮತ್ತರು ಹೊಲ ಹಾಗೂ 2 ಮತ್ತರು ತೋಟಗಳನ್ನು ದಾನ ಕೊಟ್ಟ ಅಂಶವನ್ನು ಆ ಶಾಸನ ದಾಖಲಿಸುತ್ತದೆ. ರಾಣಿ ಸೋಮಲಾದೇವಿಯ ಮನೆವೆರ್ಗಡೆ ಮರ್ಗಸಿಂಹನು ಕವಿಜನಾಶ್ರಯನಿಷ್ಠೆಯೆಂದು ಸುಪಾಣಿಯಲ್ಲಿ ಸರಸ್ವತಿಮಂಟಪವನ್ನು ಮಾಡಿಸಿದ್ದನ್ನೂ ದಾಖಲಿಸುತ್ತದೆ. ಈಗ ನಿಪ್ಪಾಣಿಯಲ್ಲಿ ಮಲಖಾನ್ (ಮಲ್ಲಿಕಾರ್ಜುನ) ದೇವಾಲಯವೆಂದು ಕರೆಯುವ ಹದಿನಾರು ಕಂಬಗಳ ಮಂಟಪವೊಂದಿದೆ. ಅದರ ಸುತ್ತಲಿನ ಗೋಡೆ ಇತ್ತೀಚಿನದು. ಉತ್ತರಾಭಿಮುಖವಾಗಿರುವ ಮಂಟಪದಲ್ಲಿ ಹಿಂಗೋಡೆಗೆ ಅಂಟಿಕೊಂಡಂತೆ ಪೀಠವೊಂದು ಕಂಡು ಬರುತ್ತದೆ. ಪೀಠದಲ್ಲಿ ಯಾವುದೇ ಲಾಂಛನವಿಲ್ಲ, ವಿಗ್ರಹವೂ ಇಲ್ಲ. ಇದೇ ಕಂಬಗಳ ಮಂಟಪವೇ ನಿಪ್ಪಾಣಿಯ ಶಾಸನದ ಸರಸ್ವತಿಮಂಟಪವೆಂದು ಊಹಿಸಲು ಸಾಧ್ಯವಿದೆ.

---

74. ಕ.ವಿ.ಶಾ.ಸಂ.–1, ಹರಪ್ಪನಹಳ್ಳಿ 149; ಕ್ರಿ.ಶ.12ನೇ ಶತಮಾನ

75. ಕರ್ನಾಟಕ ರಾಜ್ಯ ಗೆಸೆಟಿಯರ್, ಗುಲ್ಬರ್ಗಾ ಜಿಲ್ಲೆ, ಪು. 737

ಕ್ರಿ.ಶ.1087ಕ್ಕೆ ಸೇರಿದ ಗದಗ ಜಿಲ್ಲೆಯ ಕುರ್ತುಕೋಟಿಯ ಶಾಸನವು ಎರ್ಮ್ಮೆಗನೂರ ಬಳಿಯ ಕುರುಪಟ್ಟಿಯಲ್ಲಿ ಸುಂದರವಾದ ಸರಸ್ವತೀ ದೇವಾಲಯವನ್ನು ನಿರ್ಮಿಸಿದ್ದನ್ನು ಹೇಳುತ್ತದೆ. ಆದರೆ ಅಲ್ಲಿದ್ದ ಸರಸ್ವತಿಯ ಶಿಲ್ಪವಾಗಲೀ, ಆ ದೇವಾಲಯವಾಗಲೀ ಪತ್ತೆಯಾಗಿಲ್ಲ.[76] ನವಲಗುಂದ ತಾಲ್ಲೂಕಿನ ಬೆಳವಟಿಗೆಯ, ಕ್ರಿ.ಶ.1093ರ ಶಾಸನದಲ್ಲಿ ಬೈರುಂಬರ ಮಲ್ಲಮಯ್ಯನು ಭೈರುಂಬೇಶ್ವರ ಮತ್ತು ಸರಸ್ವತೀ ದೇವತೆಗಳಿಗೆ ಅರವತ್ತು ಮತ್ತರು ಭೂಮಿಯನ್ನು ದಾನ ಮಾಡಿದ ವಿಚಾರವಿದೆ. ಬೆಳವಟಿಗೆಯಲ್ಲಿ ವಾಸ್ತುಶೈಲಿಯ ದೃಷ್ಟಿಯಿಂದ ಸಾಧಾರಣ ರಚನೆಯಾಗಿರುವ ಭೈರುಂಬೇಶ್ವರ ದೇವಾಲಯ ಇದೆ. ಅಲ್ಲಿದ್ದಿರಬಹುದಾದ ಸರಸ್ವತೀ ಶಿಲ್ಪ ಮಾತ್ರ ಪತ್ತೆಯಾಗಿಲ್ಲ.[77] ಬಾಗಲಕೋಟೆ ಜಿಲ್ಲೆಯ ಶಿರೂರು ಗ್ರಾಮದ ಶಾಸನವೊಂದು ಗೌರಬ್ಬೆ ಎಂಬುವವಳ ಮಗ ಮಾರಸಿಂಘ ಎಂಬುವವನು ಸರಸ್ವತಿಯ ವಿಗ್ರಹ ಮಾಡಿಸಿದನೆಂದು ತಿಳಿಸುತ್ತದೆ.[78] ಗದಗ ಜಿಲ್ಲೆ ನಿಡುಗುಂದಿಯ ದಾಸಿಮೇಶ್ವರ ದೇವಾಲಯದಲ್ಲಿರುವ ಶಾಸನದ ಶಿರೋಭಾಗದಲ್ಲಿ ಶಿವಲಿಂಗದ ಅಕ್ಕಪಕ್ಕದಲ್ಲಿ ವಿಷ್ಣು ಮತ್ತು ಸರಸ್ವತಿಯರನ್ನು ಕೆತ್ತಲಾಗಿದೆ.[79] ವಾಜಿವಂಶದ ಮಾರ್ತಂಡನಾಯಕನು ಜಕ್ಕೇರಿಬಾವಿಯಲ್ಲಿ ಮಾರ್ತಂಡೇಶ್ವರ, ಸರಸ್ವತಿ ಮತ್ತು ಗಣಪತಿ ದೇವಾಲಯಗಳನ್ನು ಕಟ್ಟಿಸಿದ ವಿಚಾರವನ್ನು ಒಂದು ಶಾಸನ ತಿಳಿಸುತ್ತದೆ.[80] ತಡಖೇಲ್[81] ಗ್ರಾಮದ ಶಾಸನದಲ್ಲಿ ಕಲ್ಯಾಣದ ಚಾಲುಕ್ಯ ದೊರೆ ತ್ರೈಲೋಕ್ಯಮಲ್ಲನು ತನ್ನ ಪತ್ನಿಯ ಹೆಸರಿನಲ್ಲಿ ಸರಸ್ವತಿಮಂಟಪವನ್ನು ಕಟ್ಟಿಸಿದ ವಿಚಾರವಿದೆ.

ಶ್ರವಣಬೆಳಗೊಳದ ಭಂಡಾರಬಸದಿಯಲ್ಲಿರುವ ಸರಸ್ವತಿ ಮಂಟಪವನ್ನು ಜೀರ್ಣೋದ್ಧಾರ ಮಾಡಿಸಿದ ವಿವರಗಳನ್ನು ಕ್ರಿ.ಶ.1526ರ ಒಂದು ಶಾಸನದಲ್ಲಿ ಕೊಡಲಾಗಿದೆ.[82] ಅಂದರೆ ಆ ಕಾಲಕ್ಕಾಗಲೇ ಮಂಟಪ ಸರಸ್ವತಿಮಂಟಪ ಎಂದು ಪ್ರಸಿದ್ಧವಾಗಿತ್ತು ಎಂಬುದು ಸ್ಪಷ್ಟ. ಸರಸ್ವತಿ ಮಂಟಪದ ಒಂದು ಕಂಬದ ಪೀಠಭಾಗದಲ್ಲಿ ಚತುರ್ಭುಜ ಸರಸ್ವತಿಯ ಉಬ್ಬುಶಿಲ್ಪವಿದೆ. ಈಗ ಈ ಮಂಟಪವು ಪ್ರವಚನಮಂದಿರವೂ ಆಗಿರುವುದರಿಂದ ಸರಸ್ವತಿಮಂಟಪ ಎಂಬ ಹೆಸರು ಅನ್ವರ್ಥವಾಗಿದೆ.

ಮೈಸೂರು ಸಮೀಪದ ಕನ್ನಂಬಾಡಿ ಎಂಬ ಗ್ರಾಮದಲ್ಲಿರುವ ಶಾಸನದಲ್ಲಿ ಮಹಾಕಾಳಿ. ಮಹಾಲಕ್ಷ್ಮಿ ಮತ್ತು ಸರಸ್ವತಿ ದೇವರುಗಳನ್ನು ಪ್ರತಿಷ್ಠಾಪಿಸಿದ ವಿಚಾರಗಳಿವೆ.[83] ಕೃಷ್ಣರಾಜ ಒಡೆಯರು

---

76. SII –XI-ii 134; 10873AD
77. SII –XI-ii 138; 1093AD
78. ಕ.ವಿ.ಶಾ.ಸಂ. 9, ಬಾಗಲಕೋಟೆ 41; ಕ್ರಿ.ಶ.1049
79. ಕರ್ನಾಟಕ ರಾಜ್ಯ ಗೆಸೆಟಿಯರ್, ಗುಲ್ಬರ್ಗಾ ಜಿಲ್ಲೆ. ಪು. 737
80. ಕ.ವಿ.ಶಾ.ಸಂ.–1, ಬಳ್ಳಾರಿ 36; ಕ್ರಿ.ಶ.1119
81. ಕ.ವಿ.ಶಾ.ಸಂ.–6, 77;
82. ಎ.ಕ.–10, ಚನ್ನರಾಯಪಟ್ಟಣ 143; ಕ್ರಿ.ಶ.1526
83. ಎ.ಕ.–6 ಪಾಂಡವಪುರ 23; ಕ್ರಿ.ಶ.1818

ಮೈಸೂರಿನಲ್ಲಿ ಆಳುತ್ತಿದ್ದಾಗ, ಕೊಲ್ಲಾಪುರಿ ಮಹಾಲಕ್ಷ್ಮೀ, ವುಜನಿ ಮಹಾಕಾಳೀ ಮತ್ತು ಸಹಶೀಮೆವಳಗಿನ ಮಹೇಶ್ವರಿಯರ ಉಪದ್ರವಗಳಿಂದ ವಾಂತಿ ಭೇದಿಯಿಂದ ಜನ ಸಾಯುತ್ತಿದ್ದರು. ಆಗ ಕಣ್ವಪುರಿ ಕ್ಷೇತ್ರದಲ್ಲಿದ್ದ ನಾಲ್ಕನೇ ವರ್ಣದ ಗಂಗಡಿಕಾರರಲ್ಲಿ ಜನಿಸಿದ ಬೋಗೇಗೌಡನ ಮೊಮ್ಮಗ ಮರಿನಂಜೇಗೌಡನ ಮಗ ಬೊಗೇಗೌಡನ ಪತ್ನಿ ತಿಮ್ಮಮ್ಮನ ಮಗಳು ನಂಜಮ್ಮ ಎಂಬುವವಳ ಮೇಲೆ ಅಮ್ಮನವರು ಆವಿರ್ಭವಿಸಿ ರೋಗ ಉಪದ್ರವಗಳು ಪರಿಹಾರವಾದವು. ಆಗ ಬಂದ ಕಾಣಿಕೆಯಿಂದ ನಂಜಯ್ಯನು ಕನ್ನಂಬಾಡಿ ಗ್ರಾಮದಲ್ಲಿ ಅವತಾರಭೇದದಿಂದ ಭೂತಗಣಕ್ಕೆ ಅಧಿಷ್ಠಾನದೇವತೆಗಳಾದ ಮಹಾಕಾಳಿ, ಮಹಾಲಕ್ಷ್ಮಿ ಮತ್ತು ಸರಸ್ವತಿಯರನ್ನು ಪರಿವಾರವಾಗಿ ಪ್ರತಿಷ್ಠಾಪಿಸಿದ್ದನ್ನು ಈ ಶಾಸನ ದಾಖಲಿಸುತ್ತದೆ. ನಂಜಯ್ಯನ ವಂಶಸ್ಥನಾದ ಶಿವನಂಜಯ್ಯ ಎಂಬುವವನು ಕ್ರಿ.ಶ.1862ರಲ್ಲಿ ಮಹಾಲಕ್ಷ್ಮಿ, ಮಹಾಕಾಳಿ ಮತ್ತು ಸರಸ್ವತಿದೇವರುಗಳಿಗೆ ಧ್ವಜಸ್ತಂಭಕ್ಕೆ 8 ಮಣ ತೂಕದ ಹಿತ್ತಾಳೆ ಕವಚವನ್ನು ಮಾಡಿಸಿಕೊಟ್ಟಿದ್ದನ್ನೂ ಶಾಸನ ದಾಖಲಿಸುತ್ತದೆ.[84]

ದೇವತಾ ಶಿಲ್ಪದ ಕೆಳಗೆ ಆ ದೇವತೆಯ ಹೆಸರನ್ನು ಕೆತ್ತಿಸುವುದು ಅಥವಾ ಬರೆಸುವುದು ಒಂದು ಸಂಪ್ರದಾಯ ಆಗಿದೆ. ತಲಕಾಡಿನ ವೈದ್ಯನಾಥೇಶ್ವರ ದೇವಾಲಯದ ಹೊರಭಿತ್ತಿಯಲ್ಲಿರುವ ಸರಸ್ವತಿಯ ಶಿಲ್ಪದ ಕೈಯಲ್ಲಿರುವ ಪುಸ್ತಕದಲ್ಲಿ **'ಸರಸ್ವತಿ'** ಎಂಬ ಬರಹವಿದೆ. ಗಿರಿಜಾಕಲ್ಯಾಣ ಚಿತ್ರಪಟಗಳಲ್ಲಿ ಸರಸ್ವತೀ ವೀಣೆ ನುಡಿಸುತ್ತಾ ಕುಳಿತಿರುವುದನ್ನು ಕಾಣಬಹುದು. ಗಿರಿಜಾಕಲ್ಯಾಣ ಸಂದರ್ಭದಲ್ಲಿ ಸರಸ್ವತಿಯು ಭಾಗವಹಿಸಿದ್ದಕ್ಕೂ ಸಾಕಷ್ಟು ಸಾಹಿತ್ಯಕ ನಿರೂಪಣೆಗಳಿವೆ. ಹರಿಹರನ 'ಗಿರಿಜಾಕಲ್ಯಾಣ'ದಲ್ಲಿ ಸರಸ್ವತಿಯು ಬ್ರಹ್ಮನೊಂದಿಗೆ ಹಂಸವನ್ನೇರಿ ಮದುವೆಗೆ ಬಂದ ಹಾಗೂ ಮದುವೆಮಂಟಪದಲ್ಲಿ ಲಕ್ಷ್ಮಿ ಮತ್ತು ಪಾರ್ವತಿಯರ ಜೊತೆ ನೃತ್ಯ ಮಾಡಿದ ಚಿತ್ರಣಗಳಿವೆ. ಹತ್ತೊಂಬತ್ತನೆಯ ಶತಮಾನಕ್ಕೆ ಸೇರಿದ, ಮೈಸೂರು ಜಿಲ್ಲೆಯ ಬೆಟ್ಟಹಳ್ಳಿಯ ಮಲ್ಲಿಕಾರ್ಜುನ ದೇವಾಲಯಲ್ಲಿರುವ ಚಿತ್ರಮಂಟಪದ ಗಿರಿಜಾಕಲ್ಯಾಣಕ್ಕೆ ಸಂಬಂಧಿಸಿದ ಚಿತ್ರಗಳಲ್ಲಿ ಅಷ್ಟದಿಕ್ಪಾಲಕರ ಪತ್ನಿಯರ ಚಿತ್ರಗಳ ಸಾಲಿನ ವಿವರಣೆಯಲ್ಲಿ ಸರಸ್ವತಿಯನ್ನು ಲಕ್ಷ್ಮಿ, ಪಾರ್ವತಿ ಮತ್ತು ಮೇನಕೆಯರೊಡನೆ ಸೇರಿಸಲಾಗಿದೆ.[85] ಇದೇ ಚಿತ್ರಮಂಟಪದಲ್ಲಿರುವ 'ಗಿರಿಜಾಕಲ್ಯಾಣ'ದ ಸಂದರ್ಭದಲ್ಲಿ ವೀಣೆಯನ್ನು ನುಡಿಸುತ್ತಿರುವ 'ವೀಣಾಸರಸ್ವತಿ'ಯ ಚಿತ್ರದ ಕೆಳಗೆ **'ತಂಬೂರಾ ಸರಸ್ವತೀ ಥಾನಾ'**[86] ಎಂದು ಬರೆದಿರುವುದು ವಿಶೇಷವಾಗಿದೆ.

---

84. ಎ.ಕ.-6 ಪಾಂಡವಪುರ 213; ಕ್ರಿ.ಶ.1862
85. ಎ.ಕ.-5 ತಿ.ನರಸೀಪುರ 79; ಕ್ರಿ.ಶ. 19ನೇ ಶತಮಾನ
86. ಅದೇ.

ಗಣೇಶ್ವರ, ಗೌರೇಶ್ವರ ಮತ್ತು ಸರಸ್ವತಿ ದೇವರುಗಳ ಪೂಜೆಗೆಂದು ದತ್ತಿಕೊಟ್ಟ ವಿಚಾರವನ್ನು ಕೊಳ್ಳೆಗಾಲ ತಾಲ್ಲೂಕಿನ ಸಿಂಗಾನಲ್ಲೂರಿನ ಒಂದು ಶಾಸನ[87] ದಾಖಲಿಸುತ್ತದೆ. ರಾಯಚೂರು ಜಿಲ್ಲೆಯ ದಿದ್ದಿಗಿ[88] ಎಂಬ ಊರಿನ ಒಂದು ಶಾಸನದಿಂದ ಹಲವಾರು ದೇವರುಗಳ ಜೊತೆಗೆ ಸರಸ್ವತಿಯ ಪೂಜೆಗೆ 1 ಮತ್ತರು ಭೂಮಿಯನ್ನು ದಾನ ಮಾಡಿರುವ ವಿಚಾರ ತಿಳಿಯುತ್ತದೆ. ಇದೇ ಜಿಲ್ಲೆಯ ಗಬ್ಬೂರಿನ ಒಂದು ಶಾಸನದಲ್ಲಿ ಹರದೇವನ ಮಗನಾದ ಮಾಧವಸೋಮಯಾಜಿ ಎಂಬುವವನು ತಾನು ಮಾಡಿಸಿದ ಕೇಶವ, ಹರಿಹರ, ಗಣಪತಿ, ಸೂರ್ಯ ಮತ್ತು ಸರಸ್ವತಿ ದೇವರುಗಳಿಗೆ ಭೂದಾನ ಮಾಡಿದ ವಿವರಗಳಿವೆ.[89] ಶ್ರೀಸರಸ್ವತಿ ದೇವರ ಅಂಗಭೋಗ, ನೈವೇದ್ಯಕ್ಕೆ 7 ಮತ್ತರು ಭೂಮಿಯನ್ನು ಶ್ರೀಪತಿನಾಯಕನೆಂಬುವವನು ದಾನ ಮಾಡಿದ್ದನ್ನು ಕೊಪ್ಪಳ ಜಿಲ್ಲೆ ಕುಕನೂರಿನ ಒಂದು ಶಾಸನ[90] ದಾಖಲಿಸುತ್ತದೆ. ಕ್ರಿ.ಶ.1095ಕ್ಕೆ ಸೇರಿದ ಇನ್ನೊಂದು ಶಾಸನದಲ್ಲಿ ಚಂದ್ರಶೇಖರಪಂಡಿತರ ಕಾಲನ್ನು ತೊಳೆದು ಸರಸ್ವತಿದೇವಿಗೆ ಸಿರಿಮಲಂಗೆ ಗ್ರಾಮದಲ್ಲಿ ದತ್ತಿ ಬಿಟ್ಟಿದ್ದನ್ನು ಉಲ್ಲೇಖಿಸುತ್ತದೆ. ಸರಸ್ವತಿಯ ಪೂಜೆಗೆಂದು 1 ಮತ್ತರು ಭೂಮಿಯನ್ನು ದಾನಬಿಟ್ಟ ವಿಚಾರವನ್ನು ಆಂಧ್ರಪ್ರದೇಶದ ಚಿನ್ನತುಂಬಳಂ[91] ಶಾಸನ ತಿಳಿಸುತ್ತದೆ.

ಸರಸ್ವತಿಯ ವಿಚಾರಗಳನ್ನು ನೇರವಾಗಿ ತಿಳಿಸುವ ಶಾಸನಗಳು ಇಲ್ಲದಿರುವುದರಿಂದ ಸಂದರ್ಭಾನುಸಾರವಾಗಿ ಉಲ್ಲೇಖವಾಗಿರುವ ವಿಷಯಗಳನ್ನಷ್ಟೇ ಇಲ್ಲಿ ಗಮನಿಸಲಾಗಿದೆ. ಶಾಸನಕಾರರ ಕಲ್ಪನೆಯಲ್ಲೂ ಸರಸ್ವತಿಯು ಬ್ರಹ್ಮನಿಂದ ಸೃಷ್ಟಿಯಾಗಿ ಆತನ ಮುಖದಲ್ಲಿಯೇ ನೆಲೆನಿಂತವಳು. ಬ್ರಹ್ಮನ ಸತಿ ಎಂಬ ಕಲ್ಪನೆಯೂ ಇದೆ. ವಾಗ್ದೇವತೆ ಮತ್ತು ಕಾವ್ಯದೇವತೆಯಾಗಿ ಸರಸ್ವತಿಯು ಶಾಸನಗಳಲ್ಲಿ ಕಾಣಿಸಿಕೊಂಡಿದ್ದಾಳೆ. ಪಾಶ, ಪುಸ್ತಕ, ಅಂಕುಶ ಮತ್ತು ಮಣಿಮಾಲೆಗಳನ್ನು ಧರಿಸಿರುವ ಸರಸ್ವತಿಯ ಚಿತ್ರಣವನ್ನೇ ಕನ್ನಡದ ಶಾಸನಗಳು ಕಟ್ಟಿಕೊಡುತ್ತವೆ. ಸರಸ್ವತಿಯ ಮೂಲಸ್ವರೂಪವಾದ ನದಿ ಮತ್ತು ನದಿದೇವತೆಯ ಬಗ್ಗೆ ಯಾವುದೇ ಶಾಸನ ಹೇಳುವುದಿಲ್ಲ. ಬಹುಶಃ ಶಾಸನಗಳ ರಚನೆಯ ಉದ್ದೇಶ ಬೇರೆಯೇ ಆಗಿರುವುದು ಮತ್ತು ಶಾಸನಗಳ ಗಾತ್ರ ಚಿಕ್ಕದಾಗಿರುವುದೂ ಇದಕ್ಕೆ ಕಾರಣವಿರಬಹುದು.

---

87. ಎ.ಕ.–4 ಕೊಳ್ಳೆಗಾಲ 55; ಕ್ರಿ.ಶ.1398
88. ಕ.ವಿ.ಶಾ.ಸಂ. 7, ಸಿಂಧನೂರು 42; ಕ್ರಿ.ಶ.918
89. ಕ.ವಿ.ಶಾ.ಸಂ. 7, ದೇವದುರ್ಗ 18; ಕ್ರಿ.ಶ.1126
90. ಕ.ವಿ.ಶಾ.ಸಂ. 2, ಯಲಬುರ್ಗಾ ; ಕ್ರಿ.ಶ. 1107
91. ಕ.ವಿ.ಶಾ.ಸಂ. 5, 286; ಕ್ರಿ.ಶ.1142

ಅಧ್ಯಾಯ 5 ಜನಪದ ಸಾಹಿತ್ಯದಲ್ಲಿ ಸರಸ್ವತಿ

ಹೆಸರುಗಳು; ವಾಕ್–ಮಾತು; ರಾಗಿಕಲ್ಲು ಮತ್ತು ಸರಸ್ವತಿ; ವಾಗ್ದೇವತೆ, ಜ್ಞಾನದೇವತೆ, ವಿದ್ಯಾದೇವತೆ, ಅಕ್ಷರದೇವತೆ ಇತ್ಯಾದಿ.......; ಜಗದ್ಧಾತ್ರಿ, ವೇದಮಾತೆ ಮತ್ತು ಬ್ರಹ್ಮ–ಸರಸ್ವತಿ; ಮಾತಂಗಿ ಮತ್ತು ಸರಸ್ವತಿ

ಅಧ್ಯಾಯ 5

ಜನಪದ ಸಾಹಿತ್ಯದಲ್ಲಿ ಸರಸ್ವತಿ

ಯಾವುದೇ ಸಾಹಿತ್ಯಕ್ಕೆ ತಾಯಿಬೇರು ಜನಪದ ಸಾಹಿತ್ಯ. ಕನ್ನಡದಲ್ಲಿ ಜನಪದ ಸಾಹಿತ್ಯ ವಿಪುಲವಾಗಿಯೆ ಇದೆ. ಕೇವಲ ಸಾಂದರ್ಭಿಕ ಹಾಡುಗಳಲ್ಲದೆ, ಜನಪದ ಪರಂಪರೆಯಲ್ಲಿ ಮಹಾಕಾವ್ಯಗಳ ರಚನೆಯೂ ವಿಶಿಷ್ಟವಾಗಿದೆ. ಕನ್ನಡದ ಮೊದಲ ಉಪಲಬ್ಧ ಕೃತಿಯಾದ ಕವಿರಾಜಮಾರ್ಗದಲ್ಲಿಯೇ,

ಪದನಱಿದು ನುಡಿಯಲುಂ ನುಡಿ
ದುದನಱಿದಾರಯಲುಮಾರ್ಪರಾ ನಾಡವರ್ಗಳ್।
ಚದುರರ್ ನಿಜದಿಂ ಕುಱಿತೋ
ದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್॥[1]

ಎಂದು ಕನ್ನಡ ಜನಪದರ ಶಕ್ತಿ ಮತ್ತು ಪ್ರತಿಭಾ ಸಂಪತ್ತನ್ನು ಗುರುತಿಸಲಾಗಿದೆ. **'ಮೊದಲು ಹುಟ್ಟಿದುದು ಜನವಾಣಿ. ಅದು ಬೆಳೆದು, ಪರಿಷ್ಕೃತವಾಗಿ ವೃದ್ಧಿಯಾದುದು ಕವಿವಾಣಿ. ಜನವಾಣಿ ಬೇರು; ಕವಿವಾಣಿ ಹೂವು'.**[2] ಒಂದು ಕಾಲದ ನಿರ್ಬಂಧಗಳಿಗೆ ಗಂಟು ಬೀಳದೆ, ಕಾಲಕಾಲಕ್ಕೆ, ಕಾಲಧರ್ಮವನ್ನು ಮತ್ತು ಆ ಕಾಲದ ಜನರ ಪ್ರತಿಭೆಯನ್ನು ಅನುಸರಿಸಿ ಬೆಳೆದು ಬಂದಿರುವ ಜನಪದ ಸಾಹಿತ್ಯ ಸಹಸ್ರಮುಖಿ. ಅದು ವ್ಯಾಪಿಸದ ಬದುಕಿನ ಕ್ಷೇತ್ರಗಳೇ ಇಲ್ಲ; ದೇವರುಗಳೂ ಇಲ್ಲ. ವೇದಗಳ ಕಾಲದಿಂದಲೂ ಸರಸ್ವತಿಗೂ ಜಾನಪದಕ್ಕೂ ಸಂಬಂಧವಿರುವುದನ್ನು ವಿದ್ವಾಂಸರು ಗುರುತಿಸುತ್ತಾರೆ. ಘೃತಾಚಿ ಎಂಬುವವಳೊಡನೆ ಸೇರಿಕೊಂಡು ಸರಸ್ವತಿಯು ಹಾವಿನ ವಿಷ ಇಳಿಸುವುದೇ ಮೊದಲಾದವುಗಳಿಗೆ ಔಷಧಿ ನೀಡುತ್ತಿದ್ದಳೆಂದು ಊಹಿಸಲಾಗಿದೆ. ಅಲ್ಲಿ ಸರಸ್ವತಿಯು ಒಂದು ಆದಿವಾಸಿ ಜನಾಂಗದ ಹೆಣ್ಣಾಗಿದ್ದಿರಬಹುದು ಎನ್ನಲಾಗಿದೆ.[3] ಜನಪದರು ಆದರಿಸಿರುವ ಸರಸ್ವತಿಯ ಸ್ವರೂಪವನ್ನು ಅರಿಯುವ ಒಂದು ಪ್ರಯತ್ನ ಇದು.

ಹೆಸರುಗಳು

ಕಲಿಯುವ ಇಡೀ ಪ್ರಕ್ರಿಯೆಯನ್ನು ಸರಸ್ವತಿ ಎಂಬ ವಿಶಾಲಾರ್ಥದಲ್ಲಿ ಜನಪದರು ಬಳಸಿರುವುದನ್ನು ಕಾಣಬಹುದು. ಸರಸ್ವತಿ ಎಂಬ ಪದ ವಕ್ತೃಗಳ ಪ್ರಾದೇಶಿಕತೆ ಮತ್ತು ಸಂಪಾದಕರ ಸ್ವಾತಂತ್ರ್ಯದಿಂದಾಗಿ ಸರಸಾತಿ, ಸರಸೋತಿ, ಸರಸತಿ, ಸರಸ್ವತಿ ಮೊದಲಾಗಿ ಬಳಕೆಯಾಗಿದೆ. ಸರಸ್ವತಿಗೆ

---

1. ಕರ್ನಾಟಕ ಕವಿರಾಜಮಾರ್ಗಂ, 1–38
2. ಹಲಸಂಗಿಯ ಗೆಳೆಯರು (ಸಂ): ಗರತಿಯಹಾಡು, ಪ್ರಸ್ತಾವನೆ. ಪು.5
3. Ramachandra Rao S.K.: The Conception of Sarasvati (article published in the Quarterly Journal of the Mythic Society. Vol. XLIX, No. 4, January 1959. page 217-227

ಪರ್ಯಾಯವಾಗಿ ಬಳಸುವ ಇನ್ನೊಂದು ಹೆಸರು ಶಾರದೆ. ಆದರೆ ಜನಪದರಲ್ಲಿ ಸರಸ್ವತಿ ಮತ್ತು ಶಾರದೆ ಬೇರೆ ಬೇರೆಯಲ್ಲ.

> **ಸರಸ್ವತಿ ಶಾರದಾಂಬ ಜಗದಾಂಬ ನೀ**
> **ನಮ್ಮಾ ಗುಣಾ ನೋಡಿ ನಮಗೆ ಬಾರಮ್ಮಾ**[4]
> **ಸುತ್ತೇಳು ಲೋಕ ಮೆರೆಯುವಳೆ ಶಾರದಾಂಬೆ**
> **ಸುತ್ತಿ ಬಾರಮ್ಮ ನಮ್ಮ ಹೃದಯಕ್ಕೆ**[5]

ಸರಸ್ವತಿ ಮತ್ತು ಶಾರದೆ ಒಂದೇ ದೇವತೆಯ ಎರಡು ಹೆಸರುಗಳು ಮಾತ್ರ. ವಾಣಿ, ವೀಣಾಪಾಣಿ ಮೊದಲಾದ ವಿಶೇಷಣಗಳು ಇಲ್ಲಿ ಕಂಡುಬರುವುದಿಲ್ಲ. ಆದರೆ ಜಗದಾಂಬ ಎಂಬುದು ಮಾತ್ರ ವಿಶೇಷವಾಗಿ ಕಂಡುಬರುತ್ತದೆ.

ವಾಕ್–ಮಾತು

ವೇದಗಳ ಕಾಲದಿಂದಲೂ ಮಾತಿಗೆ ವಿಶೇಷವಾದ ಮಹತ್ವವಿದ್ದುದ್ದರಿಂದಲೇ ಕೇವಲ ವಾಕ್ ಎಂಬುದು ಮಾಯವಾಗಿ, ವಾಗ್ದೇವತೆಯ ಸ್ವರೂಪ ಪ್ರಾಪ್ತವಾಯಿತು. ಮಾತಿನ ಮಹತ್ವವನ್ನು ಜನಪದರೂ ಬಲ್ಲರು. ಸಣ್ಣ ಗಾದೆಗಳಲ್ಲಿಯೂ ಅವರು ಮಾತಿನ ಮಹತ್ವವನ್ನು ಅತ್ಯಂತ ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಿದ್ದಾರೆ. **'ಮಾತು ಆಡಿದರೆ ಹೋಯಿತು; ಮುತ್ತು ಒಡೆದರೆ ಹೋಯಿತು'** ಎಂಬ ಗಾದೆಯನ್ನು ಎಲ್ಲರೂ ಕೇಳಿರುತ್ತಾರೆ. ಬಸವಣ್ಣನವರ 'ನುಡಿದರೆ ಮುತ್ತಿನ ಹಾರದಂತಿರಬೇಕು' ಎಂಬ ಸಾಲಿಗೆ ಸಂವಾದಿಯಾಗಿದೆ ಈ ಗಾದೆ. ಮುತ್ತು ದುಂಡಗಿದ್ದರೆ ಅದಕ್ಕೆ ಬೆಲೆ, ಒಡೆದು ಹೋದರೆ ಅದಕ್ಕೆ ಯಾವ ಬೆಲೆಯೂ ಇಲ್ಲ. ಹಾಗೆಯೇ ಮಾತೂ ಸಹ. ಒಮ್ಮೆ ಅದನ್ನು ಆಡಿದರೆ ಮುಗಿದು ಹೋಯಿತು. ಅದನ್ನು ವಾಪಸ್ಸು ಪಡೆಯಲು ಸಾಧ್ಯವಾಗುವುದೇ ಇಲ್ಲ. ಅದು ಉಂಟು ಮಾಡುವ ಪರಿಣಾಮ ಒಳ್ಳೆಯದಿದ್ದರೂ ಕೆಟ್ಟದಿದ್ದರೂ ಅದನ್ನು ತಡೆಯಲಾಗುವುದಿಲ್ಲ. ಹಾಗೊಂದು ವೇಳೆ ಆ ಪರಿಣಾಮಗಳನ್ನು ತಡೆಯುವ ಸಾಮರ್ಥ್ಯವಿದ್ದರೆ ಅದು ಮತ್ತೆ ಮಾತಿಗೆ ಮಾತ್ರ! ಹಾಗೆಂದು ಮಾತನ್ನು ಆಡದೇ ಇರಲು ಸಾಧ್ಯವೆ? ಮಾತನ್ನು ಆಡಬೇಕು; ಆದರೆ ಅದು ಅರ್ಥಪೂರ್ಣವಾಗಿರಬೇಕು ಅಷ್ಟೆ. **'ಮಾತು ಬೆಳ್ಳಿ; ಮೌನ ಬಂಗಾರ'**, **'ಮಾತು ಮನೆ ಕೆಡಿಸಿತು; ತೂತು ಒಲೆ ಕೆಡಿಸಿತು'** ಎನ್ನುವ ಗಾದೆಗಳಲ್ಲೂ ಮಾತು ಅರ್ಥಪೂರ್ಣವಾಗದಿದ್ದರೆ ಆಗುವ ಅನರ್ಥದ ಸೂಚನೆಯಿದೆ. **'ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ'** ಎನ್ನುವ ಗಾದೆ ಮಾತು, ಮಾತಿನ ಮಹತ್ವವನ್ನು ಪರಿಣಾಮಕಾರಿಯಾಗಿ ಬಿಂಬಿಸುತ್ತದೆ.

---

4. ಮೈತ್ರಿ ಕೆ.ಎಂ. (ಸಂ): ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ, ಪು.1
5. ಕೇಶವನ್ ಪ್ರಸಾದ್ ಕೆ. (ಸಂ): ಮಲೆಮಾದೇಶ್ವರ, ಪು.2–3

'ಊರಗೌಡನಿಗೆ ಊರಲ್ಲಿ ಮರ್ಯಾದೆ; ವಿದ್ಯಾವಂತನಿಗೆ ಹೋದಲ್ಲೆಲ್ಲಾ ಮರ್ಯಾದೆ' ಎಂಬ ಮಾತು ವಿದ್ಯೆಯ ಮಹತ್ವವನ್ನು ಮನಗಾಣಿಸುತ್ತದೆ. **'ವಿದ್ಯೆ ಇಲ್ಲದವ ಹದ್ದಿಗಿಂತ ಕಡೆ'** ಎಂಬ ಗಾದೆಮಾತು **'ವಿದ್ಯಾವಿಹೀನಃ ಪಶು'** ಎಂಬ ಶ್ರುತಿವಾಕ್ಯವನ್ನು ನೆನಪಿಸುತ್ತದೆ. ವಿದ್ಯೆಯ ಮಹತ್ವ ಜನಪದರಿಗೆ ತಿಳಿದಿತ್ತು. ಆದರೆ ಅವರ ವಿದ್ಯೆ ಉದರನಿರ್ವಹಣೆಗಾಗಿ ಬಳಕೆಯಾಗುತ್ತಿರಲಿಲ್ಲ. ಬದಲಿಗೆ ಅರ್ಥಪೂರ್ಣವಾದ ಬದುಕಿಗೆ ದಾರಿಯಾಗಿತ್ತು. ಆದ್ದರಿಂದ ಜನಪದರ ಒಳಗೆ ಅಂತರ್ವಾಹಿನಿಯಾಗಿ 'ಒಳ್ಳೆಯ ಮಾತುಗಳನ್ನಾಡಬೇಕು, ವಿದ್ಯಾವಂತರಾಗಬೇಕು, ಎಂಬ ಪ್ರಜ್ಞೆ ಸದಾ ಹರಿಯುತ್ತಿರುವುದು ಸ್ಪಷ್ಟವಾಗುತ್ತದೆ.

ರಾಗಿಕಲ್ಲು ಮತ್ತು ಸರಸ್ವತಿ

ರಾಗಿಕಲ್ಲಿಗೂ ಸರಸ್ವತಿಗೂ ಅವಿನಾಭಾವ ಸಂಬಂಧವನ್ನು ಜನಪದರು ಕಲ್ಪಿಸಿಬಿಟ್ಟಿದ್ದಾರೆ. ಸಾಮಾನ್ಯವಾಗಿ ಬೆಳಗಿನ ಜಾವವೇ ನಡೆಯುವ ರಾಗಿ ಬೀಸುವ ಕೆಲಸ ದೇವತಾಸ್ತುತಿಯೊಂದಿಗೇ ಪ್ರಾರಂಭವಾಗುತ್ತದೆ. ವಿಶೇಷವಾಗಿ ರಾಗಿಕಲ್ಲನ್ನು ಸರಸ್ವತಿಯೆಂದೇ ಸಂಬೋಧಿಸುವುದನ್ನು ಕಾಣಬಹುದು. ರಾಗಿ ಬೀಸಿ ಮುಗಿದ ಮೇಲೆ, ರಾಗಿ ಕಲ್ಲಿಗೆ ಗರತಿಯೊಬ್ಬಳು ಪೂಜೆ ಸಲ್ಲಿಸುತ್ತಾ ಹೀಗೆ ಹೇಳುತ್ತಾಳೆ.

ಖಂಡ್ಗ ರಾಗಿ ಬೀಸಿ ಕಂಗೆಟ್ಟೆ ಸರಸಾತಿ
ಗಂಧ ತಂದಿವ್ನಿ ಧರಿಸಮ್ಮ। ಸರಸೋತಿ
ದಂಡೆ ತಂದಿವ್ನಿ ಮುಡಿಯಮ್ಮ[6]

ರಾಗಿ ಬೀಸುವಾಗ ಹಾಡುವ ಪದ್ಧತಿಯಿದೆ. ಒಮ್ಮೆ ಹಾಡುತ್ತಾ, ಬೀಸಲು ಕುಳಿತರೆಂದರೆ, ಬೀಸಿ ಮುಗಿಯುವವರೆಗೂ ಹಾಡುತ್ತಲೇ ಇರುತ್ತಾರೆ. ಹಾಗೆ ಖಂಡ್ಗ ರಾಗಿ ಬೀಸಿ ಸುಸ್ತಾದ ಗರತಿ, ಅದುವರೆಗೂ ತನಗೆ ಹಾಡಿನ ರೂಪದಲ್ಲಿ ಜತೆಯಾಗಿದ್ದ ಸರಸ್ವತಿಗೆ ಪೂಜೆ ಸಲ್ಲಿಸುತ್ತಾಳೆ. ಹಾಗೆ ಅವಳು ಪೂಜೆ ಸಲ್ಲಿಸುವುದು ರಾಗಿ ಕಲ್ಲಿಗೇ! ರಾಗಿ ಕಲ್ಲು ಅವಳ ಪಾಲಿನ ಸರಸ್ವತಿ. ಅಂತಹ ಸರಸ್ವತಿಗೆ ಗಂಧ ಪುಷ್ಪಗಳಿಂದ ಪೂಜಿಸುವ ಗರತಿ ಚಿತ್ರಣ ಮೂರೇ ಪಾದದಲ್ಲಿ ಚೆನ್ನಾಗಿ ಮೂಡಿ ಬಂದಿದೆ. ಕೊನೆಯ ಹಾಡಾಗಿ ಸರಸತಿಗೆ ಮಲಗಲು ಹೇಳುವಷ್ಟು ಸಲಿಗೆ ಜನಪದರದ್ದು.

ಈ ಕಲ್ಲು ತೂದೂ ತೋಳೆಲ್ಲ ನೊಂದಾವು
ಸೂಸ್ತಾದ ಬೆರಳು ಸಮೆದಾವು। ಸರಸಾತಿ
ಹೋಗಿಬರುತ್ತೇನೆ ಮಲಗಮ್ಮ[7]

ಒಂದು ಖಂಡ್ಗ ರಾಗಿಯ ಬೀಸಿದ ಗರತಿಯ ತೋಳುಗಳು ನೋಯುತ್ತಿವೆ. ಸೂಸ್ತಾದ ಬೆರಳು ಸವೆದಿವೆ. ಆದರೂ ಮಲಗುವ ಮುನ್ನ ಸರಸ್ವತಿಗೆ ಹೇಳುತ್ತಾಳೆ, ಹೋಗಿ ಬರುತ್ತೇನೆ ಮಲಗಮ್ಮ! ಎಂದು.

---

6. ಗೊರೂರು ರಾಮಸ್ವಾಮಿ ಅಯ್ಯಂಗಾರ್(ಸಂ): ಹಳ್ಳಿಯ ಹಾಡುಗಳು, ಪು.143
7. ಗೊರೂರು ರಾಮಸ್ವಾಮಿ ಅಯ್ಯಂಗಾರ್(ಸಂ): ಹಳ್ಳಿಯ ಹಾಡುಗಳು, ಪು.144
ಜವರೇಗೌಡ ದೇ (ಸಂ): ಜನಪದ ಗೀತಾಂಜಲಿ ಪು.35

ಕಲ್ಲುಬಿಟ್ಟೇನೆಂದು ಸಿಟ್ಯಾಕೆ ಸರಸತಿಯೇ
ಕುಕ್ಕೇಲಿ ರಾಗಿ ಬೆಳೆಯಾಲಿ। ತಕ್ಕೊಂಡು
ಮತ್ತೆ ರಾತ್ರೀಗೆ ಬರುತೀನಿ[8]

ಈ ಹಾಡಿನಲ್ಲಿಯೂ ಕಲ್ಲನ್ನೇ ಸರಸ್ವತಿ ಎಂದು ಭಾವಿಸಿ, ಬೀಸುವುದನ್ನು ನಿಲ್ಲಿಸಿದ್ದಕ್ಕಾಗಿ ಸಿಟ್ಟು ಬೇಡವೆನ್ನುತ್ತಾಳೆ. ಕುಕ್ಕೆಯಲ್ಲಿ ರಾಗಿ ಬೆಳೆಯಾಲಿ ಎಂದು ಸರಸ್ವತಿಯನ್ನೇ ಪ್ರಾರ್ಥಿಸುತ್ತಾಳೆ. ಆಗ ಮತ್ತೆ ಬೀಸಲು ಬರುತ್ತೇನೆ ಎನ್ನುತ್ತಾಳೆ. ಜನಪದರಿಗೆ ಸರಸ್ವತಿಯು ಯಾವುದೋ ಲೋಕದಿಂದ ಅವತರಿಸಿದ ದೇವರಲ್ಲ; ತಮ್ಮ ಜತೆಯಲ್ಲಿಯೇ ಬದುಕುತ್ತಿರುವ, ತಮ್ಮಂತೆಯೇ ಮಾನವ ಸಹಜವಾದ ಪ್ರೀತಿ, ಸಿಟ್ಟು, ಸೆಡವುಗಳನ್ನು ಹೊಂದಿರುವ ಸಹವಾಸಿನಿ! ರಾಗಿ ಬೀಸುವ ಕಲ್ಲು ಮನೆಯ ಮೂಲೆಯಲ್ಲಿರುವ ನಿರ್ಜೀವ ಕಲ್ಲಲ್ಲ, ವಾಗ್ದೇವಿಯ ಪ್ರತಿರೂಪ!

ವಾಗ್ದೇವತೆ, ಜ್ಞಾನದೇವತೆ, ವಿದ್ಯಾದೇವತೆ, ಅಕ್ಷರದೇವತೆ ಇತ್ಯಾದಿ.......

ಸರಸ್ವತಿಗೆ ಸಂಬಂಧಿಸಿದ ಹಲವಾರು ತ್ರಿಪದಿಗಳಿವೆ. ಸಣ್ಣಪುಟ್ಟ ಪಾಠಾಂತರಗಳಿಂದ ಕೂಡಿದ ಕೆಲವು ತ್ರಿಪದಿಗಳು ಕೆಳಕಂಡಂತಿವೆ.[9]

ಸರಸತಿ ಎಂಬೋಳೆ ವರುಷದಿಂದೋದೀದೆ
ಅರಿಷನದ ಸೀರೆ ನೆರಿಯೋಳೆ। ಸರಸೋತಿ
ಹರುಷದಲ್ಲಿ ನಿನ್ನ ನೆನೆವೇನು॥
ಸರಸತಿ ಎಂಬೋಳು ಸರವಕ್ಕೆ ದೊಡ್ಡೋಳು
ಸರವ ಹಾಕ್ಯವ್ಳೆ ಐನೂರು। ವಜ್ರಾವ
ತಿರುವೌಳೆ ಕುಣಿಕೆ ಕೊರಳಲ್ಲಿ॥
ಎಂಟೇಲೆ ಮಾವೀನ ದಂಟಿನಲ್ಲಿರುವೋಳೆ
ಘಂಟೇಯ ಗತಿಗೆ ನಲಿಯೋಳೆ। ಸರಸೋತಿ
ಗಂಟ್ಲಲಕ್ಷರವ ನೆಲೆಸವ್ವ॥
ಏಳೇಲೆ ಮಾವಿನ ತಾಳಿನಲ್ಲಿರುವೋಳೆ
ತಾಳಾ ಗತಿಗೆ ನಲಿಯೋಳೆ। ಸರಸೋತಿ
ನಾಲಿಗ್ಯಕ್ಷರವ ನಿಲಿಸವ್ವ॥
ಹಟ್ಟೀಯ ಮನೆಯೋಳೆ ಪಟ್ಟೆದುಂಗರದೋಳೆ
ಪಟ್ಟೆಯ ಸೀರೆ ನಿರಿಯೋಳೆ। ಸರಸೋತಿ
ಗುಟ್ಟಿನಲಿ ಮತಿಯ ನೆಲಸವ್ವ॥
ಹಾದೀಯ ಮನೆಯೋಳೆ ಪಾದದುಂಗರದೋಳೆ
ಗೋದೀವೆ ಸೀರೆ ನೆರಿಯೋಳೆ। ಸರಸೋತಿ
ಬೋದಿಸಮ್ಮಯ್ಯ ನಲ್ನುಡಿಯ॥

---

8. ಜವರೇಗೌಡ ದೇ (ಸಂ): ಜನಪದ ಗೀತಾಂಜಲಿ ಪು.35
9. ಗೊರೂರು ರಾಮಸ್ವಾಮಿ ಅಯ್ಯಂಗಾರ್(ಸಂ): ಹಳ್ಳಿಯ ಹಾಡುಗಳು, ಪು.8

ಈ ಹಾಡುಗಳಲ್ಲಿ ಸರಸ್ವತಿಯ ಸ್ತುತಿಯು ಶಕ್ತಿ ಮತ್ತು ಅಲಂಕಾರದೊಂದಿಗೆ ಮಿಳಿತವಾಗಿಯೇ ಬಂದಿರುವುದನ್ನು ಗಮನಿಸಬಹುದಾಗಿದೆ. 'ಅರಿಷನದ ಸೀರೆ ನೆರಿಯೋಳೆ', 'ಪಟ್ಟೆಯ ಸೀರೆ ನಿರಿಯೋಳೆ', 'ಗೋದೀವೆ ಸೀರೆ ನೆರಿಯೋಳೆ' ಇವು ಸರಸ್ವತಿಯ ಉಡುಗೆಯ ವೈವಿಧ್ಯವನ್ನು ತೋರಿಸುತ್ತವೆ. 'ಸರವ ಹಾಕ್ಯವ್ಳೆ ಐನೂರು। ವಜ್ರಾವ ತಿರುವಾಳೆ ಕುಣಿಕೆ ಕೊರಳಲ್ಲಿ' 'ಪಟ್ಟೆದುಂಗರದೋಳೆ', 'ಪಾದದುಂಗರದೋಳೆ' ಇವು ಸರಸ್ವತಿಯ ಆಭರಣದ ಅಲಂಕಾರಕ್ಕೆ ಸೂಚಿಯಾಗಿವೆ. 'ಘಂಟೇಯ ಗತಿಗೆ ನಲಿಯೋಳೆ', 'ತಾಳಾ ಗತಿಗೆ ನಲಿಯೋಳೆ' ಎಂಬ ಮಾತುಗಳು ಸರಸ್ವತಿಯ ನಾಟ್ಯದಂದದ ನಡೆಯನ್ನು, ಜೊತೆಗೆ ಜನಪದರ ಸ್ತುತಿಯಿಂದ ಸರಸ್ವತಿಗಾದ ಆನಂದವನ್ನು ಕಟ್ಟಿಕೊಡುತ್ತವೆ. 'ಹಾದೀಯ ಮನೆಯೋಳೆ', 'ಹಟ್ಟೀಯ ಮನೆಯೋಳೆ', 'ಐಳೇಲೆ ಮಾವಿನ ತಾಳಿನಲ್ಲಿರುವೋಳೆ' ಮತ್ತು 'ಎಂಟೇಲೆ ಮಾವೀನ ದಂಟಿನಲ್ಲಿರುವೋಳೆ' ಎಂಬ ನುಡಿಗಳು ಸರ್ವದರಲ್ಲೂ ಸರಸ್ವತಿಯನ್ನು ಕಾಣುವ ಜನಪದರ ಸೌಂದರ್ಯದೃಷ್ಟಿಯನ್ನು ತೋರಿಸುತ್ತವೆ. ಹೀಗೆ ಹರುಷದಿಂದ ನೆನೆದ ಸರಸ್ವತಿಯನ್ನು ಜನಪದರು ಬೇಡುವುದಾದರು ಏನೆಂದು? 'ಗಂಟ್ಲಲಕ್ಷರವ ನೆಲೆಸವ್ವ, ನಾಲಿಗ್ಯಕ್ಷರವ ನಿಲಿಸವ್ವ, ಗುಟ್ಟಿನಲಿ ಮತಿಯ ನೆಲಸವ್ವ, ಬೋದಿಸಮ್ಮಯ್ಯ ನಲ್ನುಡಿಯ' ಎಂದು. ಜನಪದರಿಗೆ ಸರಸ್ವತಿಯು ಅಕ್ಷರವನ್ನು, ಬುದ್ಧಿಯನ್ನು ಮತ್ತು ಒಳ್ಳೆಯ ಮಾತುಗಳನ್ನು ಕೊಡುವ ದೇವತೆ.

ಹಿತ್ತಲ ಮನೆಯವಳೆ ಈರೆಕಾಯಿನನರಿಯೋಳೆ
ಸುತ್ತಾ ದಾಳಿಂಬೆಯ ವನದವಳೆ
ಸುತ್ತಾ ದಾಳಿಂಬೆಯ ವನದವಳೆ ಶಾರದಾಂಬೆ
ಸುತ್ತೇಳು ಲೋಕ ಮೆರೆಯುವಳೆ ಸರಸಮ್ಮ
ಸುತ್ತೇಳು ಲೋಕ ಮೆರೆಯುವಳೆ ಶಾರದಾಂಬೆ
ಸುತ್ತಿ ಬಾರಮ್ಮ ನಮ್ಮ ಹೃದಯಕ್ಕೆ॥[10]
ಸರಸ್ವತಿ ಶಾರದಾಂಬ ಜಗದಾಂಬ ನೀ
ನಮ್ಮಾ ಗುಣಾ ನೋಡಿ ನಮಗೆ ಬಾರಮ್ಮಾ॥[11]
ಆರೆಲೆ ಮಾವಿನ ತಾಳಿನಲ್ಲಾಡುವರೆ
ತಾಳ ತಂಬುರದ ಗತ್ತುಗೆ ನಲಿಯುವರೆ
ಅಮ್ಮಯ್ಯಾ ತಾಯಮ್ಮಾ
ತಾಳ ತಂಬುರದ ಗತ್ತುಗೆ ನಲಿಯುವರೆ ಶಾರದಾಂಬೆ
ತಾಳಿನಿಂದಲೇ ಹೇಳಿ ವಚನಾವ॥[12]

---

10. ಕೇಶವನ್ ಪ್ರಸಾದ್ ಕೆ. (ಸಂ): ಮಲೆಮಾದೇಶ್ವರ, ಪು.2-3
11. ಮೈತ್ರಿ ಕೆ.ಎಂ. (ಸಂ): ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ, ಪು.1
12. ಕೇಶವನ್ ಪ್ರಸಾದ್ ಕೆ. (ಸಂ): ಮಲೆಮಾದೇಶ್ವರ, ಪು.2

ಜನಪದರ ಪರಿಕಲ್ಪನೆಯಲ್ಲಿ ಹೆಚ್ಚಿನ ಸಂದರ್ಭಗಳಲ್ಲಿ ಸರಸ್ವತಿಗೂ ಶಾರದೆಗೂ ವ್ಯತ್ಯಾಸವೇ ಇಲ್ಲ. 'ತಂಬುರದ ಗತ್ತಿಗೆ ನಲಿಯುವರೆ' ಎಂಬುದು ಸರಸ್ವತಿಯ ವೀಣೆಯನ್ನು ಮತ್ತು ಜನಪದ ಕಲಾವಿದರು ಹೆಚ್ಚಾಗಿ ಬಳಸುವ ತಂಬೂರಿಯನ್ನು ಸೂಚಿಸುತ್ತದೆ. 'ನನ್ನ ಮುಖಕಮಲದಲ್ಲಿ ಹೃದಯಕಮಲದಲ್ಲಿ, ಜಿಹ್ವಾಗ್ರದಲ್ಲಿ ನೆಲೆಸು' ಎಂಬ ಶಿಷ್ಟಕವಿಗಳ ಮಾತಿನಲ್ಲಿ ಗೋಚರವಾಗುವ ಸ್ವಾರ್ಥದ ಸೆಲೆ, 'ಸುತ್ತಿ ಬಾರಮ್ಮ ನಮ್ಮ ಹೃದಯಕ್ಕೆ' ಎಂಬ ಜನಪದರ ಮಾತಿನಲ್ಲಿ ಗೋಚರವಾಗುವುದಿಲ್ಲ. 'ನಮ್ಮಾ ಗುಣಾ ನೋಡಿ ನಮಗೆ ಬಾರಮ್ಮಾ' ಎಂಬ ಮಾತು ವಿದ್ಯೆ ಕಲಿಯುವವನು ಒಳ್ಳೆಯವನಾಗಿರಬೇಕು, ಗುಣವಂತನಲ್ಲದವನಿಗೆ ವಿದ್ಯೆ ಬರುವುದಿಲ್ಲ ಎಂಬ ಎಚ್ಚರಿಕೆಯನ್ನೂ ಕೊಡುತ್ತದೆ.

ತಮ್ಮ ಸಹವಾಸಿಯಂತೆ ಸರಸ್ವತಿಯನ್ನು ಪ್ರೀತಿಸುವ ಜನಪದರು ಸರಸ್ವತಿಯನ್ನು ಅಕ್ಷರವಿದ್ಯೆಗಾಗಿ, ಆಯಾಸ ಪರಿಹಾರಕ್ಕೆ ಅಗತ್ಯವಾದ ಹಾಡುಗಳಿಗಾಗಿ ಸ್ತುತಿಸುವುದು ಹಲವಾರು ತ್ರಿಪದಿಗಳಲ್ಲಿ ವ್ಯಕ್ತವಾಗಿದೆ.

ಬಾರೋ ಬಾರೋ ನನ್ನ ಬಾಲ ಚಕ್ರವರ್ತಿ
ನಾಲಿಗೆಯ ಮೇಲೆ ಸರಸೋತಿ। ಇರುವಂಥ
ಬಾಲಕ ಹಾಲಕುಡಿಬಾರೋ॥
ತಾಯಿಯ ನೆನೆದರೆ ಬೇಗನೆ ಪದ ಬರಲಿ
ತಾಯವ್ವೆ ಗಂಗೆ ದಡದಲ್ಲಿ। ಸರಸ್ವತಿ
ಕಾಯ ಕುಂಡ್ಹೋಗಿ ಕರದಲ್ಲಿ॥
ಅಕ್ಕನ ನೆನೆದರೆ ಗಕ್ಕನೆ ಪದ ಬರಲಿ
ಅಕ್ಕವ್ವೆ ಗಂಗೆ ದಡದಲ್ಲಿ। ಸರಸೋತಿ
ಅಕ್ಕಿ ಹೂದವಳಾ ಕರೆತನ್ನಿ॥
ಹಳ್ಳಕೊಳ್ಳರಲಿ ಮುಳ್ಳಾಜಿ ವನದಲ್ಲಿ
ಒಳ್ಳೆಯವಳು ನಿನ್ನ ಅರಸಿದೆ। ಸರಸೋತಿ
ಎಲ್ಲಿ ಹೋದೆಮ್ಮ ಪದ ಬರಲಿ॥
ಅಟ್ಟಬೆಟ್ಟದಲ್ಲಿ ಪುಟ್ಟಾಜಿ ಬನದಲ್ಲಿ
ಸೆಟೆಯವಳೆ ನಿನ್ನ ಅರಸಿದೆ। ಸರಸೋತಿ
ಎತ್ತ ಹೋದೆಮ್ಮ ಪದ ಬರಲಿ॥
ತಾಯಿ ಸರಸತಿ ಬಾಗಿಲಲಿ ಯಾಕೆ ನಿಂದೆ
ತೋರೇನು ಬಾರೆ ನಿನಗಿಂಬ। ನಮ್ಮಾನೆ
ಸಾಲು ಮಂಚಾದ್ಲೆ ಒರಗಮ್ಮ॥
ಅಕ್ಕಾ ಸರಶತಿ ಹಟ್ಟಲ್ಯಾಕೆ ನಿಂತೆ
ಕೊಟ್ಟೇನು ಬಾರೆ ನಿನಗಿಂಬ। ನಮ್ಮಾನೆ
ಪಟ್ಟೆ ಮಂಚದ್ಲೆ ಒರಗಮ್ಮ॥
ಅಗ್ಗಿಯ ಬುಡದಲಿ ಸೊಗಸು ಮಾಡುವ ಹೆಣ್ಣೆ
ಅವಸರದಲ್ಬಂದೆ ನಿನ ಬಳಿಗೆ। ಸರಸೋತಿ
ಕೆಲಸ ಬಿಟ್ಹಾಡ ಕಲಿಸಮ್ಮ॥

ನಗ್ಗಾಲ ಮರದಡಿ ನಿದ್ರೆ ಮಾಡೋದ ಬಿಟ್ಟು
ಎಗ್ಗಿಲ್ದೆ ಬಂದೆ ನಿನ ಬಳಿಗೆ। ಸರಸೋತಿ
ಚೆಂದುಳ್ಳ ಹಾಡ ಕಲಿಸಮ್ಮ॥[13]

ಮೇಲಿನ ಹಾಡುಗಳಲ್ಲಿ ಸರಸ್ವತಿಯು ಸಂಪೂರ್ಣವಾಗಿ ವಾಗ್ದೇವತೆಯಾಗಿದ್ದಾಳೆ. 'ನಾಲಿಗೆಯ ಮೇಲೆ ಸರಸೋತಿ ಇರುವಂಥ ಬಾಲಕ', 'ತಾಯಿಯ ನೆನೆದರೆ ಬೇಗನೆ ಪದ ಬರಲಿ', 'ಅಕ್ಕನ ನೆನೆದರೆ ಗಕ್ಕನೆ ಪದ ಬರಲಿ', 'ಸರಸೋತಿ ಎಲ್ಲಿ ಹೋದೆಮ್ಮ ಪದ ಬರಲಿ', 'ಸರಸೋತಿ ಎತ್ತ ಹೋದೆಮ್ಮ ಪದ ಬರಲಿ', 'ಸರಸೋತಿ ಕೆಲಸ ಬಿಟ್ಹಾಡ ಕಲಿಸಮ್ಮ', 'ಸರಸೋತಿ ಚೆಂದುಳ್ಳ ಹಾಡ ಕಲಿಸಮ್ಮ' ಈ ಎಲ್ಲಾ ಮಾತುಗಳು ಸರಸ್ವತಿಯನ್ನು ವಾಗ್ದೇವತೆಯನ್ನಾಗಿಯೂ ಹಾಡನ್ನು ಕಲಿಸುವಂತಹ ದೇವತೆಯನ್ನಾಗಿಯೂ ಪ್ರತಿಷ್ಠಾಪಿಸುತ್ತವೆ. 'ನಾಲಿಗೆಯ ಮೇಲೆ ಸರಸೋತಿ ಇರುವಂಥ ಬಾಲಕ' ಎನ್ನುವ ತಾಯಿಯ ಮಾತಿನಲ್ಲಿ, 'ಬಾಲಚಕ್ರವರ್ತಿಯಾದ ತನ್ನ ಮಗ ವಿದ್ಯಾವಂತನೂ ಆಗಿದ್ದಾನೆ' ಎಂಬ ಹೆಮ್ಮೆ ಎದ್ದು ಕಾಣುತ್ತದೆ.

'ಹಳ್ಳಕೊಳ್ಳದಲಿ, ಮುಳ್ಳಾಜಿ ವನದಲ್ಲಿ ಒಳ್ಳೆಯವಳು ನಿನ್ನ ಅರಸಿದೆ', 'ಅಟ್ಟಬೆಟ್ಟದಲ್ಲಿ ಪುಟ್ಟಾಜಿ ಬನದಲ್ಲಿ ಸೆಟೆಯವಳೆ ನಿನ್ನ ಅರಸಿದೆ' ಎಂದು ಸರಸ್ವತಿಯನ್ನು ಅರಸುತ್ತಿರುವ ಗರತಿಯ ಚಿತ್ರಣವಿದೆ. ತನಗೆ ಚೆನ್ನಾಗಿ ಹಾಡಲು ಮತ್ತು ಚೆನ್ನಾಗಿರುವ ಹಾಡು ಬೇಕು ಎಂಬುದು ಗರತಿಯ ಬಯಕೆ. ಅದಕ್ಕಾಗಿ ಹಾಡಿಗೆ ಅಧಿದೇವತೆಯಾದ ಸರಸೋತಿಯನ್ನು ಆಕೆ ನಿರಂತರವಾಗಿ ಹುಡುಕುತ್ತಲೇ ಇರುತ್ತಾಳೆ. ಇಂತಹ ಹುಡುಕಾಟದ ಗರತಿಗೆ ಸರಸ್ವತಿಯು ಸಿಗುವುದಾದರು ಎಲ್ಲಿ? 'ಅಗ್ಜಿಯ ಬುಡದಲಿ, ನಗ್ಗಾಲ ಮರದಡಿಯಲ್ಲಿ'! ಹಾಗೆ ಸರಸ್ವತಿಯು ಸಿಕ್ಕಾಗ ಸಮಯ ವ್ಯರ್ಥ ಮಾಡುವುದು ಗರತಿಗೆ ಇಷ್ಟವಿಲ್ಲ. 'ಅವಸರದಲ್ಬಂದೆ ನಿನ ಬಳಿಗೆ ಸರಸೋತಿ, ಕೆಲಸ ಬಿಟ್ಹಾಡ ಕಲಿಸಮ್ಮ' ಎಂದು ಒತ್ತಾಯಿಸುತ್ತಾಳೆ. ಸರಸ್ವತಿಯಲ್ಲಿ ಅಷ್ಟೊಂದು ಸಲಿಗೆಯಿದೆ ಗರತಿಗೆ. ಅಷ್ಟೊಂದು ಸಲಿಗೆಯಿರುವುದರಿಂದಲೇ, ಗರತಿಯ ಮನೆಯ ಬಾಗಿಲಲ್ಲಿ ನಿಂತಿರುವ ಸರಸ್ವತಿಯನ್ನು 'ನಿನಗೆ ಆಶ್ರಯ ಕೊಡುತ್ತೇನೆ ಒಳಗೆ ಬಾ, ಸಾಲುಮಂಚದ ಮೇಲೆ ಒರಗಿಕೊ, ಪಟ್ಟೆ ಮಂಚದ ಮೇಲೆ ಒರಗಿಕೋ' ಎನ್ನುತ್ತಾಳೆ. 'ಗಂಟ್ಲಲಕ್ಷರವ ನೆಲೆಸವ್ವ', 'ನಾಲಿಗ್ಯಕ್ಷರವ ನಿಲಿಸವ್ವ', 'ಗುಟ್ಟಿನಲಿ ಮತಿಯ ನೆಲಸವ್ವ', 'ಬೋದಿಸಮ್ಮಯ್ಯ ನಲ್ನುಡಿಯ' ಎಂದು ಪ್ರಾರ್ಥಿಸುತ್ತಾಳೆ. ಜನಪದರಿಗೆ ಸರಸ್ವತಿಯು ಯಾರ ಮುಖದಿಂದಲೋ ಬಾಯಿಂದಲೋ ಹುಟ್ಟಿದವಳಲ್ಲ, ಬೇರೆ ಲೋಕದ ದೇವತೆಯೂ ಅಲ್ಲ. ಅವರ ಜತೆಯಲ್ಲಿಯೇ, ಹೊಲ-ಮನೆಗಳಲ್ಲಿ, ಗದ್ದೆ-ತೋಟಗಳಲ್ಲಿ ಜತೆಯಾಗಿ ದುಡಿಯುವ ಸಹವಾಸಿ. ಆದರೆ ಅವರಿಗೆ ಮಾತು, ಅಕ್ಷರ, ಹಾಡು, ವಿದ್ಯೆ ಕಲಿಸುವ ದೇವತೆ!

---

13. ಹಲಸಂಗಿ ಗೆಳೆಯರು(ಸಂ): ಹಲಸಂಗಿಹಾಡು

ಕೇವಲ ಹಾಡು, ವಿದ್ಯೆ, ಅಕ್ಷರ ಮಾತ್ರ ಜನಪದರಿಗೆ ಸರಸ್ವತಿಯ ಸ್ವರೂಪವಾಗಿರಲಿಲ್ಲ. ಬದಲಿಗೆ ಕಲಿಯುವ ಇಡೀ ಪ್ರಕ್ರಿಯೆಯೇ ಸರಸ್ವತಿ ಎಂಬ ವಿಸ್ತೃತವಾದ ಪರಿಕಲ್ಪನೆ ಅವರಿಗಿದೆ.

ಬಲಗೈ ಬೋಳಿಟ್ಟಾ ಇನ್ನೂ ಮಗ ಬರಿತಾನ
ಏ ಸರಸ್ವತಿ ಬರುದಾನಾ ಓ ನಾಮ ಬರುದಾನಾ
ಕಾಗುಣಿತಾ ಬರುದಾನ॥
ಬಲಗೈ ಬೊಳ್ಳಿಟ್ಟು ಸರಸ್ವತಿ ಬರದಾನೆ
ಏಯ್ ಓನಾಮ ಬರದಾನ ಕಾಗುಣಿತ ಬರದಾನೆ॥
ಹುಟ್ಟಿದ ಹುಡುಗನ್ನ ಶಿವ
ಇಟ್ಟು ನಾಲಿಗೆ ಮ್ಯಾಲೆ ಮೂರು ಅಕ್ಷರ ಬರೆದು ಬಿಟ್ಟ ಅಷ್ಟೆ
ಏನಂತ ಬರೆದ
ಸರಸ್ವತಿ ಓ ನಾಮಃ ಕಾಗುಣಿತ ಅಂತ ಬರ್ದ॥[14]

ಬರೆಯುವ ಕ್ರಿಯೆ, ಕಾಗುಣಿತ, ಓದುವ ಕ್ರಿಯೆ, ಕಲಿಯುವ ಕ್ರಿಯೆ ಹೀಗೆ ಎಲ್ಲವೂ ಸರಸ್ವತಿಯೇ! ಸರಸ್ವತಿಗೆ ಒಂದು ನಿರ್ದಿಷ್ಟ ರೂಪವನ್ನು ಕೊಟ್ಟು ಪೂಜಿಸುವ ಶಿಷ್ಟ ಸಂಪ್ರದಾಯಕ್ಕಿಂತ ಭಿನ್ನವಾದ ಆದರೆ ಅರ್ಥಪೂರ್ಣವಾದ ಪರಿಕಲ್ಪನೆ ಜನಪದರದ್ದಾಗಿದೆ.

ಇದೋ ಸರಸ್ವತಿ ಅಂತ ಬರದ್ರೆ ತರಪತಿ ಅಂತಾರ
ಏ ಓ ಅಂದ್ರೆ ಆ ಅಂತಾರ॥

ಸರಿಯಾಗಿ ಓದಲು ಬರೆಯಲು ಬಾರದ ಅಂದರೆ ಕಲಿಕೆಯಲ್ಲಿ ಕಷ್ಟಪಡದವರನ್ನು ಮೇಲಿನ ಸಾಲುಗಳು ವಿಡಂಬಿಸುತ್ತವೆ. ಹೀಗೆ ಕಲಿಕೆ ಎಂಬುದರ ಸರ್ವಾರ್ಥವೂ ಸರಸ್ವತಿಯ ಸ್ವರೂಪವೇ ಆಗಿರುವುದು ಜನಪದ ಸಾಹಿತ್ಯದ ವಿಶೇಷ.

ಜಗದ್ಧಾತ್ರಿ, ವೇದಮಾತೆ ಮತ್ತು ಬ್ರಹ್ಮ-ಸರಸ್ವತಿ

ಜನಪದರ ಪರಿಕಲ್ಪನೆಯಲ್ಲಿ ಬ್ರಹ್ಮ-ಸರಸ್ವತಿಯರು ಸತಿಪತಿಗಳೇ ಆಗಿದ್ದಾರೆ. 'ತನ್ನ ಮಗಳನ್ನೇ ತನ್ನ ಶಕ್ತಿಯನ್ನಾಗಿ ಬ್ರಹ್ಮ ಸ್ವೀಕರಿಸಿದ' ಎಂಬ ಯಾವುದೇ ತಾತ್ವಿಕ ವಿಚಾರಗಳಿಗೆ, ದ್ವಂದ್ವಗಳಿಗೆ ಜನಪದರಲ್ಲಿ ಆಸ್ಪದವಿಲ್ಲ. ಸೃಷ್ಟಿಕರ್ತನಾದ ಬ್ರಹ್ಮನ ಸತಿಯಾದ್ದರಿಂದ ಈ ಜಗತ್ತಿನ ಸೃಷ್ಟಿಗೆ ಸರಸ್ವತಿಯೂ ಕಾರಣಳು. ಅವಳು ಜಗದ್ಧಾತ್ರಿ, ಬ್ರಹ್ಮನ ಸೃಷ್ಟಿಯಾದ ವೇದಗಳಿಗೆ ಸರಸ್ವತಿಯೇ ಮಾತೆ. ಸರಸ್ವತಿಯು ವೇದಮಾತೆ. ಈ ಎಲ್ಲಾ ಅಂಶಗಳು ಜನಪದ ಸಾಹಿತ್ಯದಲ್ಲೂ ಕಾಣಿಸಿಕೊಂಡಿರುವುದನ್ನು ನೋಡಬಹುದಾಗಿದೆ.

ಆದಿಬ್ರಹ್ಮನ ರಾಣಿ
ವೇದದಲ್ಲಿ ಕರಚಲುವೆ
ಓ ದೇವಿ ತಾಯಿ ನಮಗೆ
ಜಪಸರ ಮಂತ್ರ ಮಾಯಾ।[15]

---

14. ಮೈತ್ರಿ ಕೆ.ಎಂ.(ಸಂ): ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ, ಪು.12, 246, 341 & 396
15. ಬೋರಲಿಂಗಯ್ಯ ಹಿ.ಚಿ. (ಸಂ): ಮಂಟೇಸ್ವಾಮಿ, ಪು.3

ಸರಸ್ವತಿ ಶಾರದಾಂಬ ಜಗದಾಂಬ ನೀ
ನಮ್ಮಾ ಗುಣಾ ನೋಡಿ ನಮಗೆ ಬಾರಮ್ಮಾ[16]
ಬ್ರಹ್ಮನ ರಾಣಿಯೆ ಅಮ್ಮ ಬೇಡುವೆನಮ್ಮ
ನಿಮ್ಮ ಪಾದ ಕಮಲವೆಂದು
ಪಾಲೀಸೆ ಜನನಿ ಬ್ರಹ್ಮಾನ ರಾಣಿ
ಅಮ್ಮಾ ಸರಸ್ವತಿಯೆ
ನಿಮ್ಮ ಸಿರಿಪಾದವೆನ್ನು ಹೊತ್ತಿಲೆ
ಎದ್ದು ನೆನುದುರು ತಾಯಿ
ಇದ್ದ ಪಾಪುಗುಳೆ ಪರಿಹಾರೋ॥[17]

ಪೌರಾಣಿಕ ಕಲ್ಪನೆಯಲ್ಲಿ ಸರಸ್ವತಿಯನ್ನು ಸೃಷ್ಟಿಕರ್ತನಾದ ಬ್ರಹ್ಮನಿಗೆ ಶಕ್ತಿಯನ್ನಾಗಿಸಿ, ಬ್ರಹ್ಮನಿಂದ ಸೃಷ್ಟಿಯಾದ ವೇದಗಳಿಗೆ ಅಧಿದೇವತೆಯನ್ನಾಗಿಸಿ ವೇದಮಾತೆ, ಜಗದ್ಧಾತ್ರಿ ಎಂದು ಕರೆದಿರುವುದನ್ನು ಗಮನಿಸಿದ್ದೇವೆ. ಅಲ್ಲಲ್ಲಿ ಜನಪದರಲ್ಲಿಯೂ ವೇದಮಾತೆ ಮತ್ತು ಜಗದ್ಧಾತ್ರಿಯ ಅದೇ ಪರಿಕಲ್ಪನೆ ಮೇಲಿನ ಸಾಲುಗಳಲ್ಲಿ ಅಬಿವ್ಯಕ್ತವಾಗಿದೆ. ಯಕ್ಷಗಾನ ಕಾವ್ಯಗಳಲ್ಲೂ ಸರಸ್ವತಿಯು ಬ್ರಹ್ಮನ ರಾಣಿ ಎಂಬ ಕಲ್ಪನೆ ಇದೆ.

ಶರಣು ಅಜನಿಗೆರಾಣಿ ಪರಮಗುಣಕಲ್ಯಾಣಿ।
ಸುರರು ನರರಿಗೆ ಪ್ರಾಣೆ ಸುಗುಣ ಪ್ರವೀಣೆ॥
ಮರೆಹೊಕ್ಕ ನಮ್ಮನು ಶಾರದಾಂಬೆ ನೀನು।
ಮರೆಯದೆ ಪಾಲಿಸೆ ಬ್ರಹ್ಮನ ರಾಣಿ॥[18]
ಪ್ರಥಮದೊಳು ನಿನಗೆ ಯಾನತನಾಗಿನುತಿಗೈವೆ
ಕೃತಿಗೆ ಜೊಡುಮತಿಯ ಚತುರತೆಯ ಶಾರದೆಯೆ.

ಶಿಷ್ಟ ಕಾವ್ಯ ಪರಂಪರೆಯಂತೆ ಯಕ್ಷಗಾನಗಳಲ್ಲೂ ಆರಂಭದಲ್ಲಿಯೇ ಸರಸ್ವತಿಯನ್ನು ಸ್ತುತಿಸಿರುವುದನ್ನು ಮೇಲಿನ ಪದ್ಯ ಸೂಚಿಸುತ್ತದೆ. ಜಾನಪದ ಪರಂಪರೆಯ ಕೃಷ್ಣಪಾರಿಜಾತ ನಾಟಕದ ಶಾರದಾ ಸ್ತುತಿ, ಶಿಷ್ಟಸಾಹಿತ್ಯದ ಶಿಸ್ತನ್ನೂ ಜಾನಪದ ಸಾಹಿತ್ಯ ಗತ್ತು ಮತ್ತು ಆಶಯಗಳನ್ನು ಕೂಡಿಕೊಂಡು ಬಂದಿದೆ.

ರಾಗ – ಪಹಾಡಿ **ತಾಳ – ಝಂಪೆ**
ಶಾರದೆಯೆ ಕರುಣಾವಾರಿಧಿಯೆ ಎನಗೆ
ಸಾರಾಂಶ ವಚನಗಳ ಕೊಟ್ಟು ಸಲಹು ತಾಯೇ॥ಪ॥
ಚಂದ್ರಕಿರಣವ ಪೋಲ್ವ ಚೆಲ್ವ ಎಳೆ ನಗೆಮೊಗದಂಬೆ
ನೀ ಸ್ವರ್ಣ ಬೊಂಬೆ, ಅಜ-ಭವ-ಮಹೇಂದ್ರರಿಂ ಪೂಜೆಗೊಂಬೆ
ನಾನು ನಿನ್ನ ಕಂದ ಎನ್ನ ಮತಿಗೆ ಸಾಕಾರಿಯಾಗಿರುಯೆಂಬೆ॥1॥

---

16. ಮೈತ್ರಿ ಕೆ.ಎಂ. (ಸಂ): ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ, ಪು.1
17. ಚೆಲುವರಾಜು (ಸಂ): ಜುಂಜಪ್ಪ,
18. ರಾಜೇಗೌಡ ಹ.ಕ. (ಸಂ): ಕೆಂಪಣ್ಣಗೌಡನ ಯಕ್ಷಗಾನ ಕಾವ್ಯಗಳು, ಪು.161 & 399

ಸರಸಿಜದಳನೇತ್ರೆ ಸಾಮಜಕ-ಸಮು-ಯಾತ್ರೆ
ಪರಮ ಪಾವನ ಚರಿತ್ರೆ, ನೀನೆ ಗತಿ ಸರ್ವರಿಗೆ ಜಗನ್ಮಿತ್ರೆ
ನಿನ್ನ ಕರುಣ ಪರಶು ಮುಟ್ಟಲು ಲೋಹ ಚಿನ್ನ ಮಾಡಲು ಪಾತ್ರೆ॥2॥
ಅಜನ ಪಟ್ಟದ ರಾಣಿ, ಅಂಬುಜಪಲ್ಲವಪಾಣಿ
ಅಳಿಕುಂತಳಿಯೆ ನೀಲವೇಣಿ, ಭಜಕರನು ರಕ್ಷಿಸುವ ಬ್ರಹ್ಮಾಣಿ
ವ್ರಜರಾಜ ವಿಜಯಗೋಪಾಲನ ಸೊಸೆ, ಮುದ್ದುವೇಣೀ॥3॥[19]

ದಾಸಸಾಹಿತ್ಯ ಪ್ರಭಾವ ಈ ಸ್ತುತಿಯ ಮೇಲಾಗಿರುವುದು ಮೇಲ್ನೋಟಕ್ಕೇ ಗೋಚರವಾಗುತ್ತದೆ. ಕರುಣಾವಾರಿಧಿ, ಸರಸಿಜದಳನೇತ್ರೆ, ಪರಮ ಪಾವನ ಚರಿತ್ರೆ, ಅಜನ ಪಟ್ಟದ ರಾಣಿ, ಅಂಬುಜಪಲ್ಲವಪಾಣಿ, ವಿಜಯಗೋಪಾಲನ ಸೊಸೆ ಮೊದಲಾದ ಸರಸ್ವತಿಯ ವಿಶೇಷಣಗಳು ದಾಸಸಾಹಿತ್ಯದಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ. ದಾಸಸಾಹಿತ್ಯವೂ ಮೌಖಿಕವಾಗಿಯೇ ಬೆಳೆದು ಬಂದಿದ್ದು, ಜನಪದರಿಗೂ ಕೇಳುವ ಅವಕಾಶ ದೊರೆತಿದ್ದರಿಂದ ಈ ರೀತಿಯ ಪ್ರಭಾವ ಆಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಮಾತಂಗಿ ಮತ್ತು ಸರಸ್ವತಿ

ಮಾತಂಗಿಯನ್ನು ಸರಸ್ವತಿಯ ಇನ್ನೊಂದು ರೂಪವೆಂದು ಭಾವಿಸಲಾಗಿದೆ. ಜೈನ ಪರಿಕಲ್ಪನೆಯ ಕುಲವಿದ್ಯೆ ಮತ್ತು ಜಾತಿವಿದ್ಯೆಗಳಲ್ಲಿ ಮಾತಂಗಿಯನ್ನು ಗೌರಿ, ಭ್ರಾಮರಿ, ಆಭೋಗಿನಿ ಮೊದಲಾದವುಗಳ ಜತೆ ಹೇಳಲಾಗಿದೆ.[20] ವೈದಿಕ ಪರಿಕಲ್ಪನೆಯಲ್ಲಿ ಕಾಳೀ, ತಾರಾ, ಚಿನ್ನಮಸ್ತಾ (Chinnamasta), ಭುವನೇಶ್ವರೀ, ಬಗಲಾ (Bagala), ಧೂಮಾವತೀ, ಕಮಲಾ, ಮಾತಂಗೀ, ಷೋಡಷೀ ಮತ್ತು ಭೈರವಿಯರು ಹತ್ತು ಮಹಾ ವಿದ್ಯಾದೇವತೆಗಳು.[21] ತಾಂತ್ರಿಕ ಆಚರಣೆಯಲ್ಲಿ ಕಾಳಿ, ತಾರಾ, ತ್ರಿಪುರಸುಂದರಿ, ಭುವನೇಶ್ವರಿ, ಭೈರವಿ, ಚಿನ್ನಮಸ್ತಾ, ಧೂಮವತೀ. ಬಾಗಲಮುಖೀ. ಮಾತಂಗೀ ಮತ್ತು ಕಮಲಾತ್ಮಿಕ ಇವರು ದಸ್(ಹತ್ತು)ಮಹಾವಿದ್ಯಾದೇವತೆಗಳು.[22] ಈ ಹತ್ತು ಮಹಾವಿದ್ಯಾದೇವತೆಗಳು ಪಾರ್ವತಿಯ ತಾಮಸ ಶಕ್ತಿಯ ಬೇರೆ ಬೇರೆ ಸ್ವರೂಪಗಳಾಗಿದ್ದು, ಮೃತ್ಯು, ಹಿಂಸೆ, ಮಾಲಿನ್ಯ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ದೇವತೆಗಳಾಗಿವೆ. ತಾಂತ್ರಿಕ ಮಾತಂಗಿಯು ಮಾಲಿನ್ಯವನ್ನು ಇಷ್ಟಪಡುವವರ ದೈವವಾಗಿದೆ. ಶ್ರೀತತ್ವನಿಧಿಯಲ್ಲಿ ಮಾತಂಗಿಯನ್ನು ಮತಂಗ ಋಷಿಯ ಮಗಳೆಂದು ಹೇಳಿದೆ.[23] ಮಾತಂಗಿಯು ಲಲಿತೆಯ ಸೇವೆಯಲ್ಲಿ ನಿಂತು ಮಂತ್ರಿಣಿ ಶ್ಯಾಮಲೆ ಎನ್ನಿಸಿಕೊಳ್ಳುತ್ತಾಳೆ. ಜೈನ, ವೈದಿಕ

---

19. ಡಾ. ಕೃಷ್ಣಕಟ್ಟಿ (ಸಂ): ಅಪರಾಳ ತಮ್ಮಣ ಮತ್ತು ಶಿರಗುಪ್ಪಿ ಸದಾಶಿವಪ್ಪ ಕೃತ ಶ್ರೀಕೃಷ್ಣಪಾರಿಜಾತ, ಪು.2
20. ಕಮಲ ಹಂಪನಾ (ಸಂ) ಚಾವುಂಡರಾಯಪುರಾಣ 180
21. ಚಿದಾನಂದಮೂರ್ತಿ ಎಂ.: ಕನ್ನಡಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.136
22. C.f., Wikipedia Web pages
23. ರಾಮಚಂದ್ರರಾವ್. ಎಸ್.ಕೆ.: ಮುಮ್ಮಡಿ ಕೃಷ್ಣರಾಜ ಒಡೆಯರ ಶ್ರೀತತ್ವನಿಧಿ, ಪುಟ. 16-17

ಮತ್ತು ತಾಂತ್ರಿಕ ಈ ಮೂರೂ ಮತಗಳ ಪರಿಕಲ್ಪನೆಯಲ್ಲಿಯೂ ಮಾತಂಗಿಗೆ ಸ್ಥಾನವಿರುವದು ಸ್ಪಷ್ಟ. ಜೈನಪರಂಪರೆಯಲ್ಲಿ ಮಾತಂಗಿಯನ್ನು ಒಂದು ವಿದ್ಯೆ ಎಂದು ಪರಿಗಣಿಸುತ್ತಾರೆ. ಅದು ಒಂದು ತಾಂತ್ರಿಕ ವಿದ್ಯೆಯೇ ಆಗಿರುವ ಸಾಧ್ಯತೆ ಹೆಚ್ಚು.

ಮಾತಂಗಿ ಎಂಬುದಕ್ಕೆ ಹೆಣ್ಣುದೇವತೆ, ಹೊಲತಿ, ಚಾಂಡಾಲರ ದೇವತೆ, ದುರ್ಗೆ, ಒಂದು ಮಹಾವಿದ್ಯೆ, ಕಿರಾತಕಿ, ಹೆಣ್ಣಾನೆ, ಮಾದಗಿತ್ತಿ ಮೊದಲಾದ ವಿವರಣೆಗಳನ್ನು ಕೊಟ್ಟಿರುವುದನ್ನೂ ನೋಡಬಹುದು.[24] ಜನಪದರ ಮಾಂತಂಗಿಯ ಕಲ್ಪನೆಗೂ ಶಿಷ್ಟಕಲ್ಪನೆಗೂ ಅಗಾಧವಾದ ವ್ಯತ್ಯಾಸವಿದೆ. ಜನಪದರ ಮಾತಂಗಿಯ ಪರಿಕಲ್ಪನೆ ಹೀಗಿದೆ: **'ಮಾತಂಗಿ ಮಾದಿಗರ ದೈವ. ಮಾದಿಗರು ತೊಗಲಿನ ಕೆಲಸ ಮಾಡುವ ಕುಶಲಕರ್ಮಿಗಳು. ಮಾದಿಗರು ತಾವು ಮಾತಂಗಿಯ ಮಕ್ಕಳೆಂದು ಹೇಳಿಕೊಳ್ಳುತ್ತಾರೆ. ಮಾತಂಗಿಯನ್ನು ಪರಶುರಾಮನು ಸೋಲಿಸಿದಾಗ ಅವಳು ಮಾದಿಗನೊಬ್ಬನ ಮನೆಯ ಚರ್ಮ ಹದಮಾಡುವ ಕರಿಬಾನಿಯ ಕೆಳಗೆ ಅವನಿಂದ ತಪ್ಪಿಸಿಕೊಳ್ಳಲು ಅವಿತುಕೊಂಡಳಂತೆ. ಅದರ ಸಂಕೇತವಾಗಿ ಈಗಲೂ ಹಬ್ಬದ ದಿನ ಮಾದಿಗರು ತಮ್ಮ ಕರಿಬಾನಿಗಳನ್ನು ಮಾತಂಗಿಯ ಪ್ರತಿನಿಧಿಗಳೆಂದು ಪೂಜಿಸುತ್ತಾರೆ. ಮಾಂಸ ಹೆಂಡಗಳನ್ನು ಅವಳಿಗೆ ನೈವೇದ್ಯ ಮಾಡುತ್ತಾರೆ.'**[25] **Sarasvati: Goddess of Purity and Matangi: Goddess of Pollution**[26] ಎಂಬ ಮಾತುಗಳನ್ನು ಗಮನಿಸಿದರೆ, ಸರಸ್ವತಿಗೆ ಮತ್ತು ಜನಪದರ ಕಲ್ಪನೆಯ ಮಾತಂಗಿಗೆ ಹತ್ತಿರವಾದ ಸಂಬಂಧವಿದ್ದಂತೆ ಕಾಣುತ್ತದೆ. ಇದರಿಂದ ಮಾತಂಗಿಯು ಸರಸ್ವತಿಯ ತಾಂತ್ರಿಕ ಸ್ವರೂಪ ಎಂದಾಗುತ್ತದೆ. **'ಸರಸ್ವತಿಯನ್ನು ಸಂಪೂರ್ಣ ಸಾತ್ವಿಕ ಶಕ್ತಿ ಎಂದು ಮಾತ್ರ ಪೂಜಿಸಿದರೆ 'ಶಕ್ತಿ' ಎಂಬ ಕಲ್ಪನೆಗೆ ಅಪೂರ್ಣತೆ ಒದಗಿದಂತೆ. ಆದ್ದರಿಂದ ತಾಂತ್ರಿಕ ಸ್ವರೂಪವಾದ ಮಾತಂಗಿಯನ್ನೂ ಸರಸ್ವತಿಯ ಪರಿಕಲ್ಪನೆಗೆ ಸೇರಿಸಿದರೆ ಅದಕ್ಕೆ ಪರಿಪೂರ್ಣತೆ ಲಭಿಸುತ್ತದೆ'** ಎಂಬ ಅಭಿಪ್ರಾಯಗಳೂ ಇವೆ.[27] ಮಾತಂಗಿಯು ಮೂಲತಃ ಆದಿವಾಸಿಗಳ, ಜನಸಾಮಾನ್ಯರ ದೇವತೆಯಾಗಿದ್ದು, ತಾಂತ್ರಿಕ ಆಚರಣೆಯನ್ನು ಜನಪ್ರಿಯಗೊಳಿಸುವಾಗ ಜನಸಾಮಾನ್ಯರು ಅದನ್ನು ಅಳವಡಿಸಿಕೊಂಡಿರಬಹುದು. ಮಾತಂಗಿ ತಾಂತ್ರಿಕ ದೇವತೆಯಾಗಿ, ನಂತರ ಜೈನ ಮತ್ತು ವೈದಿಕ ಪುರಾಣಗಳಲ್ಲಿ ಸೇರಿಹೋಗಿರಬಹುದೆಂದು ಊಹಿಸಲು ಸಾಧ್ಯವಿದೆ.

ಜಾನಪದರು ಆರಾಧಿಸುವ ಮಾತಂಗಿಯ ಲಕ್ಷಣಗಳು ತಿಳಿದುಬಂದಿಲ್ಲ. ಹಾಗೆಯೇ ತಾಂತ್ರಿಕ ಆಚರಣೆಯ ಮಾತಂಗಿಗೂ ನಿರ್ದಿಷ್ಟ ಲಕ್ಷಣಗಳು ಇಲ್ಲ. ಬಹುಶಃ ತಾಂತ್ರಿಕ ಆಚರಣೆಯಲ್ಲಿ,

---

24. ಮಂಜುನಾಥ ಬೇವಿನಕಟ್ಟಿ (ಡಾ): ಮಾತಂಗಿ, ಪು 3–4
25. ಮಂಜುನಾಥ ಬೇವಿನಕಟ್ಟಿ (ಡಾ): ಮಾತಂಗಿ, ಪು 3
26. C.f., DeviBhakta: The Goddess Matangi. (article published in webpage http://Shaktisadana.com)
27. ibid

ಶಕ್ತಿಯಾರಾಧನೆಯಲ್ಲಿ ರೂಪಕ್ಕಿಂತ ಮಂಡಲಗಳಿಗೇ ಹೆಚ್ಚು ಪ್ರಾಧಾನ್ಯವಿರುವುದು ಕಾರಣವಿರಬಹುದು. ಕೆಲವೊಂದು ಆಧಾರಗಳಿಂದ ಮಾತಂಗಿಗೆ ಕಲ್ಪಿಸಿರುವ ಲಕ್ಷಣ ಹೀಗಿದೆ: ಸರಸ್ವತಿಯು ಶುಭ್ರವರ್ಣೆಯಾಗಿದ್ದರೆ ಮಾತಂಗಿಯು ಕಪ್ಪುವರ್ಣದವಳು. 16 ವರ್ಷದ ಕನ್ಯೆ. ಸರಸ್ವತಿಯಂತೆಯೇ ವೀಣೆ ಅಕ್ಷಮಾಲೆಗಳನ್ನು ಧರಿಸಿರುತ್ತಾಳೆ. ಆದರೆ ಸರಸ್ವತಿಯಂತೆ ಎರಡು ಕೈಗಳಲ್ಲಿ ವೀಣೆ ಹಿಡಿದಿರದೆ, ಒಂದೇ ಕೈಯಲ್ಲಿ ಹಿಡಿದಿರುವಂತೆ ಚಿತ್ರಿತಳಾಗಿದ್ದಾಳೆ. ಇವುಗಳ ಜೊತೆಗೆ ಕತ್ತಿ, ಅಂಕುಶ, ಪಾಶ, ಚಕ್ರ, ಕಪಾಲ ಮೊದಲಾದವುಗಳಿರುತ್ತವೆ. ಕೆಲವೊಮ್ಮೆ ಚತುರ್ಭುಜಗಳಿದ್ದರೆ, ಹೆಚ್ಚಿನ ಸಂದರ್ಭದಲ್ಲಿ ನಾಲ್ಕಕ್ಕೂ ಹೆಚ್ಚು ಭುಜಗಳಿರುತ್ತವೆ. ಸರಸ್ವತಿಯಂತೆಯೇ ಮಾತಂಗಿಯನ್ನೂ ಜ್ಞಾನಶಕ್ತಿಗಾಗಿಯೇ ಆರಾಧಿಸಲಾಗುತ್ತದೆಯಾದರೂ, ಅದಕ್ಕಿಂತ ಹೆಚ್ಚಾಗಿ **ಮಾತಂಗಿಯನ್ನು ಅಜ್ಞಾನ ಮತ್ತು ದುಷ್ಟಶಕ್ತಿಯನ್ನು ಕೊನೆಗಾಣಿಸುವುದಕ್ಕೆ ಆರಾಧಿಸಲಾಗುತ್ತದೆ.**[28] ಶ್ರೀತತ್ವನಿಧಿಯಲ್ಲಿ ಕೊಟ್ಟಿರುವ ರಾಜಮಾತಂಗಿಯ ಚಿತ್ರದಲ್ಲಿ ದೇವಿಯು ದ್ವಿಭುಜೆಯಾಗಿದ್ದು, ಎರಡೂ ಕೈಗಳಲ್ಲಿ ವೀಣೆ ಹಿಡಿದಿರುತ್ತಾಳೆ. ಪಲ್ಲಂಗದ ಮೇಲೆ ಆಸೀನಳಾಗಿರುವಂತೆ ಚಿತ್ರಿಸಲಾಗಿದೆ. ಪಲ್ಲಂಗದ ಮೇಲೆ ಬಲಭುಜದ ಹತ್ತಿರ ಗಿಳಿಯಿದೆ.[29] ಆದ್ದರಿಂದ ಮಾತಂಗಿಯನ್ನು ಸರಸ್ವತಿಯ ತಾಮಸ(ಕಾಳೀ) ಸ್ವರೂಪ ಎಂದೂ ಭಾವಿಸಬಹುದಾಗಿದೆ.

ಜನಪದ ಸಾಹಿತ್ಯದಲ್ಲಿ ಅಭಿವ್ಯಕ್ತಿಗೊಂಡಿರುವ ಸರಸ್ವತಿಯ ಸ್ವರೂಪವನ್ನು ಒಟ್ಟಾಗಿ ಕೆಳಗಿನಂತೆ ಗ್ರಹಿಸಬಹುದಾಗಿದೆ.

- ✓ ವಾಗ್ದೇವತೆಯ ಪರಿಕಲ್ಪನೆ ಇಲ್ಲದಿದ್ದರೂ ವಾಕ್ ಅಂದರೆ ಮಾತಿನ ಮಹತ್ವ ಅಭಿವ್ಯಕ್ತಗೊಂಡಿದೆ.
- ✓ ಶಾರದೆ ಮತ್ತು ಸರಸ್ವತಿ ಎಂಬವುಗಳು, ಒಂದೇ ದೇವತೆಯ ಎರಡು ಹೆಸರುಗಳಷ್ಟೆ; ಸ್ವರೂಪದಲ್ಲಿ ಯಾವುದೇ ಭಿನ್ನತೆಯಿಲ್ಲ. ಸರಸ್ವತಿ ಎಂಬುದಕ್ಕೆ ಸರಸೋತಿ, ಸರಸಾತಿ, ಸರಸತಿ ಮೊದಲಾದ ಪ್ರಯೋಗಗಳಿವೆ.
- ✓ ರಾಗಿಕಲ್ಲನ್ನೇ ಸರಸ್ವತಿಯೆಂದು ಪೂಜಿಸುವ ಪರಿಕಲ್ಪನೆ ನವೀನವಾಗಿದೆ. ಅಲ್ಲದೆ ಬೀಸುವ ಕ್ರಿಯೆಯಲ್ಲಿ ಸರಸ್ವತಿಯು (ಹಾಡಿನ ರೂಪದಲ್ಲಿ) ಜತೆಯಾಗಿ ಇರುತ್ತಾಳೆ, ಬೀಸುವುದರಿಂದ ಆಗುವ ಆಯಾಸವನ್ನು ಸರಸ್ವತಿಯು (ಹಾಡು) ಕಳೆಯುತ್ತಾಳೆ ಎಂಬ ಭಾವನೆ ವ್ಯಕ್ತವಾಗಿದೆ.
- ✓ ಸರಸ್ವತಿಯು ಬ್ರಹ್ಮನ ಮಗಳೇ? ಹೆಂಡತಿಯೇ? ಎಂಬ ಯಾವುದೇ ದ್ವಂದ್ವಗಳಿಲ್ಲ. ಜನಪದರ ದೃಷ್ಟಿಯಲ್ಲಿ ಸರಸ್ವತಿಯು ಬ್ರಹ್ಮನ ಹೆಂಡತಿ ಮಾತ್ರ.
- ✓ ಸರಸ್ವತಿಯು 'ಜಗದ್ಧಾತ್ರಿ' ಎಂಬ ಶಿಷ್ಟ ಪರಿಕಲ್ಪನೆಗೆ ಸಹಮತ ವ್ಯಕ್ತವಾಗಿದೆ.

---

28. ibid
29. ರಾಮಚಂದ್ರರಾವ್. ಎಸ್.ಕೆ: ಮುಮ್ಮಡಿ ಕೃಷ್ಣರಾಜ ವಡೆಯರ ಶ್ರೀತತ್ವನಿಧಿ. ಪುಟ. 16

- ✓ ಸರಸ್ವತಿಯು ಮಾತು, ಅಕ್ಷರ, ವಿದ್ಯೆ ಮತ್ತು ಹಾಡುಗಳನ್ನು ಕಲಿಸುವ ಅಧ್ಯಾಪಿಕೆ; ದೇವತೆ.
- ✓ ಸರಸ್ವತಿಯು ದೇವತೆಯಾಗಿದ್ದರೂ, ಶಿಷ್ಟ ಸಂಪ್ರದಾಯದಂತೆ ಬೇರೊಂದು ಲೋಕದವಳಲ್ಲ. ತಮ್ಮೊಂದಿಗೇ ಬದುಕುತ್ತಿರುವ, ತಮ್ಮಂತೆಯೇ ಕೆಲಸ ಮಾಡುತ್ತಿರುವ ಆದರೆ ತಮಗೆ ಹಾಡು ಕಲಿಸುವ ಸಹವಾಸಿ ಎಂದೇ ಪರಿಭಾವಿಸಲಾಗಿದೆ.
- ✓ ಮಾತು, ವಿದ್ಯೆ, ಹಾಡು ಇವಿಷ್ಟೇ ಅಲ್ಲದೆ ಒಟ್ಟಾರೆಯಾಗಿ ಕಲಿಯುವ ಇಡೀ ಕ್ರಿಯೆಯನ್ನೇ ಸರಸ್ವತಿ ಎಂದು ಪರಿಭಾವಿಸಿರುವುದನ್ನು ಕಾಣಬಹುದು.
- ✓ ಹೃದಯಕಮಲದಲ್ಲಿ, ಜಿಹ್ವಾಗ್ರದಲ್ಲಿ, ವದನಾರವಿಂದದಲ್ಲಿ ನೆಲೆಸು ಎಂದು ಸರಸ್ವತಿಯನ್ನು ಸ್ತುತಿಸುವ ಶಿಷ್ಟ ಸಂಪ್ರದಾಯಕ್ಕಿಂತ ಬೇರೆಯದಾದ ಆದರೆ ಅರ್ಥಪೂರ್ಣವಾದ ಸ್ವಾಗತಿಸುವಿಕೆ ಇದೆ. ಜನಪದರು ಸರಸ್ವತಿಯನ್ನು 'ಸುತ್ತಿ ಬಾರಮ್ಮ ನಮ್ಮ ಹೃದಯಕ್ಕೆ' ಎಂದು ಪ್ರೀತಿಯಿಂದ ಆಹ್ವಾನಿಸುತ್ತಾರೆ.
- ✓ ಶಿಷ್ಟ ಕವಿಗಳಲ್ಲಿ ಕಂಡುಬರುವ ಒಂದು ರೀತಿಯ ಒತ್ತಾಯದ, ಅನಿವಾರ್ಯದ ಸ್ತುತಿ ಇಲ್ಲಿಲ್ಲ. ಅರ್ಹತೆಗೆ ಮೀರಿದ ಅಪೇಕ್ಷೆಯಿಲ್ಲ. 'ನಮ್ಮಾ ಗುಣಾ ನೋಡಿ ನಮಗೆ ಬಾರಮ್ಮಾ' ಎಂದು ಸರಸ್ವತಿಯನ್ನು ಆದರದಿಂದ ಸ್ವಾಗತಿಸುವುದು ಜನಪದರ ವಿಶಾಲ ದೃಷ್ಟಿಕೋನವನ್ನು ಸೂಚಿಸುತ್ತದೆ.
- ✓ ಯಕ್ಷಗಾನ, ಬಯಲಾಟ, ದೊಡ್ಡಾಟ ಮೊದಲಾದವುಗಳಲ್ಲಿ ಸರಸ್ವತಿಯ ಸ್ತುತಿ ಶಿಷ್ಟ ಸಾಹಿತ್ಯದಂತೆಯೇ ಕ್ರಮವಾಗಿ ಬಂದಿದೆ.
- ✓ ಜನಪದರ ದೈವವಾದ ಮಾತಂಗಿಯು ಸರಸ್ವತಿಯ ತಾಮಸಸ್ವರೂಪದ ದೇವತೆಯಾಗಿದ್ದಾಳೆ. ಶಿಷ್ಟಧರ್ಮಗಳ ಭಾಗವಾಗಿ ಬೆಳೆದು ಬಂದ ತಾಂತ್ರಿಕ ಆಚರಣೆಯಲ್ಲಿ ಮಾತಂಗಿಯನ್ನು ಜ್ಞಾನಕ್ಕೆ ಮತ್ತು ದುಷ್ಟಶಕ್ತಿಯನ್ನು ಕೊನೆಗಾಣಿಸುವುದಕ್ಕೆ ಆರಾಧಿಸಲಾಗುತ್ತದೆ.

ಅಧ್ಯಾಯ 6 ಸರಸ್ವತೀ ಶಿಲ್ಪಗಳು

ಶಾಸ್ತ್ರೀಯ ಆಧಾರಗಳು

ಬೌದ್ಧ ಪರಂಪರೆಯ ಗ್ರಂಥಗಳಲ್ಲಿರುವ ಸರಸ್ವತೀ ಶಿಲ್ಪಲಕ್ಷಣಗಳು:

ವಜ್ರಸರಸ್ವತೀ; ಮಹಾಸರಸ್ವತೀ; ಆರ್ಯಾಸರಸ್ವತೀ; ವಜ್ರವೀಣಾಸರಸ್ವತೀ; ವಜ್ರಶಾರದಾ

ಜೈನ ಪರಂಪರೆಯ ಗ್ರಂಥಗಳಲ್ಲಿರುವ ಸರಸ್ವತೀ ಶಿಲ್ಪಲಕ್ಷಣಗಳು:

ದ್ವಿಭುಜ ಸರಸ್ವತಿ; ಚತುರ್ಭುಜ ಸರಸ್ವತಿ; ಸರಸ್ವತೀ ಮತ್ತು ಸಿದ್ಧಾಯಿಕೆ

ವೈದಿಕ ಪರಂಪರೆಯ ಗ್ರಂಥಗಳಲ್ಲಿರುವ ಸರಸ್ವತೀ ಶಿಲ್ಪ ಲಕ್ಷಣಗಳು:

ದ್ವಿಭುಜ ಸರಸ್ವತಿ; ಚತುರ್ಭುಜ ಸರಸ್ವತಿ; ದಶಭುಜ ಸರಸ್ವತಿ;

ತಾಂತ್ರಿಕ ಗ್ರಂಥಗಳಲ್ಲಿ ಸರಸ್ವತೀ ಶಿಲ್ಪಲಕ್ಷಣಗಳು

ಭಾರತದ ಪ್ರಾಚೀನ ಸರಸ್ವತೀ ಶಿಲ್ಪಗಳು

ಕರ್ನಾಟಕದ ಪ್ರಾಚೀನ ಸರಸ್ವತೀ ಶಿಲ್ಪಗಳು

ಶಿಲ್ಪಗಳ ವಿಭಾಗ ಕ್ರಮ ಮತ್ತು ತೌಲನಿಕ ಅವಲೋಕನ

1. **ಆಸೀನ ಸರಸ್ವತೀ ಶಿಲ್ಪಗಳು:** 1.1. ದ್ವಿಭುಜ ; 1.2. ಚತುರ್ಭುಜ; 1.3. ಷಡ್ಭುಜ
2. **ಸ್ಥಾನಕ ಸರಸ್ವತೀ ಶಿಲ್ಪಗಳು:** 2.1. ದ್ವಿಭುಜ; 2.2. ಚತುರ್ಭುಜ
3. **ತ್ರಿಭಂಗಿ ಸರಸ್ವತೀ ಶಿಲ್ಪಗಳು:** 3.1. ದ್ವಿಭುಜ; 3.2. ಚತುರ್ಭುಜ
4. **ನೃತ್ಯ ಸರಸ್ವತೀ ಶಿಲ್ಪಗಳು:** 4.1. ದ್ವಿಭುಜ; 4.2. ಚತುರ್ಭುಜ; 4.3. ಷಡ್ಭುಜ; 4.4. ಅಷ್ಟಭುಜ; 4.5. ದಶಭುಜ
5. **ಬ್ರಹ್ಮನ ಜೊತೆಯಲ್ಲಿರುವ ಸರಸ್ವತೀ ಶಿಲ್ಪಗಳು**

ಅಧ್ಯಾಯ 6

ಸರಸ್ವತೀ ಶಿಲ್ಪಗಳು

ಭಾರತೀಯ ಸಾಹಿತ್ಯದ ಗಂಗೋತ್ರಿಯಾದ ವೇದಗಳಲ್ಲೇ ಕಾಣಿಸಿಕೊಂಡ ಸರಸ್ವತೀ ಪರಿಕಲ್ಪನೆ, ಕಾಲ ಕಾಲಕ್ಕೆ, ಬೇರೆಯದೇ ಆದ ಅರ್ಥವನ್ನು ಪಡೆದುಕೊಂಡು ಹತ್ತು ಹಲವಾರು ವಿಶೇಷಗಳೊಂದಿಗೆ ವಿಕಾಸವಾಗುತ್ತಾ ಬಂದಿದೆ. ಸರಸ್ವತೀ ಪರಿಕಲ್ಪನೆ ಬೆಳೆದು ಬಂದಂತೆ, ಸರಸ್ವತೀ ಆರಾಧನೆಯೂ ವಿಕಾಸ ಹೊಂದಿರುವುದನ್ನು ಕಾಣಬಹುದು. ಆರಾಧನೆಯ ಜೊತೆಯಲ್ಲೇ ಸರಸ್ವತೀ ಶಿಲ್ಪಗಳೂ ವಿಕಾಸವಾಗುತ್ತಾ ಬಂದಿರುವುದು ಸಹಜವಾಗಿಯೇ ಇದೆ.

ಸರಸ್ವತಿಯ ಅರ್ವಾಚಿನ ಶಿಲ್ಪಗಳಿಗೆ ಹೋಲಿಸಿದರೆ ಪ್ರಾರಂಭದ ಶಿಲ್ಪಗಳು ಅತ್ಯಂತ ಸರಳವಾದ ರಚನೆಗಳಾಗಿವೆ. ನಂತರದ ಶಿಲ್ಪಗಳಲ್ಲಿ ದ್ವಿಭುಜ, ಚತುರ್ಭುಜ, ಷಡ್ಭುಜ, ಅಷ್ಟಭುಜ, ದಶಭುಜ ಶಿಲ್ಪಗಳನ್ನು ಕಾಣಬಹುದು. ಪ್ರಾರಂಭದ ಶಿಲ್ಪಗಳು ಯಾವುದೇ ಶಾಸ್ತ್ರೀಯ ಆಧಾರಗಳಿರದೆ, ಶಿಲ್ಪಿಯ ಕಲ್ಪನಾಸಾಮರ್ಥ್ಯವನ್ನು ಅವಲಂಬಿಸಿ ರಚಿತವಾದವುಗಳಾಗಿವೆ. ಧಾರ್ಮಿಕ ಪರಿಕಲ್ಪನೆ, ಶಾಸ್ತ್ರ, ಸಾಹಿತ್ಯ ಮುಂತಾದವುಗಳು ಬೆಳೆದಂತೆ ಶಿಲ್ಪ ಸಂಬಂಧೀ ಶಾಸ್ತ್ರಗಳು ಬೆಳೆದು ಬಂದಿರಬೇಕು. ಅದರಿಂದಾಗಿ ನಂತರದ ಶಿಲ್ಪಗಳಲ್ಲಿ ಹೆಚ್ಚು ವೈವಿಧ್ಯವನ್ನು ಕಾಣಬಹುದಾಗಿದೆ. ಈ ವೈವಿಧ್ಯಮಯ ಶಿಲ್ಪಗಳನ್ನು ಒಂದು ನಿರ್ದಿಷ್ಟ ಶಿಸ್ತಿನ ಅಧ್ಯಯನಕ್ಕೆ ಒಳಪಡಿಸಬೇಕಾದರೆ, ಶಿಲ್ಪ ಗ್ರಂಥಗಳು ಮತ್ತು ಸಾಹಿತ್ಯದಲ್ಲಿ ಹೇಳಿರುವ ಲಕ್ಷಣಗಳನ್ನು ಮೊದಲು ಅಧ್ಯಯನ ಮಾಡುವುದು ಅತ್ಯಗತ್ಯವಾಗಿದೆ.

ಶಾಸ್ತ್ರೀಯ ಆಧಾರಗಳು

ಹಲವಾರು ಶಾಸ್ತ್ರೀಯ ಗ್ರಂಥಗಳು –ವೇದಗಳು, ಪುರಾಣಗಳು, ಶಿಲ್ಪಶಾಸ್ತ್ರ ಗ್ರಂಥಗಳು, ತಂತ್ರಗಳು– ಸರಸ್ವತಿಯ ನೂರಾರು ಲಕ್ಷಣಗಳನ್ನು ಹೇಳಿವೆ. ಶಿಲ್ಪಶಾಸ್ತ್ರೀಯ ಕೃತಿಗಳನ್ನು ಆಧರಿಸಿ ಶಿಲ್ಪಗಳನ್ನು ರಚಿಸಲಾಗಿದೆಯೇ? ಅಥವಾ ನಿರ್ಮಿತ ಶಿಲ್ಪಗಳನ್ನು ನೋಡಿ ಶಿಲ್ಪಶಾಸ್ತ್ರೀಯ ಕೃತಿಗಳ ರಚನೆಯಾಗಿದೆಯೇ? ಎಂಬ ಪ್ರಶ್ನೆಗಳಿಗೆ ಉತ್ತರವಾಗಿ ಎರಡೂ ರೀತಿಯ ಸಾಧ್ಯತೆಗಳಿವೆ ಎನ್ನಬಹುದು. ಪ್ರಾರಂಭದ ಶಿಲ್ಪಗಳು ಶಿಲ್ಪಿಯ ಕಲ್ಪನಾಸಾಮರ್ಥ್ಯದ ಹಿನ್ನೆಲೆಯಲ್ಲಿ ರಚಿತವಾದವುಗಳಾಗಿವೆ ಎನ್ನಲಡ್ಡಿಯಿಲ್ಲ. ನಂತರದ ದಿನಗಳಲ್ಲಿ ಶಾಸ್ತ್ರೋಕ್ತ ದೇವಾಲಯಗಳ ನಿರ್ಮಾಣಯುಗ ಪ್ರಾರಂಭವಾದಾಗ ಶಿಲ್ಪಗಳನ್ನೂ ಶಾಸ್ತ್ರೀಯ ರೀತಿಯಲ್ಲಿ ನಿರ್ಮಿಸುವ ಪರಿಪಾಠ ಬೆಳೆದುಬಂದಿರಬೇಕು. ಆಗ ಆಯಾಯಾ ಮತ ಧರ್ಮದ ಶಾಸ್ತ್ರಕಾರರು ಆಯಾಯಾ ದೇವತೆಗಳಿಗೆ ಅವುಗಳದೇ ಆದ ಲಕ್ಷಣಗಳನ್ನು ರಚಿಸಿಕೊಟ್ಟಿದ್ದಾರೆ. ಅವುಗಳು ಕಾಲಕಾಲಕ್ಕೆ ಬದಲಾಗುತ್ತಾ ಬಂದಿರುವ ಸಾಧ್ಯತೆಯನ್ನು

ಅಲ್ಲಗಳೆಯುವಂತಿಲ್ಲ. ಭಾರತದಲ್ಲಿ ಮುಖ್ಯವಾಗಿ ಬೌದ್ಧ, ಜೈನ ಮತ್ತು ವೈದಿಕ ಧರ್ಮದ ಶಾಸ್ತ್ರಗ್ರಂಥಗಳು ದೇವಾಲಯ ಮತ್ತು ಶಿಲ್ಪಗಳ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿವೆ. ಆಯಾ ಧರ್ಮದ ಪ್ರಮುಖ ಗ್ರಂಥಗಳು ಸರಸ್ವತೀ ಶಿಲ್ಪದ ಬಗ್ಗೆ ಹೇಳಿರುವ ಲಕ್ಷಣಗಳನ್ನು ಪ್ರತ್ಯೇಕವಾಗಿ ಗಮನಿಸಲಾಗುವುದು.

ಬೌದ್ಧ ಪರಂಪರೆಯ ಗ್ರಂಥಗಳಲ್ಲಿರುವ ಸರಸ್ವತೀ ಶಿಲ್ಪಲಕ್ಷಣಗಳು

ಭಾರತದ ಅತ್ಯಂತ ಪ್ರಾಚೀನ ಧರ್ಮಗಳಲ್ಲಿ ಬೌದ್ಧ ಧರ್ಮವೂ ಒಂದು. ಭಾರತದಲ್ಲಿ ಉಗಮವಾಗಿ ಪ್ರಪಂಚದಾದ್ಯಂತ ಪ್ರಸರಣಗೊಂಡ ಈ ಧರ್ಮ, ಭಾರತೀಯ ಸಾಹಿತ್ಯ, ವಾಸ್ತು, ಶಿಲ್ಪ, ಕಲೆ ಮತ್ತು ಸಂಸ್ಕೃತಿಯ ಮೇಲೆ ಸಾಕಷ್ಟು ಪರಿಣಾಮ ಬೀರಿದೆ. ಇದರ ಬೇರು ಭಾರತದಲ್ಲಿದ್ದರೂ ಭಾಗಶಃ ಎಲ್ಲಾ ಪೌರ್ವಾತ್ಯ ರಾಷ್ಟ್ರಗಳಲ್ಲೂ ಅದು ಒಂದಲ್ಲ ಒಂದು ಕಾಲದಲ್ಲಿ ಪ್ರಮುಖ ಧರ್ಮವಾಗಿದ್ದು, ತನ್ಮೂಲಕ ಅದರ ವ್ಯಾಪ್ತಿ ಅತಿ ದೊಡ್ಡದಾಗಿದೆ. ಭಾರತದಲ್ಲಿ ಮಾತ್ರವಲ್ಲದೆ, ಟಿಬೆಟ್, ನೇಪಾಳ, ಚೀನಾ, ಜಾವಾ, ಜಪಾನ್, ಮಂಗೋಲಿಯಾ ಮೊದಲಾದ ದೇಶಗಳಲ್ಲಿ ಕಾಣಸಿಗುವ ಸರಸ್ವತೀ ಶಿಲ್ಪಗಳು ಬೌದ್ಧಧರ್ಮವನ್ನು ಅನುಸರಿಸಿ ರಚಿತವಾದವುಗಳಾಗಿವೆ ಎನ್ನಲಾಗಿದೆ.[1] ಭಾರತದಲ್ಲಿ ನಳಂದ, ಸಾರನಾಥ, ಬೋದ್‌ಗಯಾದ ಶೋಭನಾಥ ಬೆಟ್ಟ ಮೊದಲಾದೆಡೆಯಲ್ಲಿ ಸರಸ್ವತೀ ಶಿಲ್ಪಗಳು ದೊರೆತಿವೆ. ಕರ್ನಾಟಕದಲ್ಲಿ ಗುಲ್ಬರ್ಗಾ ಜಿಲ್ಲೆಯ ಸನ್ನತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಜಘಟ್ಟ ಮೊದಲಾದ ಕಡೆ ಹಲವಾರು ಬೌದ್ಧನೆಲೆಗಳು ದೊರೆತಿವೆಯಾದರೂ, ಸರಸ್ವತೀ ಶಿಲ್ಪಗಳು ಪತ್ತೆಯಾಗಿಲ್ಲ. ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆಯಲ್ಲಿ ತಾರಾಭಗವತಿಯ ಶಿಲ್ಪ ದೊರೆತಿದೆ ಅಷ್ಟೆ.

ಬೌದ್ಧ ಧರ್ಮದ ದೇವತಾಶಿಲ್ಪಗಳ ಲಕ್ಷಣಗಳನ್ನು ಸ್ಪಷ್ಟವಾಗಿ ತಿಳಿಸುವ 'ಸಾಧನ'ಗಳು 'ಸಾಧನಮಾಲಾ'ದಲ್ಲಿ ಸಂಕಲಿತವಾಗಿವೆ. ಈ ಸಾಧನಗಳು ಏಕವ್ಯಕ್ತಿಯ ರಚನೆಗಳಾಗಿರದೆ, ಕಾಲಕಾಲಕ್ಕೆ ಸೇರಿಸಲಾದ ಬಿಡಿ ರಚನೆಗಳಾಗಿದ್ದು, ಸುಮಾರು ಕ್ರಿ.ಶ. ಮೂರನೇ ಶತಮಾನದ ವೇಳೆಗೆ ಪೂರ್ಣಗೊಂಡಿವೆ.[2] ಸಾಧನಮಾಲಾದಲ್ಲಿ ಸುಮಾರು ಎಂಟು ಸಾಧನಗಳು (161 ರಿಂದ 168) ಸರಸ್ವತಿಯ ಶಿಲ್ಪಲಕ್ಷಣಗಳನ್ನು ಹೇಳುತ್ತವೆ. ಈ ಶಿಲ್ಪಲಕ್ಷಣಗಳನ್ನು ಆಧರಿಸಿ ವಜ್ರಸರಸ್ವತಿ, ಮಹಾಸರಸ್ವತಿ, ಆರ್ಯಾಸರಸ್ವತಿ, ವಜ್ರವೀಣಾಸರಸ್ವತಿ ಮತ್ತು ವಜ್ರಶಾರದಾ ಎಂದು ಐದು ರೀತಿಯಾಗಿ ಸರಸ್ವತಿಯ ಶಿಲ್ಪಗಳನ್ನು ವಿದ್ವಾಂಸರು ವರ್ಗೀಕರಿಸಿದ್ದಾರೆ.[3] ಇವುಗಳಲ್ಲದೆ ವಾಗೀಶ್ವರೀ, ಮಹಾಮಯೂರೀ (ಇವೆರಡೂ ಸರಸ್ವತಿಯ ಹೆಸರುಗಳನ್ನೇ ಹೋಲುತ್ತವೆ) ಮತ್ತು ಆರ್ಯಜಂಗುಲಿ ಎಂಬ ದೇವತೆಗೆ ಹೇಳಿರುವ ಲಕ್ಷಣಗಳು ಸರಸ್ವತಿಯ ಲಕ್ಷಣಗಳನ್ನೇ ಹೋಲುತ್ತವೆ.[4]

---

1. K. Bhattacharyya: Sarasvati –A study on her Concept and Iconography. P.139-145
2. Ruriko Sakuma: Sadhanamala -Sanskrit and Tibetan Texts/. Delhi, Adroit Pub., 2002
3. K. Bhattacharyya: Sarasvati –A study on her Concept and Iconography. P.126 & Niranjan Ghosh: Sri Sarasvati in Indain Art and Literature, P.60
4. Ibid.

ವಜ್ರಸರಸ್ವತೀ

'ಸಾಧನಮಾಲಾ'ದ 161, 163 ಮತ್ತು 167ನೇ ಸಾಧನಗಳು ವಜ್ರಸರಸ್ವತೀ ಲಕ್ಷಣಗಳನ್ನು ತಿಳಿಸುತ್ತವೆ. ಅವುಗಳ ಪ್ರಕಾರ, ಕೆಂಪು ವರ್ಣದ ವಜ್ರಸರಸ್ವತಿಗೆ ಮೂರು ಮುಖ ಮತ್ತು ಆರು ಕೈಗಳು. 'ಪ್ರತ್ಯಾಲಿಢಾ' ಭಂಗಿಯಲ್ಲಿ ಕೆಂಪು ಪದ್ಮದ ಮೇಲೆ ನಿಂತಿರುತ್ತಾಳೆ. ಕಂದು ಬಣ್ಣದ ಕೂದಲು ಮೇಲ್ಮುಖವಾಗಿ ನಿಂತಿರುತ್ತವೆ.

> ತಸ್ಮದ್ ರಕ್ತಮಹದ್ಯುತಿಂ ಭಗವತಿಂ ಸದ್ಧು
> ಸಾನಲಂಕೃತಂ ಪ್ರತ್ಯಾಲಿಢಾ ಪದಸ್ಥಿತಂ ತ್ರಿವದನಂ ಸದವಹುರ್ಭಿಭೂಷಿತಂ।
> ಸಬೇನೀಲಮುಖಂ ವಿಭರ್ಭೀ ಚ ಕಾರೆಪದ್ಮಾಸೀಕನಿಂ ಸ್ವವ್ಯ
> ವಮೆ ಶುಕ್ಲಮುಖಂ ಚ ಪತ್ರಸಹಿತಂ ಸತ್ರಾತ್ನಚಕ್ರಂ ತಥಾ॥

ಈ ಧ್ಯಾನದ ಪ್ರಕಾರ, ವಜ್ರಸರಸ್ವತಿಯು ಮೂಲತಃ ಕೆಂಪು ವರ್ಣದವಳಾಗಿದ್ದರೂ, ಆಕೆಯ ಮೂರು ಮುಖಗಳಲ್ಲಿ ಬಲಭಾಗದ ಮುಖ ನೀಲಿಯಾಗಿಯೂ, ಎಡಭಾಗದ ಮುಖ ಬಿಳಿಯದಾಗಿಯೂ ಇರುತ್ತವೆ. ಬಲಭಾಗದ ಮೂರು ಕೈಗಳಲ್ಲಿ, ಕ್ರಮವಾಗಿ ಕಮಲದ ಮೇಲಿರುವ ಪುಸ್ತಕ (ಪ್ರಜ್ಞಾಪಾರಮಿತಾ), ಕತ್ತಿ ಮತ್ತು ಕಠಾರಿ ಇರುತ್ತವೆ. ಎಡಭಾಗದ ಕೈಗಳಲ್ಲಿ, ಬ್ರಹ್ಮಕಪಾಲ, ರತ್ನ ಮತ್ತು ಚಕ್ರ ಇರುತ್ತವೆ. ಕಮಲದ ಮೇಲಿರುವ ಪುಸ್ತಕ (ಪ್ರಜ್ಞಾಪಾರಮಿತಾ) ಮತ್ತು ಬ್ರಹ್ಮಕಪಾಲ ಇವುಗಳ ಬದಲು, ಕ್ರಮವಾಗಿ ಕಮಲ ಮತ್ತು ಕಪಾಲಗಳನ್ನೂ ಹಿಡಿದಿರಬಹುದು.

ಸಾಧನ ಮತ್ತು ಟಿಬೆಟ್‌ನ ಮಂತ್ರಗಳು ಹಾಗೂ ಉಪಲಬ್ಧ ಶಿಲ್ಪಗಳನ್ನು ಆಧರಿಸಿ ವಜ್ರಸರಸ್ವತಿಯ ಲಕ್ಷಣಗಳನ್ನು ಕೆಳಕಂಡಂತೆ ಕ್ರೋಡೀಕರಿಸಲಾಗಿದೆ.[5]

- ಆಸೀನ ಮೂರ್ತಿ
- ವೀಣೆಯ ಬದಲು ವಜ್ರ ಇರುತ್ತದೆ.
- ಒಂದು ತಲೆಯ ಆಸೀನ ಚತುರ್ಭುಜ ಶಿಲ್ಪವು ಎರಡು ಕೈಗಳಲ್ಲಿ ವೀಣೆಯನ್ನು ಹಿಡಿದಿದ್ದು, ಉಳಿದವುಗಳಲ್ಲಿ ಕಮಲ ಮತ್ತು ಪುಸ್ತಕ ಇರುತ್ತವೆ.
- ತ್ರಿಮುಖ ಷಡ್ಭುಜ ಶಿಲ್ಪವು ಪ್ರತ್ಯಾಲೀಢಾಸನದಲ್ಲಿದ್ದು, ಕೆಂಪು ವರ್ಣದ್ದಾಗಿರುತ್ತದೆ. ಬಲಭಾಗದ ಮುಖವು ನೀಲಿಯಾಗಿದ್ದರೆ, ಎಡಭಾಗದ ಮುಖವು ಬಿಳಿಯದಾಗಿ ಇರುತ್ತದೆ. ಬಲಭಾಗದ ಕೈಗಳಲ್ಲಿ ಪುಸ್ತಕ, ಕಠಾರಿ ಮತ್ತು ಖಡ್ಗ ಇದ್ದರೆ, ಎಡಗೈಗಳಲ್ಲಿ ಕಪಾಲ, ರತ್ನ ಮತ್ತು ಚಕ್ರ ಇರುತ್ತವೆ.

ಮಹಾಸರಸ್ವತೀ

'ಸಾಧನಮಾಲಾ'ದ 162ನೇ ಸಾಧನ ಮಹಾಸರಸ್ವತಿಗೆ ಮೀಸಲಾಗಿದೆ.

> ಭಗವತೀಂ ಮಹಾಸರಸ್ವತೀಂ ಅನ್ನಿಚಿಂತಯೆತ್ ಶಾರದಿಂದುಕರಾಕಾರಾಂ
> ಸಿತಕಮಲೋಪರಿ ಚಂದ್ರಮಂಡಲಸ್ಥಾಮ್

---

5. Niranjan Ghosh: Sri Sarasvati in Indain Art and Literature, P.62

ದಕ್ಷಿಣಕರೇನ ವರದಾಂ, ವಾಮೇನ ಸನಾಲಿಸಿತಸರೋಜಧರಾಮ್
ಸಮೆರಮುಖಿಮ್ ಅತಿಕರುಣಾಮಯಾಂ ಶ್ವೇತಚಂದನಕುಸುಮವಸನಧರಾಮ್
ಮುಕ್ತಾಹರಿಪಶೋಭಿತಹೃದಾಂ ನಾನಾರತ್ನಾಲಂಕಾರವತಿಮ್ ದ್ವಾದಶವರ್ಷಾಕೃತಿಮ್
ಮುದಿತಕ್ಷಮುಕುಲದನತುರೊರಸ್ವತಿಮ್ ಸ್ಫುರದನಂತೊಗಭಸಿತವ್ಯ ಹಾವಭಾಸಿತಲೋಕತ್ರಯಮ್.

ಮಹಾಸರಸ್ವತಿಯು ದ್ವಿಭುಜೆಯಾಗಿದ್ದು, ಎಡಗೈಯಲ್ಲಿ ಬೆಳ್ದಾವರೆಯಿದ್ದರೆ, ಬಲಗೈ ವರದಾ ಮುದ್ರೆಯಲ್ಲಿರುತ್ತದೆ. ಶ್ವೇತವರ್ಣೆಯಾದ ಸರಸ್ವತೀ, ಶ್ವೇತಚಂದನ ಪುಷ್ಪಗಳಿಂದಲೂ ನಾನಾ ಆಭರಣಗಳಿಂದಲೂ ಮುತ್ತಿನ ಹಾರದಿಂದಲೂ ಅಲಂಕೃತಳಾಗಿರುತ್ತಾಳೆ. ಮಹಾಸರಸ್ವತೀ ಕೇವಲ ಹನ್ನೆರಡು ವರ್ಷದ ಬಾಲೆಯಾಗಿರುವುದರಿಂದ ಆಕೆಯ ಸ್ತನಗಳು ಹೂಮೊಗ್ಗಿನಂತೆ ಚಿಕ್ಕದಾಗಿರುತ್ತವೆ. ಮಹಾಸರಸ್ವತಿಯನ್ನು ಪ್ರಜ್ಞಾ, ಮೇಧಾ, ಸ್ಮೃತಿ ಮತ್ತು ಮತಿ ಎಂಬ ದೇವತೆಗಳು ಸುತ್ತುವರೆದಿರುತ್ತಾರೆ.

ಆರ್ಯಾಸರಸ್ವತೀ

'ಸಾಧನಮಾಲಾ'ದ 164 ಮತ್ತು 168ನೇ ಸಾಧನಗಳು ಆರ್ಯಾಸರಸ್ವತಿಯನ್ನು ಕುರಿತವುಗಳಾಗಿವೆ.

ಸಿತವರ್ಣಮ್ ಮನೋರಮಮ್
ದಕ್ಷಿಣೇನ ರಕ್ತಂಪುಜಧಾರಿನಿಂ ವಾಮೇನ ಪ್ರಜ್ಞಾಪಾರಮಿತ ಪುಸ್ತಕಧಾರಿಣಿಂ

ಎಂದು ಆರ್ಯಾಸರಸ್ವತಿಯನ್ನು ವರ್ಣಿಸಲಾಗಿದೆ. ಆರ್ಯಾಸರಸ್ವತಿಯು ಶ್ವೇತವರ್ಣದವಳಾಗಿದ್ದು, ದ್ವಿಭುಜಗಳಲ್ಲಿ ಕಮಲ ಮತ್ತು ಪ್ರಜ್ಞಾಪಾರಮಿತಾ ಪುಸ್ತಕಗಳನ್ನು ಹಿಡಿದಿರುತ್ತಾಳೆ. ನೇಪಾಳದಲ್ಲಿ ಈ ರೀತಿಯ ಚಿತ್ರಗಳನ್ನು ಕಾಣಬಹುದು ಎನ್ನುತ್ತಾರೆ.[6]

ವಜ್ರವೀಣಾಸರಸ್ವತೀ

ವಜ್ರವೀಣಾಸರಸ್ವತಿಯನ್ನು ಧ್ಯಾನಿಸುವ 165ನೇ ಸಾಧನ ಹೀಗಿದೆ.

ಸಪ್ತಮಸ್ಯ ದಿವಿತಿಯಸ್ಥಮತಮಶ್ಯ ಚತುರ್ಥಕಾಮ್
ಪ್ರಥಮಸ್ಯ ಚತುರ್ಥೇನ ಭೂಷಿತಮ್ ತತ್‌ಸವೀಂದುಕಮ್।
ತದ್ಭವಾಮ್ ಸರಸ್ವತೀಮ್ ವೀಣಾವಾದನತತ್ಪರಾಮ್
ಚಂದ್ರಾವದತಾನಿರ್ವಸಾಮ್ ಸರ್ವಾಲಂಕಾರಭೂಷಿತಾಮ್॥

ಬಹುತೇಕ ವಜ್ರಸರಸ್ವತಿಯನ್ನೇ ಹೋಲುವ ಲಕ್ಷಣಗಳನ್ನು ವಜ್ರವೀಣಾ ಸರಸ್ವತಿಯಲ್ಲೂ ಕಾಣಬಹುದು. ವಜ್ರಸರಸ್ವತಿಯ ವರದಾಮುದ್ರೆ ಮತ್ತು ಕಮಲದ ಬದಲಾಗಿ ಇಲ್ಲಿ ಎರಡೂ ಕೈಗಳಲ್ಲಿ ವೀಣೆಯನ್ನು ನುಡಿಸುತ್ತಿರುವ ಚಿತ್ರಣವಿದೆ.

ವಜ್ರಶಾರದಾ

ಸಾಧನಮಾಲಾದ 166ನೇ ಸಾಧನ ವಜ್ರಶಾರದೆಯ ಲಕ್ಷಣಗಳನ್ನು ಹೇಳುತ್ತದೆ.

---

6. Ibid.

ಶುಭ್ರಂವೂಜೊಪರಿ ಲಸೊನುಮದ್ಧಾನಾಮ್ ನೇತ್ರತ್ರಯಾಮ್ ಮುಕೂತಾ ಸಂಸ್ಥಿತಾಮ್
ಅರ್ಧಚಂದ್ರಾಮ್ ವಾಮೇನ ಪುಸ್ತಕಧಾರಾಮ್ ದಕ್ಷಿಣೇನ ಪುಸ್ತಕಧಾರಮ್‌ವುಜಮ್ಯ್ಯಾಹಸ್ತೇ
ಪಶ್ಚಾತ್ ಸ್ವದೇಅಸಾಮತಮಾನಯಾತ್ ಪ್ರಜಾತ್ನತ್॥

ವಜ್ರಶಾರದೆ ಮೂರು ಕಣ್ಣುಳ್ಳ ದೇವತೆ. ಶುಭ್ರವಾದ ಬೆಳ್ದಾವರೆಯ ಮೇಲೆ ಆರಾಮಾಸನದಲ್ಲಿ ಕುಳಿತಿರುತ್ತಾಳೆ. ಆಕೆಯ ಬಣ್ಣ ಬಿಳಿ. ಕಿರೀಟದಲ್ಲಿ ಅರ್ಧಚಂದ್ರನನ್ನು ಧರಿಸಿರುತ್ತಾಳೆ. ತನ್ನೆರಡು ಕೈಗಳಲ್ಲಿ ಪುಸ್ತಕ ಮತ್ತು ಕಮಲಗಳನ್ನು ಹಿಡಿದಿರುತ್ತಾಳೆ.

ಇವುಗಳಲ್ಲದೆ ಮಹಾಮಯೂರಿ ಎಂಬ ಸರಸ್ವತೀ ಸಂಬಂಧೀ ದೇವತೆಯ ಲಕ್ಷಣಗಳನ್ನು ಎರಡು ರೀತಿಯಲ್ಲಿ ಗುರುತಿಸಲಾಗಿದೆ.[7] ಮೊದಲನೆಯದು, ಮೂರು ಮೂರು ಕಣ್ಣುಗಳನ್ನುಳ್ಳ ಮೂರು ಮುಖಗಳು, ಆರು ಕೈಗಳು ಇರುವ ಮಹಾಮಯೂರಿಯ ಬಣ್ಣ ಹಸಿರು. ಆಕೆಯ ಬಲಭಾಗದ ಮುಖವು ನೀಲಿಯಾಗಿದ್ದರೆ, ಎಡಭಾಗದ ಮುಖವು ಬಿಳಿಯದಾಗಿ ಇರುತ್ತದೆ (ವಜ್ರಸರಸ್ವತೀ ಲಕ್ಷಣ). ಬಲಭಾಗದ ಎರಡು ಕೈಗಳಲ್ಲಿ ನವಿಲುಗರಿ ಮತ್ತು ಬಾಣಗಳಿದ್ದು, ಇನ್ನೊಂದು ಕೈ ವರದಾಮುದ್ರೆಯಲ್ಲಿರುತ್ತದೆ. ಎಡಭಾಗದ ಕೈಗಳಲ್ಲಿ ರತ್ನ, ಕಪಾಲ ಮತ್ತು ಕಳಶವಿರುತ್ತದೆ. ಎರಡನೆಯದು, ಏಕಮುಖ, ದ್ವಿಭುಜ ದೇವತೆಯ ಬಲಗೈಯಲ್ಲಿ ನವಿಲುಗರಿ ಇದ್ದರೆ ಎಡಗೈ ವರದಾಮುದ್ರೆಯಲ್ಲಿರುತ್ತದೆ. ನವಿಲು ವಾಹನವಾಗಿರುತ್ತದೆ. ಜೈನ ಮತ್ತು ವೈದಿಕ ಪರಂಪರೆಯಲ್ಲೂ ಕೆಲವು ಕಡೆ ಸರಸ್ವತಿಗೆ ನವಿಲು ವಾಹನವಾಗಿರುತ್ತದೆ.

ಒಟ್ಟಾರೆಯಾಗಿ ಬೌದ್ಧಸರಸ್ವತಿಯ ಲಕ್ಷಣಗಳನ್ನು ಕೆಳಕಂಡಂತೆ ಕ್ರೋಢೀಕರಿಸಬಹುದು.

ಕೃತಿ	ಸರಸ್ವತಿಯ ಹೆಸರು	ಕೈಗಳು/ಅವುಗಳಲ್ಲಿನ ವಸ್ತುಗಳು	ವರ್ಣ	ಇತರ ವಿವರಗಳು
ಸಾಧನಮಾಲಾ (161,163,167)	ವಜ್ರಸರಸ್ವತೀ	ಚತುರ್ಭುಜ: ವೀಣೆ-ಕಮಲ-ಪುಸ್ತಕ-ವೀಣೆ	ಕೆಂಪು	ಆಸೀನ ಶಿಲ್ಪ
		ಷಡ್ಭುಜ: ಪದ್ಮ, ಪುಸ್ತಕ-ಕತ್ತಿ-ಕತ್ತರಿ-ಬ್ರಹ್ಮಕಪಾಲ-ರತ್ನ-ಚಕ್ರ	ಕೆಂಪು (ಕೂದಲಿನ ಬಣ್ಣ ಕಂದು)	ಕೆಂಪು ಗುಲಾಬಿಯ ಮೇಲೆ ಪ್ರತ್ಯಾಲೀಡಾಸನ. 3 ಮುಖಗಳು. ಎಡ (ಬಿಳಿ) ಮತ್ತು ಬಲ (ನೀಲಿ) ಮುಖಗಳು
ಸಾಧನಾಮಾಲಾ (162)	ಮಹಾಸರಸ್ವತೀ	ದ್ವಿಭುಜ: ವರದ-ಕಮಲ	ಬಿಳಿ	12 ವರ್ಷದ ಬಾಲೆ ಪ್ರಜ್ಞಾ, ಮೇಧಾ, ಸ್ಮೃತಿ, ಮತಿ ನಾಲ್ಕು ಸಹಾಯಕರು
ಸಾಧನಾಮಾಲಾ (164, 168)	ಆರ್ಯಾಸರಸ್ವತೀ	ದ್ವಿಭುಜ: ಕಮಲದ ಮೇಲೆ ಪುಸ್ತಕ	ಬಿಳಿ	ಷೋಡಶಿ, ಶ್ವೇತವಸ್ತ್ರಧಾರಿಣೀ. ಬಲಗೈಯಲ್ಲಿ ಏನಿರುತ್ತದೆ ಎಂಬುದು ತಿಳಿದಿಲ್ಲ
ಸಾಧನಾಮಾಲಾ (165)	ವಜ್ರವೀಣಾ ಸರಸ್ವತೀ	ದ್ವಿಭುಜ: ವೀಣೆ	ಬಿಳಿ	ಪ್ರಜ್ಞಾ, ಮೇಧಾ, ಸ್ಮೃತಿ, ಮತಿ ನಾಲ್ಕು ಸಹಾಯಕರು
ಸಾಧನಾಮಾಲಾ (166)	ವಜ್ರಶಾರದಾ	ದ್ವಿಭುಜ: ಪುಸ್ತಕ-ಕಮಲ		ಬಿಳಿತಾವರೆಯ ಮೇಲೆ ಕುಳಿತಿರುತ್ತಾಳೆ. ಚಂದ್ರನನ್ನು ಧರಿಸಿರುತ್ತಾಳೆ. 3 ಕಣ್ಣುಗಳು
ನಿಷ್ಪನ್ನಯೋಗಾವಳಿ.	ಮಹಾಮಯೂರಿ (ಸರಸ್ವತೀ ಸಂಬಂಧೀ ದೇವತೆ)	ಷಡ್ಭುಜ: ನವಿಲುಗರಿ-ಬಾಣ-ವರದಾ-ರತ್ನ-ಕಪಾಲ-ಕಳಶ	ಹಸಿರು	ತಲಾ 3 ಕಣ್ಣುಗಳನ್ನುಳ್ಳ 3 ಮುಖಗಳು. ಎಡ (ಬಿಳಿ) & ಬಲ (ನೀಲಿ) ಮುಖಗಳು, ಮಯೂರವಾಹನ

---

7. K. Bhattacharyya: Sarasvati –A study on her Concept and Iconography, P.126 & Niranjan Ghosh: Sri Sarasvati in Indain Art and Literature, P.130

ಜೈನ ಪರಂಪರೆಯ ಗ್ರಂಥಗಳಲ್ಲಿರುವ ಸರಸ್ವತೀ ಶಿಲ್ಪಲಕ್ಷಣಗಳು

ಕನ್ನಡದ ಆದಿಕವಿ ಪಂಪ ಪರಮಜಿನೇಂದ್ರವಾಣಿಯೆ ಸರಸ್ವತೀ ಎಂದು ವಾಗ್ದೇವತೆಗೆ ಉಹಾತೀತವಾದ ರೂಪವನ್ನು ಆರೋಪಿಸಿದ್ದಾನೆ. ಆದರೆ ಅವನೇ ಆಕೆಗೆ ಸ್ತ್ರೀ ರೂಪವನ್ನು ಕಲ್ಪಿಸಿ ಅವಳ ಸೌಂದರ್ಯವನ್ನು ಹಾಡಿ ಕೊಂಡಾಡಿರುವುದನ್ನು ಕಾಣಬಹುದು. ಜೈನ ಪರಂಪರೆಯಲ್ಲಿ ಸರಸ್ವತಿಗೆ ವಿಶೇಷವಾದ ಸ್ಥಾನವಿದೆ. ವೈದಿಕ ಪರಂಪರೆಯ ನಂಬಿಕೆಯಂತೆ ಜ್ಞಾನದೇವತೆಯೇ ಆಗಿದ್ದರೂ, ಶ್ರುತದೇವತಾ, ಶಾರದಾ, ಭಾಷಾ, ಭಾರತೀ, ವಾಕ್‌ದೇವತಾ, ವಾಗೀಶ್ವರೀ, ವಾಗ್ವಾದಿನೀ, ಬ್ರಾಹ್ಮೀ, ವಾಣೀ ಮೊದಲಾದ ಹೆಸರುಗಳಿಂದ ಕರೆಸಿಕೊಂಡಿದ್ದಾಳೆ. ಜೈನಪರಂಪರೆಯ ಕೆಲವು ಪ್ರಮುಖ ಗ್ರಂಥಗಳು ಹೇಳಿರುವ ಸರಸ್ವತೀ ಶಿಲ್ಪ ಲಕ್ಷಣಗಳನ್ನು ಕೆಳಕಂಡಂತೆ ಕ್ರೋಢೀಕರಿಸಬಹುದು.

ದ್ವಿಭುಜ ಸರಸ್ವತಿ

'ಶಾರದಾಸ್ತವಾಷ್ಟಕ'[8]ದಲ್ಲಿ ಶಾರದಾ ಹೆಸರಿನ ದೇವಿಯು ದ್ವಿಭುಜಗಳಲ್ಲಿ ವೀಣೆ ಮತ್ತು ಪುಸ್ತಕಗಳನ್ನು ಹಿಡಿದಿರುವಂತೆ ಚಿತ್ರಿಸಲಾಗಿದೆ. ಹಂಸ ಆಕೆಯ ವಾಹನವಾಗಿರುತ್ತದೆ. 'ಶ್ರೀ ಸರಸ್ವತೀ ಸ್ತೋತ್ರ'ದ ಎರಡನೇ ಶ್ಲೋಕದಲ್ಲಿ ಆಕೆಯು ಹಂಸವಾಹಿನಿಯಾಗಿದ್ದು, ದ್ವಿಭುಜಗಳಲ್ಲಿ ವೀಣೆಯೊಂದನ್ನೇ ಹಿಡಿದಿರುವಂತೆ ಚಿತ್ರಿತಳಾಗಿರುವುದನ್ನು ಗಮನಿಸಬಹುದಾಗಿದೆ. ಆದರೆ 'ಸಾರಸ್ವತ-ಯಂತ್ರ-ಪೂಜಾ'[9]ದಲ್ಲಿ ಹಂಸದ ಬದಲು ನವಿಲನ್ನು ವಾಹನವಾಗಿ ಹೇಳಲಾಗಿದೆ. ಅಲ್ಲದೆ ದ್ವಿಭುಜಗಳಲ್ಲಿ ಅಕ್ಷಮಾಲೆ ಮತ್ತು ಪುಸ್ತಕಗಳನ್ನು ಹಿಡಿದಿರುವ ಸರಸ್ವತಿಯು ಇಲ್ಲಿ ತ್ರಿನೇತ್ರೆ ಮತ್ತು ಶ್ವೇತವರ್ಣೆಯೆಂದು ವರ್ಣಿತಳಾಗಿದ್ದಾಳೆ. ಪ್ರಾಕೃತ ಭಾಷೆಯಲ್ಲಿರುವ ಕಲ್ಯಾಣಕಾಂಡ ಸ್ತುತಿ[10]ಯಲ್ಲಿನ ವಾಗೀಶ್ವರಿಗೆ ಸಂಬಂಧಿಸಿದ ಧ್ಯಾನವೊಂದರ ಪ್ರಕಾರ, ಪದ್ಮಾಸೀನಳಾಗಿರುವ ಸರಸ್ವತೀ ತನ್ನ ದ್ವಿಭುಜಗಳಲ್ಲಿ ಪುಸ್ತಕ ಮತ್ತು ಕಮಲಗಳನ್ನು ಹಿಡಿದಿರುತ್ತಾಳೆ. ಆಕೆಯು ಶ್ವೇತವರ್ಣದವಳಾಗಿದ್ದಾಳೆ. 'ಚತುರ್ವಿಂಶತಿಕಾ'[11], 'ಪಂಚಕಲ್ಪ'[12] ಮತ್ತು 'ಭಗವತೀಸೂತ್ರ'[13] ಇವುಗಳಲ್ಲೂ ದ್ವಿಭುಜ ಸರಸ್ವತಿಯ ಲಕ್ಷಣಗಳನ್ನು ಹೇಳಲಾಗಿದೆ. ಭಗವತೀಸೂತ್ರದಲ್ಲಿ ಶ್ರುತದೇವತಾ ಹೆಸರಿನಲ್ಲಿ ಕಮಲವೊಂದನ್ನೇ ಹಿಡಿದಿರುವಂತೆಯೂ, ಪಂಚಕಲ್ಪದಲ್ಲಿ ಪುಸ್ತಕವೊಂದನ್ನೇ ಹಿಡಿದಿರುವಂತೆಯೂ ಹೇಳಲಾಗಿದೆ. ಆದರೆ ಚತುರ್ವಿಂಶತಿಕಾದಲ್ಲಿ, ಕಲ್ಯಾಣಕಾಂಡಸ್ತುತಿಯಲ್ಲಿ ಹೇಳಿರುವ ಲಕ್ಷಣಗಳನ್ನೇ ಅಂದರೆ, ಕಮಲ ಮತ್ತು ಪುಸ್ತಕಗಳನ್ನು ಹಿಡಿದಿರುವಂತೆ ಹೇಳಲಾಗಿದೆ.

---

8. ಶಾರದಾ ಸ್ತವಾಷ್ಟಕ ಶ್ಲೋಕ 6
9. ಸಾರಸ್ವತ-ಯಂತ್ರ-ಪೂಜಾ ಶ್ಲೋಕ 192
10. ಶ್ರೀಕಲ್ಯಾಣಕಾಂಡ ಸ್ತುತಿ, ನಾಲ್ಕನೇ ಶ್ಲೋಕ
11. ಚತುರ್ವಿಂಶತಿಕಾ ಶ್ಲೋಕ – 76
12. ಪಂಚಕಲ್ಪ ಕಲ್ಪ – 5
13. ಭಗವತಿಸೂತ್ರ ಶ್ಲೋಕ – 162

ದ್ವಿಭುಜ (ಜೈನ) ಸರಸ್ವತೀ				
ಕೃತಿ	ಸರಸ್ವತಿಯ ಹೆಸರು	ಕೈಗಳು/ಅವುಗಳಲ್ಲಿನ ವಸ್ತುಗಳು	ವರ್ಣ	ಇತರ ವಿವರಗಳು
ಕಲ್ಯಾಣಕಾಂಡ ಸ್ತುತಿ	ವಾಗೀಶ್ವರೀ	ಕಮಲ-ಪುಸ್ತಕ	ಬಿಳಿ	ಪದ್ಮಾಸೀನ
ಚತುರ್ವಿಂಶತಿಕ		ಕಮಲ-ಪುಸ್ತಕ		
ಪಂಚಕಲ್ಪ		ಪುಸ್ತಕ		
ಭಗವತೀಸ್ತುತಿ	ಶ್ರುತದೇವತಾ	ಕಮಲ		
ಶಾರದಾಸ್ತವಾಷ್ಟಕ	ಶಾರದಾ	ವೀಣಾ-ಪುಸ್ತಕ		ಹಂಸವಾಹನೆ
ಶ್ರೀ ಸರಸ್ವತೀ ಸ್ತೋತ್ರ		ವೀಣಾ		ಹಂಸವಾಹನೆ
ಸಾರಸ್ವತ-ಯಂತ್ರ-ಪೂಜಾ		ಅಕ್ಷಮಾಲೆ-ಪುಸ್ತಕ	ಬಿಳಿ	3 ಕಣ್ಣುಗಳು. ಮಯೂರವಾಹನೆ.

ಚತುರ್ಭುಜ ಸರಸ್ವತೀ

ಜೈನಪರಂಪರೆಯ ಹನ್ನೊಂದು ಪಠ್ಯಗಳಲ್ಲಿ ಚತುರ್ಭುಜ ಸರಸ್ವತಿಗೆ ಹನ್ನೆರಡು ಬಗೆಯ ಲಕ್ಷಣಗಳನ್ನು ಹೇಳಲಾಗಿದೆ. ಅವುಗಳಲ್ಲಿ ಮುಖ್ಯವಾದವುಗಳು ಕೆಳಕಂಡಂತಿವೆ:

ಆಚಾರದಿನಕರ ಮುನಿಯ 'ಪ್ರತಿಷ್ಠಕಲ್ಪ'[14]ದಲ್ಲಿ ಶ್ವೇತವರ್ಣೆಯೂ, ಶ್ವೇತವಸ್ತ್ರೆಯೂ ಆದ ಸರಸ್ವತಿಯ ಲಕ್ಷಣಗಳನ್ನು ಹೇಳಲಾಗಿದೆ. ಶ್ರುತದೇವತಾ ಹೆಸರಿನಿಂದ ಪೂಜಿಸುವ ದೇವಿಯು ಸಿಂಹಪೀಠದಲ್ಲಿ ಆಸೀನಳಾಗಿರುತ್ತಾಳೆ. ಹಂಸ ಆಕೆಯ ವಾಹನವಾಗಿರುತ್ತದೆ. ತನ್ನ ನಾಲ್ಕು ಕೈಗಳಲ್ಲಿ ಕಮಲ, ವೀಣೆ, ಪುಸ್ತಕ ಮತ್ತು ಅಕ್ಷಮಾಲೆಯನ್ನು ಹಿಡಿದಿರುತ್ತಾಳೆ. ಪ್ರತಿಷ್ಠಕಲ್ಪದಂತೆ ನಿರ್ವಾಣಕಲಿಕಾ[15]ದಲ್ಲಿ ಶ್ರುತದೇವತೆಯಾಗಿರುವ ಸರಸ್ವತೀ, ವೀಣೆಯ ಬದಲಾಗಿ ಒಂದು ಕೈಯಲ್ಲಿ ವರದಾ ಮುದ್ರೆಯನ್ನು ಪ್ರದರ್ಶಿಸುತ್ತಾಳೆ.

ದಿಗಂಬರ ಪರಂಪರೆಯ ಏಕಸಂಧಿ ಮುನಿಯ 'ಜೈನಸಂಹಿತಾ'[16] ಎಂಬ ಕೃತಿಯಲ್ಲಿ ಶ್ವೇತಕಮಲದ ಮೇಲೆ ಪರ್ಯಂಕಾಸನದಲ್ಲಿ ಕುಳಿತಿರುವ ತ್ರಿನೇತ್ರಾ ಸರಸ್ವತಿಯ ವಿವರಗಳಿವೆ. ಶ್ವೇತವರ್ಣೆಯೂ, ಶ್ವೇತ ವಸ್ತ್ರೆಯೂ ಆದ ದೇವಿ ಜಟಾಮುಕುಟವನ್ನು ಧರಿಸಿದ್ದಾಳೆ. ತನ್ನ ನಾಲ್ಕು ಕೈಗಳಲ್ಲಿ ಎರಡರಲ್ಲಿ ಅಕ್ಷಮಾಲೆ ಮತ್ತು ಪುಸ್ತಕವಿದ್ದರೆ, ಉಳಿದೆರಡು ಕೈಗಳು ಅಭಯ ಮತ್ತು ಜ್ಞಾನಮುದ್ರೆಯಲ್ಲಿರುತ್ತವೆ. ಇದೇ ಪಂಥದ ವಿದ್ಯಾನುಶಾಸನದ ವಾಗೀಸಾಧನದಲ್ಲಿಯೂ ಇದೇ ಲಕ್ಷಣಗಳನ್ನು ಹೇಳುವುದರ ಜೊತೆಗೆ ನವಿಲನ್ನು ವಾಹನವನ್ನಾಗಿಸಿರುವುದನ್ನು ಗಮನಿಸಬಹುದು. ಜೈನ ಸಂಹಿತಾ ಮತ್ತು ವಿದ್ಯಾನುಶಾಸನಗಳಲ್ಲಿ ಹೇಳಿರುವ ಲಕ್ಷಣಗಳನ್ನೇ ದಿಗಂಬರ ಪಂಥದ ಮಲ್ಲಿಸೇನ[17]

14. ಪ್ರತಿಷ್ಠಕಲ್ಪ ಪು – 146
15. ನಿರ್ವಾಣಕಲಿಕಾ ಪುಟ – 37
16. ಜೈನಸಂಹಿತಾ ಶ್ಲೋಕ ಅಧ್ಯಾಯ 39 ಶ್ಲೋಕ 37 ಮತ್ತು 38
17. ಮಲ್ಲಿಸೇನನ ಸರಸ್ವತೀ ಕಲ್ಪ ಶ್ಲೋಕ 32 ಮತ್ತು 38

ಮತ್ತು ಅರ್ಹದ್ದಾಸ[18]ರ 'ಸರಸ್ವತೀ ಕಲ್ಪ'ಗಳಲ್ಲಿಯೂ ಕಾಣಬಹುದು. ಅವುಗಳಲ್ಲಿ ಯಾವುದೇ ವ್ಯತ್ಯಾಸಗಳಿರುವುದಿಲ್ಲ. ದಿಗಂಬರ ಪಂಥದವರು, ಶ್ವೇತಾಂಬರರ ಹಂಸವಾಹಿನಿಯನ್ನು ಮಯೂರವಾಹಿನಿಯನ್ನಾಗಿಸಿದ್ದಾರೆ.

'ವಿದ್ಯಾನುವಾದಾಂಗ-ಜಿತೇಂದ್ರಕಲ್ಯಾಣಾಭ್ಯುದಯ'[19]ದಲ್ಲಿ ಸರಸ್ವತಿಯನ್ನು ಬ್ರಾಹ್ಮೀ ಎಂದೂ ಕರೆಯಲಾಗಿದೆ. ಶ್ವೇತವಸ್ತ್ರಾಲಂಕೃತಳಾಗಿರುವ ಸರಸ್ವತಿಗೆ ಇಲ್ಲಿ ಮೂರು ಮುಖಗಳನ್ನು ಹಾಗೂ ಮೂರು ಕಣ್ಣುಗಳನ್ನು ಹೇಳಿರುವುದು ವಿಶೇಷವಾಗಿದೆ. ಪದ್ಮಾಸನದಲ್ಲಿ ಕುಳಿತಿದ್ದು ತನ್ನ ನಾಲ್ಕು ಕೈಗಳಲ್ಲಿ ಎರಡರಲ್ಲಿ ಅಕ್ಷಮಾಲೆ ಮತ್ತು ಫಲಗಳನ್ನು ಹಿಡಿದಿರುತ್ತಾಳೆ. ಉಳಿದೆರಡು ಕೈಗಳು ವ್ಯಾಕರಣಮುದ್ರೆ ಮತ್ತು ಅಭಯ ಮುದ್ರೆಯಲ್ಲಿರುತ್ತವೆ. ಇಲ್ಲಿ ನವಿಲು ಆಕೆಯ ವಾಹನವಾಗಿದ್ದರೆ, ಅದರಲ್ಲೇ ಹೇಳಿರುವ ಸಮಾನ ಲಕ್ಷಣಗಳುಳ್ಳ ಭಾಷಾ ಹೆಸರಿನ ದೇವಿಗೆ ಹಂಸವನ್ನು ವಾಹನವನ್ನಾಗಿಸಲಾಗಿದೆ. 'ನಿರ್ವಾಣಕಲ್ಪ'ದ ದ್ವಾದಶಾಂಗ ಶ್ರುತದಲ್ಲಿ ಸರಸ್ವತಿಗೆ ಅಸಂಖ್ಯಾತ ಕೈಗಳೆಂದು ಹೇಳಿದ್ದರೂ ಕೇವಲ ನಾಲ್ಕು ಕೈಗಳ ವಿವರವನ್ನು ನೀಡಲಾಗಿದೆ. ಮೂರರಲ್ಲಿ ಪುಸ್ತಕ, ಅಕ್ಷಮಾಲೆ, ಕಮಲ ಇದ್ದರೆ ಉಳಿದೊಂದು ಕೈ ವರದಾಮುದ್ರೆಯಲ್ಲಿರುತ್ತದೆ.

ಸರಸ್ವತೀ ಮತ್ತು ಸಿದ್ಧಾಯಿಕೆ

ಜೈನ ಸರಸ್ವತೀ ಎಂದಾಕ್ಷಣ ಅದು ಸಿದ್ಧಾಯಿಕೆ ಎಂಬ ಸಾಮಾನ್ಯ ಅಭಿಪ್ರಾಯವಿದೆ. 'ಯಕ್ಷಿ ಸಿದ್ಧಾಯಿಕೆಯನ್ನು ಸರಸ್ವತಿಯ ಪ್ರತಿಮೆಯೆಂದೇ ಭಾವಿಸುವರು'[20] ಮತ್ತು 'ಜೈನಧರ್ಮದಲ್ಲಿ ಸರಸ್ವತಿಯು ಮಹಾವೀರ ತೀರ್ಥಂಕರನ ಯಕ್ಷಿದೇವತೆಯಾಗಿ ಕಾಣಿಸಿಕೊಳ್ಳುತ್ತಾಳೆ'[21] ಎಂಬ ಮಾತುಗಳಿಗೆ ಯಾವುದೇ ಆಧಾರವಿಲ್ಲ. ಸರಸ್ವತೀ ಮತ್ತು ಸಿದ್ಧಾಯಿಕೆ ಇಬ್ಬರೂ ಬೇರೆ ಬೇರೆ ಎಂಬುದು ಸ್ಪಷ್ಟ. ಸಿದ್ಧಾಯಿಕೆ, ಸಿದ್ಧಾಯಿಕಾ, ಸಿದ್ಧಾಯಿಣಿ ಮತ್ತು ಸಿದ್ಧಾ ಮುಂತಾದ ಹೆಸರುಗಳಿರುವ ಜೈನ ಪರಂಪರೆಯ ದೇವತೆ ಮಹಾವೀರನ ಯಕ್ಷಿ. ಶಿಲ್ಪ ಲಕ್ಷಣಗಳ ದೃಷ್ಟಿಯಿಂದ ಸಿದ್ಧಾಯಿಕೆಗೆ ಜೈನ ಪರಂಪರೆಯ ಎರಡೂ ಪಂಥಗಳಲ್ಲೂ ವಿಶಿಷ್ಟ ಲಕ್ಷಣಗಳಿವೆ. ದಿಗಂಬರ ಪಂಥದಲ್ಲಿ ಆಕೆ ದ್ವಿಭುಜೆಯಾಗಿದ್ದು, ಒಂದು ಕೈಯಲ್ಲಿ ಪುಸ್ತಕ ಹಿಡಿದಿದ್ದರೆ, ಇನ್ನೊಂದು ಕೈ ವರದ ಮುದ್ರೆಯಲ್ಲಿರುತ್ತದೆ. ಭದ್ರಾಸನದಲ್ಲಿ ಆಸೀನಳಾಗಿರುವ ಸಿದ್ಧಾಯಿಕೆಯ ಬಣ್ಣ ಸುವರ್ಣ. ಸಿಂಹ ಆಕೆಯ ವಾಹನ. ಶ್ವೇತಾಂಬರ ಪಂಥದಲ್ಲಿ ಸಿದ್ಧಾಯಿಕೆಗೆ ಎರಡು ರೀತಿಯ ಲಕ್ಷಣಗಳನ್ನು ಹೇಳಲಾಗಿದೆ. ಎರಡೂ ರೀತಿಗಳಲ್ಲಿ ಆಕೆ ಚತುರ್ಭುಜಳಾಗಿದ್ದಾಳೆ. ಒಂದರಲ್ಲಿ,

---

18. ಅರ್ಹದ್ದಾಸರ ಸರಸ್ವತೀ ಕಲ್ಪ ಶ್ಲೋಕ 8
19. ಜಿತೇಂದ್ರಕಲ್ಯಾಣಾಭ್ಯುದಯ ಶ್ಲೋಕ 23 ಮತ್ತು 28
20. ವಸಂತಲಕ್ಷ್ಮಿ ಕೆ.: ಶಾರದಾ ಉಪಾಸನೆ ಒಂದು ಅಧ್ಯಯನ (ಇತಿಹಾಸ ದರ್ಶನ ಸಂ. 6) 1991. ಪು.83-93
21. ವಸಂತಲಕ್ಷ್ಮಿ ಕೆ.: ಕರ್ನಾಟಕದ ಸರಸ್ವತಿ ಶಿಲ್ಪಗಳು(ಇತಿಹಾಸ ದರ್ಶನ ಸಂ. 7) 1992. ಪು.74-78

ಮೂರು ಕೈಗಳಲ್ಲಿ ಪುಸ್ತಕ, ಬೀಜಪೂರ, ವೀಣೆ ಹಿಡಿದಿದ್ದು, ಇನ್ನೊಂದು ಕೈ ಅಭಯಮುದ್ರೆಯಲ್ಲಿರುತ್ತದೆ. ಸಿಂಹ ಇಲ್ಲಿ ಆಕೆಯ ವಾಹನ. ಇನ್ನೊಂದರಲ್ಲಿ, ಮೂರು ಕೈಗಳಲ್ಲಿ ಪುಸ್ತಕ, ಪಾಶ, ಕಮಲಗಳು ಇದ್ದು ಇನ್ನೊಂದು ಕೈ ಅಭಯಮುದ್ರೆಯಲ್ಲಿರುತ್ತದೆ. ಇಲ್ಲಿ ಆನೆ ವಾಹನವಾಗಿರುತ್ತದೆ. ಈ ಎರಡೂ ರೀತಿಯ ಸಿದ್ಧಾಯಿಕೆಯ ಬಣ್ಣ ಹರಿತ್.[22] ಸಂಸ್ಕೃತ 'ಮಹಾಪುರಾಣ'ದಲ್ಲಿ ಸರಸ್ವತಿಯು ಆದಿಜಿನನ ಮೊಗದಿಂದ ಉದಯಿಸಿ, ಲೋಕವನ್ನು ವ್ಯಾಪಿಸಿದರೂ, ಆದಿಜಿನನ ಮುಖದಲ್ಲಿಯೇ ನೆಲೆಸಿದ ವಿವರಗಳಿವೆ.[23] 'ಪರಮಜಿನೇಂದ್ರವಾಣಿಯೆ ಸರಸ್ವತೀ' ಎಂದು ಪಂಪನೇ ಹೇಳಿದ್ದಾನೆ. ಶ್ರೀವಿಜಯ ಕವಿಯು 'ಕವಿರಾಜಮಾರ್ಗ'ದಲ್ಲಿ 'ಮಧುರಾರಾವೋಚಿತೆ ಚತುರರುಚಿರಪದರಚನೆ ಚಿರಂದೇವೀ ಸರಸ್ವತಿ...' ಎಂದು ವಾಗ್ದೇವತೆಯನ್ನು ಸ್ತುತಿಸಿದ್ದಾನೆ. 'ಸರ್ವಾಂಗಸುಂದರಿ ವಿದ್ಯಾನಟಿ' ಎಂದು ನಾಗಚಂದ್ರನು ಪಂಪರಾಮಾಯಣದಲ್ಲಿ ಹೊಗಳಿದ್ದಾನೆ. 'ಜೈನವೇದ-ಶಾಸ್ತ್ರವೆಂದರೂ ಶ್ರುತವೆಂದರೂ ಒಂದೇ ಅರ್ಥವೆಂದೂ, ಆ ಶಾಸ್ತ್ರವೇ ಸರಸ್ವತೀ ಅಥವಾ ಶಾರದಾದೇವಿ ಎಂದು ಹೇಳಲಾಗಿದೆ' ಎಂಬುದು ಜೈನಪರಂಪರೆಯ ನಂಬಿಕೆ.[24] ಹೀಗೆ ಜೈನಶಾಸ್ತ್ರಗ್ರಂಥಗಳು, ಸಾಹಿತ್ಯ ಕೃತಿಗಳು ಸರಸ್ವತಿಯನ್ನು ವಾಗ್ದೇವತೆಯಾಗಿ, ವಿದ್ಯಾ ದೇವತೆಯಾಗಿ ಸ್ವೀಕರಿಸಿ ಆರಾಧಿಸುತ್ತಾ ಬಂದಿವೆ. ಕೈಗಳಲ್ಲಿ ಪುಸ್ತಕ ವೀಣೆ ಮೊದಲಾದ ಸರಸ್ವತೀ ಸಂಬಂಧೀ ಪರಿಕರಗಳನ್ನು ಹಿಡಿದಾಕ್ಷಣ ಸಿದ್ಧಾಯಿಕೆಯನ್ನು ಸರಸ್ವತೀ ಎನ್ನಲಾಗುವುದಿಲ್ಲ. ಈ ಕಾರಣದಿಂದ, ಮಹಾವೀರನ ಯಕ್ಷಿ ಸಿದ್ಧಾಯಿಕೆ ಮತ್ತು ವಾಗ್ದೇವತೆ ಸರಸ್ವತೀ ಇಬ್ಬರೂ ಭಿನ್ನರಾಗುತ್ತಾರೆ.

ಕರ್ನಾಟಕದಲ್ಲಿ ಜಿನ ಬಸದಿ ಮತ್ತು ಜಿನಮಂದಿರಗಳಲ್ಲಿ ಕಂಡುಬರುವ ಸರಸ್ವತಿಯ ಶಿಲ್ಪಗಳು, ಕಲ್ಯಾಣಿ ಚಾಲುಕ್ಯ ಮತ್ತು ಹೊಯ್ಸಳರ ಕಾಲದ ಚತುರ್ಭುಜ ಸರಸ್ವತೀ ಶಿಲ್ಪಗಳನ್ನು ಹೋಲುತ್ತವೆ. ಪದ್ಮಾಸನದಲ್ಲಿ ಕುಳಿತ ಸರಸ್ವತೀ, ತನ್ನ ಕೈಗಳಲ್ಲಿ ಅಕ್ಷಮಾಲೆ, ಅಂಕುಶ, ಪಾಶ ಮತ್ತು ಪುಸ್ತಕಗಳನ್ನು ಹಿಡಿದಿರುತ್ತಾಳೆ. ಹಂಸ ಆಕೆಯ ವಾಹನವಾಗಿರುತ್ತದೆ. ಉದಾಹರಣೆಗೆ ಜಿನನಾಥಪುರದ ಶಾಂತಿನಾಥ ಬಸದಿಯ ಭಿತ್ತಿಯಲ್ಲಿರುವ ಮೂರು ಶಿಲ್ಪಗಳು. ಶ್ರವಣಬೆಳಗೊಳದ ಭಂಡಾರಿಯ ಬಸದಿಯ ಸರಸ್ವತೀ ಮಂಟಪದ ಕಂಬದಲ್ಲಿರುವ ಹಂಸವಾಹನೆ ಸರಸ್ವತೀ. ಗುಲ್ಬರ್ಗಾ ಜಿಲ್ಲೆ ಅಳಂದ ತಾಲ್ಲೂಕು ತಡಕಲ್‌ನ ಜಿನಮಂದಿರದ ಸರಸ್ವತೀ ಶಿಲ್ಪ.

ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಕರ್ನಾಟಕದ ಮಟ್ಟಿಗೆ ಸರಸ್ವತೀ ಶಿಲ್ಪಗಳಲ್ಲಿ, ಜೈನ ಮತ್ತು ವೈದಿಕ ಪರಂಪರೆಯ ಶಿಲ್ಪಗಳೆಂದು ಪ್ರತ್ಯೇಕಿಸುವುದು ಸಾಧ್ಯವಿಲ್ಲ. ಶಿಲ್ಪವು ಜೈನರಿಗೆ ಸಂಬಂಧಿಸಿದ

---

22. ಹಂಪ ನಾಗರಾಜಯ್ಯ: ಯಕ್ಷ-ಯಕ್ಷಿಯರು. ಪು.94
23. ಮಹಾಪುರಾಣ 1-184
24. ಎರ್ತೂರು ಶಾಂತಿರಾಜ ಶಾಸ್ತ್ರೀ – ಜೈನವೇದ ಮತ್ತು ಶ್ರುತಪಂಚಮಿ. 1958. ಪು.14 & 142

ಜಾಗದಲ್ಲಿದ್ದರೆ, ಜೈನಪರಂಪರೆಯದೆಂದು ಹೇಳಬಹುದೇ ಹೊರತು, ಜೈನಶಿಲ್ಪಗಳಿಗೆಂದು ಬೇರಾವ ವಿಶಿಷ್ಟವಾದ ಶೈಲಿಯೂ ಸರಸ್ವತಿಯ ಶಿಲ್ಪಗಳಲ್ಲಿ ಕಂಡುಬರುವುದಿಲ್ಲ.

ಚತುರ್ಭುಜ (ಜೈನ) ಸರಸ್ವತೀ					
ಕೃತಿ	ಸರಸ್ವತಿಯ ಹೆಸರು	ಕೈಗಳು/ಅವುಗಳಲ್ಲಿನ ವಸ್ತುಗಳು	ವರ್ಣ	ವಾಹನ	ಇತರ ವಿವರಗಳು
ಸರಸ್ವತೀಕಲ್ಪ		ವೀಣೆ-ಪುಸ್ತಕ-ಅಕ್ಷಮಾಲೆ-ಕಮಲ	ಬಿಳಿ		
ಸರಸ್ವತೀಕಲ್ಪ	ವಾಗ್ದೇವೀ	ಅಭಯ-ವರದ-ಪುಸ್ತಕ-ಕಮಲ			
ಪ್ರತಿಷ್ಠಕಲ್ಪ	ಶ್ರುತದೇವತಾ	ಕಮಲ-ವೀಣೆ-ಪುಸ್ತಕ-ಅಕ್ಷಮಾಲೆ	ಬಿಳಿ	ಹಂಸ	ಶ್ವೇತವಸ್ತ್ರಧಾರಿಣೀ. ಸಿಂಹಪೀಠದ ಮೇಲೆ ಕುಳಿತಿರುತ್ತಾಳೆ
ನಿರ್ವಾಣಕಲಿಕಾ	ಶ್ರುತದೇವತಾ	ವರದ- ಕಮಲ-ಪುಸ್ತಕ-ಅಕ್ಷಮಾಲೆ	ಬಿಳಿ	ಹಂಸ	
ಜೈನಸಂಹಿತಾ		ಜ್ಞಾನಮುದ್ರಾ-ಅಕ್ಷಮಾಲೆ-ಅಭಯ-ಪುಸ್ತಕ	ಬಿಳಿ		ಶ್ವೇತವಸ್ತ್ರಧಾರಿಣೀ. ತ್ರಿನೇತ್ರ ಜಟಾಮುಕುಟ. ಪರ್ಯಂಕಾಸನ
ವಿದ್ಯಾನುಶಾಸನ		ಜ್ಞಾನಮುದ್ರಾ-ಅಕ್ಷಮಾಲೆ-ಅಭಯ-ಪುಸ್ತಕ	ಬಿಳಿ	ನವಿಲು	ಶ್ವೇತವಸ್ತ್ರಧಾರಿಣೀ. ತ್ರಿನೇತ್ರ ಜಟಾಮುಕುಟ. ಪರ್ಯಂಕಾಸನ
ಸರಸ್ವತೀಕಲ್ಪ (ಅರ್ಹದ್ದಾಸ)		ಜ್ಞಾನಮುದ್ರಾ-ಅಕ್ಷಮಾಲೆ-ಅಭಯ-ಪುಸ್ತಕ	ಬಿಳಿ	ನವಿಲು	ಶ್ವೇತವಸ್ತ್ರಧಾರಿಣೀ. ತ್ರಿನೇತ್ರ ಜಟಾಮುಕುಟ. ಪರ್ಯಂಕಾಸನ
ಸರಸ್ವತೀಕಲ್ಪ (ಮಲ್ಲಿಸೇನ)		ಜ್ಞಾನಮುದ್ರಾ-ಅಕ್ಷಮಾಲೆ-ಅಭಯ-ಪುಸ್ತಕ	ಬಿಳಿ	ನವಿಲು	ಶ್ವೇತವಸ್ತ್ರಧಾರಿಣೀ. ತ್ರಿನೇತ್ರ ಜಟಾಮುಕುಟ. ಪರ್ಯಂಕಾಸನ
ಪಠಿತಸಿದ್ಧಸಾರಸ್ವತ		ಪುಸ್ತಕ -ಕಮಲ-ಜ್ಞಾನಮುದ್ರಾ-ವರದ		ಹಂಸ	
ವಿದ್ಯಾನುವಾದಾಂಗ-ಜಿತೇಂದ್ರಕಲ್ಯಾಣಾಭ್ಯುದಯ	ಬ್ರಾಹ್ಮೀ	ವ್ಯಾಕರಂಮುದ್ರಾ-ಅಕ್ಷಮಾಲೆ-ಅಭಯ-ಫಲ	ಬಿಳಿ	ನವಿಲು	ತ್ರಿಮುಖಿ. ತ್ರಿನೇತ್ರೇ. ಪದ್ಮಾಸನ
ವಿದ್ಯಾನುವಾದಾಂಗ-ಜಿತೇಂದ್ರಕಲ್ಯಾಣಾಭ್ಯುದಯ	ಭಾಷಾ	ಪಾಶ-ಕಮಲ-ಪುಸ್ತಕ-ಅಭಯ		ಹಂಸ	ಶ್ವೇತವಸ್ತ್ರಧಾರಿಣೀ
ಶಾರದಾಸ್ತೋತ್ರ (ಮಲಯಕೀರ್ತಿ)	ಶಾರದಾ	ವರದ-ಅಕ್ಷಮಾಲೆ-ಪುಸ್ತಕ-ಕಮಲ			
ದ್ವಾದಶಾಂಗ ಶ್ರುತ (ನಿರ್ವಾಣಕಲ್ಪ)		ಪುಸ್ತಕ-ಅಕ್ಷಮಾಲೆ-ಕಮಲ-ವರದ-ಇತರೆ	ಬಿಳಿ		ಅಸಂಖ್ಯಾತ ಕೈಗಳು ಎಂದಿದ್ದರೂ, ನಾಲ್ಕು ಕೈಗಳ ಉಲ್ಲೇಖವಷ್ಟೇ ಇದೆ.
ಅಪರಾಜಿತಪೃಚ್ಛ	ಮಹಾವಿದ್ಯಾ ಮಹಾವಾಣಿ ಭಾರತೀ	ಅಕ್ಷಮಾಲೆ-ವೀಣೆ-ಪುಸ್ತಕ-ಕಮಂಡಲು	ಬಿಳಿ		ಪದ್ಮಾಸನ. ನೀಲಕಂಠೇ. ಶ್ವೇತವಸ್ತ್ರಧಾರಿಣೀ

ವೈದಿಕ ಪರಂಪರೆಯ ಗ್ರಂಥಗಳಲ್ಲಿರುವ ಸರಸ್ವತೀ ಶಿಲ್ಪ ಲಕ್ಷಣಗಳು

ಋಗ್ವೇದ ಮೊದಲಾದ ನಾಲ್ಕು ವೇದಗಳಲ್ಲಿ ಸರಸ್ವತೀ ಲಕ್ಷಣಗಳು ಸಿಗುವುದಿಲ್ಲ. ಋಗ್ವೇದದಲ್ಲಿ ನದೀದೇವತೆಯಾಗಿ ಸರಸ್ವತೀ ಹೆಚ್ಚು ನಿರೂಪಿತಳಾಗಿದ್ದಾಳೆ. ಅಲ್ಲಿ ಸ್ತ್ರೀದೇವತೆಯಾಗಿಯೂ ವರ್ಣಿತಳಾಗಿದ್ದಾಳಾದರೂ ಶಿಲ್ಪ ಸಂಬಂಧೀ ಲಕ್ಷಣಗಳು ಸಿಗುವುದಿಲ್ಲ.

ಬೃಹದಾರಣ್ಯಕೋಪನಿಷತ್ತು[25]: ಈ ಉಪನಿಷತ್ತಿನಲ್ಲಿ ಶಿಲ್ಪ ಲಕ್ಷಣಗಳನ್ನು ಹೇಳಿಲ್ಲವಾದರೂ, ಸರಸ್ವತಿಗೆ ಒಂದು ರೂಪವನ್ನು ಹೇಳಿರುವುದನ್ನು ಕಾಣಬಹುದು. ಇದರಲ್ಲಿ ಸರಸ್ವತಿಯನ್ನು ಹಸು(ಕಾಮಧೇನು)ವಿನ ರೂಪದಲ್ಲಿ ಲಕ್ಷಿಸಲಾಗಿದೆ. ಆಕೆಯ ನಾಲ್ಕು ಕೆಚ್ಚಲುಗಳು ಸ್ವಾಹ, ವಶತ್, ಹಂತ ಮತ್ತು ಸ್ವಧಾ ಇವುಗಳನ್ನು ಪ್ರತಿನಿಧಿಸುತ್ತವೆ ಎನ್ನಲಾಗಿದೆ. ಸರಸ್ವತಿಗೆ ಇನ್ನೂ ಒಂದು ನಿಯಮಿತವಾದ

---

25. ರೋಯರ್ಸ್ (ಸಂ) – ಬೃಹದರಣ್ಯಕೋಪನಿಷತ್ತು, ಪು.982

ರೂಪ, ಲಕ್ಷಣಗಳು ಇಲ್ಲದಿದ್ದಾಗ ಆಕೆಯನ್ನು ಕಾಮಧೇನುವಿನ ರೂಪದಲ್ಲಿ ಪೂಜಿಸುವ ಪದ್ಧತಿ ಇದ್ದಿರಬಹುದೆಂದು ತೋರುತ್ತದೆ.

ಶತಪಥ ಬ್ರಾಹ್ಮಣ[26] ಮತ್ತು ಜೈಮಿನೀಯ ಬ್ರಾಹ್ಮಣ[27]: ಇವುಗಳಲ್ಲಿ ವಾಕ್‌ದೇವತೆಯು ಸಿಂಹಿಣಿಯ ರೂಪಧಾರಣೆ ಮಾಡಿದ್ದುದರ ವಿವರಗಳಿವೆ.

ಐತರೇಯ ಬ್ರಾಹ್ಮಣ[28] ಮತ್ತು ತೈತ್ತರೀಯ ಬ್ರಾಹ್ಮಣ[29]: ಇವುಗಳಲ್ಲಿ ವಾಕ್ ಅಂದರೆ ಸರಸ್ವತೀ ಸ್ತ್ರೀರೂಪಧಾರಣೆ ಮಾಡಿದ ವಿಚಾರ ಬರುತ್ತದೆಯಾದರೂ ಆಕೆಯ ಲಕ್ಷಣಗಳನ್ನು ಹೇಳಿಲ್ಲ.

ಪುರಾಣಗಳು ರಚನೆಯಾಗತೊಡಗಿದ ನಂತರ ಸರಸ್ವತಿಗೆ ಒಂದು ರೂಪ, ಲಕ್ಷಣಗಳು ಸಿಗಲಾರಂಭಿಸಿದವು ಎನ್ನಬಹುದು. ಬಹುತೇಕ ಎಲ್ಲ ಪ್ರಮುಖ ಪುರಾಣಗಳಲ್ಲೂ ಸರಸ್ವತಿಯ ಲಕ್ಷಣಗಳನ್ನು ಹೇಳಲಾಗಿದೆ.

ದ್ವಿಭುಜ ಸರಸ್ವತಿ

ಪದ್ಮಪುರಾಣದಲ್ಲಿ[30] ಚಂದ್ರವದನೆಯೂ, ಶ್ವೇತವರ್ಣೆಯೂ ಆದ ಸರಸ್ವತೀ ಕೈಗಳಲ್ಲಿ ಜಿಂಕೆಯ ಕೊಂಬು ಮತ್ತು ಕಮಲಗಳನ್ನು ಹಿಡಿದಿರುವ ಚಿತ್ರಣವಿದೆ. ಬಿಳಿ ಮತ್ತು ಕೆಂಪು ವರ್ಣದ ವಸ್ತ್ರಗಳನ್ನೂ, ಹಲವಾರು ಆಭರಣಗಳನ್ನೂ ಧರಿಸಿ, ಬೆಳ್ದಾವರೆಯ ಮೇಲೆ ಕುಳಿತಿರುವಂತೆ ವರ್ಣಿಸಲಾಗಿದೆ.

ಲಿಂಗಪುರಾಣದಲ್ಲಿ[31] ಶ್ವೇತವಸ್ತ್ರ ಮತ್ತು ಶ್ವೇತಶಿರೋವಸ್ತ್ರ ಧರಿಸಿರುವ ಸರಸ್ವತೀ ದ್ವಿಭುಜೆಯಾಗಿದ್ದು, ಕೈಗಳಲ್ಲಿ ವಸ್ತ್ರ ಮತ್ತು ಹಾರಗಳನ್ನು ಹಿಡಿದಿರುವಂತೆ ನಿರೂಪಿತಳಾಗಿದ್ದಾಳೆ.

ಮಾರ್ಕಂಡೇಯಪುರಾಣದಲ್ಲಿ[32] ಬರುವ ದೇವೀಮಹಾತ್ಮ್ಯೆಯಲ್ಲಿ ಸರಸ್ವತಿಯು ಒಂದು ಕೈಯಲ್ಲಿ ಅಂಕುಶವನ್ನು ಹಿಡಿದಿರುವ ವಿವರಣೆಯಿದೆ. ಇನ್ನೊಂದು ಕೈಯಲ್ಲಿ ಏನಿದೆ ಎಂಬುದನ್ನು ತಿಳಿಸಿಲ್ಲ.

ಶಿಲ್ಪರತ್ನ ಕೃತಿಯಲ್ಲಿ ವಾಗೀಶ್ವರೀ ಎಂದು ಕರೆದು, ಲೇಖನಿ ಮತ್ತು ಪುಸ್ತಕ ಹಿಡಿದಿರುವ ದ್ವಿಭುಜ ಸರಸ್ವತಿಯ ಚಿತ್ರಣವಿದೆ.[33]

---

26. ಶತಪಥ ಬ್ರಾಹ್ಮಣ iii, 1, 2 & 4
27. ಜೈಮಿನೀಯ ಬ್ರಾಹ್ಮಣ iii, 187
28. ಐತರೇಯ ಬ್ರಾಹ್ಮಣ i, 27
29. ತೈತ್ತಿರೀಯ ಬ್ರಾಹ್ಮಣ vi, 1, 5 & 6
30. ಪದ್ಮಪುರಾಣ (ಸೃಷ್ಟಿಕಾಂಡ) ಅಧ್ಯಾಯ XVI, ಶ್ಲೋಕ 306-309
31. ಲಿಂಗಪುರಾಣ ಅಧ್ಯಾಯ 23, ಶ್ಲೋಕ 31
32. ಮಾರ್ಕಂಡೇಯಪುರಾಣ (ದೇವೀ ಸ್ತುತಿ) ಅಧ್ಯಾಯ XXIII
33. ಶಿಲ್ಪರತ್ನ ಅಧ್ಯಾಯ 24, ಶ್ಲೋಕ 8

ದ್ವಿಭುಜ (ವೈದಿಕ) ಸರಸ್ವತೀ				
ಕೃತಿ	ಸರಸ್ವತಿಯ ಹೆಸರು	ಕೈಗಳು/ಅವುಗಳಲ್ಲಿನ ವಸ್ತುಗಳು	ವರ್ಣ	ಇತರ ವಿವರಗಳು
ಪದ್ಮಪುರಾಣ	ಗಾಯತ್ರೀ	ಜಿಂಕೆಕೊಂಬು–ಕಮಲ	ಬಿಳಿ	ಬಿಳಿ ಮತ್ತು ಕೆಂಪು ವಸ್ತ್ರ, ಬೆಳ್ದಾವರೆಯಲ್ಲಿ ಆಸೀನ
ಲಿಂಗಪುರಾಣ	ಗಾಯತ್ರೀ	ವಸ್ತ್ರ–ಹಾರ		ಶ್ವೇತವಸ್ತ್ರಧಾರಿಣೀ
ಮಾರ್ಕಂಡೇಯಪುರಾಣ		ಅಂಕುಶ		
ಶಿಲ್ಪರತ್ನ	ವಾಗೀಶ್ವರೀ	ಪುಸ್ತಕ–ಲೇಖನಿ		ಶ್ವೇತಶಿರೋವಸ್ತ್ರಧಾರಿಣೀ. ತ್ರಿನೇತ್ರೇ.

ಚತುರ್ಭುಜ ಸರಸ್ವತೀ

ಮತ್ಸ್ಯಪುರಾಣದಲ್ಲಿ[34] ಸರಸ್ವತಿಯ ಸ್ಪಷ್ಟವಾದ ಚಿತ್ರಣವಿದೆ. ಇಲ್ಲಿ ಸರಸ್ವತಿಯ ಹೆಸರು ಗಾಯತ್ರೀ. ಆಕೆಗೆ ನಾಲ್ಕು ಕೈಗಳಿದ್ದು, ಅವುಗಳಲ್ಲಿ ವೀಣೆ, ಅಕ್ಷಮಾಲೆ, ಕಮಂಡಲು ಮತ್ತು ಪುಸ್ತಕಗಳಿರುತ್ತವೆ. ಶ್ವೇತವಸ್ತ್ರ ಮತ್ತು ಹಾರಗಳನ್ನು ಧರಿಸಿರುವ ಸರಸ್ವತೀ ಚಂದನ ಲೇಪಿತೆಯೂ ಹೌದು. ಅಗ್ನಿಪುರಾಣದಲ್ಲಿ[35] ಸರಸ್ವತೀ ಚತುರ್ಭುಜೆಯಾಗಿದ್ದು, ಎರಡು ಕೈಗಳಲ್ಲಿ ವೀಣೆ ಮತ್ತು ಉಳಿದೆರಡು ಕೈಗಳಲ್ಲಿ ಅಕ್ಷಮಾಲೆ ಹಾಗೂ ಪುಸ್ತಕಗಳನ್ನು ಹಿಡಿದಿರುವಂತೆ ಚಿತ್ರಿತಳಾಗಿದ್ದಾಳೆ. ಅಗ್ನಿಪುರಾಣದಲ್ಲಿ ಹೇಳಿರುವ ಈ ಲಕ್ಷಣಗಳು ಆಧುನಿಕ ಕಾಲದಲ್ಲೂ ಉಳಿದುಕೊಂಡು ಬಂದಿವೆ. ಇದೇ ಪುರಾಣದ 50ನೇ ಅಧ್ಯಾಯದಲ್ಲಿ ಅಕ್ಷಮಾಲೆ ಮತ್ತು ಪುಸ್ತಕದ ಜೊತೆಗೆ ಒಂದು ಕೈಯಲ್ಲಿ ವೀಣೆ ಮತ್ತು ಇನ್ನೊಂದು ಕೈಯಲ್ಲಿ ಕಮಲವನ್ನು ಹಿಡಿದಿರುವಂತೆ ನಿರೂಪಿಸಲಾಗಿದೆ.

ಸ್ಕಂದಪುರಾಣದಲ್ಲಿ[36] ಬಲದೇವನೆಂಬುವವನು ಸರಸ್ವತಿಯ ಮಣ್ಣಿನ ಮೂರ್ತಿಯನ್ನು ಮಾಡಿ ಪೂಜಿಸುತ್ತಿದ್ದ ವಿವರಗಳಿವೆ. ಬಲಭಾಗದ ಕೈಗಳಲ್ಲಿ ಕಮಲ ಮತ್ತು ಅಕ್ಷಮಾಲೆ, ಎಡಭಾಗದ ಕೈಗಳಲ್ಲಿ ಕಮಂಡಲು ಮತ್ತು ಪುಸ್ತಕ ಹಿಡಿದಿರುವ ಸರಸ್ವತೀ ಇಲ್ಲಿ ತ್ರಿನೇತ್ರೆ. ಜಟಾಮುಕುಟದೊಂದಿಗೆ ಬಾಲಚಂದ್ರನನ್ನು ಧರಿಸಿರುವ ದೇವಿಯ ಕಂಠ ನೀಲಿಯ ಬಣ್ಣದ್ದಾಗಿದ್ದು ಗಂಧ ಪುಷ್ಪಗಳಿಂದ ಅರ್ಚಿತಳಾಗಿದ್ದಾಳೆ.

ಬೃಹದ್‌ಧರ್ಮಪುರಾಣದಲ್ಲೂ[37] ತ್ರಿನೇತ್ರೆಯಾಗಿರುವ ಸರಸ್ವತೀ ತನ್ನ ಕೈಗಳಲ್ಲಿ ಸುಧಾಭಾಂಡ, ಪುಸ್ತಕ ಮತ್ತು ಕಮಂಡಲುಗಳನ್ನು ಹಿಡಿದಿರುತ್ತಾಳೆ. ಒಂದು ಕೈ ಅಭಯಮುದ್ರೆಯಲ್ಲಿರುತ್ತದೆ. ಸಕಲಾಭರಣ ಭೂಷಿತೆಯಾದ ಸರಸ್ವತೀ ಶ್ವೇತವರ್ಣೆಯಾಗಿ ಚಿತ್ರಿತಳಾಗಿದ್ದಾಳೆ.

---

34. ಮತ್ಸ್ಯಪುರಾಣ, ಅಧ್ಯಾಯ LXVI, ಶ್ಲೋಕ 10
35. ಅಗ್ನಿಪುರಾಣ, ಅಧ್ಯಾಯ XX, ಶ್ಲೋಕ 16
36. ಸ್ಕಂದಪುರಾಣ (ನಾಗರಖಂಡ) ಅಧ್ಯಾಯ XLIX, ಶ್ಲೋಕ 18–20
37. ಬೃಹದ್‌ಧರ್ಮಪುರಾಣ ಅಧ್ಯಾಯ VI, ಶ್ಲೋಕ 39–40

ವಿಷ್ಣುಧರ್ಮೋತ್ತರಪುರಾಣದ[38] ಪ್ರಕಾರ ಸರಸ್ವತೀ ಶಿಲ್ಪವು ಸರ್ವಾಭರಣ ಭೂಷಿತೆಯಾಗಿ, ಸಮಪಾದದಲ್ಲಿ ನಿಂತಿರಬೇಕು. ಮುಖವು ಚಂದ್ರನಂತೆ ದುಂಡಾಗಿರುತ್ತದೆ. ನಾಲ್ಕು ಕೈಗಳು ಇದ್ದು, ಅವುಗಳಲ್ಲಿ ಪುಸ್ತಕ, ಅಕ್ಷಮಾಲೆ, ವೈಣಾವಿ (ಬಿದಿರಿನಿಂದ ಮಾಡಿದ ತಂಬೂರಿ) ಮತ್ತು ಕಮಂಡಲುಗಳು ಇರುತ್ತವೆ.

ಭಾಗವತಪುರಾಣದಲ್ಲಿ[39] ಸರಸ್ವತಿಯು ವಿಷ್ಣುವಿನ ಹೆಂಡತಿಯಂತೆ ಚಿತ್ರಿತವಾಗಿದ್ದು, ಚತುರ್ಭುಜೆಯಾಗಿದ್ದಾಳೆ. ಮೊನಚಾದ ಸ್ತನಗಳು, ಕೆದರಿದ ಕೂದಲು, ರಕ್ತನೇತ್ರಗಳಿಂದ ಕೂಡಿದ ಸರಸ್ವತೀ ಸಿಂಹವಾಹನೆಯಾಗಿ ಉಗ್ರಸ್ವರೂಪವನ್ನು ಪಡೆದಿದ್ದಾಳೆ.

ರೂಪಮಂಡನ[40] ಎಂಬ ಗ್ರಂಥದಲ್ಲಿ ಸರಸ್ವತೀ ಚತುರ್ಭುಜೆಯಾಗಿದ್ದು, ಅಕ್ಷಮಾಲೆ, ಪುಸ್ತಕ, ಕಮಂಡಲು ಮತ್ತು ವೀಣೆಗಳನ್ನು ಹಿಡಿದಿರುವಂತೆ ಚಿತ್ರಿತಳಾಗಿದ್ದಾಳೆ. ಹಂಸವಾಹನೆಯಾಗಿದ್ದು, ಶಿರೋವಸ್ತ್ರ ಮತ್ತು ಕರ್ಣಕುಂಡಲಗಳಿಂದ ಅಲಂಕೃತಳಾಗಿದ್ದಾಳೆ.

ಅಂಶುಮದ್‌ಭೇದಾಗಮ ಮತ್ತು ಪೂರ್ವಕಾರಣಾಗಮಗಳಲ್ಲಿ ಶ್ರೀ ಟಿ.ಎ. ಗೋಪಿನಾಥ್[41] ಅವರು ಸರಸ್ವತೀ ಲಕ್ಷಣಗಳನ್ನು ಕೆಳಕಂಡಂತೆ ಗುರುತಿಸುತ್ತಾರೆ. ಶ್ವೇತವರ್ಣದವಳೂ, ಶ್ವೇತವಸ್ತ್ರೆಯೂ ಆಗಿರುವ ಸರಸ್ವತೀ ಶ್ವೇತಪದ್ಮಾಸನದಲ್ಲಿ ಕುಳಿತಿರುತ್ತಾಳೆ. ಬಲಗಡೆ ಇರುವ ಕೈಗಳಲ್ಲಿ ಅಕ್ಷಮಾಲೆ ಒಂದರಲ್ಲಿದ್ದರೆ, ಇನ್ನೊಂದು ವ್ಯಾಖ್ಯಾನಮುದ್ರೆಯಲ್ಲಿರುತ್ತದೆ. ಎಡಗಡೆ ಇರುವ ಕೈಗಳಲ್ಲಿ ಪುಸ್ತಕ ಮತ್ತು ಕಮಲ ಇರುತ್ತದೆ. ಜಟಾಮುಕುಟವನ್ನು ಧರಿಸಿ, ಹಾರ, ಕುಂಡಲ, ತೋಳುಬಂದಿ, ಕಡಗ ಮುಂತಾದ ಆಭರಣಗಳಿಂದ ಅಲಂಕೃತಳಾಗಿರುತ್ತಾಳೆ.

ಚತುರ್ಭುಜ (ವೈದಿಕ) ಸರಸ್ವತೀ			
ಕೃತಿ	ಕೈಗಳು/ಅವುಗಳಲ್ಲಿನ ವಸ್ತುಗಳು	ವರ್ಣ	ಇತರ ವಿವರಗಳು
ಮತ್ಸ್ಯಪುರಾಣ	ವೀಣೆ-ಅಕ್ಷಮಾಲೆ-ಕಮಂಡಲು-ಪುಸ್ತಕ		ಗಾಯತ್ರೀ ಎಂಬ ಹೆಸರಿದೆ. ಪಾಪ-ಶ್ವೇತವಸ್ತ್ರಧಾರಿಣೀ. ಚಂದನಲೇಪಿತೇ.
ಅಗ್ನಿಪುರಾಣ	ವೀಣೆ-ಅಕ್ಷಮಾಲೆ-ಪುಸ್ತಕ-ವೀಣೆ ಅಥವಾ ವೀಣೆ-ಅಕ್ಷಮಾಲೆ-ಪುಸ್ತಕ-ಕಮಲ		
ಸ್ಕಂದಪುರಾಣ	ಅಕ್ಷಮಾಲೆ-ಕಮಲ-ಪುಸ್ತಕ-ಕಮಂಡಲು		ತ್ರಿನೇತ್ರೇ. ನೀಲಕಂಠೇ. ಜಟಾಮುಕುಟ. ಬಾಲಚಂದ್ರ
ಬೃಹದ್‌ಪುರಾಣ	ಅಭಯ-ಸುಧಾಭಾಂಡ-ಪುಸ್ತಕ-ಕಮಲ	ಬಿಳಿ	ತ್ರಿನೇತ್ರೇ. ಸಕಲಾಭರಣಭೂಷಿತೆ
ವಿಷ್ಣುಧರ್ಮೋತ್ತರಪುರಾಣ	ಪುಸ್ತಕ-ಅಕ್ಷಮಾಲೆ-ವೈಣಾವಿ-ಕಮಂಡಲು		ಚಂದ್ರವದನೆ. ಸಮಪಾದ ಸ್ಥಿತಿ ವೈಣಾವಿ ಬದಲಿಗೆ ತ್ರಿಶೂಲವೂ ಇರಬಹುದು

38. ವಿಷ್ಣುಧರ್ಮೋತ್ತರಪುರಾಣ ಅಧ್ಯಾಯ 64, ಶ್ಲೋಕ 1-7.
39. ಭಾಗವತಪುರಾಣ ಅಧ್ಯಾಯ III
40. ರೂಪಮಂಡನ ಅಧ್ಯಾಯ V, ಶ್ಲೋಕ 61-63
41. Gopinath T.A.: Elements of Hindu Iconography, Vol. -1; Part -2, P.377

ಕೃತಿ	ಕೈಗಳು/ಅವುಗಳಲ್ಲಿನ ವಸ್ತುಗಳು	ವರ್ಣ	ಇತರ ವಿವರಗಳು
ಭಾಗವತಪುರಾಣ			ವಿಷ್ಣುವಿನ ಹೆಂಡತಿ. ರಕ್ತನೇತ್ರೆ
ರೂಪಮಂಡನ	ಅಕ್ಷಮಾಲೆ–ಪುಸ್ತಕ–ಕಮಂಡಲು–ವೀಣಾ		ಹಂಸವಾಹನೆ. ಜಟಾಮುಕುಟ. ಕುಂಡಲಧರಿಣೀ
ಅಂಶುಮದ್‌ಭೇದಾಗಮ ಮತ್ತು ಪೂರ್ವಾಕರಣಾಗಮ	ಅಕ್ಷಮಾಲೆ–ವ್ಯಾಕರಣಮುದ್ರೆ–ಪುಸ್ತಕ–ಕಮಲ	ಬಿಳಿ	ಪದ್ಮಾಸನ– ಯಜ್ಞೋಪವೀತ–ಜಟಾಮುಕುಟ– ಮುತ್ತಿನ ಹಾರ–ಕಿವಿಯುಂಗರ, ತೋಳಬಂದಿ, ಬಳೆ, ಕಡಗ, ರೂಬಿ ಕುಂಡಲ–ಶ್ವೇತವಸ್ತ್ರಧಾರಿಣೀ

ದಶಭುಜ ಸರಸ್ವತೀ

ಶಿಲ್ಪರತ್ನ ಕೃತಿಯು ಹತ್ತು ಕೈಗಳ ಸರಸ್ವತೀ ಲಕ್ಷಣಗಳನ್ನು ತಿಳಿಸುತ್ತದೆ. ಅವುಗಳಲ್ಲಿ ಆಕೆಯು ವೀಣೆ, ಚಕ್ರ, ಶಂಖ, ಕಪಾಲ, ಪಾಶ, ಪರಶು, ಅಮೃತಕಲಶ, ಪುಸ್ತಕ, ಅಕ್ಷಮಾಲೆ ಮತ್ತು ಕಮಲಗಳನ್ನು ಹಿಡಿದಿರುತ್ತಾಳೆ.[42] ಶಾರದಾ, ಕಾಮೇಶ್ವರೀ ಮತ್ತು ರುದ್ರಭೈರವೀ ಎಂಬ ಮೂರು ಸರಸ್ವತೀ ಸ್ವರೂಪಗಳಿಗೂ ದಶಭುಜಗಳಿವೆ ಎನ್ನಲಾಗಿದೆ. ಶಾರದಾದೇವಿಗೆ ದಶಭುಜಗಳಲ್ಲಿ ಪದ್ಮ, ಚಕ್ರ, ಗುಣಪಾಶ, ಹರಿಣ, ಪುಸ್ತಕ, ವರ್ಣಮಾಲಾ, ಥಂಕ, ಕಪಾಲ, ವರದಮುದ್ರೆ ಮತ್ತು ಕುಂಭ ಇರುವುದಾಗಿ ಹೇಳಿದ್ದಾರೆ. ಕಾಮೇಶ್ವರೀ ಮತ್ತು ರುದ್ರಭೈರವೀ ಎಂಬ ಸ್ವರೂಪಗಳಿಗೆ ತ್ರಿಶೂಲ, ಡಮರು, ಅಸಿ, ಖ್ರಿತ, ಪಿನಾಕ, ಬಾಣ, ಪಾಶ, ಅಂಕುಶ, ಪುಸ್ತಕ ಮತ್ತು ಅಕ್ಷಮಾಲೆ ಇರುವುದೆಂದು ಹೇಳಲಾಗಿದೆ.[43]

ತಾಂತ್ರಿಕ ಗ್ರಂಥಗಳಲ್ಲಿ ಸರಸ್ವತೀ ಶಿಲ್ಪಲಕ್ಷಣಗಳು

ತಾಂತ್ರಿಕ ಪೂಜೆಯ ಸರಸ್ವತಿಯು ಮೂಲತಃ ಬೌದ್ಧದೇವತೆಯೆಂದು, ನಂತರ ಹಿಂದೂ ತಂತ್ರಗಳು ತಮ್ಮವಳನ್ನಾಗಿ ಮಾಡಿಕೊಂಡರೆಂದು ಅಭಿಪ್ರಾಯಪಡಲಾಗಿದೆ.[44] ಎಂಬ ಅಭಿಪ್ರಾಯವಿದೆ. ತಂತ್ರಸಾರ ಕೃತಿಯಲ್ಲಿ ಸರಸ್ವತಿಯನ್ನು ಶ್ವೇತವರ್ಣೆ, ಶ್ವೇತಚಂದನಲೇಪಿತೆ ಎಂದು ಕರೆದಿದೆ. ಆಕೆಯು ಶುಭ್ರ ಹಾರ ಮತ್ತು ವಸ್ತ್ರಗಳನ್ನು ಧರಿಸಿ, ಶ್ವೇತಪದ್ಮದ ಮೇಲೆ ಕುಳಿತಿರುತ್ತಾಳೆ. ಬಾಲಚಂದ್ರನನ್ನು ಶಿರೋವಸ್ತ್ರದಲ್ಲಿ ಧರಿಸಿರುವ ದೇವಿಗೆ ಮೂರು ಕಣ್ಣುಗಳು. ಸ್ತನಭಾರದಿಂದ ಮುಂದಕ್ಕೆ ಬಗ್ಗಿದಂತೆ ಕಾಣುವ ಆಕೆಗೆ ಹಂಸ ವಾಹನ. ಒಂದು ಶ್ಲೋಕವಲ್ಲಿ ಲೇಖನಿ ಮತ್ತು ಪುಸ್ತಕವನ್ನು ಹಿಡಿದು ದ್ವಿಭುಜೆ ಎಂದು ವರ್ಣಿತಳಾದರೆ, ಉಳಿದವುಗಳಲ್ಲಿ ಪದ್ಮ, ಅಕ್ಷಮಾಲೆ, ಕಮಂಡಲು ಮತ್ತು ಪುಸ್ತಕ ಹಿಡಿದು ಚತುರ್ಭುಜೆ ಎಂದು ವರ್ಣಿತಳಾಗಿದ್ದಾಳೆ.[45]

---

42. ಶಿಲ್ಪರತ್ನ ಅಧ್ಯಾಯ 24, ಶ್ಲೋಕ 4
43. Niranjan Ghosh: Sri Sarasvati in Indain Art and Literature, P.41-45
44. ಚಿದಾನಂದಮೂರ್ತಿ ಎಂ.: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.136
45. ತರ್ಕರತ್ನ ಪಂಚಾನನ್ (ಸಂ): ತಂತ್ರಸಾರ (c.f. Niranjan Ghosh: Sri Sarasvati in Indain Art and Literature)

ಶಾರದಾತಿಲಕತಂತ್ರದಲ್ಲಿ[46] ಸರಸ್ವತಿಯು ಶಾರದಾ (ಶರದ್ ಋತುವಿನಲ್ಲಿ ಹುಟ್ಟಿದವಳು) ಎಂಬ ಹೆಸರಿನಲ್ಲಿ ವರ್ಣಿತಳಾಗಿದ್ದಾಳೆ. ಮೂರು ಕಣ್ಣುಗಳನ್ನು (ತ್ರಿನಯನಾ) ಹೊಂದಿದ್ದು, ಮುಡಿಯಲ್ಲಿ ತರುಣಚಂದ್ರನನ್ನು ಧರಿಸಿದ್ದಾಳೆ. ಚತುರ್ಭುಜೆಯಾಗಿರುವ ದೇವಿ, ಜ್ಞಾನಮುದ್ರೆ, ಅಕ್ಷಮಾಲೆ, ಅಮೃತಕಳಶ ಮತ್ತು ಪುಸ್ತಕಗಳನ್ನು ಹಿಡಿದಿದ್ದಾಳೆ. ಮೊನಚಾದ ಮತ್ತು ಘನವಾದ ಸ್ತನದ್ವಯಗಳನ್ನು ಹೊಂದಿರುವ ಸರಸ್ವತೀ ಶ್ವೇತವರ್ಣದವಳಾಗಿದ್ದಾಳೆ.

ಪ್ರಪಂಚಸಾರತಂತ್ರವು[47] ಸರಸ್ವತಿಯ ಮೂರು ರೀತಿಯ ಲಕ್ಷಣಗಳನ್ನು ತಿಳಿಸುತ್ತದೆ. ಒಂದು ಶ್ಲೋಕದಲ್ಲಿ ಚತುರ್ಭುಜ ಸರಸ್ವತೀ ಲಕ್ಷಣಗಳನ್ನು ಹೇಳಲಾಗಿದೆ. ಅದರಂತೆ ಸರಸ್ವತಿಯು ಎರಡು ಕೈಗಳಲ್ಲಿ ಪುಸ್ತಕ, ಜಪಮಾಲೆ ಹಿಡಿದಿರುತ್ತಾಳೆ. ಉಳಿದೆರಡು ಅಭಯ ಮತ್ತು ವರದಾ ಮುದ್ರೆಯನ್ನು ಹೊಂದಿರುತ್ತವೆ ಚಾರುವಾಹುಲತ (ಕುಂಕುಮ ಕೇಸರಿ) ಮತ್ತು ಸುಗಂಧಹಾರಗಳಿಂದ ಆಲಂಕೃತಳಾಗಿದ್ದು ಶ್ವೇತಪದ್ಮಾಸನದಲ್ಲಿ ಕುಳಿತಿರುತ್ತಾಳೆ. ಎರಡನೆಯ ಶ್ಲೋಕದಲ್ಲಿ ಸರಸ್ವತೀ ಹಂಸವಾಹನೆಯಾಗಿದ್ದು, ಆಕೆಯು ನಾಲ್ಕು ಕೈಗಳಲ್ಲಿ ಒಂದು ಕೈ ಅಭಯಮುದ್ರೆಯಲ್ಲಿದ್ದರೆ, ಉಳಿದ ಮೂರು ಕೈಗಳಲ್ಲಿ ಅಕ್ಷಮಾಲೆ, ಕಮಂಡಲು ಮತ್ತು ಪುಸ್ತಕಗಳನ್ನು ಹಿಡಿದಿರುತ್ತಾಳೆ.

ಮೂರನೆಯ ಶ್ಲೋಕದಲ್ಲಿ ಸರಸ್ವತೀ ಚತುರ್ಭುಜೆಯಾಗಿದ್ದು, ಮೂರು ಕೈಗಳಲ್ಲಿ ಅಕ್ಷಮಾಲೆ, ಕಮಲ ಮತ್ತು ಪುಸ್ತಕ ಹಿಡಿದಿದ್ದರೆ, ಒಂದು ಕೈ ಅಭಯ ಮುದ್ರೆಯಲ್ಲಿರುತ್ತದೆ ಎಂದು ಹೇಳಿದೆ.

ತಾಂತ್ರಿಕ ಸರಸ್ವತೀ			
ಕೃತಿ	ಕೈಗಳು/ಅವುಗಳಲ್ಲಿನ ವಸ್ತುಗಳು	ವರ್ಣ	ಇತರ ವಿವರಗಳು
ತಂತ್ರಸಾರ	ದ್ವಿಭುಜ: ಲೇಖನಿ-ಪುಸ್ತಕ ಅಥವಾ ಚತುರ್ಭುಜ: ಕಮಲ-ಅಕ್ಷಮಾಲೆ-ಕಮಂಡಲು-ಪುಸ್ತಕ	ಬಿಳಿ	ಬೆಳ್ದಾವರೆಯಲ್ಲಿ ಆಸೀನ. ತ್ರಿನೇತ್ರೇ. ಶ್ವೇತವಸ್ತ್ರಧಾರಿಣೀ.
ಶಾರದಾತಿಲಕತಂತ್ರ	ಚತುರ್ಭುಜ: ಜ್ಞಾನಮುದ್ರೆ-ಅಕ್ಷಮಾಲೆ-ಕಳಸ-ಪುಸ್ತಕ		ತ್ರಿನೇತ್ರೇ. ಶ್ವೇತವಸ್ತ್ರಧಾರಿಣೀ. ಬಾಲಚಂದ್ರನನ್ನು ತಲೆಯಲ್ಲಿ ಧರಿಸಿದ್ದಾಳೆ.
ಪ್ರಪಂಚಸಾರ -	ಚತುರ್ಭುಜ: ಅಭಯ-ಜಪಮಾಲೆ-ಪುಸ್ತಕ-ವರದಾ ಅಥವಾ ಚತುರ್ಭುಜ: ಅಭಯ-ಅಕ್ಷಮಾಲೆ-ಕಮಂಡಲು-ಪುಸ್ತಕ ಅಥವಾ ಚತುರ್ಭುಜೇ: ಅಭಯ-ಅಕ್ಷಮಾಲೆ-ಪುಸ್ತಕ-ಕಮಲ		ಬೆಳ್ದಾವರೆಯಲ್ಲಿ ಆಸೀನ ಹಂಸವಾಹನೇ.

ಡಾ. ನಿರಂಜನ್ ಘೋಷ್ ಅವರು ತಮ್ಮ ಶ್ರೀ ಸರಸ್ವತೀ ಇನ್ ಇಂಡಿಯನ್ ಆರ್ಟ್ ಅಂಡ್ ಲಿಟರೇಚರ್[48] ಕೃತಿಯಲ್ಲಿ ಸುಮಾರು 82 ರೀತಿಯ ಸರಸ್ವತೀ ಲಕ್ಷಣಗಳನ್ನು ಗುರುತಿಸಿದ್ದಾರೆ. ವಿದ್ಯಾರ್ಣವ ತಂತ್ರದಲ್ಲಿ ಹೇಳಿದೆ ಎಂದು ಸುಮಾರು ನಲವತ್ತು ರೀತಿಯ ಲಕ್ಷಣಗಳನ್ನು ಹೇಳಿರುತ್ತಾರೆ.

---

46. ಶಾರದಾತಿಲಕ ತಂತ್ರ, ಅಧ್ಯಾಯ VI, ಧ್ಯಾನ 34-36, 113-123
47. ಪ್ರಪಂಚಸಾರತಂತ್ರ ಅಧ್ಯಾಯ VIII
48. Niranjan Ghosh: Sri Sarasvati in Indain Art and Literature, P.41-45

ಇವುಗಳಲ್ಲಿ ಮೂರು ದ್ವಿಭುಜ, ಇಪ್ಪತ್ತಾರು ಚತುರ್ಭುಜ, ನಾಲ್ಕು ಷಡ್ಭುಜ, ಎರಡು ಅಷ್ಟಭುಜ ಮತ್ತು ಮೂರು ದಶಭುಜ ಸರಸ್ವತೀ ಶಿಲ್ಪಗಳ ಬೇರೆ ಬೇರೆ ಹೆಸರುಗಳನ್ನು ಹೇಳಿದ್ದಾರೆ. ಇವುಗಳಲ್ಲಿ ಹೆಚ್ಚಿನ ವ್ಯತ್ಯಾಸಗಳಿಲ್ಲದೆ, ಕೆಲವೊಮ್ಮೆ ಹೆಸರು, ಕೆಲವೊಮ್ಮೆ ಹಸ್ತಸಾಮಗ್ರಿಗಳಷ್ಟೇ ಬದಲಾಗಿರುವುದನ್ನು ಗಮನಿಸಬಹುದಾಗಿದೆ. ಇಲ್ಲಿ ಹೇಳಿದುದಕ್ಕಿಂತ ವಿಭಿನ್ನ ರೀತಿಯ ಸರಸ್ವತೀ ಶಿಲ್ಪ ಲಕ್ಷಣಗಳು, ಶಿಲ್ಪಗಳು ಸಿಗುವುದನ್ನು ಮುಂದೆ ಕಾಣಬಹುದು. ತಾಂತ್ರಿಕ ಆಚರಣೆ ಭಾಗಶಃ ಖಾಸಗಿಯಾದ ಆಚರಣೆಯಾದ್ದರಿಂದ ತಂತ್ರ ಪರಂಪರೆಯಲ್ಲಿ ಇಷ್ಟೊಂದು ರೂಪಗಳನ್ನು ಸರಸ್ವತಿಗೆ ಆರೋಪಿಸಿರಬಹುದು. ಆಚಾರ್ಯ ದಿನನಾಥ ಶಾಸ್ತ್ರೀ ಅವರ ಅಭಿಪ್ರಾಯದಂತೆ, ವಿದ್ಯಾರ್ಣವ ತಂತ್ರ ಕಾಶ್ಮೀರದ ವಿದ್ಯಾರಣ್ಯಮುನಿ ಎಂಬುವವನಿಂದ ರಚಿತವಾದುದಾಗಿದೆ. (ಪ್ರಸ್ತುತ ಸಂಶೋಧಕನಿಗೆ ವಿದ್ಯಾರ್ಣವ ತಂತ್ರದ ಪಠ್ಯವಾಗಲೀ, ಸಿ.ಬಿ. ಸೀತಾರಾಮ್ ಅವರ ಪುಸ್ತಕವಾಗಲೀ ಉಪಲಬ್ಧವಾಗಿಲ್ಲ. ಆದರೂ ಶಿಲ್ಪಗಳನ್ನು ಅಧ್ಯಯನ ಮಾಡುವಾಗ ಘೋಷ್ ಅವರು ತಮ್ಮ ಗ್ರಂಥದಲ್ಲಿ ಹೇಳಿರುವ ಲಕ್ಷಣಗಳನ್ನು ಗಮನಿಸಲಾಗಿದೆ.) ಹಾಗೆ ನೋಡಿದರೆ, **'ಶಿಲ್ಪಶಾಸ್ತ್ರಕೃತಿಗಳನ್ನು ಓದಿ, ಕೆಲಸ ಮಾಡಿದ ಸ್ಥಪತಿಗಳು ರೂವಾರಿಗಳು ತುಂಬಾ ಕಡಿಮೆ, ಶಿಲ್ಪಶಾಸ್ತ್ರಕ್ಕನುಗುಣವಾಗಿ ರಚಿತವಾಗಿರುವ ಕಲಾಕೃತಿಗಳೂ ಕಡಿಮೆ, ಈ ಶಿಲ್ಪಶಾಸ್ತ್ರಕೃತಿಗಳಿಗೂ ಕರ್ನಾಟಕದ ರೂವಾರಿಗಳಿಗೂ ನಡುವೆ ದೊಡ್ಡ ಕಂದಕವೇ ನಿರ್ಮಾಣವಾಗಿತ್ತು'**[49] ಎಂಬ ಅಭಿಪ್ರಾಯಗಳಿವೆ. ಬಹುಶಃ ಈ ಶಿಲ್ಪಶಾಸ್ತ್ರಕೃತಿಗಳು ಸಂಸ್ಕೃತದಲ್ಲಿದ್ದುದು ಇದಕ್ಕೆ ಕಾರಣವಿರಬಹುದು. ಕರ್ನಾಟಕದ ಶಿಲ್ಪಾಚಾರ್ಯರು ಶಿಲ್ಪಶಾಸ್ತ್ರೀಯ ಗ್ರಂಥಗಳನ್ನೇ ನಂಬಿಕೊಂಡಿದ್ದರೆ, ಬಹುಶಃ ಬೇಲೂರು-ಹಳೆಬೀಡು ಮೊದಲಾದ ಊರುಗಳಲ್ಲಿರುವ ಕಲಾದೇಗುಲಗಳು ಸೃಷ್ಟಿಯಾಗುತ್ತಿರಲಿಲ್ಲ.

ಭಾರತದ ಪ್ರಾಚೀನ ಸರಸ್ವತೀ ಶಿಲ್ಪಗಳು

ಭಾರತದಲ್ಲಿ ಇದುವರೆಗೆ ಉಪಲಬ್ಧವಿರುವ ಪ್ರಾಚೀನ ಸರಸ್ವತೀ ಶಿಲ್ಪಗಳೆಂದು ಮೂರನ್ನು ಗುರುತಿಸಲಾಗಿದೆ. ಈ ಮೂರೂ ಶಿಲ್ಪಗಳು ಸುಮಾರು ಕ್ರಿ.ಶ. 2ನೇ ಶತಮಾನಕ್ಕೆ ಸೇರಿದವುಗಳು. ಉತ್ತರಪ್ರದೇಶದ ಮಥುರಾ ಬಳಿಯಿರುವ ಕಂಕಾಲಿತಿಲಾ ಎಂಬಲ್ಲಿ ದೊರೆತಿರುವ ಶಿಲ್ಪ, ಅದರ ರಚನೆಯ ದೃಷ್ಟಿಯಿಂದ ಅತ್ಯಂತ ಪ್ರಾಚೀನವಾದುದೆಂದು ವಿದ್ವಾಂಸರ ಅಭಿಪ್ರಾಯ.[50] ಜೈನ ಚೈತ್ಯವೊಂದರಲ್ಲಿ ಸಿಕ್ಕು, ಈಗ ಲಕ್ನೋ ಮ್ಯೂಸಿಯಂನಲ್ಲಿ ಇರುವ ಈ ಶಿಲ್ಪದ ಕೆಳಗೆ ಬ್ರಾಹ್ಮೀಲಿಪಿಯಲ್ಲಿರುವ ಶಾಸನದಲ್ಲಿ ಸರಸ್ವತೀ

---

49. ಡಾ.ಕೆ.ಎಸ್.ಕುಮಾರಸ್ವಾಮಿ: ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರ್ಯರು, ಪು.116-126

50. K. Bhattacharyya: Sarasvati –A study on her Concept and Iconography, P.78 ಮತ್ತು ಕೆ. ವಸಂತ ಲಕ್ಷ್ಮೀ: ಕರ್ನಾಟಕ ಸರಸ್ವತಿ ಶಿಲ್ಪಗಳು, ಇತಿಹಾಸ ದರ್ಶನ ಸಂಪುಟ -7, 1992, ಪು.74

ಎಂದು ಸ್ಪಷ್ಟ ಉಲ್ಲೇಖವಿದೆ. ಈ ಉಲ್ಲೇಖವಿಲ್ಲದಿದ್ದರೆ ಅದನ್ನು ಸರಸ್ವತೀ ಶಿಲ್ಪ ಎಂದು ಗುರುತಿಸುವುದೇ ಕಷ್ಟವಾಗುತ್ತಿತ್ತೇನೊ! ಚೌಕಾಕಾರದ, (ಶಾಸನವಿರುವ) ಎರಡು ಅಂತಸ್ತಿನ ಪೀಠದ ಮೇಲೆ ಕುಕ್ಕರುಗಾಲಿನಲ್ಲಿ ಕುಳಿತಿರುವ ಈ ಶಿಲ್ಪದ ತಲೆಭಾಗ ಮತ್ತು ಎಡ ಸ್ತನಭಾಗ ಭಗ್ನವಾಗಿದೆ. ಎಡಬಲಗಳಲ್ಲಿ ಇಬ್ಬರು ಸೇವಕಿಯರಿದ್ದಾರೆ. ಬಲಗೈಯಲ್ಲಿ ಅಕ್ಷಮಾಲೆ ಮತ್ತು ಎಡಗೈಯಲ್ಲಿ ಹಸ್ತಪ್ರತಿ ಇದೆ ಎನ್ನಲಾಗಿದ್ದರೂ,[51] ಪ್ರಕಟಿತ ಚಿತ್ರಗಳಲ್ಲಿ ಅಕ್ಷಮಾಲೆ ಕಾಣುವುದಿಲ್ಲ. ತ್ರುಟಿತ ಬಲಗೈಯಲ್ಲಿ ಬಹುಶಃ ಕಮಲವಿದ್ದಿರಬೇಕು ಎಂಬ ಅಭಿಪ್ರಾಯವೂ ಇದೆ.[52] ಎಡಗೈಯಲ್ಲಿ ಕಾಣುವಂತಹ ಬಳೆಯ ರೀತಿಯಲ್ಲೇ, ಮುರಿದುಹೋಗಿರುವ ಬಲಭಾಗದ ಕೈಯಲ್ಲೂ ಬಳೆಯ ಭಾಗ ಕಾಣುತ್ತಿದೆ. ಅದನ್ನೇ ಅಕ್ಷಮಾಲೆ ಎಂದು ಭಾವಿಸಿರುವಂತಿದೆ. ಇದು ಜೈನ ಚೈತ್ಯವೊಂದರಲ್ಲಿ ದೊರೆತ ಶಿಲ್ಪವಾದ್ದರಿಂದ ಜೈನ ಸರಸ್ವತೀ ಶಿಲ್ಪ ಎನ್ನಬಹುದು. ಕೆಲ ವಿದ್ವಾಂಸರು ಹೇಳುವಂತೆ, **'ಸರಸ್ವತೀ ಶಿಲ್ಪದ ಕಲ್ಪನೆಯೇ ಜೈನಧರ್ಮದಿಂದ ಆರಂಭವಾಗಿದೆ'**[53] ಎಂಬುದು ಕೇವಲ ಊಹೆಯಷ್ಟೇ ಆಗಿರುವಂತೆ ತೋರುತ್ತದೆ.

ಭಹೂತ್‌ನಲ್ಲಿ ದೊರೆತಿರುವುದೂ ಸಹ ದ್ವಿಭುಜ ಶಿಲ್ಪವಾಗಿದ್ದು, ಹಸ್ತಪ್ರತಿಯೊಂದನ್ನು ಎರಡೂ ಕೈಗಳಲ್ಲಿ ಹಿಡಿದು ನಿಂತಿರುವಂತಿದೆ. ಕಮಲದ ಮೇಲೆ ನಿಂತಿರುವ ಈ ಶಿಲ್ಪವು ಕಂಬವೊಂದರ ಮೇಲಿನ ಉಬ್ಬು ಶಿಲ್ಪವಾಗಿದೆ.[54] ಈ ಶಿಲ್ಪದ ಕಾಲದ ಬಗ್ಗೆ ಭಿನ್ನಾಭಿಪ್ರಾಯವಿದೆ. ಆಂಧ್ರಪ್ರದೇಶದ ಘಂಟಸಾಲದಲ್ಲಿ ದೊರೆತಿರುವ ಚತುರ್ಭುಜ ಸರಸ್ವತೀ ಶಿಲ್ಪವು ದಕ್ಷಿಣ ಭಾರತದಲ್ಲಿ ದೊರೆತಿರುವ ಅತ್ಯಂತ ಪ್ರಾಚೀನ ಸರಸ್ವತೀ ಶಿಲ್ಪವಾಗಿದೆ. ಸಮಪಾದ ಭಂಗಿಯಲ್ಲಿರುವ ಈ ಸ್ಥಾನಕ ಶಿಲ್ಪದ ಹಿಂಬದಿಗೆ ಹಂಸವನ್ನು ಕೆತ್ತಲಾಗಿದೆ. ಬಲಭಾಗದ ಮೇಲಿನ ಕೈಯಲ್ಲಿ ಕಮಲದ ಮೊಗ್ಗಿದ್ದರೆ, ಕೆಳಗಿನ ಕೈಯನ್ನು ಹಂಸದ ತಲೆಯ ಮೇಲೆ ಬರುವಂತೆ ಕೆತ್ತಲಾಗಿದೆ. ಎಡಭಾಗದ ಮೇಲಿನ ಕೈಯಲ್ಲಿ ಪುಸ್ತಕವಿದ್ದರೆ, ಕೆಳಗಿನ ಕೈಯಲ್ಲಿ ಏನೂ ಇರದೆ ಕಟಿ ಅವಲಂಬಿತ (ಕಟ್ಯಾವಲಂಬಿತಹಸ್ತ) ಹಸ್ತವಾಗಿದೆ. ವೃತ್ತಾಕಾರವಾದ ಕರ್ಣಕುಂಡಲಗಳನ್ನು ಬಿಟ್ಟರೆ ಬೇರಾವುದೇ ಆಭರಣಗಳಿಲ್ಲ. ಭಹೂತ್ ಮತ್ತು ಘಂಟಸಾಲಾದ ಶಿಲ್ಪಗಳು ಸಮಕಾಲಿನವಾದವುಗಳು ಎಂಬ ಅಭಿಪ್ರಾಯವಿದೆ.[55]

ಕರ್ನಾಟಕದ ಪ್ರಾಚೀನ ಸರಸ್ವತೀ ಶಿಲ್ಪಗಳು

ನಮ್ಮ ಅಧ್ಯಯನ ಕರ್ನಾಟಕಕ್ಕೆ ಸೀಮಿತವಾಗಿರುವುದರಿಂದ, ಕರ್ನಾಟಕದಲ್ಲಿ ಉಪಲಬ್ಧವಿರುವ ಶಿಲ್ಪಗಳನ್ನಷ್ಟೇ ಈ ಅಧ್ಯಯನದಲ್ಲಿ ಪರಿಶೀಲಿಸಲಾಗಿದೆ. ಹಾಗಾದರೆ ಕರ್ನಾಟಕದಲ್ಲಿ ಅತ್ಯಂತ ಪ್ರಾಚೀನ

---

51. ಅದೇ.
52. Niranjan Ghosh: Sri Sarasvati in Indain Art and Literature, P.87
53. ಕೆ. ವಸಂತ ಲಕ್ಷ್ಮಿ – ಕರ್ನಾಟಕ ಸರಸ್ವತಿ ಶಿಲ್ಪಗಳು, ಇತಿಹಾಸ ದರ್ಶನ ಸಂಪುಟ –7, 1992, ಪು.75
54. K. Bhattacharyya: Sarasvati –A study on her Concept and Iconography, P.78
55. Ibid.

ಶಿಲ್ಪ ಯಾವುದೆಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ. ಕ್ರಿ.ಶ. 675–700 ಸುಮಾರಿಗೆ ರಚಿತವಾಗಿರುವ ಐಹೊಳೆಯ ರಾವಳಫಡಿ ಗುಹಾಲಯದಲ್ಲಿರುವ ಗಂಗಾಧರನ ಶಿಲ್ಪದ ತಲೆಯ ಮೇಲಿರುವ ಮೂರು ದೇವಿಯರನ್ನು ಗಂಗಾ, ಯಮುನಾ ಮತ್ತು ಸರಸ್ವತೀ ಎಂದು ಗುರುತಿಸಲಾಗಿದೆ.[56] ಕೇವಲ ಶಿರೋಭಾಗವಷ್ಟೇ ಇರುವ ಈ ದೇವಿಯರಲ್ಲಿ ಸರಸ್ವತೀ ಯಾರು ಎಂಬುದು ಸ್ಪಷ್ಟವಾಗುವುದಿಲ್ಲ. ಗಂಗಾಧರನ ತಲೆಯಲ್ಲಿ ಗಂಗೆಯು ನೆಲೆಸಿರುತ್ತಾಳೆ ಎಂಬ ಪೌರಾಣಿಕ ಕಲ್ಪನೆ, ಗಂಗೆ ಎಂದರೆ ಗಂಗಾ–ಯಮುನಾ–ಸರಸ್ವತಿಯರ ಪ್ರಾತಿನಿಧಿಕ ರೂಪ ಎಂಬ ಕಲ್ಪನೆಯ ಮೇಲೆ ಈ ಶಿಲ್ಪ ರಚಿತವಾಗಿರಬಹುದು. ಈ ಮೂವರಲ್ಲಿ ಒಬ್ಬರನ್ನು ಸರಸ್ವತಿಯೆಂದು ಒಪ್ಪಿಕೊಂಡರೂ ಅದು ನದೀ ದೇವತೆಯ ಪ್ರತೀಕವಾಗುತ್ತದೆ. ಆದ್ದರಿಂದ ಕರ್ನಾಟಕದಲ್ಲಿ ಪ್ರಬಲವಾಗಿ ಪ್ರಚಲಿತದಲ್ಲಿದ್ದ, ಸರಸ್ವತಿಯು ವಿದ್ಯಾದೇವತೆಯ ಸ್ವರೂಪ ಎಂಬ ಕಲ್ಪನೆಗೆ ಇದು ಇಂಬುಕೊಡುವ ಶಿಲ್ಪವಾಗಲಾರದು.

ಕರ್ನಾಟಕವನ್ನು ಆಳಿದ ರಾಷ್ಟ್ರಕೂಟ ಅರಸರು ನಿರ್ಮಿಸಿದ ಎಲ್ಲೋರಾದ (ಈಗ ಮಹಾರಾಷ್ಟ್ರ ರಾಜ್ಯದಲ್ಲಿದೆ) ಕೈಲಾಸ ದೇವಾಲಯದಲ್ಲಿ ಸ್ಥಾನಕ ದ್ವಿಭುಜ ಸರಸ್ವತಿಯ ಶಿಲ್ಪವಿದೆ. ಕಮಲದ ಹೂವಿನ ಮೇಲೆ ತ್ರಿಭಂಗಿಯಲ್ಲಿ ನಿಂತಿರುವಂತೆ ಶಿಲ್ಪ ರಚಿತವಾಗಿದೆ. ಕೈಗಳೆರಡೂ ಭಿನ್ನವಾಗಿವೆ. ಈ ಶಿಲ್ಪದ ಸಾಲಿನಲ್ಲಿ ಬರುವ ಇನ್ನೆರಡು ಸ್ತ್ರೀದೇವತೆಗಳನ್ನು ಗಂಗಾ ಮತ್ತು ಯಮುನಾ ಎಂಬುದಾಗಿ ಗುರುತಿಸಲಾಗಿದ್ದರೆ, ಈ ಶಿಲ್ಪವನ್ನು ಸರಸ್ವತಿಯದ್ದಾಗಿರಬಹುದು ಎನ್ನಲಾಗಿದೆ.[57] ಈ ಮಾತು ನಿಜವಾಗಿದ್ದರೆ, ಇದೊಂದು ನದೀದೇವತೆ ಸರಸ್ವತಿಯ ಶಿಲ್ಪವಾಗಲಿದೆ. ಕೈಲಾಸ ದೇವಾಲಯದ ಕಾಲ ಸುಮಾರು ಕ್ರಿ.ಶ.8ನೆಯ ಶತಮಾನ.

ಬನವಾಸಿಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಒಂದು ಸರಸ್ವತಿಯ ಶಿಲ್ಪವಿದೆ. ಅದರ ರೇಖಾಚಿತ್ರವನ್ನು ಎಸ್.ಕೆ.ರಾಮಚಂದ್ರರಾಯರು ತಮ್ಮ 'ಪ್ರತಿಮಾಕೋಶ'[58]ದಲ್ಲಿ ಬಳಸಿಕೊಂಡಿದ್ದಾರೆ. ಅದಕ್ಕೆ 'Sarasvati –early Kadamba stone' ಎಂಬ ವಿವರಣೆ ನೀಡಲಾಗಿದೆ. ಅಂದರೆ ಆ ಶಿಲ್ಪದ ಕಾಲ ಸುಮಾರು ನಾಲ್ಕರಿಂದ ಆರನೇ ಶತಮಾನದ ಅವಧಿಯದ್ದಾಗುತ್ತದೆ. ಆದರೆ ಆ ಶಿಲ್ಪವನ್ನು ಖುದ್ದಾಗಿ ವೀಕ್ಷಿಸಿದಾಗ, ರೇಖಾಚಿತ್ರದಲ್ಲಿರುವಂತೆ ದ್ವಿಭುಜಶಿಲ್ಪವಾಗಿರದೆ ಚತುರ್ಭುಜ ಶಿಲ್ಪವಾಗಿತ್ತು. ಹಿಂದಿನ ಎರಡೂ ಕೈಗಳು ಮುರಿದುಹೋಗಿರುವುದರ ಸ್ಪಷ್ಟವಾದ ಕುರುಹುಗಳು ಶಿಲ್ಪದಲ್ಲಿವೆ. ಮುಂದಿನಿಂದ ನೋಡಿದಾಗ ಮಾತ್ರ ದ್ವಿಭುಜ ಶಿಲ್ಪವಾಗಿಯೇ ಕಾಣುವುದು, ರೇಖಾಚಿತ್ರದಲ್ಲಿ ದ್ವಿಭುಜವಾಗಿ ಮೂಡಿಬಂದಿರುವುದಕ್ಕೆ ಕಾರಣವಾಗಿದೆ. ಆ ಸರಸ್ವತಿಯ ಶಿಲ್ಪದ ಲಕ್ಷಣಗಳು, ಕರ್ನಾಟಕದ ಬೇರೆಡೆ

---

56. ಅಣ್ಣಿಗೇರಿ ಎಂ.ಎಂ.: ಐಹೊಳೆ: ಸಂಸ್ಕೃತಿ ಮತ್ತು ಕಲೆ, ಪು.68
57. Susan L Huntington: The Art of Ancient India –Buddhist, Hindus, Jaina,. Weather Hill Publications, New York. 1999
58. Ramachandra Rao S.K.: Prtimakosha –Encyclopedia of Indian Iconography, Vol. 6. P.259

ದೊರೆಯುವ ಕಲ್ಯಾಣದ ಚಾಲುಕ್ಯ ಮತ್ತು ಹೊಯ್ಸಳ ಶೈಲಿಯ ಚತುರ್ಭುಜ ಸರಸ್ವತಿಯ ಶಿಲ್ಪಗಳನ್ನು ಹೋಲುತ್ತವೆ. ಆದ್ದರಿಂದ ಅದು ಆದಿಕದಂಬರ ಕಾಲದ ಶಿಲ್ಪವಾಗಿರದೆ, ಸುಮಾರು ಕ್ರಿ.ಶ. 11–12ನೇ ಶತಮಾನಕ್ಕೆ ಸೇರಿದ ಶಿಲ್ಪವೆಂಬುದು ಸ್ಪಷ್ಟವಾಗುತ್ತದೆ. ಬನವಾಸಿಯ ಮಧುಕೇಶ್ವರ ದೇವಾಲಯದ ಒಳ ಆವರಣದಲ್ಲಿ ಆದಿಮಾಧವನ ಶಿಲ್ಪವಿದೆ. ಶೈಲಿಯ ದೃಷ್ಟಿಯಿಂದ ಆ ಶಿಲ್ಪವನ್ನು 8ನೆಯ ಶತಮಾನದ ಕೊನೆ ಅಥವಾ 9ನೆಯ ಶತಮಾನದ ಮೊದಲಭಾಗ ಎಂದು ನಿರ್ಧರಿಸಲಾಗಿದ್ದರೂ, ಅದೇ ಕಾಲದ ವಿಷ್ಣುಮೂರ್ತಿಗಳಲ್ಲಿ ಕಾಣದ ಕೆಲವು ವಿಶಿಷ್ಟ ಲಕ್ಷಣಗಳಿವೆ. 'ಅಂಡಾಕಾರದ ಮಕರತೋರಣ, ಮಾಧವನ ಎಡ ಬಲ ಬದಿಗಳಲ್ಲಿ ಸರಸ್ವತಿ–ಲಕ್ಷ್ಮಿಯರಿದ್ದು, ಪದ್ಮಪೀಠದ ಎಡ ಬಲ ಬದಿಗಳಲ್ಲಿ ದುರ್ಗೆ ಮತ್ತು ಮೊಣಕಾಲೂರಿ ನಮಿಸುತ್ತಿರುವ ಗರುಡನ ಶಿಲ್ಪಗಳಿವೆ. ತೋರಣದ ಮೇಲಿನ ದಶಾವತಾರಗಳಲ್ಲಿ ಮತ್ಸ್ಯ, ಕೂರ್ಮ, ವರಾಹ ಮತ್ತು ನರಸಿಂಹ ಇವುಗಳನ್ನು ಬಿಟ್ಟು ಉಳಿದೆಲ್ಲ ಅವತಾರಗಳ ರೂಪಣವು ಒಂದೇ ಮಾದರಿಯದು. ಈ ಬಗೆಯ ಲಕ್ಷಣಗಳು ಬಾದಾಮಿ ಚಲುಕ್ಯರ ಕಾಲದಿಂದ ವಿಜಯನಗರದ ಕಾಲದವರೆಗಿನ ಯಾವುದೇ ವಿಷ್ಣುಶಿಲ್ಪ ಮಾದರಿಗಳಲ್ಲಿಲ್ಲ. ಮುಖ್ಯವಾಗಿ ಲಕ್ಷ್ಮಿ, ಸರಸ್ವತಿ ಮತ್ತು ದುರ್ಗಾ ಇವರನ್ನು ತೋರಿಸಿರುವುದು ಗಮನಾರ್ಹ.'[59] ಗುಪ್ತರ ಕಾಲಕ್ಕೆ ಸೇರಿದ, ಎಡ ಬಲಬದಿಗಳಲ್ಲಿ ಲಕ್ಷ್ಮಿ–ಸರಸ್ವತಿಯರನ್ನುಳ್ಳ ವಿಷ್ಣುವಿನ ಶಿಲ್ಪಗಳು ಉತ್ತರಭಾರತದಲ್ಲಿ –ಅದರಲ್ಲೂ ವಿಶೇಷವಾಗಿ ಬಂಗಾಳ ಪ್ರಾಂತ್ಯದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಹೆಚ್ಚಿನ ಶಿಲ್ಪಗಳಲ್ಲಿ, ಲಕ್ಷ್ಮಿ–ಸರಸ್ವತಿಯರಿಬ್ಬರ ಕೆತ್ತನೆಯೂ ವಿಷ್ಣು ಶಿಲ್ಪಕ್ಕೆ ಹೋಲಿಸಿದರೆ ತೀರಾ ಸಣ್ಣಪ್ರಮಾಣದ್ದಾಗಿರುತ್ತದೆ. ಸರಸ್ವತಿಯು ದ್ವಿಭುಜೆಯಾಗಿದ್ದು ವೀಣೆ ಹಿಡಿದಿರುತ್ತಾಳೆ. ಇದಕ್ಕೆ ಬಿರ್ಲಾ ಕುಟುಂಬದವರ ಸಂಗ್ರಹಾಲಯದಲ್ಲಿರುವ ವಿಷ್ಣುಶಿಲ್ಪ ಅತ್ಯಂತ ಉತ್ತಮ ಉದಾಹರಣೆಯಾಗಿದೆ.[60] ಇದರಲ್ಲಿ ಲಕ್ಷ್ಮಿ–ಸರಸ್ವತಿಯರನ್ನು ವಿಷ್ಣುವಿನ ತೊಡೆಯ ಎತ್ತರಕ್ಕೆ ಕೆತ್ತಲಾಗಿದೆ. ಕರ್ನಾಟಕದಲ್ಲಿ ಈ ಬಗೆಯ ಶಿಲ್ಪಗಳಿಲ್ಲ. ಅರಳಗುಪ್ಪೆಯ ದೇವಾಲಯದಲ್ಲಿ ಒಂದೇ ಸಾಲಿನಲ್ಲಿ ಬರುವಂತೆ ಲಕ್ಷ್ಮಿ–ವಿಷ್ಣು–ಸರಸ್ವತಿಯರನ್ನು ನೃತ್ಯಭಂಗಿಯಲ್ಲಿ ಸಮಪ್ರಮಾಣವಾಗಿ ಕೆತ್ತಲಾಗಿದೆ ಅಷ್ಟೆ. ಆದ್ದರಿಂದ ಬನವಾಸಿಯ ಆದಿಮಾಧವನ ಶಿಲ್ಪವನ್ನು ಹೋಲುವ ಯಾವ ಶಿಲ್ಪಗಳೂ ಕರ್ನಾಟಕದಲ್ಲಿ ಇಲ್ಲ ಎಂಬ ಅ.ಸುಂದರ ಅವರ ಅಭಿಪ್ರಾಯ ಸಾಧುವಾದದ್ದು. ಬದಾಮಿ ಚಲುಕ್ಯರ ಕಾಲಕ್ಕೂ ಹಿಂದೆ ಇದ್ದಿರಬಹುದಾದ ಆದಿಮಾಧವನ ಶಿಲ್ಪ ಹಾಳಾಗಿದ್ದರಿಂದ ಅದನ್ನೇ ಹೋಲುವಂತಹ ಶಿಲ್ಪ ಸುಮಾರು 8–9ನೇ ಶತಮಾನದಲ್ಲಿ ನಿರ್ಮಾಣವಾಗಿರಬೇಕು ಎಂಬ ಅಭಿಪ್ರಾಯವನ್ನೂ ಅ.ಸುಂದರ ಅವರು ವ್ಯಕ್ತಪಡಿಸಿದ್ದಾರೆ. ಅದೇನೇ ಇದ್ದರೂ ಈಗ ಇರುವ ಶಿಲ್ಪದ ಕಾಲ 8–9ನೇ ಶತಮಾನ ಎಂಬುದು ಪ್ರಸ್ತುತ

---

59. ಸುಂದರ ಅ.: ಬನವಾಸಿ ವಾಸ್ತು ಮತ್ತು ಮೂರ್ತಿಶಿಲ್ಪ. ಲೇಖನ: ಬನವಾಸಿ –ಸಮಗ್ರ ಪರಿಚಯ, ಪು.127–128

60. Collector's Dream: collection of Basantkumar & Saraladevi Birla, Marg Publications, Bombay. 1987

ಅಧ್ಯಯನದ ದೃಷ್ಟಿಯಿಂದ ಮಹತ್ವದ್ದು. ಆದಿಮಾಧವನ ಶಿಲ್ಪದ ಭಾಗವಾಗಿ ಬಂದಿರುವ ಸರಸ್ವತೀ ಶಿಲ್ಪದ ಕಾಲವೂ ಅದೇ ಆಗುವುದರಿಂದ, ಈ ಶಿಲ್ಪವೇ ಕರ್ನಾಟಕದ ಅತ್ಯಂತ ಪ್ರಾಚೀನ ಸರಸ್ವತೀ ಶಿಲ್ಪ ಎಂದಾಗುತ್ತದೆ. ಪದ್ಮಾಸನದಲ್ಲಿ ಕುಳಿತಿರುವ ಸರಸ್ವತಿಯ ಬಲಗೈ ಅಭಯಮುದ್ರೆಯಲ್ಲಿದೆ. ಎಡಗೈಯಲ್ಲಿ ಪುಸ್ತಕವಿದೆ. ಬಳೆ, ತೋಳಬಂದಿ, ಹಾರ, ಕುಂಡಲಗಳು ಅಸ್ಪಷ್ಟವಾಗಿ ಗೋಚರಿಸುತ್ತವೆ. ಕೆತ್ತನೆಗಳಿಂದ ಕೂಡಿದ ಕರಂಡಮಕುಟವಿದೆ; ಪ್ರಭಾವಳಿ ಇಲ್ಲ. ಸರಸ್ವತಿಯ ವಾಹನವಾದ ಹಂಸವೂ ಇಲ್ಲ.

ಕರ್ನಾಟಕದ ಅತ್ಯಂತ ಪ್ರಾಚೀನ ಸರಸ್ವತೀ ಶಿಲ್ಪ, ನದಿದೇವತೆಯ ರೂಪದಲ್ಲಿ ಶಿವನ ತಲೆಯಲ್ಲಿ, ಶಿವನ ಶಿಲ್ಪದ ಒಂದು ಭಾಗವಾಗಿ ಬಂದಿದ್ದರೆ, ವಿದ್ಯಾದೇವತೆ ಸ್ವರೂಪದ ಶಿಲ್ಪ ವಿಷ್ಣುಶಿಲ್ಪದ ಒಂದು ಭಾಗವಾಗಿ ಬಂದಿರುವುದು ವಿಶೇಷ. ಆದರೆ ಪ್ರಾಚೀನವೆನ್ನಬಹುದಾದ ಸ್ವತಂತ್ರ ಸರಸ್ವತೀ ಶಿಲ್ಪ ರಾಷ್ಟ್ರಕೂಟರ ಕಾಲಕ್ಕೆ ಸೇರಿದ್ದಾಗಿದೆ. ಹರಪನಹಳ್ಳಿ ತಾಲ್ಲೋಕು ಬಾಗಳಿಯ ಪ್ರಾಚ್ಯವಸ್ತುಸಂಗ್ರಹಾಲಯದಲ್ಲಿರುವ ಚತುರ್ಭುಜ ಸರಸ್ವತೀ ಶಿಲ್ಪ ಸುಮಾರು ಹತ್ತನೇ ಶತಮಾನಕ್ಕೆ ಸೇರಿದ್ದೆಂದು ಹೇಳಲು ಅವಕಾಶವಿದೆ. ಮುಖಭಾವ, ಅಲಂಕಾರ, ಪಾಶ–ಅಂಕುಶಗಳನ್ನು ಹಿಡಿದಿರುವ ಶೈಲಿ, ಪಾಶದ ಆಕಾರ, ಪಬಾವಳಿಯ ಆಕಾರ ಮತ್ತು ಶಿಲ್ಪದ ಒಟ್ಟು ನೋಟದ ಹಿನ್ನೆಲೆಯಲ್ಲಿ, 11–12ನೆಯ ಶತಮಾನಕ್ಕೆ ಸೇರಿದ ಕರ್ನಾಟಕದಲ್ಲಿ ದೊರೆತಿರುವ ಸರಸ್ವತೀ ಶಿಲ್ಪಗಳಿಗಿಂತ ಇದು ಭಿನ್ನವಾದುದಾಗಿದೆ. ಶಿಲ್ಪ ಸುಮಾರು ಮೂರುವರೆ ಅಡಿ ಎತ್ತರವಿದೆ. ಪದ್ಮಾಸನದಲ್ಲಿರುವ ಮೂರ್ತಿಗೆ ಇದ್ದ ಪ್ರಭಾವಳಿ ಈಗ ಭಗ್ನವಾಗಿದೆ. ಬಲಬದಿಯ ಮುಂದಿನ ಕೈ ಅಕ್ಷಮಾಲೆಯೊಂದಿಗೆ ಅಭಯಮುದ್ರೆಯಲ್ಲಿದ್ದರೆ, ಹಿಂದಿನ ಕೈಯಲ್ಲಿ ಅಂಕುಶವಿದೆ. ಎಡಬದಿಯ ಮುಂದಿನ ಕೈಯಲ್ಲಿ ಪುಸ್ತಕವಿದ್ದರೆ, ಹಿಂದಿನ ಕೈಯಲ್ಲಿ ಪಾಶವಿದೆ. ಕಾಲುಂಗರ, ಕಾಲಂದಿಗೆ, ಕಾಲ್ಗೆಜ್ಜೆಗಳನ್ನು ಕೆತ್ತಲಾಗಿದೆ. ಉಟ್ಟಿರುವ ವಸ್ತ್ರವನ್ನು ರೇಖೆಗಳಿಂದ ಸೂಚಿಸಲಾಗಿದೆ. ಆಲಂಕೃತ ಸೊಂಟಪಟ್ಟಿ, ನಿಮ್ನನಾಭಿ, ಸಣ್ಣದಾದ ನಡು ಮತ್ತು ದೊಡ್ಡದಾದ ಸ್ತನಗಳು ಶಿಲ್ಪದ ನಿಲುವಿಗೆ ಗಾಂಭೀರ್ಯವನ್ನೂ ಔನ್ನತ್ಯವನ್ನೂ ತಂದುಕೊಟ್ಟಿವೆ. ಕೈಬೆರಳಿಗೆ ಉಂಗುರ, ಕೈಬಳೆ, ತೋಳಬಂದಿ, ಭುಜಕೀರ್ತಿ ಸರಳವಾಗಿವೆ. ಸ್ತನಹಾರ, ಮತ್ತು ಕಂಠಿಕೆಯ ನಡುವೆ ಎರಡು ಹಾರಗಳು ಇವೆ. ಸುರುಳಿಯಾಕಾರದ ಗುಂಗುರುಗೂದಲು ಭುಜಕೀರ್ತಿಯವರೆಗೂ ವಿಸ್ತರಿಸಿದೆ. ವೃತ್ತಾಕಾರದ ಕುಂಡಲಗಳು, ಮಣಿಯಿಂದ ಆಲಂಕೃತವಾದ ಕರಂಡಮಕುಟ ಗಮನಸೆಳೆಯುತ್ತವೆ. ತಲೆಯ ಹಿಂಬದಿಗೆ ಪ್ರಭಾಮಂಡಲವಿದೆ. ಇವುಗಳ ಆಧಾರದ ಮೇಲೆ ಹತ್ತನೇ ಶತಮಾನದ ಆದಿಭಾಗಕ್ಕೆ ಸೇರಿದ ಶಿಲ್ಪವೆಂದು ಊಹಿಸಬಹುದು. ಈ ಕಾಲನಿರ್ಣಯಕ್ಕೆ ಇನ್ನೊಂದು ಪೂರಕ ಆಕರವೆಂದರೆ ಬಾಗಳಿಯ ಕಲ್ಲೇಶ್ವರ ದೇವಾಲಯದ ಕಾಲ. ಬಾಗಳಿಯ ಕಲ್ಲೇಶ್ವರ ದೇವಾಲಯದ ಆವರಣದಲ್ಲಿ ಬೇರೆ ಬೇರೆ ದೇವಾಲಯಗಳಿದ್ದು ಅವು ಈಗ ಶಿಥಿಲವಾಗಿವೆ. ಹೀಗಾಗಿ

ಹಿಂದೆ ಇದ್ದಿರಬಹುದಾ ದೇವಾಲಯದಲ್ಲಿನ ಶಿಲ್ಪ ಇದಾಗಿರುವ ಸಾಧ್ಯತೆಯೂ ಇದೆ. ದಾಖಿಯವರ ಅಭಿಪ್ರಾಯದಂತೆ ಬಾಗಳಿಯ ದೇವಾಲಯಗಳ ಕಾಲ ಸುಮಾರು ಕ್ರಿ.ಶ. 880–973.[61] ಅಂದರೆ ಹತ್ತನೇ ಶತಮಾನದ ಆದಿಭಾಗ ಎನ್ನಲು ಅಡ್ಡಿಯಿಲ್ಲ. ಬಹುಶಃ ದೇವಾಲಯ ನಿರ್ಮಾಣವಾದಾಗಲೇ ಸರಸ್ವತಿಯ ಶಿಲ್ಪದ ನಿರ್ಮಾಣವೂ ಆಗಿರಬೇಕು. ಆದ್ದರಿಂದ ಬಾಗಳಿಯ ಸರಸ್ವತೀ ಶಿಲ್ಪವೇ ಕರ್ನಾಟಕದ ಅತ್ಯಂತ ಪ್ರಾಚೀನ ಸ್ವತಂತ್ರ ಶಿಲ್ಪ ಎನ್ನಬಹುದಾಗಿದೆ. (ಬಾಗಳಿ ಕಲ್ಲೇಶ್ವರ ದೇವಾಲಯದ ಗರ್ಭಗುಡಿಯ ಹಿಂಬದಿಯ ಪಟ್ಟಿಕೆಯಲ್ಲಿ ಹನ್ನೆರಡನೇ ಶತಮಾನಕ್ಕೆ ಸೇರಿದ 'ಗಗಯ್ಯ ಮಾಡಿಸಿದ ಸರಸ್ವತಿಯ ಪ್ರತಿಮೆ'[62] ಎಂಬ ಶಾಸನವಿದೆ. ಇಲ್ಲಿ ಚಿಕ್ಕದಾದ ಸರಸ್ವತಿಯ (ಚಿಕಣಿಶಿಲ್ಪ) ಇದೆ. ಬಾಗಳಿಯ ಮ್ಯೂಸಿಯಂನಲ್ಲೆ ಇನ್ನೊಂದು ಸರಸ್ವತೀ ಶಿಲ್ಪವಿದ್ದು ಅದು ಹನ್ನೆರಡನೇ ಶತಮಾನಕ್ಕೆ ಸೇರಿದ್ದಾಗಿದೆ. ಆದ್ದರಿಂದ ಈ ಶಾಸನಕ್ಕೂ ಮೇಲೆ ಹೇಳಿದ ಪ್ರಾಚೀನ ಸರಸ್ವತೀ ಶಿಲ್ಪಕ್ಕೂ ಯಾವುದೇ ಸಂಬಂಧವಿಲ್ಲ.)

ಹಾವೇರಿ ಜಿಲ್ಲೆ ರಾಣಿಬೆನ್ನೂರು ತಾಲ್ಲೂಕಿನ ಉಕ್ಕುಂದ ರಾಷ್ಟ್ರಕೂಟರ ಕಾಲದ ಒಂದು ಹಳ್ಳಿ. ಇಲ್ಲಿ ಕಲ್ಯಾಣದ ಚಾಲುಕ್ಯರ ಎರಡು ಶಾಸನಗಳು ಪತ್ತೆಯಾಗಿವೆ. ಈ ಊರಿನಲ್ಲಿರುವ ಕಲಿದೇವರ (ಶಾಸನೋಕ್ತ ಕಲ್ಲೇಶ್ವರ) ಗುಡಿ ಬಹುಶಃ ರಾಷ್ಟ್ರಕೂಟರ ಕಾಲದ ಅಂದರೆ ಸುಮಾರು ಹತ್ತನೇ ಶತಮಾನದ ರಚನೆಯಾಗಿರಬಹುದು ಎಂದು ಭಾವಿಸಲಾಗಿದೆ. ಈ ಸಾಧಾರಣವಾದ ದೇವಾಲಯದ ಆವರಣದಲ್ಲಿರುವ ಗಣಪತಿ, ಆದಿತ್ಯ ಮತ್ತು ಇತರೆ ಶಿಲ್ಪಗಳನ್ನು ರಾಷ್ಟ್ರಕೂಟರ ಕಾಲದವು ಎನ್ನಲಾಗಿದೆ. ಇಲ್ಲಿರುವ ಸರಸ್ವತೀ ಶಿಲ್ಪ ಕೇವಲ ಎರಡು ಅಡಿ ಎತ್ತರವಿದ್ದು ಸಾಧಾರಣ ಶಿಲ್ಪವಾಗಿದೆ. ಆಸೀನ ಚತುರ್ಭುಜ ಮೂರ್ತಿಯಾಗಿರುವ ಇದರ ಕೈಗಳಲ್ಲಿ ಅಕ್ಷಮಾಲೆ, ಅಂಕುಶ, ಪಾಶ ಮತ್ತು ಪುಸ್ತಕಗಳಿವೆ. ಪೀಠದಲ್ಲಿ ಹಂಸವಿದೆ. ಕರ್ನಾಟಕದಲ್ಲಿ ಸಿಗುವ ಬಹುತೇಕ ಆಸೀನ ಚತುರ್ಭುಜ ಶಿಲ್ಪಗಳ ಲಕ್ಷಣ ಇದೇ ಆಗಿದೆ.

ಇವುಗಳಲ್ಲದೆ ಸುಮಾರು ಕ್ರಿ.ಶ. 1019ರ ಕಾಲದ ಹಾವೇರಿ ತಾಲ್ಲೂಕಿನ ಕಳ್ಳಿಹಾಳದ ಪಾರ್ವತಿ ಪರಮೇಶ್ವರ (ಈಗಿನ ಬಸವಣ್ಣ) ದೇವಾಲಯ, ಕ್ರಿ.ಶ.1053ಕ್ಕೆ ಸೇರಿದ ಹಾನಗಲ್ ತಾಲ್ಲೂಕಿನ ಕಲಕೇರಿಯ ಜಯಸಿಂಘೇಶ್ವರ ದೇವಾಲಯ, 1056ಕ್ಕೂ ಹಿಂದಿನದು ಎನ್ನಲಾಗಿರುವ ಹಾವೇರಿ ತಾಲ್ಲೂಕಿನಲ್ಲಿರುವ ಗಳಗನಾಥದ ಗಳಗನಾಥೇಶ್ವರ ದೇವಾಲಯ ಮತ್ತು ಕ್ರಿ.ಶ.1063ಕ್ಕೆ ಸೇರಿದ ಹಾವೇರಿ ತಾಲ್ಲೂಕಿನ ದೇವೀಹೊಸೂರಿನ ಬಯಲಿನಲ್ಲಿ ನಿಂತಿರುವ ಬಾಗಿಲುವಾಡದಲ್ಲಿರುವ ಶಿಲ್ಪಗಳೂ ಪ್ರಾಚೀನವಾದವುಗಳಾಗಿವೆ. ದಕ್ಷಿಣಕನ್ನಡ ಜಿಲ್ಲೆ ಬಾರಕೂರಿನ ಮೂಡುಕೇರಿಯಲ್ಲಿರುವ ಸೋಮನಾಥ

---

61. Dhaky M.A.: Encyclopaedia of Indian Temple Architecture, Vol. 1, Part -2, P.160
62. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ –1. ಶಾಸನ ಸಂಖ್ಯೆ –149

ದೇವಾಲಯದಲ್ಲಿನ ಸರಸ್ವತೀ ಶಿಲ್ಪವನ್ನು ಸುಮಾರು 10–11ನೇ ಶತಮಾನದ್ದೆಂದು ಹೇಳಲಾಗಿದೆ.[63] ಆದರೆ ಆ ಶಿಲ್ಪದ ಲಕ್ಷಣಗಳನ್ನು ಗಮನಿಸಿ ಹಾಗೂ ಆ ಲೇಖಕರೇ ಕೊಟ್ಟಿರುವ ವಿವರಣೆಯಂತೆ ಅದು ಕಲ್ಯಾಣದ ಚಾಲುಕ್ಯರ ಸುಮಾರು 11–12ನೇ ಶತಮಾನದ ಕಾಲಕ್ಕೆ ಸೇರಿದ್ದೆಂದು ನಿಸ್ಸಂಶಯವಾಗಿ ಹೇಳಬಹುದು. ಕರ್ನಾಟಕದಲ್ಲಿ ಸುಮಾರು ಹತ್ತನೇ ಶತಮಾನದಿಂದ ಸರಸ್ವತೀ ಶಿಲ್ಪಗಳು ಹೆಚ್ಚು ಹೆಚ್ಚಾಗಿ ಕಾಣಸಿಗುತ್ತವೆ. ಕಲ್ಯಾಣದ ಚಾಲುಕ್ಯ ಮತ್ತು ಹೊಯ್ಸಳರ ಕಾಲದ ದೇವಾಲಯಗಳಲ್ಲಿ ಸರಸ್ವತೀ ಶಿಲ್ಪಗಳು ಹೆಚ್ಚಿನ ಸಂಖ್ಯೆಯಲ್ಲಿವೆ.

ಶಿಲ್ಪಗಳ ವಿಭಾಗ ಕ್ರಮ ಮತ್ತು ತೌಲನಿಕ ಅವಲೋಕನ

ಸರಸ್ವತೀ ಶಿಲ್ಪಗಳು ಕರ್ನಾಟಕದ ಬಹುತೇಕ ಎಲ್ಲಾ ಭಾಗಗಳ ದೇವಾಲಯಗಳಲ್ಲಿಯೂ ದೊರೆಯುತ್ತವೆ. ಪ್ರತ್ಯೇಕ ಏಕಕೂಟ ದೇವಾಲಯದ ಸರಸ್ವತೀ ಶಿಲ್ಪಗಳೂ ಇಲ್ಲಿವೆ. ಬಹುಕೂಟ ದೇವಾಲಯಗಳ ಸಹಶಿಲ್ಪವಾಗಿಯೂ, ದೇವಾಲಯಗಳ ನವರಂಗ, ಮುಖಮಂಟಪ ಮೊದಲಾದವುಗಳಲ್ಲಿ ಬಿಡಿಶಿಲ್ಪಗಳಾಗಿಯೂ ಕಾಣಸಿಗುತ್ತವೆ.

ಕರ್ನಾಟಕದಲ್ಲಿ ಸರಸ್ವತೀ ಆರಾಧನೆ ಪ್ರಬಲಗೊಂಡ ಹಾಗೇ ಸರಸ್ವತಿಗೆ ಪ್ರತ್ಯೇಕವಾದ ದೇವಾಲಯಗಳ ನಿರ್ಮಾಣವೂ ಆಗಿದೆ. ಗದಗ, ಹಿರೇಕೆರೂರು ತಾಲ್ಲೂಕಿನ ಮೇದೂರು ಮೊದಲಾದೆಡೆಗಳಲ್ಲಿ ಪ್ರತ್ಯೇಕ ದೇವಾಲಯಗಳನ್ನು ಕಾಣಬಹುದು. ಬಹುಕೂಟ ದೇವಾಲಯಗಳಲ್ಲಿ, ಸರಸ್ವತಿಯನ್ನು ಒಂದು ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಿರುವುದೂ ಉಂಟು. ಉದಾಹರಣೆಗೆ, ಹಾಸನ ಜಿಲ್ಲೆ ಅಡಗೂರಿನ ತ್ರಿಕೂಟಾಚಲ ಲಕ್ಷ್ಮೀನಾರಾಯಣ ದೇವಾಲಯದ ಎಡಭಾಗದ ಗರ್ಭಗುಡಿ, ಚಿಕ್ಕಮಗಳೂರು ಜಿಲ್ಲೆ ಬಗ್ಗವಳ್ಳಿಯ ತ್ರಿಕೂಟಾಚಲ ಕೇಶವ ದೇವಾಲಯದ ಬಲಭಾಗದ ಗರ್ಭಗುಡಿ ಮೊದಲಾದವುಗಳು. ತ್ರೈಪ್ಯರುಷ ದೇವಾಲಯಗಳಲ್ಲಿ ಹಂಸಪೀಠದಲ್ಲಿ ಬ್ರಹ್ಮಲಿಂಗವಿರುತ್ತದೆ. ಆದರೆ ಕೆಲವು ದೇವಾಲಯಗಳಲ್ಲಿ ಶಿವಲಿಂಗ ಮತ್ತು ವಿಷ್ಣುವಿನ ಜೊತೆಗೆ ಬ್ರಹ್ಮನ ಬದಲಾಗಿ ಸರಸ್ವತೀ ಶಿಲ್ಪ ಇರುವುದನ್ನು ಕಾಣಬಹುದು. ಹಾವೇರಿ ಜಿಲ್ಲೆ ಕಲಕೇರಿಯ ಜಯಸಿಂಘೇಶ್ವರ ದೇವಾಲಯ ಇದಕ್ಕೊಂದು ಉತ್ತಮ ಉದಾಹರಣೆ. ಗದಗಜಿಲ್ಲೆ ನಿಡಗುಂದಿಯ ದಾಸಿಮೇಶ್ವರ ದೇವಾಲಯದಲ್ಲೂ ಬ್ರಹ್ಮನ ಬದಲಿಗೆ ಸರಸ್ವತೀ ಶಿಲ್ಪ ಇದ್ದಿತಾದರೂ, ಈಗ ಸರಸ್ವತಿಯ ಶಿಲ್ಪ ಸ್ಥಳಾಂತರಗೊಂಡಿದೆ. ಆವರಣದಲ್ಲಿರುವ ಶಾಸನದ ಶಿರೋಭಾಗದಲ್ಲಿ ಶಿವ, ವಿಷ್ಣು ಮತ್ತು ಸರಸ್ವತಿಯ ಕಿರುಶಿಲ್ಪಗಳಿವೆ. ಒಂದೇ ಪೀಠದ ಮೇಲೆ ಶಿವಲಿಂಗ ಮತ್ತು ವಿಷ್ಣುವಿನ ಜೊತೆಗೆ ಸರಸ್ವತಿಯನ್ನು ಸ್ಥಾಪಿಸಿರುವುದನ್ನು ಅದೇ ಊರಿನ

---

63. ಗುರುರಾಜಭಟ್ ಪಿ: ಸ್ಟಡೀಸ್ ಇನ್ ತುಳುವ ಹಿಸ್ಟರಿ ಅಂಡ್ ಕಲ್ಚರ್, 1975, ಪು.312, ಪ್ಲೇಟ್ 155ಎ

ನಾರಾಯಣದೇವರ ಗುಡಿಯಲ್ಲಿ ಕಾಣಬಹುದು. ಈಗ ಸರಸ್ವತೀ ಶಿಲ್ಪವನ್ನು ಊರಿನ ಬಸವಣ್ಣನ ಗುಡಿಯಲ್ಲಿ ಇಡಲಾಗಿದೆ. ಹೊಯ್ಸಳ ಮತ್ತು ಚಾಲುಕ್ಯರ ಕಾಲದ ದೇವಾಲಯಗಳ ನವರಂಗದಲ್ಲಿ ಮತ್ತು ನವರಂಗದ ಗೂಡುಗಳಲ್ಲಿ ಸರಸ್ವತಿಯ ಬಿಡಿ ಶಿಲ್ಪಗಳು ದೊರೆಯುತ್ತವೆ. ಉದಾಹರಣೆಗೆ, ಹಾಸನ ಜಿಲ್ಲೆ ಬೇಲೂರಿನ ಕಪ್ಪೆಚನ್ನಿಗರಾಯ, ಮೊಸಳೆಯ ನಾಗೇಶ್ವರ, ಕೊರವಂಗಲದ ಬೂಚೇಶ್ವರ, ಹಾರ್‍ನಹಳ್ಳಿಯ ಸೋಮೇಶ್ವರ, ಅಗ್ರಹಾರ ಬೆಳಗುಲಿಯ ಕೇಶವೇಶ್ವರ, ಚಿಕ್ಕಮಗಳೂರು ಜಿಲ್ಲೆ ಅಮೃತಾಪುರ, ದಾವಣಗೆರೆ ಜಿಲ್ಲೆ ನಂದಿತಾವರೆಯ ಮಾಣಿಕೇಶ್ವರ, ಹಾವೇರಿ ಜಿಲ್ಲೆ ಉಕ್ಕುಂದದ ಕಲ್ಲೇಶ್ವರ, ಮಂಡ್ಯ ಜಿಲ್ಲೆ ಬಸರಾಳು ಮಲ್ಲಿಕಾರ್ಜುನ, ಬಳ್ಳಾರಿ ಜಿಲ್ಲೆ ಹಿರೇಹಡಗಲಿಯ ಕಲ್ಲೇಶ್ವರ ದೇವಾಲಯಗಳು ಸೇರಿದಂತೆ ಅನೇಕ ಕಡೆ ಈ ಬಿಡಿ ಶಿಲ್ಪಗಳನ್ನು ಕಾಣಬಹುದಾಗಿದೆ. ನವರಂಗದ ಗೂಡುಗಳಲ್ಲಿ ಮತ್ತು ನವರಂಗದಲ್ಲಿರುವ ಬಹುತೇಕ ಶಿಲ್ಪಗಳು ಆಸೀನ ಚತುರ್ಭುಜ ಸರಸ್ವತೀ ಶಿಲ್ಪಗಳಾಗಿವೆ.

ನವರಂಗದ ಕಂಬಗಳ ಪೀಠಭಾಗದ ಮೇಲೂ ಸರಸ್ವತಿಯ ಉಬ್ಬು ಶಿಲ್ಪಗಳನ್ನು ಕಾಣಬಹುದು. ಐಹೊಳೆಯ ವಿರೂಪಾಕ್ಷಗುಡಿ, ಧಾರವಾಡ ಜಿಲ್ಲೆ ಅಮರಗೋಳಗ ಕೇಶವ (ಈಗ ಬನಶಂಕರಿ), ಹಾವೇರಿ ಜಿಲ್ಲೆ ಶೇಷಗಿರಿಯ ರೇವೇಶ್ವರ, ಕೊಪ್ಪಳ ಜಿಲ್ಲೆ ಇಟಗಿಯ ಮಹಾದೇವ, ಬಳ್ಳಾರಿ ಜಿಲ್ಲೆ ಬಾಗಳಿಯ ಕಲ್ಲೇಶ್ವರ ಮೊದಲಾದ ದೇವಾಲಯಗಳಲ್ಲಿ ನವರಂಗದ ಕಂಬದ ಮೇಲೆ ಸರಸ್ವತಿಯ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಗದಗಿನ ಸರಸ್ವತೀ ದೇವಾಲಯದ ತೆರೆದ ನವರಂಗದ ಕಂಬಗಳಲ್ಲಿ ಕೇವಲ ನಾಲ್ಕೈದು ಇಂಚು ಎತ್ತರದ ಸುಮಾರು ಒಂದು ನೂರಕ್ಕೂ ಹೆಚ್ಚು ಸರಸ್ವತೀ ಉಬ್ಬು ಶಿಲ್ಪಗಳಿವೆ. ಕಿರಿದಾದ (ಸುಮಾರು 8ರಿಂದ 10 ಸೆಂ.ಮೀ. ಎತ್ತರವಿರುವ) ಬಿಡಿ ಶಿಲ್ಪಗಳನ್ನು ಈ ಸಣ್ಣ ಆಧಾರ ಸ್ತಂಭಗಳ ಮೇಲೆ ಅತ್ಯಂತ ಜಾಣ್ಮೆಯಿಂದ ಕೆತ್ತಿರುವುದು ಚಾಲುಕ್ಯರ ಶಿಲ್ಪಕಲಾ ಪ್ರೌಢಿಮೆಯ ಪ್ರತೀಕವಾಗಿದೆ.[64]

ಸರಸ್ವತೀ ಶಿಲ್ಪಗಳು, ಉಬ್ಬು ಶಿಲ್ಪಗಳಾಗಿ ಕಂಬಗಳ ಮೇಲೆ, ಭಿತ್ತಿಯಲ್ಲಿ, ಗೂಡುಗಳ ಲಲಾಟದಲ್ಲಿ, ಬಾಗಿಲುವಾಡದಲ್ಲಿ, ಛಾವಣಿಯಲ್ಲಿ ಮತ್ತು ಶಿಖರಗಳಲ್ಲೂ ರಚಿತವಾಗಿವೆ. ಭಿತ್ತಿಯಲ್ಲಿ ಅತಿ ಹೆಚ್ಚು ವೈವಿಧ್ಯಮಯವಾದ ಸರಸ್ವತೀ ಶಿಲ್ಪಗಳು ಕಾಣಸಿಗುತ್ತವೆ. ದ್ವಿಭುಜದಿಂದ ಹಿಡಿದು ದಶಭುಜಗಳನ್ನು ಹೊಂದಿರುವ ನೃತ್ಯ ಸರಸ್ವತೀ ಶಿಲ್ಪಗಳು ಸಿಗುವುದು ಭಿತ್ತಿಯಲ್ಲಿ ಮಾತ್ರ. ಹಳೇಬೀಡಿನ ಹೊಯ್ಸಳೇಶ್ವರ–ಶಾಂತಲೇಶ್ವರ ದೇವಾಲಯವೊಂದರಲ್ಲೇ ಸುಮಾರು 50ಕ್ಕೂ ಹೆಚ್ಚು ಬಗೆಯ ಸರಸ್ವತೀ ಶಿಲ್ಪಗಳನ್ನು

---

64. ಕರ್ನಾಟಕ ಗೆಸೆಟಿಯರ್, ಧಾರವಾಡ ಜಿಲ್ಲೆ ಪು.926

ಕಾಣಬಹುದು. ಲಕ್ಷ್ಮೀ ಮತ್ತು ಪಾರ್ವತಿಯರ ಜೊತೆಯಲ್ಲಿ, ಗಣಪತಿ ಮತ್ತು ಹಯಗ್ರೀವರ ನಡುವೆ, ಶಿವ ಮತ್ತು ಗಣಪತಿಯರ ಜೊತೆಗೆ, ಬ್ರಹ್ಮನ ಜೊತೆ, ಲಕ್ಷ್ಮೀ ನರಸಿಂಹರ ಜೊತೆ ಇರುವಂತೆ ಸರಸ್ವತೀ ಶಿಲ್ಪಗಳನ್ನು ಕೆತ್ತಲಾಗಿದೆ.

ಕರ್ನಾಟಕದಲ್ಲಿ ಸುಮಾರು 300ಕ್ಕೂ ಹೆಚ್ಚು ಸರಸ್ವತೀ ಶಿಲ್ಪಗಳು ಕಂಡುಬಂದಿವೆ. ಅವುಗಳ ವೈವಿಧ್ಯ ಬೆರಗು ಹುಟ್ಟಿಸುವಂಥದ್ದು. ನಾವು ಸಂದರ್ಶಿಸಿರುವ ಸುಮಾರು 220ಕ್ಕೂ ಹೆಚ್ಚು ಶಿಲ್ಪಗಳನ್ನು ಒಂದೊಂದನ್ನೇ ಪ್ರತ್ಯೇಕವಾಗಿ ಅಧ್ಯಯನ ಮಾಡುವುದು ಕಷ್ಟಸಾಧ್ಯ. ಆದುದರಿಂದ ಒಟ್ಟಾರೆಯಾಗಿ ಒಂದು ಶಾಸ್ತ್ರೀಯವಾದ ಅಧ್ಯಯನ ಕ್ರಮವನ್ನು ಇಲ್ಲಿ ಅನುಸರಿಸಲು ಪ್ರಯತ್ನಿಸಲಾಗಿದೆ.

ಈ ಹಿಂದೆ ಕೆಲವು ವಿದ್ವಾಂಸರು ಶಿಲ್ಪಗಳ ಅಧ್ಯಯನಕ್ಕೆ ತಮ್ಮದೇ ಆದ ವಿಭಾಗ ಕ್ರಮವನ್ನು ಅನುಸರಿಸಿರುವುದು ಉಂಟು. ಇಂತಹ ವಿಭಾಗಕ್ರಮದಲ್ಲಿ ಕೆಲವು ಮಾದರಿಗಳನ್ನು ನಾವಿಲ್ಲಿ ಗಮನಿಸಬಹುದು.

ಕೆ. ಭಟ್ಟಾಚಾರ್ಯ ಅವರು ಸರಸ್ವತೀ ಶಿಲ್ಪಗಳು ಇರುವ ಭಂಗಿಯನ್ನು ಆಧರಿಸಿ ಮೂರು ಗುಂಪುಗಳನ್ನಾಗಿ ಮಾಡಿದ್ದಾರೆ.[65] ಆಸೀನ, ಸ್ಥಾನಕ ಮತ್ತು ನೃತ್ಯ ಸರಸ್ವತೀ ಎಂದು ವಿಂಗಡಣೆ ಮಾಡಿ, ಮಧ್ಯೆ ಮಧ್ಯೆ ಭುಜಸಂಖ್ಯೆಯನ್ನೂ ಸೇರಿಸುತ್ತಾರೆ. ನಿರಂಜನ್ ಘೋಷ್ ಎಂಬುವವರು ದ್ವಿಭುಜ, ಚತುರ್ಭುಜ ಎಂದು ಅಷ್ಟೇನು ಸಮರ್ಪಕವಲ್ಲದ ವಿಭಾಗಕ್ರಮವನ್ನು ಅನುಸರಿಸಿದ್ದಾರೆ.[66] ಸಿ.ಬಿ.ಸೀತಾರಾಮ್ ಅವರು ಭುಜಸಂಖ್ಯೆಯನ್ನಷ್ಟೇ ಆಧರಿಸಿ ದ್ವಿಭುಜ, ಚತುರ್ಭುಜ, ಷಡ್ಭುಜ, ಅಷ್ಟಭುಜ ಮತ್ತು ದಶಭುಜ ಎಂದು ಐದು ಭಾಗಗಳನ್ನಾಗಿ ಶಿಲ್ಪಗಳನ್ನು ವಿಂಗಡಿಸಿದ್ದಾರೆ.[67] ಆದರೆ ಈ ವರ್ಗೀಕರಣದಲ್ಲಿ ಶಿಲ್ಪಗಳ ಭಂಗಿಯನ್ನು ಸಂಪೂರ್ಣ ಕಡೆಗಣಿಸಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಉಪಲಬ್ಧವಿರುವ ಶಿಲ್ಪಗಳ ಭಂಗಿ ಮತ್ತು ಭುಜಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ವಿಭಾಗ ಮಾಡಲಾಗಿದೆ.

1. ಆಸೀನ ಸರಸ್ವತೀ ಶಿಲ್ಪಗಳು
    - 1.1. ದ್ವಿಭುಜ
    - 1.2. ಚತುರ್ಭುಜ
    - 1.3. ಷಡ್ಭುಜ

---

65. K. Bhattacharyya: Sarasvati –A study on her Concept and Iconography, P.80
66. Niranjan Ghosh: Sri Sarasvati in Indain Art and Literature, P.31
67. Niranjan Ghosh: Sri Sarasvati in Indain Art and Literature, P.42-45

2. ಸ್ಥಾನಕ ಸರಸ್ವತೀ ಶಿಲ್ಪಗಳು

2.1. ದ್ವಿಭುಜ

2.2. ಚತುರ್ಭುಜ

3. ತ್ರಿಭಂಗಿ ಸರಸ್ವತೀ ಶಿಲ್ಪಗಳು

3.1. ದ್ವಿಭುಜ

3.2. ಚತುರ್ಭುಜ

4. ನೃತ್ಯ ಸರಸ್ವತೀ ಶಿಲ್ಪಗಳು

4.1. ದ್ವಿಭುಜ

4.2. ಚತುರ್ಭುಜ

4.3. ಷಡ್ಭುಜ

4.4. ಅಷ್ಟಭುಜ

4.5. ದಶಭುಜ

5. ಬ್ರಹ್ಮನ ಜೊತೆಯಲ್ಲಿರುವ ಸರಸ್ವತೀ ಶಿಲ್ಪಗಳು

ಸಂದರ್ಶಿಸಿರುವ ಶಿಲ್ಪಗಳನ್ನು ಅವುಗಳ ಪ್ರಮುಖ ಲಕ್ಷಣಗಳಿಗೆ ಅನುಸಾರವಾಗಿ ಕೆಳಕಂಡಂತೆ ವಿಂಗಡಿಸಲಾಗಿದೆ.

ಭಂಗಿ	ಭುಜಸಂಖ್ಯೆ					ಬ್ರಹ್ಮನ ಜೊತೆ	ಒಟ್ಟು
	2	4	6	8	10		
ಆಸೀನ	6	129	2	–	–	7	144
ಸ್ಥಾನಕ	1	19	–	–	–	–	20
ತ್ರಿಭಂಗಿ	7	12	–	–	–	–	19
ನೃತ್ಯ	2	11	19	11	2	–	45
ಒಟ್ಟು	16	171	21	11	2	7	228

ಪ್ರತಿ ವಿಭಾಗದಲ್ಲೂ ಕೆಲವು ಪ್ರಮುಖ ಶಿಲ್ಪಗಳನ್ನು ಗಮನಿಸಲಾಗಿದೆ. ಶಿಲ್ಪದಿಂದ ಶಿಲ್ಪಕ್ಕೆ ಇರುವ ಕನಿಷ್ಠ ವ್ಯತ್ಯಾಸವನ್ನು ಆಧರಿಸಿ ಶಿಲ್ಪಗಳನ್ನು ಆಯ್ದುಕೊಳ್ಳಲಾಗಿದೆ. ಉಳಿದಂತೆ ಎಲ್ಲ ಶಿಲ್ಪಗಳನ್ನು ಅವುಗಳ ಪ್ರಮುಖ ಲಕ್ಷಣದೊಂದಿಗೆ ಅನುಬಂಧದಲ್ಲಿ ನೀಡಲಾಗಿದೆ. ಅವುಗಳು ದೊರೆತ ಊರು, ದೇವಾಲಯ, ಕಾಲ, ಶಿಲ್ಪಲಕ್ಷಣಗಳು ಮೊದಲಾದ ವಿವರಗಳನ್ನು ನೀಡಲಾಗಿದೆ.

1.1. ಆಸೀನ ದ್ವಿಭುಜ ಸರಸ್ವತೀ ಶಿಲ್ಪಗಳು

ಸುಮಾರು ಕ್ರಿ.ಶ.1115–1120ರಲ್ಲಿ ನಿರ್ಮಾಣವಾಗಿರುವ, ಹಾವೇರಿ ಜಿಲ್ಲೆ ರಾಣಿಬೆನ್ನೂರು ತಾಲ್ಲೂಕು, ತುಂಗಭದ್ರಾ ನದಿಯ ತಟದಲ್ಲಿರುವ ಚೌಡದಾನಪುರದ ಮುಕ್ತೇಶ್ವರ ದೇವಾಲಯ ಕಲ್ಯಾಣದ ಚಾಲುಕ್ಯ ವಾಸ್ತುಶಿಲ್ಪದ ಮಹೋನ್ನತ ಕಲಾಕೃತಿ. ಈ ದೇವಾಲಯದ ಹೊರ ಭಿತ್ತಿಯಲ್ಲಿ ಅಸಂಖ್ಯಾತ ಕಿರುಶಿಲ್ಪಗಳೊಂದಿಗೆ, ಕೇವಲ ಅರ್ಧ ಅಡಿ ಎತ್ತರದ ಎರಡು ಸರಸ್ವತಿಯ ಶಿಲ್ಪಗಳಿವೆ. ಇದರಲ್ಲಿ ಒಂದು ದ್ವಿಭುಜ ಸರಸ್ವತಿಯಾಗಿದ್ದು, ಎಡಗೈಯಲ್ಲಿ ಅಕ್ಷಮಾಲೆ ಮತ್ತು ಬಲಗೈಯಲ್ಲಿ ಪುಸ್ತಕವಿದೆ. ಕಿರುಶಿಲ್ಪವಾದರೂ ಕರ್ಣಕುಂಡಲ, ಕಿರೀಟ, ತೋಳಬಂದಿ, ಹಾರ ಮತ್ತು ಯಜ್ಞೋಪವೀತವನ್ನು ಸ್ಪಷ್ಟವಾಗಿ ಬಿಡಿಸಲಾಗಿದೆ. ಶಿಲ್ಪದ ಸುತ್ತಲೂ ಪ್ರಭಾವಳಿಯಂತೆ ಕಮಲದ ಮೊಗ್ಗುಗಳು ಸುತ್ತುವರೆದಿರುವುದು ಸುಂದರವಾಗಿ ಕಾಣುತ್ತದೆ. ಇದೇ ಲಕ್ಷಣಗಳುಳ್ಳ, ಆದರೆ ಸುತ್ತುವರೆದ ಮೊಗ್ಗುಗಳಿಲ್ಲದ ಸರಸ್ವತೀ ಶಿಲ್ಪವನ್ನು ಅರಸೀಕೆರೆಯ ಶಿವಾಲಯದ ಭುವನೇಶ್ವರಿಯಲ್ಲಿ ಕಾಣಬಹುದು.

ಕೊಪ್ಪಳಜಿಲ್ಲೆ ಚಂದ್ರಗಿರಿಯಲ್ಲಿರುವ ಚಂದಾಲಿಂಗೇಶ್ವರ ದೇವಸ್ಥಾನದ ಪ್ರಾಕಾರದಲ್ಲಿರುವ ಗೂಡಿನಲ್ಲಿರುವ ಸರಸ್ವತೀ ಶಿಲ್ಪ ತನ್ನೆರಡು ಕೈಗಳಲ್ಲಿ ಲೇಖನಿ ಮತ್ತು ಕುಡಿಕೆಯನ್ನು ಹಿಡಿದಿರುವುದು ವಿಶೇಷವಾಗಿದೆ. ಸುಮಾರು ಹನ್ನೊಂದನೆಯ ಶತಮಾನದ ಈ ಶಿಲ್ಪವು ಪ್ರಮಾಣಬದ್ಧವಾಗಿದೆ. ಕಾಲಂದಿಗೆ, ತೋಳಬಂದಿ, ಬಳೆ, ಕಂಠೀಹಾರ, ಸ್ತನಹಾರ, ಕರ್ಣಕುಂಡಲ ಮತ್ತು ಎತ್ತರವಲ್ಲದ ಕಿರೀಟದಿಂದ ಆಲಂಕೃತವಾಗಿದೆ. ವಸ್ತ್ರದ ರೇಖೆಗಳೂ ಕಾಣುವಂತಹ ಸೂಕ್ಷ್ಮ ಕೆತ್ತನೆಯಿದೆ. ಸುತ್ತಲೂ ಆಲಂಕೃತವಾದ ಪ್ರಭಾವಳಿ ಇದೆ. ಇಲ್ಲಿಯೇ ಇರುವ ಇನ್ನೊಂದು ಚತುರ್ಭುಜ ಪುರುಷ ಶಿಲ್ಪ ಸರಸ್ವತೀ ಶಿಲ್ಪವನ್ನೇ ಹೋಲುತ್ತದೆ. ಮೂರು ಕೈಗಳಲ್ಲಿ ಲೇಖನಿ, ಅಂಕುಶ, ಪಾಶ ಇದ್ದು ಇನ್ನೊಂದು ಹಸ್ತ ಧ್ಯಾನಮುದ್ರೆಯಲ್ಲಿದೆ. ಪೀಠದಲ್ಲಿ ಕುದುರೆಯ ಕೆತ್ತನೆಯಿದೆ.

ಹಂಪೆಯ ವಿರೂಪಾಕ್ಷ ಮಂದಿರದ ಪ್ರಾಕಾರದ ಬಲಬದಿಯಲ್ಲಿ ವೀಣಾಸರಸ್ವತೀ ಶಿಲ್ಪವಿದೆ. ಎರಡೂ ಕೈಗಳಲ್ಲಿ ಹಿಡಿದಿರುವ ವೀಣೆಯು ದಂಡದಂತೆ ಕಾಣುತ್ತದೆ. ಶಿಲ್ಪಕ್ಕೆ ಸೂಕ್ಷ್ಮ ಕೆತ್ತನೆಗಳುಳ್ಳ ಪ್ರಭಾವಳಿ ಇದೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕಲಾಭವನದ ಪ್ರವೇಶದ್ವಾರದಲ್ಲಿ ಇತ್ತೀಚಿಗೆ (2003) ಸ್ಥಾಪಿಸಲಾಗಿರುವ ಸರಸ್ವತೀ ಶಿಲ್ಪವೂ ಇದೇ ಲಕ್ಷಣಗಳನ್ನು ಹೊಂದಿದೆ. ಆದರ ಕೈಯಲ್ಲಿರುವ ವೀಣೆ ದಂಡದಂತಿರದೆ, ಆಧುನಿಕ ವೀಣೆಯನ್ನು ಹೋಲುತ್ತದೆ.

1.2. ಆಸೀನ ಚತುರ್ಭುಜ ಸರಸ್ವತೀ ಶಿಲ್ಪಗಳು

ಈ ಪ್ರಕಾರದ ಸುಮಾರು 140ಕ್ಕೂ ಹೆಚ್ಚು ಶಿಲ್ಪಗಳನ್ನು ಇಲ್ಲಿ ಗಮನಿಸಿದ್ದೇನೆ. ಕರ್ನಾಟಕದಲ್ಲಿ ದೊರೆಯುವ ಪ್ರತೀ ಎರಡು ಸರಸ್ವತೀ ಶಿಲ್ಪಗಳಲ್ಲಿ ಒಂದು ಶಿಲ್ಪ ಈ ರೀತಿಯದ್ದಾಗಿರುತ್ತದೆ. ಇವುಗಳಲ್ಲಿ

ಬಹುತೇಕ ಶಿಲ್ಪಗಳು ಪೂಜೆಗೆ ಬಳಸುತ್ತಿದ್ದವುಗಳಾಗಿವೆ. ಶಿಲ್ಪದಿಂದ ಶಿಲ್ಪಕ್ಕೆ ಸಣ್ಣಪುಟ್ಟ ವ್ಯತ್ಯಾಸಗಳು ಇರುತ್ತವೆ. ಕೆಲವು ಶಿಲ್ಪಗಳಲ್ಲಿ ಹಂಸವಾಹನವಿದ್ದರೆ, ಕೆಲವು ಶಿಲ್ಪಗಳಲ್ಲಿ ಇರುವುದಿಲ್ಲ. ಕೆಲವು ಶಿಲ್ಪಗಳಲ್ಲಿ ಸಹಾಯಕರು, ಚಾಮರಧಾರಿಣಿಯರು ಇದ್ದರೆ, ಇನ್ನು ಕೆಲವು ಶಿಲ್ಪಗಳಲ್ಲಿ ಏನೂ ಇರುವುದಿಲ್ಲ. ಹೀಗಾಗಿ ಅಧ್ಯಯನದ ಅನುಕೂಲತೆಗಾಗಿ, ಇವುಗಳಲ್ಲಿಯೇ ಸಣ್ಣ ಪುಟ್ಟ ವ್ಯತ್ಯಾಸಗಳನ್ನು ಬಿಟ್ಟು ಐದು ಉಪವಿಭಾಗಗಳನ್ನು ಮಾಡಿಕೊಳ್ಳಲಾಗಿದೆ. ಆದರೂ ಕೆಲವು ಶಿಲ್ಪಗಳು, ತ್ರುಟಿತ ಶಿಲ್ಪಗಳು ಈ ಉಪವಿಭಾಗಗಳಿಂದ ಹೊರಗೇ ಉಳಿಯುತ್ತವೆ.

1.2.1. ಗರ್ಭಗುಡಿಯಲ್ಲಿರುವ ಆಸೀನ ಚತುರ್ಭುಜ ಸರಸ್ವತೀ ಶಿಲ್ಪಗಳು

'ಸರಸ್ವತಿಯು ವೈದಿಕ ಮತ್ತು ಅಕ್ಷರ ದೇವತೆಯಾಗಿದ್ದುದರಿಂದ ಜನಪದರ ಬಳಿಗೆ ಬರಲಿಲ್ಲ. ಸ್ವತಂತ್ರವಾಗಿ ಬಂದಾಗ ಆಕೆಗೆ ಯಾವುದೇ ಪ್ರಾಮುಖ್ಯತೆಯಿಲ್ಲ. ಈ ಕಾರಣಗಳಿಂದಾಗಿ ಸರಸ್ವತಿಗೆ ಪ್ರತ್ಯೇಕ ದೇವಾಲಯವಾಗಲೀ, ಅರ್ಚನೆಯಾಗಲೀ ಇಲ್ಲ'[68] ಎಂಬ ಅಭಿಪ್ರಾಯವಿದೆ. ಇದು ಅವಸರದ ಅಭಿಪ್ರಾಯವೆಂಬುದಕ್ಕೆ, ಕರ್ನಾಟಕದ ಉದ್ದಗಲಕ್ಕೆ ಸಿಗುತ್ತಿರುವ ನೂರಾರು ಸರಸ್ವತಿಯ ಶಿಲ್ಪಗಳು ಹಾಗೂ ಸಹದೇವತೆಯಾಗಿ, ಪ್ರಧಾನದೇವತೆಯಾಗಿ ಸರಸ್ವತಿಯನ್ನು ಪೂಜಿಸುತ್ತಿರುವ ಹಲವಾರು ಸರಸ್ವತಿಯ ದೇವಾಲಯಗಳು ಸಾಕ್ಷಿಯಾಗಿವೆ. ಹಿಂದೆ ಹಲವಾರು ಸರಸ್ವತಿಯ ದೇವಾಲಯಗಳು ಇದ್ದುದ್ದಕ್ಕೆ ಶಾಸನಗಳ ಆಧಾರಗಳೂ ಇವೆ. ಗದುಗಿನ ತ್ರಿಕೂಟೇಶ್ವರ ದೇವಾಲಯದ ಆವರಣದಲ್ಲಿರುವ ಸರಸ್ವತೀ ದೇವಾಲಯ ಕಲ್ಯಾಣದ ಚಾಲುಕ್ಯ ಶೈಲಿಯ ಅತ್ಯುತ್ತಮ ಕೃತಿಗಳಲ್ಲೊಂದು. ಈ ದೇವಾಲಯದ ಶಿಲ್ಪಕಲಾಕೃತಿಗಳು ಆ ಕಾಲದ ಕಲಾ ನೈಪುಣ್ಯತೆಗೆ ಉತ್ತಮ ನಿದರ್ಶನಗಳಾಗಿವೆ ಎಂದು ಖ್ಯಾತ ಕಲಾವಿಮರ್ಶಕ ಫರ್ಗುಸನ್ ಅಭಿಪ್ರಾಯಪಡುತ್ತಾರೆ. ಧಾರವಾಡ ಜಿಲ್ಲೆಯ ಎಲ್ಲಾ ದೇವಾಲಯಗಳಿಗಿಂತಲೂ ಗದುಗಿನ ಸರಸ್ವತಿಯ ದೇವಾಲಯವು ಉತ್ತಮ ವಾಸ್ತುಶಿಲ್ಪಕೌಶಲ್ಯದ ಪ್ರತೀಕವಾಗಿದೆ. ಏಕೆಂದರೆ, ಇಲ್ಲಿ ಮೂಡಿಬಂದಿರುವ ಕಲಾಸೂಕ್ಷ್ಮತೆ, ಆಕರ್ಷಕ ಶಿಲ್ಪ ಪ್ರೌಢಿಮೆ ಮತ್ತು ಚಾಲುಕ್ಯರ ಕಲಾಪ್ರಾವೀಣ್ಯತೆಗಳು, ಸಮಕಾಲೀನ ದೇವಾಲಯಗಳಿಗೆ ಹೋಲಿಸಿದಾಗ ವಾಸ್ತುಶಿಲ್ಪ ಪರಿಪಕ್ವತೆಯಲ್ಲಿ ಪ್ರಥಮವಾಗಿದೆ ಎಂದು ಹೆನ್ರಿ ಕಸಿನ್ಸ್ ಸರಸ್ವತೀ ದೇವಾಲಯಕ್ಕೆ ನುಡಿತೋರಣ ಕಟ್ಟಿದ್ದಾರೆ.[69] ಗರ್ಭಗುಡಿಯಲ್ಲಿ ಪ್ರಸನ್ನ ಮುಖಭಾವದಿಂದ ಪದ್ಮಾಸೀನ ಭಂಗಿಯಲ್ಲಿ ಕುಳಿತಿರುವ ಸರಸ್ವತಿಯ ನಾಲ್ಕೂ ಕೈಗಳು ಮುರಿದು ಹೋಗಿರುವುದು ದುರಂತವೇ ಸರಿ. ಕಂಬಗಳಲ್ಲಿ, ಬೋದಿಗೆಗಳ ಮೇಲೆ, ಭುವನೇಶ್ವರಿಯ ಪಟ್ಟಿಕೆಗಳಲ್ಲಿ ಇರುವ ನೂರಾರು ಕಿರು ಶಿಲ್ಪಗಳನ್ನು ಗಮನಿಸಿ

---

68. ಕಲವೀರ ಮನ್ವಾಚಾರ: ಮಾತೃದೇವತಾ ಆರಾಧನೆ (ಅಪ್ರಕಟಿತ ಮಹಾಪ್ರಬಂಧ). ಪು.114

69. ಕರ್ನಾಟಕ ಗ್ಯಾಸೆಟಿಯರ್, ಧಾರವಾಡ ಜಿಲ್ಲೆ ಪು.926

ಊಹಿಸುವುದಾದರೆ, ಮುರಿದು ಹೋದ ಕೈಗಳಲ್ಲಿ ಅಕ್ಷಮಾಲೆ, ಅಂಕುಶ, ಪಾಶ (ಪವಿತ್ರ) ಮತ್ತು ಪುಸ್ತಕ ಇದ್ದಿರಬಹುದು ಎಂದು ಊಹಿಸಬಹುದು. ಆ ಕಾಲದ ಇತರ ಸರಸ್ವತೀ ಶಿಲ್ಪಗಳ ಲಕ್ಷಣಗಳೂ ಇದೇ ಆಗಿರುವುದನ್ನು ಗಮನಿಸಬಹುದು.

ಶಿಲ್ಪದ ವಿವರಗಳು ಹೀಗಿವೆ: ಸರಸ್ವತಿಯು ಕುಳಿತಿರುವ ಭದ್ರಪೀಠದ ಮುಂಭಾಗದ ಮಧ್ಯೆ ಹಂಸವಿದೆ. ಪೀಠದ ಸುತ್ತಲೂ ನರ್ತಕಿಯರಿದ್ದಾರೆ. ಎರಡೂ ಕಡೆ ಆನೆಗಳಿವೆ. ಪೀಠದ ಮೇಲೆ ಮೇಲ್ಮುಖವಾಗಿರುವ ಕಮಲದ ಮೇಲೆ ಸರಸ್ವತೀ ಪದ್ಮಾಸನದಲ್ಲಿ ಕುಳಿತಿದ್ದಾಳೆ. ಕಾಲಿನ ಬೆರಳಿನಲ್ಲಿ ಕಾಲುಂಗುರಗಳಿವೆ. ಕಾಲಿನಲ್ಲಿ ಸರಪಳಿ (ಪಾದಜಾಲಕ) ಮತ್ತು ಕಾಲಂದಿಗೆಗಳು ಇವೆ. ಧರಿಸಿರುವ ವಸ್ತ್ರವು ಕಾಲಂದಿಗೆಯವರೆಗೂ ಇದ್ದು, ಅತ್ಯಂತ ಸೂಕ್ಷ್ಮ ರೇಖಾಚಿತ್ರಗಳಿಂದಲೂ, ನಿರಿಗೆಗಳಿಂದಲೂ ಚಿತ್ತಾರಗೊಂಡಿದೆ. ಕಟಿಯಿಂದ ಇಳಿಬಿದ್ದಿರುವ ಉರಹಾರವು ಮಣಿಗಳಿಂದ ಕೂಡಿದೆ. ಸೊಂಟಪಟ್ಟಿಕೆಯ ಮೇಲಿಂದ ಜಾರಿರುವ ವಸ್ತ್ರದ ಕುಚ್ಚು, ಕಾಲಿನ ಮೇಲಿಂದ ಜಾರಿ ಕಮಲದ ದಳಗಳನ್ನು ಮುಟ್ಟುತ್ತಿದೆ. ಉನ್ನತವಾದ ಸ್ತನಗಳ ಮೇಲಿಂದ ನಾಭಿಯವರೆಗೂ ವಿಸ್ತರಿಸಿರುವ ಸ್ತನಹಾರ, ತ್ರಿವಳಿಸರ, ಏಕಾವಳಿಸರ ಮತ್ತು ಕಂಠಿಕೆಗಳು ಕೊರಳನ್ನು ಅಲಂಕರಿಸಿವೆ. ಕೈಗಳು ಮುರಿದಿರುವುದರಿಂದ ಅವುಗಳಲ್ಲಿ ಇದ್ದಿರಬಹುದಾದ ಕಡಗಗಳಾಗಲೀ ಮತ್ತಾವುದೇ ಆಭರಣಗಳನ್ನಾಗಲೀ ಗುರುತಿಸಲಾಗುವುದಿಲ್ಲ. ತೋಳಬಂದಿಗಳು ಮತ್ತು ಭುಜಕೀರ್ತಿಗಳು ಸೂಕ್ಷ್ಮ ಕೆತ್ತನೆಯಿಂದ ಕೂಡಿವೆ. ಸುರುಳಿಗೂದಲು ಭುಜದವರೆಗೂ ವಿಸ್ತರಿಸಿ ಭುಜಕೀರ್ತಿಯ ಹಿಂಬದಿಯನ್ನು ಮುಚ್ಚಿದೆ. ಕಿವಿಗಳಲ್ಲಿ ಮಕರಕುಂಡಲಗಳಿವೆ. ಧರಿಸಿರುವ ಕರಂಡಮಕುಟವು ಸುಂದರವಾಗಿದ್ದು, ಅದರಲ್ಲಿ ಕರ್ಣಪುಷ್ಪ, ಮುಕ್ತಾಫಲಗಳನ್ನು ಕಾಣಬಹುದಾಗಿದೆ. ಮುಂಗುರುಳು ಕರಂಡಮಕುಟದ ಹೊರಗೆ ಚಾಚಿರುವುದನ್ನೂ ಕಾಣಬಹುದಾಗಿದೆ. ಹಿಂಬದಿಗೆ ಪ್ರಭಾಚಕ್ರವಿದೆ. ಪ್ರಭಾವಳಿ ಇರುವುದಿಲ್ಲ. ಕಣ್ಣುಗಳು ಅರೆಬಿರಿದಿವೆ. ಮುಖದ ಮೇಲೆ ಮುಗುಳುನಗೆ ಲಾಸ್ಯವಾಡುತ್ತಿದ್ದು ಇಡೀ ಶಿಲ್ಪವೇ ಜೀವಂತ ಪುತ್ಥಳಿಯಂತೆ ಕಂಗೊಳಿಸುತ್ತದೆ.

ಇಷ್ಟೊಂದು ಅದ್ಭುತವಾದ ಶಿಲ್ಪವನ್ನು ಕೆತ್ತಿದ ಕಲೆಗಾರ ಯಾರಿರಬಹುದು ಎಂಬ ಪ್ರಶ್ನೆ ಸಹಜವಾದುದೇ ಆಗಿದೆ. ಬೇಲೂರಿನ ಚೆನ್ನಕೇಶವ ದೇವಾಲಯದ ಕಂಬದ ಮೇಲಿರುವ ಮೂವತ್ತೇಳನೆಯ ಸಾಲಭಂಜಿಕೆಯ ಕೆಳಗಿರುವ ಶಾಸನ[70] ಈ ಪ್ರಶ್ನೆಗೆ ಉತ್ತರ ಹೇಳುತ್ತದೆ. "ಶ್ರೀಮತು ಗದುಗಿನ ಸ್ವಯಂಭು ತ್ರಿಕುಟೇಶ್ವರದೇವರ ವಿದ್ಯಾಮನ್ತ ಸುಜನಜನಮನೋರಂಜನ ಸರಸ್ವತೀ ಪಾದಾಂಭೋಜ ರೂವಾರಿ ಜಗದಳ ಕಾಡೋಜನ ಪುತ್ರ ನಾಗೋಜನ ಹಸ್ತ ಕಶಳ......"

---

70. ಎ.ಕ. 9, ಬೇಲೂರು 88

ಮೂವತ್ತೇಳನೆಯ ಸಾಲಭಂಜಿಕೆಯ ರೂವಾರಿ ನಾಗೋಜ ಎಂಬುದು ಸ್ಪಷ್ಟ. ಈ ನಾಗೋಜನ ತಂದೆಯೇ ಜಗದಳ ಕಾಡೋಜ. ಈ ಶಾಸನೋಕ್ತ ಕಾಡೋಜನೇ ಗದುಗಿನ ಸರಸ್ವತೀ ಶಿಲ್ಪದ ಕಲಾವಿದ.

ಬೇಲೂರಿನ ಚೆನ್ನಕೇಶವ ದೇವಾಲಯದ ನಿರ್ಮಾಣ ಕಾಲ ಕ್ರಿ.ಶ. 1117. ಈ ದೇವಾಲಯದ ನಿರ್ಮಾಣ ಕಾರ್ಯದಲ್ಲಿ ಭಾಗವಹಿಸಿದ್ದ ನಾಗೋಜನ ತಂದೆ ಸೃಷ್ಟಿಸಿದ ಗದುಗಿನ ಸರಸ್ವತೀ ಶಿಲ್ಪದ ಕಾಲ ಸುಮಾರು ಹನ್ನೊಂದನೇ ಶತಮಾನದ ಕೊನೆಯ ಭಾಗ ಎಂದು ನಿರ್ವಿವಾದವಾಗಿ ಹೇಳಬಹುದು.

ಹಿರೇಕೆರೂರು ತಾಲ್ಲೂಕು ಮೇದೂರಿನಲ್ಲಿ ಅತ್ಯಂತ ಸಾಧಾರಣವಾದ ಗುಡಿಯೊಂದಿದೆ. ಇದು ಯಾವುದೇ ದೇವಾಲಯದ ಭಾಗವಾಗಿರದೆ ಸ್ವತಂತ್ರ ಗುಡಿಯಾಗಿದೆ. ಆದರೆ ಅದರಲ್ಲಿರುವ, ಸುಮಾರು ಹನ್ನೊಂದನೇ ಶತಮಾನಕ್ಕೆ ಸೇರಿದ ಸರಸ್ವತೀ ಶಿಲ್ಪವನ್ನು ಗಮನಿಸಿದರೆ, ಒಂದು ಕಾಲದಲ್ಲಿ ಅದು ಒಂದು ಉತ್ತಮ ದೇವಾಲಯವಾಗಿದ್ದಿರಬಹುದಾದ ಎಲ್ಲಾ ಸಾಧ್ಯತೆಗಳಿವೆ. ಸುಮಾರು ನಾಲ್ಕು ಅಡಿ ಎತ್ತರವಿರುವ ಆಸೀನ ಚತುರ್ಭುಜ ಸರಸ್ವತಿಯ ಶಿಲ್ಪದ ಕೈಗಳಲ್ಲಿ ಅಕ್ಷಮಾಲೆ, ಅಂಕುಶ, ಪವಿತ್ರ ಮತ್ತು ಪುಸ್ತಕಗಳು ಇವೆ. ಪೀಠದಲ್ಲಿ ಹಂಸವಿದೆ. ಅಷ್ಟೊಂದು ಸೂಕ್ಷ್ಮ ಕುಸುರಿ ಕೆಲಸಗಳಿಲ್ಲದಿದ್ದರೂ, ಗದಗಿನ ಶಿಲ್ಪವನ್ನೇ ಹೋಲುವ ಈ ಶಿಲ್ಪಕ್ಕೆ ಪ್ರಭಾವಳಿ ಇದೆ.

ಹಾಸನ ಜಿಲ್ಲೆ ಅಡಗೂರಿನಲ್ಲಿ ಸುಮಾರು ಹನ್ನೊಂದನೇ ಶತಮಾನದಲ್ಲಿ ನಿರ್ಮಾಣವಾಗಿರುವ ತ್ರಿಕೂಟಾಚಲ ಲಕ್ಷ್ಮೀನಾರಾಯಣ ದೇವಾಲಯವಿದೆ. ಮುಖ್ಯಗರ್ಭಗುಡಿಯಲ್ಲಿ ಲಕ್ಷ್ಮೀನಾರಾಯಣ, ಎಡಭಾಗದಲ್ಲಿ ವೇಣುಗೋಪಾಲನ ಶಿಲ್ಪವಿದ್ದರೆ, ಉತ್ತರದ (ಎಡಭಾಗದ) ಗರ್ಭಗುಡಿಯಲ್ಲಿ ಸರಸ್ವತಿಯ ವಿಗ್ರಹವಿದೆ. ಸುಮಾರು ಎರಡು ಅಡಿ ಎತ್ತರದ ಹಂಸಪೀಠದಮೇಲೆ ನಾಲ್ಕು ಅಡಿ ಎತ್ತರದ ಶಿಲ್ಪವಿದೆ. ಪದ್ಮಾಸೀನಳಾಗಿರುವ ಸರಸ್ವತಿಯ ಕಾಲಿನ ನೀಳವಾದ ಬೆರಳುಗಳಲ್ಲಿ ಉಂಗುರಗಳೂ, ಕಾಲಿನಲ್ಲಿ ಕಾಲಂದಿಗೆಗಳೂ, ಸರಪಳಿಯೂ ಇವೆ. ವಸ್ತ್ರವು ಕಾಲಂದಿಗೆಗಳವರೆಗೂ ವಿಸ್ತರಿಸಿದ್ದು, ಅದರ ನಿರಿಗೆಗಳೂ ಸ್ಪಷ್ಟವಾಗಿ ಮೂಡಿಬಂದಿವೆ. ಸೊಂಟಪಟ್ಟಿಕೆಯ ಮೇಲಿಂದ ಜಾರಿರುವ ವಸ್ತ್ರದ ಕುಚ್ಚು ಪದ್ಮಪೀಠದವರೆಗೂ ವಿಸ್ತರಿಸಿದೆ. ಯಜ್ಞೋಪವೀತವೂ ಪದ್ಮದವರೆಗೂ ಇಳಿಬಿದ್ದಿದ್ದು, ಸ್ತನಹಾರ ನಾಭಿವರೆಗೂ ಅಗಲವಾದ ಪದಕದೊಂದಿಗೆ ವಿಸ್ತರಿಸಿದೆ. ಕೊರಳಲ್ಲಿ ಪದಕಯುಕ್ತ ತ್ರಿವಳಿ ಹಾರವೂ ಮತ್ತು ರತ್ನಖಚಿತ ಕಂಠಿಕೆಯೂ ಇವೆ. ಅಕ್ಷಮಾಲೆಯೊಂದಿಗೆ ಚಿನ್ಮುದ್ರೆಯಲ್ಲಿ ಒಂದು ಕೈಯಿದ್ದರೆ, ಉಳಿದ ಮೂರರಲ್ಲಿ ಅಂಕುಶ, ಪವಿತ್ರ ಮತ್ತು ಪುಸ್ತಕ ಇವೆ. ಕೈಗಳಲ್ಲಿ ಬಳೆಗಳು ಮತ್ತು ಕಡಗ, ತೋಳಿನಲ್ಲಿ ತೋಳಬಂದಿಗಳಿದ್ದು, ಭುಜಕೀರ್ತಿಗಳೂ ಇವೆ. ಭುಜವನ್ನು ತಾಕುತ್ತಿರುವ ಮಕರಕುಂಡಲಗಳು ಮತ್ತು ಭುಜಕೀರ್ತಿಗಳವರೆಗೂ ವಿಸ್ತರಿಸಿರುವ ತಲೆಗೂದಲನ್ನು ಸೂಕ್ಷ್ಮವಾಗಿ ಬಿಡಿಸಲಾಗಿದೆ. ಉನ್ನತವಾದ

ಕರಂಡಮಕುಟ ಮತ್ತು ಅದರ ಹಿಂಬದಿಗೆ ಪ್ರಭಾಚಕ್ರವಿದೆ. ಪುಷ್ಪ, ಲತೆ ಮತ್ತು ಚಕ್ರಗಳಿಂದ ಕೂಡಿದ ಪ್ರಭಾವಳಿಯಿದ್ದು ಅದರ ಮಧ್ಯಭಾಗದಲ್ಲಿ ಸಿಂಹಮುಖದ ಕೀರ್ತಿಮುಖವಿದೆ.

ಹಾವೇರಿ ಜಿಲ್ಲೆ ಕಲಕೇರಿಯಲ್ಲಿ ಸೂರ್ಯನಾರಾಯಣ ದೇವಾಲಯವಿದೆ. ಇದರ ಶಾಸನೋಕ್ತ ಹೆಸರು ಜಯಸಿಂಗೇಶ್ವರ ದೇವಾಲಯ. ಕಾಲ ಸುಮಾರು ಕ್ರಿ.ಶ. 1186. ಇದೊಂದು ಚತುಷ್ಕೂಟ ದೇವಾಲಯವಾಗಿದ್ದು, ಮುಖ್ಯ ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಎಡಬದಿಯ ಗುಡಿಯು ವಿಷ್ಣುವಿನದಾಗಿದ್ದು ಈಗ ಅದರಲ್ಲಿದ್ದ ಶಿಲ್ಪವನ್ನು ಪಕ್ಕಕ್ಕೆ ಇಡಲಾಗಿದೆ. ಬಲಬದಿಯ ಗುಡಿ ಸರಸ್ವತಿಯದಾಗಿದ್ದು, ಅಲ್ಲಿದ್ದ ಶಿಲ್ಪವನ್ನು ವಿಷ್ಣುವಿನ ಗರ್ಭಗುಡಿಯ ಒಳಗೆ ಮೂಲೆಯಲ್ಲಿಡಲಾಗಿದೆ. ಅಲ್ಲಿದ್ದ ಹಂಸಪೀಠದ ಮೇಲೆ ಈಗ ನಾಗದಂಪತಿಗಳ ಶಿಲ್ಪಗಳನ್ನಿಡಲಾಗಿದೆ. ಪೂರ್ವದ ಗರ್ಭಗುಡಿಯಲ್ಲಿ ಸುಮಾರು ಆರು ಅಡಿ ಎತ್ತರದ ಸೂರ್ಯನ ಶಿಲ್ಪವಿದೆ. ನಡುವೆ ಸುಮಾರು ಆರು ಅಡಿ ಎತ್ತರದ ನಂದಿಯಿದೆ. ಇಲ್ಲಿನ ಸರಸ್ವತೀ ಶಿಲ್ಪ ಬಹುತೇಕ ಅಡಗೂರಿನ ಶಿಲ್ಪವನ್ನೇ ಹೋಲುತ್ತದೆಯಾದರೂ ಅದರ ಎರಡು ಕೈಗಳು, ಸ್ತನದ ಭಾಗ ಮತ್ತು ಕಿರೀಟದ ಭಾಗ ಭಗ್ನವಾಗಿ ಹೋಗಿವೆ.

ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು ಬಗ್ಗವಳ್ಳಿಯಲ್ಲಿಗುವ ತ್ರಿಕೂಟ ಕೇಶವ ದೇವಾಲಯದ ಬಲಬದಿಯ ಗರ್ಭಗುಡಿಯಲ್ಲಿ ಸರಸ್ವತೀ ಶಿಲ್ಪವಿದೆ. ಅದರ ಲಕ್ಷಣಗಳು ಬಹುತೇಕ ಅಡಗೂರಿನ ಶಿಲ್ಪವನ್ನೇ ಹೋಲುತ್ತದೆ. ಆದರೆ ಅಡಗೂರಿನಲ್ಲಿ ಪಾಶ ಪವಿತ್ರದ ಗಂಟಿನ ಆಕಾರದಲ್ಲಿದ್ದು ಅಲಂಕಾರಮಯವಾಗಿದ್ದರೆ, ಬಗ್ಗವಳ್ಳಿಯ ಶಿಲ್ಪದಲ್ಲಿ ಎರಡು ಮಡಿಕೆ ಹಗ್ಗದಂತೆ ಸರಳವಾಗಿ ಚಿತ್ರಿತವಾಗಿದೆ. ಪುಸ್ತಕ ಕುದುರೆಲಾಳಾಕೃತಿಯಲ್ಲಿ ಹೆಚ್ಚು ಬಾಗಿದೆ. ಪ್ರಭಾವಳಿಯಲ್ಲಿ ಎರಡು ಪಟ್ಟಿಗಳು ಮಾತ್ರ ಇವೆ.

ಅಬ್ಬಲೂರಿನ ಬ್ರಹ್ಮೇಶ್ವರ ದೇವಾಲಯದ ಬಳಿಯಿರುವ ಸರಸ್ವತೀ ದೇಗುಲದ ಶಿಲ್ಪವೂ ಮೇಲಿನ ಶಿಲ್ಪಗಳನ್ನೇ ಹೋಲುತ್ತದೆ. ಇಲ್ಲಿನ ಪ್ರಭಾವಳಿಯಲ್ಲಿ ಯಕ್ಷರನ್ನು ಬಿಡಿಸಲಾಗಿದ್ದು, ಕೆಳಭಾಗದಲ್ಲಿ ಚಾಮರಧಾರಿಣಿಯರಿದ್ದಾರೆ. ಇದೇ ಲಕ್ಷಣಗಳನ್ನುಳ್ಳ ಶಿಲ್ಪವೊಂದು ಹಾವೇರಿ ಜಿಲ್ಲೆ ಗಳಗನಾಥದ ಗಳಗನಾಥೇಶ್ವರ ದೇವಾಲಯದಲ್ಲಿದೆ.

ಸುಮಾರು ಕ್ರಿ.ಶ. 12–13ನೇ ಶತಮಾನಕ್ಕೆ ಸೇರಿದ ಗದಗ ಜಿಲ್ಲೆ ನಿಡಗುಂದಿಯಲ್ಲಿರುವ ಶಾಸನೋಕ್ತ ದಾಸಿಮೇಶ್ವರ ದೇವಾಲಯವು ತ್ರಿಕೂಟವಾಗಿದ್ದು, ಪ್ರಧಾನ ಗರ್ಭಗುಡಿಯಲ್ಲಿ ಶಿವಲಿಂಗವಿರುತ್ತದೆ. ಎಡಗಡೆಯ ಗರ್ಭಗುಡಿಯಲ್ಲಿ ಗರುಡಪೀಠದಮೇಲೆ ವಿಷ್ಣುವಿನ ಶಿಲ್ಪವಿದ್ದರೆ, ಬಲಗಡೆಯ ಗರ್ಭಗುಡಿಯ ಹಂಸಪೀಠದಲ್ಲಿ ಯಾವುದೇ ಶಿಲ್ಪವಿಲ್ಲ. ಅಲ್ಲಿ ಸರಸ್ವತಿಯ ಶಿಲ್ಪವೇ ಇತ್ತೆಂಬುದಕ್ಕೆ ದೇವಾಲಯದ ಪ್ರಾಕಾರದಲ್ಲಿರುವ ಶಾಸನದ ಶಿರೋಭಾಗದಲ್ಲಿರುವ ಸರಸ್ವತಿ, ಲಿಂಗ

ಮತ್ತು ವಿಷ್ಣುವಿನ ಶಿಲ್ಪಗಳೇ ಸಾಕ್ಷಿಯಾಗಿವೆ. ಕಲಕೇರಿಯ ದೇವಾಲಯದಂತೆ ಇಲ್ಲಿಯೂ ಬ್ರಹ್ಮಸ್ಥಾನವನ್ನು ಅವನ ಶಕ್ತಿಯಾದ ಸರಸ್ವತಿಗೆ ನೀಡಲಾಗಿದೆ. ಅಲ್ಲಿದ್ದ ಸರಸ್ವತಿಯ ಶಿಲ್ಪವನ್ನು ಈಗ ಊರೊಳಗಿರುವ ಬಸವಣ್ಣನಗುಡಿಯಲ್ಲಿ ಇಡಲಾಗಿದೆ. ಶಿಲ್ಪ ಕೇವಲ ಎರಡೂವರೆ ಅಡಿ ಎತ್ತರವಿದ್ದು, ತೀರಾ ಸಾಧಾರಣವಾಗಿದೆ. ಅದು ಅಕ್ಷಮಾಲೆ, ಅಂಕುಶ, ಪಾಶ ಮತ್ತು ಪುಸ್ತಕವನ್ನು ಧರಿಸಿರುವ ಆಸೀನ ಚತುರ್ಭುಜ ಮೂರ್ತಿಯಾಗಿದೆ.

ಗುಲಬರ್ಗಾ ಜಿಲ್ಲೆ ಚಿತ್ತಾಪುರ ತಾಲ್ಲೂಕು ನಿಪ್ಪಾಣಿಯ ಶಾಸನದಲ್ಲಿ ಸರಸ್ವತೀ ಮಂಟಪವೊಂದರ ಉಲ್ಲೇಖಗಳಿವೆ. ಶಾಸನದ ಕಾಲ ಕ್ರಿ.ಶ. 1037. ಜಗದೇಕಮಲ್ಲನ ರಾಣಿ ಸೋಮಲಾದೇವಿಯು ಸುಪಾಣಿಯನ್ನು (ನಿಪ್ಪಾಣಿಯ ಶಾಸನೋಕ್ತ ಹೆಸರು) ಆಳುತ್ತಿದ್ದಾಗ ಸರಸ್ವತಿಯನ್ನು ಪ್ರತಿಷ್ಠಾಪಿಸಿ, ದೇವಿಯ ಆರಾಧನೆಗೆ ಹಾಗೂ ಅಲ್ಲಿಯ ವಿದ್ಯಾರ್ಥಿಗಳ ಊಟ ವಸತಿಗೆಂದು 32 ಮತ್ತರು ಹೊಲ ಹಾಗೂ 2 ಮತ್ತರು ತೋಟಗಳನ್ನು ದಾನ ಕೊಟ್ಟ ಅಂಶವನ್ನು ಆ ಶಾಸನ ಉಲ್ಲೇಖಿಸುತ್ತದೆ. ರಾಣಿ ಸೋಮಲಾದೇವಿಯ ಮನೆವೆರ್ಗಡೆ ದುರ್ಗಸಿಂಹನು ಕವಿಜನಾಶ್ರಯನಿಷ್ಠೆಯೆಂದು ಸುಪಾಣಿಯಲ್ಲಿ ಸರಸ್ವತೀ ಮಂಟಪವನ್ನು ಮಾಡಿಸಿದ ಉಲ್ಲೇಖವೂ ಅದರಲ್ಲಿ ಇದೆ. ಈಗ ನಿಪ್ಪಾಣಿಯಲ್ಲಿ ಮಲಖಾನ್ (ಮಲ್ಲಿಕಾರ್ಜುನ) ದೇವಾಲಯವೆಂದು ಕರೆಯುವ ಹದಿನಾರು ಕಂಬಗಳ ಮಂಟಪವೊಂದಿದೆ. ಅದರ ಸುತ್ತಲಿನ ಗೋಡೆ ಇತ್ತೀಚಿನದು. ಉತ್ತರಾಭಿಮುಖವಾಗಿರುವ ಮಂಟಪದಲ್ಲಿ ಹಿಂಗೋಡೆಗೆ ಅಂಟಿಕೊಂಡಂತೆ ಒಂದು ಪೀಠವೂ ಇದೆ. ಪೀಠದಲ್ಲಿ ಯಾವುದೇ ಲಾಂಛನವಿರುವುದಿಲ್ಲ. ಇದೇ ಶಾಸನೋಕ್ತ ಸರಸ್ವತೀ ಮಂಟಪವೆಂದು ಊಹಿಸಲಾಗಿದೆ.[71] ಆದರೆ ಇಲ್ಲಿದ್ದಿರಬಹುದಾದ ಸರಸ್ವತೀ ಶಿಲ್ಪ ಮಾತ್ರ ಪತ್ತೆಯಾಗಿಲ್ಲ.

ಕ್ರಿ.ಶ.1087ಕ್ಕೇ ಸೇರಿದ ಗದಗ ಜಿಲ್ಲೆಯ ಕುರ್ತುಕೋಟಿಯ ಶಾಸನವು ಎರ್ಮ್ಮೆಗನೂರ ಬಳಿಯ ಕುರುಪಟ್ಟಿಯಲ್ಲಿ ಸುಂದರವಾದ ಸರಸ್ವತೀ ದೇವಾಲಯವನ್ನು ನಿರ್ಮಿಸಿದ್ದನ್ನು ಉಲ್ಲೇಖಿಸುತ್ತದೆ. ಆದರೆ ಸರಸ್ವತೀ ಶಿಲ್ಪವಾಗಲೀ, ದೇವಾಲಯವಾಗಲೀ ಪತ್ತೆಯಾಗಿಲ್ಲ.[72]

ನವಲಗುಂದ ತಾಲ್ಲೂಕಿನ ಬೆಳವಟಿಗೆಯ, ಕ್ರಿ.ಶ. 1093ರ ಶಾಸನದಲ್ಲಿ ಬೈರುಂಬರ ಮಲ್ಲಮಯ್ಯನು ಭೈರುಂಭೇಶ್ವರ ಮತ್ತು ಸರಸ್ವತೀ ದೇವತೆಗಳಿಗೆ ಅರವತ್ತು ಮತ್ತರು ಭೂಮಿಯನ್ನು ದಾನ ಮಾಡಿದ ಉಲ್ಲೇಖವಿದೆ. ಆದರೆ ಸಾಧಾರಣ ರಚನೆಯಾಗಿರುವ ಭೈರುಂಭೇಶ್ವರ ದೇವಾಲಯ ಬೆಳವಟಿಗೆಯಲ್ಲಿದೆಯಾದರೂ ಸರಸ್ವತೀ ಶಿಲ್ಪ ಪತ್ತೆಯಾಗಿಲ್ಲ.[73]

---

71. ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಗುಲ್ಬರ್ಗಾ ಜಿಲ್ಲೆ, ಪು.737
72. SII – XI-ii 134
73. SII -- XI-ii 138

1.2.2. ಚತುರ್ಭುಜಗಳಲ್ಲಿ ಅಕ್ಷಮಾಲೆ–ಅಂಕುಶ–ಪವಿತ್ರ–ಪುಸ್ತಕ ಹಿಡಿದಿರುವ ಆಸೀನ ಸರಸ್ವತೀ ಶಿಲ್ಪ

ಸರಸ್ವತಿಯ ಈ ವಿಧದ ಶಿಲ್ಪಗಳು ಗರ್ಭಗುಡಿಯಲ್ಲಿರುವ ಶಿಲ್ಪಗಳ ಲಕ್ಷಣಗಳನ್ನು ಬಹುತೇಕ ಹೊಂದಿರುತ್ತವೆ. ಇವುಗಳಲ್ಲಿ ಬಿಡಿಶಿಲ್ಪಗಳ ಜೊತೆಗೆ ಉಬ್ಬು ಶಿಲ್ಪಗಳೂ ಇವೆ. ಗರ್ಭಗುಡಿಯ ಶಿಲ್ಪಗಳಂತೆಯೇ ಈ ವಿಭಾಗದ ಬಿಡಿ ಶಿಲ್ಪಗಳು ಪೂಜಿಸುವ ಉದ್ದೇಶದಿಂದ ರಚಿತವಾದವುಗಳು. ಇವೆಲ್ಲವೂ ಪದ್ಮಾಸನದಲ್ಲಿರುವ ಶಿಲ್ಪಗಳಾಗಿದ್ದು, ಚತುರ್ಭುಜಗಳಲ್ಲಿ ಅಕ್ಷಮಾಲೆ–ಅಂಕುಶ–ಪಾಶ(ಪವಿತ್ರ)–ಪುಸ್ತಕ ಇರುತ್ತವೆ. ಪಾಶವು ಪವಿತ್ರದಾಕಾರದಲ್ಲಿ ಇರುವುದು ಈ ವಿಭಾಗ ಮಾಡಿಕೊಳ್ಳುವುದಕ್ಕೆ ಮುಖ್ಯ ಆಧಾರ. ಕರಂಡಮಕುಟ, ಮಕರಕುಂಡಲ, ಹಾರ, ಯಜ್ಞೋಪವೀತ, ಕಾಲಂದಿಗೆ, ಕಡಗ, ತೋಳಬಂದಿ, ಸಾಮಾನ್ಯವಾಗಿ ಈ ಬಗೆಯ ಶಿಲ್ಪಗಳಲ್ಲಿ ಕಂಡುಬರುವ ಆಭರಣಗಳು. ಪ್ರಭಾವಳಿ ಇರುತ್ತದೆ. ಇದಕ್ಕೆ ಅತ್ಯುತ್ತಮ ಉದಾಹರಣೆಯೆಂದರೆ, ಧಾರವಾಡ ಜಿಲ್ಲೆ ಬಾಳೂರಿನ ಸರಸ್ವತಿಯ ಶಿಲ್ಪ. ಈಗ ಇದು ಧಾರವಾಡದ ಕನ್ನಡ ರಿಸರ್ಚ್ ಇನ್ಸಿಟ್ಯೂಟ್ ಮ್ಯೂಸಿಯಂನಲ್ಲಿದೆ. ಹಂಸಪೀಠದ ಮೇಲೆ ಆಸೀನವಾಗಿರುವ ಚತುರ್ಭುಜ ಶಿಲ್ಪ ಅತ್ಯಂತ ಸುಂದರವಾಗಿ ಮೂಡಿಬಂದಿದೆ. ಶಿಲ್ಪಕ್ಕೆ ಪ್ರಭಾವಳಿ ಇಲ್ಲದಿದ್ದರೂ, ತಲೆ ಹಿಂಬದಿಗೆ ಪ್ರಭಾಮಂಡಲವನ್ನು ಕಲ್ಲಿನಲ್ಲೇ ಮೂಡಿಸಿರುವುದು ಗಮನ ಸೆಳೆಯುತ್ತದೆ. ನುಗ್ಗೆಹಳ್ಳಿಯ ಲಕ್ಷ್ಮೀನರಸಿಂಹ ದೇವಾಲಯ, ಹಳೇಬೀಡಿನ ಮ್ಯೂಸಿಯಮ್ಮಿನ ಎರಡು ಶಿಲ್ಪಗಳು, ಬಾಗಳಿ ಮ್ಯೂಸಿಯಮ್ಮಿನಲ್ಲಿರುವ ಒಂದು ಶಿಲ್ಪ, ಕೊರವಂಗಲದ ಬೂಚೇಶ್ವರ ದೇವಾಲಯ, ಅರಸೀಕೆರೆ (ಭಗ್ನ), ಸಿಂಧಘಟ್ಟ, ಹಿರೇಮಗಳೂರು, ಕಳಸಾಪುರ, ಬಸರಾಳು ಮತ್ತು ಹಾವೇರಿ ಜಿಲ್ಲೆ ಬಾಳಿಹಳ್ಳಿಯಲ್ಲಿ ಈ ರೀತಿ ಸರಸ್ವತಿಯ ಬಿಡಿಶಿಲ್ಪಗಳಿವೆ.

ಶ್ರವಣಬೆಳಗೊಳದ ಅಕ್ಕನ ಬಸದಿಯ ಶಿಖರದ ಮುಂಚಾಚಿನಲ್ಲಿ ಪೂರ್ವಕ್ಕೆ ಒಂದು ಜಿನಬಿಂಬವಿದೆ. ಮುಂಚಾಚಿನ ಉತ್ತರ ಮತ್ತು ದಕ್ಷಿಣದಲ್ಲಿ ಸುಮಾರು ಮುಕ್ಕಾಲು ಅಡಿ ಎತ್ತರದ ಸರಸ್ವತೀ ಶಿಲ್ಪಗಳನ್ನು ಕಾಣಬಹುದು. ಲಲಿತಾಸನದಲ್ಲಿರುವ ಈ ಶಿಲ್ಪಗಳು ಚಿಕ್ಕವಾದರೂ, ಸೂಕ್ಷ್ಮ ಕೆತ್ತನೆಗಳಿಂದ ಕೂಡಿವೆ. ಉತ್ತರದ ಶಿಲ್ಪದಲ್ಲಿ ಇಕ್ಕೆಲಗಳಲ್ಲಿ ಚಾಮರಧಾರಿಣಿಯರೂ ಇದ್ದಾರೆ. ಜಿನನಾಥಪುರದ ಶಾಂತಿನಾಥ ಬಸದಿಯ ಭಿತ್ತಿಯಲ್ಲಿ ಸುಮಾರು ಎರಡೂವರೆ ಅಡಿ ಎತ್ತರದ ಹಲವಾರು ಶಿಲ್ಪಗಳಿವೆ. ಅವುಗಳಲ್ಲಿ ಒಂದೇ ರೀತಿಯ ಮೂರು ಸರಸ್ವತೀ ಶಿಲ್ಪಗಳು ಇರುವುದು ವಿಶೇಷ. ಎರಡು ಶಿಲ್ಪಗಳು ಪದ್ಮಾಸೀನದಲ್ಲಿದ್ದರೆ, ಒಂದು ವೀರಾಸನದಲ್ಲಿದೆ. ಭಾಗಶಃ ಮೂರರ ಅಲಂಕಾರವೂ ಒಂದೇ ರೀತಿಯಿದೆ. ಹಾರ, ಸ್ತನಹಾರ, ಕೇಯೂರ, ಭುಜಕೀರ್ತಿ ಮತ್ತು ಯಜ್ಞೋಪವೀತದಲ್ಲಿ ವ್ಯತ್ಯಾಸವಿಲ್ಲ. ನಾಭಿಯಿಂದ ಕೆಳಗೆ ಜಾರಿರುವ ಅಲಂಕೃತ ವಸ್ತ್ರದ ಕುಚ್ಚು ಒಂದು ಶಿಲ್ಪದಲ್ಲಿ ಕಾಲಿನ ಕೆಳಗಡೆಯಿಂದ ಬಂದಿದ್ದರೆ, ಇನ್ನೊಂದು ಶಿಲ್ಪದಲ್ಲಿ ಕಾಲಿನ ಮೇಲಿನಿಂದ ಬಂದಿದೆ. ವೀರಾಸನದಲ್ಲಿರುವ ಶಿಲ್ಪವನ್ನೇ

ಹೋಲುವ ಮತ್ತೊಂದು ಶಿಲ್ಪವೂ ಇಲ್ಲಿದ್ದು, ಅದರಲ್ಲಿ ಪುಸ್ತಕದ ಬದಲಾಗಿ ಫಲವಿರುವುದನ್ನು ಕಾಣಬಹುದು. ಜಾವಗಲ್ಲಿನ ಲಕ್ಷ್ಮೀನರಸಿಂಹ ದೇವಾಲಯದಲ್ಲಿ ಎರಡು, ಹೊಸಹೊಳಲಿನ ಕೇಶವ ದೇವಾಲಯದಲ್ಲಿ ಮೂರು, ಇದೇ ಲಕ್ಷಣಗಳನ್ನುಳ್ಳ ಸರಸ್ವತಿಯ ಭಿತ್ತಿಶಿಲ್ಪಗಳನ್ನು ಕಾಣಬಹುದು. ಜಾವಗಲ್ಲಿನಲ್ಲಿರುವ ಶಿಲ್ಪವೊಂದರ ಪದ್ಮಪೀಠ ಮೂರು ಹಂತದ್ದಾಗಿದೆ. ಶಿಲ್ಪದ ನಡುವಿನಿಂದ ಹೊರಟ ಅಲಂಕೃತ ವಸ್ತ್ರ ಎರಡೂ ತೊಡೆಯ ಮೇಲಿಂದ ಹಾದು ಪೀಠದವರೆಗೂ ವಿಸ್ತರಿಸಿರುವುದನ್ನು ಕಾಣಬಹುದು. ಹೊಸಹೊಳಲು ಮತ್ತು ಜಾವಗಲ್ಲಿನ ಭಿತ್ತಿಶಿಲ್ಪಗಳಲ್ಲಿ ಹೆಚ್ಚಿನ ವ್ಯತ್ಯಾಸವೇ ಇಲ್ಲವೆನ್ನಬಹುದು. ಇವೆರಡೂ 13ನೇ ಶತಮಾನದ ರಚನೆಗಳಾಗಿದ್ದು, ಎರಡೂ ಕಡೆ ಒಂದೇ ತಂಡದ ಶಿಲ್ಪಿಗಳು ಕೆಲಸ ಮಾಡಿರುವ ಸಾಧ್ಯತೆಯಿದೆ. ಮಲ್ಲಿತಮ ರೂವಾರಿಯು ನುಗ್ಗೆಹಳ್ಳಿ, ಹೊಸಹೊಳಲು, ಜಾವಗಲ್ಲು ಮತ್ತು ಹಾರ್ನಹಳ್ಳಿ ದೇವಾಲಯಗಳಲ್ಲಿ ಕೆಲಸ ಮಾಡಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ.

ನುಗ್ಗೆಹಳ್ಳಿಯ ಸದಾಶಿವ ದೇವಾಲಯದ ಸುಖನಾಸಿಯ ದ್ವಾರದ ಲಲಾಟದಲ್ಲಿ ಮತ್ತು ಅಮೃತಾಪುರದ ಅಮೃತೇಶ್ವರ ದೇವಾಲಯದ ಮುಖಮಂಟಪದ ಭುವನೇಶ್ವರಿಯೊಂದರಲ್ಲಿ ಇರುವ ಉಬ್ಬು ಶಿಲ್ಪಗಳು ಚಿಕ್ಕ ಪ್ರಮಾಣದವುಗಳಾಗಿದ್ದರೂ ಇದೇ ತೆರನಾಗಿವೆ. ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕಿನ ನಾವಳ್ಳಿಯಲ್ಲಿ ಸುಮಾರು ಕ್ರಿ.ಶ. 1121ರಲ್ಲಿ ನಿರ್ಮಾಣವಾಗಿರುವ ಕಲ್ಲೇಶ್ವರ ದೇವಾಲಯವಿದೆ. ಇದರ ನವರಂಗಕ್ಕೆ ಪೂರ್ವ ಮತ್ತು ದಕ್ಷಿಣದಲ್ಲಿ ಪ್ರವೇಶ ದ್ವಾರಗಳಿರುತ್ತವೆ. ಇವೆರಡೂ ದ್ವಾರಗಳ ಲಲಾಟದಲ್ಲಿ ಇರುವ ಸುಮಾರು ಅರ್ಧ ಅಡಿ ಎತ್ತರದ ಸರಸ್ವತೀ ಶಿಲ್ಪಗಳು ಕಿರಿದಾಗಿದ್ದರೂ ಸುಂದರವಾಗಿವೆ. ಗಜಲಕ್ಷ್ಮೀ ಇರಬೇಕಾದ ಜಾಗದಲ್ಲಿ ಸರಸ್ವತೀ ಶಿಲ್ಪವಿರುವುದು ಇಲ್ಲಿನ ವಿಶೇಷ. ಆದರೆ ಈಗ ದೇವಾಲಯದ ಬಾಗಿಲುಗಳಿಗೆ ಸಿಲ್ವರ್ ಬಣ್ಣವನ್ನು ಅತಿಯಾಗಿ ಬಳಿದಿರುವುದರಿಂದ ಶಿಲ್ಪಗಳ ಸೂಕ್ಷ್ಮ ಕೆತ್ತನೆಗಳನ್ನು ಗುರುತಿಸುವುದು ಕಷ್ಟವಾಗಿದೆ.

1.2.3. ಚತುರ್ಭುಜಗಳಲ್ಲಿ ಅಕ್ಷಮಾಲೆ-ಅಂಕುಶ-ಪಾಶ-ಪುಸ್ತಕ ಹಿಡಿದಿರುವ ಸರಸ್ವತೀ ಶಿಲ್ಪಗಳು

ಮೇಲಿನ ವಿಭಾಗದಲ್ಲಿ ಬರುವ ಎಲ್ಲಾ ಲಕ್ಷಣಗಳನ್ನುಳ್ಳ ಸರಸ್ವತೀ ಶಿಲ್ಪಗಳು ಈ ವರ್ಗದಲ್ಲಿಯೂ ಬರುತ್ತವೆ. ಒಂದೇ ಒಂದು ವ್ಯತ್ಯಾಸವೆಂದರೆ ಇಲ್ಲಿ ಪಾಶ ಪವಿತ್ರದ ಗಂಟಿನಾಕಾರದಲ್ಲಿರದೆ, ಮಡಿಸಿ ಹಿಡಿದಿರುವ ಹಗ್ಗದಂತೆ ಕಾಣುವುದು. ಸುಮಾರು ನಲವತ್ತು ಶಿಲ್ಪಗಳು ಈ ವಿಭಾಗದಲ್ಲಿ ಬರುತ್ತವೆ. ಬೇಲೂರಿನ ಕಪ್ಪೆಚೆನ್ನಿಗರಾಯನ ಗುಡಿಯ ನವರಂಗದಲ್ಲಿರುವ ಗೂಡಿನ ಶಿಲ್ಪ ಈ ವರ್ಗಕ್ಕೆ ಉತ್ತಮ ಉದಾಹರಣೆ. ಕರಂಡಮಕುಟದ ಮೇಲೆ ಪ್ರಭಾವಳಿಯಿಂದ ಮುಂಚಾಚಿಕೊಂಡಿರುವಂತೆ ಛತ್ರಿಯಿರುವುದು ಈ ಶಿಲ್ಪದ ವಿಶೇಷ. ಉತ್ತಮ ಸ್ಥಿತಿಯಲ್ಲಿರುವ ಈ ಶಿಲ್ಪದ ಪ್ರಮಾಣವನ್ನು ಗಮನಿಸಿದರೆ, ಈ ಗೂಡು ಅದರ ಮೂಲಸ್ಥಾನವಾಗಿರಲಾರದು ಅನ್ನಿಸುತ್ತದೆ. ಅದನ್ನು ಬೇರೆಡೆಯಿಂದ ತಂದು ಗೂಡಿನಲ್ಲಿ

ಇಟ್ಟಿರಬಹುದು. ಕಲಕೇರಿಯ ಜಯಸಿಂಘೇಶ್ವರ ದೇವಾಲಯದ ಶಿಲ್ಪವೂ ಈ ವಿಭಾಗಕ್ಕೆ ಬರುತ್ತದೆ. ಮಾದನಭಾವಿ, ಕಳ್ಳಿಹಾಳ, ಕಣಿವೆ ಸಿದ್ಗೇರಿ (ಇಲ್ಲಿಯ ಶಿಲ್ಪ ಎರಡು ತುಂಡಾಗಿದೆ), ಗೊರೂರು, ಮೋಟೆಬೆನ್ನೂರು, ಬಸರಾಳು, ಅಬ್ಬಲೂರು, ಬಾಗಳಿ ಮ್ಯೂಸಿಯಂ, ಸುಲೇಪೇಟೆ ನಿಡುಗುಂದಿಯಲ್ಲಿ ಇರುವ ಬಿಡಿ ಶಿಲ್ಪಗಳು ಈ ವರ್ಗದ ಲಕ್ಷಣಗಳನ್ನು ಹೊಂದಿವೆ.

ನಾಗಲಾಪುರ (ಚೆನ್ನಕೇಶವ ಮತ್ತು ಕೇದಾರೇಶ್ವರ ದೇವಾಲಯಗಳ ಭಿತ್ತಿ), ನುಗ್ಗಹಳ್ಳಿ, ಅರಸೀಕೆರೆ, ಬೇಲೂರು, ಹಳೇಬೀಡಿನಲ್ಲಿ ಸಿಗುವ ಈ ವರ್ಗದ ಎಲ್ಲಾ ಶಿಲ್ಪಗಳು ಬಹುತೇಕ ಸಮಾನ ಲಕ್ಷಣಗಳನ್ನು ಒಳಗೊಂಡಿವೆ. ಬೇಲೂರಿನ ಚೆನ್ನಕೇಶವ ದೇವಾಲಯದ ಭಿತ್ತಿಯಲ್ಲಿರುವ ಲತಾಪಟ್ಟಿಕೆಯ ಸುರುಳಿಯೊಳಗೆ ಸುಮಾರು ಆರಿಂಚು ಎತ್ತರದ ಸರಸ್ವತೀ ಶಿಲ್ಪವೊಂದಿದೆ. ಇಷ್ಟೇ ಪ್ರಮಾಣದ ಎರಡು ಶಿಲ್ಪಗಳು ಮಾಗಳದ ದೇವಾಲಯದ ಭಿತ್ತಿಯಲ್ಲಿ ಕಾಣುತ್ತವೆ.

ಬೇಲೂರಿನ ಚೆನ್ನಕೇಶವ ದೇವಾಲಯದ ಮುಂಭಾಗದಲ್ಲಿರುವ ಬಲಬದಿಯ ದೇವಕೋಷ್ಠದ ಲಲಾಟದಲ್ಲಿ ಸರಸ್ವತೀ ಶಿಲ್ಪವಿರುವುದು ವಿಶೇಷವಾಗಿದೆ. ಕೋಷ್ಠದಲ್ಲಿ ಈಗ ಕೇಶವನ ಶಿಲ್ಪವಿದೆ. ಬಹುಶಃ ಮೊದಲು ಅಲ್ಲಿ ಸರಸ್ವತೀ ಶಿಲ್ಪವಿದ್ದಿರಬಹುದು. ಇದೇ ದೇವಾಲಯದ ದಕ್ಷಿಣದ್ವಾರದ ಬಲಬದಿಯ ದೇವಕೋಷ್ಠದ ಲಲಾಟದಲ್ಲೂ ಇದೇ ರೀತಿಯ ಶಿಲ್ಪವನ್ನು ಕಾಣಬಹುದು. ಆದರೆ ಈ ದೇವಕೋಷ್ಠ ಖಾಲಿಯಾಗಿದೆ. ಇದೇ ರೀತಿ ದೇವಕೋಷ್ಠದ ಲಲಾಟದಲ್ಲಿ ಸರಸ್ವತೀ ಬಿಂಬವಿರುವುದನ್ನು ಇಟಗಿಯ ಮಹಾದೇವ ದೇವಾಲಯದ ನವರಂಗದ ಗೂಡಿನಲ್ಲೂ ಕಾಣಬಹುದು. ಎರಡೂ ದೇವಾಲಯಗಳ ನಿರ್ಮಾಣದಲ್ಲಿ ಕನಿಷ್ಠ ಸುಮಾರು ಒಂದು ಶತಮಾನವಾದರೂ ವ್ಯತ್ಯಾಸವಿದೆ. ಆದರೂ ಕೆಲವು ಸಮಾನ ಲಕ್ಷಣಗಳು ಈ ದೇವಾಲಯಗಳಲ್ಲಿ ಉಳಿದು ಬಂದಿರುವುದನ್ನು ಗಮನಿಸಬಹುದು. ಚಾಲುಕ್ಯರ ಕಾಲದಲ್ಲಿ ಕೆಲಸ ಮಾಡಿದ ಶಿಲ್ಪಿಗಳು ಹಾಗೂ ಅವರ ಮನೆತನದವರೇ ಹೊಯ್ಸಳ ಶಿಲ್ಪಪರಂಪರೆಯನ್ನು ಮುಂದುವರೆಸಿರುವುದೂ ಇದಕ್ಕೆ ಕಾರಣವಿರಬಹುದು. ಆ ಕಾಲದ ಶಿಲ್ಪಿಗಳಿಗೆ, ತಮ್ಮ ಕಲ್ಪನಾ ಸಾಮರ್ಥ್ಯವನ್ನು ಕೃತಿರೂಪಕ್ಕಿಳಿಸಲು ಸಾಕಷ್ಟು ಸ್ವಾತಂತ್ರ್ಯವಿತ್ತು ಎಂಬ ಸುಳಿವು ಇದರಿಂದ ದೊರೆಯುತ್ತದೆ. ಸುಮಾರು ಕ್ರಿ.ಶ. 1039ರಲ್ಲಿ ನಿರ್ಮಾಣವಾಗಿರುವ ಗುಲ್ಬರ್ಗಾ ಜಿಲ್ಲೆ ಮಾಡಿಯಾಳದ ಭೋಗೇಶ್ವರ ದೇವಾಲಯ ಮತ್ತು ಸ್ವಯಂಭೂ ಶಂಕರಲಿಂಗ ದೇವರ ದೇವಾಲಯದ ಮುಂದಿನ ಕಲ್ಯಾಣ ಮಂಟಪದ ದ್ವಾರಗಳ ಲಲಾಟದಲ್ಲಿ ಗಜಲಕ್ಷ್ಮಿಯ ಬದಲಾಗಿ ಸರಸ್ವತೀಬಿಂಬವಿರುವುದನ್ನು ಕಾಣಬಹುದು. ನಾವಳ್ಳಿಯ ದೇವಾಲಯದಲ್ಲಿದ್ದಂತೆಯೇ ಇಲ್ಲಿಯ ಸರಸ್ವತಿಬಿಂಬಗಳು ಇವೆ. ಒಂದೇ ಒಂದು ವ್ಯತ್ಯಾಸವೆಂದರೆ, ಪಾಶವು ನಾವಳ್ಳಿಯ ಶಿಲ್ಪಗಳಲ್ಲಿ ಪವಿತ್ರದ ಗಂಟಿನಾಕಾರದಲ್ಲಿದ್ದರೆ, ಮಾಡಿಯಾಳದ ಶಿಲ್ಪಗಳಲ್ಲಿ ಸರಳವಾಗಿ ಹಗ್ಗದಂತಿದೆ. ಜಗ್ಗವಳ್ಳಿಯ ತ್ರಿಕೂಟ ದೇವಾಲಯದ

ಸರಸ್ವತೀಶಿಲ್ಪವಿರುವ ಗರ್ಭಗುಡಿಯ ದ್ವಾರದ ಲಲಾಟದಲ್ಲಿಯೂ ಇದೇ ರೀತಿಯ ಶಿಲ್ಪವನ್ನು ಕಾಣಬಹುದು.

ಪ್ರವೇಶದ್ವಾರಗಳಲ್ಲಿನ ಸರಸ್ವತಿಬಿಂಬದಲ್ಲಿ ಹೆಚ್ಚಿನ ವ್ಯತ್ಯಾಸಗಳಿರುವುದಿಲ್ಲ. ಚಿಕ್ಕಮಗಳೂರು ಜಿಲ್ಲೆ ಮರಳೆಯಲ್ಲಿರುವ ಅವಳಿ ದೇವಾಲಯಗಳಲ್ಲಿ ಸಿದ್ಧೇಶ್ವರ ದೇವಾಲಯವೂ ಒಂದು. ಅದರ ತೆರೆದ ಮುಖಮಂಟಪದಿಂದ ನವರಂಗಕ್ಕೆ ಹೋಗುವ ದ್ವಾರದ ಮಕರತೋರಣ ವಿಶೇಷವಾಗಿದೆ. ನಡುವೆ ಶಿವ-ಪಾರ್ವತಿ ಶಿಲ್ಪವಿದೆ. ಇಕ್ಕೆಲಗಳಲ್ಲಿ ಆನೆಗಳು ಮತ್ತು ಚಾಮರಧಾರಿಣಿಯರಿದ್ದಾರೆ. ಬಲತುದಿಗೆ ಗಣಪತಿಯ ಶಿಲ್ಪವಿದ್ದರೆ, ಎಡತುದಿಗೆ ಸರಸ್ವತೀ ಶಿಲ್ಪವಿದೆ. ಸುಮಾರು ನಾಲ್ಕು ಅಡಿ ಉದ್ದ, ಒಂದು ಅಡಿ ಎತ್ತರದ ಒಂದೇ ಕಲ್ಲಿನಲ್ಲಿ ಬಿಡಿಸಲಾಗಿರುವ ಈ ಮಕರತೋರಣ ಸೂಕ್ಷ್ಮ ಕುಸುರಿ ಕೆತ್ತನೆಗಳಿಂದ ಆಕರ್ಷಕವಾಗಿದೆ. ಗಣಪತಿಗೂ ವಿದ್ಯಾದೇವತೆ ಎಂಬ ಅಭಿದಾನವಿರುವುದನ್ನು ಗಮನಿಸಿದರೆ ಈ ರಚನೆಯ ವಿಶೇಷ ತಿಳಿಯುತ್ತದೆ.

ಸುಮಾರು ಕ್ರಿ.ಶ.1063ರಲ್ಲಿ ನಿರ್ಮಾಣವಾಗಿರುವ, ಹಾವೇರಿ ಜಿಲ್ಲೆಯ ದೇವಿಹೊಸೂರಿನಲ್ಲಿ ಮಾಳಚಿ (ಬನಶಂಕರಿ) ದೇವಾಲಯವಿದೆ. ಇದರ ಮುಂದಿನ ಬಯಲಿನಲ್ಲಿ ಸುಮಾರು ಏಳು ಅಡಿ ಎತ್ತರದ ಎರಡು ಕಂಬಗಳ ಮೇಲೆ ನಿಲ್ಲಿಸಲಾಗಿರುವ, ಸುಮಾರು ಒಂದೂವರೆ ಅಡಿ ಅಗಲ ಎಂಟು ಅಡಿ ಉದ್ದದ ಮಕರತೋರಣ ಗಮನ ಸೆಳೆಯುತ್ತದೆ. ತೋರಣದ ಮಧ್ಯಭಾಗದಲ್ಲಿ ಪಾರ್ವತಿಯ ಎಡಬಲಗಳಲ್ಲಿ ಲಕ್ಷ್ಮೀ-ಸರಸ್ವತಿಯರನ್ನು ಬಿಡಿಸಲಾಗಿದೆ. ಶಿಲ್ಪಗಳು ಕೇವಲ ಅರ್ಧ ಅಡಿ ಮಾತ್ರ ಎತ್ತರವಾಗಿವೆ.

ಈ ವರ್ಗಕ್ಕೆ ಸೇರಿದ ಶಿಲ್ಪಗಳು ನವರಂಗದ ಕಂಬಗಳ ಮೇಲೂ ಕಂಡುಬರುತ್ತವೆ. ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕು ಶೇಷಗಿರಿಯಲ್ಲಿ, ಧರ್ಮಾ(ವರದಾ)ನದಿಯ ದಂಡೆಯಲ್ಲಿ ಪಾಳು ಬಿದ್ದಿರುವ ಶಾಸನೋಕ್ತ ರೇವೇಶ್ವರ ದೇವಾಲಯವಿದೆ. ಅದರ ತೆರೆದ ನವರಂಗದ ಬಲಬದಿಯ ಕಂಬವೊಂದರ ಪೀಠಭಾಗದಲ್ಲಿ ಸುಮಾರು ಮುಕ್ಕಾಲು ಅಡಿ ಎತ್ತರದ ಸರಸ್ವತೀ ಶಿಲ್ಪವನ್ನು ಕೆತ್ತಲಾಗಿದೆ. ಬಳ್ಳಾರಿ ಜಿಲ್ಲೆ ಕುರುವತ್ತಿಯ ಮಲ್ಲಿಕಾರ್ಜುನ ದೇವಾಲಯದ ನವರಂಗವ ಬೃಹತ್ ಕಂಬವೊಂದರ ಪೀಠಭಾಗದಲ್ಲಿಯೂ ಈ ವರ್ಗದ ಲಕ್ಷಣಗಳನ್ನುಳ್ಳ ಸರಸ್ವತೀ ಶಿಲ್ಪವಿದೆ. ಕಂಬದ ಗಾತ್ರಕ್ಕೆ ಅನುಗುಣವಾಗಿ ಶೇಷಗಿರಿಯಲ್ಲಿರುವ ಶಿಲ್ಪಕ್ಕಿಂತ ಇದು ದೊಡ್ಡದಾಗಿದೆ.

ಹಳೇಬೀಡಿನ ದೇವಾಲಯಗಳು ಬೃಹತ್ ಆಗಿರುವಂತೆ ಮಹತ್ತಾಗಿಯೂ ಇವೆ. ಹೊಯ್ಸಳೇಶ್ವರ-ಶಾಂತಲೇಶ್ವರ ದೇವಾಲಯದ ನವರಂಗದಲ್ಲಿರುವ ದೇವಕೋಷ್ಠಗಳೇ ಒಂದೊಂದು ಸಣ್ಣ ದೇವಾಲಯದಷ್ಟು ದೊಡ್ಡದಾಗಿವೆ. ಈ ದೇವಕೋಷ್ಠಗಳ ಶಿಖರದಲ್ಲಿ ಸರಸ್ವತೀ ಶಿಲ್ಪಗಳು ಮಾತ್ರ

ಕಂಡುಬರುವುದು ಇಲ್ಲಿನ ವಿಶೇಷ. ಹೊಯ್ಸಳೇಶ್ವರ ಗರ್ಭಗುಡಿಯ ಮುಂದಿನ ಎಡಬದಿಯ ದೇವಕೋಷ್ಠದ ಶಿಖರದ ಮೂರು ಹಂತಗಳಲ್ಲಿ ಮೂರು ಬಗೆಯ ಸರಸ್ವತೀ ಶಿಲ್ಪಗಳನ್ನು ಕೆತ್ತಲಾಗಿದೆ. ಕೆಳಭಾಗದಲ್ಲಿ ನೃತ್ಯಸರಸ್ವತೀ ಇದ್ದರೆ ಮೇಲ್ಭಾಗದಲ್ಲಿ ಸ್ಥಾನಕ ಸರಸ್ವತೀ ಶಿಲ್ಪವಿದೆ. ಮಧ್ಯದಲ್ಲಿರುವ ಆಸೀನ ಚತುರ್ಭುಜ ಶಿಲ್ಪವು ಈ ವಿಭಾಗದ ಲಕ್ಷಣಗಳನ್ನು ಒಳಗೊಂಡಿದೆ. ಇದೇ ರೀತಿಯ ಶಿಲ್ಪವನ್ನು ಬಲಬದಿಯ ದೇವಕೋಷ್ಠದಲ್ಲೂ ಕಾಣಬಹುದು. ಇದರಲ್ಲಿ ಕೇವಲ ಒಂದು ಸರಸ್ವತಿಶಿಲ್ಪ ಮಾತ್ರ ಇರುತ್ತದೆ. ಈ ಬಲಭಾಗದ ದೇವಕೋಷ್ಠದಲ್ಲಿರುವಂತೆ ಶಾಂತಲೇಶ್ವರ ಗರ್ಭಗುಡಿಯ ಮುಂದಿನ ಎರಡೂ ಬದಿಯ ದೇವಕೋಷ್ಠಗಳಲ್ಲಿ ಸರಸ್ವತೀ ಬಿಂಬಗಳು ಇರುತ್ತವೆ. ಲಕ್ಷಣಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಇಂಥದೇ ಲಕ್ಷಣಗಳನ್ನುಳ್ಳ ಶಿಲ್ಪಗಳನ್ನು ಹಳೇಬೀಡಿನ ಕೇದಾರೇಶ್ವರ ದೇವಾಲಯದ ನವರಂಗದಲ್ಲಿರುವ ದೇವಕೋಷ್ಠದ ಲಲಾಟದಲ್ಲೂ ಕಾಣಬಹುದು. ಆದರೆ ಈ ಶಿಲ್ಪಗಳು ಗಾತ್ರದಲ್ಲಿ ಹೊಯ್ಸಳೇಶ್ವರ–ಶಾಂತಲೇಶ್ವರ ದೇವಾಲಯದ ಶಿಲ್ಪಗಳಿಗಿಂತ ಚಿಕ್ಕದಾಗಿವೆ.

ಇಟಗಿಯಲ್ಲಿ ಮಹಾದೇವ ದೇವಾಲಯದ ಅಧಿಷ್ಠಾನ ಮತ್ತು ಮಹಾದೇವ ದೇವಾಲಯದ ಎಡಬದಿಗಿರುವ ಸಣ್ಣ ದೇವಾಲಯವೊಂದರ ಅಧಿಷ್ಠಾನ ಭಾಗದಲ್ಲಿ ಕೇವಲ ಅರ್ಧ ಅಡಿ ಎತ್ತರವಿರುವ, ಈ ವರ್ಗಕ್ಕೆ ಸೇರಿದ ಸರಸ್ವತೀ ಬಿಂಬಗಳಿವೆ. ಅಮೃತಾಪುರದ ಅಮೃತೇಶ್ವರ ದೇವಾಲಯದ ಮುಖಮಂಟಪದ ಭುವನೇಶ್ವರಿಯೊಂದರಲ್ಲಿ ಈ ಲಕ್ಷಣವನ್ನುಳ್ಳ ಸರಸ್ವತಿಯ ಕಿರು ಶಿಲ್ಪವೊಂದನ್ನು ಕಾಣಬಹುದಾಗಿದೆ.

1.2.4. ಹಂಸವಾಹನೆ ಸರಸ್ವತಿ

ಸರಸ್ವತೀ ಹಂಸವಾಹನೆಯೆಂಬುದು ಬಹುಸ್ಪಷ್ಟ. ಕರ್ನಾಟಕದಲ್ಲಿ ಹಲವಾರು ಸರಸ್ವತೀ ಶಿಲ್ಪಗಳು ಹಂಸವನ್ನೊಳಗೊಂಡಿವೆ. ಹೆಚ್ಚಿನ ಶಿಲ್ಪಗಳಲ್ಲಿ ಪೀಠದಲ್ಲಿಯೇ ಹಂಸವನ್ನು ಬಿಡಿಸಿರುವುದನ್ನು ಕಾಣಬಹುದು.

ಆಸೀನ ಚತುರ್ಭುಜ ಶಿಲ್ಪಗಳಲ್ಲಿ ಹಂಸವನ್ನು ಒಳಗೊಂಡಿರುವ ಸುಮಾರು ಹದಿನೇಳು ಪ್ರಮುಖ ಶಿಲ್ಪಗಳನ್ನು ಇಲ್ಲಿ ಉಲ್ಲೇಖಿಸಬಹುದು. ಲಕ್ಷಣಗಳಲ್ಲಿ ಮೇಲಿನ ಎರಡೂ ವಿಭಾಗಗಳ ಶಿಲ್ಪಗಳನ್ನೇ ಹೋಲುವ ಈ ಶಿಲ್ಪಗಳು ಹಂಸದೊಂದಿಗೆ ಇವೆ ಎಂಬುದೇ ಒಂದು ವಿಶೇಷ. ಹಂಸದೊಂದಿಗಿರುವ ಶಿಲ್ಪಗಳನ್ನು, ಪೀಠದಲ್ಲಿ ಹಂಸವಿದ್ದು ಚತುರ್ಭುಜಗಳಲ್ಲಿ ಅಕ್ಷಮಾಲೆ–ಅಂಕುಶ–ಪವಿತ್ರ–ಪುಸ್ತಕ ಹಿಡಿದಿರುವ ಮತ್ತು ಪೀಠದಲ್ಲಿ ಹಂಸವಿದ್ದು ಚತುರ್ಭುಜಗಳಲ್ಲಿ ಅಕ್ಷಮಾಲೆ–ಅಂಕುಶ–ಪಾಶ–ಪುಸ್ತಕ ಹಿಡಿದಿರುವ ಸರಸ್ವತೀ ಶಿಲ್ಪಗಳೆಂದು ವಿಭಾಗಿಸಬಹುದು. ಪಾಶಕ್ಕೂ ಪವಿತ್ರಕ್ಕೂ ಆಕಾರದಲ್ಲಿ ಮಾತ್ರ ವ್ಯತ್ಯಾಸವಿರುತ್ತದೆ.

ಕೈಯಲ್ಲಿ ಪವಿತ್ರದ ಗಂಟಿನಾಕಾರವಿರುವ ಪಾಶವನ್ನು ಹಿಡಿದಿರುವ ಹಂಸಸಹಿತ ಶಿಲ್ಪಗಳು ಅಡಗೂರಿನ ತ್ರಿಕೂಟ ದೇವಾಲಯದ ಎಡಭಾಗದ ಗರ್ಭಗುಡಿ (ಹನ್ನೊಂದನೇ ಶತಮಾನ), ಅಗ್ರಹಾರ ಬೆಳಗುಲಿ ಕೇಶವೇಶ್ವರ ದೇವಾಲಯದ ನವರಂಗ (ಕ್ರಿ.ಶ.1210), ದಾವಣಗೆರೆ ಜಿಲ್ಲೆ ನಂದಿತಾವರೆಯ ಮಾಣಿಕೇಶ್ವರ ದೇವಾಲಯದ ನವರಂಗ (ಕ್ರಿ.ಶ.1220), ಹಾರನಹಳ್ಳಿ ಲಕ್ಷ್ಮೀನರಸಿಂಹ ಮತ್ತು ಸೋಮೇಶ್ವರ ದೇವಾಲಯಗಳಲ್ಲಿನ ನವರಂಗದ ಗೂಡುಗಳು (ಕ್ರಿ.ಶ.1234), ಬಸರಾಳಿನ ಮಲ್ಲಿಕಾರ್ಜುನ ದೇವಾಲಯದ ನವರಂಗದ ಗೂಡು (ಕ್ರಿ.ಶ.1234), ಮೊಸಳೆ ನಾಗೇಶ್ವರ ದೇವಾಲಯದ ನವರಂಗ (ಕ್ರಿ.ಶ.1250), ಬಾಗಳಿ ದೇವಾಲಯದಲ್ಲಿನ ಮುಖಮಂಟಪದ ಕಂಬ ಮತ್ತು ಶ್ರವಣಬೆಳಗೊಳದ ಭಂಡಾರಿ ಬಸದಿಯ ಕಂಬ ಈ ಸ್ಥಳಗಳಲ್ಲಿ ಕಾಣಬಹುದು. ಮೇಲ್ಕಾಣಿಸಿದ ಕೊನೆಯ ಎರಡು ದೇವಾಲಯಗಳ ಶಿಲ್ಪಗಳು ಉಬ್ಬುಶಿಲ್ಪಗಳಾಗಿದ್ದರೆ ಉಳಿದವುಗಳು ಬಿಡಿಶಿಲ್ಪಗಳಾಗಿದ್ದು ಪೀಠದಲ್ಲಿಯೇ ಹಂಸವನ್ನು ಹೊಂದಿವೆ. ನಿಡುಗುಂದಿಯ ಶಾಸನೋಕ್ತ ತ್ರೈಪುರುಷ (ಈಗಿನ ನಾರಾಯಣ ಗುಡಿ) ದೇವಾಲಯದ (ಕ್ರಿ.ಶ.1074) ಗರ್ಭಗುಡಿಯಲ್ಲಿ ಹಂಸ ಗರುಡ ಮತ್ತು ವೃಷಭ ವಾಹನವುಳ್ಳ ಅಖಂಡ ಪೀಠವಿದೆ. ಹಂಸಪೀಠದಲ್ಲಿದ್ದ ಸರಸ್ವತೀ ಶಿಲ್ಪವನ್ನು ಈಗ ಬಸವಣ್ಣನ ಗುಡಿಗೆ ಸ್ಥಳಾಂತರ ಮಾಡಲಾಗಿದೆ. ಅದೇ ಊರಿನ ದಾಸೀಮೇಶ್ವರ ದೇವಾಲಯದ ಒಂದು ಗರ್ಭಗುಡಿಯಲ್ಲಿ ಹಂಸಪೀಠವಿದ್ದು ಶಿಲ್ಪವಿರುವುದಿಲ್ಲ. ತ್ರೈಪ್ಯರುಷ ದೇವಾಲಯಗಳಲ್ಲಿ ಹಂಸಪೀಠದ ಮೇಲೆ ಬ್ರಹ್ಮಲಿಂಗವಿರುವುದು ಸಾಮಾನ್ಯ ಸಂಗತಿ. ಆದರೆ ನಿಡುಗುಂದಿಯ ದಾಸಿಮೇಶ್ವರ ದೇವಾಲಯದ ಆವರಣದಲ್ಲಿ ಇಟ್ಟಿರುವ ಶಾಸನದ ಶಿರೋಭಾಗದಲ್ಲಿ ಸರಸ್ವತಿ, ಲಿಂಗ ಮತ್ತು ವಿಷ್ಣುವಿನ ಕೆತ್ತನೆಗಳಿರುವುದನ್ನು ಗಮನಿಸಿ, ಇಲ್ಲಿಯ ಹಂಸಪೀಠದಲ್ಲಿ ಸರಸ್ವತಿಯೇ ಇತ್ತೆಂಬುದನ್ನು ಊಹಿಸಲು ಸಾಧ್ಯವಿದೆ.

ಮೇಲಿನ ಶಿಲ್ಪಗಳಂತೆಯೇ ಲಕ್ಷಣಗಳನ್ನುಳ್ಳ, ಆದರೆ ಪಾಶವು ಪವಿತ್ರದ ಗಂಟಿನಾಕಾರವಾಗಿರದೆ, ಸಾಮಾನ್ಯ ಹಗ್ಗದ ಸುರುಳಿಯಂತೆ ಇರುವ ಹಂಸಸಹಿತ ಸರಸ್ವತೀ ಶಿಲ್ಪಗಳ ಸಂಖ್ಯೆ ಕಡಿಮೆ. ಬಹುತೇಕ ಹಂಸಸಹಿತ ಶಿಲ್ಪಗಳು ಪ್ರಧಾನಶಿಲ್ಪಗಳಾಗಿದ್ದರಿಂದ ಅಲಂಕಾರಕ್ಕೆ ಹೆಚ್ಚಿನ ಒತ್ತು ಸಿಕ್ಕಿ ಪಾಶದ ಆಕಾರ ಪವಿತ್ರದ ಗಂಟಿನ ಆಕಾರವನ್ನು ತಾಳಿರಬಹುದು ಎಂದೂ ಊಹಿಸಬಹುದು.

ರಾಣಿಬೆನ್ನೂರು ತಾಲ್ಲೋಕಿನ ಉಕ್ಕುಂದ ಗ್ರಾಮದ ಕಲಿದೇವರ ಗುಡಿಯ ನವರಂಗದಲ್ಲಿ ಒಂದು ಸರಸ್ವತಿಯ ಶಿಲ್ಪವನ್ನು ಇಡಲಾಗಿದೆ. ಎರಡು ಅಡಿ ಎತ್ತರದ ಈ ಸರಸ್ವತೀ ಶಿಲ್ಪ ಪದ್ಮಾಸನದಲ್ಲಿದೆ. ಪದ್ಮದ ಮೇಲೆಯೇ ಸುಮಾರು ಅರ್ಧ ಅಡಿ ಎತ್ತರವಿರುವ ಹಂಸವನ್ನು ಕೆತ್ತಲಾಗಿದೆ. ಆನಂತರದ ಶಿಲ್ಪಗಳಲ್ಲಿರುವಂತೆ ಹಂಸವು ಹೆಚ್ಚು ಆಲಂಕೃತವಾಗಿಲ್ಲ. ಶಿಲ್ಪದ ಪ್ರಭಾವಳಿ, ಶಿಲ್ಪದ ಕೈಯಲ್ಲಿರುವ

ಅಕ್ಷಮಾಲೆ, ಅಂಕುಶ, ಪಾಶ ಮತ್ತು ಪುಸ್ತಕಗಳೂ ಹೆಚ್ಚು ಆಲಂಕೃತವಾಗಿರದೇ ಇರುವುದು ಅದರ ಕಾಲನಿರ್ಣಯಕ್ಕೆ ಸಹಾಯಕವಾಗಿದೆ.

ಈ ವಿಭಾಗಕ್ಕೆ ಸೇರಿಸಬಹುದಾದ ಇತರ ಸರಸ್ವತೀ ಶಿಲ್ಪಗಳೆಂದರೆ, ಸುಮಾರು ಹನ್ನೊಂದನೇ ಶತಮಾನಕ್ಕೆ ಸೇರಿದ್ದೆನ್ನಲಾದ ಹಾವೇರಿ ಜಿಲ್ಲೆ ಮೇದೂರಿನಲ್ಲಿರುವ ಸರಸ್ವತೀ ದೇವಾಲಯದಲ್ಲಿ ಮತ್ತು ದಾವಣಗೆರೆ ಆನೆಕೊಂಡದ ಈಶ್ವರ ದೇವಾಲಯದ ಕಂಬದಲ್ಲಿ ಇರುವ ಶಿಲ್ಪಗಳು. ಮೇದೂರಿನಲ್ಲಿರುವ ಶಿಲ್ಪದಲ್ಲಿ ಪಾಶ ಉಕ್ಕುಂದದ ಶಿಲ್ಪದಂತೆಯೇ ಇರುವುದು ಗಮನಾರ್ಹ. ಪಾಶದ ಮೇಲ್ತುದಿ ಮುರಿದು ಹೋಗಿದ್ದರೂ ಕೆಳಭಾಗ ಸಾಮಾನ್ಯ ಹಗ್ಗದಂತೆಯೇ ಇರುವುದು ಸ್ಪಷ್ಟವಾಗುತ್ತದೆ. ಇಲ್ಲಿಯ ಹಂಸ ಉಕ್ಕುಂದದ ಹಂಸಕ್ಕಿಂತ ಹೆಚ್ಚು ಆಲಂಕೃತವಾಗಿದೆ. ಮಂಡ್ಯ ಜಿಲ್ಲೆ ನಾಗಮಂಗಲದಲ್ಲಿರುವ ಭುವನೇಶ್ವರ ಗುಡಿ (ಕ್ರಿ.ಶ.1135), ದಾವಣಗೆರೆ ಜಿಲ್ಲೆ ಬಾಗಳಿಯ ಕಲ್ಲೇಶ್ವರ ದೇವಾಲಯದ ನವರಂಗ (ಹದಿಮೂರನೇ ಶತಮಾನ), ಬೇಲೂರು ಚೆನ್ನಕೇಶವ ದೇವಾಲಯದ ಹೊರಭಿತ್ತಿಯಲ್ಲಿ ಸಹ ಈ ರೀತಿಯ ಶಿಲ್ಪಗಳನ್ನು ಕಾಣಬಹುದು. ಮೇದೂರು ಉಕ್ಕುಂದದಲ್ಲಿರುವ ಶಿಲ್ಪದ ಬಹುತೇಕ ಲಕ್ಷಣಗಳನ್ನೇ ಹೊಂದಿರುವ ಶಿಲ್ಪವೊಂದು ಗುಲ್ಬರ್ಗಾ ಜಿಲ್ಲೆ ಅಳಂದ ತಾಲ್ಲೂಕು ತಡಕಲ್ಲಿನಲ್ಲಿರುವ ಜಿನಮಂದಿರದಲ್ಲಿಯೂ ಇದೆ. ಇದರ ಹಂಸಪೀಠ ಸುಮಾರು ಒಂದು ಅಡಿ ಎತ್ತರವಿದೆ. ಕರ್ನಾಟಕದಲ್ಲಿ ಸರಸ್ವತೀ ಶಿಲ್ಪಗಳು ಯಾವುದೇ ಪರಂಪರೆಗೆ (ಜೈನ ಅಥವಾ ವೈದಿಕ) ಸೇರಿದ್ದರೂ, ಶಿಲ್ಪಲಕ್ಷಣಗಳು ಒಂದೇ ರೀತಿಯಲ್ಲಿರುತ್ತಿದ್ದವು ಎಂಬುದಕ್ಕೆ ಈ ಶಿಲ್ಪ ಒಂದು ಉತ್ತಮ ಉದಾಹರಣೆ.

1.3. ಆಸೀನ ಷಡ್ಭುಜ ಸರಸ್ವತಿ

ನಮಗೆ ತಿಳಿದಂತೆ ಆಸೀನ ಷಡ್ಭುಜ ಸರಸ್ವತೀ ಶಿಲ್ಪಗಳು ಇದುವರೆಗೆ ವರದಿಯಾಗಿಲ್ಲ. ಆರು ಭುಜಗಳಿರುವ ನೃತ್ಯಸರಸ್ವತೀ ಶಿಲ್ಪಗಳು ಸಿಗುತ್ತವೆಯಾದರೂ ಆಸೀನ ಶಿಲ್ಪಗಳು ಕಡಿಮೆ ಎಂದೇ ಹೇಳಬಹುದು. ಕ್ಷೇತ್ರಕಾರ್ಯದಲ್ಲಿ ಈ ರೀತಿಯ ಎರಡು ಶಿಲ್ಪಗಳು ಪತ್ತೆಯಾಗಿದ್ದು, ಎರಡೂ ಹೊಯ್ಸಳರ ದೇವಾಲಯಗಳಲ್ಲೇ ಇರುವುದು. ಹೊಯ್ಸಳರ ಕಾಲದಲ್ಲಿ ದೇವಾಲಯಗಳ ಅಲಂಕಾರಕ್ಕೆ ಹೆಚ್ಚು ಪ್ರಾಧಾನ್ಯ ನೀಡಿದ್ದು, ಹಾಗೆ ನೀಡಲು ಅವರು ಬಳಸುತ್ತಿದ್ದ ಬಳಪದ ಕಲ್ಲು ಬಹಳ ಸಹಕಾರಿಯಾಗಿತ್ತು ಎಂಬುದು ಎಲ್ಲರಿಗೂ ತಿಳಿದ ವಿಷಯ. ಮೊದಲ ಆಸೀನ ಷಡ್ಭುಜ ಸರಸ್ವತಿಯ ಶಿಲ್ಪ ಕ್ರಿ.ಶ.1121ರಲ್ಲಿ ನಿರ್ಮಾಣವಾಗಿರುವ ಹಳೇಬೀಡಿನ ಹೊಯ್ಸಳೇಶ್ವರ-ಶಾಂತಲೇಶ್ವರ ದೇವಾಲಯದ ಭಿತ್ತಿಯಲ್ಲಿದೆ. ವೀರಾಸನದಲ್ಲಿ ಆಸೀನವಾಗಿರುವ ಷಡ್ಭುಜ ಸರಸ್ವತೀ ಶಿಲ್ಪದ ಕೈಗಳಲ್ಲಿ ಕ್ರಮವಾಗಿ ವೀಣೆ, ಅಕ್ಷಮಾಲೆ, ಕಮಲ, ವೀಣೆ, ಪಾಶ ಮತ್ತು ಫಲಗಳು ಇವೆ. ಈ ದೇವಾಲಯವೊಂದರಲ್ಲೇ ಸಿಗುವ ಸುಮಾರು

ಮೂವತ್ತೈದು ಸರಸ್ವತೀ ಶಿಲ್ಪಗಳಲ್ಲಿ, ನಾವು ಇಲ್ಲಿ ವರ್ಗೀಕರಿಸಿರುವ ಎಲ್ಲಾರೀತಿಯ ಶಿಲ್ಪಗಳು ಇರುವುದು ವಿಶೇಷ.

ಈ ವರ್ಗದ ಎರಡನೆಯ ಶಿಲ್ಪ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ನುಗ್ಗೆಹಳ್ಳಿಯ ಲಕ್ಷ್ಮೀನರಸಿಂಹ ದೇವಾಲಯದಲ್ಲಿದೆ. ಈ ದೇವಾಲಯದ ಕಾಲ ಕ್ರಿ.ಶ. 1246. ನವರಂಗದ ದ್ವಾರದ ಒಳಭಾಗದ ಲಲಾಟದಲ್ಲಿ ಷಡ್ಭುಜ ವೀಣಾ ಸರಸ್ವತಿಯ ಶಿಲ್ಪ ಇದೆ. ಸಾಮಾನ್ಯವಾಗಿ ಇಂತಹ ಜಾಗದಲ್ಲಿ ಗಜಲಕ್ಷ್ಮೀ ಶಿಲ್ಪವಿರುತ್ತದೆ. ಕೇವಲ ಒಂದು ಚದುರ ಅಡಿ ಅಗಲದ ಶಿಲ್ಪವಾಗಿರುವುದರಿಂದಲೂ, ಹಾಗೂ ಅತಿಯಾಗಿ ಸುಣ್ಣ ಬಳಿದಿರುವುದರಿಂದಲೂ ಸುತ್ತ ಇರುವ ಪರಿವಾರ ದೇವತೆಗಳನ್ನು ಗುರುತಿಸಲಾಗುವುದಿಲ್ಲ. ಈ ಸರಸ್ವತಿಯು ಎರಡು ಕೈಗಳಲ್ಲಿ ವೀಣೆ ನುಡಿಸುತ್ತಿದ್ದಾಳೆ. ಆಕೆಯ ಉಳಿದ ಕೈಗಳಲ್ಲಿ ಕಮಲ, ಅಕ್ಷಮಾಲೆ ಮತ್ತು ಪುಸ್ತಕಗಳನ್ನು ಗುರುತಿಸಬಹುದು. ನಾಲ್ಕನೇ ಕೈಯಲ್ಲಿ ಇರುವುದು ಅಂಕುಶದಂತೆ ಕಾಣುತ್ತದೆ. ಹಲವಾರು ವಾದ್ಯಗಾರರು ಇದೇ ಫಲಕದೊಳಗೆ ಕಾಣುತ್ತಾರೆ. ಸರಸ್ವತಿಯ ತಲೆಯ ಮೇಲ್ಭಾಗದಲ್ಲಿ ಅಗಲವಾದ ಛತ್ರಿಯಿದೆ.

2.1. ಸ್ಥಾನಕ ದ್ವಿಭುಜ ಸರಸ್ವತೀ ಶಿಲ್ಪಗಳು

ಒಂದು ಕೈಯಲ್ಲಿ ಪುಸ್ತಕ ಹಿಡಿದಿರುವ, ಇನ್ನೊಂದು ಕೈಯನ್ನು ಉಪದೇಶ ಮುದ್ರೆಯಲ್ಲಿ ಹಿಡಿದಿರುವ ಕೆಲವು ಶಿಲ್ಪಗಳು ಸಿಗುತ್ತವೆ. ಹಾಗೆಯೇ ಎರಡೂ ಕೈಗಳಲ್ಲಿ ವೀಣೆ ನುಡಿಸುತ್ತಿರುವ ಶಿಲ್ಪಗಳೂ ಸಿಗುತ್ತವೆ. ಬೇಲೂರಿನ ಚೆನ್ನಕೇಶವ ದೇವಾಲಯದಲ್ಲಿ ಸಾಲಭಂಜಿಕೆಯರಲ್ಲಿ ಪುಸ್ತಕ ಮತ್ತು ವೀಣೆ ಹಿಡಿದಿರುವ ಶಿಲ್ಪಗಳನ್ನು ಕಾಣಬಹುದು.

ಹಾಸನ ಜಿಲ್ಲೆ ಮೊಸಳೆಯ ನಾಗೇಶ್ವರ ದೇವಾಲಯದ ಭಿತ್ತಿಯಲ್ಲಿ ಒಂದು ತ್ರಿಮುಖ ದೇವತೆಯ ಚಿತ್ರವಿದೆ. ಎಡಗೈಯಲ್ಲಿ ಅಕ್ಷಮಾಲೆಯಿದ್ದು, ತ್ರುಟಿತವಾಗಿರುವ ಬಲಗೈಯಲ್ಲಿ ಪುಸ್ತಕವಿದ್ದಿರಬಹುದಾದ ಕುರುಹುಗಳು ಕಾಣಿಸುತ್ತವೆ. ಇದೇ ದೇವಾಲಯದ ಭಿತ್ತಿಯಲ್ಲಿ ಮೂರು ಮುಖವನ್ನುಳ್ಳ ಆಸೀನ ಚತುರ್ಭುಜ ಸರಸ್ವತೀ ಶಿಲ್ಪವಿರುವುದರಿಂದ, ಈ ದ್ವಿಭುಜ ತ್ರಿಮುಖ ಶಿಲ್ಪವೂ ಸರಸ್ವತಿ ಆಗಿರಬಹುದೆಂದು ತೋರುತ್ತದೆ.

2.2. ಸ್ಥಾನಕ ಚತುರ್ಭುಜ ಸರಸ್ವತೀ ಶಿಲ್ಪಗಳು

ಈ ರೀತಿಯ ಶಿಲ್ಪಗಳು ಸಾಮಾನ್ಯವಾಗಿ ದೇವಾಲಯಗಳ ಹೊರ ಭಿತ್ತಿಯಲ್ಲಿ ಕಾಣುತ್ತವೆ. ಹೆಚ್ಚಿನ ಶಿಲ್ಪಗಳ ಚತುರ್ಭುಜಗಳಲ್ಲಿ ಅಕ್ಷಮಾಲೆ–ಅಂಕುಶ–ಪಾಶ(ಪವಿತ್ರ)–ಪುಸ್ತಕ ಇರುತ್ತವೆ. ಶಿಲ್ಪಗಳು ದೊಡ್ಡದಾಗಿದ್ದರೆ ಅಲಂಕಾರವೂ ಇರುತ್ತದೆ. ಹಳೇಬೀಡಿನ ಹೊಯ್ಸಳೇಶ್ವರ–ಶಾಂತಲೇಶ್ವರ ದೇವಾಲಯದ (ಕ್ರಿ.ಶ.1121) ಭಿತ್ತಿಯಲ್ಲಿ ಸುಮಾರು ನಾಲ್ಕೂವರೆ ಅಡಿ ಎತ್ತರದ ಮೂರು ಅಲಂಕೃತ ಸರಸ್ವತೀ ಶಿಲ್ಪಗಳಿವೆ.

ಎರಡು ಶಿಲ್ಪಗಳಿಗೆ ಇಕ್ಕೆಲಗಳಲ್ಲಿ ಚಾಮರಧಾರಿಣಿಯರಿದ್ದಾರೆ. ಅದರಲ್ಲಿ ಒಂದು ಶಿಲ್ಪದ ಇಕ್ಕೆಲಗಳಲ್ಲಿ ಸುಮಾರು ಅಷ್ಟೇ ಎತ್ತರದ ಬ್ರಹ್ಮ ಮತ್ತು ವಿಷ್ಣುವಿನ ಶಿಲ್ಪಗಳಿವೆ. ಹೊಯ್ಸಳೇಶ್ವರ ದೇವಾಲಯದ ಗರ್ಭಗುಡಿಯ ಮುಂದೆ ಎಡಬಲಗಳಲ್ಲಿ ಎರಡು ದೊಡ್ಡ ದೇವಕೋಷ್ಠಗಳಿವೆ. ಅದರಲ್ಲಿ ಎಡಭಾಗಕ್ಕಿರುವ ದೇವಕೋಷ್ಠದ ಮೂರು ಹಂತದ ಶಿಖರಗಳಲ್ಲಿ ಮೂರು ಸರಸ್ವತೀ ಶಿಲ್ಪಗಳನ್ನು ಕೆತ್ತಲಾಗಿದೆ. ಸುಮಾರು ಒಂದು ಅಡಿ ಎತ್ತರವಿರುವ ಈ ಶಿಲ್ಪಗಳು ಒಂದೊಂದೂ ಬೇರೆ ಬೇರೆ ಭಂಗಿಯಲ್ಲಿವೆ. ಕೆಳಗಿನ ಹಂತದಲ್ಲಿ ನೃತ್ಯ ಸರಸ್ವತಿ; ಮಧ್ಯದ ಹಂತದಲ್ಲಿ ಆಸೀನ ಚತುರ್ಭುಜ ಸರಸ್ವತಿಯ ಶಿಲ್ಪವಿದೆ. ಮೇಲಿನ ಹಂತದಲ್ಲಿ ಸ್ಥಾನಕ ಚತುರ್ಭುಜ ಶಿಲ್ಪವಿದೆ. ಈ ಮೇಲಿನ ಹಂತದ ಸ್ಥಾನಕ ಚತುರ್ಭುಜ ಶಿಲ್ಪದ ಕೈಗಳಲ್ಲಿ ಅಕ್ಷಮಾಲೆ, ಅಂಕುಶ, ಪಾಶ ಮತ್ತು ಪುಸ್ತಕಗಳಿವೆ. ಹಳೇಬೀಡಿನ ಕೇದಾರೇಶ್ವರ ದೇವಾಲಯದ ಹೊರಭಿತ್ತಿಯಲ್ಲಿರುವ ಶಿಲ್ಪವೂ ಇದೇ ಲಕ್ಷಣಗಳನ್ನು ಒಳಗೊಂಡಿದೆ. ಪುಸ್ತಕ ಹಿಡಿದಿರುವ ಕೈ ಸ್ವಲ್ಪಭಾಗ ಮುರಿದಿದೆ. ಸುಮಾರು ಮೂರು ಅಡಿ ಎತ್ತರವಿರುವ ಶಿಲ್ಪದ ಬಲಭಾಗದಲ್ಲಿ ಅಷ್ಟೇ ಎತ್ತರದ ಬ್ರಹ್ಮನ ಸ್ಥಾನಕ ಶಿಲ್ಪವಿರುವುದನ್ನು ಕಾಣಬಹುದು.

ಹಾಸನ ಜಿಲ್ಲೆಯ ಅರಸೀಕೆರೆಯಲ್ಲಿರುವ ಈಶ್ವರ ದೇವಾಲಯ (ಕ್ರಿ.ಶ. 1220) ಮತ್ತು ಕೊರವಂಗಲದ ಬೂಚೇಶ್ವರ ದೇವಾಲಯದ (ಕ್ರಿ.ಶ. 1173) ಭಿತ್ತಿಯಲ್ಲೂ ಹಳೇಬೀಡಿನ ಕೇದಾರೇಶ್ವರ ದೇವಾಲಯದ ಭಿತ್ತಿಯಲ್ಲಿರುವಂಥದ್ದೇ ಶಿಲ್ಪವನ್ನು ಕಾಣಬಹುದು. ಕೊಪ್ಪಳ ಜಿಲ್ಲೆ ಇಟಗಿಯ ಮಹಾದೇವ ದೇವಾಲಯದ ಮುಖಮಂಟಪದ ಕಂಬವೊಂದರ ಪೀಠಭಾಗದಲ್ಲಿ ಸುಮಾರು ಮುಕ್ಕಾಲು ಅಡಿ ಎತ್ತರವಿರುವ ಸರಸ್ವತೀ ಶಿಲ್ಪದ ಲಕ್ಷಣವೂ ಇದೇ ಆಗಿದೆ. ಕಲ್ಯಾಣಿ ಚಾಲುಕ್ಯರ ದೇವಾಲಯಗಳ ಸಣ್ಣ ಪ್ರಮಾಣದ ಶಿಲ್ಪಗಳು ಹೊಯ್ಸಳ ದೇವಾಲಯಗಳಲ್ಲಿ ಬೃಹತ್ ಪ್ರಮಾಣ ತಾಳಿರುವುದನ್ನು ಎಲ್ಲೆಡೆ ಕಾಣಬಹುದು. ಇಟಗಿಯ ಶಿಲ್ಪವು ಸಣ್ಣದಾಗಿದ್ದರೂ ಅತ್ಯಂತ ಸುಂದರವಾದ ಕೆತ್ತನೆಯಾಗಿದೆ. ಪ್ರಭಾವಳಿಯಂತೂ ಸುಮಾರು ಎರಡು ಇಂಚು ಮುಂಚಾಚಿಕೊಂಡಿದ್ದು ನೋಡಲು ಆಕರ್ಷಕವಾಗಿದೆ.

ಚಿಕ್ಕಮಗಳೂರು ಜಿಲ್ಲೆ ಕಳಸಾಪುರದ ಬಳಿ ಭದ್ರಕಾಳಿವನ ಎಂಬ ಪ್ರದೇಶವಿದೆ. ಅಲ್ಲಿ ಇತ್ತೀಚೆಗೆ ವೀರಭದ್ರ ದೇವಾಲಯವನ್ನು ನಿರ್ಮಿಸಲಾಗಿದೆ. ಈ ದೇವಾಲಯದ ಸುತ್ತಣ ಸುಮಾರು ಐವಾರು ಎಕರೆ ಪ್ರದೇಶವನ್ನು ಸೂಕ್ಷ್ಮವಾಗಿ ಗಮನಿಸಿದರೆ ಸುಮಾರು 12ನೇ ಶತಮಾನಕ್ಕೆ ಸೇರಿದ ದೊಡ್ಡ ದೇವಾಲಯವೊಂದರ ಕುರುಹುಗಳು ಸಾವಿರಾರು ಸಿಗುತ್ತವೆ. ಅಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಸುಮಾರು ಮೂರು ಅಡಿ ಎತ್ತರದ ಹಲವಾರು ದೇವತಾಶಿಲ್ಪಗಳ ಸಂಖ್ಯೆಯೇ ನೂರನ್ನು ದಾಟುತ್ತದೆ. ಅವುಗಳಲ್ಲಿ, ಮೇಲಿನ ಲಕ್ಷಣಗಳನ್ನೇ ಹೊಂದಿರುವ ಒಂದು ಸರಸ್ವತಿಶಿಲ್ಪವೂ ಇದೆ.

ಸ್ಥಾನಕ ಶಿಲ್ಪಗಳಲ್ಲಿ ವೀಣಾ ಸರಸ್ವತೀ ಬಹಳ ಅಪರೂಪ. ಹಾಸನ ಜಿಲ್ಲೆಯ ಕೊರವಂಗಲದ ಬೂಚೇಶ್ವರ ದೇವಾಲಯದ (ಕ್ರಿ.ಶ. 1173) ಭಿತ್ತಿಯಲ್ಲಿ ಈ ಬಗೆಯ ಅತ್ಯಂತ ಸುಂದರವಾದ ಶಿಲ್ಪವೊಂದಿದೆ. ಎರಡು ಕೈಗಳಲ್ಲಿ ಅಕ್ಷಮಾಲೆ ಪುಸ್ತಕ ಹಿಡಿದು, ಉಳಿದೆರಡು ಕೈಗಳಿಂದ ವೀಣೆ ನುಡಿಸುತ್ತಿರುವ ಶಿಲ್ಪ ಕುಸುರಿ ಕೆಲಸದಿಂದ ಕೂಡಿದೆ. ಅಗ್ನಿಪುರಾಣದಲ್ಲಿ ಹೇಳಿರುವ ಲಕ್ಷಣಗಳನ್ನು ಈ ಶಿಲ್ಪ ಯಥಾವತ್ತಾಗಿ ಹೊಂದಿರುವುದು ವಿಶೇಷವಾಗಿದೆ. ಶಿಲ್ಪದ ಅಲಂಕಾರ ಉಳಿದ ಎಲ್ಲಾ ಹೊಯ್ಸಳ ಶಿಲ್ಪಗಳಂತೆ ಶ್ರೀಮಂತವಾಗಿಯೇ ಇದೆ.

ಅಕ್ಷಮಾಲೆ, ಅಂಕುಶ, ಪಾಶದ ಜೊತೆಗೆ, ಪುಸ್ತಕದ ಬದಲಾಗಿ ಕಳಶ ಹಿಡಿದಿರುವ ಸರಸ್ವತೀ ಶಿಲ್ಪಗಳು ದಾವಣಗೆರೆ ಜಿಲ್ಲೆ ಹರಿಹರದ ಹರಿಹರೇಶ್ವರ ದೇವಾಲಯದ (ಸುಮಾರು ಕ್ರಿ.ಶ. 1100) ಭಿತ್ತಿಯಲ್ಲಿವೆ. ಅನೇಕ ಕಡೆ ಶಿಲ್ಪಗಳು ಕಲ್ಲಿನ ಸವಕಳಿಯಿಂದಾಗಿ ಅಸ್ಪಷ್ಟವಾಗಿವೆ. ಕೆಲವು ಶಿಲ್ಪಗಳಲ್ಲಿ ಕಳಶದ ಬದಲು ಪುಸ್ತಕ ಇದ್ದಿರಬಹುದಾದ ಕುರುಹುಗಳು ಕಾಣಿಸುತ್ತವೆ. ಹಾಸನ ಜಿಲ್ಲೆಯ ಕೊರವಂಗಲದ ಬೂಚೇಶ್ವರ ದೇವಾಲಯದ (ಕ್ರಿ.ಶ. 1173) ಭಿತ್ತಿಯಲ್ಲಿ ಫಲ, ಅಕ್ಷಮಾಲೆ, ಕಳಶ ಮತ್ತು ಪುಸ್ತಕವಿರುವ ಸ್ಥಾನಕ ಶಿಲ್ಪವು ಗಮನ ಸೆಳೆಯುತ್ತದೆ.

ಹಾಸನ ಜಿಲ್ಲೆಯ ಅರಸೀಕೆರೆಯಲ್ಲಿರುವ ಈಶ್ವರ ದೇವಾಲಯದ (ಕ್ರಿ.ಶ. 1220) ಭಿತ್ತಿಯಲ್ಲಿ ಎರಡು ತ್ರಿಮುಖ ದೇವತೆಗಳ ಶಿಲ್ಪಗಳನ್ನು ಕಾಣಬುಹುದು. ಈ ಎರಡೂ ಶಿಲ್ಪಗಳ ಕೆಲವು ಕೈಗಳು ಮುರಿದು ಹೋಗಿರುವುದರಿಂದ ಇವು ಸರಸ್ವತೀ ಶಿಲ್ಪಗಳೆಂದು ಕರಾರುವಾಕ್ಕಾಗಿ ಹೇಳುವುದು ಕಷ್ಟ. ಆದರೆ ಉಳಿದಿರುವ ಕೈಗಳಲ್ಲಿನ ಪಾಶ, ಅಂಕುಶ, ಫಲ ಮತ್ತು ಪದ್ಮಗಳನ್ನು ಗಮನಿಸಿದರೆ ಇವು ಸರಸ್ವತೀ ಶಿಲ್ಪಗಳಾಗಿರಬಹುದೆಂದು ಅನ್ನಿಸುತ್ತದೆ. ಇದೇ ರೀತಿಯ (ಆಸೀನ) ತ್ರಿಮುಖ ಸರಸ್ವತಿಯ ಶಿಲ್ಪವೊಂದು ಮೊಸಳೆಯ ನಾಗೇಶ್ವರ ದೇವಾಲಯದಲ್ಲಿದೆ. ಇದೇ ನಾಗೇಶ್ವರ ದೇವಾಲಯದ (ಕ್ರಿ.ಶ. 1250) ದಕ್ಷಿಣ ಭಿತ್ತಿಯಲ್ಲಿ ದುರ್ಗೆಯು ಸರಸ್ವತಿಯಾಗಿ (M.A.R.ನಲ್ಲಿ 'Durga Standing as Sharada' ಎಂದು ನಮೂದಿಸಲಾಗಿದೆ.) ನಿಂತಿರುವುದನ್ನು ಗಮನಿಸಬಹುದಾಗಿದೆ. ಈ ಶಿಲ್ಪದ ಒಂದು ಕೈ ಚಿನ್ಮುದ್ರೆಯಲ್ಲಿದ್ದರೆ, ಉಳಿದ ಮೂರು ಕೈಗಳಲ್ಲಿ ತ್ರಿಶೂಲ, ಡಮರುಗ ಮತ್ತು ಪುಸ್ತಕಗಳು ಇವೆ. ದೊಡ್ಡದಾದ ಕಾಲಂದಿಗೆಗಳು ಹಾಗೂ ಕಾಲಂದಿಗೆಗಳವರೆಗೂ ಇಳಿಬಿದ್ದಿರುವ ಉತ್ತರೀಯ ಮಣಿಗಳಿಂದ ಅಲಂಕೃತವಾಗಿದೆ. ಸೊಂಟದಿಂದ ತೊಡೆಯಭಾಗದವರೆಗೂ ವಿಸ್ತರಿಸಿರುವ ವಸ್ತ್ರವೂ ಮಣಿಗಳಿಂದ ಅಲಂಕೃತವಾಗಿದೆ. ಕಟಿಯಲ್ಲಿನ ವಸ್ತ್ರದ ಅಂಚು ಕುಚ್ಚು ಕುಚ್ಚಾಗಿ ಕಾಲಂದಿಗೆಯವರೆಗೂ ವಿಸ್ತರಿಸಿದೆ. ಸೊಂಟಪಟ್ಟಿ ಇದ್ದು, ಎಡಸ್ತನದ ಮೇಲಿಂದ ಹಾದು ಬಂದಿರುವ ಯಜ್ಞೋಪವೀತ ಸೊಂಟಪಟ್ಟಿಯ ಮೇಲಿಂದ ಹಿಂದಕ್ಕೆ ವಿಸ್ತರಿಸಿದೆ. ಎರಡು ಎಳೆಯ ಒಂದು ಮಣಿಹಾರ ನಾಭಿಯವರೆಗೂ ವಿಸ್ತರಿಸಿದೆ. ಜೊತೆಗೆ ಇನ್ನೊಂದು

ಪದಕಯುಕ್ತಹಾರ ಕಂಠೀಹಾರವೂ ಇದೆ. ನಾಲ್ಕೂ ಕೈಗಳು ಬಳೆ ಕಡಗ ತೋಳಬಂದಿಗಳಿಂದ ಆಲಂಕೃತವಾಗಿವೆ. ಚಕ್ರಯುಕ್ತ ಕರಂಡಮಕುಟವಿದ್ದು, ಅದರಿಂದ ಹೊರಚಾಚಿರುವ ಕೂದಲು ಸುರುಳಿ ಸುರುಳಿಯಾಗಿ ಭುಜದವರೆಗೂ ವಿಸ್ತರಿಸಿದೆ. ಹಣೆಯ ಮೇಲೂ ಗುಂಗುರು ಕೂದಲನ್ನು ಕಾಣಬಹುದು. ಚಿನ್ಮುದ್ರೆಯಲ್ಲಿರುವ ಹಸ್ತದಲ್ಲಿ ರತ್ನದಂತಹ ವಸ್ತುವಿದ್ದರೆ, ತ್ರಿಶೂಲದ ತುದಿಯಲ್ಲಿ ಎರಡು ನಿಂಬೆಹಣ್ಣಿನಂತಹ ವಸ್ತುಗಳಿವೆ. ಡಮರುಗವು ಹೆಚ್ಚು ಲಂಕಾರಗೊಂಡಿದ್ದು, ಅದರ ಹಗ್ಗಗಳ ಎಳೆಗಳೂ ಸಹ ಅತ್ಯಂತ ಸ್ಪಷ್ಟವಾಗಿ ಗೋಚರಿಸುತ್ತವೆ. ಪುಸ್ತಕವು ಕುದುರೆ ಲಾಳಾಕೃತಿಯಲ್ಲಿ ಕೆಳಮುಖವಾಗಿ ಬಾಗಿದ್ದು ಅದರ ತುದಿಯನ್ನು ಕುಚ್ಚಿನಿಂದ ಅಲಂಕರಿಸಿದೆ. ಪುಸ್ತಕವನ್ನು ಹಿಡಿದಿರುವ ಕೈಯ ಉಗುರುಗಳು ಅತ್ಯಂತ ಚೂಪಾಗಿವೆ. ಹಿಂಬದಿಯಿಂದ ಇಳಿಬಿದ್ದಿರುವ ವಸ್ತ್ರ ಕಾಲಿನವರೆಗೂ ವಿಸ್ತರಿಸಿದೆ. ಮುಖಭಾವ ಹಸನ್ಮುಖಿಯಾಗಿದ್ದರೂ ಒಟ್ಟಾರೆ ನಿಲುವಿನಲ್ಲಿ ಒಂದು ಬಗೆಯ ರುದ್ರ ರಮ್ಯತೆ ಎದ್ದು ಕಾಣುತ್ತದೆ.

ಮೈಸೂರು ಜಿಲ್ಲೆ ತಲಕಾಡಿನಲ್ಲಿ ಕೀರ್ತಿನಾರಾಯಣ ದೇವಾಲಯದ ಭಿತ್ತಿಯಲ್ಲಿ (ಕ್ರಿ.ಶ. 1268) ಅಕ್ಷಮಾಲೆ, ಚಕ್ರ, ಶಂಖ ಮತ್ತು ಪುಸ್ತಕ ಹಿಡಿದಿರುವ ಪುರುಷ ಶಿಲ್ಪವಿದೆ. ಇದಕ್ಕೆ ಸರಿಯಾದ ವಿವರಣೆ ಸಿಗುವುದಿಲ್ಲ. ಬಹುಶಃ ಇದು ವಿಷ್ಣುವಿಗೆ ವಿದ್ಯಾದೇವತೆಯ ಸ್ಥಾನವನ್ನು ಆರೋಪಿಸಿ ರಚಿಸಿರುವ ಶಿಲ್ಪವಾಗಿರಬಹುದು. ಎರಡು ಕೈಗಳಲ್ಲಿ ವೀಣೆ ಹಿಡಿದು ಉಳಿದೆರಡು ಕೈಗಳಲ್ಲಿ ಶಂಖ ಚಕ್ರ ಹಿಡಿದಿರುವ ಸ್ಥಾನಕ ವಿಷ್ಣುವಿನ ಶಿಲ್ಪವನ್ನು ಅರಳಗುಪ್ಪೆಯಲ್ಲೂ ನೋಡಬಹುದು. ಸೋಮನಾಥಪುರದ ಕೇಶವ ದೇವಾಲಯದ ಭಿತ್ತಿಯಲ್ಲಿ ಇದೇ ಲಕ್ಷಣಗಳನ್ನುಳ್ಳ ನೃತ್ಯಭಂಗಿಯಲ್ಲಿರುವ ವಿಷ್ಣುವಿನ ಶಿಲ್ಪವೊಂದಿದೆ.

3.1. ತ್ರಿಭಂಗಿಯಲ್ಲಿರುವ ದ್ವಿಭುಜ ಸರಸ್ವತೀ ಶಿಲ್ಪಗಳು

ಇವು ಸ್ಥಾನಕ ಶಿಲ್ಪಗಳಾದರೂ ತ್ರಿಭಂಗಿಯಲ್ಲಿ ನಿಂತಿರುವುದರಿಂದ, ಮತ್ತು ಈ ಬಗೆಯ ಸಾಕಷ್ಟು ದ್ವಿಭುಜ ಮತ್ತು ಚತುರ್ಭುಜ ಸರಸ್ವತೀ ಶಿಲ್ಪಗಳು ದೊರೆಯುವುದರಿಂದ ಪ್ರತ್ಯೇಕ ವಿಭಾಗವನ್ನು ಮಾಡಿಕೊಳ್ಳಲಾಗಿದೆ. ಈ ವಿಭಾಗದ ದ್ವಿಭುಜ ಶಿಲ್ಪಗಳಿಗೆ ಉತ್ತಮ ಉದಾಹರಣೆ ಎಂದರೆ ಹಾಸನ ಜಿಲ್ಲೆಯ ಕೊರವಂಗಲದ ಬೂಚೇಶ್ವರ ದೇವಾಲಯದ (ಕ್ರಿ.ಶ. 1173) ಭಿತ್ತಿಯಲ್ಲಿರುವ ಎರಡು ಶಿಲ್ಪಗಳು. ಇವೆರಡೂ ಒಂದೇ ತೆರನಾದ ಲಕ್ಷಣಗಳನ್ನು ಹೊಂದಿರುವ ಸುಮಾರು ಒಂದೂವರೆ ಅಡಿ ಎತ್ತರದ ಹೆಚ್ಚು ಅಲಂಕಾರವಿಲ್ಲದ ಶಿಲ್ಪಗಳಾಗಿವೆ. ಅಕ್ಷಮಾಲೆಯನ್ನು ಧರಿಸಿದ್ದರೂ ಬಲಗೈ ಉಪದೇಶ ಮುದ್ರೆಯಲ್ಲಿದ್ದು, ಎಡಗೈಯಲ್ಲಿ ಪುಸ್ತಕವಿದೆ. ಎರಡೂ ಕೈಗಳಲ್ಲಿ ವೀಣೆಯನ್ನು ನುಡಿಸುತ್ತಾ ತ್ರಿಭಂಗಿಯಲ್ಲಿ ನಿಂತಿರುವ ಶಿಲ್ಪವೊಂದು ಮಂಡ್ಯ ಜಿಲ್ಲೆ ಕಿಕ್ಕೇರಿಯ ಬ್ರಹ್ಮೇಶ್ವರ ದೇವಾಲಯದ (ಕ್ರಿ.ಶ. 1118) ಹೊರಭಿತ್ತಿಯಲ್ಲಿದೆ. ಈ ಶಿಲ್ಪದಲ್ಲಿ ವೀಣೆ ದಂಡದಂತೆ ಕಾಣುತ್ತಿರುವುದು ಗಮನಾರ್ಹ. ಹಳೇಬೀಡಿನ

ಹೊಯ್ಸಳೇಶ್ವರ ದೇವಾಲಯದ ಹೊರಭಿತ್ತಿಯಲ್ಲೂ ಇದೇ ರೀತಿಯ ಶಿಲ್ಪವೊಂದಿದ್ದು, ಅದರ ಕೈಯಲ್ಲಿರುವ ವೀಣೆ ಪಿಟೀಲನ್ನು ಹೋಲುತ್ತಿರುವುದು ವಿಶೇಷವಾಗಿದೆ. ಬೇಲೂರಿನ ಚೆನ್ನಕೇಶವ ದೇವಾಲಯದ ಹೊರಗೆ ಸಾಲಭಂಜಿಕೆಯರ ಮೂರು ಶಿಲ್ಪಗಳು ತ್ರಿಭಂಗಿಯಲ್ಲಿದ್ದು ಅವುಗಳ ಎಡಗೈಯಲ್ಲಿ ಪುಸ್ತಕವಿದೆ. ಒಂದು ಶಿಲ್ಪದ ಬಲಗೈ ಉಪದೇಶ ಮುದ್ರೆಯಲ್ಲಿದೆ. ಇಕ್ಕೆಲಗಳಲ್ಲಿ ಚಾಮರಧಾರಿಣಿಯರೂ ಇದ್ದಾರೆ. ಇದು ಸಾಲಭಂಜಿಕೆಯರ ಶಿಲ್ಪಕ್ಕಿಂತ ಭಿನ್ನವಾಗಿದ್ದು ಕಿರೀಟವೂ ಇದೆ. ಆದರೆ ಉಳಿದೆರಡು ಶಿಲ್ಪಗಳು ಪೂರ್ಣವಾಗಿ ಸಾಲಭಂಜಿಕೆಯರದ್ದೇ ಆಗಿದೆ. ಅದರಲ್ಲಿ ಒಂದು ಶಿಲ್ಪದ ಬಲಗೈ ಅಕ್ಷಮಾಲೆಯೊಂದಿಗೆ ಅಭಯಮುದ್ರೆಯಲ್ಲಿದ್ದರೆ, ಇನ್ನೊಂದರದ್ದು ಚಿನ್ಮುದ್ರೆಯಲ್ಲಿದೆ.

3.2. ತ್ರಿಭಂಗಿಯಲ್ಲಿರುವ ಚತುರ್ಭುಜ ಸರಸ್ವತೀ ಶಿಲ್ಪಗಳು

ಕ್ರಿ.ಶ. 1234ಕ್ಕೆ ಸೇರಿದ ಮಂಡ್ಯ ಜಿಲ್ಲೆ ಬಸರಾಳಿನ ಮಲ್ಲಿಕಾರ್ಜುನ ದೇವಾಲಯದ ಹೊರ ಭಿತ್ತಿಯಲ್ಲಿ ಸಮಾನ ಲಕ್ಷಣಗಳುಳ್ಳ ಮೂರು ಶಿಲ್ಪಗಳಿವೆ. ಅಕ್ಷಮಾಲೆ, ಅಂಕುಶ, ಪವಿತ್ರ ಮತ್ತು ಫಲವನ್ನು ನಾಲ್ಕು ಕೈಗಳಲ್ಲಿ ಹಿಡಿದಿರುವ ಈ ಶಿಲ್ಪಗಳ ಒಂದರ ಕೈಯಲ್ಲಿಯೂ ಪುಸ್ತಕವಿಲ್ಲದಿರುವುದು ಅವುಗಳು ಸರಸ್ವತೀ ಶಿಲ್ಪಗಳೇ ಎಂಬ ಅನುಮಾನಕ್ಕೆ ಕಾರಣವಾಗಿದೆ. ಆದರೆ ಸರಸ್ವತೀ ಕೈಗಳಲ್ಲಿ ಫಲವಿರುವ ಅನೇಕ ಶಿಲ್ಪಗಳು ನಮಗೆ ಸಿಗುವುದರಿಂದ ಇವುಗಳನ್ನೂ ಸರಸ್ವತೀ ಶಿಲ್ಪಗಳೆನ್ನಬಹುದು. ಈ ದೇವಾಲಯದಲ್ಲಿ ಇವುಗಳಲ್ಲದೆ ಪುಸ್ತಕ ಹಿಡಿದಿರುವ, ಬೇರೆ ಬೇರೆ ಬಗೆಯ ಏಳು ಸರಸ್ವತೀ ಶಿಲ್ಪಗಳು ಇರುವುದರಿಂದ ಇವೂ ಅದೇ ಸರಣಿಯ ಮುಂದುವರೆದ ಶಿಲ್ಪಗಳೆಂದು ಹೇಳಬಹುದು. ನುಗ್ಗೆಹಳ್ಳಿಯಲ್ಲೂ ಈ ರೀತಿಯ ಶಿಲ್ಪವನ್ನು ಕಾಣಬಹುದು. ಜಿನನಾಥಪುರದ ಶಾಂತಿನಾಥ ಬಸದಿಯ ಭಿತ್ತಿಯಲ್ಲಿ, ಕರದಲ್ಲಿ ಫಲ ಹಿಡಿದಿರುವ ಸರಸ್ವತೀ ಶಿಲ್ಪವಿದೆ. ಜೈನಪಂಥದ ಸರಸ್ವತೀ ಶಿಲ್ಪಗಳಲ್ಲಿ ಫಲ ಸಾಮಾನ್ಯವಾಗಿ ಕಂಡುಬರುತ್ತದೆ. ಹೊಯ್ಸಳರ ಕಾಲದ ವೈದಿಕ ಪರಂಪರೆಯ ಹಲವಾರು ದೇವಾಲಯಗಳನ್ನು ಕಟ್ಟಿಸಿದವರು ಮತ್ತು ಕಟ್ಟಿಸಿದವರು ಜೈನ ಪರಂಪರೆಯ ದೇವಾಲಯಗಳನ್ನೂ ನಿರ್ಮಿಸಿರುವುದನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಇಲ್ಲಿನ ಶಿಲ್ಪಗಳನ್ನು ಜೈನ ಅಥವಾ ವೈದಿಕ ಎಂದು ಪ್ರತ್ಯೇಕಿಸುವುದು ಸಾಧ್ಯವಾಗುವುದಿಲ್ಲ.

ಕೈಗಳಲ್ಲಿ ಅಕ್ಷಮಾಲೆ, ಅಂಕುಶ, ಪಾಶ (ಪವಿತ್ರ), ಪುಸ್ತಕ ಹಿಡಿದು ತ್ರಿಭಂಗಿಯಲ್ಲಿರುವ ಶಿಲ್ಪಗಳು ದೇವಾಲಯಗಳ ನವರಂಗ ಮತ್ತು ಮಂಟಪಗಳ ಕಂಬಗಳ ಪೀಠಭಾಗದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಹಿರೇಹಡಗಲಿಯ ಕಲ್ಲೇಶ್ವರ ದೇವಾಲಯದ ಹೊರಭಾಗದಲ್ಲಿರುವ ನಂದೀಮಂಟಪದ ಮುಂಬದಿಯ ಎಡಭಾಗದ ಕಂಬದಲ್ಲಿ ಈ ರೀತಿಯ ಶಿಲ್ಪವನ್ನು ಅತ್ಯಂತ ಸುಂದರವಾಗಿ ಕೆತ್ತಲಾಗಿದೆ. ಸುಮಾರು ಮುಕ್ಕಾಲು ಅಡಿ ಎತ್ತರದ ಈ ಶಿಲ್ಪ ಸರ್ವಾಲಂಕೃತವಾಗಿದೆ. ಕಲ್ಯಾಣದ ಚಾಲುಕ್ಯರ ಕಾಲದ ಸರಸ್ವತೀ

ಶಿಲ್ಪಗಳು ಗಾತ್ರದಲ್ಲಿ ಸಣ್ಣದಾಗಿದ್ದರೂ ಸೌಂದರ್ಯದಲ್ಲಿ ಅದ್ಭುತವಾಗಿವೆ. ಇದೇ ರೀತಿಯ ಶಿಲ್ಪವನ್ನು ಇಟಗಿಯ ಮಹಾದೇವ ದೇವಾಲಯದ ತೆರೆದ ಮುಖಮಂಟಪದ ಎರಡು ಕಂಬಗಳಲ್ಲೂ ಕಾಣಬಹುದು. ಈ ದೇವಾಲಯದ ಇದೇ ರೀತಿಯ ಇನ್ನೊಂದು ಸರಸ್ವತೀ ಶಿಲ್ಪದ ಇಕ್ಕೆಲಗಳಲ್ಲಿ ಸಖಿಯರನ್ನೂ ಕೆತ್ತಲಾಗಿದೆ. ಕೆಳಗಡೆ ಬ್ರಹ್ಮನ ಶಿಲ್ಪವಿದೆ.

ಬೇಲೂರಿನ ಚೆನ್ನಕೇಶವ ದೇವಾಲಯದ ನವರಂಗದಲ್ಲಿರುವ ಕಂಬವೊಂದರ ಪೀಠದಲ್ಲಿ ಇರುವ ಸರಸ್ವತಿಯ ಶಿಲ್ಪವು ಅತ್ಯಂತ ಕಲಾತ್ಮಕವಾದುದಾಗಿದೆ. ಪಾಶವಿರುವ ಕೈ ಮುರಿದುಹೋಗಿದೆ. ಧಾರವಾಡದ ಬಳಿ ಇರುವ ಅಮರಗೋಳದ ಕೇಶವ (ಈಗ ಬನಶಂಕರಿ ದೇವಾಲಯವೆನ್ನುತ್ತಾರೆ) ದೇವಾಲಯದ ನವರಂಗದ ಕಂಬದಲ್ಲಿರುವ ಶಿಲ್ಪವೂ ಇದೇ ಲಕ್ಷಣಗಳನ್ನು ಹೊಂದಿದೆ. ಆದರೆ ಅಕ್ಷಮಾಲೆ ಹಿಡಿದಿರುವ ಕೈ, ಅಕ್ಷಮಾಲೆಯೊಂದಿಗೇ ಅಭಯ ಮುದ್ರೆಯಲ್ಲಿದೆ. ಒಬ್ಬಳು ಸಖಿ ಮತ್ತು ಹಂಸಗಳು ಇಕ್ಕೆಲಗಳಲ್ಲಿ ಇರುವುದು ಗಮನಾರ್ಹ. ಕಂಬಗಳ ಮೇಲಿರುವ ಶಿಲ್ಪಗಳಲ್ಲಿ ಹಂಸವಿರುವುದು ಇದೊಂದು ಶಿಲ್ಪದಲ್ಲಿ ಮಾತ್ರ.

ಬೇಲೂರಿನ ಚೆನ್ನಕೇಶವ ದೇವಾಲಯದ ಹೊರಭಿತ್ತಿಯಲ್ಲಿ ಸುಮಾರು ಮೂರೂವರೆ ಅಡಿ ಎತ್ತರವಿರುವ ಶಿಲ್ಪವೊಂದಿದೆ. ಅತ್ಯಂತ ಸುಂದರವಾಗಿರುವ ಈ ಶಿಲ್ಪ ಸರ್ವಾಲಂಕಾರಗಳಿಂದ ಕೂಡಿದೆ. ಅಕ್ಷಮಾಲೆ ಅಂಕುಶ ಪವಿತ್ರ ಮತ್ತು ಪುಸ್ತಕ ಎಲ್ಲವೂ ಸುಂದರವಾಗಿ ಮೂಡಿ ಬಂದಿವೆ. ಪುಸ್ತಕವಂತೂ ಸುಮಾರು ಮುಕ್ಕಾಲು ಅಡಿ ಉದ್ದವಿದ್ದು ಎರಡೂ ಬದಿ ಕೆಳಕ್ಕೆ ಬಾಗಿದೆ. ಆದರೆ ಈ ಶಿಲ್ಪ ಜಗತಿಯಿಂದ ಸುಮಾರು ಎಂಟು ಅಡಿ ಎತ್ತರದಲ್ಲಿದೆ. ಶಿಲ್ಪದ ತೊಡೆಯವರೆಗಿನ ಭಾಗ ಕೆಳಗಿನಿಂದ ಮೇಲ್ಚಾಚಿರುವ ಕಕ್ಷಾಸನದಲ್ಲಿ ಮುಚ್ಚಿ ಹೋಗಿದೆ. ಇದೇ ದೇವಾಲಯದ ಹೊರ ಪ್ರಾಕಾರದ ಗೋಡೆಯ ಒಳಭಿತ್ತಿಯನ್ನು ಪುನಾರಚಿಸುವ ವೇಳೆಯಲ್ಲಿ ತಂದು ಜೋಡಿಸಿರುವ ಶಿಲ್ಪವೊಂದಿದೆ. ಮೇಲಿನ ಶಿಲ್ಪದ ಲಕ್ಷಣಗಳನ್ನೇ ಇದು ಹೊಂದಿದ್ದರೂ, ಬಲಬದಿಯ ಎರಡು ಕೈಗಳು ಮುರಿದುಹೋಗಿದ್ದು ಎಡಭಾಗದ ಕೈಗಳಲ್ಲಿ ಪಾಶ ಮತ್ತು ಪುಸ್ತಕಗಳು ಮಾತ್ರ ಉಳಿದಿವೆ.

ಕಿಕ್ಕೇರಿಯ ಬ್ರಹ್ಮೇಶ್ವರ ದೇವಾಲಯದ ಹೊರಭಿತ್ತಿಯಲ್ಲಿ ವಿಶೇಷವಾದ ಒಂದು ಸರಸ್ವತೀ ಶಿಲ್ಪವಿದೆ. ತ್ರಿಭಂಗಿಯಲ್ಲಿರುವ ಈ ಚತುರ್ಭುಜ ಶಿಲ್ಪದ ಒಂದು ಕೈ ಅಕ್ಷಮಾಲೆಯೊಂದಿಗೆ ಉಪದೇಶ (ಚಿನ್ಮುದ್ರೆ?) ಮುದ್ರೆಯಲ್ಲಿದ್ದರೆ ನಾಲ್ಕನೇ ಕೈಯಲ್ಲಿ ಪುಸ್ತಕವಿದೆ. ಅದರ ಪುಟಗಳನ್ನು ಲೆಕ್ಕ ಹಾಕಬಹುದಾದಷ್ಟು ಸ್ಪಷ್ಟವಾಗಿ ಬಿಡಿಸಲಾಗಿದೆ. ಉಳಿದೆರಡು ಕೈಗಳಲ್ಲಿ ಅಂಕುಶ ಮತ್ತು ಪಾಶದ ಕುರುಹುಗಳಿವೆ. ಅವುಗಳ ಮೇಲ್ತುದಿ ಮುರಿದು ಹೋಗಿದ್ದರೂ, ಕೆಳಭಾಗದ ರಚನೆಯಿಂದ ಅವು ಅಂಕುಶ ಮತ್ತು ಪಾಶ ಎಂದು ಗುರುತಿಸಬಹುದು. ಪ್ರಭಾಚಕ್ರದೊಂದಿಗೆ ಸ್ವಲ್ಪ ದೊಡ್ಡದೆಂದೇ ಹೇಳಬಹುದಾದ

ಕಿರೀಟವಿದೆ. ಕಾಲಿನಲ್ಲಿ ಸರಪಳಿ, ಕಾಲಂದಿಗೆಗಳೂ, ಕೈಯಲ್ಲಿ ಬಳೆ ಕಡಗ ತೋಳಬಂದಿಗಳೂ ಇವೆ. ಕಂಠಿಕೆ, ಏಕಾವಳಿ ಸರ, ಸ್ತನಹಾರವಿದ್ದು ಅದರ ಜೊತೆಯಲ್ಲಿ ಯಜ್ಞೋಪವೀತವೂ ಇದೆ. ಉತ್ತರೀಯ ಎಡತೋಳಿನಿಂದ ಹೊರ ಬಂದು ಕಾಲಿನವರೆಗೂ ವಿಸ್ತರಿಸಿ ಹಿಂದಕ್ಕೆ ಹೋಗಿದೆ. ಯಜ್ಞೋಪವೀತ ಮತ್ತು ಉತ್ತರೀಯಗಳೆರಡರ ನಡುವೆ ಪದಕವುಳ್ಳ ಹಾರವಿದೆ. ಕಟಿಯಲ್ಲಿರುವ ವಸ್ತ್ರದ ಮೇಲೆ ಉರಹಾರವೂ ಮಣಿಯ ಅಲಂಕಾರದಿಂದ ಕೂಡಿದೆ. ಪೀಠದಲ್ಲಿ ಹಂಸವಿದೆ. ಇಷ್ಟೇ ಅಲ್ಲದೆ ಇನ್ನೊಂದು ವಿಶೇಷವೂ ಇಲ್ಲಿದೆ. ಅದೇ ಪೀಠದ ಮೇಲೆ, ಆ ಶಿಲ್ಪದ ಅರ್ಧದಷ್ಟು ಎತ್ತರವಿರುವ ಇನ್ನೊಂದು ದ್ವಿಭುಜ ಶಿಲ್ಪವಿದೆ. ಒಂದು ಕೈಯಲ್ಲಿ ಪುಸ್ತಕ ಹಿಡಿದು, ಇನ್ನೊಂದರಲ್ಲಿ ಲೇಖನಿ ಹಿಡಿದು ತ್ರಿಭಂಗಿಯಲ್ಲಿಯೇ ನಿಂತಿದೆ. ಲೇಖನಿ ಹಿಡಿದಿರುವ ಕೈಯನ್ನು ಮೇಲಕ್ಕೆ ಎತ್ತಿದೆ. ಈ ಶಿಲ್ಪಗಳನ್ನು ಗಮನಿಸಿದರೆ ಗುರು ಶಿಷ್ಯರ ಶಿಲ್ಪಗಳಂತೆ ಕಾಣುತ್ತದೆ. ಸರಸ್ವತಿಯೇ ಗುರುವಾಗಿ ಸ್ತ್ರೀಯೊಬ್ಬಳಿಗೆ ವಿದ್ಯಾಬೋಧನೆ ಮಾಡುತ್ತಿರುವಂತೆ ಕಾಣುತ್ತದೆ. ಈ ದೃಷ್ಟಿಯಿಂದ ಇದೊಂದು ಅತ್ಯಂತ ಅಪರೂಪದ ಶಿಲ್ಪ.

4.1. ದ್ವಿಭುಜ ನೃತ್ಯಸರಸ್ವತೀ ಶಿಲ್ಪಗಳು

ನೃತ್ಯಭಂಗಿಯಲ್ಲಿರುವ ದ್ವಿಭುಜ ಸರಸ್ವತಿಯ ಶಿಲ್ಪಗಳು ಇಲ್ಲವೇ ಇಲ್ಲ ಎನ್ನಬಹುದಾದಷ್ಟು ವಿರಳವಾಗಿವೆ. ನೃತ್ಯದ ವೈಭವವನ್ನು ಮೂಡಿಸಲು ಬಹುಭುಜಗಳ ಅಗತ್ಯವಿರುವುದು ಇದಕ್ಕೆ ಕಾರಣವಿರಬಹುದು. ಹಳೇಬೀಡಿನ ಹೊಯ್ಸಳೇಶ್ವರ–ಶಾಂತಲೇಶ್ವರ ದೇವಾಲಯದ ಹೊರಭಿತ್ತಿಯಲ್ಲಿರುವ ಎರಡು ಶಿಲ್ಪಗಳು ಈ ವರ್ಗಕ್ಕೆ ಸೇರಬಹುದಾದ ಲಕ್ಷಣಗಳನ್ನು ಹೊಂದಿವೆ. ಇವೆರಡೂ ವೀಣಾಪಾಣಿ ಶಿಲ್ಪಗಳಾಗಿವೆ. ಆದರೆ ವೀಣೆಯ ಆಕಾರ ಬೇರೆ ಬೇರೆಯಾಗಿದೆ. ಸಾಮಾನ್ಯ ವಾದ್ಯಗಾರರ ಶಿಲ್ಪವಾಗಿದ್ದರೆ, ಅದಕ್ಕೆ ಹೆಚ್ಚಿನ ಅಲಂಕಾರಗಳಿರುವುದಿಲ್ಲ. ಆದರೆ ಈ ಶಿಲ್ಪಗಳ ಅಲಂಕಾರವನ್ನು ನೋಡಿದರೆ ಇವು ಸರಸ್ವತೀ ಶಿಲ್ಪಗಳೆಂದು ಹೇಳಬಹುದು. ಒಂದು ಶಿಲ್ಪದ ವೀಣೆ ಮಾಮೂಲಿ ವೀಣೆಯಂತಿದ್ದರೂ ಅದರ ಬುರುಡೆಯ ಭಾಗ ತೀರಾ ಚಿಕ್ಕದಾಗಿದೆ. ಇನ್ನೊಂದು ಕೈ ಚಿನ್ಮುದ್ರೆಯಲ್ಲಿರುವಂತಿದೆ. ಇದೇ ರೀತಿಯ ವೀಣೆಯನ್ನು ಎರಡೂ ಕೈಗಳಲ್ಲಿ ನುಡಿಸುತ್ತಿರುವಂತೆ ಇರುವ ಮತ್ತೊಂದು ಶಿಲ್ಪ ಸುಂದರವಾಗಿದ್ದು ಹೆಚ್ಚು ಅಲಂಕಾರದಿಂದ ಕೂಡಿದೆ. ಅದೇ ಭಾಗದಲ್ಲಿರುವ ಇನ್ನೊಂದು ಶಿಲ್ಪವು ವೀಣೆಯನ್ನು ಹೋಲುವ ವಾದ್ಯವನ್ನು ಎಡಗೈಯಲ್ಲಿ ಹಿಡಿದಿದ್ದರೆ ಬಲಗೈಯಲ್ಲಿ ಪಿಟೀಲನ್ನು ನುಡಿಸುವಂತಹ ಕಡ್ಡಿಯಿದೆ.

4.2. ಚತುರ್ಭುಜನೃತ್ಯ ಸರಸ್ವತೀ ಶಿಲ್ಪಗಳು

ಈ ವಿಭಾಗದ ಬಹುತೇಕ ಶಿಲ್ಪಗಳು ಅಕ್ಷಮಾಲೆ ಅಂಕುಶ ಪಾಶ(ಪವಿತ್ರ) ಮತ್ತು ಪುಸ್ತಕ ಹಿಡಿದಿರುವಂತಹವುಗಳೇ ಆಗಿವೆ. ಶಿಲ್ಪದ ಇಕ್ಕೆಲಗಳಲ್ಲಿ ಸಾಮಾನ್ಯವಾಗಿ ವಾದ್ಯಗಾರರಿರುತ್ತಾರೆ. ಕೆಲವೊಮ್ಮೆ ಪಾದದ ಬಳಿ ಹಂಸ ಕಂಡುಬರುತ್ತದೆ.

ಹಳೇಬೀಡಿನ ದೇವಾಲಯಗಳಲ್ಲಿ (ಕ್ರಿ.ಶ. 1121) ಈ ರೀತಿಯ ಮೂರು ಶಿಲ್ಪಗಳನ್ನು ನೋಡಬಹುದು. ಹೊಯ್ಸಳೇಶ್ವರ-ಶಾಂತಲೇಶ್ವರ ದೇವಾಲಯದ ಭಿತ್ತಿಯ ವಾದ್ಯಗಾರರ ಪಟ್ಟಿಯಲ್ಲಿ, ವಾದ್ಯಗಾರರ ನಡುವೆ ಈ ಶಿಲ್ಪವಿದ್ದು, ಕೈಗಳಲ್ಲಿ ಅಕ್ಷಮಾಲೆ, ಅಂಕುಶ, ಪಾಶ ಮತ್ತು ಪುಸ್ತಕ ಇರುತ್ತದೆ. ಅಕ್ಷಮಾಲೆ ಹಿಡಿದಿರುವ ಕೈ ಚಲನೆಯೊಂದಿಗೆ ಅಕ್ಷಮಾಲೆಯೂ ಚಲಿಸುತ್ತಿರುವಂತೆ ಕಾಣುತ್ತದೆ. ಬಲಗಾಲನ್ನು ನೆಲದಲ್ಲಿ ಊರಿ, 'ಏಕ ಕುಂಚಿತಪಾದ' ಭಂಗಿಯಲ್ಲಿ ಶಿಲ್ಪವಿದ್ದು, ದೇಹದ ನಿಲುವಿಗೆ ಅನುಗುಣವಾಗಿ ಉತ್ತರೀಯ ಮತ್ತು ಯಜ್ಞೋಪವೀತವೂ ಬಾಗಿರುವುದು ವಿಶೇಷವಾಗಿದೆ. ಹಾರನಹಳ್ಳಿ ಸೋಮೇಶ್ವರ ದೇವಾಲಯದ (ಕ್ರಿ.ಶ.1234) ಹೊರಭಿತ್ತಿಯಲ್ಲಿರುವ ಶಿಲ್ಪವು ಇದೇ ಲಕ್ಷಣಗಳನ್ನು ಹೊಂದಿದೆಯಾದರೂ ಪಾಶವು ಪವಿತ್ರದ ಗಂಟಿನಾಕಾರದಲ್ಲಿದೆ. ಇಬ್ಬರು ವಾದ್ಯಗಾರರು ಇಕ್ಕೆಲಗಳಲ್ಲಿ ಇದ್ದಾರೆ. ಹಳೇಬೀಡಿನ ಶಿಲ್ಪಕ್ಕಿಂತ ಅಲಂಕೃತವಾಗಿದ್ದರೂ, ಆ ಶಿಲ್ಪದಲ್ಲಿ ಕಾಣುವ ನೃತ್ಯದ ಚಲನೆ, ಹಾಸು ಜೀಸು ಇದರಲ್ಲಿ ಕಾಣುವುದಿಲ್ಲ. ಇಲ್ಲಿ ಅಕ್ಷಮಾಲೆಯನ್ನು ಹಿಡಿದಿರುವ ಕೈ ಚಿನ್ಮುದ್ರೆಯಲ್ಲಿರುವುದು ಇದಕ್ಕೆ ಕಾರಣವಿರಬಹುದು.

ಹೊಯ್ಸಳೇಶ್ವರ-ಶಾಂತಲೇಶ್ವರ ದೇವಾಲಯದ ಭಿತ್ತಿಯ ಇನ್ನೊಂದು ಶಿಲ್ಪವಂತೂ ಸುಮಾರು ಐದು ಅಡಿ ಎತ್ತರವಿದ್ದು ಅತ್ಯಂತ ಸುಂದರವಾಗಿದೆ. ಕೀರ್ತಿಮುಖವನ್ನುಳ್ಳ ಆಲಂಕೃತ ಪ್ರಭಾವಳಿ, ಕೀರ್ತಿಮುಖದ ಕೆಳಗೆ ಕಳಶವನ್ನುಳ್ಳ ಛತ್ರಿಯಿದ್ದು ಅದರ ಕೆಳಗೆ 'ಏಕ ಕುಂಚಿತಪಾದ' ಭಂಗಿಯಲ್ಲಿ ಶಿಲ್ಪವಿದೆ. ಮೇಲಿನ ಪ್ಯಾರಾದಲ್ಲಿ ಹೇಳಲಾದ ಶಿಲ್ಪದ ಬಲಗಾಲು ನೆಲದಲ್ಲಿದ್ದರೆ, ಇದರ ಎಡಗಾಲು ನೆಲದಲ್ಲಿದೆ. ಈ ಶಿಲ್ಪದಲ್ಲಿ ಧರಿಸಿರುವ ವಸ್ತ್ರ, ಉರಹಾರ, ಯಜ್ಞೋಪವೀತ ಮತ್ತು ಉತ್ತರೀಯಗಳು ನೃತ್ಯದ ಚಲನೆಯೊಂದಿಗೇ ಚಲಿಸುತ್ತಿರುವಂತೆ ಭಾಸವಾಗುತ್ತವೆ. ಅಕ್ಷಮಾಲೆಯನ್ನು ಚಿನ್ಮುದ್ರೆಯಲ್ಲಿ ಹಿಡಿದಿರುವ ಹಸ್ತದ ಬೆರಳುಗಳು ಮುರಿದುಹೋಗಿವೆ. ಇನ್ನೊಂದು ಬಲಗೈ ಸ್ವರ್ಗಹಸ್ತವಾಗಿರುತ್ತದೆ. ಇದಕ್ಕೆ 'ಹಾಲಪದ್ಮ' ಎಂಬ ಹೆಸರೂ ಇದೆ. ಎಡಭಾಗದ ಒಂದು ಕೈಯಲ್ಲಿ ಪುಸ್ತಕವಿದ್ದರೆ, ಇನ್ನೊಂದು ಲಂಬಹಸ್ತವಾಗಿರುತ್ತದೆ. ಇದಕ್ಕೆ 'ದೋಲಹಸ್ತ' ಅಥವಾ 'ಗಜಹಸ್ತ' ಎಂಬ ಹೆಸರುಗಳನ್ನೂ ಹೇಳಲಾಗಿದೆ. ಕಾಲಿನ ಬಳಿ ಹಂಸವಿದೆ. ಕಾಲುಗಳಲ್ಲಿ ಸರಪಳಿ ಮತ್ತು ಕಾಲಂದಿಗೆಗಳು ಇವೆ. ಕೈ ಬೆರಳುಗಳಲ್ಲಿ ಉಂಗುರಗಳು, ಕೈಗಳಲ್ಲಿ ಬಳೆ ಮತ್ತು ಕಡಗಗಳು, ತೋಳಿನಲ್ಲಿ ತೋಳಬಂದಿ ಮತ್ತು ಭುಜಕೀರ್ತಿಗಳನ್ನು ಅಲಂಕಾರದಿಂದ ಕೆತ್ತಲಾಗಿದೆ. ಕೊರಳಲ್ಲಿ ಸ್ತನಹಾರ, ಒಂದು ಪದಕಯುಕ್ತ ಹಾರವಲ್ಲದೆ ಸಣ್ಣ ಕಂಠಹಾರವೂ ಇದೆ. ಕಿವಿಗಳಲ್ಲಿ ದೊಡ್ಡದಾದ ಕರ್ಣಕುಂಡಲಗಳೂ ಇವೆ. ಹಿಂಬದಿಯಲ್ಲಿ ಪ್ರಭಾಚಕ್ರವನ್ನುಳ್ಳ ಮಣಿಮಯವಾದ ಕರಂಡಮಕುಟವಿದ್ದು, ಅದರಿಂದ ಹೊರಚಾಚಿರುವ ಮುಂಗುರುಳು ಕೆನ್ನೆಯ ಮೇಲೆ ಇಳಿದಿದೆ. ಅಲ್ಲದೆ ಹಿಂಬದಿಯಲ್ಲಿ ಕಿರೀಟದಿಂದ ಜೋಲಾಡುತ್ತಿರುವ ಮಣಿಹಾರಗಳು

ಭುಜದವರೆಗೂ ವಿಸ್ತರಿಸಿರುವುದನ್ನು ಕಾಣಬಹುದು. ಶಿಲ್ಪದ ಎಡಭಾಗದಲ್ಲಿ ತಾಳಗಳನ್ನು ಹಿಡಿದಿರುವ ವಾದ್ಯಗಾರ್ತಿಯೂ, ಬಲಬದಿಯಲ್ಲಿ ಡೋಲನ್ನು ಬಡಿಯುತ್ತಿರುವ ವಾದ್ಯಗಾರ್ತಿಯೂ ಇದ್ದಾರೆ. ಶಿಲ್ಪದ ಎಡಬದಿಯಲ್ಲಿ, ಲಂಬಹಸ್ತದ ಕೆಳಭಾಗದಲ್ಲಿ ಪಾಶದ ಉಬ್ಬು ಶಿಲ್ಪವಿರುವುದನ್ನು ಕಾಣಬಹುದು. ಆದರೆ ಅದು ಸರಸ್ವತೀ ಶಿಲ್ಪದ ಯಾವ ಭಾಗಕ್ಕೂ ಸಂಪರ್ಕವನ್ನು ಹೊಂದದೇ ಇರುವುದು ವಿಶೇಷ. ಚತುರ್ಭುಜ ನೃತ್ಯ ಸರಸ್ವತೀ ಶಿಲ್ಪದಲ್ಲಿ ಇದೊಂದು ಅನನ್ಯ ಕೃತಿ.

ಇದೇ ದೇವಾಲಯದ ಇನ್ನೊಂದು ಭಿತ್ತಿಶಿಲ್ಪ ವೀಣಾಸರಸ್ವತಿಯದ್ದಾಗಿದೆ. 'ಕುಂಚಿತಪಾದ' ಭಂಗಿಯಲ್ಲಿರುವ ಈ ಶಿಲ್ಪ ತನ್ನ ಎರಡು ಕೈಗಳಲ್ಲಿ ವೀಣೆಯನ್ನು ಹಿಡಿದಿದ್ದು, ಇನ್ನೆರಡರಲ್ಲಿ ಪಾಶ ಮತ್ತು ಪದ್ಮಗಳು ಇವೆ. ವೀಣೆ ಒಂದು ದಂಡದಂತೆ ಕಾಣುತ್ತದೆ. ಅಲಂಕಾರಗಳು ಬಹುತೇಕ ಮೇಲೆ ಹೇಳಿದ ಶಿಲ್ಪದಂತೆಯೇ ಇವೆ. ಒಂದು ಮರವನ್ನೇ ಪ್ರಭಾವಳಿಯಂತೆ ಬಳಸಲಾಗಿದೆ. ಬಲಬದಿಯಲ್ಲಿ ತಾಳಹಾಕುವವನೂ ಎಡಬದಿಯಲ್ಲಿ ಡೋಲುಬಡಿಯುವವನೂ ಇದ್ದಾರೆ. ಮೇಲಿನ ಶಿಲ್ಪದಲ್ಲಿ ವಾದ್ಯಗಾರರು ಸ್ತ್ರೀಯರು; ಇಲ್ಲಿ ಪುರುಷ ವಾದ್ಯವೃಂದವಿದೆ. ಈ ಶಿಲ್ಪದ ಬಲಬದಿಯಲ್ಲಿ ಚಾಮರಧಾರಿಣಿಯೊಬ್ಬಳು ಇದ್ದಾಳೆ.

ಬೇಲೂರಿನ ವೀರನಾರಾಯಣ ದೇವಾಲಯದ ಎಡಭಾಗದ ಭಿತ್ತಿಯಲ್ಲಿ, ಮೂರು ಹಂತದ ಪದ್ಮಪೀಠದ ಮೇಲೆ ನಿಂತಿರುವ ಸರಸ್ವತಿಯ ಶಿಲ್ಪವಿದೆ. ಪದ್ಮಪೀಠದ ಕೆಳಗಿನ ಎರಡು ಹಂತದ ಪದ್ಮಗಳು ಅಧೋಮುಖ ದಳಗಳನ್ನು ಹೊಂದಿದ್ದರೆ, ಮೇಲಿನದು ಊರ್ಧ್ವಮುಖ ದಳಗಳನ್ನು ಒಳಗೊಂಡಿದೆ. ಬಲಗಾಲಿನ ತುದಿಯನ್ನು ಮಾತ್ರ ನೆಲಕ್ಕೆ ಊರಿ, ಏಕ ಕುಂಚಿತಪಾದ ಭಂಗಿಯಲ್ಲಿ ನಿಂತಿರುವ ಶಿಲ್ಪ ಅತ್ಯಂತ ಸುಂದರವಾಗಿದೆ. ಶಿಲ್ಪದ ಅಲಂಕಾರ ಹಳೇಬೀಡಿನ ಶಿಲ್ಪಗಳನ್ನೇ ಹೋಲುತ್ತದೆ. ಬಲಭಾಗದಲ್ಲಿ ಒಂದು ಕೈ ಅಕ್ಷಮಾಲೆಯೊಂದಿಗೆ ಚಿನ್ಮುದ್ರೆಯಲ್ಲಿದ್ದರೆ, ಅಂಕುಶವನ್ನು ಹಿಡಿದಿರುವ ಇನ್ನೊಂದು ಕೈ ಭಗ್ನವಾಗಿದೆ. ಎಡಭಾಗದ ಒಂದು ಕೈ ಭಗ್ನವಾಗಿದ್ದರೆ ಇನ್ನೊಂದರಲ್ಲಿ ಪುಸ್ತಕವಿದೆ. ಭಗ್ನವಾಗಿರುವ ಕೈಯಲ್ಲಿ ಬಹುಶಃ ಪಾಶವಿದ್ದಿರಬೇಕು. ಎರಡು ಜಡೆಯ ಕೇಶಾಲಂಕಾರ ಈ ಶಿಲ್ಪದ ವಿಶೇಷ. ಇಕ್ಕೆಲಗಳಲ್ಲಿದ್ದ ವಾದ್ಯಾಗಾರರಲ್ಲಿ ಈಗ ಎಡಬದಿಯ ವಾದ್ಯಗಾರನ ಸೊಂಟದವರೆಗಿನ ಆಕೃತಿ ಮಾತ್ರ ಉಳಿದಿದೆ.

ಅಮೃತಾಪುರದ ಅಮೃತೇಶ್ವರ ದೇವಾಲಯದ (ಕ್ರಿ.ಶ. 1196) ಭುವನೇಶ್ವರಿಯಲ್ಲಿ ಒಂದು ಅಡಿಯಿರುವ ಅಪೂರ್ಣ ಸರಸ್ವತಿಯ ಶಿಲ್ಪವಿದೆ. ಸುಮಾರು ಹದಿಮೂರನೇ ಶತಮಾನದ ಬಗ್ಗವಳ್ಳಿಯ ಕೇಶವ ದೇವಾಲಯದ ಭಿತ್ತಿ ಮತ್ತು ಭದ್ರಾವತಿಯ ಲಕ್ಷ್ಮೀನರಸಿಂಹ ದೇವಾಲಯದ ಭಿತ್ತಿಯಲ್ಲಿ ಭಗ್ನವಾಗಿರುವ ನೃತ್ಯಭಂಗಿಯಲ್ಲಿರುವ ವೀಣಾಸರಸ್ವತಿಯ ಶಿಲ್ಪಗಳನ್ನು ಕಾಣಬಹುದು.

4.3. ಷಡ್ಭುಜ ನೃತ್ಯಸರಸ್ವತೀ ಶಿಲ್ಪಗಳು

ಸಾಮಾನ್ಯವಾಗಿ ಷಡ್ಭುಜ ನೃತ್ಯಶಿಲ್ಪಗಳು ಹೊಯ್ಸಳ ದೇವಾಲಯಗಳಲ್ಲಿ ಮಾತ್ರ ಕಂಡುಬರುತ್ತವೆ. ಹೊಯ್ಸಳ ದೇವಾಲಯಗಳಲ್ಲಿ ಭಿತ್ತಿಯು ಹೆಚ್ಚು ಆಲಂಕೃತವಾಗಿರುವುದರಿಂದ ಹೆಚ್ಚು ಹೆಚ್ಚು ಶಿಲ್ಪಗಳನ್ನು ಒಳಗೊಂಡಿರುತ್ತವೆ. ಹಾಗಾಗಿ ಈ ವಿಭಾಗದ ಬಹುತೇಕ ಶಿಲ್ಪಗಳು ಭಿತ್ತಿಶಿಲ್ಪಗಳೇ ಆಗಿವೆ. ಬಹುತೇಕ ಶಿಲ್ಪಗಳ ಇಕ್ಕೆಲಗಳಲ್ಲಿ ವಾದ್ಯಗಾರರು ಇರುತ್ತಾರೆ. ಕೆಲವು ಶಿಲ್ಪಗಳಲ್ಲಿ ಮಾತ್ರ ಹಂಸವಿರುವುದನ್ನು ಕಾಣಬಹುದು.

ಈ ಗುಂಪಿನಲ್ಲಿ ಮೊದಲ ಸ್ಥಾನದಲ್ಲಿ ನಿಲ್ಲುವ ಸರಸ್ವತಿಯ ಶಿಲ್ಪವೆಂದರೆ ಅರಳಗುಪ್ಪೆಯ ಕೇಶವ ದೇವಸ್ಥಾನದ್ದು. ವಿಷ್ಣುವಿನ ಇಕ್ಕೆಲಗಳಲ್ಲಿ ಲಕ್ಷ್ಮೀ-ಸರಸ್ವತಿಯರ ಶಿಲ್ಪವಿರುವುದು ಇದೊಂದು ದೇವಾಲಯದಲ್ಲಿ ಮಾತ್ರ. ತುಮಕೂರು ಜಿಲ್ಲೆ ಅರಳಗುಪ್ಪೆಯ ಕೇಶವ ದೇವಾಲಯದ ದಕ್ಷಿಣದ ಹೊರಭಿತ್ತಿಯ ಮೇಲ್ತುದಿಯಲ್ಲಿ ಮೂರು ಶಿಲ್ಪಗಳಿವೆ. ಇವುಗಳನ್ನು 'Six handed Vishnu along with his consorts'[74] (ತನ್ನ ಪತ್ನಿಯರೊಂದಿಗಿರುವ ಷಡ್ಭುಜ ವಿಷ್ಣು) ಎನ್ನಲಾಗಿದೆ. ಮಧ್ಯದ ಶಿಲ್ಪ ಷಡ್ಭುಜ ವಿಷ್ಣುವಿನದೇನೋ ಹೌದು; ಎಡಬದಿಯಲ್ಲಿರುವುದು ಷಡ್ಭುಜ ಲಕ್ಷ್ಮಿಯ ಶಿಲ್ಪವೂ ಹೌದು. ಆದರೆ ಬಲಬದಿಯಲ್ಲಿರುವುದು ಭೂದೇವಿ ಶಿಲ್ಪವಾಗಿರದೆ, ಷಡ್ಭುಜ ನೃತ್ಯ ಸರಸ್ವತಿಯದ್ದಾಗಿದೆ. ಸಾಮಾನ್ಯವಾಗಿ ದಕ್ಷಿಣ ಭಾರತದ ವಿಷ್ಣುವಿನ ಶಿಲ್ಪದ ಇಕ್ಕೆಲಗಳಲ್ಲಿ ಶ್ರೀದೇವೀ ಮತ್ತು ಭೂದೇವಿಯರು ಇರುತ್ತಾರೆ. ಉತ್ತರ ಭಾರತದ ಮತ್ತು ಈಗಿನ ಬಾಂಗ್ಲಾದೇಶ ಹಾಗೂ ಜಾವಾದಲ್ಲಿ ವಿಷ್ಣುವಿನ ಪತ್ನಿಯರನ್ನಾಗಿ ಲಕ್ಷ್ಮೀ ಸರಸ್ವತಿಯರನ್ನು ಚಿತ್ರಿಸಿರುವ ಹಲವಾರು ಶಿಲ್ಪಗಳು ದೊರೆಯುತ್ತವೆ.[75] ಭಾಗವತ ಪುರಾಣದಲ್ಲಿ ಮಾತ್ರ ಸರಸ್ವತಿಯನ್ನು, ಲಕ್ಷ್ಮಿಯ ಜೊತೆಯಲ್ಲಿ ವಿಷ್ಣುವಿನ ಪತ್ನಿಯನ್ನಾಗಿ ಚಿತ್ರಿಸಲಾಗಿದೆ.[76] ಸಾಮಾನ್ಯವಾಗಿ ಉತ್ತರದ ಶಿಲ್ಪಗಳಲ್ಲಿ ಲಕ್ಷ್ಮೀ ಮತ್ತು ಸರಸ್ವತಿಯರು ದ್ವಿಭುಜೆಯರಾಗಿರುತ್ತಾರೆ. ಆದರೆ ಇಲ್ಲಿ ಇಬ್ಬರೂ ಷಡ್ಭುಜೆಯರಾಗಿರುವುದಲ್ಲದೆ ನೃತ್ಯಭಂಗಿಯಲ್ಲಿರುವುದು ವಿಶೇಷವಾಗಿದೆ. ಗಮನಿಸಬೇಕಾದ ಒಂದು ಅಂಶವೆಂದರೆ, ಉತ್ತರದ ಶಿಲ್ಪಗಳಲ್ಲಿ ವಿಷ್ಣುವನ್ನು ಪ್ರಧಾನವಾಗಿಯೂ, ಲಕ್ಷ್ಮೀ ಸರಸ್ವತಿಯರನ್ನು ವಿಷ್ಣುವಿನ ಇಕ್ಕೆಲಗಳಲ್ಲಿ ಚಿಕ್ಕದಾಗಿಯೂ ಕೆತ್ತಲಾಗಿರುತ್ತದೆ. ಅರಳಗುಪ್ಪೆಯಲ್ಲಿರುವ ಮೂರು ಶಿಲ್ಪಗಳನ್ನು ಬೇರೆ ಬೇರೆಯಾಗಿ ಒಂದೇ ಸಾಲಿನಲ್ಲಿ ಕೆತ್ತಲಾಗಿದೆ. ಬಹುತೇಕ ಮೂರೂ ಶಿಲ್ಪಗಳು ಒಂದೇ ಸಮನಾಗಿವೆ. ವಿಷ್ಣುವಿನ ಶಿಲ್ಪ, ಲಕ್ಷ್ಮೀ ಸರಸ್ವತಿಯ ಶಿಲ್ಪಗಳಿಗಿಂತ ಕೇವಲ ಒಂದೆರಡು ಇಂಚಿನಷ್ಟು ಎತ್ತರವಿದೆ ಅಷ್ಟೆ.

---

74. M.A.R. 1935, P.9
75. Niranjan Ghosh: Sri Sarasvati in Indain Art and Literature, P.47-48, Plate XIII-XV
76. ಭಾಗವತಪುರಾಣ ಅಧ್ಯಾಯ III

ಅರಳಗುಪ್ಪೆಯ ಸರಸ್ವತೀ ಶಿಲ್ಪವು ಎಡಗಾಲನ್ನು ನೆಲದಲ್ಲಿ ಊರಿ ಏಕ ಕುಂಚಿತಪಾದ ಭಂಗಿಯಲ್ಲಿದೆ. ಬಲಭಾಗದ ಮೊದಲ ಕೈ ಅಕ್ಷಮಾಲೆಯೊಂದಿಗೆ ಚಿನ್ಮುದ್ರೆಯಲ್ಲಿದ್ದರೆ, ಎರಡನೇ ಕೈಯಲ್ಲಿ ಪಾಶವಿದೆ. ಮೂರನೇ ಕೈ ಮುರಿದು ಹೋಗಿದೆ. ಎಡಭಾಗದ ಎರಡು ಕೈಗಳಲ್ಲಿ ಅಂಕುಶ ಮತ್ತು ಪುಸ್ತಕವಿದ್ದು ಇನ್ನೊಂದು ದೋಲ(ಲಂಬ)ಹಸ್ತವಾಗಿದೆ. ಇಕ್ಕೆಲಗಳಲ್ಲಿ ವಾದ್ಯಗಾರರಿದ್ದಾರೆ. ಕಾಲುಗಳಲ್ಲಿ ಸರಪಳಿ ಮತ್ತು ಕಾಲಂದಿಗೆ ಹಾಗೂ ಬೆರಳುಗಳಲ್ಲಿ ಕಾಲುಂಗುರಗಳನ್ನು ಕಾಣಬಹುದು. ಕೈಬೆರಳುಗಳಲ್ಲಿ ಉಂಗುರ ಹಾಗೂ ಕೈಗಳಲ್ಲಿ ಬಳೆ ಮತ್ತು ಕಡಗ ಹಾಗೂ ತೋಳಬಂದಿ, ಭುಜಕೀರ್ತಿಗಳೂ ಇವೆ. ಉತ್ತರೀಯ, ಯಜ್ಞೋಪವೀತ, ಸ್ತನಹಾರ ಮತ್ತು ಕಂಠಹಾರಗಳನ್ನು ಆಲಂಕಾರಿಕವಾಗಿ ಕೆತ್ತಲಾಗಿದೆ. ಪ್ರಭಾಚಕ್ರವಿರುವ ಕಿರೀಟ, ಕರ್ಣಕುಂಡಲಗಳು ಮತ್ತು ಗುಂಗುರುಗೂದಲನ್ನು ಸೂಕ್ಷ್ಮವಾಗಿ ಬಿಡಿಸಲಾಗಿದೆ. ಇದೇ ದೇವಾಲಯದ ಭಿತ್ತಿಯಲ್ಲಿ ಇನ್ನೊಂದು ಷಡ್ಭುಜ ಶಿಲ್ಪವಿದೆ. ಎರಡು ಕೈಗಳಲ್ಲಿ ವೀಣೆಯನ್ನು ನುಡಿಸುತ್ತಿರುವ ಶಿಲ್ಪದ ಬಲಭಾಗದ ಒಂದು ಕೈಯಲ್ಲಿ ಅಂಕುಶವಿದ್ದರೆ, ಇನ್ನೊಂದು ಕೈ ಪಾಲ(ದೋಲ)ಹಸ್ತವಾಗಿರುತ್ತದೆ. ಎಡಭಾಗದ ಒಂದು ಕೈಯಲ್ಲಿ ಪವಿತ್ರವಿದ್ದರೆ, ಇನ್ನೊಂದರಲ್ಲಿ ಪುಸ್ತಕವಿರುತ್ತದೆ.

ಹಳೇಬೀಡಿನ ದೇವಾಲಯಗಳಲ್ಲಿ ಐದು ರೀತಿಯ ಷಡ್ಭುಜ ವೀಣಾ ಸರಸ್ವತಿಯ ಶಿಲ್ಪಗಳನ್ನು ಕೆತ್ತಲಾಗಿದೆ. ಇದಲ್ಲದೆ ಇರುವ ಇನ್ನೆರಡು ಸರಸ್ವತಿಯ ಶಿಲ್ಪಗಳ ಕೈಯಲ್ಲಿ ವೀಣೆಯಿಲ್ಲ; ಒಂದು ಶಿಲ್ಪದ ಐದು ಕೈಗಳು ಮುರಿದಿದ್ದು, ಉಳಿದಿರುವ ಕೈಯಲ್ಲಿ ಪುಸ್ತಕವಿದೆ. ಬಲಗೈಯೊಂದರಲ್ಲಿ ಭಗ್ನವಾಗಿರುವ ಅಕ್ಷಮಾಲೆಯಿದೆ. ಎಡಬದಿಗೆ ಡೋಲುಗಾರನೊಬ್ಬನಿದ್ದು, ಅವನಿಂದ ಎಡಕ್ಕೆ ಹಂಸದ ಮೇಲೆ ಕುಳಿತಿರುವ ಬ್ರಹ್ಮನ ಶಿಲ್ಪವಿದೆ. ಎರಡನೆಯ ಶಿಲ್ಪ ಹೊಯ್ಸಳೇಶ್ವರ ಗರ್ಭಗುಡಿಯ ಮುಂದೆ ಎಡಭಾಗಕ್ಕಿರುವ ದೇವಕೋಷ್ಠದ ಶಿಖರದಲ್ಲಿದೆ. ಈ ದೇವಕೋಷ್ಠದ ಶಿಖರದಲ್ಲಿರುವ ಮೂರು ಹಂತಗಳಲ್ಲಿಯೂ ಮೂರು ವಿಧವಾದ ಸರಸ್ವತೀ ಉಬ್ಬುಶಿಲ್ಪಗಳಿರುವುದು ವಿಶೇಷ. ಕೆಳಗಿನ ಹಂತದಲ್ಲಿ ಷಡ್ಭುಜ ನೃತ್ಯಶಿಲ್ಪವಿದೆ. ಬಲಭಾಗದಲ್ಲಿ ಅಕ್ಷಮಾಲೆಯನ್ನು ಹಿಡಿದಿರುವ ಕೈ ಚಿನ್ಮುದ್ರೆಯಲ್ಲಿದೆ. ಇನ್ನೊಂದು ಕೈ ದೋಲಹಸ್ತವಾಗಿದ್ದರೆ, ಮತ್ತೊಂದರಲ್ಲಿ ಅಂಕುಶವಿದೆ. ಎಡಭಾಗದಲ್ಲಿ ಒಂದು ಕೈ ಸ್ವರ್ಗಹಸ್ತವಾಗಿದ್ದರೆ, ಇನ್ನೆರಡು ಕೈಗಳಲ್ಲಿ ಪಾಶ ಮತ್ತು ಪುಸ್ತಕಗಳು ಇವೆ. ಕಾಲಿನ ಬಳಿ ಹಂಸವಿದ್ದು ಇಕ್ಕೆಲಗಳಲ್ಲಿ ಡೋಲು ಬಡಿಯುತ್ತಿರುವ ಪುರುಷ ವಾದ್ಯಗಾರರಿದ್ದಾರೆ. ಇದೇ ರೀತಿ ಕೇದಾರೇಶ್ವರ ದೇವಾಲಯದ ಗರ್ಭಗುಡಿಯ ಲಲಾಟದಲ್ಲಿ ವೀಣಾಸರಸ್ವತಿಯ ನೃತ್ಯಶಿಲ್ಪವಿದ್ದು ಇಕ್ಕೆಲಗಳಲ್ಲಿ ಎಂಟು ಮಂದಿ ವಾದ್ಯಗಾರರಿರುವುದು ಈ ಶಿಲ್ಪದ ವೈಶಿಷ್ಟ್ಯ. ಹಂಸವಿರುವುದಿಲ್ಲ. ಬಲಪಾದವನ್ನು ಆಧಾರವಾಗಿಟ್ಟುಕೊಂಡು ಏಕ ಕುಂಚಿತಪಾದ ಭಂಗಿಯಲ್ಲಿರುವ ಶಿಲ್ಪದ ಬಲಗೈಗಳಲ್ಲಿ ಒಂದು ಪಾಲಹಸ್ತವಾಗಿದ್ದರೆ, ಉಳಿದೆರಡು ಕೈಗಳಲ್ಲಿ ಅಂಕುಶ

ಮತ್ತು ಅಕ್ಷಮಾಲೆಗಳು ಇವೆ. ಎಡಭಾಗದ ಒಂದು ಕೈಯಲ್ಲಿ ವೀಣೆಯಿದ್ದರೆ (ವೀಣೆಯನ್ನು ಒಂದೇ ಕೈಯಲ್ಲಿ ಹಿಡಿದಿರುವುದು ವಿಶೇಷವಾಗಿದೆ.) ಇನ್ನೊಂದರಲ್ಲಿ ಪಾಶವಿದೆ. ಸ್ವರ್ಗಹಸ್ತವಾಗಿರುವ ಕೈಯಲ್ಲಿ ಪುಸ್ತಕವಿರುವುದು ಗಮನ ಸೆಳೆಯುತ್ತದೆ. ಏಕೆಂದರೆ ಸಾಮಾನ್ಯವಾಗಿ ನೃತ್ಯಶಿಲ್ಪಗಳಲ್ಲಿ ಸ್ವರ್ಗಹಸ್ತವಾಗಿರುವ ಕೈಯಲ್ಲಿ ಏನೂ ಇರುವುದಿಲ್ಲ. ಅದನ್ನು ಹಾಲಪದ್ಮಹಸ್ತವೆಂದೂ ಕರೆಯುತ್ತಾರೆ.

ಕೇದಾರೇಶ್ವರ ದೇವಾಲಯದ ಭಿತ್ತಿಯಲ್ಲಿ ಇನ್ನೊಂದು ಸುಂದರವಾದ ವೀಣಾಸರಸ್ವತೀ ಶಿಲ್ಪವಿದೆ. ಲತಾಸುರುಳಿಯಿಂದ ನಿರ್ಮಾಣವಾಗಿರುವ ಪ್ರಭಾವಳಿಯನ್ನು ಹೊಂದಿರುವ ಈ ಶಿಲ್ಪಕ್ಕೆ ಪ್ರಭಾವಳಿಯ ಎರಡೂ ತುದಿಗಳಲ್ಲಿ ದೊಡ್ಡದಾದ ಊರ್ಧ್ವಕಮಲಗಳನ್ನು ಕೆತ್ತಲಾಗಿದೆ. ಬಹುತೇಕ ಹೊಯ್ಸಳ ಶಿಲ್ಪಗಳ ಹಾಗೆ ಅತ್ಯಂತ ಆಲಂಕೃತವಾಗಿರುವ ಈ ಶಿಲ್ಪ, ಇಕ್ಕೆಲಗಳಲ್ಲಿ ವಾದ್ಯಗಾರರನ್ನು ಹೊಂದಿದೆ. ದೇವಾಲಯದ ಒಳಗೆ ಗರ್ಭಗುಡಿಯ ಲಲಾಟದಲ್ಲಿರುವ ಶಿಲ್ಪದ ಹಾಗೆ ಈ ಶಿಲ್ಪದ ಬಲಭಾಗದ ಒಂದು ಕೈ ಪಾಲಹಸ್ತವಾಗಿದ್ದು ಅದರಲ್ಲಿ ಅಕ್ಷಮಾಲೆಯೂ ಇದೆ. ಇನ್ನೊಂದರಲ್ಲಿ ಅಂಕುಶವಿದೆ. ಇಲ್ಲಿ ವೀಣೆಯನ್ನು ಎರಡು ಕೈಗಳಲ್ಲಿ ಹಿಡಿದಿರುವಂತೆ ಚಿತ್ರಿಸಲಾಗಿದೆ. ಎಡಭಾಗದಲ್ಲಿ ಒಳಗಿನ ಶಿಲ್ಪದಲ್ಲಿರುವಂತಯೇ ಒಂದು ಕೈ ಪುಸ್ತಕವನ್ನು ಹಿಡಿದು ಸ್ವರ್ಗಹಸ್ತ ಭಂಗಿಯಲ್ಲಿದೆ. ಇನ್ನೊಂದರಲ್ಲಿ ಪವಿತ್ರವಿದೆ. ಆದರೆ ಶಿಲ್ಪದ ಮೈಮೇಲೆಲ್ಲಾ ಚಿಕ್ಕ ಚಿಕ್ಕ ಗುಳಿಗಳಾಗಿದ್ದು ಶಿಲ್ಪದ ಅದ್ಭುತವಾದ ಸೌಂದರ್ಯಕ್ಕೆ ಧಕ್ಕೆಯಾಗಿದೆ. ಭಾಗಶಃ ಇದೇ ಲಕ್ಷಣಗಳನ್ನು ಹೊಂದಿರುವ ಶಿಲ್ಪ ಹಾರನಹಳ್ಳಿಯ ಲಕ್ಷ್ಮೀನರಸಿಂಹ ದೇವಾಲಯದ ಮುಖ್ಯಗರ್ಭಗುಡಿಯ ವಾಯವ್ಯ ಭಿತ್ತಿಯಲ್ಲಿದೆ. ಈ ಶಿಲ್ಪದ ಎರಡು ಕೈಗಳಲ್ಲಿ ವೀಣೆ, ಉಳಿದವುಗಳಲ್ಲಿ ಅಂಕುಶ, ಅಕ್ಷಮಾಲೆ(ಚಿನ್ಮುದ್ರಾ), ಪಾಶ ಮತ್ತು ಪುಸ್ತಕಗಳನ್ನು ಕಾಣಬಹುದು.

ಹೊಯ್ಸಳೇಶ್ವರ ದೇವಾಲಯದ ಭಿತ್ತಿಯಲ್ಲಿರುವ ಎರಡು ಅದ್ಭುತವಾದ ಶಿಲ್ಪಗಳು ಭಿನ್ನವಾಗಿವೆ. ಒಂದು ಶಿಲ್ಪದ ಬಲಬದಿಯ ಮೂರೂ ಕೈಗಳು ಮತ್ತು ವಾದ್ಯಗಾರನ ಶಿಲ್ಪ ಮುರಿದುಹೋಗಿವೆ. ಎಡಭಾಗದ ಕೈಗಳಲ್ಲಿ ಪಾಶ, ವೀಣೆ ಮತ್ತು ಪುಸ್ತಕಗಳು ಇವೆ. ವೀಣೆಯ ದಂಡಭಾಗ ಮುರಿದುಹೋಗಿದೆ. ಎಡಬದಿಯಲ್ಲಿ ಒಬ್ಬ ವಾದ್ಯ(ತಾಳ)ಗಾರ, ಒಬ್ಬಳು ಚಾಮರಧಾರಿಣಿ ಇದ್ದಾರೆ. ಇನ್ನೊಬ್ಬ ಗಡ್ಡ ಇರುವ ವ್ಯಕ್ತಿ ಸರಸ್ವತಿಯನ್ನು ಪ್ರಾರ್ಥಿಸುವ ಭಂಗಿಯಲ್ಲಿ ಕುಳಿತಿದ್ದಾನೆ. ಈ ಶಿಲ್ಪವು ಏಕ ಕುಂಚಿತಪಾದ ಭಂಗಿಯಲ್ಲಿದ್ದು ನೃತ್ಯದ ಬಿರುಸು ಎದ್ದುಕಾಣುವಂತೆ ಚಿತ್ರಿತವಾಗಿದೆ. ಉತ್ತರೀಯ ಮತ್ತು ಯಜ್ಞೋಪವೀತಗಳಂತೂ ಗಾಳಿಯಲ್ಲಿ ಹಾರಾಡುತ್ತಿರುವಂತೆ ಕಾಣುತ್ತವೆ. ಇನ್ನೊಂದು ಶಿಲ್ಪದ ಎರಡು ಕೈಗಳು ಮುರಿದುಹೋಗಿವೆ. ಇನ್ನೆರಡು ಕೈಗಳಲ್ಲಿ ಅಂಕುಶ ಮತ್ತು ಪಾಶಗಳು ಇವೆ. ಉಳಿದೆರಡು ಕೈಗಳು ಕೊಳಲನ್ನು ಹಿಡಿಯುವ ರೀತಿಯಲ್ಲಿ ಇವೆ. ಎಡಗೈ ಬಾಯಿಗೆ ಹತ್ತಿರವಿದ್ದು, ಅದರಲ್ಲಿ ಕೊಳಲಿನದು

ಎನ್ನಬಹುದಾದ ಮುರಿದುಹೋಗಿರುವ ಭಾಗವಿದೆ. ವೀಣೆಯಿದ್ದುದಕ್ಕೆ ಯಾವುದೇ ಕುರುಹುಗಳಿಲ್ಲ. ಬಹುಶಃ ಈ ಶಿಲ್ಪ ವೇಣುವಾದಕಿ ಸರಸ್ವತಿಯದ್ದಿರಬೇಕು.

ಹಳೇಬೀಡಿನ ಮ್ಯೂಸಿಯಮ್ಮಿನ ಹೊರಭಾಗದಲ್ಲಿ ಭಿತ್ತಿ ಶಿಲ್ಪವಾಗಿದ್ದಿರಬಹುದಾದ ಒಂದು ಸರಸ್ವತೀ ಶಿಲ್ಪವಿದೆ. ಒಂದು (ಎಡ)ಕೈಯಲ್ಲಿ ವೀಣೆಯಿದೆ ಮತ್ತು ಒಂದು ಬಲಗೈ ದೋಲಹಸ್ತವಾಗಿದೆ. ಉಳಿದ ಕೈಗಳಲ್ಲಿ ಅಂಕುಶ ಅಕ್ಷಮಾಲೆ ಪವಿತ್ರ ಮತ್ತು ಪುಸ್ತಕಗಳಿವೆ. ಸೋಮನಾಥಪುರದ ಕೇಶವದೇವಾಲಯದ ಭಿತ್ತಿಯಲ್ಲಿ ಎರಡು ಕೈಗಳಲ್ಲಿ ವೀಣೆ ಮತ್ತು ಉಳಿದ ಕೈಗಳಲ್ಲಿ ಅಂಕುಶ ಅಕ್ಷಮಾಲೆ ಪುಸ್ತಕ ಮತ್ತು ಪವಿತ್ರವನ್ನು ಹಿಡಿದಿರುವ ಶಿಲ್ಪವೊಂದಿದೆ. ಶಿಲ್ಪದಲ್ಲಿ ಹೆಚ್ಚಿನ ಕುಸುರಿಕೆಲಸ ಕಾಣುವುದಿಲ್ಲ. ಅಕ್ಷಮಾಲೆ ಒಂದು ಬಳೆಯಂತೆ ಕಾಣುತ್ತದೆ. ಇದು ಬಹುಶಃ ಅಪೂರ್ಣ ಶಿಲ್ಪವಾಗಿರಬಹುದು. ಗೋವಿಂದನಹಳ್ಳಿಯ ಪಂಚಲಿಂಗೇಶ್ವರ ದೇವಾಲಯದ ಭಿತ್ತಿಯಲ್ಲಿ ಮೂರು ಷಡ್ಭುಜ ನೃತ್ಯ ಸರಸ್ವತೀ ಶಿಲ್ಪಗಳಿದ್ದು, ಅವುಗಳಲ್ಲಿ ಎರಡು ವೀಣಾ ಸರಸ್ವತೀ ಶಿಲ್ಪಗಳಾಗಿವೆ. ಆದರೆ ಈ ಮೂರೂ ಶಿಲ್ಪಗಳು ಕಲ್ಲಿನ ಸವೆತದಿಂದಾಗಿ ಹಾಳಾಗಿವೆ. ಬಗ್ಗವಳ್ಳಿಯ ದೇವಾಲಯದ ಭಿತ್ತಿಯಲ್ಲೂ ಇದೇ ರೀತಿ ಹಾಳಾಗಿರುವ ಷಡ್ಭುಜ ಸರಸ್ವತಿಯಶಿಲ್ಪವಿದೆ.

ವೀಣೆಯನ್ನು ಹಿಡಿದಿರದ ಷಡ್ಭುಜ ನೃತ್ಯಶಿಲ್ಪಗಳು ಮರಳೆಯ ಸಿದ್ಧೇಶ್ವರ (ಕ್ರಿ.ಶ.1130), ಹಾರನಹಳ್ಳಿಯ ಕೇಶವ (ಕ್ರಿ.ಶ.1234), ಬಸರಾಳಿನ ಮಲ್ಲಿಕಾರ್ಜುನ (ಕ್ರಿ.ಶ.1234) ಮತ್ತು ಹೊಸಹೊಳಲಿನ ಕೇಶವ (ಕ್ರಿ.ಶ.13ನೇ ಶತಮಾನ) ದೇವಾಲಯಗಳ ಭಿತ್ತಿಯಲ್ಲಿವೆ. ಮರಳೆಯ ಶಿಲ್ಪದ ಒಂದು ಬಲಗೈ (ದೋಲ ಅಥವಾ ಗಜಹಸ್ತ) ಮುರಿದುಹೋಗಿದೆ. ಉಳಿದೆರಡು ಕೈಗಳಲ್ಲಿ ಅಕ್ಷಮಾಲೆ ಮತ್ತು ಅಂಕುಶಗಳಿವೆ. ಎಡಭಾಗದಲ್ಲಿ ಒಂದು ಸ್ವರ್ಗಹಸ್ತ (ಹಾಲಪದ್ಮ) ಆಗಿದ್ದರೆ, ಉಳಿದೆರಡು ಕೈಗಳಲ್ಲಿ ಪಾಶ ಮತ್ತು ಪುಸ್ತಕಗಳನ್ನು ಕಾಣಬಹುದು. ಎಡಗಾಲಿನ ಬಳಿ ಹಂಸವಿದೆ. ವಾದ್ಯಗಾರರಿಲ್ಲ. ಬಲಭಾಗದಲ್ಲಿ ಸಹಾಯಕ ದೇವತೆಯ ಚಿತ್ರವಿದೆ. ಹಾರನಹಳ್ಳಿ ಮತ್ತು ಹೊಸಹೊಳಲಿನ ಭಿತ್ತಿಶಿಲ್ಪಗಳಲ್ಲಿ ವ್ಯತ್ಯಾಸವಿಲ್ಲ. ಅಕ್ಷಮಾಲೆ, ಪಾಲಹಸ್ತ, ಅಂಕುಶ ಎಡಭಾಗದಲ್ಲಿದ್ದು, ಬಲಭಾಗದಲ್ಲಿ ಸ್ವರ್ಗಹಸ್ತ, ಪಾಶ ಮತ್ತು ಪುಸ್ತಕಗಳು ಇದೆ. ಹೊಸಹೊಳಲಿನ ಶಿಲ್ಪದಲ್ಲಿ ಪಾಶ ಪವಿತ್ರದ ಗಂಟಿನಾಕಾರದಲ್ಲಿದೆ. ಹಾರನಹಳ್ಳಿಯ ಶಿಲ್ಪದ ಪಾಲಹಸ್ತ ಸ್ವಲ್ಪ ಭಗ್ನವಾಗಿದೆ. ಪ್ರಭಾವಳಿಯಲ್ಲಾಗಲೀ, ಇಕ್ಕೆಲಗಳಲ್ಲಿರುವ ವಾದ್ಯಗಾರರಲ್ಲಿಯಾಗಲೀ ಯಾವುದೇ ವ್ಯತ್ಯಾಸವಿರುವುದಿಲ್ಲ. ಹಾರನಹಳ್ಳಿಯ ಈ ಶಿಲ್ಪವನ್ನೇ ಹೋಲುವ ಇನ್ನೊಂದು ಶಿಲ್ಪ ಬಸರಾಳಿನ ಮಲ್ಲಿಕಾರ್ಜುನ ದೇವಾಲಯದ ಭಿತ್ತಿಯಲ್ಲೂ ಇದೆ. ಬಸರಾಳಿನ ಶಿಲ್ಪದ ಲಕ್ಷಣಗಳು ಹಾರನಹಳ್ಳಿಯ ಶಿಲ್ಪವನ್ನೇ ಹೋಲುತ್ತಿದ್ದು, ಪುಸ್ತಕದ ಬದಲಾಗಿ ಫಲ ಇರುವುದನ್ನು ಕಾಣಬಹುದು. ಈ ಎಲ್ಲಾ ದೇವಾಲಯಗಳು ಹದಿಮೂರನೇ ಶತಮಾನಕ್ಕೆ ಸೇರಿದವುಗಳಾಗಿವೆ.

ಹದಿಮೂರನೇ ಶತಮಾನದ ಪ್ರಸಿದ್ಧ ಶಿಲ್ಪಾಚಾರ್ಯರಾದ ಮಲ್ಲಿತಮ್ಮ, ಬೈಚೋಜ ಮೊದಲಾದವರು ಹೊಸಹೊಳಲು, ಹಾರನಹಳ್ಳಿ, ಬಸರಾಳು, ನುಗ್ಗೆಹಳ್ಳಿ, ಅಮೃತಾಪುರ, ಗೋವಿಂದನಹಳ್ಳಿ, ಜಾವಗಲ್ ಮೊದಲಾದ ದೇವಾಲಯಗಳಲ್ಲಿ ಕೆಲಸ ಮಾಡಿದ್ದರು[77] ಎಂಬ ವಿಚಾರ ಈಗ ಸ್ಪಷ್ಟವಾಗಿರುವುದರಿಂದ ಈ ರೀತಿಯ ಶಿಲ್ಪಸಾಮ್ಯ ಸಹಜವಾಗಿದೆ.

4.4. ಅಷ್ಟಭುಜ ನೃತ್ಯಸರಸ್ವತೀ ಶಿಲ್ಪಗಳು

ನೃತ್ಯಭಂಗಿಯಲ್ಲಿರುವ ಅಷ್ಟಭುಜ ಸರಸ್ವತೀ ಶಿಲ್ಪಗಳೆಲ್ಲವೂ ಸಾಮಾನ್ಯವಾಗಿ ಭಿತ್ತಿಶಿಲ್ಪಗಳೇ ಆಗಿವೆ. ಲಭ್ಯವಾಗಿರುವ ಹನ್ನೆರಡು ಶಿಲ್ಪಗಳಷ್ಟೂ ಹೊಯ್ಸಳ ದೇವಾಲಯಗಳದೇ ಆಗಿರುವುದು ವಿಶೇಷ. ಹೊಯ್ಸಳರ ಕಾಲದ ದೇವಾಲಯಗಳಲ್ಲಿ ಭಿತ್ತಿಯ ಅಲಂಕಾರಕ್ಕೆ ಹೆಚ್ಚು ಮಹತ್ವ ಕೊಟ್ಟಿರುವುದರಿಂದ ಭಿತ್ತಿಶಿಲ್ಪಗಳಲ್ಲಿ ವೈವಿಧ್ಯತೆ ಹೆಚ್ಚಾಗಿ ಕಂಡುಬರುತ್ತದೆ. ಈ ಶಿಲ್ಪಗಳು ಹಾಸನ (7 ಶಿಲ್ಪಗಳು), ಮಂಡ್ಯ (3 ಶಿಲ್ಪಗಳು), ಮೈಸೂರು (1 ಶಿಲ್ಪ) ಮತ್ತು ತುಮಕೂರು (1 ಶಿಲ್ಪ) ಜಿಲ್ಲೆಗಳಲ್ಲಿ ಮಾತ್ರ ಕಂಡುಬರುತ್ತವೆ. ಹಾಸನ ಜಿಲ್ಲೆಯ ಹಳೇಬೀಡಿನಲ್ಲಿ ಮೂರು ಹಾಗೂ ಬೇಲೂರು, ಹಾರನಹಳ್ಳಿ, ಜಾವಗಲ್ಲು ಮತ್ತು ನುಗ್ಗೆಹಳ್ಳಿಯಲ್ಲಿ ತಲಾ ಒಂದೊಂದು ಶಿಲ್ಪಗಳಿವೆ. ಮಂಡ್ಯ ಜಿಲ್ಲೆಯ ಬಸರಾಳು, ಹೊಸಹೊಳಲು, ನಾಗಲಾಪುರದಲ್ಲಿ ತಲಾ ಒಂದು, ಮೈಸೂರು ಜಿಲ್ಲೆಯ ಸೋಮನಾಥಪುರ ಮತ್ತು ತುಮಕೂರು ಜಿಲ್ಲೆಯ ಅರಳಗುಪ್ಪೆಯಲ್ಲಿ ಒಂದೊಂದು ಶಿಲ್ಪಗಳಿವೆ. ಹಳೇಬೀಡು ಮತ್ತು ಬೇಲೂರಿನ ದೇವಾಲಯಗಳು ಹನ್ನೆರಡನೇ ಶತಮಾನಕ್ಕೆ ಸೇರಿದ ದೇವಾಲಯಗಳಾಗಿದ್ದರೆ, ಉಳಿದವುಗಳು ಹದಿಮೂರನೇ ಶತಮಾನಕ್ಕೆ ಸೇರಿದ ದೇವಾಲಯಗಳಾಗಿವೆ.

ನುಗ್ಗೆಹಳ್ಳಿಯ ಶಿಲ್ಪವೊಂದನ್ನು ಬಿಟ್ಟರೆ ಉಳಿದವುಗಳೆಲ್ಲಾ ವೀಣಾಸರಸ್ವತಿಯ ಶಿಲ್ಪಗಳಾಗಿವೆ. ಸರಸ್ವತೀ ಶಿಲ್ಪಗಳ ಕೈಯಲ್ಲಿರುವ ಸಾಮಗ್ರಿಗಳು ಯಾವಾಗಲೂ ಜೊತೆಜೊತೆಯಾಗಿಯೇ ಬರುತ್ತವೆ. ಉದಾಹರಣೆಗೆ ಎಡಭಾಗದ ಕೈಯಲ್ಲಿ ಕಮಲವಿದ್ದರೆ ಅದರ ವಿರುದ್ಧ ದಿಕ್ಕಿನ ಕೈಯಲ್ಲಿ ಫಲ ಇರುತ್ತದೆ. ಅದೇ ರೀತಿ ವೀಣೆ–ವೀಣೆ, ಅಂಕುಶ–ಪಾಶ(ಪವಿತ್ರ), ಅಕ್ಷಮಾಲೆ–ಪುಸ್ತಕ, ದೋಲ(ಪಾಲ)ಹಸ್ತ–ಸ್ವರ್ಗಹಸ್ತ ಈ ಮಾದರಿಯಲ್ಲಿರುತ್ತವೆ. ಬಹುತೇಕ ಎಲ್ಲಾ ಶಿಲ್ಪಗಳಲ್ಲೂ ವೀಣೆ–ವೀಣೆ ಮತ್ತು ಅಕ್ಷಮಾಲೆ–ಪುಸ್ತಕ ಇವುಗಳು ಇದ್ದೇ ಇರುತ್ತವೆ. ವೀಣಾ ಸರಸ್ವತೀ ಶಿಲ್ಪದಲ್ಲಿ ಪಾಲಹಸ್ತ–ಸ್ವರ್ಗಹಸ್ತ ಇದ್ದರೆ ಕಮಲ ಮತ್ತು ಫಲ ಇರುವುದಿಲ್ಲ. ವೀಣೆಯನ್ನು ಹಿಡಿದಿರದ ನುಗ್ಗೆಹಳ್ಳಿಯ ಶಿಲ್ಪದಲ್ಲಿ ಮಾತ್ರ ಈ ಎರಡೂ ಜೋಡಿ ಸಾಮಗ್ರಿಗಳನ್ನು ಕಾಣುತ್ತೇವೆ. ಬೇಲೂರಿನ ಶಿಲ್ಪದ ಆರು ಕೈಗಳು ಮುರಿದು ಹೋಗಿ, ತ್ರಿಶೂಲ ಮತ್ತು ವೀಣೆ ಹಿಡಿದಿರುವ ಕೈಗಳು ಮಾತ್ರ ಇರುವುದರಿಂದ ಅವುಗಳ ಕ್ರಮವನ್ನು ತಿಳಿಯುವುದು ಕಷ್ಟವಾಗಿದೆ.

---

77. ಕುಮಾರಸ್ವಾಮಿ ಕೆ.ಎಸ್.: ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರ್ಯರು ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1997.

ಜಾವಗಲ್ಲಿನ ಶಿಲ್ಪದಲ್ಲಿ ಈ ಕ್ರಮ ಸ್ವಲ್ಪ ಹೆಚ್ಚು ಕಮ್ಮಿಯಾದಂತೆ ಕಂಡುಬರಲು ಕಾರಣ ಎಡಭಾಗದ ತೋಳುಗಳ ಕೆತ್ತನೆಯಲ್ಲಿ ಅಸ್ಪಷ್ಟತೆಯಿರುವುದು. ಈ ಶಿಲ್ಪದಲ್ಲಿ ಅಂಕುಶ, ಪುಸ್ತಕ, ಪವಿತ್ರ, ಅಕ್ಷಮಾಲೆ ಮತ್ತು ಕಮಲಗಳು ಸ್ಥಾನಪಲ್ಲಟವಾಗಿರುವಂತೆ ಭಾಸವಾಗುತ್ತದೆ.

ಹಳೇಬೀಡಿನ ಮ್ಯೂಸಿಯಂನ ಒಳಭಾಗದಲ್ಲಿರುವ ಒಂದು ಶಿಲ್ಪ (ಕ್ರಿ.ಶ.12ನೇ ಶತಮಾನ), ಹೊಸಹೊಳಲು (ಲಕ್ಷ್ಮೀನಾರಾಯಣ) ಮತ್ತು ಅರಳಗುಪ್ಪೆ (ಕೇಶವ) (ಕ್ರಿ.ಶ.13ನೇ ಶತಮಾನ) ದೇವಾಲಯಗಳ ಸರಸ್ವತೀ ಶಿಲ್ಪಗಳು ಸಮಾನ ಲಕ್ಷಣಗಳನ್ನು ಒಳಗೊಂಡಿವೆ. ಎಡಭಾಗದ ಕೈಗಳಲ್ಲಿ ಅಕ್ಷಮಾಲೆ–ಅಂಕುಶ–ಕಮಲ–ವೀಣೆಗಳು ಇದ್ದರೆ ಬಲಗೈಯಲ್ಲಿ ವೀಣೆ–ಫಲ–ಪಾಶ–ಪುಸ್ತಕಗಳು ಇವೆ. ಹಳೇಬೀಡು ಮತ್ತು ಅರಳಗುಪ್ಪೆಯ ಶಿಲ್ಪಗಳ ಪಾಶ ಪವಿತ್ರದ ಗಂಟಿನಾಕಾರದಲ್ಲಿದೆ. ಹಳೇಬೀಡಿನ ಶಿಲ್ಪದ 'ಫಲ' ಸ್ವಲ್ಪ ಭಿನ್ನವಾಗಿದೆ. ಮೂರೂ ಶಿಲ್ಪಗಳ ಇಕ್ಕೆಲಗಳಲ್ಲಿ ವಾದ್ಯಗಾರರಿದ್ದಾರೆ. ಜಾವಗಲ್ಲಿನ ಲಕ್ಷ್ಮೀನರಸಿಂಹ ದೇವಾಲಯದ (13ನೇ ಶತಮಾನ) ಭಿತ್ತಿಶಿಲ್ಪವೂ ಇವುಗಳನ್ನೇ ಹೋಲುತ್ತಿದ್ದರೂ ಬಲಭಾಗದಲ್ಲಿ ವೀಣೆ–ಫಲ–ಪಾಶ–ಪುಸ್ತಕ ಈ ಕ್ರಮದ ಬದಲಾಗಿ ವೀಣೆ–ಪುಸ್ತಕ–ಪವಿತ್ರ–ಫಲ ಈ ಕ್ರಮದಲ್ಲಿ ಬಂದಿರುವಂತೆ ಕಾಣುತ್ತದೆ. ಬಲಗಾಲನ್ನು ನೆಲದಲ್ಲಿ ಊರಿ ಎಡಗಾಲನ್ನು ಸ್ವಲ್ಪ ಮೇಲಕ್ಕೆ ಎತ್ತಿರುವ 'ಏಕ ಕುಂಚಿತಪಾದ' ಭಂಗಿಯಲ್ಲಿ ಈ ನಾಲ್ಕೂ ಶಿಲ್ಪಗಳಿವೆ.

ಹಳೇಬೀಡಿನ ಮ್ಯೂಸಿಯಮ್ಮಿನ ಮುಂಭಾಗದಲ್ಲಿರುವ ಒಂದು ಶಿಲ್ಪ (ಕ್ರಿ.ಶ.12ನೇ ಶತಮಾನ), ನಾಗಲಾಪುರ (ಚೆನ್ನಕೇಶವ) ಮತ್ತು ಸೋಮನಾಥಪುರದ (ಕೇಶವ) ದೇವಾಲಯಗಳ ಸರಸ್ವತೀ ಶಿಲ್ಪಗಳು (ಕ್ರಿ.ಶ.13ನೇ ಶತಮಾನ) ಸಮಾನ ಲಕ್ಷಣಗಳನ್ನುಳ್ಳವಾಗಿವೆ. ಬಲಭಾಗದ ಹಸ್ತಗಳಲ್ಲಿ ಅಕ್ಷಮಾಲೆ–ಅಂಕುಶ–ಪಾಲಹಸ್ತ–ವೀಣೆ ಇದ್ದರೆ ಎಡಭಾಗದ ಹಸ್ತಗಳಲ್ಲಿ ವೀಣೆ–ಸ್ವರ್ಗ–ಪಾಶ–ಪುಸ್ತಕ ಇವೆ. ಹಳೇಬೀಡಿನ ಶಿಲ್ಪದ ಪಾಶ ಮಾತ್ರ ಪವಿತ್ರದ ಗಂಟಿನಾಕಾರದಲ್ಲಿದೆ. ಮೂರೂ ಶಿಲ್ಪಗಳ ಇಕ್ಕೆಲಗಳಲ್ಲಿ ವಾದ್ಯಗಾರರಿದ್ದಾರೆ. ಬಲಗಾಲನ್ನು ನೆಲದಲ್ಲಿ ಊರಿ ಎಡಗಾಲನ್ನು ಸ್ವಲ್ಪ ಮೇಲಕ್ಕೆ ಎತ್ತಿರುವ 'ಏಕ ಕುಂಚಿತಪಾದ' ಭಂಗಿಯಲ್ಲಿ ಈ ಮೂರೂ ಶಿಲ್ಪಗಳಿವೆ.

ಹಳೇಬೀಡಿನ ಹೊಯ್ಸಳೇಶ್ವರ–ಶಾಂತಲೇಶ್ವರ ದೇವಾಲಯದ, ಹೊಯ್ಸಳೇಶ್ವರ ಗರ್ಭಗುಡಿಯ ಎದುರಿಗಿನ ನಂದಿಮಂಟಪಕ್ಕೆ ಹೊಂದಿಕೊಂಡಿರುವ ಸೂರ್ಯನ ಗುಡಿಯ ಭಿತ್ತಿಯಲ್ಲಿ ಈ ವರ್ಗೀಕರಣದ ಅತ್ಯುತ್ಕೃಷ್ಟ ಎನ್ನಬಹುದಾದ ಶಿಲ್ಪವೊಂದಿದೆ. ಈ ಶಿಲ್ಪದ ನೃತ್ಯ ಭಂಗಿಯ ಬಗ್ಗೆ ಜಿ. ಜ್ಞಾನಾನಂದ ಅವರು 'ಬಲಗಾಲು ಊರಿದ್ದು ಎಡಗಾಲು ಸ್ವಲ್ಪ ಓರೆಯಾಗಿದೆ. ಎಡಗಾಲು ಮೇಲಕ್ಕೆತ್ತಿದ್ದಾಳೆ. ತಲೆಯು ಓರೆಯಾಗಿದ್ದು ಅದರೊಂದಿಗೇ ಚಲಿಸುತ್ತಿರುವಂತೆ ತೋರುತ್ತದೆ. ಹಸ್ತಗಳು

ಎತ್ತಿರುವ ಕಾಲಿನೊಂದಿಗೆ ಸಹಸ್ಪಂದನೆಯಲ್ಲಿವೆ' ಎಂದಿದ್ದಾರೆ.[78] ಕಾಲಿನ ಬಳಿ ಹಂಸವಿದೆ. ಇಕ್ಕೆಲಗಳಲ್ಲಿರುವ ಚಾಮರಧಾರಿಣಿಯರ ಕೆತ್ತನೆಗಳು ಸಾಮಾನ್ಯ ಶಿಲ್ಪಗಳಿಗೆ ಇರುವಂತೆ ಇರದೆ, ದೇವತಾಶಿಲ್ಪಗಳಿಗೆ ಇರುವಂತೆಯೆ ಇದೆ. ಬಲಭಾಗದ ಶಿಲ್ಪ ಹೆಚ್ಚು ಅಲಂಕೃತವಾಗಿ ಮೂಡಿಬಂದಿದೆ. ಸರಸ್ವತೀ ಶಿಲ್ಪದಲ್ಲಿ ವಸ್ತ್ರದ ಕೆಲಸವನ್ನು ಆಭರಣಗಳೇ ಮಾಡಿವೆ. ಕಾಲುಂಗುರಗಳಿಂದ ಹಿಡಿದು ಕರಂಡಮಕುಟದವರೆಗೆ, ಪಾದಸರಗಳು, ಕಾಲಂದಿಗೆಗಳು, ಉರಹಾರ, ಕಟಿಹಾರ, ಸ್ತನಹಾರ, ಕಂಠಿಕೆ, ಪದಕಮಾಲೆ, ಬಳೆಗಳು, ಕಡಗಗಳು, ತೋಳಬಂದಿ, ಕೇಯೂರ, ಸ್ಕಂದಮಾಲೆಗಳು ಎಲ್ಲವೂ ಅತ್ಯಂತ ನಾಜೂಕಾದ ಕುಸುರಿ ಕೆಲಸಗಳಿಂದ ಕೂಡಿವೆ. ಈ ವಿಭಾಗದ ಎಲ್ಲಾ ಶಿಲ್ಪಗಳು, ಕುಸುರಿಕೆಲಸದಲ್ಲಿ ಪರಿಪೂರ್ಣವಲ್ಲದಿದ್ದರೂ, ಇಷ್ಟೂ ಆಭರಣಗಳನ್ನು ಒಳಗೊಂಡಿವೆ ಎಂಬುದನ್ನು ಕಾಣಬಹುದು. ಬಹುಶಃ ಆ ದಿನಗಳಲ್ಲಿ ನೃತ್ಯಪಟುಗಳು ಈ ರೀತಿಯ ಅಲಂಕಾರಕ್ಕೆ ಹೆಚ್ಚು ಒತ್ತು ಕೊಡುತ್ತಿದ್ದರು ಎನ್ನಬಹುದು. ಇದೇ ಶಿಲ್ಪದ ಬಲಬದಿಗೆ ಬ್ರಹ್ಮ-ಸರಸ್ವತಿಯರ ಇನ್ನೊಂದು ಶಿಲ್ಪವಿದೆ.

ಹಾರನಹಳ್ಳಿ ಸೋಮೇಶ್ವರ ದೇವಾಲಯದ ದಕ್ಷಿಣ ಭಿತ್ತಿಯಲ್ಲಿರುವ ಸರಸ್ವತೀ ಶಿಲ್ಪವನ್ನು ಷಡ್ಭುಜ ಸರಸ್ವತಿಯ ಎಂದು ತಪ್ಪಾಗಿ ಗುರುತಿಸಲಾಗಿದೆ.[79] ಆದರೆ ಅದು ಅಷ್ಟಭುಜ ಶಿಲ್ಪ. ಬಲಬದಿಯ (ವೀಣೆ ಹಿಡಿದಿರುವ) ಒಂದು ಕೈ ಮುರಿದುಹೋಗಿದೆ. ಬಲಗೈಗಳಲ್ಲಿ ಅಂಕುಶ-ಅಕ್ಷಮಾಲೆ- ಪಾಲಹಸ್ತ-ವೀಣೆ ಇದ್ದರೆ, ಎಡಗೈಗಳಲ್ಲಿ ವೀಣೆ-ಸ್ವರ್ಗಹಸ್ತ-ಪುಸ್ತಕ-ಪವಿತ್ರ ಇವೆ. ಷಡ್ಭುಜ ಎಂದು ಗುರುತಿಸಿರುವವರು ಪಾಲಹಸ್ತ ಮತ್ತು ಪುಸ್ತಕಗಳನ್ನು ಗುರುತಿಸಿಲ್ಲ. ಬಲಗಾಲನ್ನು ಊರಿ ಎಡಗಾಲನ್ನು ಸ್ವಲ್ಪ ಓರೆಯಾಗಿಸಿ (ಏಕ ಕುಂಚಿತಪಾದ ಭಂಗಿ), ಮುಖವನ್ನು ಸ್ವಲ್ಪ ಬಲಕ್ಕೆ ಬಾಗಿಸಿ ನಿಂತಿರುವ ಈ ಸರಸ್ವತೀ ಶಿಲ್ಪದ ಉತ್ತರೀಯವು ನೃತ್ಯದ ಚಲನೆಯನ್ನು ಕಣ್ಣಿಗೆ ಕಟ್ಟುವಂತೆ ಮಾಡಿದೆ. ಇಕ್ಕೆಲಗಳಲ್ಲಿ ವಾದ್ಯಗಾರರಿದ್ದಾರೆ. ಈ ಶಿಲ್ಪದ ಪೀಠಕ್ಕೆ ಲತಾಸುರುಳಿಯ ಅಲಂಕಾರವಿದ್ದು, ಸುರುಳಿಯ ಮಧ್ಯದಲ್ಲಿ ಹಂಸವನ್ನು ಕೆತ್ತಲಾಗಿದೆ.

ಬಸರಾಳಿನ ಮಲ್ಲಿಕಾರ್ಜುನ ದೇವಾಲಯದ (ಕ್ರಿ.ಶ.1234) ಭಿತ್ತಿಯಲ್ಲಿರುವ ಶಿಲ್ಪವು ಹಾರನಹಳ್ಳಿಯ ಶಿಲ್ಪವನ್ನೇ ಹೋಲುತ್ತಿದ್ದರೂ ಎರಡು ಮುಖ್ಯ ವ್ಯತ್ಯಾಸಗಳಿವೆ. ಒಂದು ಅಲ್ಲಿ ಬಲಗಾಲನ್ನು ಊರಿದ ಏಕಕುಂಚಿತಪಾದ ಭಂಗಿಯಲ್ಲಿದ್ದರೆ, ಬಸರಾಳಿನ ಶಿಲ್ಪ ಎಡಗಾಲನ್ನು ಊರಿದ ಏಕ ಕುಂಚಿತಪಾದಭಂಗಿಯಲ್ಲಿದೆ. ಅಂಕುಶ-ಅಕ್ಷಮಾಲೆ-ವೀಣೆ ಹಾರನಹಳ್ಳಿ ಶಿಲ್ಪದಂತೆಯೇ ಇದ್ದರೆ, ಸ್ವರ್ಗಹಸ್ತ ಮತ್ತು ಪಾಲಹಸ್ತಗಳೆರಡು ಪರಸ್ಪರ ಸ್ಥಾನಪಲ್ಲಟಗೊಂಡಿವೆ. ಇನ್ನುಳಿದಂತೆ ಹಾರನಹಳ್ಳಿಯ ಶಿಲ್ಪದಲ್ಲಿ ಇಬ್ಬರು ವಾದ್ಯಗಾರರು ಮತ್ತು ಪೀಠದಲ್ಲಿ ಹಂಸವಿದ್ದರೆ, ಬಸರಾಳಿನ ಶಿಲ್ಪದಲ್ಲಿ ನಾಲ್ವರು ವಾದ್ಯಗಾರರಿದ್ದಾರೆ; ಹಂಸವಿರುವುದಿಲ್ಲ.

---

78. ಜ್ಞಾನಾನಂದ ಜಿ.: ಶಿಲ್ಪಾದರ್ಶ ಸಂಪುಟ –I, ಪು.130
79. M.A.R., 1933, P.63

ಅಷ್ಟಭುಜ ಶಿಲ್ಪಗಳಲ್ಲಿ ವೀಣೆಯನ್ನು ಹಿಡಿಯದಿರುವ ಶಿಲ್ಪ ನುಗ್ಗೆಹಳ್ಳಿ ಲಕ್ಷ್ಮೀನರಸಿಂಹ ದೇವಾಲಯದ ಭಿತ್ತಿಯಲ್ಲಿದೆ. ಇದರ ಕಾಲ ಕ್ರಿ.ಶ.1247. ಬಸರಾಳಿನ ಶಿಲ್ಪದಂತೆ ಎಡಗಾಲನ್ನು ಊರಿದ ಏಕ ಕುಂಚಿತಪಾದಭಂಗಿಯಲ್ಲಿ ಶಿಲ್ಪವಿದೆ. ಸಾಮಾನ್ಯವಾಗಿ ಮೇಲೆ ನಾವು ನೋಡಿದ ಶಿಲ್ಪಗಳಲ್ಲಿ ಬಲಭಾಗದಲ್ಲಿ ಮಾತ್ರ ಕಂಡುಬರುವ ಕಮಲ ಇಲ್ಲಿ ಎಡಭಾಗದಲ್ಲೂ, ಎಡಗೈನ ಫಲ ಬಲಗೈಯಲ್ಲೂ ಇವೆ. ಬಸರಾಳಿನ ಶಿಲ್ಪದಂತೆ ಪಾಲಹಸ್ತ ಎಡಭಾಗದಲ್ಲೂ, ಸ್ವರ್ಗಹಸ್ತ ಬಲಭಾಗದಲ್ಲೂ ಇವೆ. ಇಕ್ಕೆಲಗಳಲ್ಲಿ ವಾದ್ಯಗಾರರಿದ್ದಾರೆ. ಇನ್ನು ಎಲ್ಲಾ ಅಲಂಕಾರವೂ ಉಳಿದ ಶಿಲ್ಪಗಳಂತೆ ಇರುತ್ತದೆ.

ಬೇಲೂರಿನ ವೀರನಾರಾಯಣ ದೇವಸ್ಥಾನದ ಭಿತ್ತಿಯಲ್ಲಿರುವ ಶಿಲ್ಪದ ಆರು ಕೈಗಳು ಮುರಿದು ಹೋಗಿವೆ. ತ್ರಿಶೂಲ ಹಿಡಿದಿರುವ ಒಂದು ಬಲಗೈ ಮತ್ತು ವೀಣೆ ಹಿಡಿದಿರುವ ಒಂದು ಎಡಗೈ ಮಾತ್ರ ಉಳಿದಿವೆ. ಇನ್ನುಳಿದ ಕೈಗಳಲ್ಲಿ ಏನಿದ್ದವು ಎಂಬುದನ್ನು ತಿಳಿಯಲು ಸಾಧ್ಯವಾಗಿದ್ದಿದ್ದರೆ ಬಹುಶಃ ಅಷ್ಟಭುಜ ನೃತ್ಯ ಸರಸ್ವತೀ ಶಿಲ್ಪಗಳಲ್ಲಿ ನಾವು ಇದುವರೆಗೆ ನೋಡಿದ ಶಿಲ್ಪಗಳಿಗಿಂತ ಭಿನ್ನವಾದ ಶಿಲ್ಪವೊಂದು ಸಿಗುತ್ತಿತ್ತು. ಏಕೆಂದರೆ ತ್ರಿಶೂಲ ಹಿಡಿದಿರುವ ಸರಸ್ವತಿಯ ಶಿಲ್ಪ ದೊರೆತಿರುವುದು ಇದೊಂದೇ.

4.5. ದಶಭುಜ ನೃತ್ಯ ಸರಸ್ವತೀ ಶಿಲ್ಪಗಳು

ಇದುವರೆಗೆ ಎರಡು ದಶಭುಜ ಸರಸ್ವತಿಶಿಲ್ಪಗಳು ಮಾತ್ರ ಲಭ್ಯವಾಗಿವೆ. ಎರಡೂ ಭಿತ್ತಿಶಿಲ್ಪಗಳೇ ಆಗಿದ್ದು, ಹಾಸನ ಜಿಲ್ಲೆಯ ಹೊಯ್ಸಳ ದೇವಾಲಯಗಳಲ್ಲಿಯೇ ಇರುವುದು ವಿಶೇಷ. ಕ್ರಿ.ಶ.1121ರಲ್ಲಿ ನಿರ್ಮಾಣವಾಗಿರುವ ಹಳೇಬೀಡಿನ ಹೊಯ್ಸಳೇಶ್ವರ–ಶಾಂತಲೇಶ್ವರ ಮತ್ತು ಕ್ರಿ.ಶ.1250ರಲ್ಲಿ ನಿರ್ಮಾಣವಾಗಿರುವ ಜಾವಗಲ್ಲಿನ ಲಕ್ಷ್ಮೀನರಸಿಂಹ ದೇವಾಲಯಗಳ ಭಿತ್ತಿಯಲ್ಲಿ ಈ ಶಿಲ್ಪಗಳಿವೆ. ಬಹುಭುಜ ಶಿಲ್ಪಗಳಲ್ಲಿ ವೀಣಾಸರಸ್ವತೀ ಶಿಲ್ಪಗಳೇ ಹೆಚ್ಚಾಗಿ ಕಾಣಸಿಗುತ್ತವೆ. ಆದರೆ ಈ ಎರಡು ಶಿಲ್ಪಗಳು ದಶಭುಜ ಶಿಲ್ಪಗಳಾಗಿದ್ದರೂ ಯಾವುದೂ ವೀಣಾಸರಸ್ವತಿಯ ಶಿಲ್ಪವಲ್ಲ. ವಿದ್ಯಾರ್ಣವತಂತ್ರದಲ್ಲಿ ಉಲ್ಲೇಖಿಸಲಾಗಿರುವ ಸರಸ್ವತೀ ಮತ್ತು ಮಹಾಸರಸ್ವತೀ ಎಂಬ ದಶಭುಜ ಸರಸ್ವತಿಯ ಲಕ್ಷಣಗಳು ಈ ಶಿಲ್ಪಗಳ ಲಕ್ಷಣಗಳಿಗಿಂತ ತೀರಾ ಭಿನ್ನವಾಗಿವೆ.[80]

ಲತಾಸುರುಳಿಯಿರುವ ಪೀಠದ ಮೇಲೆ ಬಲಗಾಲನ್ನು ನೆಲಕ್ಕೆ ಊರಿ, ಎಡಗಾಲನ್ನು ತುಸು ಬಾಗಿಸಿ (ಏಕ ಕುಂಚಿತಪಾದಭಂಗಿ) ಮೋಹಕವಾಗಿ ನಿಂತಿರುವ ಶಿಲ್ಪ ಹಳೇಬೀಡಿನದು. ಬಲಭಾಗದಲ್ಲಿ ಒಂದು ಕೈ ಮುರಿದಿದ್ದು, ಉಳಿದವುಗಳು ಪಾಲಹಸ್ತ, ಅಕ್ಷಮಾಲೆ, ಅಂಕುಶ ಮತ್ತು ಸೌಟನ್ನು ಹೊಂದಿವೆ. ಎಡಭಾಗದ ಕೈಗಳು ಸ್ವರ್ಗಹಸ್ತ, ದಂಡ(?), ಪಾಶ (ಮೇಲ್ಭಾಗ ಮುರಿದಿದೆ), ಫಲ ಮತ್ತು ಪುಸ್ತಕಗಳನ್ನು

80. Niranjan Ghosh: Sri Sarasvati in Indain Art and Literature, P.45

ಹೊಂದಿವೆ. ಬಲಬದಿಯ ಇಬ್ಬರು ವಾದ್ಯಗಾರರ ರಚನೆಗಳು ಭಿನ್ನವಾಗಿವೆ. ಎಡಬದಿಯಲ್ಲಿ ಒಬ್ಬ ವಾದ್ಯಗಾರನಿದ್ದು, ಅವನ ಮುಂದೆ ಹಂಸವಿದೆ. ಶಿಲ್ಪದ ಮೇಲಿರುವ ಲತಾಸುರುಳಿ ದೊಡ್ಡದಾಗಿದ್ದು, ಶಿಲ್ಪಕ್ಕಿಂತ ಅದೇ ಪ್ರಧಾನವಾಗಿ ಕಾಣುತ್ತದೆ. ಉಳಿದಂತೆ ಅಷ್ಟಭುಜ ಶಿಲ್ಪಗಳಲ್ಲಿ ಕಂಡುಬರುವ ಎಲ್ಲಾ ಅಲಂಕಾರಗಳೂ ಇಲ್ಲಿ ಕಂಡುಬರುತ್ತವೆ.

ಜಾವಗಲ್ಲಿನ ಶಿಲ್ಪವು ಕುಂಚಿತಪಾದ (ಎರಡೂ ಕಾಲುಗಳು ನೆಲದಲ್ಲಿದ್ದರೂ ಸ್ವಲ್ಪ ಬಾಗಿರುತ್ತವೆ) ಭಂಗಿಯಲ್ಲಿದೆ. ಬಲಭಾಗದಲ್ಲಿ ಗಜಹಸ್ತ–ಪದ್ಮ–ಕೈಮುರಿದಿದೆ–ಅಂಕುಶ–ಅಕ್ಷಮಾಲೆ(ಚಿನ್ಮುದ್ರೆ) ಇದ್ದರೆ, ಎಡಭಾಗದಲ್ಲಿ ಪವಿತ್ರ–ಕೈಮುರಿದಿದೆ–ರತ್ನ–ದೋಲಹಸ್ತ–ಪುಸ್ತಕಗಳು ಇವೆ. ಇಕ್ಕೆಲಗಳಲ್ಲಿ ಇಬ್ಬರು ವಾದ್ಯಗಾರರಿದ್ದು, ಉಳಿದಂತೆ ಸರ್ವ ಅಲಂಕಾರವೂ ಇರುತ್ತದೆ.

5. ಬ್ರಹ್ಮನ ಜೊತೆಯಲ್ಲಿರುವ ಸರಸ್ವತೀ ಶಿಲ್ಪಗಳು

ಸರಸ್ವತೀ ವೇದ–ಪುರಾಣಗಳಲ್ಲಿ, ಸಾಹಿತ್ಯಗಳಲ್ಲಿ ವಿದ್ಯಾದೇವತೆಯಾಗಿರುವಂತೆ, ಕೆಲವೊಮ್ಮೆ ಬ್ರಹ್ಮನ ಮಗಳಾಗಿಯೂ, ಕೆಲವೊಮ್ಮೆ ಪತ್ನಿಯಾಗಿಯೂ ನಿರೂಪಿತಳಾಗಿದ್ದಾಳೆ. ಆದರೆ ಶಿಲ್ಪಗಳ ಮಟ್ಟಿಗೆ ಸರಸ್ವತೀ ಬ್ರಹ್ಮನ ಪತ್ನಿ ಮಾತ್ರ. ದೇವಾಲಯಗಳಲ್ಲಿ ತ್ರಿಮೂರ್ತಿ ಶಿಲ್ಪಗಳು ಇರುವೆಡೆಯಲ್ಲಿ (ಬ್ರಹ್ಮನಿಗೆ ಪೂಜೆಯಿಲ್ಲ ಎಂಬ ನಂಬಿಕೆಯ ಹಿನ್ನೆಲೆಯಲ್ಲಿ) ಬ್ರಹ್ಮನ ಬದಲಾಗಿ ಸರಸ್ವತೀ ಶಿಲ್ಪಗಳನ್ನು ಸ್ಥಾಪಿಸಿರುವುದು, ಸರಸ್ವತೀ ಬ್ರಹ್ಮನ ಶಕ್ತಿ ಎಂಬ ಅರ್ಥದಲ್ಲಿಯೆ. ಬ್ರಹ್ಮನ ಪ್ರತ್ಯೇಕ ಶಿಲ್ಪಗಳ ಜೊತೆಗೆ, ಸರಸ್ವತಿಯ ಜೊತೆಗೆ ಇರುವ ಶಿಲ್ಪಗಳೂ ಇವೆ.

ಐಹೊಳೆಯ ಶಿವದೇವಾಲಯವೊಂದರಲ್ಲಿ ಬ್ರಹ್ಮನನ್ನು ವಿಶ್ವಕರ್ಮನ ಸ್ವರೂಪದಲ್ಲಿ ಪರಿವಾರ ದೇವತೆಗಳೊಡನೆ ಕೆತ್ತಲಾಗಿದೆ. 'ಬ್ರಹ್ಮನ ಇಕ್ಕೆಲಗಳಲ್ಲಿ ಹಾರಗಳನ್ನು ಹಿಡಿದಿರುವ ಇಬ್ಬರು ಸ್ತ್ರೀ ದೇವತೆಗಳಿವೆ. ಅವುಗಳು ಸರಸ್ವತಿ ಮತ್ತು ಸಾವಿತ್ರಿಯರಾಗಿರಬಹುದು'[81] ಎನ್ನಲಾಗಿದೆ. ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದ ಭಿತ್ತಿಯಲ್ಲಿರುವ ಬ್ರಹ್ಮನ ಶಿಲ್ಪದ ಇಕ್ಕೆಲಗಳಲ್ಲಿ ಬಿಡಿಸಿರುವ ಚಾಮರಧಾರಿಣಿಯರನ್ನು ಸರಸ್ವತಿ ಮತ್ತು ಸಾವಿತ್ರಿಯರು ಎನ್ನಲಾಗಿದೆ.[82] ಪ್ರಮುಖ ದೇವತೆಗಳ ಇಕ್ಕೆಲಗಳಲ್ಲಿ ಸಹಾಯಕ ದೇವತೆಗಳನ್ನು, ಚಾಮರಧಾರಿಣಿಯರನ್ನು, ಅಪ್ಸರೆಯರನ್ನು ಕೆತ್ತಿರುವುದು ಎಲ್ಲೆಡೆ ಕಂಡು ಬರುತ್ತದೆ. ಹಾರ, ಚಾಮರಗಳನ್ನು ಹಿಡಿದು ಬ್ರಹ್ಮನ ಪಕ್ಕದಲ್ಲಿ ನಿಂತಿರುವ ಮಾತ್ರಕ್ಕೆ ಅಂತಹ ಶಿಲ್ಪಗಳನ್ನು ಸರಸ್ವತಿ ಮತ್ತು ಸಾವಿತ್ರಿಯರಿಗೆ ಸಮೀಕರಿಸುವುದು ಸಮಂಜಸವಲ್ಲ.

ಬ್ರಹ್ಮ ತನ್ನ ಎಡತೊಡೆಯ ಮೇಲೆ ಸರಸ್ವತಿಯನ್ನು ಕೂರಿಸಿಕೊಂಡಿರುವ ಶಿಲ್ಪಗಳು ಹಳೇಬೀಡು, ಕಿಕ್ಕೇರಿ, ಅಮೃತಾಪುರ, ಬಸರಾಳು ದೇವಾಲಯಗಳಲ್ಲಿ ಸಿಗುತ್ತವೆ. ಹಳೇಬೀಡು ಮತ್ತು ಕಿಕ್ಕೇರಿಯ

---

81. Gopinath Rao T.A.: Elements of Hindu Iconography, Vol -2; Part -2, P.508
82. Ibid., P.511

ಶಿಲ್ಪಗಳಲ್ಲಿ ಸರಸ್ವತೀ ಬ್ರಹ್ಮನ ಎಡತೊಡೆಯ ಮೇಲೆ ಕುಳಿತಿದ್ದರೂ ಚತುರ್ಭುಜಳಾಗಿರುವುದು ವಿಶೇಷ. ಆಕೆಯ ಒಂದು ಬಲಗೈ ಬ್ರಹ್ಮನ ಸೊಂಟವನ್ನು ಬಳಸಿರುತ್ತದೆ. ಹಳೇಬೀಡಿನ ಶಿಲ್ಪದಲ್ಲಿ ಚತುರ್ಮುಖ ಬ್ರಹ್ಮನ ಬಲಗೈಗಳಲ್ಲಿ ಅಕ್ಷಮಾಲೆ ಮತ್ತು ಕಮಲದ ಮೊಗ್ಗುಗಳಿದ್ದು, ಎಡಭಾಗದ ಒಂದು ಕೈಯಲ್ಲಿ ಪವಿತ್ರವಿದ್ದರೆ, ಇನ್ನೊಂದು ಕೈ ಸರಸ್ವತಿಯ ಹಿಂಬದಿಯಲ್ಲಿದೆ. ಹಾಗೆಯೇ ಸರಸ್ವತಿಯ ಒಂದು ಬಲಗೈ ಬ್ರಹ್ಮನ ಸೊಂಟವನ್ನು ಬಳಸಿದ್ದರೆ ಇನ್ನೊಂದು ಕೈ ಅಕ್ಷಮಾಲೆಯೊಂದಿಗೆ ಅಭಯಮುದ್ರೆಯಲ್ಲಿರುತ್ತದೆ. ಎಡಭಾಗದ ಕೈಗಳಲ್ಲಿ ಅಂಕುಶ ಮತ್ತು ಪುಸ್ತಕಗಳು ಇವೆ. ಬ್ರಹ್ಮ–ಸರಸ್ವತೀ ಇಬ್ಬರೂ ಸರ್ವಾಲಂಕಾರಭೂಷಿತರಾಗಿದ್ದಾರೆ.

ಕಿಕ್ಕೇರಿಯಲ್ಲಿಯೂ ಇದೇ ರೀತಿಯ ಶಿಲ್ಪವಿದೆ. ಬ್ರಹ್ಮನ ಕೈಗಳ ಪರಿಕರಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಆದರೆ ಇಲ್ಲಿ ಆತನ ಎಡಗೈ ಸರಸ್ವತಿಯ ಸೊಂಟದ ಹಿಂಬದಿಯಲ್ಲಿರದೆ, ಹೆಗಲ ಮೇಲೆ ಇದೆ. ಸರಸ್ವತಿಯ ಬಲಗೈಗಳೆರಡೂ ಬ್ರಹ್ಮನ ಹಿಂಬದಿಗೆ ಸೇರಿಹೋಗಿದ್ದು, ಎಡಗೈಗಳಲ್ಲಿ ಪಾಶ ಮತ್ತು ಪುಸ್ತಕಗಳಿವೆ. ಬ್ರಹ್ಮನ ಪಾದದ ಬಳಿ ಹಂಸವಿದೆ. ಕೆಳಗಡೆ ಒಂದು ಸ್ತ್ರೀ–ಪುರುಷ ಜೋಡಿ ಸಹಾಯಕರಿದ್ದಾರೆ. ಹಳೇಬೀಡಿನ ಶಿಲ್ಪದಲ್ಲಿ ಹಂಸವಾಗಲೀ ಸಹಾಯಕರಾಗಲೀ ಕಂಡುಬರುವುದಿಲ್ಲ.

ಹಳೇಬೀಡಿನ ಭಿತ್ತಿಗಳಲ್ಲಿರುವ ಸಾವಿರಾರು ಶಿಲ್ಪಗಳಲ್ಲಿ ರಾವಣ ಕೈಲಾಸ ಪರ್ವತ ಎತ್ತುತ್ತಿರುವ ಶಿಲ್ಪ ಅತ್ಯಂತ ಪ್ರಸಿದ್ಧವಾದುದು. ರಾವಣ ಎತ್ತುತ್ತಿರುವ ಕೈಲಾಸ ಪರ್ವತವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅದರಲ್ಲಿ ಅಸಂಖ್ಯಾತ ದೇವತೆಗಳು ಕಾಣುತ್ತಾರೆ. ಅವುಗಳಲ್ಲಿ ಪ್ರಧಾನವಾಗಿ ಕೈಲಾಸ ಪರ್ವತದ ಮುಂಭಾಗದಲ್ಲಿ ಶಿವ–ಪಾರ್ವತಿ, ಎಡಬದಿಗೆ ವಿಷ್ಣು–ಲಕ್ಷ್ಮೀ ಮತ್ತು ಬಲಬದಿಗೆ ಬ್ರಹ್ಮ–ಸರಸ್ವತೀ ಶಿಲ್ಪಗಳಿವೆ. ಅದರಲ್ಲಿ ಎಡ–ಬಲಗಳ ಶಿಲ್ಪಗಳನ್ನು ಸಂಪೂರ್ಣವಾಗಿ ವೀಕ್ಷಿಸಲು ಸಾಧ್ಯವಾಗುವುದಿಲ್ಲ. ನಕ್ಷತ್ರಾಕಾರದ ಭಿತ್ತಿಯಾಗಿರುವುದರಿಂದ ಕೈಲಾಸಪರ್ವತದ ಬಲಬದಿಗೇ ತೀರಾ ಹತ್ತಿರದಲ್ಲಿಯೇ ಭಿತ್ತಿಯ ರಚನೆ ಮುಂದುವರೆದಿದ್ದು, ಆ ಜಾಗವನ್ನು ಇಕ್ಕಟ್ಟಾಗುವಂತೆ ಮಾಡಿದೆ. ಇಲ್ಲಿಯೂ ಸರಸ್ವತೀ ಬ್ರಹ್ಮನ ಎಡತೊಡೆಯ ಮೇಲೆ ಆಸೀನಳಾಗಿದ್ದಾಳೆ. ಬ್ರಹ್ಮನ ಬಲತೋಳಿನ ಅಕ್ಷಮಾಲೆಯನ್ನು ನೋಡಬಹುದು. ಆದರೆ ಇನ್ನುಳಿದ ಕೈಗಳಲ್ಲಿ ಏನಿದೆ ಎಂಬುದು ಕಾಣುವುದಿಲ್ಲ. ಸರಸ್ವತಿಯ ಒಂದು ಕೈ ಮಾತ್ರ ಕಾಣುತ್ತಿದ್ದು ಅದರಲ್ಲಿ ಫಲ ಅಥವಾ ಕಳಶದ ರೀತಿಯ ಕೆತ್ತನೆಯಿದೆ.

ಬಸರಾಳಿನ ಮಲ್ಲಿಕಾರ್ಜುನ ದೇವಾಲಯದ ಶಿಲ್ಪದಲ್ಲೂ ಸಹ ಬ್ರಹ್ಮನ ಎಡತೊಡೆಯ ಮೇಲೆ ಆಸೀನಳಾಗಿರುವ ದ್ವಿಭುಜ ಸರಸ್ವತಿಯ ಶಿಲ್ಪವಿದೆ. ಸರಸ್ವತಿಯ ಬಲಗೈ ಬ್ರಹ್ಮನ ಹಿಂಬದಿಯಲ್ಲಿದ್ದರೆ, ಎಡಗೈಯಲ್ಲಿ ಪುಸ್ತಕವಿದೆ. ಇದೇ ರೀತಿಯ ಎರಡು ಶಿಲ್ಪಗಳು ಅಮೃತಾಪುರದ ಅಮೃತೇಶ್ವರ ದೇವಾಲಯದ ಮುಖಮಂಟಪಗಳಲ್ಲಿರುವ ಭುವನೇಶ್ವರಿಗಳಲ್ಲಿವೆ. ಇವು ಉಬ್ಬು ಶಿಲ್ಪಗಳಾಗಿದ್ದು

ಅಸ್ಪಷ್ಟವಾಗಿವೆ. ಆದರೆ ಬ್ರಹ್ಮನ ಗಡ್ಡಧಾರಿ ಚತುರ್ಮುಖ ಮತ್ತು ಸರಸ್ವತೀ ಶಿಲ್ಪದ ಎಡಹಸ್ತದಲ್ಲಿರುವ ಪುಸ್ತಕವನ್ನು ಗುರುತಿಸಬಹುದಾಗಿದೆ.

ಇದುವರೆಗೆ ನಾವು ಗಮನಿಸಿದ ಸುಮಾರು ಇನ್ನೂರೈವತ್ತಕ್ಕೂ ಹೆಚ್ಚು ಶಿಲ್ಪಗಳನ್ನು ಇಡಿಯಾಗಿ ಅವಲೋಕಿಸಿದಾಗ ಮುಂದೆ ಹೇಳಿರುವ ಅಂಶಗಳು ಎದ್ದು ಕಾಣುತ್ತವೆ. ಕರ್ನಾಟಕದಲ್ಲಿ ಪೂರ್ಣರೂಪದ ಬೌದ್ಧ ದೇವಾಲಯಗಳಾಗಲೀ ಸರಸ್ವತೀ ಶಿಲ್ಪಗಳಾಗಲೀ ದೊರೆತಿಲ್ಲ. ಬೌದ್ಧಾಲಯಗಳ ಅವಶೇಷಗಳು ಗುಲ್ಬರ್ಗಾ ಜಿಲ್ಲೆಯ ಸನ್ನತಿ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಜಘಟ್ಟ ಮುಂತಾದ ಕಡೆ ಕಂಡುಬಂದರೂ ಸರಸ್ವತೀ ಶಿಲ್ಪಗಳು ವರದಿಯಾಗಿಲ್ಲ. ಜೈನಬಸದಿಗಳಲ್ಲಿ ಸಿಗುವ ಸರಸ್ವತಿಶಿಲ್ಪಗಳ ಲಕ್ಷಣಗಳೇ ಶಿವ ಅಥವಾ ಕೇಶವ ದೇವಾಲಯಗಳಲ್ಲಿನ ಸರಸ್ವತಿಶಿಲ್ಪಗಳಲ್ಲೂ ಕಾಣುತ್ತವೆ. ತಾಂತ್ರಿಕಸರಸ್ವತಿಯ ಶಿಲ್ಪಗಳು ದೊರೆಯುವುದಿಲ್ಲವಾದರೂ, ದುರ್ಗಿಯೇ ಪುಸ್ತಕವನ್ನು ಹಿಡಿದು ಸರಸ್ವತಿಯಾಗಿ ನಿಂತಿರುವುದನ್ನು ಕಾಣಬಹುದು. ಶಿಲ್ಪಿಗಳು ಸರಸ್ವತಿಯನ್ನು ಬ್ರಹ್ಮನ ರಾಣಿಯೆಂದೇ ಚಿತ್ರಿಸಿದ್ದಾರೆ. ಆಕೆ ಬ್ರಹ್ಮನ ಮಗಳೆಂಬ ಕಲ್ಪನೆ ಶಿಲ್ಪಗಳಲ್ಲಿ ಎಲ್ಲಿಯೂ ಬಿಂಬಿತವಾಗಿಲ್ಲ. ಪರಮಜಿನೇಂದ್ರವಾಣಿಯೇ ಸರಸ್ವತೀ ಆಗಿದ್ದರೂ, ಜೈನಧರ್ಮೀಯರೂ ಸಹ ಸರಸ್ವತೀ ಶಿಲ್ಪಗಳನ್ನು ನಿರ್ಮಿಸಿದ್ದಾರೆ; ಪೂಜಿಸಿದ್ದಾರೆ. ಸರಸ್ವತೀ ಶಿಲ್ಪಗಳಿಗೆ ನಿರ್ದಿಷ್ಟವಾದ ಶಿಲ್ಪಲಕ್ಷಣಗಳಿದ್ದರೂ ಸಾಹಿತ್ಯಕ ಆಧಾರಗಳಿದ್ದಾಗ್ಯೂ, ಕರ್ನಾಟಕದ ಶಿಲ್ಪಾಚಾರ್ಯರು ಸ್ವತಂತ್ರವಹಿಸಿ ಹತ್ತು ಹಲವಾರು ಸ್ವರೂಪಗಳಲ್ಲಿ ಸರಸ್ವತೀ ಶಿಲ್ಪಗಳನ್ನು ನಿರ್ಮಿಸಿದ್ದಾರೆ. ಶಾಸ್ತ್ರೀಯ ಲಕ್ಷಣಗಳಿಗೆ ಅನುಗುಣವಾಗಿ ನಿರ್ಮಿತವಾದ ಶಿಲ್ಪಗಳು ಪೂಜೆಗೆ ಬಳಸಲ್ಪಡುತ್ತಿದ್ದ ಶಿಲ್ಪಗಳು ಮಾತ್ರ. ಈ ಲಕ್ಷಣಗಳನ್ನು ಅಲಂಕಾರಕ್ಕಾಗಿ ನಿರ್ಮಾಣವಾಗಿರುವ ಭಿತ್ತಿಶಿಲ್ಪಗಳಿಗೆ ಅನ್ವಯಿಸುವುದು ಬಹಳ ಕಷ್ಟ. ಭಿತ್ತಿಶಿಲ್ಪಗಳ ರಚನೆಯಲ್ಲಿ ಶಿಲ್ಪಿಗಳಿಗೆ ಹೆಚ್ಚು ಸ್ವಾತಂತ್ರ್ಯವಿದ್ದುದ್ದು ಇದಕ್ಕೆ ಕಾರಣ. ಸರಸ್ವತಿಗೆ ಬೇರೆ ಬೇರೆ ಸ್ವರೂಪಗಳು, ಬ್ರಹ್ಮನ ಪತ್ನಿ ಮತ್ತು ಮಗಳು ಎಂಬ ಪರಿಕಲ್ಪನೆಗಳು ಇದ್ದಾಗ್ಯೂ, ಆಕೆ ವಿದ್ಯಾದೇವತೆಯೆಂಬ ಭಾವನೆ ಮಾತ್ರ ಸಾರ್ವತ್ರಿಕವಾದದ್ದು, ಸಾರ್ವಕಾಲಿಕವಾದದ್ದು.

ಅಧ್ಯಾಯ 7 ಚಿತ್ರಕಲೆಯಲ್ಲಿ ಸರಸ್ವತೀ

7.1. ಮೈಸೂರು ಶೈಲಿ

7.2. ತಂಜಾವೂರು ಶೈಲಿ

7.3. ರಾಜಾ ರವಿವರ್ಮ

7.4. ಆಧುನಿಕ ಕಾಲ

7.5. ಜನಪ್ರಿಯ ಚಿತ್ರಗಳು

ಅಧ್ಯಾಯ 7

ಚಿತ್ರಕಲೆಯಲ್ಲಿ ಸರಸ್ವತೀ

ಮಾನವನು ತನ್ನ ಭಾವನೆಗಳನ್ನು ಅಭಿವ್ಯಕ್ತಿಸುವುದಕ್ಕೆ ಕಂಡುಕೊಂಡ ಹಲವಾರು ಮಾರ್ಗಗಳಲ್ಲಿ ಚಿತ್ರಕಲೆಯೂ ಒಂದು. ಲಿಪಿ ಕೂಡಾ ಮೊದಲಿಗೆ ಚಿತ್ರರೂಪದಲ್ಲಿಯೇ ಇತ್ತು. ರೇಖಾಚಿತ್ರಗಳು ಮತ್ತು ಚಿತ್ರಲಿಪಿಗಳೇ ಪ್ರಪಂಚದ ಅತ್ಯಂತ ಪ್ರಾಚೀನ ಮಾನವಾಭಿವ್ಯಕ್ತಿಯ ದಾಖಲೆಗಳೆನ್ನಬಹುದು. ಸುಮಾರು ಐವತ್ತು ಸಾವಿರ ವರ್ಷಗಳಷ್ಟು ಹಳೆಯದಾದ ರೇಖಾಚಿತ್ರಗಳು ಜಗತ್ತಿನ ನಾನಾಕಡೆ ಲಭ್ಯವಾಗಿವೆ. ಪ್ರಪಂಚದ ಅತ್ಯಂತ ಪ್ರಾಚೀನ ರೇಖಾಚಿತ್ರಗಳು ಯುರೋಪ್ ಮತ್ತು ಆಫ್ರಿಕಾ ಖಂಡಗಳಿಂದ ವರದಿಯಾಗಿವೆ. ವಿಶ್ವದ ಎಲ್ಲಾ ಪ್ರಾಚೀನ ನಾಗರಿಕತೆಗಳಲ್ಲೂ ಚಿತ್ರಕಲೆಯಿರುವುದು ದೃಢಪಟ್ಟಿದೆ. ಮೆಸಪಟೋಮಿಯಾ, ನೈಲ್ ನಾಗರಿಕತೆ, ಸಿಂಧೂ, ಹರಪ್ಪಾ, ಮೊಹೆಂಜದಾರೋ ಮೊದಲಾದ ನಾಗರೀಕತೆಗಳಲ್ಲಿ ಚಿತ್ರಕಲೆ ಅಭಿವ್ಯಕ್ತಿಮಾರ್ಗವಾಗಿ ಬಳಕೆಯಾಗಿದೆ. ಈ ಎಲ್ಲಾ ನಾಗರೀಕತೆಗಳಿಗೆ ಸುಮಾರು ಕ್ರಿ.ಪೂ.4000 ವರ್ಷಗಳ ಪ್ರಾಚೀನತೆಯಿದೆ.

ಭಾರತದಲ್ಲೂ ಬೃಹತ್‌ಶಿಲಾಯುಗಕ್ಕೆ ಸೇರಿದ ರೇಖಾಚಿತ್ರಗಳು ಪತ್ತೆಯಾಗಿವೆ. ಆದರೆ, ಭಾರತದಲ್ಲಿ ಚಿತ್ರಕಲೆಯ ವ್ಯವಸ್ಥಿತ ಅಭಿವ್ಯಕ್ತಿಯು ಕ್ರಿ.ಪೂ.ಮೊದಲ ಸಹಸ್ರಮಾನದಲ್ಲಿ ಪ್ರಾರಂಭವಾಯಿತೆನ್ನಬಹುದು. ಅಜಂತಾದ ಗುಹೆಗಳಲ್ಲಿ ಭಾರತದ ಅತ್ಯಂತ ಪ್ರಾಚೀನ ಬಹುವರ್ಣಚಿತ್ರಗಳು ಲಭ್ಯವಾಗಿವೆ. ಕರ್ನಾಟಕದ ಮಧ್ಯಭಾಗದಲ್ಲಿ, ಅಂದರೆ ಈಗಿನ ಕೊಪ್ಪಳ ಜಿಲ್ಲೆಯಲ್ಲಿ ಬೃಹತ್‌ಶಿಲಾಯುಗದ ಕುರುಹುಗಳು ಪತ್ತೆಯಾಗಿವೆ. ಬೆಳಗಾಂ ಜಿಲ್ಲೆಯ ಸತ್ತಿ ಎಂಬ ಗ್ರಾಮದಲ್ಲಿ ಸಿಕ್ಕಿರುವ ಹೊಸಶಿಲಾಯುಗಕ್ಕೆ ಸೇರಿದ ಹಲವಾರು ಕುರುಹುಗಳು ಪತ್ತೆಯಾಗಿವೆ. ಆ ಕುರುಹುಗಳೊಂದರಲ್ಲಿ, ಕೊಕ್ಕರೆಯಂತಹ ಪಕ್ಷಿಯು ಮೀನನ್ನು ಹಿಡಿಯುತ್ತಿರುವ ಚಿತ್ರವಿದೆ. ಅದನ್ನು ಕರ್ನಾಟಕದ ಪ್ರಾಚೀನ ಚಿತ್ರಕಲೆಯ ಉಲ್ಲೇಖವೆಂದು ಪರಿಗಣಿಸಲಾಗಿದೆ.[1] ಅದರ ಕಾಲ ಸುಮಾರು ಕ್ರಿ.ಪೂ.2000. ಕರ್ನಾಟಕದಲ್ಲಿ ಚಿತ್ರಕಲೆಯ ವ್ಯವಸ್ಥಿತ ಅಭಿವ್ಯಕ್ತಿ ಕ್ರಿ.ಶ.ದ ನಂತರ ಪ್ರಾರಂಭವಾಯಿತೆನ್ನಬಹುದು. ಬಾದಾಮಿಯ ಗುಹಾಲಯಗಳಲ್ಲಿ ಸಿಗುವ ಚಿತ್ರಗಳೇ ಅತ್ಯಂತ ಪ್ರಾಚೀನವಾದವುಗಳು. ಅವುಗಳ ಕಾಲ ಸುಮಾರು ಕ್ರಿ.ಶ.ಆರನೆಯ ಶತಮಾನ. ಇವುಗಳ ನಂತರ ಕರ್ನಾಟಕದಲ್ಲಿ ಚಿತ್ರಕಲೆಗೆ ಸುಭದ್ರನೆಲೆ ದೊರೆಯಿತೆನ್ನಬಹುದು. ಸುಮಾರು ಕ್ರಿ.ಶ. 1120ಕ್ಕೆ ಸೇರಿದ ಮೂಡುಬಿದರೆಯ ಧವಳದ ತಾಳೆಗರಿ ಪ್ರತಿಗಳಲ್ಲಿ ಸಮೃದ್ಧವಾಗಿ ಚಿತ್ರಗಳ ರಚನೆಯಿರುವುದನ್ನು ನೋಡಬಹುದು. ಹತ್ತೊಂಬತ್ತನೇ ಶತಮಾನದ

---

1. Dr. Sivarama Karanth: Karnataka Paintings, P.14

ಆದಿಭಾಗದ ರಚನೆಯಾದ ಶ್ರೀತತ್ವನಿಧಿಯಲ್ಲಿ ಹಲವಾರು ದೇವತೆಗಳ ವರ್ಣಚಿತ್ರಗಳನ್ನು ಬಳಸಿಕೊಳ್ಳಲಾಗಿದೆ.

ಒಂದು ವ್ಯವಸ್ಥಿತ ಅಭಿವ್ಯಕ್ತಿ ಮಾಧ್ಯಮವಾಗಿ ಚಿತ್ರಕಲೆ ನೆಲೆಗೊಂಡ ಮೇಲೆ ಕರ್ನಾಟಕದಲ್ಲಿ ಹಲವಾರು ಶೈಲಿಗಳು ಜನಪ್ರಿಯವಾಗಿ ಇಂದಿಗೂ ಪ್ರಚಲಿತದಲ್ಲಿವೆ. ವಿಜಯನಗರದ ಕಾಲದ ದೇವಾಲಯಗಳಲ್ಲಿ ವರ್ಣಚಿತ್ರಗಳ ರಚನೆಯನ್ನು ಕಾಣಬಹುದು. ಹಂಪಿಯ ವಿರೂಪಾಕ್ಷ ದೇವಾಲಯದ ಮಂಟಪದಲ್ಲಿನ ಭಿತ್ತಿಚತ್ರದಲ್ಲಿ ಬ್ರಹ್ಮಸರಸ್ವತಿಯರ ಚಿತ್ರಗಳಿವೆ. ಸರಸ್ವತಿಯನ್ನು ಬ್ರಹ್ಮನ ತೊಡೆಯ ಮೇಲೆ ಕುಳಿತಿರುವಂತೆ ಚಿತ್ರಿಸಲಾಗಿದೆ. ಬ್ರಹ್ಮನು ತಾನು ಸೃಷ್ಟಿಸಿದ ಶತರೂಪಾಳನ್ನು ಮೋಹಿಸಿ ಐದು ತಲೆಗಳನ್ನು ಪಡೆದುಕೊಂಡು ಮತ್ತು ತನ್ನ ಅಹಂಕಾರದಿಂದಾಗಿ ಐದನೆಯ ತಲೆಯನ್ನು ಶಿವನು ಕಿತ್ತು ಹಾಕಿದ್ದರಿಂದ ಬ್ರಹ್ಮನು ಚತುರ್ಮುಖನಾಗಿ ಉಳಿಯಬೇಕಾಯಿತು ಎಂಬ ಮತ್ಸ್ಯಪುರಾಣದಲ್ಲಿ ಬರುವ ಕಥೆಯನ್ನು ಉಲ್ಲೇಖಿಸಿ ಬ್ರಹ್ಮ-ಶತರೂಪೆಯರ ಚಿತ್ರವೆಂದು ಅಭಿಪ್ರಾಯ ಪಡಲಾಗಿದೆ.[2] ಶತರೂಪೆ ಎಂಬುದು ಸರಸ್ವತಿಗಿರುವ ಇನ್ನೊಂದು ಹೆಸರು ಅಷ್ಟೆ.

ದಕ್ಷಿಣಭಾರತದಲ್ಲಿ ಜನಪ್ರಿಯವಾಗಿದ್ದ ವಿಜಯನಗರ ಶೈಲಿಯ (ಕ್ರಿ.ಶ. 1336-1665) ಮುಂದುವರೆದ ಭಾಗಗಳೇ ಮೈಸೂರು ಮತ್ತು ತಂಜಾವೂರು ಶೈಲಿಗಳು. ಈ ಶೈಲಿಗಳಲ್ಲೇ ಸರಸ್ವತಿಯ ಚಿತ್ರಪಟಗಳು ಹೆಚ್ಚಾಗಿ ನಿರ್ಮಾಣಗೊಂಡಿವೆ. ರಾಜಾರವಿವರ್ಮನಂತಹ ಧೀಮಂತ ಕಲಾವಿದ ತನ್ನದೇ ಆದ ಹೊಸ ಶೈಲಿಯನ್ನು ರೂಪಿಸಿಕೊಂಡು ವೈದಿಕ ದೇವತೆಗಳನ್ನು ಜನರ ಹತ್ತಿರಕ್ಕೆ ತರಲು ಕಾರಣವಾಗಿದ್ದಾನೆ. ರವಿವರ್ಮನು ಸರಸ್ವತಿಯ ತೈಲಚಿತ್ರವನ್ನು ರಚಿಸಿದ್ದಾನೆ. ಇವುಗಳನ್ನು ಬಿಟ್ಟರೆ, ಆಧುನಿಕ ಯುಗದಲ್ಲಿ ಕೆಲವು ಜನಪ್ರಿಯ ಶೈಲಿಯ ಚಿತ್ರಗಳು, ನವ್ಯಶೈಲಿಯ ಚಿತ್ರಗಳೂ ಕರ್ನಾಟಕದಲ್ಲಿ ಜನಪ್ರಿಯವಾಗಿವೆ. ಸರಸ್ವತಿಯ ಹಲವಾರು ಜನಪ್ರಿಯ ವರ್ಣಚಿತ್ರಗಳು ದೊರೆಯುತ್ತವೆ. ಆಧುನಿಕ ಯುಗದಲ್ಲಿ ಸರಸ್ವತಿಯು ವಿದ್ಯೆ, ಸಂಗೀತ ಮತ್ತು ಲಲಿತಕಲೆಗಳ ಅಧಿದೇವತೆ ಮಾತ್ರ. ಸರಸ್ವತಿಯ ಬೇರಾವ ಸ್ವರೂಪವೂ ಇವುಗಳಲ್ಲಿ ಅಭಿವ್ಯಕ್ತವಾಗಿಲ್ಲ. ಗಣಪತಿಯೂ ವಿದ್ಯಾದೇವತೆಯಾಗಿ ನೆಲೆಯೂರಿರುವುದರಿಂದ, ಸರಸ್ವತಿಯ ಜೊತೆಯಲ್ಲಿ ಗಣಪತಿಯು ಇರುವಂತೆ ಚಿತ್ರಿಸಿರುವ ಚಿತ್ರಗಳೂ ಪ್ರಚಲಿತದಲ್ಲಿವೆ. ಇವುಗಳೆಲ್ಲದರ ವೈಶಿಷ್ಟ್ಯವನ್ನು ಈ ಅಧ್ಯಾಯದಲ್ಲಿ ಗಮನಿಸಲಾಗಿದೆ.

7.1. ಮೈಸೂರು ಶೈಲಿ

ಕ್ರಿ.ಶ. ಹದಿನಾರನೇ ಶತಮಾನದಲ್ಲಿ ವಿಜಯನಗರದ ಅರಸರ ಮಾಂಡಲಿಕರಾಗಿ ಶ್ರೀರಂಗಪಟ್ಟಣದಿಂದ ರಾಜ ವಡೆಯರು ಆಳುತ್ತಿದ್ದರು. ವಿಜಯನಗರದಿಂದ ಮೈಸೂರಿಗೆ ಬಂದ

---

2. Saletore R.N.: Vijayanagara Art, P.220

ಹಲವಾರು ಚಿತ್ರಕಲಾವಿದರು, ಸ್ಥಳೀಯವಾಗಿ ದೊರೆಯುತ್ತಿದ್ದ ವಸ್ತುಗಳನ್ನು ಬಳಸಿ ಚಿತ್ರ ರಚನೆ ಮಾಡಿ ಮೈಸೂರು ಶೈಲಿಯ ಹುಟ್ಟಿಗೆ ಕಾರಣವಾದರು. ಅಳಿಲಿನ ಕೂದಲು ಮತ್ತು ರೇಷ್ಮೆದಾರಗಳನ್ನು ಬಳಸಿ ಮಾಡಿದ ಕುಂಚದಿಂದ ಚಿತ್ರಗಳನ್ನು ಬರೆಯಲಾಗುತ್ತಿತ್ತು. ಬಟ್ಟೆಯನ್ನು ಮರದ ತೆಳುವಾದ ಹಲಗೆಗೆ ಅಂಟಿಸಿ ಭಿತ್ತಿಯನ್ನು ಸಿದ್ಧಮಾಡಿಕೊಳ್ಳಲಾಗುತ್ತಿತ್ತು. ಸುಟ್ಟು ಕರಕಾಗಿಸಿದ ಅರಿಶಿನದ ಕೊನೆಗಳನ್ನು ಪೆನ್ಸಿಲ್ ರೂಪದಲ್ಲಿ ಬಳಸಲಾಗುತ್ತಿತ್ತು. ನಂತರ ಗೆಸ್ಸೊ ವರ್ಕ್ ಮಾಡಲಾಗುತ್ತಿತ್ತು. ಚಿನ್ನದ ಲೇಪನಕ್ಕಾಗಿ ಬಿಳಿಸೀಸ (White lead) ಮತ್ತು ಹಳದಿಯನ್ನು ಸುಣ್ಣದ ನೀರಿನೊಂದಿಗೆ ಬೆರೆಸಿ ಬಳಸಲಾಗುತ್ತಿತ್ತು. ಹೀಗೆ ರಚಿತವಾದ ಚಿತ್ರವನ್ನು ಚೆನ್ನಾಗಿ ಒಣಗಿಸಿ, ಪಾಲಿಷ್ ಮಾಡಿದರೆ ಕಲಾಕೃತಿ ಸಿದ್ಧವಾಗುತ್ತಿತ್ತು. ಅರಮನೆಗೆ ಸಂಬಂಧಿಸಿದ ಕೆಲವು ಚಿತ್ರಗಳಿಗೆ ಅಪ್ಪಟ ಚಿನ್ನದ ರೇಕುಗಳನ್ನೇ ಬಳಸಿರುವುದುಂಟು. ಈ ವಿಧಾನದಿಂದ ಮೈಸೂರು ಶೈಲಿಯಲ್ಲಿ ರಾಮಾಯಣ–ಮಹಾಭಾರತದ ಕಥೆಗಳು, ಪುರಾಣಕಥೆಗಳು, ಪುರಾಣೋಕ್ತ ದೇವತೆಗಳು, ಪ್ರಸಂಗಗಳು ಚಿತ್ರರೂಪ ತಳೆದಿವೆ. ಹೀಗೆ ರಚಿತವಾದ ಹಲವಾರು ಉನ್ನತವಾದ ಕಲಾಕೃತಿಗಳು –ಲಕ್ಷ್ಮಿ, ಸರಸ್ವತಿ, ವಿಶ್ವರೂಪದರ್ಶನ ಮೊದಲಾದ ಚಿತ್ರಗಳು ಮೈಸೂರು, ಬೆಂಗಳೂರು, ಶೃಂಗೇರಿ, ಶ್ರೀರಂಗಪಟ್ಟಣ ಮೊದಲಾದ ಕಡೆ ನೋಡಸಿಗುತ್ತವೆ. ಮುಮ್ಮಡಿ ಕೃಷ್ಣರಾಜ ಒಡೆಯರ 'ಶ್ರೀತತ್ವನಿಧಿ' ಗ್ರಂಥದಲ್ಲಿ ಬಳಕೆಯಾಗಿರುವ ಚಿತ್ರಗಳು ಮೈಸೂರು ಶೈಲಿಯಲ್ಲಿವೆ. ಮೈಸೂರು ಶೈಲಿಯ 'ಗಿರಿಜಾಕಲ್ಯಾಣ'ದ ಚಿತ್ರಪಟಗಳಲ್ಲಿ ವೀಣಾಸರಸ್ವತಿಯ ಚಿತ್ರವಿರುವುದನ್ನು ನೋಡಬಹುದು. ಗಿರಿಜಾಕಲ್ಯಾಣ ಸಂದರ್ಭದಲ್ಲಿ ಸರಸ್ವತಿಯು ಭಾಗವಹಿಸಿದ್ದಕ್ಕೂ ಸಾಕಷ್ಟು ಸಾಹಿತ್ಯಕ ನಿರೂಪಣೆಗಳಿವೆ. ಹರಿಹರನ 'ಗಿರಿಜಾಕಲ್ಯಾಣ'ದಲ್ಲಿ ಸರಸ್ವತಿಯು ಬ್ರಹ್ಮನೊಂದಿಗೆ ಹಂಸವನ್ನೇರಿ ಮದುವೆಗೆ ಬಂದ ಹಾಗೂ ಮದುವೆಮಂಟಪದಲ್ಲಿ ಲಕ್ಷ್ಮಿ, ಗಾಯಿತ್ರಿ, ಸಾವಿತ್ರಿ, ಶಚಿ, ರೋಹಿಣಿ ಮೊದಲಾದವರ ಜೊತೆ ನೃತ್ಯ ಮಾಡಿದ ಚಿತ್ರಣಗಳಿವೆ. ಹತ್ತೊಂಬತ್ತನೆಯ ಶತಮಾನಕ್ಕೆ ಸೇರಿದ, ಮೈಸೂರು ಜಿಲ್ಲೆಯ ಬೆಟ್ಟಹಳ್ಳಿಯ ಮಲ್ಲಿಕಾರ್ಜುನ ದೇವಾಲಯಲ್ಲಿರುವ ಚಿತ್ರಮಂಟಪದ ಗಿರಿಜಾಕಲ್ಯಾಣಕ್ಕೆ ಸಂಬಂಧಿಸಿದ ಚಿತ್ರಗಳಲ್ಲಿ ಸರಸ್ವತಿಯನ್ನು ಲಕ್ಷ್ಮಿ ಮತ್ತು ಮೇನಕೆಯರೊಡನೆ ಚಿತ್ರಿಸಲಾಗಿದೆ. ಇನ್ನೊಂದು ಸಾಲಿನಲ್ಲಿ ವೀಣೆಯನ್ನು ನುಡಿಸುತ್ತಿರುವ 'ವೀಣಾಸರಸ್ವತಿ'ಯ ಚಿತ್ರವಿದೆ. ಅದರ ಕೆಳಗೆ 'ತಂಬೂರಾ ಸರಸ್ವತೀ ಘಾನಾ'[3] ಎಂದು ಬರೆಯಲಾಗಿದೆ.

ಮೈಸೂರು ಶೈಲಿಯಲ್ಲಿ ಸರಸ್ವತಿಯನ್ನು ಚತುರ್ಭುಜ ಆಸೀನಮೂರ್ತಿಯಾಗಿ ಚಿತ್ರಿಸಲಾಗಿದೆ. ಆಕೆಯ ಎರಡು ಕೈಗಳಲ್ಲಿ ವೀಣೆಯನ್ನು ನುಡಿಸುತ್ತಿದ್ದರೆ, ಉಳಿದೆರಡು ಕೈಗಳಲ್ಲಿ ಅಕ್ಷಮಾಲೆ ಮತ್ತು ಪುಸ್ತಕಗಳನ್ನು ಹಿಡಿದಿದ್ದಾಳೆ. ಕೆಲವು ಚಿತ್ರಗಳಲ್ಲಿ ಅಕ್ಷಮಾಲೆ ಹಿಡಿದಿರುವ ಕೈಯಲ್ಲಿ ಲೇಖನಿ ಅಥವಾ

---

3. ಎ.ಕ.–5 ತಿ.ನರಸೀಪುರ 79; ಕ್ರಿ.ಶ. 19ನೇ ಶತಮಾನ

ಕಮಲ ಇರುತ್ತದೆ. ಇವುಗಳಾವೂ ಇಲ್ಲದೆ ಆ ಕೈ ಅಭಯಮುದ್ರೆಯಲ್ಲಿರುವಂತೆ ರಚಿತವಾಗಿರುವ ಸರಸ್ವತಿಯ ಚಿತ್ರಗಳೂ ಇವೆ. ಗೌರವವರ್ಣದ ದುಂಡಾದ ಮುಖ ಕಂಡೂಕಾಣದಂತಿರುವ ಮುಗುಳ್ನಗೆಯಿಂದ ಕೂಡಿರುತ್ತದೆ. ಎತ್ತರವಾದ ಕಿರೀಟವಿರುತ್ತದೆ. ಸರ್ವಾಭರಣಭೂಷಿತಳಾಗಿ ಲಲಿತಾಸನದಲ್ಲಿ ಕುಳಿತ ಸರಸ್ವತಿಯ ಒಂದು ಕಾಲು ಪುಟ್ಟದಾದ ಕಮಲದ ಮೇಲೆ ಇರುವಂತೆ ಚಿತ್ರಿತವಾಗಿರುತ್ತದೆ. ಅಗಲವಾದ ಅಂಚನ್ನುಳ್ಳ ಪೀತಾಂಬರವನ್ನು ಧರಿಸಿರುವಂತೆ ಹಾಗೂ ಸೀರೆಗಳ ಒಂದೊಂದು ನೆರಿಗೆಯೂ ಎದ್ದು ಕಾಣುವಂತೆ ತಿಳಿವರ್ಣವನ್ನು ಹಾಕಿರುತ್ತಾರೆ. ಕೈಬೆರಳಿನ ಉಂಗುರ, ಕಿವಿಯೋಲೆ, ಕಾಲುಂಗುರ, ಬಳೆ, ಕಾಲಂದಿಗೆ, ಕಡಗ, ತೋಳಬಂದಿ, ಹಾರ ಮೊದಲಾದ ಆಭರಣಗಳು ಸೂಕ್ಷ್ಮ ಕುಸುರಿಕೆಲಸದಿಂದ ಕೂಡಿರುತ್ತವೆ. ಆಭರಣಗಳನ್ನು ಚಿನ್ನದ ಬಣ್ಣದಿಂದ ಅಲಂಕರಿಸುತ್ತಾರೆ. ಕೆಲವೊಮ್ಮೆ ಗೆಸ್ಸೊವರ್ಕ್[4] ಮಾಡಿ ನಿಜವಾದ ಆಭರಣಗಳನ್ನೇ ತೊಡಿಸಿರುವಂತೆ ಮಾಡಲಾಗಿರುತ್ತದೆ. ಅರಮನೆಗೆ ಸಂಬಂಧಿಸಿದ ಕೆಲವು ಚಿತ್ರಗಳಿಗೆ ಅಪ್ಪಟ ಚಿನ್ನದ ರೇಕುಗಳನ್ನು ಬಳಸಿರುವುದುಂಟು. ನಮ್ಮ ಗಮನಕ್ಕೆ ಬಂದಿರುವ ಸರಸ್ವತಿಯ ಯಾವುದೇ ಕಲಾಕೃತಿಯಲ್ಲಿ ಹಂಸವಾಗಲೀ, ನವಿಲಾಗಲೀ ಚಿತ್ರಿತವಾಗಿಲ್ಲ. ಸರಸ್ವತಿಯ ಚಿತ್ರ ಒಂದು ಮಂಟಪದೊಳಗೆ ಕುಳಿತಿರುವಂತೆ ಸಂಯೋಜಿಸಲಾಗಿರುತ್ತದೆ. ಹಿಂಬದಿಯು ತಿಳಿನೀಲಿ ಅಥವಾ ತಿಳಿ ಹಸಿರುಬಣ್ಣದಿಂದ ಕೂಡಿರುತ್ತದೆ. ಕಮಲದ ಮೇಲೆ ಕುಳಿತಿರುವಂತೆಯೂ ಸರಸ್ವತಿಯನ್ನು ಚಿತ್ರಿಸಿರುವುದುಂಟು. ಈ ಚಿತ್ರಗಳಲ್ಲಿ ಕಮಲದ ದಳಗಳ ರಚನೆಯನ್ನೇ ಅನುಸರಿಸಿ ಸೀರೆಯ ನೆರಿಗೆಗಳು ಚಿತ್ರಿತವಾಗಿರುತ್ತವೆ. ಹೆಗಲ ಮೇಲಿಂದ ಕೆಳಗಿನವರೆಗೂ ಇರುವ ಉದ್ದವಾದ ಉತ್ತರೀಯ ಒಂದು ಚಿತ್ರದಲ್ಲಿ ಕಾಣುತ್ತದೆ. ಮುಂಭಾಗದಲ್ಲಿ ಪೂಜಾಸಾಮಗ್ರಿಗಳನ್ನು ಆಲಂಕಾರಿಕವಾಗಿ ಚಿತ್ರಿಸಲಾಗಿರುತ್ತದೆ. ಮೈಸೂರು ಶೈಲಿಯ ಸರಸ್ವತಿಯ ಕಲಾಕೃತಿಗಳು ತಮ್ಮ ಸೌಂದರ್ಯ ಹಾಗೂ ಒಟ್ಟಾರೆ ವರ್ಣಸಂಯೋಜನೆಯಿಂದಾಗಿ ನಮ್ಮ ಗಮನ ಗಮನಸೆಳೆಯುತ್ತವೆ.

7.2. ತಂಜಾವೂರು ಶೈಲಿ

ದಕ್ಷಿಣಭಾರತದಲ್ಲಿ ಪ್ರಸಿದ್ಧವಾಗಿರುವ ತಂಜಾವೂರು ಶೈಲಿಯ ಚಿತ್ರಗಳು ಅವುಗಳ ಗಾಢವರ್ಣಸಂಯೋಜನೆ ಮತ್ತು ಸೌಂದರ್ಯದಿಂದಾಗಿ ಗಮನಸೆಳೆಯುತ್ತವೆ. ಮೈಸೂರು ಶೈಲಿಯಂತೆ ಈ ಶೈಲಿಯಲ್ಲೂ ಮಹಾಭಾರತ-ರಾಮಾಯಣ, ಪುರಾಣಗಳ ಕಥೆಗಳು, ದೇವಾನುದೇವತೆಗಳು, ರಾಜ-ಮಹಾರಾಜರು ಮುಂತಾದವರ ಚಿತ್ರಗಳು ರಚಿತವಾಗಿವೆ.

---

4. ಆಭರಣಗಳನ್ನು ಚಿತ್ರಿಸುವುದರ ಬದಲಿಗೆ, ಚಿನ್ನದಾಭರಣಗಳಂತೆಯೇ ಕಾಣುವ ಕೃತಕ ಆಭರಣಗಳನ್ನು ಬಳಸಿ ಅಲಂಕರಿಸುವುದು.

ಮರದ ಹಲಗೆಗೆ ಬಟ್ಟೆಯನ್ನು ಅಂಟಿಸಿ ಭಿತ್ತಿಯನ್ನು ತಯಾರಿಸಿಕೊಳ್ಳಲಾಗುತ್ತದೆ. ಸಾಮಾನ್ಯವಾಗಿ ಹಿನ್ನೆಲೆ ಕೆಂಪು ಮತ್ತು ನೀಲಿಬಣ್ಣದಿಂದ ಕೂಡಿರುತ್ತದೆ. ಮೊದಲು ರೇಖಾಚಿತ್ರ ಬಿಡಿಸಿಕೊಂಡು ನಂತರ ಅದಕ್ಕೆ ವರ್ಣಸಂಯೋಜನೆ ಮಾಡಲಾಗುತ್ತದೆ. ಹೊಂಬಣ್ಣದ ಲೇಪನಕ್ಕಾಗಿ ಸುಣ್ಣದ ಪುಡಿ ಮತ್ತು ಕೆಲವು ದಾನ್ಯದ ಹಿಟ್ಟಿನ ಮಿಶ್ರಣವನ್ನು ಬಳಸಲಾಗುತ್ತದೆ. ಬಣ್ಣ ಮಾತ್ರವಲ್ಲದೆ, ಆಭರಣಗಳಿಗಾಗಿ ಚಿನ್ನದ ಲೇಪನ ಮಾಡಿದ ಬೆಳ್ಳಿಯ ಆಭರಣಗಳು, ಹೊಳಪಿನ ಕಲ್ಲುಗಳು, ಗಾಜು-ಕನ್ನಡಿಯ ಚೂರುಗಳನ್ನು ಕಲಾತ್ಮಕವಾಗಿ ಬಳಸಲಾಗುತ್ತದೆ.

ತಂಜಾವೂರು ಶೈಲಿಯ ಸರಸ್ವತಿಯ ಚಿತ್ರಗಳು ನಾಲ್ಕು ಕೈಗಳನ್ನುಳ್ಳ ಆಸೀನಮೂರ್ತಿಯಾಗಿರುತ್ತವೆ. ಉನ್ನತವಾದ ಪೀಠದ ಮೇಲೆ, ದಿಂಬನ್ನು ಒರಗಿರುವಂತೆ, ಪದ್ಮಾಸೀನಳಾಗಿ ಎರಡು ಕೈಗಳಲ್ಲಿ ವೀಣೆಯನ್ನು ನುಡಿಸುತ್ತಿರುವಂತೆ ಚಿತ್ರವಿದ್ದರೆ, ಕೆಲವು ಚಿತ್ರಗಳಲ್ಲಿ ಲಲಿತಾಸನದಲ್ಲಿ ಕುಳಿತಿರುವಂತೆ ಚಿತ್ರಿಸಲಾಗಿರುತ್ತದೆ. ಆದರೆ ಮೈಸೂರು ಶೈಲಿಯ ಚಿತ್ರಗಳಲ್ಲಿರುವಂತೆ ಒಂದು ಕಾಲನ್ನು ಪದ್ಮಪೀಠದ ಮೇಲೆ ಇಟ್ಟಿರುವುದಿಲ್ಲ. ಬಹುತೇಕ ವೀಣೆ ನುಡಿಸುತ್ತಿರುವ ಕಲಾವಿದರನ್ನೇ ಹೋಲುವ ಭಂಗಿಯಲ್ಲಿ ಸರಸ್ವತಿಯು ಆಸೀನಳಾಗಿರುವ ಚಿತ್ರಗಳೂ ಇವೆ. ಉಳಿದೆರಡು ಕೈಗಳಲ್ಲಿ ಅಕ್ಷಮಾಲೆ ಮತ್ತು ಪುಸ್ತಕಗಳಿರುತ್ತವೆ. ಶ್ವೇತವರ್ಣದವಳಾದ ಸರಸ್ವತಿಗೆ ಹೊಂಬಣ್ಣದ ಸೀರೆಯಿರುತ್ತದೆ. ಅದಕ್ಕೆ ವಿರುದ್ಧವಾದ ಬಣ್ಣದ ಮೇಲುಡುಗೆ ಮತ್ತು ಗೆಸ್ಸೋ ವರ್ಕ್‌ನಿಂದ ಕೂಡಿದ ಮೇಲುಹೊದಿಕೆ ಇರುತ್ತದೆ. ಗೆಸ್ಸೋವರ್ಕ್ ಮಾಡಿದ ಉತ್ತರೀಯವೂ ಕೆಲವು ಚಿತ್ರಗಳಲ್ಲಿ ಕಾಣುತ್ತದೆ. ಹೊಂಬಣ್ಣದ ಮಂಟಪದ ಮಧ್ಯೆ ಸರಸ್ವತಿಯು ಕುಳಿತಿರುವಂತೆ ಚಿತ್ರ ಸಂಯೋಜನೆಗೊಂಡಿರುತ್ತದೆ. ಕೆಲವು ಕೃತಿಗಳಲ್ಲಿ ಹಂಸ ಮತ್ತು ಕೆಲವು ಕೃತಿಗಳಲ್ಲಿ ನವಿಲು ಪೀಠದ ಬಳಿಯಲ್ಲಿ ಇರುತ್ತದೆ. ಎರಡು ಹಂಸಗಳು ಇರುವ ಚಿತ್ರಗಳೂ ಇವೆ.

7.3. ರಾಜಾ ರವಿವರ್ಮ

ರಾಜಾ ರವಿವರ್ಮ ಭಾರತೀಯ ಚಿತ್ರಕಲಾ ಕ್ಷೇತ್ರದಲ್ಲಿ ಏಕಾಂಗ ಸಾಧಕ. ಯಾವುದೋ ಲೋಕದವರಂತಿದ್ದ ದೇವಾನುದೇವತೆಗಳಿಗೆ ಸಾಮಾನ್ಯ ಜನರ ರೂಪವನ್ನು ಧಾರಣ ಮಾಡಿದವನು ಮತ್ತು ಮಂಟಪಗಳಲ್ಲಿ ಬಂದಿಯಾಗಿದ್ದ ದೇವತೆಗಳನ್ನು ಪ್ರಕೃತಿಯ ಮಡಿಲಿಗೆ ತಂದವನೇ ರವಿವರ್ಮ. ಭಾರತೀಯ ಸ್ತ್ರೀಯರ ಸೌಂದರ್ಯವನ್ನು ಅಮರಗೊಳಿಸಿದ ಅಪೂರ್ವ ಕಲಾವಿದ. 'ಭಾರತೀಯ ಸ್ತ್ರೀ' ಪರಿಕಲ್ಪನೆಯಲ್ಲಿ ಕೆಂಪು ಕುಂಕುಮ ಮತ್ತು ಸೀರೆಗೆ ಅತ್ಯುನ್ನತವಾದ ಸ್ಥಾನವಿದೆ. ಆ ಹಿನ್ನೆಲೆಯಲ್ಲಿ ಭಾರತೀಯ ಸ್ತ್ರೀಯನ್ನು ಚಿತ್ರಸುವಲ್ಲಿ 'red dot and the sari' ಎಂಬ ನೂತನ ಪರಿಕಲ್ಪನೆಗೆ ರವಿವರ್ಮ

ಕಾರಣಕರ್ತನಾಗಿದ್ದಾನೆ. ರವಿವರ್ಮನ ಅನನ್ಯತೆಗೆ ಆತನ ನೂರಾರು ಕಲಾಕೃತಿಗಳು ಮತ್ತು ಅವುಗಳ ಕೋಟ್ಯಂತರ ಪ್ರತಿಗಳು ವಿಶ್ವದಾದ್ಯಂತ ಮನೆಗಳನ್ನು ಅಲಂಕರಿಸಿರುವುದೇ ಸಾಕ್ಷಿಯಾಗಿದೆ.

ರವಿವರ್ಮ ರಚಿಸಿರುವ ಸರಸ್ವತಿಯ ತೈಲಚಿತ್ರದ ಭಿತ್ತಿಯ ಹಿನ್ನೆಲೆ ಪ್ರಕೃತಿಯೇ ಆಗಿದೆ. ಬೆಟ್ಟ, ಕಾಡು, ಹೊಳೆ, ಹೊಳೆಯ ದಡದಲ್ಲಿನ ಹಸಿರು ಎಲ್ಲವೂ ನೈಜವಾಗಿ ಚಿತ್ರಿತವಾಗಿವೆ. ಹೊಳೆಯ ದಡದಲ್ಲಿರುವ ಒಂದು ಕಲ್ಲಿನ ಮೇಲೆ ವೀಣೆಯನ್ನು ಅಭ್ಯಾಸ ಮಾಡುತ್ತಿರುವ ಸರಸ್ವತಿಯ ಚಿತ್ರದಲ್ಲಿ ಸ್ನಿಗ್ಧಸೌಂದರ್ಯ ಒಡೆದು ಮೂಡಿದೆ. ಎಡಗಾಲಿನ ಮೇಲೆ ಬಲಗಾಲನ್ನು ಹಾಕಿ ಕುಳಿತಿರುವ ಸರಸ್ವತಿಗೆ ನಾಲ್ಕು ಕೈಗಳಿವೆ. ಎರಡರಲ್ಲಿ ವೀಣೆಯನ್ನು ನುಡಿಸುತ್ತಿದ್ದರೆ, ಬಲಗೈಯಲ್ಲಿ ಅಕ್ಷಮಾಲೆ ಹಾಗೂ ಎಡಗೈಯಲ್ಲಿ ಪುಸ್ತಕ ಇದೆ. ಸರಸ್ವತಿಯ ಸುತ್ತಲೂ ಅಲ್ಲಲ್ಲಿ ಹೂವುಗಳು ಚೆದುರಿ ಬಿದ್ದಿವೆ. ಮುಖ ತಿರುಗಿಸಿ ಸರಸ್ವತಿಯನ್ನೇ ನೋಡುತ್ತಾ ನಿಂತಿರುವಂತೆ ನವಿಲನ್ನು ಚಿತ್ರಿಸಲಾಗಿದೆ. ಶುಭ್ರವರ್ಣದ, ತುಸುಕೋಲುಮುಖದ ಸರಸ್ವತಿಗೆ ಅಷ್ಟೇನು ಎತ್ತರವಲ್ಲದ ಕಿರೀಟವಿದೆ. ತಲೆಗೂದಲು ಸುರುಳಿಸುರುಳಿಯಾಗಿ ಬೆನ್ನಿನ ಮೇಲೆಲ್ಲಾ ಹರಡಿದೆ. ಶ್ವೇತವರ್ಣದ ರೇಶ್ಮೆ ಸೀರೆ ಮತ್ತು ಕೆಂಪು ಬಣ್ಣದ ರವಿಕೆಯ ಉಡುಗೆಯಿದೆ. ಸೀರೆಯ ಅಂಚು ಹೊಂಬಣ್ಣದ ಜರಿಯದ್ದಾಗಿದೆ. ಕೆಂಪುಬಣ್ಣದ ರವಿಕೆಯ ತೋಳಿನ ಅಂಚು ಸೀರೆಯ ಅಂಚಿನಂತೆ ಹೊಂಬಣ್ಣದ ಜರಿಯಿಂದ ಕೂಡಿ, ತೋಳಬಂದಿಯಂತೆ ಕಾಣುತ್ತದೆ. ಕಾಲಿನಲ್ಲಿ ಕಾಲುಂಗುರವಾಗಲೀ ಕಾಲಂದಿಗೆಯಾಗಲೀ ಇಲ್ಲ. ನಾಲ್ಕೂ ಕೈಗಳಲ್ಲಿ ಕಪ್ಪು-ಬಿಳಿ ಮಣಿಗಳಿಂದ ಆಲಂಕೃತವಾಗಿರುವ ಮೂರು ಮೂರು ಬಳೆಗಳಿವೆ. ವೀಣೆ ನುಡಿಸುತ್ತಿರುವ ಎಡಗೈನ ಕಿರುಬೆರಳು ಮತ್ತು ಉಂಗುರದ ಬೆರಳಿನಲ್ಲಿ ಉಂಗುರಗಳಿವೆ. ಇನ್ನುಳಿದ ಮೂರೂ ಕೈಗಳ ಕಿರುಬೆರಳಿನಲ್ಲಿ ಮಾತ್ರ ಉಂಗುರಗಳಿವೆ. ಕೊರಳಿನಲ್ಲಿ ಬಳೆಗಳಿಗೆ ಹೊಂದಿಕೆಯಾಗುವಂತಹ ಸರಗಳಿವೆ. ಕಿವಿಯಲ್ಲಿ ಮೂರುಬಗೆಯ ಓಲೆಗಳಿವೆ. ಹಣೆಯಲ್ಲಿ ಸರಸ್ವತಿಯು ತೊಟ್ಟಿರುವ ರವಿಕೆಯ ಬಣ್ಣಕ್ಕೆ ಹೊಂದುವಂತಹ ದುಂಡಾದ ಕುಂಕುಮದ ಬೊಟ್ಟಿದೆ.

7.4. ಆಧುನಿಕ ಕಾಲ

ಆಧುನಿಕ ಯುಗದಲ್ಲಿ ಸರಸ್ವತಿಯನ್ನು ವಿದ್ಯಾದೇವತೆಯನ್ನಾಗಿ ಮಾತ್ರ ಚಿತ್ರಿಸುವ ಸಂಪ್ರದಾಯ ಬೆಳೆದಿದೆ. ಆದರೆ ಆಧುನಿಕ ಯುಗದಲ್ಲಿ ನವ್ಯವೆನ್ನಬಹುದಾದ ಕೆಲವು ಸರಸ್ವತಿಯ ಕಲಾಕೃತಿಗಳೂ ರಚನೆಯಾಗಿವೆ. ಇಲ್ಲಿ ರೇಖೆಗಳಿಗಷ್ಟೇ ಪ್ರಾಧಾನ್ಯ. ರುದ್ರಕುಮಾರ್ ಝಾ ಎನ್ನುವವರ ಸರಸ್ವತಿಯ ಚಿತ್ರದಲ್ಲಿ, ಸರಸ್ವತಿಯನ್ನು ರುದ್ರನಂತೆ ಚಿತ್ರಿಸಿರುವುದನ್ನು ನೋಡಬಹುದು. ಶಿವನಂತೆಯೇ ಜಟಾಜೂಟ, ಹಾವಿನಂತೆ ಕಾಣುವ ಉತ್ತರೀಯ, ಹಾವಿನಹೆಡೆಯಂತೆ ಕಾಣುವ ರುದ್ರವೀಣೆಯ ಮೇಲ್ಭಾಗ, ಮುಖದಲ್ಲಿರುವ ಗಡಸುತನ ಇವೆಲ್ಲವೂ ಸರಸ್ವತಿಗೆ ಪುರಾಣಗಳಲ್ಲಿ ವ್ಯಕ್ತವಾಗಿರುವ 'ರುದ್ರಸುತಾ' ಎಂಬ

ಪರಿಕಲ್ಪನೆಯನ್ನು ಬಿಂಬಿಸುತ್ತವೆ. ನೇಪಾಳದ ಚಿತ್ರಗಳಲ್ಲಿ ಹಂಸದ ಮೇಲೆ ಕುಳಿತು ಹಾರಿಹೋಗುತ್ತಿರುವಂತೆ ಸರಸ್ವತಿಯನ್ನು ಚಿತ್ರಿಸಿರುವುದನ್ನು ಕಾಣಬಹುದು. ಹಂಸದ ರೆಕ್ಕೆ, ಕತ್ತು, ಸರಸ್ವತಿಯ ಉಡುಗೆತೊಡುಗೆಗಳು, ಜಟಾಜೂಟ ಇವೆಲ್ಲವೂ ಹಾರುವ ವೇಗಕ್ಕೆ ಗಾಳಿಯಲ್ಲಿ ತೇಲಾಡುತ್ತಿರುವಂತೆ ಕಾಣುತ್ತವೆ. ಮೊದಲ ನೋಟಕ್ಕೆ ಈ ಚಿತ್ರಗಳು ಶಿವನನ್ನೇ ಹೋಲುತ್ತವೆ. ಬಹುಶಃ ನೇಪಾಳದ ಈ ಮಾದರಿಯ ಚಿತ್ರಗಳೇ ರುದ್ರಕುಮಾರ ಝಾ ಅವರಿಗೆ ಸ್ಫೂರ್ತಿಯಾಗಿರಬಹುದು.

ಸರಸ್ವತಿಯ ವಿಷಯ ಬಂದಾಗ ಗಮನಿಸಲೇಬೇಕಾದ ಇನ್ನೊಬ್ಬ ಕಲಾವಿದರೆಂದರೆ ಎಂ.ಎಫ್.ಹುಸೇನ್. ಕೆಲವೇ ಕೆಲವು ರೇಖೆಗಳನ್ನು ಬಳಸಿ, ಸರಸ್ವತಿಯನ್ನು ವಿದ್ಯಾದೇವತೆಯನ್ನಾಗಿಯೂ, ನದಿದೇವತೆಯನ್ನಾಗಿಯೂ ಬಿಂಬಿಸುವಲ್ಲಿ ಹುಸೇನರ ಚಿತ್ರ ಯಶಸ್ವಿಯಾಗಿದೆ. ಹರಿಯುತ್ತಿರುವ ನೀರು, ನೀರಿನಲ್ಲಿರುವ ಮೀನು, ಕಮಲ ಇವೆಲ್ಲವೂ ನದಿದೇವತೆ ಸರಸ್ವತಿಯನ್ನು ಬಿಂಬಿಸುತ್ತವೆ. ವೀಣೆ, ನವಿಲು ಮತ್ತು ಕಮಲಗಳು ವಿದ್ಯಾದೇವತೆ ಸರಸ್ವತಿಯನ್ನು ಬಿಂಬಿಸುತ್ತವೆ. ಆಧುನಿಕ ಚಿತ್ರಗಳಲ್ಲಿ ಇದೊಂದು ಅರ್ಥಪೂರ್ಣ ಅಭಿವ್ಯಕ್ತಿ. ಸರಸ್ವತಿಯನ್ನು ನಗ್ನಮೂರ್ತಿಯನ್ನಾಗಿ ಚಿತ್ರಿಸಿದ್ದು ವಿವಾದಕ್ಕೆ ಕಾರಣವಾಗಿತ್ತು. ಆದರೆ ದೇಶದಾದ್ಯಂತ ಸಿಗುವ ಸಾವಿರಾರು ಸರಸ್ವತಿಯ ಶಿಲ್ಪಗಳು ನಗ್ನಮೂರ್ತಿಗಳೇ ಆಗಿವೆ. ನೇಪಾಳದ ಶೈಲಿಯ ಚಿತ್ರಗಳಲ್ಲೂ ಸರಸ್ವತಿಯನ್ನು ನಗ್ನವಾಗಿಯೇ ಚಿತ್ರಿಸಿರುವುದನ್ನು ನೋಡಬಹುದು. ಹುಸೇನರ ಸಮಕಾಲೀನರಾದದ ರುದ್ರಕುಮಾರ್ ಝಾ ಅವರ ಸರಸ್ವತಿಯ ಚಿತ್ರವೂ ನಗ್ನಮೂರ್ತಿಯದ್ದೇ ಆಗಿದೆ ಎಂಬುದಿಲ್ಲಿ ಗಮನಾರ್ಹ.

ಆಧುನಿಕ ಚಿತ್ರಕಲೆಯಲ್ಲಿ ಸರಸ್ವತಿಗೆ ಸಂಬಂಧಿಸಿದ ವಸ್ತುಗಳಿಗೇ ಹೆಚ್ಚಿನ ಆದ್ಯತೆ. ಹಲವಾರು ಕಲಾವಿದರ ಕೃತಿಗಳಲ್ಲಿ ವೀಣೆ, ಪುಸ್ತಕ, ಹಂಸ ಅಥವಾ ನವಿಲು ಪ್ರಧಾನವಾಗಿ ಚಿತ್ರಿತವಾಗಿರುತ್ತವೆ. ಅಲ್ಲಿ ಸರಸ್ವತಿಯು ಒಬ್ಬ ಸ್ತ್ರೀ ಮಾತ್ರ. ವೀಣೆ, ಹಂಸ. ಕಮಲ ಮೊದಲಾದವುಗಳಿಲ್ಲದಿದ್ದರೆ ಆ ಚಿತ್ರವನ್ನು 'ಸರಸ್ವತಿಯ ಚಿತ್ರ' ಎಂದು ಹಣೆಪಟ್ಟಿ ಹಚ್ಚಿ ಗುರುತಿಸಬೇಕಾಗುತ್ತದೆ.

7.5. ಜನಪ್ರಿಯ ಚಿತ್ರಗಳು

ಆಧುನಿಕ ಯುಗದಲ್ಲಿ ವಾಣಿಜ್ಯ ಉದ್ದೇಶಗಳಿಗಾಗಿ ಸಾವಿರಾರು ಸರಸ್ವತಿಯ ಚಿತ್ರಗಳು ರಚಿತವಾಗಿವೆ. ಜಾಹಿರಾತುಗಳ ಕ್ಯಾಲೆಂಡರುಗಳಲ್ಲಿ ಇವುಗಳ ಬಳಕೆ ಹೆಚ್ಚು. ಸಾವಿರಾರು ಮನೆಗಳಲ್ಲಿರುವ ಸರಸ್ವತಿಯ ಫೋಟೋ(Photo)ಗಳಲ್ಲಿ ಈ ಜನಪ್ರಿಯ ಆವೃತ್ತಿಯ ರಚನೆಗಳೇ ಹೆಚ್ಚು. ಅಂತಹ ಕೆಲವು ಚಿತ್ರಗಳನ್ನು ಸ್ಥೂಲವಾಗಿ ಗಮನಿಸಲಾಗಿದೆ. ಏಕೆಂದರೆ ಈ ಬಗೆಯ ಚಿತ್ರಗಳಲ್ಲಿ ಒಟ್ಟಾರೆ ಅಭಿವ್ಯಕ್ತಿಯಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ. ಚತುರ್ಭುಜಗಳು, ಎರಡು ಕೈಯಲ್ಲಿ ವೀಣೆ, ಉಳಿದೆರಡು ಕೈಗಳಲ್ಲಿ ಅಕ್ಷಮಾಲೆ ಮತ್ತು ಪುಸ್ತಕ, ನವಿಲು ಇಲ್ಲವೆ ಹಂಸ ವಾಹನ ಇವಿಷ್ಟೂ ಬಹುತೇಕ ಸರಸ್ವತಿಯ ಚಿತ್ರಗಳಲ್ಲಿ

ಸಾಮಾನ್ಯವಾದ ವಿಷಯವಾಗಿವೆ. ಆದರೆ ಸರಸ್ವತಿಯು ಕುಳಿತಿರುವ ಜಾಗ ಮತ್ತು ಹಿನ್ನೆಲೆ ಮಾತ್ರ ಬದಲಾಗಿರುತ್ತದೆ.

ಒಂದು ಚಿತ್ರದಲ್ಲಿ ಸರೋವರದ ಮಧ್ಯದಲ್ಲಿ ಅರಳಿದ ಕಮಲದಲ್ಲಿ ಸರಸ್ವತಿಯು ಕುಳಿತಿರುವಂತೆ ಚಿತ್ರಿಸಲಾಗಿದೆ. ಹಿನ್ನೆಲೆಯಲ್ಲಿ ಜಲಪಾತ. ಬೆಟ್ಟಗುಡ್ಡಗಳ ಚಿತ್ರಣವಿದೆ. ದೊಡ್ಡದಾದ ಕಿರೀಟ, ಹಿಂಬದಿಯಲ್ಲಿ ಪ್ರಭಾಮಂಡಲ ಹಾಗೂ ಕಿಕ್ಕಿರಿದಿರುವ ಆಭರಣಗಳು ಈ ಚಿತ್ರದಲ್ಲಿವೆ. ನವಿಲಾಗಲೀ ಹಂಸವಾಗಲೀ ಚಿತ್ರಿತವಾಗಿಲ್ಲ. ಹಿಂಬದಿಯ ಬೆಟ್ಟ, ಜಲಪಾತ ಇವುಗಳಿಗೆ ಬದಲಾಗಿ ಕಾಮನಬಿಲ್ಲನ್ನು ಚಿತ್ರಿಸಿರುವ ಇದೇ ಮಾದರಿಯ ಚಿತ್ರಗಳೂ ಇವೆ.

ಮತ್ತೊಂದರಲ್ಲಿ, ಹಿನ್ನೆಲೆಯಲ್ಲಿ ಬೆಟ್ಟ ಗುಡ್ಡಗಳು, ಭತ್ತದ ಗದ್ದೆಗಳು ಇರುವಂತೆ ರಚಿತವಾಗಿದೆ. ಗದ್ದೆಯ ಬದುವಿನ ಮೇಲೆ ಸರಸ್ವತಿಯು ಕುಳಿತಿದ್ದಾಳೆ. ಎಡಬದಿಯಲ್ಲಿ ಹರಿಯುತ್ತಿರುವ ನೀರಿನ ತೊರೆಯಲ್ಲಿ ಹಂಸವಿದೆ. ಬಹುತೇಕ ಇದೇ ಶೈಲಿಯ, ಆದರೆ ಕಾಡಿನ ನಡುವೆ ಸಣ್ಣ ಕಲ್ಲಿನ ಮೇಲೆ ಕುಳಿತಿರುವ ಸರಸ್ವತಿಯ ಚಿತ್ರಗಳೂ ಇವೆ. ಇವುಗಳಲ್ಲಿ ಹಂಸ ಇರುವುದಿಲ್ಲ.

ಹಾರುತ್ತಿರುವ ಹಂಸದ ಮೇಲೆ ಕಮಲ, ಕಮಲದಲ್ಲಿ ಸರಸ್ವತಿಯು ವೀಣೆ, ಕಮಂಡಲು ಮತ್ತು ಪುಸ್ತಕಗಳನ್ನು ಹಿಡಿದು ಕುಳಿತಿರುವಂತೆ ಒಂದು ಚಿತ್ರದಲ್ಲಿದೆ. ಈ ರೀತಿಯ ಚಿತ್ರಗಳ ರಚನೆ ನೇಪಾಳದಲ್ಲಿ ಹೆಚ್ಚು. ನೇಪಾಳದ ಚಿತ್ರಗಳಲ್ಲಿ ಸರಸ್ವತಿಯದು ರುದ್ರಸ್ವರೂಪವಾದರೆ ಈ ಚಿತ್ರಗಳಲ್ಲಿ ಆಕೆ ಸೌಮ್ಯಸ್ವರೂಪದವಳಾಗಿ ಕಾಣುತ್ತಾಳೆ. ನೇಪಾಳದ ಚಿತ್ರಗಳಲ್ಲಿ ಸರಸ್ವತಿಯು ನಗ್ನವಾಗಿದ್ದರೆ, ಜನಪ್ರಿಯ ಚಿತ್ರಗಳಲ್ಲಿ ಆಕೆಯ ವೇಷಭೂಷಣಕ್ಕೆ ಹೆಚ್ಚಿನ ಆದ್ಯತೆ ಇರುತ್ತದೆ.

ಬಹುತೇಕ ರವಿವರ್ಮನ ತೈಲಚಿತ್ರವನ್ನೇ ಹೋಲುವ ಒಂದು ಚಿತ್ರದಲ್ಲಿ ಹಿನ್ನೆಲೆಯ ನದಿ, ಪರ್ವತ ಮತ್ತು ಕಾಡನ್ನು ಮಾತ್ರ ಬದಲಾಯಿಸಲಾಗಿದೆ. ಮೂಲಚಿತ್ರದಲ್ಲಿ ಅತ್ಯಂತ ಸರಳವಾಗಿದ್ದ ಆಭರಣಗಳ ಅಲಂಕಾರ ಈ ಚಿತ್ರದಲ್ಲಿ ಆಡಂಬರದಿಂದ ಕೂಡಿದೆ. ಇನ್ನುಳಿದಂತೆ ಸರಸ್ವತಿ ಕುಳಿತಿರುವ ಭಂಗಿ, ಮುಖಭಾವ, ನವಿಲು ನಿಂತಿರುವ ಶೈಲಿ ಇವುಗಳಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ. ಇದೇ ಚಿತ್ರವನ್ನು ಹೋಲುವ ಚಿತ್ರವೊಂದರಲ್ಲಿ ನವಿಲಿನ ಸ್ಥಾನವನ್ನು ಬದಲಾಯಿಸಲಾಗಿದೆ. ಹಿಂಬದಿಯಲ್ಲಿ ಮರಗಿಡಗಳು, ಸಣ್ಣ ತೊರೆ, ದೂರದಲ್ಲಿ ಆಕಾಶ ಇರುವಂತೆ ಚಿತ್ರಿಸಲಾಗಿದೆ. ಒಂದು ಹಸು ಮತ್ತು ಕರು ನಿಂತು ಸರಸ್ವತಿಯನ್ನು ನೋಡುತ್ತಿರುವಂತೆ, ಅವಳ ವೀಣಾವಾದನವನ್ನು ಆಲಿಸುತ್ತಿರುವಂತೆ ಕಲ್ಪಿಸಲಾಗಿದೆ. ಕೆಲವು ಚಿತ್ರಗಳಲ್ಲಿ ಕೈಯಲ್ಲಿರುವ ಪುಸ್ತಕವಲ್ಲದೆ ಇನ್ನೊಂದು ಪುಸ್ತಕವನ್ನು ತೆರೆದು ಸರಸ್ವತಿಯ ಮುಂದೆ ಇಟ್ಟಿರುವಂತೆ ಚಿತ್ರಿಸಲಾಗಿದೆ. ಜಿಂಕೆಯನ್ನು ನವಿಲಿನ ಜೊತೆಯಲ್ಲಿ ಬಿಡಿಸಿರುವ ಚಿತ್ರಗಳೂ ಇವೆ. ಮರದಡಿಯಲ್ಲಿ ವೀಣಾಭ್ಯಾಸದಲ್ಲಿ ತೊಡಗಿರುವ ಸರಸ್ವತಿಯ ಒಂದು ಚಿತ್ರ ಅತ್ಯಂತ

ಸುಂದರವಾಗಿ ಮೂಡಿಬಂದಿದೆ. ಹಿಂಬದಿಯಲ್ಲಿ ನದಿ, ನದಿಯಲ್ಲಿ ಎರಡು ಹಂಸಗಳು, ಮಂಜುಮಿಶ್ರಿತ ಮುಂಜಾವಿನ ಆಕಾಶ, ಮುಂಭಾಗದಲ್ಲಿ ನವಿಲು ಒಂದಕ್ಕೊಂದು ಚೆನ್ನಾಗಿ ಸಂಯೋಜಿಸಲ್ಪಟ್ಟಿವೆ. ಈ ಚಿತ್ರದ ಮತ್ತು ಇದೇ ರೀತಿಯ ಜನಪ್ರಿಯ ಚಿತ್ರಗಳ ಕಲಾಕಾರರು ಯಾರು ಎಂಬುದು ಸ್ಪಷ್ಟವಾಗುವುದಿಲ್ಲ. ಜನಪ್ರಿಯ ಆವೃತ್ತಿಯ ಬಹುತೇಕ ಚಿತ್ರಗಳಿಗೂ ರವಿವರ್ಮನ ತೈಲಚಿತ್ರಗಳೇ ಮೂಲಾಧಾರವೆಂದು ಹೇಳಬಹುದು.

ಚಿತ್ರಕಲೆಯಲ್ಲಿ ಸರಸ್ವತಿಯನ್ನು ವಿದ್ಯಾದೇವತೆಯ ಸ್ವರೂಪದಲ್ಲಿ ಮಾತ್ರ ಅಭಿವ್ಯಕ್ತಿಸಲಾಗಿದೆ. ವಸ್ತ್ರಾಭರಣಗಳಲ್ಲಿ ವೈವಿಧ್ಯಯಿರುವುದಿಲ್ಲ. ಭಾರತೀಯ ಸ್ತ್ರೀಯರು ಪಾರಂಪರಿಕ ತೊಡುಗೆಯಾದ ಸೀರೆ, ರವಿಕೆ ಸರಸ್ವತಿಯ ಚಿತ್ರಗಳಲ್ಲಿಯೂ ಕಂಡು ಬರುತ್ತದೆ. ಸೀರೆ ಸಾಮಾನ್ಯವಾಗಿ ಬಿಳಿಯ ಬಣ್ಣದ್ದಾಗಿದ್ದು ಅಂಚು ಮಾತ್ರ ಹೊಂಬಣ್ಣದ್ದಾಗಿರುತ್ತದೆ. ಆಭರಣಗಳಿಗೆ ಹೆಚ್ಚಿನ ಒತ್ತು ನೀಡಲಾಗಿರುತ್ತದೆ. ಬಹುತೇಕ ಆಧುನಿಕ ಸರಸ್ವತಿಯ ಚಿತ್ರಗಳಿಗೆ ರವಿವರ್ಮನ ಸರಸ್ವತಿಯ ಚಿತ್ರವೇ ಮೂಲ ಆಕರವಾಗಿದೆ. ರವಿವರ್ಮನ ಸರಸ್ವತಿಯು ಸರಳ ಹಾಗೂ ನಿರಾಭರಣ ಸೌಂದರ್ಯವತಿಯಾಗಿದ್ದರೂ, ಅದನ್ನು ಅನುಕರಿಸಿ ರಚಿತವಾದ ಚಿತ್ರಗಳಲ್ಲಿ ಆಭರಣಗಳಿಗೇ ಹೆಚ್ಚು ಆದ್ಯತೆ ಕೊಡಲಾಗಿದೆ. ಮೈಸೂರು ಮತ್ತು ತಂಜಾವೂರು ಶೈಲಿಯ ಸರಸ್ವತಿಯ ಚಿತ್ರಗಳು ಮಂಟಪಗಳಲ್ಲಿರುವಂತೆ ಸಂಯೋಜಿತವಾಗಿದ್ದರೆ, ಆಧುನಿಕ ಚಿತ್ರಗಳೆಲ್ಲವೂ ಪ್ರಕೃತಿಯ ನಡುವಿನಲ್ಲಿರುವಂತೆ ಚಿತ್ರಿತವಾಗಿವೆ. ಕೆಲವು ಆಧುನಿಕ ಚಿತ್ರಗಳಲ್ಲಿ ವೀಣೆ ಮತ್ತು ಪುಸ್ತಕಗಳಿಗೆ ಹೆಚ್ಚಿನ ಪ್ರಾಧಾನ್ಯ ದೊರೆತಿರುತ್ತದೆ. ಆಧುನಿಕ ಚಿತ್ರಗಳಲ್ಲಿ ಸರಸ್ವತಿಯ ವಾಹನವನ್ನಾಗಿ ನವಿಲು ಮತ್ತು ಹಂಸಗಳೆರಡನ್ನೂ ಚಿತ್ರಿಸಿರುವುದುಂಟು. ಗಣಪತಿಯ ಇಕ್ಕೆಲಗಳಲ್ಲಿ ಲಕ್ಷ್ಮಿ–ಸರಸ್ವತಿಯರನ್ನು ಚಿತ್ರಿಸಿರುವ ಚಿತ್ರಗಳು ಹೆಚ್ಚು ಸಂಖ್ಯೆಯಲ್ಲಿ ಕಾಣಸಿಗುತ್ತವೆ. ಕೆಲವು ನವ್ಯವೆನ್ನಬಹುದಾದ ರಚನೆಗಳಲ್ಲಿ ಸರಸ್ವತಿಯನ್ನು ನಗ್ನವಾಗಿ ಚಿತ್ರಿಸಲಾಗಿದೆ. ಇಂತಹ ಚಿತ್ರಗಳಲ್ಲಿ ರೇಖೆಗಳೇ ಪ್ರಧಾನವಾಗಿರುತ್ತವೆ. ಎಂ.ಎಫ್.ಹುಸೇನರ ರೇಖಾಚಿತ್ರವೊಂದು ಮಾತ್ರ ಸರಸ್ವತಿಯ ನದೀದೇವತೆಯ ಸ್ವರೂಪವನ್ನು ಪ್ರಕಟಿಸುತ್ತದೆ. ಉಳಿದಂತೆ ಸರಸ್ವತಿಯು ವಿದ್ಯಾದೇವತೆಯಾಗಿ ಮಾತ್ರ ಚಿತ್ರಿತಳಾಗಿದ್ದಾಳೆ.

ಅಧ್ಯಾಯ 8 ಸಮಾರೋಪ

ಅಧ್ಯಾಯ 8

ಸಮಾರೋಪ

ಸಾಹಿತ್ಯ, ಶಾಸನ, ಜನಪದ ಮತ್ತು ಶಿಲ್ಪಗಳ ಹಿನ್ನೆಲೆಯಲ್ಲಿ ಸರಸ್ವತಿಯ ದರ್ಶನವನ್ನು ಅರಿಯುವ ಪ್ರಯತ್ನವನ್ನು ಇಲ್ಲಿ ಮಾಡಿದೆ. ಎಂಟು ಅಧ್ಯಾಯಗಳಲ್ಲಿ ಮೊದಲ ಮತ್ತು ಕೊನೆಯ ಅಧ್ಯಾಯಗಳನ್ನು ಬಿಟ್ಟು, ಉಳಿದ ಆರು ಅಧ್ಯಾಯಗಳಲ್ಲಿ ಸರಸ್ವತಿಯ ಸ್ವರೂಪವನ್ನು, ರೂಪಲಕ್ಷಣಗಳನ್ನು, ಅರ್ಥಸ್ವರೂಪವನ್ನು ಮತ್ತು ಮಹತ್ವವನ್ನು ತಿಳಿಯುವ ನಿಟ್ಟಿನಲ್ಲಿ ಅಧ್ಯಯನ ನಡೆಸಲಾಗಿದೆ. ಹಲವಾರು ಮಹತ್ವದ ಆಕರಗ್ರಂಥಗಳನ್ನು ಈ ಅಧ್ಯಯನಕ್ಕೆ ಬಳಸಿಕೊಂಡು, ಸರಸ್ವತಿಯ ಶಿಲ್ಪಗಳ ಅಧ್ಯಯನಕ್ಕಾಗಿ ಕರ್ನಾಟಕಾದ್ಯಂತ ಕ್ಷೇತ್ರಕಾರ್ಯ ನಡೆಸಿ, ಈ ಪ್ರಬಂಧದಲ್ಲಿ ವಾಸ್ತವಾಂಶಗಳನ್ನು ಪ್ರಸ್ತುತಪಡಿಸಲು ಪ್ರಯತ್ನಿಸಲಾಗಿದೆ. ಈ ಅಧ್ಯಯನದ ಒಟ್ಟು ಫಲಶ್ರುತಿಯನ್ನು ಕೆಳಕಂಡಂತೆ ಕ್ರೋಡೀಕರಿಸಬಹುದು.

ಮೊದಲನೆಯ ಅಧ್ಯಾಯದಲ್ಲಿ, ಇದುವರೆಗೆ ನಡೆದಿದ್ದ ಅಧ್ಯಯನಗಳನ್ನು ಅವಲೋಕಿಸಿ, ಕನ್ನಡದಲ್ಲಿ ಇಂತಹ ಅಧ್ಯಯನಕ್ಕೆ ಇರುವ ಅಗತ್ಯತೆಯನ್ನು ಕಂಡುಕೊಳ್ಳಲಾಗಿದೆ. 'ಸರಸ್ವತಿ' ಎಂಬ ಪದದ ಪ್ರಾಚೀನತೆ, ನಿಷ್ಪತ್ತಿ, ಅರ್ಥ ಮತ್ತು ಸ್ವರೂಪಗಳನ್ನು ಕ್ರೋಡೀಕರಿಸಲಾಗಿದೆ. ಸರಸ್ವತಿಗಿರುವ ಇತರ ಹೆಸರುಗಳಾದ ವಾಗ್ದೇವಿ, ಶಾರದೆ, ಶಾಬ್ದ, ಈ, ಬ್ರಾಹ್ಮೀ ಭಾಷಾ, ಗಿರಾ ಮೊದಲಾದ ಹೆಸರುಗಳ ಅರ್ಥಸ್ವರೂಪವನ್ನು ಕಂಡುಕೊಳ್ಳಲಾಗಿದೆ. ಕೆಲವು ವಿದ್ವಾಂಸರ ಅಭಿಪ್ರಾಯದಂತೆ, 'ಸರಸ್ವತಿ' ಎಂಬ ಪದ ದೇವನಾಗರಿ ಲಿಪಿ ಮತ್ತು ಸಂಸ್ಕೃತ ಭಾಷೆಗಳನ್ನು ಮಾತ್ರ ಧ್ವನಿಸುವುದಿಲ್ಲ. ಸರ್ವಭಾಷೆಯನ್ನೂ, ಸರ್ವಲಿಪಿಯನ್ನೂ ಧ್ವನಿಸುತ್ತದೆ ಎಂಬುದನ್ನು ಗುರುತಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ, ಬೌದ್ಧ, ಜೈನ ಮತ್ತು ವೈದಿಕ ಧರ್ಮಗಳ ಹಿನ್ನೆಲೆಯಲ್ಲಿ ಸರಸ್ವತಿಯ ಸ್ವರೂಪ ಸ್ಪಷ್ಟವಾಗಿರುವ ರೀತಿಯನ್ನು ಕಾಣಿಸಲಾಗಿದೆ. ಬೌದ್ಧಧರ್ಮದ ವ್ಯಾಪ್ತಿ ಹಲವಾರು ದೇಶಗಳಿಗೆ ವಿಸ್ತರಿಸಿರುವುದರಿಂದ, ಸರಸ್ವತಿಯ ಸ್ವರೂಪವೂ ಆಯಾಯ ದೇಶ ಸಂಸ್ಕೃತಿಯನ್ನವಲಂಬಿಸಿ ಬದಲಾಗಿದೆ. ಜೈನ ಸಂಪ್ರದಾಯದ ಹದಿನಾರು ವಿದ್ಯಾದೇವತೆಗಳಿಗೂ ಸರಸ್ವತಿಗೂ ಯಾವುದೇ ಸಂಬಂಧವಿಲ್ಲದಿರುವುದನ್ನು ತೋರಿಸಲಾಗಿದೆ. ಮುಖ್ಯವಾಗಿ ಸಿದ್ಧಾಯಿಕೆಯೇ ಜೈನಸರಸ್ವತಿ ಎನ್ನುವ ಸಾಮಾನ್ಯ ಅಭಿಪ್ರಾಯಕ್ಕೆ ಯಾವುದೇ ಸಾಹಿತ್ಯಕ ಮತ್ತು ಧಾರ್ಮಿಕ ಆಧಾರಗಳು ಇಲ್ಲದಿರುವುದನ್ನು ಗಮನಿಸಿ, ಸಿದ್ಧಾಯಿಕೆಗೂ ಸರಸ್ವತಿಗೂ ಯಾವುದೇ ಸಂಬಂಧವಿಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ.

ಜೈನಪರಂಪರೆಯಲ್ಲಿ ಸರಸ್ವತಿಯ ಜನನಸ್ಥಾನ ಆದಿಜಿನರ ಮುಖ; ವಾಸಸ್ಥಾನ ವಿದ್ವಜ್ಜನರ ನಾಲಗೆ. ಆಕೆ ನದೀ ದೇವತೆ ಅಲ್ಲ; ವಾಗ್ದೇವತೆ ಮಾತ್ರ. ಜೈನಧರ್ಮದಲ್ಲಿ ಸರಸ್ವತಿಯು ತಾತ್ವಿಕವಾಗಿ ಆದಿಜಿನರ ಮಗಳು (ದ್ರವ್ಯಶ್ರುತರೂಪ) ಮತ್ತು ಪತ್ನಿ (ಭಾವಶ್ರುತರೂಪ) ಎರಡೂ ಹೌದು. ಜೈನರ ಎರಡೂ ಪಂಥಗಳಲ್ಲಿ ಸರಸ್ವತೀ ಹಬ್ಬದ ಆಚರಣೆಗಳಲ್ಲಿನ ವ್ಯತ್ಯಾಸಗಳನ್ನು ತೋರಿಸಲಾಗಿದೆ. ಪಂಪನಲ್ಲಿ ಹೊಮ್ಮಿ ಕನ್ನಡ ಸಾಹಿತ್ಯದುದ್ದಕ್ಕೂ ಆಗಾಗ ಕಾಣಿಸಿಕೊಳ್ಳುವ 'ಪರಮಜಿನೇಂದ್ರವಾಣಿ ಸರಸ್ವತಿ' ಎಂಬ ಮಾತಿಗೂ, 'ಸರ್ವಭಾಷಾ ಸರಸ್ವತಿ' ಎಂಬ ಪರಿಕಲ್ಪನೆಗೂ ಸಂಸ್ಕೃತ 'ಮಹಾಪುರಾಣ'ವೇ ಪ್ರೇರಕ ಎಂಬುದನ್ನು ಗುರುತಿಸಲಾಗಿದೆ.

ವೈದಿಕಧರ್ಮದಲ್ಲಿನ ಸರಸ್ವತಿಯ ಸ್ವರೂಪವನ್ನು ಋಗ್ವೇದದ ಆಧಾರದಿಂದ ವಿವರಿಸಲಾಗಿದೆ. ಸರಸ್ವತಿಯ ನದೀಸ್ವರೂಪದ ಗೊಂದಲಗಳನ್ನು ತಕ್ಕಮಟ್ಟಿಗೆ ನಿವಾರಿಸಿ, 'ನದೀತಮೇ'ಯಾದ ಸರಸ್ವತಿಯು ಗಂಗಾದಿ ಸಪ್ತನದಿಗಳಲ್ಲಿ ಒಂದಾಗಿರದೆ, ಅವುಗಳಿಗೆಲ್ಲಾ ಮಾತೃಭೂತವಾದ ನದಿ ಎಂಬ ಅಭಿಪ್ರಾಯಕ್ಕೆ ಬರಲಾಗಿದೆ. ತಿಸ್ರೋ (ಇಳಾ–ಭಾರತೀ–ಸರಸ್ವತೀ) ದೇವತೆಗಳ ಪರಸ್ಪರ ಸಂಬಂಧದ ನಡುವಿನ ಗೊಂದಲದ ಬಗ್ಗೆ ವಿಚಾರ ನಡೆಸಿ, ವಾಕ್, ಇಳಾ ಮತ್ತು ಸರಸ್ವತಿ ಈ ದೇವತೆಗಳ ನಡುವಿನ ಸಂಬಂಧವನ್ನು ಸ್ಪಷ್ಟಪಡಿಸಲಾಗಿದೆ.

'ವೇದಗಳಲ್ಲಿ, ಮುಖ್ಯವಾಗಿ ಋಗ್ವೇದದಲ್ಲಿ ಸರಸ್ವತಿಯು ಒಂದು ನದಿ ಮಾತ್ರ, ವಾಗ್ದೇವತೆಯಲ್ಲ' ಮತ್ತು 'ಜ್ಞಾನದೇವತೆ ಮಾತ್ರ ನದಿಯೇ ಅಲ್ಲ' ಎಂಬ ಅಭಿಪ್ರಾಯಗಳನ್ನು ಮೀರಿ, ವಾಗ್ದೇವತೆಯ ಸ್ವರೂಪವೂ ಸೇರಿದಂತೆ ಇಂದಿನ ಸರ್ವಸ್ವರೂಪಗಳಿಗೂ ಋಗ್ವೇದವೇ ಮೂಲ ಎಂಬುದನ್ನು ಈ ಅಧ್ಯಯನದಲ್ಲಿ ಧೃಡಪಡಿಸಲಾಗಿದೆ. ಸರಸ್ವತಿಗಿರುವ ಕಾಮಧೇನು ಸ್ವರೂಪಕ್ಕೆ ನಿರ್ದಿಷ್ಟ ಕಾರಣಗಳನ್ನು ಕಂಡುಕೊಂಡು, ಬ್ರಹ್ಮ ಇಂದ್ರ ಮತ್ತು ಸ(ಸಾ)ರಸ್ವತ ಇವರುಗಳೊಂದಿಗಿನ ಸರಸ್ವತಿಯ ಸಂಬಂಧವನ್ನು ಸ್ಪಷ್ಟಪಡಿಸಲಾಗಿದೆ. ಸರಸ್ವತಿಯು ಬ್ರಹ್ಮನ ಪತ್ನಿ ಮತ್ತು ಮಗಳು ಎಂಬ ಕಲ್ಪನೆಗೆ ಮೂಲ ಕಾರಣಗಳು ಋಗ್ವೇದದಲ್ಲಿಯೇ ಸಿಗುತ್ತವೆ. ಸರಸ್ವತಿ ಹಾಗೂ ಬೇರೆ ದೇವತೆಗಳ ಸಂಬಂಧದ ಗೊಂದಲಗಳು ಪೂರ್ಣವಾಗಿ ನಿವಾರಣೆಯಾಗಿಲ್ಲ. ವೇದಗಳ ಕರ್ತೃಗಳು ಬೇರೆ ಬೇರೆಯಾಗಿರುವುದೂ ಬೇರೆ ಬೇರೆ ಕಾಲಕ್ಕೆ ಸೇರಿದವರಾಗಿರುವುದೂ ಈ ಕೊರತೆಗೆ ಕಾರಣವಿರಬಹುದು.

ವೇದಾಂತ ಸಾಹಿತ್ಯ, ಮಹಾಭಾರತ ಮತ್ತು ಪುರಾಣಗಳಲ್ಲಿ ವ್ಯಕ್ತವಾಗಿರುವ ಸರಸ್ವತಿಯ ಸ್ವರೂಪವನ್ನು ಗ್ರಹಿಸಲು ಪ್ರಯತ್ನಿಸಲಾಗಿದೆ. ಪುರಾಣಗಳಲ್ಲಿ ಬರುವ ಸರಸ್ವತಿಯ ವಿಷಯಗಳು ಒಂದಕ್ಕೊಂದು ಪೂರಕವಾಗಿರದೆ ತುಂಬಾ ಗೊಂದಲ ಮೂಡಿಸುತ್ತವೆ. ಪುರಾಣದಲ್ಲಿ ಇಣುಕಿರುವ ಅಶ್ಲೀಲತೆಯ ಸೋಂಕನ್ನು ಇಂದಿನ ಕೆಲವರು ಪ್ರಶ್ನಿಸಿ, ಸರಸ್ವತಿಯನ್ನೂ ಪುರಾಣಗಳನ್ನೂ

ತಿರಸ್ಕರಿಸುವಂತೆ ಕರೆಕೊಟ್ಟಿರುವುದೂ ಉಂಟು. 'ಸರಸ್ವತೀ ರಹಸ್ಯೋಪನಿಷಚ್ಚಂದ್ರಿಕೆ' ಎಂಬ ಉಪನಿಷತ್ತಿನಲ್ಲಿ ದಂಡಿಯ 'ಕಾವ್ಯಾದರ್ಶ'ದ ಸರಸ್ವತಿಯ ಸ್ತುತಿ ಬಂದಿರುವುದರಿಂದ, ಅದು ದಂಡಿಯ ನಂತರದಲ್ಲಿ (ಸುಮಾರು ಕ್ರಿ.ಶ. 7–8ನೆಯ ಶತಮಾನ) ಸಂಯೋಜನೆಗೊಂಡಿರಬಹುದೆಂದು ನಿರ್ಧರಿಸಲಾಗಿದೆ.

ಸರಸ್ವತಿಯ ಉಗಮಸ್ಥಾನ ಮೂರೂ ಪರಂಪರೆಯಲ್ಲಿಯೂ ಒಂದೇ ಆಗಿರುವುದನ್ನು ನೋಡಬಹುದು. ಬೌದ್ಧರಲ್ಲಿ ಆದಿಬುದ್ಧರ ಹಲ್ಲಿನಿಂದ, ಜೈನರಲ್ಲಿ ಆದಿಜಿನರ ಮುಖದಿಂದ, ವೈದಿಕರಲ್ಲಿ ಆದಿಬ್ರಹ್ಮನ ನಾಲಗೆಯಿಂದ ಸರಸ್ವತಿಯ ಜನನವಾಯಿತು ಎಂಬ ಅಭಿಪ್ರಾಯವಿದೆ. ಇವೆಲ್ಲವೂ ವಾಕ್ ಅಂದರೆ ಮಾತು ಉದ್ಭವಿಸುವ ಸ್ಥಳಗಳೂ ಹೌದು. ಮೂರೂ ಧರ್ಮಗಳಲ್ಲೂ ಸರಸ್ವತಿಯು ವಿದ್ಯಾದೇವತೆಯಾಗಿಯೇ ಗುರುತಿಸಲ್ಪಟ್ಟಿದ್ದಾಳೆ. ಪುಸ್ತಕರೂಪದಲ್ಲಿ ಮೂರೂ ಧರ್ಮದಲ್ಲಿ ಸರಸ್ವತಿಯನ್ನು ಪೂಜಿಸಲಾಗುತ್ತದೆ. ಬೌದ್ಧರಲ್ಲಿ ಸರಸ್ವತಿಯು 'ಪ್ರಜ್ಞಾಪಾರಮಿತ', ಜೈನರಲ್ಲಿ 'ಶ್ರುತ'ಗಳು ಅಥವಾ 'ಜೈನವೇದ', ವೈದಿಕ ಪರಂಪರೆಯಲ್ಲಿ 'ವೇದ'ಗಳು ಸರಸ್ವತಿಯನ್ನು ಪ್ರತಿಬಿಂಬಿಸುತ್ತವೆ. ಆದ್ದರಿಂದ ಧರ್ಮಗಳ ಒಳಪಂಗಡಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳು, ತಾಂತ್ರಿಕ ಆಚರಣೆಯಲ್ಲಿ ಕಂಡುಬರುವ ಪ್ರಾದೇಶಿಕ ವೈವಿಧ್ಯತೆಗಳು ಇವುಗಳನ್ನು ಬಿಟ್ಟರೆ, ಒಟ್ಟಾರೆ ಭಾರತೀಯ ಸಂದರ್ಭದಲ್ಲಿ ಸರಸ್ವತಿಯ ಸ್ವರೂಪ **'ಒಂದೇ'** ಆಗಿದೆ ಎಂಬ ತೀರ್ಮಾನಕ್ಕೆ ಬರಲಾಗಿದೆ.

ಗ್ರೀಕ್ ಸಂಸ್ಕೃತಿಯಲ್ಲಿ ಸರಸ್ವತಿಗೆ ಸಮಾನವಾದ ದೇವತೆಯಾದ 'ಅಥೀನಾ'ಳ ಹುಟ್ಟು ಸ್ಯೂಸ್‌ದೇವನ ತಲೆಯಿಂದಲೇ ಎಂಬುದು ಗಮನಾರ್ಹ. ಸರಸ್ವತಿಯಂತೆ ಒಂದು ನದಿಯಾಗಿದ್ದು, ನದಿದೇವತೆಯಾಗಿ ರೂಪಗೊಂಡಿರುವ 'ಈಸಿಸ್' ಎಂಬ ಈಜಿಪ್ಷಿಯನ್ ದೇವತೆಯು ಜ್ಞಾನಕ್ಕೆ ಸಂಬಂಧಿಸಿದ ದೇವತೆಯೂ, ಮಾತೃದೇವತೆಯೂ ಆಗಿರುವುದನ್ನು ಗುರುತಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ, ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಕಾಣುವ ಸರಸ್ವತಿಯ ಪರಿಕಲ್ಪನೆಗಳನ್ನು ಗುರುತಿಸಿದೆ. ಪೂರಕವಾಗಿ ಸಂಸ್ಕೃತ ಸಾಹಿತ್ಯದ ಮಹತ್ವದ ಕವಿಗಳ ಸರಸ್ವತೀ ದರ್ಶನವನ್ನು ಅಧ್ಯಯನ ಮಾಡಲಾಗಿದೆ. ಕವಿರಾಜಮಾರ್ಗದಿಂದ ಮೊದಲ್ಗೊಂಡು ಸುಮಾರು ಒಂದುನೂರ ಇಪ್ಪತ್ತೈದು ಕನ್ನಡ ಕಾವ್ಯಗಳಲ್ಲಿ ಹೊಮ್ಮಿರುವ ಸರಸ್ವತಿಯ ದರ್ಶನವನ್ನು ಸಂಗ್ರಹಿಸಲಾಗಿದೆ. ಸರಸ್ವತೀ ಸ್ತುತಿಯ ಧಾರ್ಮಿಕ ಪರಿಣಾಮಗಳನ್ನು ಅರಿಯಲು ಪ್ರಯತ್ನಿಸಲಾಗಿದೆ. ಜೈನ ಮತ್ತು ವೈದಿಕ ಕವಿಗಳ ಕಾವ್ಯಗಳಲ್ಲಿ ಸರಸ್ವತಿಯ ಸ್ತುತಿ ಪರಿಣಾಮಕಾರಿಯಾಗಿ ಮೂಡಿ ಬಂದಿದೆ. ಪಂಪನ 'ಪರಮಜಿನೇಂದ್ರವಾಣಿಯೆ ಸರಸ್ವತಿ' ಎಂಬ ಮಾತು ಇಂದಿನವರೆಗೂ ಹಲವಾರು ಕವಿಗಳ ಕಾವ್ಯಗಳಲ್ಲಿ ವ್ಯಕ್ತವಾಗುತ್ತಿದೆ. ವಚನಸಾಹಿತ್ಯ ಮತ್ತು ವೀರಶೈವ ಪರಂಪರೆಯ ಪ್ರಾಬಲ್ಯದಿಂದಾಗಿ ಸರಸ್ವತಿಯ

ಸ್ತುತಿಯೆಂಬುದು ಕರ್ತವ್ಯಮಾತ್ರವಾದದ್ದಾಯಿತು. ಸರಸ್ವತಿಗೆ ಮಾತ್ರವಿದ್ದ ವಿದ್ಯಾದೇವತೆಯ ಸ್ಥಾನ, ವಿಘ್ನನಿವಾರಕನಾಗಿದ್ದ ಗಣಪತಿಗೂ ಹಂಚಿಕೆಯಾಯಿತು. ಆದರೂ ವಚನ ಸಾಹಿತ್ಯದಲ್ಲಿ ವಾಕ್ಕಿಗೆ ಹೆಚ್ಚಿನ ಮಹತ್ವ ಲಭಿಸಿರುವುದನ್ನು ಗುರುತಿಸಲಾಗಿದೆ.

ದಾಸ ಸಾಹಿತ್ಯದಲ್ಲಿ ಸರಸ್ವತಿಯ ಸ್ತುತಿ ಎಂಬುದು ಪ್ರಮುಖವಾಗಿದ್ದರೂ, ವಿಶೇಷಣಗಳ ಪುನರಾವರ್ತನೆಯಾಗಿರುವುದನ್ನು ಗುರುತಿಸಿದೆ. ಸರಸ್ವತಿಗಿದ್ದ ಭಾರತಿ ಎಂಬ ಹೆಸರಿನ ದೇವತೆಯು ದಾಸ ಸಾಹಿತ್ಯದಲ್ಲಿ ಮಾರುತನ ಸತಿಯಾಗಿ ಕಾಣಿಸಿಕೊಳ್ಳುತ್ತಾಳೆ. ಕೆಲವೊಮ್ಮೆ ಭಾರತಿಗೂ ವಿದ್ಯಾದೇವತೆಯ ವಿಶೇಷಣಗಳು ಲಭ್ಯವಾಗಿರುವುದನ್ನು ಗುರುತಿಸಲಾಗಿದೆ.

ಹೊಸಗನ್ನಡ ಸಾಹಿತ್ಯ ಪರಂಪರೆಯಲ್ಲಿ ಸರಸ್ವತಿಯ ಸ್ತುತಿ ಕಡಿಮೆಯಾಗಿರುವುದಕ್ಕೆ ಕಾರಣಗಳನ್ನು ಸೂಚಿಸಿದೆ. ಹೊಸಗನ್ನಡ ಸಾಹಿತ್ಯದಲ್ಲಿ ಕೆಲವು ಕವಿಗಳ ಬಿಡಿ ರಚನೆಗಳಲ್ಲಿ ಮತ್ತು ಆಧುನಿಕ ಮಹಾಕಾವ್ಯಗಳಲ್ಲಿ ಮಾತ್ರ ಸರಸ್ವತಿಯ ಪರಿಕಲ್ಪನೆಗಳನ್ನು ಕಾಣಬಹುದು. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಸರಸ್ವತಿಗೆ ವಿದ್ಯಾನಟಿಯ, ಸಾಹಿತ್ಯನಟಿಯ ಗೌರವ ದೊರಕಿಸಿದ ಕವಿಗಳು, ಸರಸ್ವತಿಗೆ ತಮ್ಮ ಕಾವ್ಯಗಳನ್ನು ನಾಟ್ಯವೇದಿಕೆಯಾಗಿಸಿರುವುದನ್ನು ಈ ಅಧ್ಯಾಯದಲ್ಲಿ ಗ್ರಹಿಸಲಾಗಿದೆ. ಕವಿಯ ಮನಸ್ಸು ಮಾತ್ರವಲ್ಲದೆ, ಸ್ವತಃ ಕವಿಯೇ ಸರಸ್ವತಿಯ ನಿವಾಸ ಎನ್ನುವುದರ ಜೊತೆಗೆ 'ವಿಶ್ವವಿದ್ಯಾಲಯವೇ ಸರಸ್ವತಿ' ಎಂಬ ನಂಬಿಕೆಯೂ ಕನ್ನಡ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿರುವುದನ್ನು ಗುರುತಿಸಲಾಗಿದೆ. ಇವೆಲ್ಲವುಗಳಲ್ಲಿ ಸರಸ್ವತಿಯ ವಿದ್ಯಾದೇವತೆ, ನಾಟ್ಯದೇವತೆ, ಕಲಾದೇವತೆ, ಜ್ಞಾನ ದೇವತೆ ಮೊದಲಾದ ರೂಪಗಳ ಜೊತೆಯಲ್ಲಿ ಆಕೆಯ ನದಿಯ ಸ್ವರೂಪವನ್ನು ಕೂಡ ಕನ್ನಡ ಕವಿಗಳು ಸರಸ್ವತಿಯ ಸ್ತುತಿಗಳಲ್ಲಿ ಬಳಸಿದ್ದಾರೆ.

ಕಾವ್ಯದ ವಿಷಯಕ್ಕೆ ಅನುಗುಣವಾಗಿ ಸರಸ್ವತಿಗೆ ಗುಣಗಳನ್ನು ಆರೋಪಿಸಿರುವುದನ್ನು ಕಾಣಬಹುದು. ಸೂಪಶಾಸ್ತ್ರ ಕೃತಿಯಾದರೆ ಸರಸ್ವತಿಯು ಅಡುಗೆಯವಳಾಗುತ್ತಾಳೆ. ಕಾಮಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಯಾದರೆ 'ಕಾಮಸಂಜನನಿ'ಯೂ 'ಸಂಸಾರಸಂಭಾವಿತಾತ್ಮೆ'ಯೂ ಆಗಿರುವುದನ್ನು ಗಮನಿಸಬಹುದು. 'ಬ್ರಹ್ಮನ ಮುಖದಿಂದಗಲ್ದು ಬಂದು ನನ್ನ ಮುಖದಲ್ಲಿ ನೆಲಸು', 'ನಾಲಗೆಯಲ್ಲಿ ನರ್ತಿಸು' ಎಂದು ಸ್ತುತಿಸುವುದು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಒಂದು ಕವಿಸಮಯವೇ ಆಗಿ ಮಾರ್ಪಟ್ಟಿದೆ. ಇದನ್ನು ಮೀರಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ 'ಸರ್ವರ ಮಸ್ತಕದಲ್ಲಿ ನರ್ತಿಸು' ಎಂದು ವೈಶಾಲ್ಯ ಪಡೆದುಕೊಂಡಿರುವುದನ್ನು ಗುರುತಿಸಲಾಗಿದೆ. ಕೇವಲ ಪ್ರಾರಂಭಿಕ ಸ್ತುತಿ ಮಾತ್ರವಲ್ಲದೆ, ಕಾವ್ಯತಂತ್ರವಾಗಿಯೇ ಸರಸ್ವತಿಯ ಸ್ತುತಿ ಬಂದಿದೆ. ಸೂಫಿಗಳು ತಮ್ಮ ಸಾಹಿತ್ಯದಲ್ಲಿ ಸರಸ್ವತಿಯನ್ನು ಸ್ತುತಿಸಿದ್ದಾರೆ. 'ಸರಸ್ವತಿಯೇ ನಿಜವಾದ ಕವಿ; ಇನ್ನುಳಿದ ಎಲ್ಲಾ ಕವಿಗಳು ಅವಳ ಬಾಹುಗಳಿದ್ದಂತೆ' ಎಂಬ

ಕಲ್ಪನೆಯಲ್ಲಿ ಸರಸ್ವತಿಗೆ 'ಅನಾದಿಕವಿ'ಪಟ್ಟವನ್ನೂ ಕನ್ನಡ ಸಾಹಿತ್ಯ ಪರಂಪರೆ ಸೃಷ್ಟಿಸಿರುವುದನ್ನು ಇಲ್ಲಿ ಗುರುತಿಸಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಕನ್ನಡ ಶಾಸನಗಳಲ್ಲಿ ಬಂದಿರುವ ಸರಸ್ವತಿಯ ವಿಚಾರವನ್ನು ಪ್ರಸ್ತಾಪಿಸಲಾಗಿದೆ. ಸರಸ್ವತಿಯ ಬಗೆಗೆ ಪಾರಂಪರಿಕ ಕಲ್ಪನೆಗಳೇ ಕೆಲವು ಪ್ರತಿಬಿಂಬಿತವಾಗಿರುವುದನ್ನು ಗಮನಿಸಲಾಗಿದೆ. ಶಾಸನಕಾರರ ಕಲ್ಪನೆಯಲ್ಲೂ ಸರಸ್ವತಿಯು ಬ್ರಹ್ಮನಿಂದ ಸೃಷ್ಟಿಯಾಗಿ ಆತನ ಮುಖದಲ್ಲಿಯೇ ನೆಲೆನಿಂತವಳು. ಆಕೆ ಬ್ರಹ್ಮನ ಸತಿ ಹಾಗೂ ವಾಗ್ದೇವತೆ ಮತ್ತು ಕಾವ್ಯದೇವತೆ. ಪಾಶ, ಪುಸ್ತಕ, ಅಂಕುಶ ಮತ್ತು ಮಣಿಮಾಲೆಗಳನ್ನು ಧರಿಸಿರುವ ಸರಸ್ವತಿಯ ಚಿತ್ರಣವನ್ನು ಕನ್ನಡದ ಶಾಸನಗಳು ಕಟ್ಟಿಕೊಡುತ್ತವೆ. ಲೋಕಲೋಕಗಳನ್ನೇ ಮಣಿಮಾಲೆಯಾಗಿ ಧರಿಸಿರುವ ಸರಸ್ವತಿಯ ಚಿತ್ರಣ ಶಾಸನದಲ್ಲಿದೆ. ಸರಸ್ವತಿಯ ಮೂಲಸ್ವರೂಪವಾದ ನದಿ ಮತ್ತು ನದಿದೇವತೆಯ ಬಗ್ಗೆ ಯಾವುದೇ ಶಾಸನದಲ್ಲಿಯೂ ಉಲ್ಲೇಖ ಇಲ್ಲ ಎಂಬುದನ್ನು ಗುರುತಿಸಲಾಗಿದೆ. ಸರಸ್ವತಿಯ 'ಕಾಶ್ಮೀರ ಪುರವಾಸಿನಿ' ಎಂಬುದನ್ನು ಶಾಸನಕಾರರು ಬಳಸಿಕೊಂಡಿದ್ದಾರೆ. ಶೃಂಗೇರಿಯು ಶಾರದಾಪೀಠವಾದ ಮೇಲೆ 'ಶೃಂಗಪುರವಾಸಿನಿ' ಎಂದು ಸಂಬೋಧಿಸಿರುವುದುಂಟು. ಶಾಸನಗಳಲ್ಲಿ ಸರಸ್ವತಿಯ ಸ್ತುತಿ ಎಂಬುದು ಪ್ರತ್ಯೇಕವಾಗಿ ಇಲ್ಲ. ಶಾಸನದ ಕವಿ ಆಶ್ರಿತ ರಾಜನ ರಾಣಿಯನ್ನೋ ಅಥವಾ ಅಥವಾ ಶಾಸನ ಹಾಕಿಸುತ್ತಿರುವವನ ಹೆಂಡತಿಯನ್ನೋ ಸರಸ್ವತಿಗೆ ಹೋಲಿಸಿ ಶಾಸನದ ಪದ್ಯಗಳನ್ನು ರಚಿಸಿರುವುದುಂಟು. ಒಂದು ಶಾಸನದ ಶಿರೋಭಾಗದ ಶಿಲ್ಪದಲ್ಲಿ ಶಿವಲಿಂಗ ಮತ್ತು ವಿಷ್ಣುಮೂರ್ತಿಯೊಂದಿಗೆ ಸರಸ್ವತಿಯನ್ನು ಕೆತ್ತಲಾಗಿದೆ.

ಐದನೆಯ ಅಧ್ಯಾಯದಲ್ಲಿ, ಕನ್ನಡ ಜನಪದ ಸಾಹಿತ್ಯದಲ್ಲಿ ಕಂಡುಬರುವ ಸರಸ್ವತಿಯ ಸ್ವರೂಪವನ್ನು ಅಧ್ಯಯನ ಮಾಡಲಾಗಿದೆ. ಕನ್ನಡ ಗಾದೆಗಳಲ್ಲಿ ಮಾತಿಗಿರುವ ಮಹತ್ವವನ್ನು ಗುರುತಿಸಲಾಗಿದೆ. ಜನಪದರಲ್ಲಿ ಸರಸ್ವತಿ ವಾಗ್ದೇವತೆಯಲ್ಲದಿದ್ದರೂ, ವಿವೇಕ, ವಿದ್ಯೆ, ಜ್ಞಾನ ಮತ್ತು ಹಾಡುಗಳನ್ನು ದಯಪಾಲಿಸುವ ಮಹತ್ವದ ದೇವತೆಯಾಗಿದ್ದಾಳೆ. ಒಟ್ಟಾರೆ ಕಲಿಕೆಯ ಪ್ರಕ್ರಿಯೆಯನ್ನೇ 'ಸರಸ್ವತಿ' ಎಂದು ಜನಪದರು ಭಾವಿಸಿರುವುದು ಸ್ಪಷ್ಟವಾಗಿದೆ. ಇಲ್ಲಿ ಸರಸ್ವತಿಯು ಯಾವುದೋ ಲೋಕದಲ್ಲಿ, ಯಾರದೋ ಮುಖದಲ್ಲಿ ನೆಲೆನಿಂತ ದೇವತೆಯಲ್ಲ. ಜನಪದರಿಗೆ ಸರಸ್ವತಿಯು ಬ್ರಹ್ಮನ ಹೆಂಡತಿ ಮಾತ್ರ. 'ಬ್ರಹ್ಮನ ಮಗಳು ಸರಸ್ವತಿ' ಎಂಬ ಕಲ್ಪನೆ ಕನ್ನಡ ಜನಪದರಲ್ಲಿಲ್ಲ. ಆದರೆ, ವೇದ–ಪುರಾಣಗಳಲ್ಲಿ ವ್ಯಕ್ತವಾಗಿರುವ 'ಜಗದ್ಧಾತ್ರಿ ಸರಸ್ವತಿ' ಎಂಬ ಶಿಷ್ಟ ಪರಿಕಲ್ಪನೆಯಿರುವುದನ್ನು ಗುರುತಿಸಲಾಗಿದೆ. ಸರಸ್ವತಿಯು ಜನಪದರ ಜೊತೆಯಲ್ಲಿ ಅವರ ಕಷ್ಟಸುಖಗಳಲ್ಲಿ ಭಾಗಿಯಾಗುವ ಗೆಳತಿ ಎಂಬಂತೆ ಚಿತ್ರಿತಳಾಗಿದ್ದಾಳೆ. ಸರಸ್ವತಿಯನ್ನು ಮನೆಗೆ ಆಹ್ವಾನಿಸುವ, ಊಟೋಪಚಾರ ಮಾಡಿಸುವ

ಚಿತ್ರಣಗಳಿವೆ. ಜನಪದರ ಬದುಕಿನ ಅವಿಭಾಜ್ಯ ಅಂಗವಾಗಿರುವ ರಾಗಿ ಕಲ್ಲಿಗೂ 'ಸರಸೋತಿ' ಎಂದು ಸಂಬೋಧಿಸಿರುವುದುಂಟು. ಆದಿವಾಸಿಗಳ, ಜನಪದರ ದೇವತೆಯಾದ ಮಾತಂಗಿಯು ಸರಸ್ವತಿಯ ತಾಂತ್ರಿಕ ಸ್ವರೂಪ ಎಂಬ ವಿಚಾರವನ್ನು ಚರ್ಚಿಸಲಾಗಿದೆ.

ಆರನೆಯ ಅಧ್ಯಾಯವು ಕ್ಷೇತ್ರಕಾರ್ಯಾಧರಿತವಾಗಿದೆ. ಕರ್ನಾಟಕದಲ್ಲಿನ ಸುಮಾರು ಇನ್ನೂರೈವತ್ತಕ್ಕೂ ಹೆಚ್ಚು ಶಿಲ್ಪಗಳನ್ನು ಸಂದರ್ಶಿಸಿ ಅಧ್ಯಯನ ಮಾಡಲಾಗಿದೆ. ದ್ವಿಭುಜ, ಚತುರ್ಭುಜ, ಷಡ್ಭುಜ, ಅಷ್ಟಭುಜ ಮತ್ತು ದಶಭುಜಗಳ ಸರಸ್ವತಿಯ ಶಿಲ್ಪಗಳು ಹಲವಾರು ಭಂಗಿಯಲ್ಲಿ ದೊರೆಯುತ್ತವೆ. ಹಲವಾರು ಶಿಲ್ಪಶಾಸ್ತ್ರೀಯ ಗ್ರಂಥಗಳು, ಲಕ್ಷಣಗಳು ಪ್ರಚಲಿತವಿದ್ದರೂ ಕರ್ನಾಟಕದ ಶಿಲ್ಪಾಚಾರ್ಯರು ಸ್ವತಂತ್ರವಹಿಸಿ ಸರಸ್ವತಿಯ ಶಿಲ್ಪಗಳನ್ನು ಏಕತಾನತೆಯಿಂದ ಬಿಡುಗಡೆ ಮಾಡಿದ್ದಾರೆ. ಕರ್ನಾಟಕದ ಅತ್ಯಂತ ಪ್ರಾಚೀನ ಸರಸ್ವತಿಯ ಶಿಲ್ಪಗಳೆಂದು, ರಾವಳಫಡಿ ಗುಹೆಯಲ್ಲಿರುವ ಗಂಗಾಧರನ ತಲೆಯಮೇಲಿನ ಶಿಲ್ಪ, ಬನವಾಸಿಯಲ್ಲಿರುವ ಆದಿಮಾಧವ ಶಿಲ್ಪದ ಭಾಗವಾಗಿರುವ ಸರಸ್ವತಿಯ ಶಿಲ್ಪ ಮತ್ತು ಬಾಗಳಿಯಲ್ಲಿರುವ ಒಂದು ಬಿಡಿಶಿಲ್ಪವನ್ನು ಗುರುತಿಸಲಾಗಿದೆ. ಕರ್ನಾಟಕ ಸಂಸ್ಕೃತಿಯಲ್ಲಿ ಸರಸ್ವತಿಯು ಶಿವ ಮತ್ತು ವಿಷ್ಣುವಿನ ಭಾಗವಾಗಿ, ನಂತರ ಪ್ರತ್ಯೇಕ ದೇವತೆಯಾಗಿ ರೂಪುಗೊಂಡಿರುವುದು ವಿಶೇಷ. {ಶಿವಲಿಂಗ ಮತ್ತು ವಿಷ್ಣುಮೂರ್ತಿಯ ಜೊತೆಯಲ್ಲಿ ಸರಸ್ವತಿಯನ್ನು ಪ್ರತಿಷ್ಠಾಪಿಸಿರುವ ಉದಾಹರಣೆಗಳು (ಕಲಕೇರಿ ಮತ್ತು ನಿಡುಗುಂದಿ) ಕರ್ಣಾಟಕದಲ್ಲಿವೆ. ಬ್ರಹ್ಮೇಶ್ವರ ಲಿಂಗವಿದ್ದಲ್ಲಿ ಶಕ್ತಿಯನ್ನಾಗಿ ಸರಸ್ವತಿಯನ್ನು ಪ್ರತಿಷ್ಠಾಪಿಸಿರುವುದನ್ನು ಕಾಣಬಹುದು (ಅಬ್ಬಲೂರಿನ ಬ್ರಹ್ಮೇಶ್ವರ).} ಪುರಾಣಗಳ ಪ್ರಭಾವದಿಂದಾಗಿ ಉತ್ತರಭಾರತದಲ್ಲಿ ಹೆಚ್ಚಾಗಿ ಸಿಗುವ, ವಿಷ್ಣುಮೂರ್ತಿಯೊಂದಿಗೆ ಲಕ್ಷ್ಮಿ–ಸರಸ್ವತಿಯರಿರುವ ಶಿಲ್ಪಗಳು ಕರ್ನಾಟಕದಲ್ಲಿ ಇಲ್ಲ. ಆದರೆ ವಿಷ್ಣುಶಿಲ್ಪದ ಇಕ್ಕೆಲಗಳಲ್ಲಿ ನೃತ್ಯಭಂಗಿಯಲ್ಲಿರುವ ಲಕ್ಷ್ಮಿ ಸರಸ್ವತಿಯರ ಶಿಲ್ಪಗಳನ್ನು (ಅರಳಗುಪ್ಪೆ) ಪತ್ತೆ ಹಚ್ಚಲಾಗಿದೆ. ಶಿಲ್ಪಕಲೆಯ ತವರೂರು ಎಂಬ ಖ್ಯಾತಿಯ ಹಳೆಯಬೀಡು ಮತ್ತು ಬೇಲೂರು ದೇವಾಲಯಗಲ್ಲಿಯೇ ಸುಮಾರು 50ಕ್ಕೂ ಹೆಚ್ಚು ಸರಸ್ವತಿಯ ಶಿಲ್ಪಗಳಿರುವುದನ್ನು ಗಮನಿಸಿದೆ.

ಏಳನೆಯ ಅಧ್ಯಾಯದಲ್ಲಿ, ಕರ್ನಾಟಕದಲ್ಲಿ ಪ್ರಚಲಿತವಿರುವ ಚಿತ್ರಕಲಾ ಪ್ರಕಾರಗಳಲ್ಲಿ ಸರಸ್ವತಿಯ ಸ್ವರೂಪವನ್ನು ಕುರಿತು ಅಧ್ಯಯನ ನಡೆಸಲಾಗಿದೆ. ವಿಜಯನಗರ, ಮೈಸೂರು ಮತ್ತು ತಂಜಾವೂರು ಶೈಲಿಯ ಸರಸ್ವತಿಯ ಚಿತ್ರಗಳ ಪರಸ್ಪರ ವ್ಯತ್ಯಾಸವನ್ನು ಅರಿಯಲು ಪ್ರಯತ್ನಿಸಲಾಗಿದೆ. ಇವುಗಳಲ್ಲದೆ, ರವಿವರ್ಮ, ರುದ್ರಕುಮಾರ್ ಝಾ, ಎಂ.ಎಫ್.ಹುಸೇನ್ ಮೊದಲಾದವರ ಚಿತ್ರಗಳನ್ನು ಗಮನಿಸಲಾಗಿದೆ. ನಗ್ನಮೂರ್ತಿ ಎಂಬ ವಿವಾದವೊಂದನ್ನು ಬಿಟ್ಟರೆ, ಎಂ.ಎಫ್.ಹುಸೇನ್ ಅವರ ಸರಸ್ವತಿಯ ರೇಖಾಚಿತ್ರ ನದಿ ಮತ್ತು ವಾಗ್ದೇವಿ ಎರಡೂ ಸ್ವರೂಪಗಳನ್ನು ಬಿಂಬಿಸುವಲ್ಲಿ ಶಕ್ತವಾಗಿದೆ. ಇಂದಿನ ಸಾವಿರಾರು

ಜನಪ್ರಿಯ ಸರಸ್ವತಿಯ ಚಿತ್ರಗಳಿಗೆ ರವಿವರ್ಮ ಅವರ ಸರಸ್ವತಿಯ ಚಿತ್ರವೇ ಪ್ರೇರಕವಾಗಿರುವುದನ್ನು ಗುರುತಿಸಲಾಗಿದೆ. ಇವುಗಳಲ್ಲದೆ, ಜಪಾನ್, ಟಿಬೆಟ್ ಮತ್ತು ನೇಪಾಳ ದೇಶಗಳ ಸರಸ್ವತಿಯ ಚಿತ್ರಗಳನ್ನು ಗಮನಿಸಿ, ಆಯಾಯ ದೇಶದ ಸಂಸ್ಕೃತಿಯನ್ನು ಅವಲಂಬಿಸಿ ಸರಸ್ವತಿಯ ಚಿತ್ರಲಕ್ಷಣಗಳು ರೂಪಗೊಂಡಿವೆ ಎಂಬ ತೀರ್ಮಾನಕ್ಕೆ ಬರಲಾಗಿದೆ.

ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಕಾಣದ ಈ ಕಲ್ಪನೆಯನ್ನು ಕುರಿತು, ಭಾರತೀಯ ಶಿಲ್ಪಶಾಸ್ತ್ರ ಹಾಗೂ ಎಲ್ಲ ಭಾರತೀಯ ಭಾಷೆಗಳಲ್ಲಿ ಕಂಡುಬರುವ ಸರಸ್ವತಿಯ ಸ್ವರೂಪವನ್ನು ಕುರಿತು ಇನ್ನೂ ವಿಸ್ತೃತ ಅಧ್ಯಯನದ ಅಗತ್ಯವಿದೆ. ಎಲ್ಲ ಭಾರತೀಯ ಭಾಷೆಗಳಲ್ಲೂ ಜಾನಪದ ಸಾಹಿತ್ಯವಿದ್ದು, ಅವುಗಳಲ್ಲಿ ವ್ಯಕ್ತವಾಗಿರುವ ಹಾಗೂ ವಿವಿಧ ಭಾಷೆಗಳನ್ನಾಡುವ ಜನರಲ್ಲಿ ಸರಸ್ವತಿಯ ಬಗ್ಗೆ ಇರುವ ನಂಬಿಕೆಗಳನ್ನು ಅರಿಯಬೇಕಾಗಿದೆ. ಭಾರತೀಯ ಸಂಸ್ಕೃತಿಯ ಪ್ರಭಾವವಿರುವ ಅನ್ಯದೇಶಗಳಲ್ಲಿರುವ ಸರಸ್ವತಿಯ ಸ್ವರೂಪದ ಬಗ್ಗೆ ಸಮಗ್ರವಾದ ಅಧ್ಯಯನದ ಅಗತ್ಯವಿದೆ. ಮಯನ್ಮಾರ್, ಜಾವಾ, ಮಲೇಷಿಯಾ, ಚೀನಾ ಮೊದಲಾದ ದೇಶಗಳಲ್ಲಿ ಸರಸ್ವತಿಯ ಆರಾಧನೆಯಿರುವುದರಿಂದ ಇಂತಹ ಅಧ್ಯಯನ ನಡೆಯಬೇಕಾಗಿದೆ. ಭಾರತದಾದ್ಯಂತ ಕಾಣಸಿಗುವ ಸರಸ್ವತಿಯ ಶಿಲ್ಪಗಳನ್ನು ಕುರಿತು ಸಮಗ್ರ ಅಧ್ಯಯನದ ಅಗತ್ಯವಿದೆ. ಗರ್ಭಗುಡಿಯಲ್ಲಿನ ಸರಸ್ವತಿಯ ಶಿಲ್ಪಗಳ ಲಕ್ಷಣಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದ್ದರೂ, ಪೂಜಾವಿಧಾನವನ್ನು ಸಂಪೂರ್ಣವಾಗಿ ಕೈಬಿಡಲಾಗಿದೆ. ಹಾಗೆಯೇ ಸರಸ್ವತಿಯ ಶಿಲ್ಪದ ಪ್ರತಿಷ್ಠಾಪನೆ, ಪೂಜಾಕ್ರಮ ಮುಂತಾದವನ್ನು ಕುರಿತು ಪ್ರತ್ಯೇಕವಾದ ಅಧ್ಯಯನ ನಡೆಸಬಹುದು. ಕರ್ನಾಟಕದಲ್ಲಿ ಸಿಗುವ ಹಲವಾರು ಸರಸ್ವತಿಯ ನೃತ್ಯಶಿಲ್ಪಗಳನ್ನು ನೃತ್ಯಶಾಸ್ತ್ರೀಯ ಹಿನ್ನೆಲೆಯಲ್ಲಿಯೇ ಅಧ್ಯಯನ ಮಾಡಬಹುದಾಗಿದೆ. ಇಂದು ಚಿತ್ರಕಲೆಯಂತೂ ವಿಶ್ವವ್ಯಾಪಿಯಾಗಿದೆ. ಚಿತ್ರಕಲೆಯಲ್ಲಿ ಸರಸ್ವತಿಯ ಬಹು ಆಯಾಮದ ಚಿತ್ರಣ ವ್ಯಕ್ತವಾಗಿದೆ. ಇವುಗಳನ್ನು ಕುರಿತು ಚಿತ್ರಕಲೆಯಲ್ಲಿ ವಿಶೇಷ ಪರಿಣಿತಿಯಿರುವವರು ಅಧ್ಯಯನ ನಡೆಸುವ ಅವಕಾಶವಿದೆ.

ಭಾರತೀಯ ಸಂಸ್ಕೃತಿಯಲ್ಲಿ ಸರಸ್ವತಿಯು ಪ್ರಮುಖ ದೇವತೆ ಎಂಬುದು ಅತ್ಯಂತ ಮುಖ್ಯವಾದ ಸಂಗತಿ. ಮಾನವ ಬದುಕಿಗೆ ಅತ್ಯಂತ ಅಗತ್ಯವಾದ ಮಾತು (ವಾಕ್) ದೈವತ್ವಕ್ಕೇರಿದ್ದು, ಸುಮಾರು ಮೂರುವರೆ ಸಾವಿರ ವರ್ಷಗಳಿಂದ ಜನಮಾನಸದಲ್ಲಿ ನೆಲೆಸಿದ್ದು ಗಮನಾರ್ಹ ಸಂಗತಿ. ಅಂತಹ ಒಂದು ಸುದೀರ್ಘ ಪ್ರಯಾಣದ ನಂತರವೂ ಸರಸ್ವತಿಯು ನಿತ್ಯನೂತನವಾಗಿರುವುದೇ ಸರಸ್ವತಿಯ ಮಹತ್ವವನ್ನು ಸಾರಿ ಹೇಳುತ್ತದೆ.

ಅನುಬಂಧಗಳು

ಅನುಬಂಧ -1

ಸರಸ್ವತೀ ಶಿಲ್ಪವಿವರಗಳು

ಈ ಅನುಬಂಧದಲ್ಲಿ ಶಿಲ್ಪಲಕ್ಷಣಗಳನ್ನು ಸ್ಪಷ್ಟಪಡಿಸಲಾಗಿದೆ. ಕೆಲವು ಸರಸ್ವತೀ ಶಿಲ್ಪಗಳ ಲಕ್ಷಣಗಳು ತಿಳಿಯದಷ್ಟು ಅಸ್ಪಷ್ಟವಾಗಿಯೂ ಸಣ್ಣದಾಗಿಯೂ ಇವೆ. ಅಂತಹವುಗಳನ್ನು ಈ ಪಟ್ಟಿಯಲ್ಲಿ ಕೊಟ್ಟಿಲ್ಲ. ದೇವಾಲಯದ ಕಾಲವನ್ನೇ ಶಿಲ್ಪದ ಕಾಲವೆಂದು ಪರಿಗಣಿಸಲಾಗಿದ್ದರೂ, ಒಂದು ದೇವಾಲಯದ ನಿರ್ಮಾಣಕ್ಕೆ ಹತ್ತಾರು ವರ್ಷಗಳು ಬೇಕಾಗುವುದರಿಂದ ಹಾಗೂ ದೇವಾಲಯ ನಿರ್ಮಾಣದ ಅವಧಿಯ ಯಾವುದೋ ಒಂದು ವರ್ಷದಲ್ಲಿ ಅಥವಾ ದೇವಾಲಯ ನಿರ್ಮಾಣವಾದ ನಂತರ ಕಾಲದಲ್ಲಿ ಸರಸ್ವತಿಯ ಶಿಲ್ಪವು ರಚಿತವಾಗಿರುವ ಸಾಧ್ಯತೆ ಇರುವುದರಿಂದ ಕಾಲವನ್ನು ಶತಮಾನದ ಲೆಕ್ಕದಲ್ಲಿ ನೀಡಲಾಗಿದೆ.

ಆಸೀನ ದ್ವಿಭುಜ ಸರಸ್ವತೀ ಶಿಲ್ಪಗಳು

ಊರು ಜಿಲ್ಲೆ	ದೇವಾಲಯ ಶಿಲ್ಪವಿರುವ ಜಾಗ	ಕ್ರಿ.ಶ. ಶತಮಾನ	ಹಸ್ತಮುದ್ರೆ/ಆಯುಧಗಳು/ವಸ್ತುಗಳು		ಇತರೆ
			1	2	
ಐಹೊಳೆ ಗದಗ	ರಾವಲ್ಫಡಿ ಗುಹಾಲಯ ಗಂಗಾಧರನ ಶಿಲ್ಪದ ಶಿರೋಭಾಗ	6/7			ಗಂಗೆ-ಯಮುನ-ಸರಸ್ವತಿ ಎನ್ನಲಾಗಿರುವ ಮೂರೂ ಸ್ತ್ರೀಶಿಲ್ಪಗಳು ದ್ವಿಭುಜ ಹೊಂದಿದ್ದು, ಕೈಗಳನ್ನು ಮುಗಿದಿರುತ್ತವೆ
ಬನವಾಸಿ ಉ.ಕ.	ಆದಿಮಾಧವ ಶಿಲ್ಪದಲ್ಲಿ	8/9	ಅಕ್ಷಮಾಲೆ ಅಭಯ	ಪುಸ್ತಕ	
ಚೌಡದಾನಪುರ ಹಾವೇರಿ	ಮುಕ್ತೇಶ್ವರ ಭಿತ್ತಿ	12	ಅಕ್ಷಮಾಲೆ	ಪುಸ್ತಕ	
ಚಂದ್ರಗಿರಿ ಕೊಪ್ಪಳ	ಚಂದಾಲಿಂಗೇಶ್ವರ ಪ್ರಾಕಾರದ ಗುಡಿ	13	ಲೇಖನಿ	ಕುಡಿಕೆ	
ಅರಸೀಕೆರೆ ಹಾಸನ	ಶಿವಾಲಯ ಮು.ಮಂ. ಭುವನೇಶ್ವರಿ	13	ಅಕ್ಷಮಾಲೆ	ಪುಸ್ತಕ	
ಹಂಪೆ ಬಳ್ಳಾರಿ	ವಿರೂಪಾಕ್ಷ ಪ್ರಾಕಾರದ ಬಲಬದಿ	16	ವೀಣೆ	ವೀಣೆ	
ವಿದ್ಯಾರಣ್ಯ ಬಳ್ಳಾರಿ	ಕಲಾಭವನದ ಪ್ರವೇಶ ದ್ವಾರ	20	ವೀಣೆ	ವೀಣೆ	ಮರದ ಶಿಲ್ಪ

ಆಸೀನ ಚತುರ್ಭುಜ ಸರಸ್ವತೀ ಶಿಲ್ಪಗಳು

ಊರು ಜಿಲ್ಲೆ	ದೇವಾಲಯ ಶಿಲ್ಪವಿರುವ ಜಾಗ	ಕಾಲ ಕ್ರಿ.ಶ.	ಹಸ್ತಮುದ್ರೆ/ಆಯುಧಗಳು/ವಸ್ತುಗಳು				ಇತರೆ
			1	2	3	4	
ಬಾಗಳಿ ಬಳ್ಳಾರಿ	ಮ್ಯೂಸಿಯಂ	10	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ಪ್ರಭಾವಳಿಯ ಮೇಲ್ಭಾಗ ಮುರಿದಿದೆ
ಉಕ್ಕುಂದ ಹಾವೇರಿ	ಕಲಿದೇವರಗುಡಿ ನವರಂಗ	10	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ಪೀಠದಲ್ಲಿ ಹಂಸವಿದೆ
ಹುಂಚ ಶಿವಮೊಗ್ಗ	ಪಾರ್ಶ್ವನಾಥ ಬಸದಿಯ ಆವರಣ	10/11	ಅಭಯ	ಅಂಕುಶ	ಪಾಶ	ಪುಸ್ತಕ	

ಊರು ಜಿಲ್ಲೆ	ದೇವಾಲಯ ಶಿಲ್ಪವಿರುವ ಜಾಗ	ಕಾಲ ಕ್ರಿ.ಶ.	ಹಸ್ತಮುದ್ರೆ/ಆಯುಧಗಳು/ವಸ್ತುಗಳು				ಇತರೆ
			1	2	3	4	
ಶೇಷಗಿರಿ ಹಾವೇರಿ	ರೇವೇಶ್ವರ ದೇವಾಲಯದ ನವರಂಗದ ಕಂಬ	11	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	
ಮಹಾಕೂಟ ಗದಗ	ಸರಸ್ವತಿ ಗುಡಿ	10/11	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ಪೀಠದಲ್ಲಿ ಹಂಸವಿದೆ
ಐಹೊಳೆ ಗದಗ	ವಿರೂಪಾಕ್ಷ ದೇವಾಲಯದ ಕಂಬ	11	ಅಕ್ಷಮಾಲೆ	ಪಾಶ	ಅಂಕುಶ	ಪುಸ್ತಕ	ಪೀಠದಲ್ಲಿ ಹಂಸವಿದೆ
ಬಾಳೀಹಳ್ಳಿ ಹಾವೇರಿ	ಸಿದ್ಧೇಶ್ವರ (ಗೌರೇಶ್ವರ) ಗುಡಿಯ ಬಯಲಿನಲ್ಲಿ	11	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	
ಮಾಡಿಯಾಳ ಗುಲ್ಬರ್ಗಾ	ಶಂಕರಲಿಂಗ ನಂದಿಮಂಟಪದ ಬಾಗಿಲುವಾಡದ ಲಲಾಟ	11	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	
ಮಾಡಿಯಾಳ ಗುಲ್ಬರ್ಗಾ	ಶಂಕರಲಿಂಗ ಬಲಬದಿಯ ಕಲ್ಯಾಣಮಂಟಪದ ಬಾಗಿಲುವಾಡದ ಲಲಾಟ	11	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	
ಕಲಕೇರಿ ಹಾವೇರಿ	ಜಯಸಿಂಗೇಶ್ವರ	11	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ಚತುಷ್ಕೂಟ ದೇವಾಲಯದ ದಕ್ಷಿಣದ ಗುಡಿ ಸರಸ್ವತಿಯದು. ಪೀಠದಲ್ಲಿ ಹಂಸವಿದೆ.
ಗಳಗನಾಥ ಹಾವೇರಿ	ಗಳಗೇಶ್ವರ ಅಂತರಾಳ	11	–	–	–	ಪುಸ್ತಕ	ಮೊದಲ ಮೂರು ಕೈಗಳು ಮುರಿದಿವೆ. ಪ್ರಭಾವಳಿಯಲ್ಲಿ ಚಾಮರಧಾರಿಣಿಯರಿದ್ದಾರೆ
ಸುಲೇಪೇಟೆ ಗುಲ್ಬರ್ಗಾ	ವೀರಭದ್ರ ನವರಂಗ	11	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	
ಸಂಗಮೇಶ್ವರ ಧಾರವಾಡ	ಕಲ್ಮೇಶ್ವರ/ಹೆಮ್ಮೇಶ್ವರ ನವರಂಗ	11	ಲೇಖನಿ	ಅಂಕುಶ	ಪಾಶ	ಕುಡಿಕೆ	ಇದೇ ಲಕ್ಷಣಗಳುಳ್ಳ ಪುರುಷ ಶಿಲ್ಪವೂ ಇಲ್ಲಿದೆ
ಗದಗ	ಸರಸ್ವತೀ	11	–	–	–	–	ಹಂಸಪೀಠ. ತೆರೆದ ಮುಖಮಂಟಪದಲ್ಲಿರುವ ನಾಲ್ಕು ಕಂಬಗಳು ಮತ್ತು ಭುನೇಶ್ವರಿಯ ಪಟ್ಟಿಗಳ ಮೇಲೆಲ್ಲಾ ಸರಸ್ವತಿಯ ನೂರಾರು ಕಿರು ಶಿಲ್ಪಗಳಿವೆ.
ಅಡಗೂರು ಹಾಸನ ಜಿ	ತ್ರಿಕೂಟ ದೇನಾಲಯದ ಎಡಗರ್ಭಗುಡಿ	11	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	ಪೀಠದಲ್ಲಿ ಹಂಸವಿದೆ. ತ್ರಿಕೂಟ ದೇವಲಯದ ಎಡಬದಿಯ ಗರ್ಭಗುಡಿಯಲ್ಲಿರುವ ಶಿಲ್ಪ
ಮೇದೂರು ಹಾವೇರಿ	ಸರಸ್ವತೀ	11	–	ಅಂಕುಶ	ಪಾಶ	ಪುಸ್ತಕ	ಪೀಠದಲ್ಲಿ ಹಂಸವಿದೆ
ಹೊಂಬಳಿ ಹಾವೇರಿ	ಬಸವಣ್ಣ(ರಾಮೇಶ್ವರ)	11	–	ಅಂಕುಶ	ಪಾಶ	–	ತಲೆ, ಪ್ರಭಾವಳಿ ಮುರಿದು ಹೋಗಿವೆ. ಪೀಠದಲ್ಲಿ ಹಂಸವಿದೆ

ಊರು ಜಿಲ್ಲೆ	ದೇವಾಲಯ ಶಿಲ್ಪವಿರುವ ಜಾಗ	ಕಾಲ ಕ್ರಿ.ಶ.	ಹಸ್ತಮುದ್ರೆ/ಆಯುಧಗಳು/ವಸ್ತುಗಳು				ಇತರೆ
			1	2	3	4	
ಕಳ್ಳಿಹಾಳ ಹಾವೇರಿ	ಬಸವಣ್ಣ	11	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	
ದೇವಿಹೊಸೂರು ಹಾವೇರಿ	ಮಾಳಚಿ (ಬನಶಂಕರಿ) ಗುಡಿಯ ಮುಂದಿರುವ ಮಕರತೋರಣ	11	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ಲಕ್ಷ್ಮೀ ಪಾರ್ವತಿಯರ ಜೊತೆ
ಆನೆಕೊಂಡಾ ದಾವಣಗೆರೆ	ಈಶ್ವರ ದೇವಾಲಯದ ನವರಂಗದ ಕಂಬ	11	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ಪೀಠದಲ್ಲಿ ಹಂಸವಿದೆ
ಆನೆಕೊಂಡಾ ದಾವಣಗೆರೆ	ಈಶ್ವರ ದೇವಾಲಯದ ಹಿಂಬದಿಯ ಪುಟ್ಟ ಗೂಡು	11	ಮು	ಅಂಕುಶ	ಪಾಶ	ಮು	
ಬಾರಕೂರು ದ.ಕ.	ಸೋಮನಾಥ ದೇವಾಲಯ	11/12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	
ಬನವಾಸಿ ಉ.ಕ.	ಮ್ಯೂಸಿಯಂ	11/12	ಅಕ್ಷಮಾಲೆ	–	–	ಪುಸ್ತಕ	ಹಿಂದಿನ ಎರಡು ಕೈಗಳು ಮುರಿದುಹೋಗಿವೆ. ಆದರಿಂದ ದ್ವಿಭುಜ ಶಿಲ್ಪದಂತೆ ಕಾಣುತ್ತದೆ
ಇಟಗಿ ಕೊಪ್ಪಳ	ಮಹಾದೇವ ನವರಂಗದ ಗೂಡಿನ ಲಲಾಟದಲ್ಲಿ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	
ಇಟಗಿ ಕೊಪ್ಪಳ	ಮಹಾದೇವ ದೇವಾಲಯದ ಪೀಠಭಾಗ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	
ಇಟಗಿ ಕೊಪ್ಪಳ	ಮಹಾದೇವ ದೇವಾಲಯದ ಎಡಬದಿಗಿರುವ ಸಣ್ಣ ಗುಡಿಯ ಪೀಠಭಾಗ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	
ಸಾಲಿಗ್ರಾಮ ಮೈಸೂರು	ಆದಿನಾಥ ಬಸದಿಯ ನವರಂಗ	12	ಅಭಯ	ಅಕ್ಷಮಾಲೆ	ಕಳಶ	ಪುಸ್ತಕ	
ನಿಡುಗುಂದಿ ಗದಗ	ಬಸವಣ್ಣ/ಕೇಶವಾದಿ ತ್ಯ ಅಂತರಾಳ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ಪಂಚಲಿಂಗಗಳ ಜೊತೆಯಲ್ಲಿದ್ದ ಸರಸ್ವತೀ ಶಿಲ್ಪವನ್ನು ಬೇರ್ಪಡಿಸಿ ಅಂತರಾಳದಲ್ಲಿಟ್ಟಿದ್ದಾರೆ
ಹಾನಗಲ್ ಹಾವೇರಿ	ತಾರಕೇಶ್ವರ ದೇವಾಲಯದ ಕಂಬ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	
ಚೌಡದಾನಪುರ ಹಾವೇರಿ	ಮುಕ್ತೇಶ್ವರ ಭಿತ್ತಿ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	
ಬೇಲೂರು ಹಾಸನ	ಚನ್ನಕೇಶವ ಮುಂಭಾಗದ ಬಲಬದಿಯ ದೇವಕೋಷ್ಠದ ಲಲಾಟ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ದೇವಕೋಷ್ಠದಲ್ಲಿ ಪದ್ಮಾಸೀನ ಚತುರ್ಭುಜ ಕೇಶವ ಮೂರ್ತಿಯಿದೆ

ಊರು ಜಿಲ್ಲೆ	ದೇವಾಲಯ ಶಿಲ್ಪವಿರುವ ಜಾಗ	ಕಾಲ ಕ್ರಿ.ಶ.	ಹಸ್ತಮುದ್ರೆ/ಆಯುಧಗಳು/ವಸ್ತುಗಳು				ಇತರೆ
			1	2	3	4	
ಬೇಲೂರು ಹಾಸನ	ಚನ್ನಕೇಶವ ಭಿತ್ತಿಯ ಲತಾಪಟ್ಟಿಯ ಒಂದು ಸುರುಳಿಯೊಳಗೆ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ಪದ್ಮಾಸೀನ
ಬೇಲೂರು ಹಾಸನ	ಚನ್ನಕೇಶವ ದಕ್ಷಿಣ ದ್ವಾರದ ದೇವಕೋಷ್ಠದ ಲಲಾಟ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	
ಬೇಲೂರು ಹಾಸನ	ಚನ್ನಕೇಶವ ಹೊರಭಿತ್ತಿ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ಪೀಠದಲ್ಲಿ ಹಂಸವಿದೆ
ಬೇಲೂರು ಹಾಸನ	ಚನ್ನಕೇಶವ ಹೊರಭಿತ್ತಿ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	
ಬೇಲೂರು ಹಾಸನ	ಕಪ್ಪೆಚನ್ನಿಗರಾಯ ನವರಂಗದ ಗೂಡು	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	
ಬಾಗಳಿ ಬಳ್ಳಾರಿ	ಮುಖಮಂಟಪದ ಕಂಬ	12	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	ಇಕ್ಕೆಲಗಳಲ್ಲಿ ಚಾಮರಧಾರಿಣಿಯರಿದ್ದಾರೆ ಪೀಠದಲ್ಲಿ ಹಂಸವಿದೆ ಪ್ರಭಾವಳಿಯಲ್ಲಿ ಇಬ್ಬರು ದೇವತೆಗಳಿದ್ದಾರೆ.
ಬಾಗಳಿ ಬಳ್ಳಾರಿ	ಮ್ಯೂಸಿಯಂ	12	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	
ಬಾಗಳಿ ಬಳ್ಳಾರಿ	ಮ್ಯೂಸಿಯಂ	12	ಅಕ್ಷಮಾಲೆ	ಅಂಕುಶ	ಪಾಶ	ಕಳಶ	ತ್ರಿಮುಖ ದೇವತೆ
ತಡಕಲ್ ಗುಲ್ಬರ್ಗಾ	ಜಿನಮಂದಿರ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ಹಂಸಪೀಠವಿದೆ
ನಾವಳ್ಳಿ ಧಾರವಾಡ	ಕಲ್ಮೇಶ್ವರ ಪೂರ್ವದ್ವಾರದ ಲಲಾಟ	12	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	
ನಾವಳ್ಳಿ ಧಾರವಾಡ	ಕಲ್ಮೇಶ್ವರ ದಕ್ಷಿಣದ್ವಾರದ ಲಲಾಟ	12	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	
ಹಳೇಬೀಡು ಹಾಸನ	ಹೊಯ್ಸಳೇಶ್ವರ ದೇವಾಲಯದ ಭಿತ್ತಿ	12	ವೀಣೆ	–	ವೀಣೆ	ಪುಸ್ತಕ	ಬಲಭಾಗಕ್ಕೆ ಆಸೀನ ಬ್ರಹ್ಮನ ಶಿಲ್ಪವಿದೆ
ಹಳೇಬೀಡು ಹಾಸನ	ಹೊಯ್ಸಳೇಶ್ವರ ದೇವಾಲಯದ ಭಿತ್ತಿ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ಇಕ್ಕೆಲಗಳಲ್ಲಿ ಚಾಮರಧಾರಿಣಿಯರಿದ್ದಾರೆ
ಹಳೇಬೀಡು ಹಾಸನ	ಹೊಯ್ಸಳೇಶ್ವರ ಗರ್ಭಗುಡಿಯ ಮುಂದೆ ಎಡಭಾಗಕ್ಕಿರುವ ಕೋಷ್ಠದ ಶಿಖರದ ಮಧ್ಯದ ಹಂತ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	

ಊರು ಜಿಲ್ಲೆ	ದೇವಾಲಯ ಶಿಲ್ಪವಿರುವ ಜಾಗ	ಕಾಲ ಕ್ರಿ.ಶ.	ಹಸ್ತಮುದ್ರೆ/ಆಯುಧಗಳು/ವಸ್ತುಗಳು				ಇತರೆ
			1	2	3	4	
ಹಳೇಬೀಡು ಹಾಸನ	ಹೊಯ್ಸಳೇಶ್ವರ ಗರ್ಭಗುಡಿಯ ಮುಂದೆ ಬಲಭಾಗಕ್ಕಿರುವ ಕೋಷ್ಠದ ಶಿಖರ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ಪದ್ಮಾಸನ
ಹಳೇಬೀಡು ಹಾಸನ	ಶಾಂತಲೇಶ್ವರ ಗರ್ಭಗುಡಿಯ ಮುಂದೆ ಎಡಭಾಗಕ್ಕಿರುವ ಕೋಷ್ಠದ ಶಿಖರ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ಪದ್ಮಾಸನ
ಹಳೇಬೀಡು ಹಾಸನ	ಶಾಂತಲೇಶ್ವರ ಗರ್ಭಗುಡಿಯ ಮುಂದೆ ಬಲಭಾಗಕ್ಕಿರುವ ಕೋಷ್ಠದ ಶಿಖರ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ಪದ್ಮಾಸನ
ಹಳೇಬೀಡು ಹಾಸನ	ಮ್ಯೂಸಿಯಂ	12	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	
ಹಳೇಬೀಡು ಹಾಸನ	ಮ್ಯೂಸಿಯಂ	12	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	
ಹಳೇಬೀಡು ಹಾಸನ	ಕೇದಾರೇಶ್ವರ ನವರಂಗದ ಎಡಭಾಗದಲ್ಲಿರುವ ಕೋಷ್ಠದ ಶಿಖರ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ಪದ್ಮಾಸನ ವಿಗ್ರಹ ಪೂರ್ಣವಾಗಿಲ್ಲ
ಹಳೇಬೀಡು ಹಾಸನ	ಕೇದಾರೇಶ್ವರ ನವರಂಗದ ಬಲಭಾಗದಲ್ಲಿರುವ ಕೋಷ್ಠದ ಶಿಖರ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ಪದ್ಮಾಸನ
ಮರಳೆ ಚಿಕ್ಕಮಗಳೂರು	ಸಿದ್ಧೇಶ್ವರ ದೇವಾಲಯದ ಪ್ರವೇಶ ದ್ವಾರದ ಮಕರತೋರಣ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ಆನೆಗಳ ನಡುವೆ ಉಮಾಮಹೇಶ್ವರರಿದ್ದು ಬಲಗಡೆ ಗಣಪತಿಯಿದ್ದರೆ ಎಡಗಡೆ ಸರಸ್ವತೀ ಶಿಲ್ಪ ಇದೆ
ಕಣಿವೆ ಸಿದ್ಗೇರಿ ಹಾವೇರಿ	ಜಮದಗ್ನಿ ರಾಮೇಶ್ವರ ದೇವಾಲಯದ ಮುಂಭಾಗದ ದಿಬ್ಬ	12	–	ಅಂಕುಶ	ಪಾಶ	ಪುಸ್ತಕ	ಶಿಲ್ಪ ಎರಡು ತುಂಡಾಗಿದೆ. ಒಂದು ಕೈ ಮುರಿದಿದೆ
ಗೊರೂರು ಹಾಸನ	ತ್ರಿಕೂಟೇಶ್ವರ ದೇವಾಲಯದ ನವರಂಗ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	
ಮೋಟೆಬೆನ್ನೂರು ಹಾವೇರಿ	ಭುಜಂಗೇಶ್ವರ ನವರಂಗ	12	–	ಅಂಕುಶ	ಪಾಶ	ಪುಸ್ತಕ	ಒಂದು ಕೈ ಮುರಿದಿದೆ
ಕೋರವಂಗಲ ಹಾಸನ	ಬೂಚೇಶ್ವರ ನವರಂಗದ ಗೂಡು	12	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	
ಬಗ್ಗವಳ್ಳಿ ಚಿಕ್ಕಮಗಳೂರು	ಕೇಶವ ಸರಸ್ವತೀ ಗರ್ಭಗುಡಿ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ಪೀಠದಲ್ಲಿ ಹಂಸವಿದೆ

ಊರು ಜಿಲ್ಲೆ	ದೇವಾಲಯ ಶಿಲ್ಪವಿರುವ ಜಾಗ	ಕಾಲ ಕ್ರಿ.ಶ.	ಹಸ್ತಮುದ್ರೆ/ಆಯುಧಗಳು/ವಸ್ತುಗಳು				ಇತರೆ
			1	2	3	4	
ಬಗ್ಗವಳ್ಳಿ ಚಿಕ್ಕಮಗಳೂರು	ಕೇಶವ ಸರಸ್ವತೀ ಗರ್ಭಗುಡಿಯ ಲಲಾಟ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ಇಕ್ಕಲಗಳಲ್ಲಿ ಚಾಮರಧಾರಿಯರಿದ್ದಾರೆ
ನಾಗಲಾಪುರ ಮಂಡ್ಯ	ಚೆನ್ನಕೇಶವ ದಕ್ಷಿಣ ಭಿತ್ತಿ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	
ನಾಗಲಾಪುರ ಮಂಡ್ಯ	ಕೇದಾರೇಶ್ವರ ಉತ್ತರದ ಭಿತ್ತಿ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	
ಶ್ರವಣಬೆಳಗೊಳ	ಅಕ್ಕನ ಬಸದಿ ಸುಖನಾಸಿಯ ಬಲಬದಿ	12	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	
ಶ್ರವಣಬೆಳಗೊಳ	ಅಕ್ಕನ ಬಸದಿ ಸುಖನಾಸಿಯ ಎಡಬದಿ	12	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	ಚಾಮರಧಾರಿಯರಿದ್ದಾರೆ
ಅಮೃತಾಪುರ ಚಿಕ್ಕಮಗಳೂರು	ಅಮೃತೇಶ್ವರ ಮುಖಮಂಟಪದ ಭುವನೇಶ್ವರಿ	12	ವೀಣೆ	ಅಂಕುಶ	ಪಾಶ	ವೀಣೆ	ಇದೇ ರೀತಿಯ ಇನ್ನೊಂದು ಶಿಲ್ಪ ಭುವನೇಶ್ವರಿಯಲ್ಲಿಯೇ ಇದೆ
ಅಮೃತಾಪುರ ಚಿಕ್ಕಮಗಳೂರು	ಅಮೃತೇಶ್ವರ ಮುಖಮಂಟಪದ ಭುವನೇಶ್ವರಿ	12	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	
ಕಿಕ್ಕೇರಿ ಮಂಡ್ಯ	ಬ್ರಹ್ಮೇಶ್ವರ ದೇವಾಲಯದ ಭಿತ್ತಿ	12	ಅಕ್ಷಮಾಲೆ	–	–	ಪುಸ್ತಕ	ಅಕ್ಷಮಾಲೆ ಹಿಡಿದರುವ ಕೈ ಉಪದೇಶ ಮುದ್ರೆಯಲ್ಲಿದೆ. ಎಡಬದಿಗೆ ಸಣ್ಣಪ್ರಮಾಣದ ಪುಸ್ತಕ ಹಿಡಿದಿರುವ ಸ್ತ್ರೀಶಿಲ್ಪವಿದೆ. ಎರಡು ಕೈಗಳು ಮುರಿದಿವೆ.
ಕಿಕ್ಕೇರಿ ಮಂಡ್ಯ	ಬ್ರಹ್ಮೇಶ್ವರ ದೇವಾಲಯದ ಶಿಖರ	12		ಅಂಕುಶ	ಪಾಶ	ಪುಸ್ತಕ	ಮೊದಲ ಕೈ ವಿಶ್ರಾಂತ ಸ್ಥಿತಿಯಲ್ಲಿ ತೊಡೆಯ ಮೇಲಿದೆ
ಜಿನನಾಥಪುರ ಹಾಸನ	ಶಾಂತಿನಾಥ ಬಸದಿಯ ಭಿತ್ತಿ	12	ಅಭಯ	ಅಂಕುಶ	ಪರಶು	ಫಲ	
ಜಿನನಾಥಪುರ ಹಾಸನ ಜಿ	ಶಾಂತಿನಾಥ ಬಸದಿಯ ಭಿತ್ತಿ	13	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	ಇದೇ ಲಕ್ಷಣಗಳನ್ನುಳ್ಳ ಇನ್ನೆರಡು ಶಿಲ್ಪಗಳಿವೆ
ತಂಗಲಿ ಚಿಕ್ಕಮಗಳೂರು	ಈಶ್ವರ ದೇವಾಲಯ	13	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	
ಶೃಂಗೇರಿ ಚಿಕ್ಕಮಗಳೂರು	ಶಾರದಾ		ಅಭಯ	ಅಕ್ಷಮಾಲೆ	ಸುಧಾ– ಬಾಂಡ	ಪುಸ್ತಕ	
ಅಬ್ಬಲೂರು ಗದಗ	ಬ್ರಹ್ಮೇಶ್ವರ/ಸರಸ್ವತೀ	13	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ಮಕರತೋರಣದಲ್ಲಿ ಯಕ್ಷರು, ಚಾಮರಧಾರಿಣಿಯರೂ ಇದ್ದಾರೆ.
ಮಾಧನಬಾವಿ ಧಾರವಾಡ	ರಾಮಲಿಂಗ ದೇವಾಲಯದ ಹತ್ತಿರ	13	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	
ಅಗ್ರಹಾರಬೆಳಗುಲಿ ಹಾಸನ	ಕೇಶವೇಶ್ವರ ನವರಂಗ	13	ಅಕ್ಷಮಾಲೆ ಚಿನ್ಮುದ್ರಾ	ಅಂಕುಶ	ಪವಿತ್ರ	ಕಳಶ	ಪೀಠದಲ್ಲಿ ಹಂಸವಿದೆ
ಅರಸೀಕೆರೆ ಹಾಸನ	ಶಿವಾಲಯದ ಭಿತ್ತಿ	13	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	

ಊರು ಜಿಲ್ಲೆ	ದೇವಾಲಯ ಶಿಲ್ಪವಿರುವ ಜಾಗ	ಕಾಲ ಕ್ರಿ.ಶ.	ಹಸ್ತಮುದ್ರೆ/ಆಯುಧಗಳು/ವಸ್ತುಗಳು				ಇತರೆ
			1	2	3	4	
ಅರಸೀಕೆರೆ ಹಾಸನ	ದೇವಾಲಯದ ಹೊರ ಪ್ರಾಕಾರ	13	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	
ನಂದಿತಾವರೆ ದಾವಣಗೆರೆ	ಮಾಣಿಕೇಶ್ವರ ದೇವಾಲಯದ ನವರಂಗ	13	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	ಪೀಠದಲ್ಲಿ ಹಂಸವಿದೆ
ನಿಡುಗುಂದಿ ಗದಗ	ದಾಸಿಮೇಶ್ವರ ಮುಂಭಾಗದಲ್ಲಿರುವ ಶಾಸನದ ಶಿರೋಭಾಗ	13	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	ಜೊತೆಗೆ ಲಿಂಗ ಮತ್ತು ವಿಷ್ಣುವಿನ ಶಿಲ್ಪವಿದೆ ಗರ್ಭಗುಡಿಯಲ್ಲಿ ಒಂದೇ ಪೀಠದಲ್ಲಿ ಹಂಸ ನಂದಿ ಗರುಡ ಇರುವುದು ವಿಶೇಷ
ಬಸರಾಳು ಮಂಡ್ಯ	ಮಲ್ಲಿಕಾರ್ಜುನ ನವರಂಗದ ಗೂಡು	13	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	ಪೀಠದಲ್ಲಿ ಹಂಸವಿದೆ
ಬಸರಾಳು ಮಂಡ್ಯ	ಮಲ್ಲಿಕಾರ್ಜುನ ನವರಂಗದ ಗೂಡು	13	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	
ಬಸರಾಳು ಮಂಡ್ಯ	ಮಲ್ಲಿಕಾರ್ಜುನ ನಂದಿಮಂಟಪ	13	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	
ಹಾರನಹಳ್ಳಿ ಹಾಸನ	ಲಕ್ಷ್ಮೀನರಸಿಂಹ ನವರಂಗದ ಗೂಡು	13	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	ಪೀಠದಲ್ಲಿ ಹಂಸವಿದೆ
ಹಾರನಹಳ್ಳಿ ಹಾಸನ	ಸೋಮೇಶ್ವರ ನವರಂಗದ ಗೂಡು	13	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	ಪೀಠದಲ್ಲಿ ಹಂಸವಿದೆ
ನುಗ್ಗೆಹಳ್ಳಿ ಹಾಸನ	ಸದಾಶಿವ ಸುಖನಾಸಿಯ ದ್ವಾರದ ಲಲಾಟ	13	ಅಕ್ಷಮಾಲೆ	ಅಂಕುಶ	ಪವಿತ್ರ	ಕಳಶ	ಕೆಳಗಿನ ಪಟ್ಟಿಯಲ್ಲಿ ಗಣಪತಿಯಿದೆ
ನುಗ್ಗೆಹಳ್ಳಿ ಹಾಸನ	ಲಕ್ಷ್ಮಿನರಸಿಂಹ ದೇವಾಲಯದ ಭಿತ್ತಿ	13	ಅಕ್ಷಮಾಲೆ	ಅಂಕುಶ	ಪಾಶ	ಕಳಶ	
ನುಗ್ಗೆಹಳ್ಳಿ ಹಾಸನ	ಲಕ್ಷ್ಮಿನರಸಿಂಹ ದೇವಾಲಯದ ಭಿತ್ತಿ	13	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	
ನುಗ್ಗೆಹಳ್ಳಿ ಹಾಸನ	ಲಕ್ಷ್ಮಿನರಸಿಂಹ ದೇವಾಲಯದ ಭಿತ್ತಿ	13	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ಗಣಪತಿ–ಸರಸ್ವತೀ ನಡುವಿರುವ ಹಯಗ್ರೀವನ ಕೈಯಲ್ಲಿ ಪುಸ್ತಕವಿದೆ
ಮೊಸಳೆ ಹಾಸನ	ನಾಗೇಶ್ವರ ನವರಂಗ	13	ಅಕ್ಷಮಾಲೆ ಚಿನ್ಮುದ್ರೆ	ಅಂಕುಶ	ಪವಿತ್ರ	ಪುಸ್ತಕ	ಪೀಠದಲ್ಲಿ ಹಂಸವಿದೆ
ಮೊಸಳೆ ಹಾಸನ	ನಾಗೇಶ್ವರ ನವರಂಗ	13	ಅಕ್ಷಮಾಲೆ ಚಿನ್ಮುದ್ರೆ	ಅಂಕುಶ	ಪವಿತ್ರ	ಪುಸ್ತಕ	ಪೀಠದಲ್ಲಿ ಹಂಸವಿದೆ
ಮೊಸಳೆ ಹಾಸನ	ನಾಗೇಶ್ವರ ಉತ್ತರದ ಭಿತ್ತಿ	13	ಅಕ್ಷಮಾಲೆ ಚಿನ್ಮುದ್ರೆ	ಅಂಕುಶ	ಪವಿತ್ರ	ಪುಸ್ತಕ	ತ್ರಿಮುಖ ದೇವತೆ
ಮೊಸಳೆ ಹಾಸನ	ನಾಗೇಶ್ವರ ಉತ್ತರದ ಭಿತ್ತಿ	13	ಚಿನ್ಮುದ್ರೆ	ತ್ರಿಶೂಲ	ಡಮರುಗ	ಪುಸ್ತಕ	ದುರ್ಗೆಯ ಸರಸ್ವತೀಸ್ವರೂಪ
ಸಿಂಧಘಟ್ಟ ಮಂಡ್ಯ	ಲಕ್ಷ್ಮೀನಾರಾಯಣ ನವರಂಗ	13	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	
ಧಾರವಾಡ	ಕನ್ನಡ ರಿಸರ್ಚ್ ಇನಸ್ಟಿಟ್ಯೂಟ್, ಮ್ಯೂಸಿಯಂ	13	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	ಧಾರವಾಡ ಜಿಲ್ಲೆ ಬಾಳೂರಿನಿಂದ ತಂದಿರುವ ಶಿಲ್ಪ, ಪೀಠದಲ್ಲಿ ಹಂಸವಿದೆ.
ಉದ್ರಿ ಶಿವಮೊಗ್ಗ	ಜೈನ ಬಸದಿ	13	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	
ಬಾಳಕುದುರು ಉಡುಪಿ	ಮಠ	13	ಅಭಯ	ಅಂಕುಶ	ಪಾಶ	ಪುಸ್ತಕ	ಮರದ ಶಿಲ್ಪ

ಊರು ಜಿಲ್ಲೆ	ದೇವಾಲಯ ಶಿಲ್ಪವಿರುವ ಜಾಗ	ಕಾಲ ಕ್ರಿ.ಶ.	ಹಸ್ತಮುದ್ರೆ/ಆಯುಧಗಳು/ವಸ್ತುಗಳು				ಇತರೆ
			1	2	3	4	
ಹೊಸಹೊಳಲು ಮಂಡ್ಯ	ಲಕ್ಷ್ಮೀನರಸಿಂಹ ದೇವಾಲಯದ ಭಿತ್ತಿ	13	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	
ಹೊಸಹೊಳಲು ಮಂಡ್ಯ	ಲಕ್ಷ್ಮೀನರಸಿಂಹ ದೇವಾಲಯದ ಭಿತ್ತಿ	13	ಅಕ್ಷಮಾಲೆ ಚಿನ್ಮುದ್ರೆ	ಅಂಕುಶ	ಪವಿತ್ರ	ಪುಸ್ತಕ	
ಕುರುವತ್ತಿ ಬಳ್ಳಾರಿ	ಮಲ್ಲಿಕಾರ್ಜುನ ನವರಂಗದ ಕಂಬ	13	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	
ಮಾಗಳ ಬಳ್ಳಾರಿ	ಕೇಶವ ದೇವಾಲಯದ ಭಿತ್ತಿ	13	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ಇದೇ ಲಕ್ಷಣಗಳನ್ನುಳ್ಳ ಇನ್ನೊಂದು ಶಿಲ್ಪವಿದೆ
ಹಿರೆಹಡಗಲಿ ಬಳ್ಳಾರಿ	ಕಲ್ಲೇಶ್ವರ ನವರಂಗ	13	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ಪೀಠದಲ್ಲಿ ಹಂಸವಿದೆ ಕೆಳಭಾಗದಲ್ಲಿ ಶಾಸನವಿದೆ
ಮೊಸಳೆ ಹಾಸನ	ನಾಗೇಶ್ವರ ಉತ್ತರದ ಭಿತ್ತಿ	13	ಅಕ್ಷಮಾಲೆ	ಮುರಿದಿದೆ	ಮುರಿದಿದೆ	ಪುಸ್ತಕ	ಮೂರುಮುಖದ ದೇವತೆ
ಮೊಸಳೆ ಹಾಸನ	ಚನ್ನಕೇಶವ ನವರಂಗದ ಗೂಡು	13	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	ಪೀಠದಲ್ಲಿ ಹಂಸವಿದೆ
ಜಾವಗಲ್ಲು ಹಾಸನ	ಲಕ್ಷ್ಮೀನರಸಿಂಹ ಉತ್ತರ ಭಿತ್ತಿ	13	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	ಇದೇ ಲಕ್ಷಣಗಳನ್ನುಳ್ಳ ಇನ್ನೊಂದು ಶಿಲ್ಪವಿದೆ
ಬೈಂದೂರು ಉಡುಪಿ	ಶನೇಶ್ವರ ದೇವಾಲಯ	13	ಮು	ಅಂಕುಶ	ಪವಿತ್ರ	ಪುಸ್ತಕ	ಪೀಠದಲ್ಲಿ ಹಂಸವಿದೆ ಚಾಮರಧಾರಿಣಿಯರಿದ್ದಾರೆ. ಈ ಶಿಲ್ಪವನ್ನು ಬೇರೆಡೆಯಿಂದ ತಂದು ಇಲ್ಲಿಡಲಾಗಿದೆ.
ಹಿರೇಮಗಳೂರು ಚಿಕ್ಕಮಗಳೂರು	ರಾಮೇಶ್ವರ ಹಿಂಬದಿಯ ತುಳಸಿಕಟ್ಟೆಯ ಹತ್ತಿರ	13	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	
ಕಳಸಾಪುರ ಚಿಕ್ಕಮಗಳೂರು	ಮಲ್ಲಿಕಾರ್ಜುನ ನವರಂಗ	13	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	
ನಾಗಮಂಗಲ ಮಂಡ್ಯ	ಈಶ್ವರ ಗುಡಿಯ ಪಕ್ಕದ ಗುಡಿ	13	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ಪೀಠದಲ್ಲಿ ಹಂಸವಿದೆ
ಅಂಗೂರು ಬಳ್ಳಾರಿ	ಕಲ್ಲೇಶ್ವರ ಲಲಾಟಬಿಂಬ	13	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	ನರಸಿಂಹನ ಇಕ್ಕೆಲಗಳಲ್ಲಿ ಲಕ್ಷ್ಮಿ & ಸರಸ್ವತೀ ಇರುವುದು ವಿಶೇಷ
ಹೊಸಹೊಳಲು ಮಂಡ್ಯ	ಲಕ್ಷ್ಮೀನರಸಿಂಹ ದೇವಾಲಯದ ಭಿತ್ತಿ	13	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	
ದೇವನಹಳ್ಳಿ ಬೆಂಗಳೂರು ಗ್ರಾ	ನವರಂಗ	14/15	ವೀಣೆ	ಪದ್ಮ	ವೀಣೆ	ಪುಸ್ತಕ	ಎಡಬದಿಗೆ ಬ್ರಹ್ಮನ ಶಿಲ್ಪವಿದೆ
ವಿಜಯಪುರ ಬೆಂಗಳೂರು ಗ್ರಾ	ಓಂಕಾರೇಶ್ವರ ಗುರಪ್ಪಸ್ವಾಮಿ ಮಠ	14/15	ವೀಣೆ	ಪದ್ಮ	ಪುಸ್ತಕ	ವೀಣೆ	
ಶ್ರವಣಬೆಳಗೊಳ ಹಾಸನ	ಭಂಡಾರಿ ಬಸದಿ	15	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	ಹಂಸವಾಹನವಿದೆ.
ತಲಕಾಡು ಮೈಸೂರು	ವೈದ್ಯನಾಥೇಶ್ವರ ದಕ್ಷಿಣದ್ವಾರದ ಎಡಗೋಡೆ	15	ಅಭಯ	ಅಂಕುಶ	ಕಳಶ	ಪುಸ್ತಕ	ಪುಸ್ತಕದಲ್ಲಿ 'ಸರಸ್ವತಿ' ಎಂದು ಕೆತ್ತಲಾಗಿದೆ
ಮಣ್ಣೂರು ದ.ಕ.	ನರಸಿಂಹ ದೇವಾಲಯ	15	ಅಭಯ	ಅಕ್ಷ– ಮಾಲೆ	ಕಳಶ	ಪುಸ್ತಕ	

ಊರು ಜಿಲ್ಲೆ	ದೇವಾಲಯ ಶಿಲ್ಪವಿರುವ ಜಾಗ	ಕಾಲ ಕ್ರಿ.ಶ.	ಹಸ್ತಮುದ್ರೆ/ಆಯುಧಗಳು/ವಸ್ತುಗಳು				ಇತರೆ
			1	2	3	4	
ಕನಕಗಿರಿ ಕೊಪ್ಪಳ	ಲಕ್ಷ್ಮಿನರಸಿಂಹ ದೇವಾಲಯದ ಮುಂದಿರುವ ಮಟ್ಟ ಗುಡಿ	15	ವೀಣೆ	ಪದ್ಮ	ಪುಸ್ತಕ	ವೀಣೆ	
ಶ್ರೀರಂಗಪಟ್ಟಣ ಮಂಡ್ಯ	ರಂಗನಾಥ ಮುಮಂ ಕಂಬ	16	ವೀಣೆ	ಪದ್ಮ	ವೀಣೆ	ಪುಸ್ತಕ	
ಶ್ರವಣಬೆಳಗೊಳ ಹಾಸನ	ಜೈನ ಮಠ	18	ವೀಣೆ	ಕಮಲ	–	ವೀಣೆ	ಗಾರೆಶಿಲ್ಪ. ಒಂದು ಕೈ ಮುರಿದಿದೆ. ಹಂಸವಿದೆ
ಮೈಸೂರು	ಚಾಮುಂಡಿ ಬೆಟ್ಟದಲ್ಲಿರುವ ರಥ	18/19	ಅಕ್ಷಮಾಲೆ ಅಭಯ	ಅಂಕುಶ	ಪವಿತ್ರ	ಪುಸ್ತಕ	
ವಿದ್ಯಾರಣ್ಯ ಬಳ್ಳಾರಿ	ಕಲಾಭವನದ ಪ್ರವೇಶ ದ್ವಾರದ ಬಾಗಿಲುವಾಡ	21 (2003)	ವೀಣೆ	ಅಕ್ಷ-ಮಾಲೆ	ಪುಸ್ತಕ	ವೀಣೆ	ಮರದ ಶಿಲ್ಪ

ಆಸೀನ ಷಡ್ಭುಜ ಸರಸ್ವತೀ ಶಿಲ್ಪಗಳು

ಊರು ಜಿಲ್ಲೆ	ದೇವಾಲಯ ಶಿಲ್ಪವಿರುವ ಜಾಗ	ಕಾಲ ಕ್ರಿ.ಶ.	ಹಸ್ತಮುದ್ರೆ/ಆಯುಧಗಳು/ವಸ್ತುಗಳು						ಇತರೆ
			1	2	3	4	5	6	
ಹಳೇಬೀಡು ಹಾಸನ	ಹೊಯ್ಸಳೇಶ್ವರ ದೇವಾಲಯದ ಭಿತ್ತಿ	12	ವೀಣೆ	ಅಕ್ಷ-ಮಾಲೆ	ಕಮಲ	ಪವಿತ್ರ	ಫಲ	ವೀಣೆ	ವೀಣೆ ದಂಡದಂತಿದೆ. ಅಲಂಕೃತ ದಂಟಿನ ಕಮಲದಂತೆ ಕಾಣುತ್ತದೆ ಅಂಕುಶ ಇಲ್ಲ.
ನುಗ್ಗೆಹಳ್ಳಿ ಹಾಸನ	ಲಕ್ಷ್ಮಿನರಸಿಂಹ ನವರಂಗ ದ್ವಾರದ ಲಲಾಟ	13	ವೀಣೆ	ಪದ್ಮ	ಅಕ್ಷ-ಮಾಲೆ	ವೀಣೆ	–	ಪುಸ್ತಕ	ಸಾಮಾನ್ಯವಾಗಿ ಗಜಲಕ್ಷ್ಮಿ ಇರುವ ಜಾಗದಲ್ಲಿ ಸರಸ್ವತೀ ಇವೆ

ಸ್ಥಾನಕ ದ್ವಿಭುಜ ಸರಸ್ವತೀ ಶಿಲ್ಪಗಳು

ಊರು ಜಿಲ್ಲೆ	ದೇವಾಲಯ ಶಿಲ್ಪವಿರುವ ಜಾಗ	ಕಾಲ ಕ್ರಿ.ಶ.	ಹಸ್ತಮುದ್ರೆ/ಆಯುಧಗಳು/ವಸ್ತುಗಳು		ಇತರೆ
			1	2	
ಮೊಸಳೆ ಹಾಸನ	ನಾಗೇಶ್ವರ ಪೂರ್ವ ಬಿತ್ತಿ	13	ಅಕ್ಷಮಾಲೆ	ಪುಸ್ತಕ	ತ್ರಿಮುಖಿ ಸರಸ್ವತೀ. ಪುಸ್ತಕವಿರುವ ಕೈ ಛಿನ್ನವಾಗಿದೆ

ಸ್ಥಾನಕ ಚತುರ್ಭುಜ ಸರಸ್ವತೀ ಶಿಲ್ಪಗಳು

ಊರು ಜಿಲ್ಲೆ	ದೇವಾಲಯ ಶಿಲ್ಪವಿರುವ ಜಾಗ	ಕಾಲ ಕ್ರಿ.ಶ.	ಹಸ್ತಮುದ್ರೆ/ಆಯುಧಗಳು/ವಸ್ತುಗಳು				ಇತರೆ
			1	2	3	4	
ಹೊಂಬಳ ಹಾವೇರಿ	ಬಸವಣ್ಣ(ರಾಮೇಶ್ವರ) ಬಯಲಿನ ಆದಿಶಕ್ತಿ ಶಿಲ್ಪ	11	ಅಕ್ಷ-ಮಾಲೆ	ಅಂಕುಶ	ದಂಡ?	ಪುಸ್ತಕ	ಆದಿಶಕ್ತಿಶಿಲ್ಪದಲ್ಲಿ ಇಕ್ಕೆಲಗಳಲ್ಲಿ ಲಕ್ಷ್ಮೀ-ಸರಸ್ವತಿಯರಿದ್ದಾರೆ. ಹಂಸವಿದೆ
ಹರಿಹರ ದಾವಣಗೆರೆ	ಹರಿಹರೇಶ್ವರ ದೇವಾಲಯದ ಭಿತ್ತಿ	11	ಅಕ್ಷ-ಮಾಲೆ	ಅಂಕುಶ	ಪಾಶ	ಕಳಶ	ಇದೇ ಲಕ್ಷಣಗಳನ್ನುಳ್ಳ ನಾಲ್ಕು ಅಸ್ಪಷ್ಟ ಶಿಲ್ಪಗಳು ಭಿತ್ತಿಯ ಬೇರೆ ಬೇರೆ ಭಾಗದಲ್ಲಿವೆ

ಊರು ಜಿಲ್ಲೆ	ದೇವಾಲಯ ಶಿಲ್ಪವಿರುವ ಜಾಗ	ಕಾಲ ಕ್ರಿ.ಶ.	ಹಸ್ತಮುದ್ರೆ/ಆಯುಧಗಳು/ವಸ್ತುಗಳು				ಇತರೆ
			1	2	3	4	
ಇಟಗಿ ಕೊಪ್ಪಳ	ಮಹಾದೇವ ಮುಖಮಂಟಪದ ಕಂಬ	12	ಅಕ್ಷ– ಮಾಲೆ	ಅಂಕುಶ	ಪಾಶ	ಪುಸ್ತಕ	
ಹಳೇಬೀಡು ಹಾಸನ	ಹೊಯ್ಸಳೇಶ್ವರ ದೇವಾಲಯದ ಭಿತ್ತಿ	12	ಅಕ್ಷ– ಮಾಲೆ	ಅಂಕುಶ	ಪವಿತ್ರ	ಪುಸ್ತಕ	ಚಾಮರಧಾರಿಣಿಯರಿದ್ದಾರೆ ಇದೇ ಲಕ್ಷಣಗಳನ್ನುಳ್ಳ ಇನ್ನೂ ಎರಡು ಶಿಲ್ಪಗಳಿವೆ
ಹಳೇಬೀಡು ಹಾಸನ	ಹೊಯ್ಸಳೇಶ್ವರ ದೇವಾಲಯದ ಭಿತ್ತಿ	12	ಅಕ್ಷ– ಮಾಲೆ	ಅಂಕುಶ	ಪವಿತ್ರ	ಪುಸ್ತಕ	
ಹಳೇಬೀಡು ಹಾಸನ	ಹೊಯ್ಸಳೇಶ್ವರ ಗರ್ಭಗುಡಿಯ ಮುಂದೆ ಎಡಭಾಗಕ್ಕಿರುವ ಕೋಷ್ಠದ ಶಿಖರದ ಮೇಲಿನ ಹಂತ	12	ಅಕ್ಷ– ಮಾಲೆ	ಅಂಕುಶ	ಪಾಶ	ಪುಸ್ತಕ	
ಹಳೇಬೀಡು ಹಾಸನ	ಕೇದಾರೇಶ್ವರ ದೇವಾಲಯದ ಭಿತ್ತಿ	12	ಅಕ್ಷ– ಮಾಲೆ	ಅಂಕುಶ	ಪವಿತ್ರ	ಪುಸ್ತಕ	ಬಲಬದಿಗೆ ಬ್ರಹ್ಮನ ಸ್ಥಾನಕ ಶಿಲ್ಪವಿದೆ
ಕೋರವಂಗಲ ಹಾಸನ	ಬೂಚೇಶ್ವರ ದೇವಾಲಯದ ಭಿತ್ತಿ	12	ಫಲ	ಅಕ್ಷ– ಮಾಲೆ	ಕಳಶ	ಪುಸ್ತಕ	
ಕೋರವಂಗಲ	ಬೂಚೇಶ್ವರ ದೇವಾಲಯದ ಭಿತ್ತಿ	12	ಅಕ್ಷ– ಮಾಲೆ	ಅಂಕುಶ	ಪಾಶ	ಪುಸ್ತಕ	
ಕೋರವಂಗಲ	ಬೂಚೇಶ್ವರ ದೇವಾಲಯದ ಭಿತ್ತಿ	12	ವೀಣೆ	ಅಕ್ಷ– ಮಾಲೆ	ವೀಣೆ	ಪುಸ್ತಕ	
ಅರಸೀಕೆರೆ ಹಾಸನ	ಈಶ್ವರ ದೇವಾಲಯದ ಭಿತ್ತಿ	12	ಅಕ್ಷ– ಮಾಲೆ	ಅಂಕುಶ	ಪಾಶ	ಪುಸ್ತಕ	
ಅರಸೀಕೆರೆ ಹಾಸನ	ಈಶ್ವರ ದೇವಾಲಯದ ಭಿತ್ತಿ	12	–	ಪಾಶ	–	–	ತ್ರಿಮುಖ ದೇವತೆ. ಮೂರು ಕೈಗಳು ಮುರಿದಿವೆ
ಅರಸೀಕೆರೆ	ಈಶ್ವರ ದೇವಾಲಯದ ಭಿತ್ತಿ	12	ಪದ್ಮ	ಅಂಕುಶ	–	ಫಲ	ತ್ರಿಮುಖ ದೇವತೆ
ಮೊಸಳೆ ಹಾಸನ	ನಾಗೇಶ್ವರ ದಕ್ಷಿಣದ ಭಿತ್ತಿ	12	ಚಿನ್ಮುದ್ರೆ	ತ್ರಿಶೂಲ	ಡಮರು	ಪುಸ್ತಕ	ದುರ್ಗೆಯ ಸರಸ್ವತೀ ಸ್ವರೂಪ
ಭದ್ರಕಾಳಿವನ– ಕಳಸಾಪುರ ಚಿಕ್ಕಮಗಳೂರು	ವೀರಭದ್ರ ದೇವಾಲಯದ ಆವರಣ	13	–	ಅಂಕುಶ	ಪವಿತ್ರ	ಪುಸ್ತಕ	ಹಳೆಯ ದೇವಾಲಯವೊಂದರ ಭಿತ್ತಿಶಿಲ್ಪ

ತ್ರಿಭಂಗಿಯಲ್ಲಿರುವ ದ್ವಿಭುಜ ಸರಸ್ವತೀ ಶಿಲ್ಪಗಳು

ಊರು ಜಿಲ್ಲೆ	ದೇವಾಲಯ ಶಿಲ್ಪವಿರುವ ಜಾಗ	ಕಾಲ ಕ್ರಿ.ಶ.	ಹಸ್ತಮುದ್ರೆ/ಆಯುಧಗಳು/ವಸ್ತುಗಳು		ಇತರೆ
			1	2	
ಬೇಲೂರು ಹಾಸನ	ಚನ್ನಕೇಶವ ದೇವಾಲಯದ ಹೊರಭಿತ್ತಿ	12	ಅಕ್ಷಮಾಲೆ ಅಭಯ	ಪುಸ್ತಕ	ಕಿರೀಟಪಿಲ್ಲಿ
ಬೇಲೂರು ಹಾಸನ	ಚನ್ನಕೇಶವ ದೇವಾಲಯದ ಹೊರಭಿತ್ತಿ	12	ಉಪದೇಶ	ಪುಸ್ತಕ	ಇಕ್ಕೆಲಗಳಲ್ಲಿ ಚಾಮರಧಾರಿಣಿಯರಿದ್ದಾರೆ
ಬೇಲೂರು ಹಾಸನ	ಚನ್ನಕೇಶವ ದೇವಾಲಯದ ಹೊರಭಿತ್ತಿ	12	ಚಿನ್ಮುದ್ರೆ	ಪುಸ್ತಕ	ಕಿರೀಟಪಿಲ್ಲಿ
ಹಳೇಬೀಡು ಹಾಸನ	ಹೊಯ್ಸಳೇಶ್ವರ ದೇವಾಲಯದ ಭಿತ್ತಿ	12			ಪಿಟೀಲಿನಂತಿರುವ ವಾದ್ಯವನ್ನು ಕಡ್ಡಿಯಿಂದ ನುಡಿಸುತ್ತಿರುವಂತಿದೆ

ಊರು ಜಿಲ್ಲೆ	ದೇವಾಲಯ ಶಿಲ್ಪವಿರುವ ಜಾಗ	ಕಾಲ ಕ್ರಿ.ಶ.	ಹಸ್ತಮುದ್ರೆ/ಆಯುಧಗಳು/ವಸ್ತುಗಳು		ಇತರೆ
			1	2	
ಕಿಕ್ಕೇರಿ ಮಂಡ್ಯ	ಬ್ರಹ್ಮೇಶ್ವರ ದೇವಾಲಯದ ಭಿತ್ತಿ	12	ವೀಣೆ	ವೀಣೆ	
ಕೋರವಂಗಲ ಹಾಸನ	ಬೂಚೇಶ್ವರ ದೇವಾಲಯದ ಭಿತ್ತಿ	12	ಅಕ್ಷಮಾಲೆ ಉಪದೇಶ	ಪುಸ್ತಕ	ಇದೇ ಲಕ್ಷಣಗಳನ್ನುಳ್ಳ ಇನ್ನೊಂದು ಶಿಲ್ಪವಿದೆ

ತ್ರಿಭಂಗಿಯಲ್ಲಿರುವ ಚತುರ್ಭುಜ ಸರಸ್ವತೀ ಶಿಲ್ಪಗಳು

ಊರು ಜಿಲ್ಲೆ	ದೇವಾಲಯ ಶಿಲ್ಪವಿರುವ ಜಾಗ	ಕಾಲ ಕ್ರಿ.ಶ.	ಹಸ್ತಮುದ್ರೆ/ಆಯುಧಗಳು/ವಸ್ತುಗಳು				ಇತರೆ
			1	2	3	4	
ಹರಿಹರ ದಾವಣಗೆರೆ	ಹರಿಹರೇಶ್ವರ ದೇವಾಲಯದ ಭಿತ್ತಿ	11	ಅಕ್ಷ- ಮಾಲೆ	ಅಂಕುಶ	ಪಾಶ	ಕಳಶ	
ಇಟಗಿ ಕೊಪ್ಪಳ	ಮಹಾದೇವ ದೇವಾಲಯದ ಕಂಬ	12	ಅಕ್ಷ- ಮಾಲೆ	ಅಂಕುಶ	ಪವಿತ್ರ	ಪುಸ್ತಕ	ಇದೇ ಲಕ್ಷಣಗಳನ್ನುಳ್ಳ ಇನ್ನೊಂದು ಶಿಲ್ಪವಿದೆ
ಇಟಗಿ ಕೊಪ್ಪಳ	ಮಹಾದೇವ ದೇವಾಲಯದ ಕಂಬ	12	–	–	ಪಾಶ	ಪುಸ್ತಕ	ಇಕ್ಕೆಲಗಳಲ್ಲಿ ಸಖಿಯರಿದ್ದಾರೆ. ಕೆಳಗಡೆ ಬ್ರಹ್ಮನ ಶಿಲ್ಪವಿದೆ.
ಬೇಲೂರು ಹಾಸನ	ಚನ್ನಕೇಶವ ದೇವಾಲಯದ ಹೊರಭಿತ್ತಿ	12	ಅಕ್ಷ- ಮಾಲೆ	ಅಂಕುಶ	ಪವಿತ್ರ	ಪುಸ್ತಕ	ಕಾಲುಗಳು ಕಕ್ಷಾಸನದಿಂದ ಮುಚ್ಚಿಹೋಗಿದೆ
ಬೇಲೂರು ಹಾಸನ	ಚನ್ನಕೇಶವ ಹೊರಪ್ರಾಕಾರದ ಭಿತ್ತಿ	12	–	–	ಪಾಶ	ಪುಸ್ತಕ	ಎರಡು ಕೈಗಳು ಮುರಿದಿವೆ
ಬೇಲೂರು ಹಾಸನ	ಚೆನ್ನಕೇಶವ ದೇವಾಲಯದ ನವರಂಗದ ಕಂಬ	12	ಅಕ್ಷ- ಮಾಲೆ	ಅಂಕುಶ	–	ಪುಸ್ತಕ	
ಅಮರಗೋಳ ಧಾರವಾಡ	ಬನಶಂಕರಿ ನವರಂಗದ ಕಂಬ	12	ಅಕ್ಷ- ಮಾಲೆ ಅಭಯ	ಅಂಕುಶ	ಪಾಶ	ಪುಸ್ತಕ	ಹಂಸವಿದೆ. ಸಖಿಯಿದ್ದಾಳೆ
ಕಿಕ್ಕೇರಿ ಮಂಡ್ಯ	ಬ್ರಹ್ಮೇಶ್ವರ ದೇವಾಲಯದ ಭಿತ್ತಿ	12	ಅಕ್ಷ- ಮಾಲೆ	ಅಂಕುಶ	ಪಾಶ	ಪುಸ್ತಕ	ಹಂಸವಿದೆ. ಚಿಕ್ಕದಾದ ಶಿಲ್ಪವೊಂದು ಪುಸ್ತಕ ಹಿಡಿದು ನಿಂತಿದೆ.
ಹಿರೇಹಡಗಲಿ ಬಳ್ಳಾರಿ	ಕಲ್ಲೇಶ್ವರ ನಂದಿಮಂಟಪದಕಂಬ	13	ಅಕ್ಷ- ಮಾಲೆ	ಅಂಕುಶ	ಪವಿತ್ರ	ಪುಸ್ತಕ	
ಬಸರಾಳು ಮಂಡ್ಯ	ಮಲ್ಲಿಕಾರ್ಜುನ ಭಿತ್ತಿ	13	ಅಕ್ಷ- ಮಾಲೆ	ಅಂಕುಶ	ಪವಿತ್ರ	ಫಲ	ಇದೇ ಲಕ್ಷಣಗಳನ್ನುಳ್ಳ ಇನ್ನೆರಡು ಶಿಲ್ಪಗಳಿವೆ
ಜೇವರ್ಗಿ ಗುಲ್ಬರ್ಗಾ	ಜಿನಮಂದಿರ	14	ಪುಸ್ತಕ	ಅಭಯ	ಅಕ್ಷ- ಮಾಲೆ	ವರದ	ಹಂಸವಿದೆ. ಮೂವರು ಸಹಾಯಕರಿದ್ದಾರೆ

ನೃತ್ಯಭಂಗಿಯಲ್ಲಿರುವ ದ್ವಿಭುಜ ಸರಸ್ವತೀ ಶಿಲ್ಪಗಳು

ಊರು ಜಿಲ್ಲೆ	ದೇವಾಲಯ ಶಿಲ್ಪವಿರುವ ಜಾಗ	ಕಾಲ ಕ್ರಿ.ಶ.	ಹಸ್ತಮುದ್ರೆ/ಆಯುಧಗಳು/ವಸ್ತುಗಳು		ಇತರೆ
			1	2	
ಹಳೇಬೀಡು ಹಾಸನ	ಹೊಯ್ಸಳೇಶ್ವರ ದೇವಾಲಯದ ಭಿತ್ತಿ	12	ವೀಣೆ	ವೀಣೆ	ಪಿಟೀಲು ರೀತಿಯ ವಾದ್ಯವನ್ನು ಕಡ್ಡಿಯಿಂದ ನುಡಿಸುತ್ತಿರುವಂತೆ ಇದೆ
ಹಳೇಬೀಡು ಹಾಸನ	ಹೊಯ್ಸಳೇಶ್ವರ ದೇವಾಲಯದ ಭಿತ್ತಿ	12	ವೀಣೆ	ವೀಣೆ	ವೀಣೆಯ ರೀತಿಗಮನಾರ್ಹ

ನೃತ್ಯಭಂಗಿಯಲ್ಲಿರುವ ಚತುರ್ಭುಜ ಸರಸ್ವತೀ ಶಿಲ್ಪಗಳು

ಊರು ಜಿಲ್ಲೆ	ದೇವಾಲಯ ಶಿಲ್ಪವಿರುವ ಜಾಗ	ಕಾಲ ಕ್ರಿ.ಶ.	ಹಸ್ತಮುದ್ರೆ/ಆಯುಧಗಳು/ವಸ್ತುಗಳು				ಇತರೆ
			1	2	3	4	
ಹಳೇಬೀಡು ಹಾಸನ	ಹೊಯ್ಸಳೇಶ್ವರ ದೇವಾಲಯದ ಭಿತ್ತಿ	12	ಅಕ್ಷಮಾಲೆ ಚಿನ್ಮುದ್ರೆ	ಸ್ವರ್ಗ	ಲಂಬ	ಪುಸ್ತಕ	ಹಂಸವಿದೆ ವಾದ್ಯಗಾರರಿದ್ದಾರೆ
ಹಳೇಬೀಡು ಹಾಸನ	ಹೊಯ್ಸಳೇಶ್ವರ ದೇವಾಲಯದ ಭಿತ್ತಿ	12	ವೀಣೆ	ಪಾಶ	ಪದ್ಮ	ವೀಣೆ	ಇಬ್ಬರು ವಾದ್ಯಗಾರರ ಒಬ್ಬ ಚಾಮರಧಾರಿಣಿಯ ಶಿಲ್ಪವಿದೆ
ಹಳೇಬೀಡು ಹಾಸನ	ಹೊಯ್ಸಳೇಶ್ವರ ದೇವಾಲಯದ ಭಿತ್ತಿ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	
ಅಮೃತಾಪುರ ಚಿಕ್ಕಮಗಳೂರು	ಅಮೃತೇಶ್ವರ ಮುಖಮಂಟಪದ ಭುವನೇಶ್ವರಿ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	
ಬೇಲೂರು ಹಾಸನ	ವೀರನಾರಾಯಣ ಹೊರಭಿತ್ತಿ	12	ಅಕ್ಷಮಾಲೆ	ಅಂಕುಶ	ಪಾಶ	ಪುಸ್ತಕ	
ಬಗ್ಗವಳ್ಳಿ ಚಿಕ್ಕಮಗಳೂರು	ಕೇಶವ ದೇವಾಲಯದ ಭಿತ್ತಿ	12	ಪಾಲ	–	ವೀಣೆ	ಪುಸ್ತಕ	
ಹಾರನಹಳ್ಳಿ ಹಾಸನ	ಲಕ್ಷ್ಮೀನರಸಿಂಹ ದೇವಾಲಯದ ಭಿತ್ತಿ	13	ಅಕ್ಷಮಾಲೆ	ಅಂಕುಶ	ಪವಿತ್ರ	ಫಲ	ವಾದ್ಯಗಾರರಿದ್ದಾರೆ
ಹಾರನಹಳ್ಳಿ ಹಾಸನ	ಸೋಮೇಶ್ವರ ದೇವಾಲಯದ ಭಿತ್ತಿ	13	ಅಕ್ಷಮಾಲೆ	ಅಂಕುಶ	ಪವಿತ್ರ	ಪುಸ್ತಕ	ವಾದ್ಯಗಾರರಿದ್ದಾರೆ
ಭದ್ರಾವತಿ ಶಿವಮೊಗ್ಗ	ಲಕ್ಷ್ಮೀನರಸಿಂಹ ದೇವಾಲಯದ ಭಿತ್ತಿ	13	ವೀಣೆ	ಅಂಕುಶ	ಪವಿತ್ರ	ವೀಣೆ	

ನೃತ್ಯಭಂಗಿಯಲ್ಲಿರುವ ಷಡ್ಭುಜ ಸರಸ್ವತೀ ಶಿಲ್ಪಗಳು

ಊರು ಜಿಲ್ಲೆ	ದೇವಾಲಯ ಶಿಲ್ಪವಿರುವ ಜಾಗ	ಕಾಲ ಕ್ರಿ.ಶ.	ಹಸ್ತಮುದ್ರೆ/ಆಯುಧಗಳು/ವಸ್ತುಗಳು						ಇತರೆ
			1	2	3	4	5	6	
ಸೋಮನಾಥಪುರ ಮೈಸೂರು	ಕೇಶವ ದೇವಾಲಯದ ಭಿತ್ತಿ	13	ವೀಣೆ	ಅಂಕುಶ	ಅಕ್ಷ– ಮಾಲೆ	ಪುಸ್ತಕ	ಪವಿತ್ರ	ವೀಣೆ	ಅಕ್ಷಮಾಲೆ ಬಳೆಯಂತಿದೆ
ಅರಳಗುಪ್ಪೆ ತುಮಕೂರು	ಕೇಶವ ದೇವಾಲಯದ ಭಿತ್ತಿ	13	ವೀಣೆ	ಪಾಲ	ಅಂಕುಶ	ಪವಿತ್ರ	ಪುಸ್ತಕ	ವೀಣೆ	ವಾದ್ಯಗಾರರಿದ್ದಾರೆ
ಅರಳಗುಪ್ಪೆ ತುಮಕೂರು	ಕೇಶವ ದೇವಾಲಯದ ಭಿತ್ತಿಯ ಮೇಲ್ಭಾಗ	13	ಅಕ್ಷ– ಮಾಲೆ	ಪಾಶ	ಸ್ವರ್ಗ ಹಸ್ತ	ಅಂಕುಶ	ಪುಸ್ತಕ	ದೋಲ ಹಸ್ತ	ವಿಷ್ಣು ಶಿಲ್ಪದ ಬಲಕ್ಕೆ ನಾಟ್ಯಲಕ್ಷ್ಮಿ ಮತ್ತು ಎಡಕ್ಕೆ ಸರಸ್ವತಿಯರಿದ್ದಾರೆ
ಹೊಸಹೊಳಲು ಮಂಡ್ಯ	ಲಕ್ಷ್ಮೀನರಸಿಂಹ ದೇವಾಲಯದ ಭಿತ್ತಿ	13	ಅಕ್ಷ– ಮಾಲೆ	ಲಂಬ	ಅಂಕುಶ	ಸ್ವರ್ಗ	ಪವಿತ್ರ	ಪುಸ್ತಕ	ವಾದ್ಯಗಾರರಿದ್ದಾರೆ
ಗೋವಿಂದನಹಳ್ಳಿ ಮಂಡ್ಯ	ಪಂಚಲಿಂಗೇಶ್ವರ ದೇವಾಲಯದ ಭಿತ್ತಿ	13	ಅಕ್ಷ– ಮಾಲೆ	ಲಂಬ	ಅಂಕುಶ	ಸ್ವರ್ಗ	ಪಾಶ	ಪುಸ್ತಕ	ವಾದ್ಯಗಾರರಿದ್ದಾರೆ
ಗೋವಿಂದನಹಳ್ಳಿ ಮಂಡ್ಯ	ಪಂಚಲಿಂಗೇಶ್ವರ ದೇವಾಲಯದ ಭಿತ್ತಿ	13	ವೀಣೆ	ಅಂಕುಶ	ಅಕ್ಷ– ಮಾಲೆ	ಪಾಶ	ವೀಣೆ	ಪುಸ್ತಕ	ವಾದ್ಯಗಾರರಿದ್ದಾರೆ
ಗೋವಿಂದನಹಳ್ಳಿ ಮಂಡ್ಯ	ಪಂಚಲಿಂಗೇಶ್ವರ ದೇವಾಲಯದ ಭಿತ್ತಿ	13	–	–	–	ಪಾಶ	ವೀಣೆ	ಪುಸ್ತಕ	ವಾದ್ಯಗಾರರಿದ್ದಾರೆ
ಹಳೇಬೀಡು ಹಾಸನ	ಹೊಯ್ಸಳೇಶ್ವರ ದೇವಾಲಯದ ಭಿತ್ತಿ	12	–	–	–	ವೀಣೆ	ಪಾಶ	ಪುಸ್ತಕ	ಮೂರು ಕೈಗಳು ಮತ್ತು ವೀಣೆಯ ದಂಡಭಾಗ ಮುರಿದಿವೆ ವಾದ್ಯಗಾರರಿದ್ದಾರೆ

ಊರು ಜಿಲ್ಲೆ	ದೇವಾಲಯ ಶಿಲ್ಪವಿರುವ ಜಾಗ	ಕಾಲ ಕ್ರಿ.ಶ.	ಹಸ್ತಮುದ್ರೆ/ಆಯುಧಗಳು/ವಸ್ತುಗಳು						ಇತರೆ
			1	2	3	4	5	6	
ಹಳೇಬೀಡು ಹಾಸನ	ಹೊಯ್ಸಳೇಶ್ವರ ದೇವಾಲಯದ ಭಿತ್ತಿ	12	–	–	–	–	–	ಪುಸ್ತಕ	ಐದು ಕೈಗಳು ಮುರಿದಿವೆ
ಹಳೇಬೀಡು ಹಾಸನ	ಹೊಯ್ಸಳೇಶ್ವರ ದೇವಾಲಯದ ಭಿತ್ತಿ	12	ವೀಣೆ	ಅಭಯ	ಅಂಕುಶ	ಪಾಶ	ವೀಣೆ	ಪುಸ್ತಕ	ವಾದ್ಯಗಾರರಿದ್ದಾರೆ
ಹಳೇಬೀಡು ಹಾಸನ	ಹೊಯ್ಸಳೇಶ್ವರ ಗರ್ಭಗುಡಿಯ ಮುಂದೆ ಎಡಭಾಗಕ್ಕಿರುವ ಕೋಷ್ಠದ ಶಿಖರದ ಕೆಳಹಂತ	12	ಅಕ್ಷ–ಮಾಲೆ	ಲಂಬ	ಅಂಕುಶ	ಸ್ವರ್ಗ	ಪಾಶ	ಪುಸ್ತಕ	ಹಂಸವಿದೆ ವಾದ್ಯಗಾರರಿದ್ದಾರೆ
ಹಳೇಬೀಡು ಹಾಸನ	ಮ್ಯೂಸಿಯಂ	12	ಪಾಲ	ಅಂಕುಶ	ಅಕ್ಷ–ಮಾಲೆ	ಪವಿತ್ರ	ವೀಣೆ	ಪುಸ್ತಕ	ಹಂಸವಿದೆ ವಾದ್ಯಗಾರರಿದ್ದಾರೆ
ಹಳೇಬೀಡು ಹಾಸನ	ಕೇದಾರೇಶ್ವರ ದೇವಾಲಯದ ಭಿತ್ತಿ	12	ವೀಣೆ	ಅಕ್ಷ–ಮಾಲೆ	ಅಂಕುಶ	ಪುಸ್ತಕ	ಪವಿತ್ರ	ವೀಣೆ	ವಾದ್ಯಗಾರರಿದ್ದಾರೆ
ಹಳೇಬೀಡು ಹಾಸನ	ಕೇದಾರೇಶ್ವರ ಬಲಭಾಗದ ಗರ್ಭಗುಡಿಯ ಲಲಾಟ	12	ಪಾಲ	ಅಂಕುಶ	ಅಕ್ಷ–ಮಾಲೆ	ಪುಸ್ತಕ	ಪಾಶ	ವೀಣೆ	ವಾದ್ಯಗಾರರಿದ್ದಾರೆ
ಮರಳೆ ಚಿಕ್ಕಮಗಳೂರು	ಸಿದ್ಧೇಶ್ವರ ದೇವಾಲಯದ ಭಿತ್ತಿ	12	ಅಕ್ಷ–ಮಾಲೆ	–	ಅಂಕುಶ	ಸ್ವರ್ಗ	ಪಾಶ	ಪುಸ್ತಕ	ಕೆಳಗೆ ಹಂಸ ಮತ್ತು ಸಖಿಯ ಕೆತ್ತನೆಯಿದೆ
ಬಗ್ಗವಳ್ಳಿ ಚಿಕ್ಕಮಗಳೂರು	ಕೇಶವ ದೇವಾಲಯದ ಭಿತ್ತಿ	12	ವೀಣೆ	ಅಂಕುಶ	ಅಕ್ಷ–ಮಾಲೆ	ವೀಣೆ	ಪವಿತ್ರ	ಪುಸ್ತಕ	
ಬಸರಾಳು ಮಂಡ್ಯ	ಮಲ್ಲಿಕಾರ್ಜುನ ದೇವಾಲಯದ ಭಿತ್ತಿ	13	ಅಕ್ಷ–ಮಾಲೆ	ಪಾಲ	ಅಂಕುಶ	ಸ್ವರ್ಗ	ಪಾಶ	ಫಲ	ಇಕ್ಕೆಲಗಳಲ್ಲಿ ವಾದ್ಯಗಾರರಿದ್ದಾರೆ
ಹಾರನಹಳ್ಳಿ ಹಾಸನ	ಲಕ್ಷ್ಮೀನರಸಿಂಹ ದೇವಾಲಯದ ಭಿತ್ತಿ	13	ಅಕ್ಷ–ಮಾಲೆ	ಪಾಲ	ಅಂಕುಶ	ಸ್ವರ್ಗ	ಪುಸ್ತಕ	ಫಲ	ಇಕ್ಕೆಲಗಳಲ್ಲಿ ವಾದ್ಯಗಾರರಿದ್ದಾರೆ
ಹಾರನಹಳ್ಳಿ ಹಾಸನ	ಲಕ್ಷ್ಮೀನರಸಿಂಹ ದೇವಾಲಯದ ಭಿತ್ತಿ	13	ವೀಣೆ	ಅಂಕುಶ	ಅಕ್ಷ–ಮಾಲೆ	ಪಾಶ	ವೀಣೆ	ಪುಸ್ತಕ	

ನೃತ್ಯಭಂಗಿಯಲ್ಲಿರುವ ಅಷ್ಟಭುಜ ಸರಸ್ವತೀ ಶಿಲ್ಪಗಳು

ಊರು	ದೇವಾಲಯ ಶಿಲ್ಪವಿರುವ ಜಾಗ	ಕಾಲ ಕ್ರಿ.ಶ.	ಹಸ್ತಮುದ್ರೆ/ಆಯುಧಗಳು/ವಸ್ತುಗಳು								ಇತರೆ
			1	2	3	4	5	6	7	8	
ಹಳೇಬೀಡು ಹಾಸನ	ಮ್ಯೂಸಿಯಂ	12	ಅಕ್ಷ–ಮಾಲೆ	ಅಂಕುಶ	ಕಮಲ	ವೀಣೆ	ವೀಣೆ	ಫಲ/ ಚಕ್ರ	ಪವಿತ್ರ	ಪುಸ್ತಕ	ವಾದ್ಯಗಾರರಿದ್ದಾರೆ
ಹಳೇಬೀಡು ಹಾಸನ	ಮ್ಯೂಸಿಯಂ	12	ಅಕ್ಷ–ಮಾಲೆ	ಅಂಕುಶ	ಪಾಲ/ ದೋಲ ಹಸ್ತ	ವೀಣೆ	ವೀಣೆ	ಸ್ವರ್ಗ	ಪವಿತ್ರ	–	ವಾದ್ಯಗಾರರಿದ್ದಾರೆ
ಹಳೇಬೀಡು ಹಾಸನ	ಹೊಯ್ಸಳೇಶ್ವರ ಎದುರಿನ ಸೂರ್ಯನ ಗುಡಿಯ ಭಿತ್ತಿ	12	ಅಕ್ಷ–ಮಾಲೆ	ಕಮಲ	ಅಂಕುಶ	ವೀಣೆ	ವೀಣೆ	ಪಾಶ	ಫಲ	ಪುಸ್ತಕ	ಹಂಸವಿದೆ ಚಾಮರ–ಧಾರಿಣಿಯರಿದ್ದಾರೆ ಬಲಭಾಗಕ್ಕೆ ಬ್ರಹ್ಮ–ಸರಸ್ವತಿಯರ ಶಿಲ್ಪವಿದೆ
ಬೇಲೂರು ಹಾಸನ	ವೀರನಾರಾಯಣ ದೇವಾಲಯದ ಹೊರಭಿತ್ತಿ	12	–	ತ್ರಿಶೂಲ	–	–	ವೀಣೆ	–	–	–	
ನಾಗಲಾಪುರ	ಚೆನ್ನಕೇಶವ ದೇವಾಲಯದ ದಕ್ಷಿಣ ಭಿತ್ತಿ	12	ಅಕ್ಷ–ಮಾಲೆ	ಅಂಕುಶ	ದೋಲ ಹಸ್ತ	ವೀಣೆ	ವೀಣೆ	ಸ್ವರ್ಗ	ಪಾಶ	ಪುಸ್ತಕ	ವಾದ್ಯಗಾರರಿದ್ದಾರೆ

ಊರು	ದೇವಾಲಯ ಶಿಲ್ಪವಿರುವ ಜಾಗ	ಕಾಲ ಕ್ರಿ.ಶ.	ಹಸ್ತಮುದ್ರೆ/ಆಯುಧಗಳು/ವಸ್ತುಗಳು								ಇತರೆ
			1	2	3	4	5	6	7	8	
ಹೊಸಹೊಳಲು ಮಂಡ್ಯ	ಲಕ್ಷ್ಮೀನರಸಿಂಹ ದೇವಾಲಯದ ಭಿತ್ತಿ	13	ಅಕ್ಷ–ಮಾಲೆ	ಅಂಕುಶ	ಕಮಲ	ವೀಣೆ	ವೀಣೆ	ಫಲ	ಪಾಶ	ಪುಸ್ತಕ	ವಾದ್ಯಗಾರರಿದ್ದಾರೆ
ಅರಳಗುಪ್ಪೆ ತುಮಕೂರು	ಕೇಶವ ದೇವಾಲಯದ ಭಿತ್ತಿ	13	ಅಕ್ಷ–ಮಾಲೆ	ಅಂಕುಶ	–	ವೀಣೆ	ವೀಣೆ	ಫಲ	ಪವಿತ್ರ	ಪುಸ್ತಕ	ವಾದ್ಯಗಾರರಿದ್ದಾರೆ
ಬಸರಾಳು ಮಂಡ್ಯ	ಮಲ್ಲಿಕಾರ್ಜುನ ದೇವಾಲಯದ ದಕ್ಷಿಣದ ಭಿತ್ತಿ	13	ಅಂಕುಶ	ಅಕ್ಷ–ಮಾಲೆ	ಸ್ವರ್ಗ	ವೀಣೆ	ವೀಣೆ	ಪಾಲ	–	ಪಾಶ	ಇಕ್ಕೆಲಗಳಲ್ಲಿ ನಾಲ್ವರು ವಾದ್ಯಗಾರರಿದ್ದಾರೆ
ಹಾರನಹಳ್ಳಿ ಹಾಸನ	ಸೋಮೇಶ್ವರ ದೇವಾಲಯದ ದಕ್ಷಿಣ ಭಿತ್ತಿ	13	ಅಂಕುಶ	ಅಕ್ಷ–ಮಾಲೆ	ಪಾಲ	ವೀಣೆ	ವೀಣೆ	ಸ್ವರ್ಗ	ಪುಸ್ತಕ	ಪವಿತ್ರ	ಇಕ್ಕೆಲಗಳಲ್ಲಿ ವಾದ್ಯಗಾರರಿದ್ದಾರೆ. ಕೆಳಗಿನ ಲತಾಪಟ್ಟಿಕೆಯ ಸುರುಳಿಯಲ್ಲಿ ಹಂಸವಿದೆ.
ನುಗ್ಗೆಹಳ್ಳಿ ಹಾಸನ	ಲಕ್ಷ್ಮೀನರಸಿಂಹ ದೇವಾಲಯದ ಭಿತ್ತಿ	13	ಅಕ್ಷ–ಮಾಲೆ	ಫಲ	ಅಂಕುಶ	ಸ್ವರ್ಗ	ಲಂಬ	ಪವಿತ್ರ	ಕಮಲ	ಪುಸ್ತಕ	ವಾದ್ಯಗಾರರಿದ್ದಾರೆ
ಜಾವಗಲ್ಲು ಹಾಸನ	ಲಕ್ಷ್ಮೀನರಸಿಂಹ ದೇವಾಲಯದ ದಕ್ಷಿಣ ಭಿತ್ತಿ	13	ಅಕ್ಷ–ಮಾಲೆ	ಅಂಕುಶ	ಕಮಲ	ವೀಣೆ	ವೀಣೆ	ಪುಸ್ತಕ	ಫಲ	ಪವಿತ್ರ	ಇಕ್ಕೆಲಗಳಲ್ಲಿ ಇಬ್ಬರು ವಾದ್ಯಗಾರರಿದ್ದಾರೆ.
ಸೋಮನಾಥ–ಪುರ ಮೈಸೂರು	ಕೇಶವ ದೇವಾಲಯದ ಭಿತ್ತಿ	13	ಅಕ್ಷ–ಮಾಲೆ	ಅಂಕುಶ	ದೋಲ ಹಸ್ತ	ವೀಣೆ	ವೀಣೆ	ಸ್ವರ್ಗ	–	ಪುಸ್ತಕ	ವಾದ್ಯಗಾರರಿದ್ದಾರೆ

ನೃತ್ಯಭಂಗಿಯಲ್ಲಿರುವ ದಶಭುಜ ಸರಸ್ವತೀ ಶಿಲ್ಪಗಳು

ಊರು ಜಿಲ್ಲೆ	ದೇವಾಲಯ ಶಿಲ್ಪವಿರುವ ಜಾಗ	ಕಾಲ ಕ್ರಿ.ಶ.	ಹಸ್ತಮುದ್ರೆ/ಆಯುಧಗಳು/ವಸ್ತುಗಳು										ಇತರೆ
			1	2	3	4	5	6	7	8	9	10	
ಹಳೇಬೀಡು ಹಾಸನ	ಹೊಯ್ಸಳೇಶ್ವರ ದೇವಾಲಯದ ಭಿತ್ತಿ	12	ಪಾಲ	–	ಅಕ್ಷ–ಮಾಲೆ	ಅಂಕುಶ	ಶೌಟು	ಸ್ವರ್ಗ	ದಂಡ?/ ಮುಸಲ	ಪಾಶ	ಫಲ	ಪುಸ್ತಕ	ಹಂಸವಿದೆ ವಾದ್ಯಗಾರರಿದ್ದಾರೆ
ಜಾವಗಲ್ಲು ಹಾಸನ	ಲಕ್ಷ್ಮೀನರಸಿಂಹ ದೇವಾಲಯದ ಭಿತ್ತಿ	13	ಲಂಬ	ಕಮಲ	–	ಅಂಕುಶ	ಚಿನ್ಮುದ್ರೆ	ಪಾಶ	–	ರತ್ನ	–	ಪುಸ್ತಕ	ಇಕ್ಕೆಲಗಳಲ್ಲಿ ಇಬ್ಬರು ವಾದ್ಯಗಾರರಿದ್ದಾರೆ.

ಬ್ರಹ್ಮನ ಜೊತೆಯಲ್ಲಿರುವ ಸರಸ್ವತೀ ಶಿಲ್ಪಗಳು

ಊರು ಜಿಲ್ಲೆ	ದೇವಾಲಯ ಶಿಲ್ಪವಿರುವ ಜಾಗ	ಕಾಲ ಕ್ರಿ.ಶ.	ಹಸ್ತಮುದ್ರೆ ಆಯುಧಗಳು/ವಸ್ತುಗಳು				ಇತರೆ
			1	2	3	4	
ಹಳೇಬೀಡು ಹಾಸನ	ಹೊಯ್ಸಳೇಶ್ವರ ಎದುರಿನ ಸೂರ್ಯನ ಗುಡಿಯ ಭಿತ್ತಿ	12	ಅಕ್ಷ–ಮಾಲೆ		ಅಂಕುಶ	ಪುಸ್ತಕ	ಬ್ರಹ್ಮನ ತೊಡೆಯ ಮೇಲೆ ಕುಳಿತಿರುವ ಶಿಲ್ಪದ ಎರಡನೆಯ ಕೈ ಬ್ರಹ್ಮನ ಸೊಂಟವನ್ನು ಬಳಸಿದೆ
ಹಳೇಬೀಡು ಹಾಸನ	ಹೊಯ್ಸಳೇಶ್ವರ ದೇವಾಲಯದ ಭಿತ್ತಿ	12					ರಾವಣ ಎತ್ತುತ್ತಿರುವ ಕೈಲಾಸ ಪರ್ವತದ ಬಲಭಾಗದಲ್ಲಿ ಬ್ರಹ್ಮ–ಸರಸ್ವತೀ ಮತ್ತು ಎಡಭಾಗದಲ್ಲಿ ವಿಷ್ಣು–ಲಕ್ಷ್ಮೀ ಇದ್ದಾರೆ

ಊರು ಜಿಲ್ಲೆ	ದೇವಾಲಯ ಶಿಲ್ಪವಿರುವ ಜಾಗ	ಕಾಲ ಕ್ರಿ.ಶ.	ಹಸ್ತಮುದ್ರೆ/ಆಯುಧಗಳು/ವಸ್ತುಗಳು				ಇತರೆ
			1	2	3	4	
ಕಿಕ್ಕೇರಿ ಮಂಡ್ಯ	ಬ್ರಹ್ಮೇಶ್ವರ ದೇವಾಲಯದ ಭಿತ್ತಿ	12		ಪುಸ್ತಕ			ದ್ವಿಭುಜ ಶಿಲ್ಪ. ಬಲಗೈ ಬ್ರಹ್ಮನ ಹಿಂಬದಿಯಲ್ಲಿದೆ
ಅಮೃತಾಪುರ ಚಿಕ್ಕಮಗಳೂರು	ಅಮೃತೇಶ್ವರ ಮುಖಮಂಟಪ ಭುವನೇಶ್ವರಿ	12		ಪುಸ್ತಕ			ದ್ವಿಭುಜ ಶಿಲ್ಪ. ಬಲಗೈ ಬ್ರಹ್ಮನ ಹಿಂಬದಿಯಲ್ಲಿದೆ.
ಅಮೃತಾಪುರ ಚಿಕ್ಕಮಗಳೂರು	ಅಮೃತೇಶ್ವರ ಮುಖಮಂಟಪ ಭುವನೇಶ್ವರಿ	12		ಪುಸ್ತಕ			ದ್ವಿಭುಜ ಶಿಲ್ಪ. ಬಲಗೈ ಬ್ರಹ್ಮನ ಹಿಂಬದಿಯಲ್ಲಿದೆ.
ಬಸರಾಳು ಮಂಡ್ಯ	ಮಲ್ಲಿಕಾರ್ಜುನ ದೇವಾಲಯದ ಭಿತ್ತಿ	13		ಪುಸ್ತಕ			ದ್ವಿಭುಜ ಶಿಲ್ಪ. ಬಲಗೈ ಬ್ರಹ್ಮನ ಹಿಂಬದಿಯಲ್ಲಿದೆ.
ಶೃಂಗೇರಿ ಚಿಕ್ಕಮಗಳೂರು	ವಿದ್ಯಾಶಂಕರ ದೇವಾಲಯದ ಭಿತ್ತಿ	14		ಪುಸ್ತಕ			ದ್ವಿಭುಜ ಶಿಲ್ಪ. ಬಲಗೈ ಬ್ರಹ್ಮನ ಹಿಂಬದಿಯಲ್ಲಿದೆ.
ಶೃಂಗೇರಿ ಚಿಕ್ಕಮಗಳೂರು	ವಿದ್ಯಾಶಂಕರ ನವರಂಗ ಗೂಡು	14	ಅಕ್ಷ- ಮಾಲೆ	ಪದ್ಮ	ಪದ್ಮ	ದಾನ	ಬ್ರಹ್ಮನ ತೊಡೆಯ ಮೇಲೆ ಕುಳಿತಿರುವ ಚತುರ್ಭುಜ ಶಿಲ್ಪ. ಪೀಠದಲ್ಲಿ ಹಂಸವಿದೆ

ಅನುಬಂಧ –2

ಆಯ್ದ ಪಾರಿಭಾಷಿಕ ಪದಗಳ ಅರ್ಥ–ವಿವರಣೆ

ಅಭಯ ಹಸ್ತ

ದೇವತೆಯು ತನ್ನ ಭಕ್ತರಿಗೆ ಅಭಯ ನೀಡುತ್ತಿರುವಂತೆ ಹಸ್ತವು ಗೋಚರಿಸುತ್ತದೆ. ಭರತನಾಟ್ಯದಲ್ಲಿ ಇದನ್ನು ಪತಾಕಹಸ್ತವೆನ್ನುತ್ತಾರೆ. ಸಾಮಾನ್ಯವಾಗಿ ಸರಸ್ವತಿಯ ಶಿಲ್ಪಗಳಲ್ಲಿ ಬಲಭಾಗದ ಕೆಳಗಿನ ಕೈ ಅಭಯ ಹಸ್ತವಾಗಿರುತ್ತದೆ. ಹೆಚ್ಚಿನ ಶಿಲ್ಪಗಳಲ್ಲಿ ಹಸ್ತವು ಅಭಯಮುದ್ರೆಯಲ್ಲಿದ್ದು, ಹೆಬ್ಬೆರಳು ಮತ್ತು ತೋರುಬೆರಳುಗಳ ನಡುವೆ ಅಕ್ಷಮಾಲೆ ಇರುತ್ತದೆ. ಅಕ್ಷಮಾಲೆಯಿಲ್ಲದ ಅಭಯಮುದ್ರೆಯಲ್ಲಿರುವ ಹಸ್ತವನ್ನುಳ್ಳ ಶಿಲ್ಪಗಳು ಕಡಿಮೆ. ಶಿಲ್ಪಗಳ ವಿವರವನ್ನು ದಾಖಲಿಸುವಾಗ ಈ ಹಸ್ತವನ್ನು ಅಕ್ಷಮಾಲೆ ಎಂದು ಗುರುತಿಸಲಾಗಿದೆ. ಬಹುತೇಕ ಚತುರ್ಭುಜ ಸರಸ್ವತಿಯ ಶಿಲ್ಪಗಳಲ್ಲಿ ಈ ಮಾದರಿಯನ್ನು ಗಮನಿಸಬಹುದಾಗಿದೆ.

ಉಪದೇಶಮುದ್ರೆ

ಬೇರೊಬ್ಬರಿಗೆ ಏನನ್ನೋ ಸೂಚಿಸುತ್ತಿರುವಂತೆ ಬಲಹಸ್ತದ ತೋರುಬೆರಳು ಇದ್ದು, ಉಳಿದ ಬೆರಳುಗಳು ಮಡಿಚಿಕೊಂಡಿರುತ್ತವೆ. ಇದಕ್ಕೆ ಆದೇಶಮುದ್ರೆ ಎಂದೂ ಹೇಳುತ್ತಾರೆ. ಭರತನಾಟ್ಯದಲ್ಲಿ ಇದನ್ನು ಸೂಚಿಹಸ್ತವೆಂದು ಕರೆಯುತ್ತಾರೆ. ಎಡಗೈಯಲ್ಲಿ ಪುಸ್ತಕವನ್ನು ಹಿಡಿದು, ಬಲಗೈ ಉಪದೇಶಮುದ್ರೆಯಲ್ಲಿರುವ ಸರಸ್ವತಿಯ ಶಿಲ್ಪಗಳಿವೆ. (ಉದಾ: ಕಿಕ್ಕೇರಿ ಬ್ರಹ್ಮೇಶ್ವರ ದೇವಾಲಯದ ಹೊರಭಿತ್ತಿಯಲ್ಲಿರುವ ಶಿಲ್ಪ)

ಕುಂಚಿತಪಾದ

ಕುಂಚಿತ ಎಂದರೆ ಬಾಗಿರುವ ಎಂದರ್ಥ. ಒಂದು ಪಾದವನ್ನು ನೆಲದಲ್ಲಿ ಊರಿ ಎರಡನೇ ಪಾದವನ್ನು ಒಳಮುಖವಾಗಿ ಬಾಗಿಸಿ ಸ್ವಲ್ಪವೇ ಮೇಲಕ್ಕೆತ್ತಿರುವ ಭಂಗಿಯ ಶಿಲ್ಪಗಳಲ್ಲಿ ಈ ಮಾದರಿಯನ್ನು ಕಾಣಬಹುದಾಗಿದೆ. ಒಂದು ಕಾಲನ್ನು ಮಾತ್ರ ಬಾಗಿಸಿರುವುದಕ್ಕೆ ಅದು ಎಡಗಾಲು (ಉದಾ: ಬೇಲೂರು ವೀರನಾರಾಯಣ ದೇವಾಲಯದ ಹೊರಭಿತ್ತಿಯಲ್ಲಿರುವ ಶಿಲ್ಪ) ಅಥವಾ ಬಲಗಾಲು (ಉದಾ: ಹಳೇಬೀಡು ಹೊಯ್ಸಳೇಶ್ವರ ದೇವಾಲಯದ ಹೊರಭಿತ್ತಿಯಲ್ಲಿರುವ ಶಿಲ್ಪ) ಯಾವುದಾಗಿದ್ದರೂ, ಏಕಕುಂಚಿತಪಾದ ಎನ್ನುತ್ತಾರೆ. ಎರಡೂ ಕಾಲುಗಳನ್ನು ತುಸು ಬಾಗಿಸಿ ನೃತ್ಯಭಂಗಿಯಲ್ಲಿ ನಿಂತಿರುವ ಸರಸ್ವತಿಯ ಶಿಲ್ಪಗಳು ಕಾಣಸಿಗುತ್ತವೆ. (ಉದಾ: ಸೋಮನಾಥಪುರ ಕೇಶವ ದೇವಾಲಯದ ಹೊರಭಿತ್ತಿಯಲ್ಲಿರುವ ಶಿಲ್ಪ ಮತ್ತು ಹಳೇಬೀಡಿನ ಮ್ಯೂಸಿಯಮ್ಮಿನಲ್ಲಿರುವ ಒಂದು ಶಿಲ್ಪ)

ಚಿನ್ಮುದ್ರೆ

ಹೆಬ್ಬೆರಳು ಮತ್ತು ತೋರುಬೆರಳುಗಳ ತುದಿಯನ್ನು ಒಂದಕ್ಕೊಂದು ತಾಗಿಸಿ ಉಳಿದ ಮೂರು ಬೆರಳುಗಳು ಅಭಯಮುದ್ರೆಯಲ್ಲಿರುವಂತೆ ಮೇಲ್ಮುಖವಾಗಿರುವ ಹಸ್ತಕ್ಕೆ ಚಿನ್ಮುದ್ರೆ ಎನ್ನುತ್ತಾರೆ. ಇದಕ್ಕೆ ಚಿಂತಾ ಎಂಬ ಹೆಸರೂ ಇದೆ. ಕೆಲವು ಸರಸ್ವತಿಯ ಶಿಲ್ಪಗಳಲ್ಲಿ ಸಾಮಾನ್ಯವಾಗಿ ಅಭಯಮುದ್ರೆಯಲ್ಲಿರುವ ಕೈ ಚಿನ್ಮುದ್ರೆಯಲ್ಲಿರುತ್ತದೆ. ಕೆಲವೊಮ್ಮೆ ಚಿನ್ಮುದ್ರೆಯೊಂದಿಗೆ ಅಕ್ಷಮಾಲೆಯೂ ಇರುವುದುಂಟು. ಹೆಬ್ಬೆರಳು ಮತ್ತು ತೋರುಬೆರಳುಗಳನ್ನು ತಾಗಿಸಿರುವುದರಿಂದ ಉಂಟಾದ ವರ್ತುಲದೊಳಗೆ ಅಕ್ಷಮಾಲೆಯನ್ನು ಹಿಡಿದಿರುವಂತೆ ಚಿತ್ರಿಸಿರುತ್ತಾರೆ. ಉದಾಹರಣೆಗೆ ಮೊಸಳೆಯ ನಾಗೇಶ್ವರ ದೇವಾಲಯದ ಹೊರಭಿತ್ತಿಯಲ್ಲಿ ಈ ಎರಡೂ ಮಾದರಿಯ ಶಿಲ್ಪಗಳನ್ನು ಗಮನಿಸಬಹುದು.

ತ್ರಿಭಂಗಿ

ಎರಡು ಕಾಲುಗಳನ್ನು ನೆಲದಲ್ಲಿಟ್ಟು, ಒಂದು ಕಾಲಿನ ಮೇಲೆ ಹೆಚ್ಚು ಭಾರಬಿಟ್ಟು, ಸೊಂಟವನ್ನು ಸ್ವಲ್ಪ ಬಳುಕಿಸಿ ನಿಂತಿರುವ ಶಿಲ್ಪಗಳನ್ನು ತ್ರಿಭಂಗಿಯಲ್ಲಿರುವ ಶಿಲ್ಪಗಳೆನ್ನಲಾಗಿದೆ. ಸೊಂಟವು ಒಂದೆಡೆಗೆ ಬಾಗಿದ್ದರೂ ಎದೆಯ ಭಾಗ ಮತ್ತು ಹೆಚ್ಚು ಭಾರವನ್ನು ಹೊತ್ತಿರದ ಪಾದವು ಒಂದೇ ನೇರದಲ್ಲಿರುತ್ತವೆ. ಶಿಲ್ಪದ ತಲೆಯೂ ಸೊಂಟದ ಬಾಗುವಿಕೆಯನ್ನು ಅನುಸರಿಸಿ ಸ್ವಲ್ಪ ಓರೆಯಾದಂತೆ ಕಾಣುತ್ತದೆ.

ಲಂಬಹಸ್ತ

ನೃತ್ಯಭಂಗಿಯಲ್ಲಿರುವ ಶಿಲ್ಪಗಳಲ್ಲಿ ಯಾವುದಾದರೊಂದು ಹಸ್ತವು ಭೂಮಿಗೆ ಲಂಬವಾಗಿದ್ದರೆ ಅದನ್ನು ಲಂಬಹಸ್ತವೆನ್ನುತ್ತಾರೆ. ಇದಕ್ಕೆ ದೋಲಹಸ್ತ, ತೋಲಹಸ್ತ, ಗಜಹಸ್ತ, ಪಾಲಹಸ್ತ ಎಂಬ ಹೆಸರು ಭರತನಾಟ್ಯದಲ್ಲಿದೆ. ಎಡ ಅಥವಾ ಬಲಗೈಗಳು ಆಯಾಯ ಭಾಗಕ್ಕೆ ಲಂಬವಾಗಿ ಚಾಚಿರುವಂತೆ ವಿರುದ್ಧ ದಿಕ್ಕಿಗೂ ಚಾಚಿರುವ ಶಿಲ್ಪಗಳೂ ಇವೆ. ಹಾಗೆ ವಿರುದ್ಧ ದಿಕ್ಕಿಗೆ ಕೈ ಚಾಚುವಾಗ ಲಂಬವಾಗಿರದೆ ತುಸು ಇಳಿಮುಖವಾಗಿ ಹಸ್ತವು ಕೆಳಕ್ಕೆ ಬಾಗಿರುತ್ತದೆ. ಆದ್ದರಿಂದ ತೋಲಹಸ್ತ ಎಂಬ ಹೆಸರು ಬಂದಿದೆ. ಅದು ಆನೆಯ ಸೊಂಡಿಲಲಿನಂತೆ ಕಾಣುವುದರಿಂದ ಹಾಗೂ ಭರತನಾಟ್ಯದಲ್ಲಿ ಆನೆಯನ್ನು ಅಭಿವ್ಯಕ್ತಿಸಲು ಈ ಮುದ್ರೆಯನ್ನು ಬಳಸುವುದರಿಂದ ಗಜಹಸ್ತ ಎಂಬ ಹೆಸರೂ ಇದೆ. ಇದೇ ಮಾದರಿಯಲ್ಲಿ ಕೈ ಹೆಚ್ಚು ಇಳಿಮುಖವಾಗಿ ಬಾಗಿದ್ದರೆ ಪಾಲಹಸ್ತವೆನ್ನುತ್ತಾರೆ. ಒಟ್ಟಾರೆ ಈ ಹೆಸರುಗಳು ಲಂಬಹಸ್ತದ ವಿವಿಧ ವಿನ್ಯಾಸಗಳನ್ನು ಅನುಸರಿಸಿ ಹುಟ್ಟಿದವುಗಳು. ಲಂಬಹಸ್ತವನ್ನುಳ್ಳ ಸರಸ್ವತಿಯ ಶಿಲ್ಪಗಳು ಷಡ್ಭುಜ ಅಥವಾ ಅಷ್ಟಭುಜ ಶಿಲ್ಪಗಳಿಗಿರುತ್ತವೆ. ಹೊಯ್ಸಳರ ದೇವಾಲಯಗಳ ಹೊರಭಿತ್ತಿಯಲ್ಲಿ ಲಂಬಹಸ್ತದ ವಿವಿಧವಿನ್ಯಾಸಗಳನ್ನುಳ್ಳ ಸರಸ್ವತಿಯ ಶಿಲ್ಪಗಳು ಕಾಣಸಿಗುತ್ತವೆ.

ವರದಹಸ್ತ

ಅಭಯಹಸ್ತದಲ್ಲಿ ಬೆರಳುಗಳು ಮೇಲ್ಮುಖವಾಗಿದ್ದರೆ, ವರದಹಸ್ತದಲ್ಲಿ ಕೆಳಮುಖವಾಗಿರುತ್ತವೆ. ಕೈಯಲ್ಲಿರುವ ನೀರನ್ನು ಕೆಳಕ್ಕೆ ಬಿಡುವಾಗ ಬಾಗಿರುವ ಕೈಯಿಯ ಹಾಗೆ ಹಸ್ತವು ಬಾಗಿರುತ್ತದೆ. ಇದು ವರವನ್ನು ದಯಪಾಲಿಸುವ ಹಸ್ತವಾಗಿರುವುದರಿಂದ ವರದಹಸ್ತ ಎಂಬ ಹೆಸರು ಬಂದಿದೆ. (ಉದಾ: ಜೇವರ್ಗಿಯ ಜಿನಮಂದಿರದಲ್ಲಿರುವ ಸರಸ್ವತಿಯ ಶಿಲ್ಪ) ಭರತನಾಟ್ಯದಲ್ಲಿ ಈ ಮುದ್ರೆಯನ್ನು ವಿನಿಯೋಗಪಸ್ತ ಎನ್ನುತ್ತಾರೆ.

ಸಮಭಂಗಿ(ಸ್ಥಾನಕ)

ಎರಡೂ ಕಾಲುಗಳ ಮೇಲೆ ಸಮವಾಗಿ ನಿಂತಿರುವ ಸ್ಥಾನಕ ಶಿಲ್ಪಗಳು ಸಮಭಂಗಿಯಲ್ಲಿರುವ ಶಿಲ್ಪಗಳು. ಎನ್ನಬಹುದು. ಇಂದಿನ 'ಅಟೆನ್ಷನ್' ಭಂಗಿಗೆ ಇದು ಹೆಚ್ಚು ಹೋಲುತ್ತದೆಯಾದರೂ, ಕೈಗಳು ಮಾತ್ರ ಸ್ವತಂತ್ರವಾಗಿ ವಿವಿಧ ಭಂಗಿಗಳಲ್ಲಿರುತ್ತವೆ.

ಸ್ವರ್ಗಹಸ್ತ

ನೃತ್ಯಭಂಗಿಯಲ್ಲಿರುವ ಶಿಲ್ಪಗಳಲ್ಲಿ ಈ ಮುದ್ರೆಯು ಹೆಚ್ಚಾಗಿ ಕಂಡುಬರುತ್ತದೆ. ಬಲ ಅಥವಾ ಎಡಗೈ ಒಂದನ್ನು ಮೇಲಕ್ಕೆತ್ತಿದ್ದು ಬೆರಳುಗಳನ್ನು ಮೇಲ್ಮುಖವಾಗಿ ಬಿಡಿಸಲಾಗಿರುತ್ತದೆ. ಇದಕ್ಕೆ ಭರತನಾಟ್ಯದಲ್ಲಿ ಹಾಲಪದ್ಮ ಎಂಬ ಹೆಸರಿದೆ. ಬೆರಳುಗಳನ್ನು ಬಿಡಿಸಿದ ಕೈ, ಅರಳಿದ ಪದ್ಮದ ರೀತಿಯಲ್ಲಿ ಕಾಣುವುದರಿಂದ ಈ ಹೆಸರಿದೆ. ಕೈಯನ್ನು ಮೇಲ್ಮುಖವಾಗಿ ಎತ್ತಿರುವುದರಿಂದ ಸ್ವರ್ಗಹಸ್ತ ಎಂಬ ಹೆಸರು ಬಂದಿದೆ. ಸ್ವರ್ಗಹಸ್ತವಾಗಿರುವ ಹಸ್ತದಲ್ಲಿ ತೋರುಬೆರಳು ಮಾತ್ರ ಮೇಲ್ಮುಖವಾಗಿ ಚಾಚಿದ್ದರೆ ಅದನ್ನೂ ಸೂಚಿಹಸ್ತವೆನ್ನುತ್ತಾರೆ. ಬಲಗೈಯನ್ನು ಸ್ವರ್ಗಹಸ್ತವಾಗಿ ಹಿಡಿದಿರುವ ಶಿಲ್ಪಗಳು ಬಸರಾಳಿನ ಮಲ್ಲಿಕಾರ್ಜುನ ಮತ್ತು ನುಗ್ಗೆಹಳ್ಳಿ ಕೇಶವ ದೇವಾಲಯಗಳ ಹೊರಭಿತ್ತಿಯಲ್ಲಿ ಕಾಣಸಿಗುತ್ತವೆ. ಬಲಗೈ ಸ್ವರ್ಗಹಸ್ತವಾಗಿರುವುದರ ಜೊತೆಗೆ ಅಕ್ಷಮಾಲೆಯನ್ನು ಧರಿಸಿರುವ ಸರಸ್ವತಿಯ ಅಷ್ಟಭುಜ ಶಿಲ್ಪವು ಸೋಮನಾಥಪುರ ದೇವಾಲಯದ ಹೊರಭಿತ್ತಿಯಲ್ಲಿದೆ. ಎಡಗೈಯನ್ನು ಸ್ವರ್ಗಹಸ್ತವಾಗಿ ಹಿಡಿದಿರುವ ಶಿಲ್ಪಗಳನ್ನು ಹಾರನಹಳ್ಳಿ, ಹಳೆಬೀಡು ದೇವಾಲಯಗಳ ಹೊರಭಿತ್ತಿಯಲ್ಲಿ ಕಾಣಬಹುದು. ಸ್ವರ್ಗಹಸ್ತವಾಗಿರುವ ಎಡಗೈಯಲ್ಲಿ ಪುಸ್ತಕವಿರುವ ಶಿಲ್ಪಗಳು ಅರಳಗುಪ್ಪೆ ಮತ್ತು ಹೊಸಹೊಳಲು ಕೇಶವದೇವಾಲಯಗಳ ಹೊರಭಿತ್ತಿಯಲ್ಲಿವೆ.

ಅನುಬಂಧ –3

ಸರಸ್ವತಿಯ ಶಿಲ್ಪಗಳ ಕೈಗಳಲ್ಲಿ ಕಂಡುಬರುವ ಪರಿಕರಗಳು

1. ಅಂಕುಶ
2. ಅಕ್ಷಮಾಲೆ (ಜಪಮಾಲೆ)
3. ಕಮಲ
4. ಕಳಶ
5. ಚಕ್ರ
6. ಡಮರು
7. ತ್ರಿಶೂಲ
8. ಪರಶು (ಕೊಡಲಿ)
9. ಪಾಶ
10. ಪುಸ್ತಕ
11. ಫಲ
12. ರತ್ನ (ಆಭರಣ)
13. ಲೇಖನಿ
14. ವೀಣೆ
15. ಸುಧಾಬಾಂಡ (ಪಾನಪಾತ್ರೆ)
16. ಸ್ರುವ (ಸೌಟು)

ಇವುಗಳಲ್ಲದೆ ಶಿಲ್ಪಶಾಸ್ತ್ರೀಯ ಪಠ್ಯಗಳಲ್ಲಿ ಹೇಳಿರುವ ಇತರ ಪರಿಕರಗಳು

17. ಈಕ್ಷುಚಾಪ
18. ಉತ್ಪಲ(ಕನ್ನೈದಿಲೆ)
19. ಕತ್ತರಿ
20. ಕನ್ನಡಿ
21. ಕಪಾಲ
22. ಕುಂಡಿಕಾ(ಕಮಂಡಲು)
23. ಘಂಟೆ
24. ಚಕ್ರ
25. ತಂಕ (ವಸ್ತ್ರ)
26. ದಂಡ
27. ಪಿನಾಕ (ಬಿಲ್ಲು)
28. ಮುಸಲ(ಒನಕೆ)
29. ಶಂಖ
30. ಶುಕ(ಗಿಳಿ)
31. ಶೂಲ
32. ಹರಿಣ
33. ಹಲಾ(ನೇಗಿಲು)

ಅನುಬಂಧ –4

ಗ್ರಂಥಋಣ

ಶಾಸನ ಸಂಪುಟಗಳು

1. Epigraphia Carnatica, Vols. 1-12 (New Editions)
2. Epigraphia Carnatica, Vols. I-XVI (Old Editions) [Chief Editor: B.L.Rice]
3. Epigraphia Indica Vols.
4. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟಗಳು [ಪ್ರಧಾನ ಸಂಪಾದಕರು : ಡಾ. ದೇವರಕೊಂಡಾರೆಡ್ಡಿ]
5. Karnatak Inscriptions Vols. I-V
6. Mysore Archaeological Reports
7. South Indian Inscriptions Vols.

ವಿಶ್ವಕೋಶಗಳು ಮತ್ತು ನಿಘಂಟುಗಳು

1. ಚಕ್ರವರ್ತಿ ಶ್ರೀನಿವಾಸ ಗೋಪಾಲಾಚಾರ್ಯ: ***ಸಂಸ್ಕೃತ–ಕನ್ನಡ ಶಬ್ದಕೋಶ,*** 6 ಸಂಪುಟಗಳು ಬಾಪ್ಕೊ ಪ್ರಕಾಶನ, ಬೆಂಗಳೂರು ಪ್ರೆಸ್, ಬೆಂಗಳೂರು. 1999
2. ಚಕ್ರವರ್ತಿ ಜಿ.ಎನ್.: ***ಸಂಸ್ಕೃತ–ಕನ್ನಡ ನಿಘಂಟು***, ಗೀತಾ ಬುಕ್ ಹೌಸ್, ಮೈಸೂರು. 2006
3. ತಂಬಂಡ ವಿಜಯ್ ಪೂಣಚ್ಚ (ಸಂ): ***ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ: 4 ಚರಿತ್ರೆ,*** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 2001
4. ಪಂಡಿತ ಐರೋಡಿ ಯಜ್ಞನಾರಾಯಣ ಉಡುಪ: ***ಪುರಾಣ–ಭಾರತ ಕೋಶ,*** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. 3ನೇ ಮುದ್ರಣ. 1997
5. ಬೆನಗಲ್ ರಾಮರಾವ್, ಪಾನ್ಯಂ ಸುಂದರಶಾಸ್ತ್ರಿ: ***ಪುರಾಣನಾಮ ಚೂಡಾಮಣಿ,*** ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು. 5ನೇ ಮುದ್ರಣ. 2003
6. ರಂಗನಾಥ್‌ಶರ್ಮ ಎನ್.(ಸಂ): ಅಮರಸಿಂಹನ ***ನಾಮಲಿಂಗಾನುಶಾಸನ ಅಥವಾ ಅಮರಕೋಶ,*** ಸುವಿದ್ಯಾ ಪ್ರಕಾಶನ, ಬೆಂಗಳೂರು. 2ನೇ ಆವೃತ್ತಿ. 1996
7. Monier Williams: ***A Dictionary English and Sanskrit***. Motilal Banarasidas Publishers Pvt. Ltd. Delhi. (14th Indian Edn.)1996
8. ***Encyclopaedia Britannica***, Encyclopaedia Britanica Inc., London. 2002

ಪ್ರಾಚೀನ ಕನ್ನಡ ಕೃತಿಗಳು

1. ಅನಂತರಂಗಚಾರ್ ಎನ್.: ಪಂಪಮಹಾಕವಿ ವಿರಚಿತ ***ಪಂಪಭಾರತಂ*** (ಗದ್ಯಾನುವಾದ)– ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. 1999
2. ಅನಂತರಂಗಾಚಾರ್ ಎನ್. (ಸಂ): ಶ್ರೀಮಲ್ಲಿಕಾರ್ಜುನ ಕವೀಶ್ವರ ಸಂಯೋಜಿತ ***ಸೂಕ್ತಿಸುಧಾರ್ಣವಂ,*** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. 1972
3. ಕಮಲಾ ಹಂಪನಾ, ಕೆ.ಆರ್.ಶೇಷಗಿರಿ: ಚಾವುಂಡರಾಯ ವಿರಚಿತ ***ಚಾವುಂಡರಾಯ ಪುರಾಣಂ,*** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1983
4. ಕಲಬುರ್ಗಿ ಎಂ.ಎಂ. (ಸಂ): ***ನಿಂಬಸಾಮಂತ ಚರಿತೆ,*** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. 1981
5. ಕಲಬುರ್ಗಿ ಎಂ.ಎಂ. (ಸಂ): ***ಬಸವಣ್ಣನವರ ವಚನಸಂಪುಟ,*** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. 2001
6. ***ಕಲ್ಲಚ್ಚಿನ ಗಾದೆಗಳು,*** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು. 2001

7. ಕುಲಕರ್ಣಿ ಆರ್.ವಿ.: ಆಂಡಯ್ಯ ಕವಿಯ ***ಕಬ್ಬಿಗರ ಕಾವಂ*** (ಗದ್ಯಾನುವಾದ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1999

8. ಕೃಷ್ಣಕಟ್ಟೆ (ಸಂ): ಅಪರಾಳ ತಮ್ಮಣ ಮತ್ತು ಶಿರಗುಪ್ಪಿ ಸದಾಶಿವಪ್ಪ ಕೃತ ***ಶ್ರೀಕೃಷ್ಣಪಾರಿಜಾತ***, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 1997

9. ಕೃಷ್ಣಕುಮಾರ್ ಸಿ.ಪಿ. (ಸಂ) ರಾಮರಸ ವಿರೂಪಾಕ್ಷನ ***ಹರಿಶ್ಚಂದ್ರ ಸಾಂಗತ್ಯ***, ಸುರುಚಿ ಪ್ರಕಾಶನ, ಮೈಸೂರು. 1967

10. ಕೃಷ್ಣಜೋಯಿಸ್ ಎಸ್.ಎನ್. (ಸಂ): ಮಂಗರಸ ವಿರಚಿತ ***ಸೂಪಶಾಸ್ತ್ರ***, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. 1969

11. ಕೃಷ್ಣಮೂರ್ತಿ ಹನೂರು (ಸಂ): ***ಜನಪದ ಮತ್ತು ಬುಡಕಟ್ಟು ಗೀತೆಗಳು***, ಸಾಹಿತ್ಯ ಅಕಾಡೆಮಿ, ನವದೆಹಲಿ. 1998

12. ಕೇಶವನ್ ಪ್ರಸಾದ್ ಕೆ. (ಸಂ): ***ಮಲೆಮಾದೇಶ್ವರ***, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 1997

13. ಗುಂಡಪ್ಪ ಎಲ್. (ಸಂ): ಚಿಕ್ಕಹೆಜ್ಜಾಜಿ ವಿಜಯವೆಂಕಟರಮಣ ಕವಿ ವಿರಚಿತ ***ಶ್ರೀ ಭಗವಚ್ಚರಿತ್ರೆ***, ಶ್ರೀ ಭಗವತ್ಸೇವಾಸಮಾಜ, ಚಿಕ್ಕಹೆಜ್ಜಾಜಿ 1967

14. ಗುಂಡ್ಮಿ ಚಂದ್ರಶೇಖರ ಐತಾಳ: ದುರ್ಗಸಿಂಹ ಕವಿಯ ***ಕರ್ಣಾಟಕ ಪಂಚತಂತ್ರಂ*** (ಗದ್ಯಾನುವಾದ)– ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. 1999

15. ಗೊರೂರು ರಾಮಸ್ವಾಮಿ ಅಯ್ಯಂಗಾರ್(ಸಂ): ***ಹಳ್ಳಿಯ ಹಾಡುಗಳು***, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು. 1999

16. ಗೋಪಾಲಕೃಷ್ಣಭಟ್ಟ, ತೆಕ್ಕುಂಜೆ (ಗದ್ಯಾನುವಾದ): ಜನ್ನಕವಿಯ ***ಯಶೋಧರ ಚರಿತ್ರೆ***, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. 1999

17. ಚಂದ್ರಶೇಖರ ಪ.ವಿ.(ಸಂ): ನೇಮಿಚಂದ್ರನ ***ಲೀಲಾವತಿ ಪ್ರಬಂಧಂ***, ವಾಗ್ದೇವಿ ಎಂಟರ್‌ಪ್ರೈಸಸ್, ಮೈಸೂರು.

18. ಚೆಲುವರಾಜು (ಸಂ): ***ಜುಂಜಪ್ಪ***, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 1997

19. ಜಗನ್ನಾಥಶಾಸ್ತ್ರಿ ಕೆ. (ಸಂ): ಪರಮದೇವಕವಿ ವಿರಚಿತ ***ಶ್ರೀ ತುರಂಗ ಭಾರತ***, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1986

20. ಜವರೇಗೌಡ ದೇ. (ಸಂ): ಆಂಡಯ್ಯ ಕವಿ ***ಕಬ್ಬಿಗರ ಕಾವಂ***, ಶೃಂಗಾರ ಪ್ರಕಾಶನ, ಚಿಕ್ಕನಾಯಕನಹಳ್ಳಿ, 1999

21. ಜವರೇಗೌಡ ದೇ. (ಸಂ): ***ಜನಪದ ಗೀತಾಂಜಲಿ***, ಸಾಹಿತ್ಯ ಅಕಾಡೆಮಿ, ನವದೆಹಲಿ. 1978

22. ಜವರೇಗೌಡ ದೇ. (ಸಂ): ***ನಳಚರಿತ್ರೆ***, ರಾಜ್ಯಸಮಿತಿ, ಬೆಂಗಳೂರು. 1965.

23. ತಳಗೇರಿ ಕೆ.ಬಿ. (ಸಂ): ದಾಸ ಶ್ರೇಷ್ಠ ಕನಕದಾಸರ ***ರಾಮಧಾನ್ಯ ಚರಿತ್ರೆ***, ವಿದ್ಯಾನಿಧಿ ಪ್ರಕಾಶನ, ಗದಗ. 1989

24. ದುಂಡಿರಾಜ ಲಿಮಯೆ (ಸಂ): ಹುಲಕುಂದ ಶಿವಲಿಂಗಸ್ವಾಮಿ ರಚಿತ ***ಕನ್ನಡದ ಗೀ ಗೀ ಪದಗಳು***, ಸೀತಾರಾಮ ಪ್ರಕಾಶನ ರಾಮದುರ್ಗ. 1985

25. ದೇವೀರಪ್ಪ ಎಚ್. (ಸಂ): ನಾಗವರ್ಮ ವಿರಚಿತಂ ***ಕಾವ್ಯಾವಲೋಕನಂ***, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.2004

26. ನಂಜುಂಡಾರಾಧ್ಯ ಎಂ.ಜಿ.: ***ಗಿರಿಜಾಕಲ್ಯಾಣ ಮಹಾಪ್ರಬಂಧಂ*** (ಗದ್ಯಾನುವಾದ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. 1999

27. ನರಸಿಂಹಶಾಸ್ತ್ರಿ ಕೆ.ಎಲ್.: ಪಂಪಮಹಾಕವಿ ವಿರಚಿತ ***ಆದಿಪುರಾಣ*** (ಗದ್ಯಾನುವಾದ) – ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳುರು. 1999

28. ನಾಗಚಂದ್ರ ಕವಿಯ ***ಪಂಪರಾಮಯಣಂ ಎಂಬ ರಾಮಚಂದ್ರಚರಿತ ಪುರಾಣ***. ಕರ್ಣಾಟಕ ಸಾಹಿತ್ಯ ಪರಿಷತ್ತು ಬೆಂಗಳೂರು. 1921.

29. ನಾಗರಾಜಯ್ಯ ಹಂಪ, ನಾರಾಯಣ ಪಿ.ವಿ. (ಸಂ): ಕುಮುದೇಂದು ಕವಿ ವಿರಚಿತ ***ಕುಮುದೇಂದು ರಾಮಾಯಣ,*** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1981

30. ನಾಯಕ ಹಾ.ಮಾ., ಪಂಚಲಿಂಗೇಗೌಡ ಕೆ.ಸಿ. (ಸಂ): ಭಾಸ್ಕರ ಕವಿಯ ***ಜೀವಂಧರಚರಿತೆಯ ಸಂಗ್ರಹ,*** ನರೇಶ್ ಅಂಡ್ ಕಂಪೆನಿ, ಬೆಂಗಳೂರು, 1963

31. ನಾರಾಯಣಶಾಸ್ತ್ರೀ ಹ.ವೆ. (ಸಂ): ***ಕರ್ಣಾಟಕ ಕಾದಂಬರಿ,*** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳುರು. 1999

32. ಪಂಚಮುಖಿ ಆರ್.ಎಸ್. (ಸಂ): ಈಶ್ವರಕವಿ ವಿರಚಿತಂ ***ಕವಿಜಿಹ್ವಾಬಂಧನಂ,*** ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ, 1950

33. ಪರಮೇಶ್ವರಭಟ್ಟ ಎಸ್.ವಿ. (ಸಂ): ಮುದ್ದಣ್ಣ ಕವಿ ವಿರಚಿತ ***ಶ್ರೀರಾಮಪಟ್ಟಾಭಿಷೇಕ,*** ಉಷಾ ಸಾಹಿತ್ಯ ಮಾಲೆ, ಮೈಸೂರು. 1955

34. ಬಸವಾರಾಧ್ಯ ಎನ್., ಬಸಪ್ಪ ಎಸ್. (ಸಂ): ರಾಘವಾಂಕ ವಿರಚಿತ ***ಹರಿಶ್ಚಂದ್ರ ಕಾವ್ಯಂ*** ಗೀತಾ ಬುಕ್ ಹೌಸ್, ಮೈಸೂರು. 1993

35. ಬಸವಾರಾಧ್ಯ ಎನ್. (ಸಂ): ಬಾಹುಬಲಿಪಂಡಿತ ವಿರಚಿತ ***ಧರ್ಮನಾಥಪುರಾಣಂ,*** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. 1975

36. ಮಂಜುನಾಥನ್ ಜಿ.ಜಿ. (ಸಂ): ರುದ್ರಭಟ್ಟ ವಿರಚಿತ ***ಜಗನ್ನಾಥ ವಿಜಯಂ,*** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, 1996.

37. ಮಲ್ಲಾಪುರ ಜಿ.ವ್ಹಿ. (ಸಂ): ***ಅಲ್ಲಮ ಪ್ರಭುದೇವರ ವಚನಸಂಪುಟ,*** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. 2001

38. ಮಲ್ಲಾಪುರ ಬಿ.ವ್ಹಿ. (ಸಂ): ***ಚೆನ್ನಬಸವಣ್ಣನವರ ವಚನಸಂಪುಟ,*** ಕನ್ನಡ ಪುಸ್ತಕ ಪ್ರಧಿಕಾರ ಬೆಂಗಳೂರು. 2001

39. ಮಹೀಶವಾಡಿ ಬಿ.ಬಿ. (ಸಂ): ಕವಿಚಕ್ರವರ್ತಿ ಜನ್ನ ವಿರಚಿತ ***ಅನಂತನಾಥಪುರಾಣಂ,*** ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1975

40. ಮೈತ್ರಿ ಕೆ.ಎಂ. (ಸಂ): ***ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ,*** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 1997

41. ರಾಘವೇಂದ್ರರಾವ್ ಕೆ. (ಸಂ): ವೃತ್ತವಿಲಾಸ ವಿರಚಿತ ***ಧರ್ಮಪರೀಕ್ಷೆ,*** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. 1982

42. ರಾಜಪ್ಪ ಟಿ.ಎಸ್. (ಸಂ): ***ಕೆರೆ ಹೊನ್ನಮ್ಮ ಮತ್ತು ಇತರ ಲಾವಣಿಗಳು,*** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. 1974

43. ರಾಜೇಗೌಡ ಹ.ಕ. (ಸಂ): ***ಕೆಂಪಣ್ಣಗೌಡನ ಯಕ್ಷಗಾನ ಕಾವ್ಯಗಳು,*** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು. 1993

44. ರಾಮರಾವ್ ಆರ್.ಎಸ್.: ***ಸಿದ್ಧರಾಮ ಚಾರಿತ್ರ,*** (ಗದ್ಯಾನುವಾದ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. 1999

45. ವಿದ್ಯಾಶಂಕರ್ ಎಸ್. (ಸಂ): ***ಶಾಂತಿನಾಥಪುರಾಣ,*** ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು. 1987

46. ವೆಂಕಟರಾವ್ ಎ., ಶೇಷ ಅಯ್ಯಂಗಾರ್ ಎಚ್ (ಸಂ): ಕೇಶಿರಾಜ ವಿರಚಿತ ***ಶಬ್ದಮಣಿದರ್ಪಣಂ,*** ಮದರಾಸು ವಿಶ್ವವಿದ್ಯಾಲಯ, ಮದರಾಸು. 1973

47. ಶಂಕರ್ ಕೆದಿಲಾಯ (ಸಂ): ***ಕರ್ನಾಟಕ ಕವಿರಾಜಮಾರ್ಗಂ,*** ಮದರಾಸು ವಿಶ್ವವಿದ್ಯಾಲಯ, 1973.

48. ಶಾಮಶಾಸ್ತ್ರಿ ಆರ್ (ಸಂ): ಗೋವಿಂದವೈದ್ಯ ಕೃತ ***ಕಂಠೀರವನರಸರಾಜ ವಿಜಯ,*** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. 1971

49. ಶಾಮಶಾಸ್ತ್ರಿ ಆರ್. (ಸಂ): ನಯಸೇನ ವಿರಚಿತ ***ಧರ್ಮಾಮೃತಂ,*** ಓರಿಯಂಟಲ್ ಲೈಬ್ರರಿ ಪಬ್ಲಿಕೇಷನ್ಸ್, ಮೈಸೂರು. 1924

50. ಶಾಮಶಾಸ್ತ್ರಿ ಆರ್. (ಸಂ): ಸೋಮನಾಥ ಕವಿ ವಿರಚಿತವಾದ ***ಅಕ್ರೂರ ಚರಿತ್ರೆ***, ಓರಿಯೆಂಟಲ್ ಲೈಬ್ರರಿ ಪಬ್ಲಿಕೇಶನ್ಸ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. 1923

51. ಶಿರೂರ ಬಿ.ವ್ಹಿ. (ಸಂ): ಅನಂತಕವಿಯ ***ಗೊಮ್ಮಟೇಶ್ವರ ಚರಿತೆ***, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2ನೇ ಮುದ್ರಣ 1981

52. ಶಿವಾನಂದ ಗುಬ್ಬಣ್ಣವರ (ಸಂ): ***ಬರಹೋ ಪದಾ ಬರಹೋ***, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1999

53. ಶ್ರೀನಿವಾಸ ಹಾವನೂರು ಮತ್ತು ಇತರರು (ಸಂ): ***ಸಮಗ್ರ ದಾಸ ಸಾಹಿತ್ಯ***, 35 ಸಂಪುಟಗಳು, 50 ಭಾಗಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು. 2003

54. ಶೇಷಗಿರಿ ಕೆ.ಆರ್. (ಸಂ): ಸೋಮನಾಥಕವಿ ವಿರಚಿತ ***ರುಕ್ಮಾಂಗದ ಚರಿತೆ***, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು. 1979

55. ಸಣ್ಣಯ್ಯ ಬಿ.ಎಸ್. (ಸಂ): ಎರಡನೆಯ ನಾಗವರ್ಮ ವಿರಚಿತ ***ವರ್ಧಮಾನ ಪುರಾಣಂ***, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. 1974

56. ಸಣ್ಣಯ್ಯ ಬಿ.ಎಸ್. (ಸಂ): ಬಂಧುವರ್ಮ ವಿರಚಿತ ***ಹರಿವಂಶಾಭ್ಯುದಯಂ***, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ. 1974

57. ಸಣ್ಣಯ್ಯ ಬಿ.ಎಸ್. (ಸಂ): ***ಮದನಮೋಹಿನಿಯ ಕಥೆ.*** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು. 1972

58. ಸಣ್ಣಯ್ಯ ಬಿ.ಎಸ್. (ಸಂ): ಮಹಾಬಲ ಕವಿವಿರಚಿತ ***ನೇಮಿನಾಥ ಪುರಾಣಂ***, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. 1977

59. ಸಣ್ಣಯ್ಯ ಬಿ.ಎಸ್. (ಸಂ): ರನ್ನ ವಿರಚಿತ ***ಸಾಹಸಭೀಮವಿಜಯಂ*** (ಗದಾಯುದ್ಧ), ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. 1985

60. ಸಣ್ಣಯ್ಯ ಬಿ.ಎಸ್., ರಾಮೇಗೌಡ (ಸಂ) ರನ್ನವಿರಚಿತ ***ಅಜಿತತೀರ್ಥಂಕರಪುರಾಣಂ***, ಗೀತಾ ಬುಕ್ ಹೌಸ್, ಮೈಸೂರು. 1988

61. ಸಣ್ಣಯ್ಯ ಬಿ.ಎಸ್., ರಾಮೇಗೌಡ (ಸಂ): ಲಕ್ಷ್ಮೀಶನ ***ಜೈಮಿನಿಭಾರತ***, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. 1993

62. ಸೀತಾರಾಮಯ್ಯ ಎಂ.ವಿ. (ಸಂ): ***ಶ್ರೀವಿಜಯಕೃತ ಕವಿರಾಜಮಾರ್ಗಂ***, ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು. 1994

63. ಸುಂಕಾಪುರ ಎಂ.ಎಸ್. (ಸಂ): ಮಹಾಕವಿ ಷಡಕ್ಷರದೇವ ವಿರಚಿತ ***ಶಬರಶಂಕರವಿಳಾಸಂ.*** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. 1976

64. ಹಲಸಂಗಿ ಗೆಳೆಯರು(ಸಂ): ***ಹಲಸಂಗಿಹಾಡು***, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 2000

65. ಹಿರೇಮಠ ಆರ್.ಸಿ. (ಸಂ): ನೇಮರಸ ಕವಿಕೃತ ***ಲೋಭದತ್ತ ಚರಿತೆ***, ಕರ್ನಾಟಕ ವಿಶ್ವವಿದ್ಯಾಲಯ ಪ್ರಕಾಶನ, ಧಾರವಾಡ. 1973

66. ಹಿರೇಮಠ ಆರ್.ಸಿ., ಹೆಂಡಿ ಬಿ.ಬಿ. (ಸಂ): ನಾಗಚಂದ್ರ ಕವಿಕೃತ ***ಮಲ್ಲಿನಾಥಪುರಾಣಂ***, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1974

ಆಧುನಿಕ ಕನ್ನಡ ಕೃತಿಗಳು

67. ಕುವೆಂಪು: ***ಚಿತ್ರಾಂಗದಾ*** –ಉದಯರವಿ ಪ್ರಕಾಶನ, 8ನೇ ಮುದ್ರಣ, ಮೈಸೂರು. 1987

68. ಕುವೆಂಪು: ***ಶ್ರೀರಾಮಾಯಣದರ್ಶನಂ*** –ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. 2000

69. ಕುವೆಂಪು: ***ಸಮಗ್ರ ಕಾವ್ಯ, 2 ಸಂಪುಟಗಳು***. ಕನ್ನಡ ವಿಶ್ವವಿದ್ಯಾಲಯ ಹಂಪಿ. 2000

70. ಗುಂಡಪ್ಪ ಡಿ.ವಿ.: *ಮರುಳಮುನಿಯನ ಕಗ್ಗ*, ಹೆಚ್.ವಿ.ಶ್ರೀಕಾಂತನ್, ಬೆಂಗಳುರು. 2001

71. ನರಸಿಂಹಚಾರ್ ಪು.ತಿ.: *ಸಮಗ್ರ ಕವನಗಳು*, ಲಿಪಿ ಪ್ರಕಾಶನ ಬೆಂಗಳೂರು. 1988

72. ಬೇಂದ್ರೆ ದ.ರಾ.: *ಔದುಂಬರ ಗಾಥೆ* ದ.ರಾ.ಬೇಂದ್ರೆ ಜೀವನ ಮಹಾಕಾವ್ಯ. ಆರು ಸಂಪುಟಗಳು. ವರಕವಿ ಡಾ॥ ದ.ರಾ.ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ. 2003

73. ಶಿವರುದ್ರಪ್ಪ ಜಿ.ಎಸ್.: *ಸಮಗ್ರ ಕಾವ್ಯ*, ಕಾಮಧೇನು, ಬೆಂಗಳೂರು. 1997

74. ಶ್ರೀಕಂಠಯ್ಯ ತೀ.ನಂ.: *ಸಮಗ್ರ ಕವಿತೆಗಳು*, ಶೃಂಗಾರ ಪ್ರಕಾಶನ, ಚಿಕ್ಕನಾಯಕನಹಳ್ಳಿ. 1996

75. ಶ್ರೀನಿವಾಸ: *ಶ್ರೀರಾಮಪಟ್ಟಾಭಿಷೇಕ*, ಜೀವನಕಾರ್ಯಾಲಯ, ಬೆಂಗಳೂರು. 1972

76. ಸೀತಾರಾಮಯ್ಯ. ವಿ.: *ಸ್ನೇಹ-ವಿಶ್ವಾಸ, ಸಮಗ್ರ ಕಾವ್ಯ ಸಂಪುಟ*, ವಿ,ಸೀ.ಸಂಪದ, ಬೆಂಗಳೂರು. 1990

ಇತರೆ ಕೃತಿಗಳು

77. ಅಕ್ಕಿ ಡಿ.ಎನ್.: *ಜೈನ ವಿಗ್ರಹಗಳು*, ಕವಿಕುಂಚ ಪ್ರಕಾಶನ, ಗುಲ್ಬರ್ಗಾ.

78. ಅನಂತರಾಮು ಟಿ.ಆರ್.: *ಸರಸ್ವತಿ ಪುರಾಣ-ಇತಿಹಾಸ-ವಿಜ್ಞಾನ*, ನವಕರ್ನಾಟಕ ಪ್ರಕಾಶನ, ಬೆಂಗಳೂರು. 2005

79. ಕಶ್ಯಪ್ ಆರ್.ಎಲ್.: *ಸರಸ್ವತಿ -ಪ್ರೇರಣಾ ಶಕ್ತಿಯ ಅಧಿದೇವತೆ*, ಅನು: ರ.ವಿ.ಜಹಾಗೀರದಾರ, ಶ್ರೀ ಅರೋಬಿಂದೊ ಕಪಾಲಿಶಾಸ್ತ್ರಿ ವೇದಸಂಸ್ಕೃತಿ ಸಂಸ್ಥೆ, ಬೆಂಗಳೂರು. 2002

80. ಕುಮಾರಸ್ವಾಮಿ ಕೆ.ಎಸ್.: *ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರ್ಯರು*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. 1996

81. ಗೋಪಾಲರಾವ್ ಬಿ.: *ಕುಮಾರಸಂಭವ ಮಹಾಕಾವ್ಯ* ಸಮಗ್ರ ಗದ್ಯಾನುವಾದ, ಶೈಲಶ್ರೀ ಸಾಹಿತ್ಯ ಪ್ರಕಾಶನ, ಮೈಸೂರು. 1999

82. ಗೋಪಾಲರಾವ್ ಬಿ.: *ಮೇಘದೂತ* (ಗದ್ಯಾನುವಾದ), ಅಂಕಿತ ಪುಸ್ತಕ, ಬೆಂಗಳೂರು. 2006

83. ಚಿದಾನಂದಮೂರ್ತಿ ಎಂ.: *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಸಪ್ನ ಬುಕ್ ಹೌಸ್, ಬೆಂಗಳೂರು. 2002

84. ಜ್ಞಾನಾನಂದ ಜಿ.: *ರೂಪ ಲಕ್ಷಣ ಸಂಗ್ರಹ*, ಸಂ.1, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು. 2001

85. ಜ್ಞಾನಾನಂದ ಜಿ.: *ಶಿಲ್ಪಾದರ್ಶ*, ಸಂ.1, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 2001

86. ದೇವರಕೊಂಡಾರೆಡ್ಡಿ: *ಶ್ರವಣಬೆಳಗೊಳದ ಬಸದಿಗಳ ವಾಸ್ತುಶಿಲ್ಪ*, ಚಂದ್ರಗುಪ್ತ ಗ್ರಂಥಮಾಲೆ, ಶ್ರವಣಬೆಳಗೊಳ. 1993

87. ನಾಗರಾಜಯ್ಯ ಹಂಪ: *ಯಕ್ಷ-ಯಕ್ಷಿಯರು*, ಚಂದ್ರಸಾಗರವರ್ಣಿ ಗ್ರಂಥಮಾಲೆ, ಬೆಂಗಳೂರು. 1976

88. ಪಂಡಿತ ಪಂಢರೀನಾಥಾಚಾರ್ಯ ಗಲಗಲಿ (ಅನು): *ವರಾಹಪುರಾಣ*, ವೇದ ಪುರಾಣ ಸಾಹಿತ್ಯ ಮಾಲೆ ಟ್ರಸ್ಟ್, ಹುಬ್ಬಳ್ಳಿ. 1973

89. ಪಂಡಿತ ಪಂಢರೀನಾಥಾಚಾರ್ಯ ಗಲಗಲಿ (ಅನು): *ವಾಮನಪುರಾಣ*, ವೇದ ಪುರಾಣ ಸಾಹಿತ್ಯ ಮಾಲೆ ಟ್ರಸ್ಟ್, ಹುಬ್ಬಳ್ಳಿ. 1973

90. ಪಂಡಿತ ಪಂಢರೀನಾಥಾಚಾರ್ಯ ಗಲಗಲಿ (ಅನು): *ಮತ್ಸ್ಯಪುರಾಣ*, ವೇದ ಪುರಾಣ ಸಾಹಿತ್ಯ ಮಾಲೆ ಟ್ರಸ್ಟ್, ಹುಬ್ಬಳ್ಳಿ. 1973

91. ಪರಮೇಶ್ವರಭಟ್ಟ ಎಸ್.ವಿ. (ಅನು): *ಕನ್ನಡ ಕಾಳಿದಾಸ ಮಹಾಸಂಪುಟ*, ಮೈಸೂರು. 1990

92. ಪರಮೇಶ್ವರಭಟ್ಟ ಎಸ್.ವಿ. (ಅನು): – *ಕನ್ನಡ ಭವಭೂತಿ ಮಹಾಸಂಪುಟ*, ಮೈಸೂರು. 1992

93. ಬೇಂದ್ರೆ ದ.ರಾ.: *ಸಾಹಿತ್ಯ ಮತ್ತು ವಿಮರ್ಶೆ*, ಮನೋಹರಗ್ರಂಥಮಾಲೆ, ಧಾರವಾಡ. 1937.

94. ಮಂಗಳಾ ಚಿ.ನಾ.: ಭಾರತೀಯರ ಪರಿಕಲ್ಪನೆಯಲ್ಲಿ ಸರಸ್ವತಿ, ಪುಸ್ತಕಾಲಯ, ಬೆಂಗಳೂರು. 1993

95. ಮಲ್ಲೆಪುರಂ ಜಿ ವೆಂಕಟೇಶ್ (ಸಂ): *ಶಂಬಾ ಕೃತಿ ಸಂಪುಟ*, 6 ಸಂಪುಟಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. 1999

96. ಮುಗಳಿ ರಂ.ಶ್ರೀ.: ***ಕನ್ನಡ ಸಾಹಿತ್ಯ ಚರಿತ್ರೆ***, ಗೀತಾ ಬುಕ್ ಹೌಸ್, ಮೈಸೂರು, 1998
97. ಮುಗಳಿ ರಂ.ಶ್ರೀ: ***ಕನ್ನಡ ಸಾಹಿತ್ಯದಲ್ಲಿ ಸರಸ್ವತಿ ದರ್ಶನ***, ಮೈಸೂರು ವಿಶ್ವವಿದ್ಯಾಲಯ ಮೈಸೂರು. 1957
98. ರಹಮತ್ ತರೀಕೆರೆ: ***ಕರ್ನಾಟಕದ ಸೂಫಿಗಳು***, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 1998
99. ರಾಮಕೃಷ್ಣರಾವ್ ಬಿ.ಎಸ್. (ಸಂ): ***ಭರ್ತೃಹರಿಯ ನೀತಿ ಶತಕ***, ಉದಯಪ್ರಕಾಶನ, ಬೆಂಗಳೂರು. 2000
100. ರಾಮಚಂದ್ರರಾವ್ ಎಸ್.ಕೆ.: ***ಮೂರ್ತಿಶಿಲ್ಪ –ನೆಲೆ ಹಿನ್ನೆಲೆ***, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. 1975
101. ಲಕ್ಷ್ಮೀನರಸಿಂಹಮೂರ್ತಿ ಹೆಚ್.ಎಸ್. (ಸಂ): ***ಸರಸ್ವತೀ ರಹಸ್ಯೋಪನಿಷಚ್ಚಂದ್ರಿಕೆ***, ಆಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ. 1985
102. ವೆಂಕಟರಾವ್ ಹೆಚ್.ಪಿ. (ಸಂ): ***ಸಾಯಣಭಾಷ್ಯಸಹಿತಾ ಋಗ್ವೇದಸಂಹಿತಾ***, 30 ಸಂಪುಟಗಳು. ಶ್ರೀ ಶಾರದಾ ಪ್ರೆಸ್, ಮೈಸೂರು. 1944
103. ಶಾಂತಿರಾಜಶಾಸ್ತ್ರಿ ಎರ್ತೂರು: ***ಜೈನವೇದ ಮತ್ತು ವ್ರತಪಂಚಮಿ***, ಪಂಡಿತರತ್ನ ಎರ್ತೂರು ಶಾಂತಿರಾಜಶಾಸ್ತ್ರಿ ಟ್ರಸ್ಟ್, ಬೆಂಗಳೂರು. 1998
104. ಶಾಂತಿರಾಜಶಾಸ್ತ್ರಿ ಎರ್ತೂರು (ಸಂ): ***ಮಹಾಪುರಾಣ*** 2 ಸಂಪುಟಗಳು, ಪಂಡಿತರತ್ನ ಎರ್ತೂರು ಶಾಂತಿರಾಜಶಾಸ್ತ್ರಿ ಟ್ರಸ್ಟ್, ಬೆಂಗಳೂರು. 1992
105. ಶಿವರಾಮ ಕಾರಂತ ಕೆ.: ***ಭಾರತೀಯ ಚಿತ್ರಕಲೆ***, (ಮೊದಲ ಮುದ್ರಣ 1930), ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
106. ಶ್ರೀಕಂಠಯ್ಯ ತೀ.ನಂ.: ***ಭಾರತೀಯ ಕಾವ್ಯಮೀಮಾಂಸೆ***, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1990
107. ಶ್ರೀಕಂಠಶಾಸ್ತ್ರಿ ಎಸ್.: ***ಹೊಯ್ಸಳ ವಾಸ್ತುಶಿಲ್ಪ***, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು. 1965
108. ***ಶ್ರೀ ದೇವಿಭಾಗವತ ಮಹಾಪುರಾಣ***, ಸಂಪುಟ –3, ಶ್ರೀ ವಿದ್ಯಾಗಣಪತಿ ಪ್ರಕಾಶನ, ಬೆಂಗಳೂರು. 2001
109. ***ಶ್ರೀ ಬ್ರಹ್ಮವೈವರ್ತ ಮಹಾಪುರಾಣ***, ಶ್ರಿ ವಿದ್ಯಾಗಣಪತಿ ಪ್ರಕಾಶನ, ಬೆಂಗಳೂರು. 2001
110. ***ಶ್ರೀಮನ್ಮಹಾಭಾರತ*** (ವ್ಯಾಸಭಾರತದ ಕನ್ನಡ ಸರಳಾನುವಾದ), 32 ಸಂಪುಟಗಳು, ಭಾರತ ದರ್ಶನ ಪ್ರಕಾಶನ, ಬೆಂಗಳೂರು. 8ನೇ ಮುದ್ರಣ, 2001
111. ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್: ***ಶ್ರೀತತ್ವನಿಧಿ*** ಸಂಪುಟ –1, ಒ.ಆರ್.ಐ., ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. 1995
112. ಸುರೇಶ ಕೆ.ಎಂ. ಮತ್ತು ಇತರರು: ***ಕರ್ನಾಟಕ ದೇವಾಲಯ ಕೋಶ –ಕೊಪ್ಪಳ ಜಿಲ್ಲೆ***, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 2001

ENGLISH BOOKS

1. ***A Guide to Shravanabelagola***, Dept. of Archeology, Mysore. 1981
2. Abraham T Kavoor: ***Gods, Demons and Spirits***, Jaico Publishing House, Bombay. 1990
3. Adya Rangacharya (Ed): ***The Natyasastra***, Munisiram Manoharlal Publishers Pvt. Ltd. New Delhi 1999
4. Arthur Anthony MacDonell: ***Vedic Mythology*** (1st Edn. 1897), University Press of the Pacific, London July 30, 2004
5. Arthur Avalon (ed): ***Sharadatilaka Tantra***. Agamanusandana Samiti, Calcutta. 1933
6. Balaram Srivatsav (ed): ***Rupamandana***, Varansi Press, Varanasi. 1964
7. Benoytosh Bhattacharyya (ed): ***Sadanamala, 2 Vols***., Gaekwad Oriental Series, Baroda. 1925 (Vol. 1) and 1928 (Vol. 2)
8. Benoytosh Bhattacharyya: ***The Indian Buddhist Iconography*** (1st Edn. 1924) Asian Educational Services, Delhi. May 1993

9. Bhat G.P. (Tr): ***Skanda Purana***, 20 Vols., Motilal Banarasidas Publishers, Delhi. 2005
10. Bhattacharya B.C.: ***Jain Iconography*** (1st Edn. 1939) Motilal Banarsidass, India (Dec 1998)
11. Bhattacharya, Kanailal: ***Sarasvati – A Study on her Concept and Iconography***, Saraswat Library Calcutta. 1983
12. Chitralekha Singh & Prem Nath: ***Sarasvati: Gayatri Savitri Bagdevi***, Crest Publishing House, New Delhi. 1999
13. Deshpande N.A. (Tr): ***Padma Purana***, Motilal Banarasidas Publishers, Delhi. 2006
14. Edward Moor (Ed): Thomas Moore's ***Hindu Pantheon*** (1st Edn 1810) Kissinger Publishing, London (August 2003)
15. Frederick W Bunce: ***Dictionary of Buddhist and Hindu Iconography***, DK Printworld (P) Ltd, New Delhi. 1997
16. Frederick W Bunce: ***Encyclopedia of Buddhist Deities Demigods, Godlings, Saints and Demons***, DK Printworld (P) Ltd, New Delhi. 1994
17. Frederique Vivier: ***Greek Mythology***, Grange Books, Kent. 2004
18. Ganapati Sastri T. (Ed): ***Shilparatna***, Trivendram Sanskrit Seies, Trivendram. 1922
19. Gangadharan N. (Tr): ***Agni Purana***, 4 Vols., Motilal Banarasidas Publishers Pvt. Ltd., Delhi. 2004
20. Gopinath Rao T. A.: ***Elements of Hindu Iconography*** 2 Vols. (1st Edn. 1914 & 1916) Asian Humanities Press, Delhi, December 1984
21. Gururaj Bhat P.: ***Studies in Tuluva History and Culture***, Published by Author, 1975
22. Hopkins, Edward Washburn, 1857-1932: ***Epic mythology*** (1st Edn. 1915), Digitized version, Strasburg K.J. Toronto. May 23, 2006
23. Jitendra Nath Banerjee: ***The Development of Hindu Iconography*** (1st Edn 1941) Kissinger Publishing, London 2004
24. John Muir: ***Original Sanskrit Texts on the Origin and-Progress of the Religion and Institutions of India*** (1-5 Vols. 1st Edn1858-73) Stanford University London. Digitized Version, 13 Mar 2006
25. Mani V.R.: ***Saptamatrikas in Indian Religion and Art***, Mittal Publications, New Delhi. 1995
26. Mohammad Israil Khan: ***Sarasvati in Sanskrit Literature*** (1st Edn 1978),Reprint ed., Nisha Book Service Ghaziabad 2006
27. Nalini Kanta Bhattasali: ***Iconography of Buddhist and Brahmanical Sculptures*** : (In the Dacca Museum). (1st Edn. 1929) Reprint, Aryan, New Delhi. 2002
28. Niranjan Ghosh: ***Sri Sarasvati in Indian Art and Literature***, Sri Satguru prakashana, Delhi, 1984
29. Om Prakash Misra: ***Mother Goddess in Central India***, Agamkala Prakashan, Delhi. 1985
30. Panchanan Tarakartna (ed): ***Tantrasara***, Vangavasi Publication, Calcutta. 1927
31. Ramachandra Dikshitar V.R.: ***The Lalita Cult***, Motilal Banarasidas Publishers Pvt. Ltd., Delhi. 1999
32. Ramachandra Rao S.K.: ***Pratima-Kosha***, ***Encyclopaedia of Indian Iconography***, Vol.6, Kalpataru Research Academy Publication, Bangalore. 1992
33. Ruriko Sakuma: ***Sadhanamala -Sanskrit and Tibetan Texts***., Adroit Pub., Delhi. 2002
34. Saltore R.N.: ***Vijayanagar Art***. Sandeep Prakashana, Delhi. 1982
35. Sambashiva Sastri (Ed): ***Shilparatna, Part-2***, Trivendram Sanskrit Seies, Trivendram. 1927
36. Saraswati S.K.: ***Tantrayana Art: An Album: With Introduction and Notes*** (1st Edn. 1977) Reprint. Kolkata, The Asiatic Society, 2003
37. Shastri J.L. (Tr): ***Shiva Purana***, 4 Vols. Motilal Banarasidas Publishers, Delhi. 2004
38. Shastri J.L. (Tr): ***Linga Purana***, 2 Vols. Motilal Banarasidas Publishers, Delhi. 2006
39. Shastri J.L. (Tr): ***Markandeya Purana***, 4 Vols. Motilal Banarasidas Publishers, Delhi. 2006
40. Shivarama Karanta: ***Karnataka Paintings***, Prasaranga, University of Mysore, Mysore. 1973
41. Sibendu Manna: Mother Goddess Chandi, Puniti Pustak, Calcutta. 1993

42. Srivastava M.C.P.: ***Mother Goddess: An Indian Art Architecture and Literature***, Agamakala Prakashan, Delhi. 1979. P.128-136
43. Subodh Kapoor (Ed): ***The Hindu-Encyclopaedia of Hinduism***, Casmo Publications, New Delhi. 2000
44. Susan L Huntington: ***The Art of Ancient India –Buddhist, Hindus, Jaina***,. Weather Hill Publications, New York. 1999
45. Susan Taponier (Tr): Joel Schimidt's ***Roman Mythology***, Grange Books, Kent. 2004
46. Tagore G.V. (Tr): ***Vayu Purana***, Motilal Banarasidas Publishers, Delhi. 2004
47. Vans Kennedy: ***Researches into the Nature and Affinity of Ancient and Hindu Mythology***, (1st Edition 1831) Kissinger Publishing, London Feb 2006
48. Vettam Mani: ***Puranic Encyclopaedia***, Motilal Banarasidas Publishers, Delhi. 1998
49. Wilkins W.J.: ***Hindu Mythology*** (1st Edn.1882) Kissinger Publishing Co, London. 2004

ಲೇಖನಗಳು

1. ಮೇಲಾಪುರ ಎಸ್.ಕೆ.: *ಮಾದನಭಾವಿಯಲ್ಲಿ ಶೋಧಿಸಲ್ಪಟ್ಟ 12ನೇ ಶತಮಾನದ ಸರಸ್ವತೀ ವಿಗ್ರಹ* (ಇತಿಹಾಸ ದರ್ಶನ ಸಂ. 15) 2000. ಪು.64–66
2. ವಸಂತಲಕ್ಷ್ಮಿ ಕೆ.: *ಶಾರದಾ ಉಪಾಸನೆ ಒಂದು ಅಧ್ಯಯನ* (ಇತಿಹಾಸ ದರ್ಶನ ಸಂ. 6) 1991. ಪು.83–93
3. ವಸಂತಲಕ್ಷ್ಮಿ ಕೆ.: *ಕರ್ನಾಟಕದ ಸರಸ್ವತಿ ಶಿಲ್ಪಗಳು*(ಇತಿಹಾಸ ದರ್ಶನ ಸಂ. 7) 1992. ಪು.74–78
4. ಸತ್ಯನಾರಾಯಣ ಬಿ.ಆರ್.: *ಋಗ್ವೇದದಲ್ಲಿ ಸರಸ್ವತೀ* –ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ.83, ನಂ.1; 2005, ಪು.93101
5. Haridas Bhattachar: ***Sarasvati, The Goddess of Learning***-K.B. Pathak Commemoration Volume edited by Rao Bahadur, 1934
6. Jeevan Jaya A.: ***Saraswati Relics in Karnataka***-Mythic Society Quarterly Journal, 1994. Vol. XXCIX, No.2; P.80-91
7. Jyesht Verman: ***The Sublime Message of Goddes Saraswati*** -Mythic Society Quarterly Journal, 2004. Vol. XCV, No.1; P.1-38
8. Oldham, R.D.: ***The Sarsawati and the Lost River of the Indian Desert***. -Journal of the Royal Asiatic Society. 1893. 49-76
9. Phadke P.N.: Saraswati –***A Vedic River -Mythic Society*** Quarterly Journal, 1995. Vol. XXCVI, No.3; P.68-78
10. Rajaram N.S.: ***Saraswati River in Science History and Myth*** -Mythic Society Quarterly Journal 1994. Vol. XXCV, No.3; P.75-107
11. Rajaram N.S.: ***Saraswati Ecology and the Vedic Civilization*** -Mythic Society Quarterly Journal, 2002. Vol. XCIII, No.3-4; P.152-166
12. Ramachandra Rao S.K.: ***The Concept of Sarasvati*** - Mythic Society Quarterly Journal, January 1959. Vol. XLIX, No.4; P.217-227
13. Richard Thornhill: ***Sarasvati in Japan*** –Hinduism Today, October/November/December -2002
14. Shah U.P.: ***Iconography of the Jain Goddess Sarasvati*** -published in Journal of the University of Bombay, 1941
15. ***Puranography or Pornography?*** –Modern Rationalist, Vol. 23, No. 4. April -1998

ಛಾಯಾಚಿತ್ರಗಳು

ಪ್ಲೇಟ್ –1 ಭಾರತದ ಪ್ರಾಚೀನ ಸರಸ್ವತೀ ಶಿಲ್ಪಗಳು

ಸರಸ್ವತಿಯ ಭಗ್ನಶಿಲ್ಪ
ಲಕ್ನೋ ಮ್ಯೂಸಿಯಂ, ಲಕ್ನೋ, ಉತ್ತರಪ್ರದೇಶ
ಕ್ರಿ.ಶ.2ನೇ ಶತಮಾನ
ಕೃಪೆ: ಡಾ. ಹಂಪನಾ





ಸ್ಥಾನಕ ವೀಣಾ ಸರಸ್ವತಿ
ಭಹ್ರೂತ್, ಇಂಡಿಯನ್ ಮ್ಯೂಸಿಯಂ, ಕೋಲ್ಕತ್ತ,
ಪಶ್ಚಿಮಬಂಗಾಳ
ಕ್ರಿ.ಶ.2ನೇ ಶತಮಾನ
Courtesy: Kanailal Bhattacharyya
Sarasvati: A Study on her Concept and Iconography



ಸ್ಥಾನಕ ಸರಸ್ವತಿ, ಹಂಸವಾಹಿನಿ
ಘಂಟಸಾಲ, ಆಂಧ್ರಪ್ರದೇಶ
ಕ್ರಿ.ಶ.2ನೇ ಶತಮಾನ
Courtesy: Kanailal Bhattacharyya
Sarasvati: A Study on her Concept and Iconography

ಪ್ಲೇಟ್ –2 ಕರ್ನಾಟಕದ ಪ್ರಾಚೀನ ಸರಸ್ವತೀ ಶಿಲ್ಪಗಳು

ಗಂಗಾಧರ ಶಿಲ್ಪ
ರಾವಲ್ಫಡಿ ಗುಹಾಲಯ,
ಐಹೊಳೆ ಬಾಗಲಕೋಟೆ ಜಿಲ್ಲೆ.
ಕ್ರಿ.ಶ. 7ನೇ ಶತಮಾನ




ಗಂಗಾ, ಯಮುನ ಸರಸ್ವತೀ
ಗಂಗಾಧರ ಶಿಲ್ಪದ ಶಿರೋಭಾಗ



ಪ್ಲೇಟ್ –3 ಕರ್ನಾಟಕದ ಪ್ರಾಚೀನ ಸರಸ್ವತೀ ಶಿಲ್ಪಗಳು

ಸರಸ್ವತೀ ಶಿಲ್ಪವಿರುವ ಆದಿಮಾಧವನ ಶಿಲ್ಪ
ಬನವಾಸಿ, ಉತ್ತರಕನ್ನಡ ಜಿಲ್ಲೆ
ಕ್ರಿ.ಶ. 9ನೇ ಶತಮಾನ
(ರೇಖಾಚಿತ್ರ ಕೃಪೆ: ಪರಮೇಶ್ ಡಿ. ಜೋಳದ್)





ಸರಸ್ವತೀ
ಆದಿಮಾಧವ ಶಿಲ್ಪದ ಭಾಗ



ಬಾಗಳಿ, ಬಳ್ಳಾರಿ ಜಿಲ್ಲೆ. ಮ್ಯೂಸಿಯಮ್‌ನಲ್ಲಿರುವ ಶಿಲ್ಪ. ಸುಮಾರು ಕ್ರಿ.ಶ. 9–10ನೇ ಶತಮಾನ

ಪ್ಲೇಟ್ –5 ಗರ್ಭಗುಡಿಯಲ್ಲಿರುವ ಸರಸ್ವತೀ ಶಿಲ್ಪಗಳು



ಗದಗ, ಗದಗ ಜಿಲ್ಲೆ
ಸರಸ್ವತೀ ದೇವಾಲಯ
ಕ್ರಿ.ಶ. 11ನೇ ಶತಮಾನ



ಅಡಗೂರು, ಹಾಸನ ಜಿಲ್ಲೆ
ತ್ರಿಕೂಟ (ಕೇಶವ) ದೇವಾಲಯದ ಎಡ
ಗರ್ಭಗುಡಿ
ಸುಮಾರು ಕ್ರಿ.ಶ. 11ನೇ ಶತಮಾನ

ಪ್ಲೇಟ್ -6 ಗರ್ಭಗುಡಿಯಲ್ಲಿರುವ ಸರಸ್ವತೀ ಶಿಲ್ಪಗಳು



ಕಲಕೇರಿ, ಹಾವೇರಿ ಜಿಲ್ಲೆ
ಚತುಷ್ಕೂಟ (ಜಯಸಿಂಘೇಶ್ವರ) ದೇವಾಲಯದ
ಬಲ ಗರ್ಭಗುಡಿ
ಕ್ರಿ.ಶ. 12ನೇ ಶತಮಾನ



ಬಗ್ಗವಳ್ಳಿ, ಚಿಕ್ಕಮಗಳೂರು ಜಿಲ್ಲೆ
ತ್ರಿಕೂಟ (ಕೇಶವ) ದೇವಾಲಯದ ಬಲ
ಗರ್ಭಗುಡಿ
ಕ್ರಿ.ಶ. 12ನೇ ಶತಮಾನ

ಪ್ಲೇಟ್ –7 ದ್ವಿಭುಜ ಸರಸ್ವತೀ ಶಿಲ್ಪಗಳು

ಚೌಡದಾನಪುರ, ಹಾವೇರಿ ಜಿಲ್ಲೆ
ಮುಕ್ತೇಶ್ವರ ದೇವಾಲಯದ ಹೊರಭಿತ್ತಿ
ಕ್ರಿ.ಶ. 12ನೇ ಶತಮಾನ





ಚಂದ್ರಗಿರಿ, ಕೊಪ್ಪಳ ಜಿಲ್ಲೆ
ಚಂದಾಲಿಂಗೇಶ್ವರ ದೇವಾಲಯದ
ಪ್ರಾಕಾರದ ಗುಡಿ
ಸುಮಾರು ಕ್ರಿ.ಶ. 13ನೇ ಶತಮಾನ



ಹಂಪಿ, ಬಳ್ಳಾರಿ ಜಿಲ್ಲೆ
ವಿರೂಪಾಕ್ಷ ದೇವಾಲಯದ ಪ್ರಾಕಾರ
ಕ್ರಿ.ಶ. 1ನೇ ಶತಮಾನ

ಪ್ಲೇಟ್ –8 ಆಸೀನ ಚತುರ್ಭುಜ ಸರಸ್ವತೀ ಶಿಲ್ಪಗಳು

ಉಕ್ಕುಂದ, ಹಾವೇರಿ ಜಿಲ್ಲೆ
ಕಲಿದೇವರ ಗುಡಿಯ ನವರಂಗ
ಸುಮಾರು ಕ್ರಿ.ಶ. 10ನೇ ಶತಮಾನ





ಮಹಾಕೂಟ, ಬಾಗಲಕೋಟೆ ಜಿಲ್ಲೆ
ಮಹಾಕೂಟೇಶ್ವರ ದೇವಾಲಯದ ಆವರಣ
ಸುಮಾರು ಕ್ರಿ.ಶ. 10–11ನೇ ಶತಮಾನ



ಬಾಳೀಹಳ್ಳಿ, ಹಾವೇರಿ ಜಿಲ್ಲೆ
ಸಿದ್ದೇಶ್ವರ ದೇವಾಲಯದ ಬಯಲು
ಕ್ರಿ.ಶ. 11ನೇ ಶತಮಾನ

ಪ್ಲೇಟ್ –9 ಆಸೀನ ಚತುರ್ಭುಜ ಸರಸ್ವತೀ ಶಿಲ್ಪಗಳು

ಮೇದೂರು, ಹಾವೇರಿ ಜಿಲ್ಲೆ
ಸರಸ್ವತಿಯ ಗುಡಿ
ಕ್ರಿ.ಶ. 11ನೇ ಶತಮಾನ





ಹೊಂಬಳಿ, ಹಾವೇರಿ ಜಿಲ್ಲೆ
ರಾಮೇಶ್ವರ ದೇವಾಲಯದ ಆವರಣ
ಕ್ರಿ.ಶ. 11ನೇ ಶತಮಾನ



ಗಳಗನಾಥ ಹಾವೇರಿ ಜಿಲ್ಲೆ
ಗಳಗನಾಥ ದೇವಾಲಯದ ನವರಂಗ
ಕ್ರಿ.ಶ. 11ನೇ ಶತಮಾನ

ಪ್ಲೇಟ್ -10 ಆಸೀನ ಚತುರ್ಭುಜ ಸರಸ್ವತೀ ಶಿಲ್ಪಗಳು

ಬೇಲೂರು, ಹಾಸನ ಜಿಲ್ಲೆ
ಕಪ್ಪೆಚೆನ್ನಿಗರಾಯ ದೇವಾಲಯದ
ನವರಂಗದಲ್ಲಿನ ಗೂಡು
ಕ್ರಿ.ಶ. 12ನೇ ಶತಮಾನ





ಬೇಲೂರು, ಹಾಸನ ಜಿಲ್ಲೆ
ಚೆನ್ನಕೇಶವ ದೇವಾಲಯದ ಮುಂದಿರುವ
ದೇವಕೋಷ್ಠದ ಲಲಾಟ
ಕ್ರಿ.ಶ. 12ನೇ ಶತಮಾನ



ಹಳೇಬೀಡು ಹಾಸನ ಜಿಲ್ಲೆ
ಮ್ಯೂಸಿಯಂ
ಕ್ರಿ.ಶ. 12ನೇ ಶತಮಾನ

ಪ್ಲೇಟ್ -11 ಆಸೀನ ಚತುರ್ಭುಜ ಸರಸ್ವತೀ ಶಿಲ್ಪಗಳು

ಬಾಗಳಿ, ಬಳ್ಳಾರಿ ಜಿಲ್ಲೆ
ಕಲ್ಲೇಶ್ವರ ದೇವಾಲಯದ ನವರಂಗದ ಕಂಬ
ಸುಮಾರು ಕ್ರಿ.ಶ. 12ನೇ ಶತಮಾನ





ಜಿನನಾಥಪುರ, ಹಾಸನ ಜಿಲ್ಲೆ
ಆದಿನಾಥ ಬಸದಿಯ ಹೊರಭಿತ್ತಿ
ಕ್ರಿ.ಶ. 13ನೇ ಶತಮಾನ



ಅರಸೀಕೆರೆ, ಹಾಸನ ಜಿಲ್ಲೆ
ಈಶ್ವರ ದೇವಾಲಯದ ಮುಂದಿನ ಬಯಲು
ಕ್ರಿ.ಶ. 13ನೇ ಶತಮಾನ

ಪ್ಲೇಟ್ –12 ಆಸೀನ ಚತುರ್ಭುಜ ಸರಸ್ವತೀ ಶಿಲ್ಪಗಳು

ಹಿರೇಹಡಗಲಿ, ಬಳ್ಳಾರಿ ಜಿಲ್ಲೆ
ಕಲ್ಲೇಶ್ವರ ದೇವಾಲಯದ ನವರಂಗ
ಕ್ರಿ.ಶ. 13ನೇ ಶತಮಾನ





ಮೊಸಳೆ, ಹಾಸನ ಜಿಲ್ಲೆ
ನಾಗೇಶ್ವರ ದೇವಾಲಯದ ನವರಂಗ
ಕ್ರಿ.ಶ. 13ನೇ ಶತಮಾನ



ಕನಕಗಿರಿ, ಕೊಪ್ಪಳ ಜಿಲ್ಲೆ
ಲಕ್ಷ್ಮೀನರಸಿಂಹ ದೇವಾಲಯದ
ಮುಂದಿನ ಸರಸ್ವತಿ ಗುಡಿ
ಕ್ರಿ.ಶ. 15ನೇ ಶತಮಾನ

ಪ್ಲೇಟ್ –13 ಆಸೀನ ಷಡ್ಭುಜ ಸರಸ್ವತೀ ಶಿಲ್ಪಗಳು



ಹಳೇಬೀಡು, ಹಾಸನ ಜಿಲ್ಲೆ
ಹೊಯ್ಸಳೇಶ್ವರ ದೇವಾಲಯದ ಹೊರಭಿತ್ತಿ
ಕ್ರಿ.ಶ. 12ನೇ ಶತಮಾನ



ನುಗ್ಗೆಹಳ್ಳಿ, ಹಾಸನ ಜಿಲ್ಲೆ. ಲಕ್ಷ್ಮಿನರಸಿಂಹ ದೇವಾಲಯದ ನವರಂಗ ಪ್ರವೇಶದ್ವಾರದ ಲಲಾಟ; ಕ್ರಿ.ಶ. 13ನೇ ಶತಮಾನ

ಪ್ಲೇಟ್ –14 ಸ್ಥಾನಕ ಚತುರ್ಭುಜ ಸರಸ್ವತೀ ಶಿಲ್ಪಗಳು



ಇಟಗಿ, ಕೊಪ್ಪಳ ಜಿಲ್ಲೆ
ಮಹಾದೇವ ದೇವಾಲಯದ
ಮುಖಮಂಟಪದ ಕಂಬ
ಕ್ರಿ.ಶ. 12ನೇ ಶತಮಾನ



ಹಳೇಬೀಡು, ಹಾಸನ ಜಿಲ್ಲೆ
ಕೇದಾರೇಶ್ವರ ದೇವಾಲಯದ ಹೊರಭಿತ್ತಿ
ಕ್ರಿ.ಶ. 12ನೇ ಶತಮಾನ



ಹಳೇಬೀಡು, ಹಾಸನ ಜಿಲ್ಲೆ
ಹೊಯ್ಸಳೇಶ್ವರ ದೇವಾಲಯದ ಹೊರಭಿತ್ತಿ
ಕ್ರಿ.ಶ. 12ನೇ ಶತಮಾನ



ಮೊಸಳೆ, ಹಾಸನ ಜಿಲ್ಲೆ
ನಾಗೇಶ್ವರ ದೇವಾಲಯದ ಹೊರಭಿತ್ತಿ
ಕ್ರಿ.ಶ. 13ನೇ ಶತಮಾನ

ಪ್ಲೇಟ್ –15 ತ್ರಿಭಂಗಿಯಲ್ಲಿರುವ ದ್ವಿಭುಜ ಸರಸ್ವತೀ ಶಿಲ್ಪಗಳು

ಬೇಲೂರು, ಹಾಸನ ಜಿಲ್ಲೆ
ಚೆನ್ನಕೇಶವ ದೇವಾಲಯದ ಹೊರಭಿತ್ತಿ,
ಸಾಲಭಂಜಿಕೆಯರ ಸಾಲು
ಕ್ರಿ.ಶ. 12ನೇ ಶತಮಾನ





ಕಿಕ್ಕೇರಿ, ಮಂಡ್ಯ ಜಿಲ್ಲೆ
ಬ್ರಹ್ಮೇಶ್ವರ ದೇವಾಲಯದ ಹೊರಭಿತ್ತಿ
ಕ್ರಿ.ಶ. 12ನೇ ಶತಮಾನ



ಕೊರವಂಗಲ, ಹಾಸನ ಜಿಲ್ಲೆ
ಭೂಚೇಶ್ವರ ದೇವಾಲಯದ ಹೊರಭಿತ್ತಿ
ಕ್ರಿ.ಶ. 12ನೇ ಶತಮಾನ

ಪ್ಲೇಟ್ –16 ತ್ರಿಭಂಗಿಯಲ್ಲಿರುವ ಚತುರ್ಭುಜ ಸರಸ್ವತೀ ಶಿಲ್ಪಗಳು



ಬೇಲೂರು, ಹಾಸನ ಜಿಲ್ಲೆ
ಚೆನ್ನಕೇಶವ ದೇವಾಲಯದ
ನವರಂಗದ ಕಂಬ
ಕ್ರಿ.ಶ. 12ನೇ ಶತಮಾನ



ಅಮರಗೋಳ, ಧಾರವಾಡ ಜಿಲ್ಲೆ
ಬನಶಂಕರಿ ದೇವಾಲಯದ
ನವರಂಗದ ಕಂಬ
ಕ್ರಿ.ಶ. 12ನೇ ಶತಮಾನ



ಬಸರಾಳು, ಮಂಡ್ಯ ಜಿಲ್ಲೆ
ಮಲ್ಲಿಕಾರ್ಜುನ ದೇವಾಲಯದ ಹೊರಭಿತ್ತಿ
ಕ್ರಿ.ಶ.13ನೇ ಶತಮಾನ



ಕಿಕ್ಕೇರಿ, ಮಂಡ್ಯ ಜಿಲ್ಲೆ
ಬ್ರಹ್ಮೇಶ್ವರ ದೇವಾಲಯದ ಹೊರಭಿತ್ತಿ
ಕ್ರಿ.ಶ. 12ನೇ ಶತಮಾನ

ಪ್ಲೇಟ್ –17 ನೃತ್ಯಭಂಗಿಯಲ್ಲಿರುವ ಚತುರ್ಭುಜ ಸರಸ್ವತೀ ಶಿಲ್ಪಗಳು

ಹಳೇಬೀಡು, ಹಾಸನ ಜಿಲ್ಲೆ
ಹೊಯ್ಸಳೇಶ್ವರ ದೇವಾಲಯದ ಹೊರಭಿತ್ತಿ
ಕ್ರಿ.ಶ. 12ನೇ ಶತಮಾನ






ಹಳೇಬೀಡು, ಹಾಸನ ಜಿಲ್ಲೆ
ಹೊಯ್ಸಳೇಶ್ವರ ದೇವಾಲಯದ ಹೊರಭಿತ್ತಿ
ಕ್ರಿ.ಶ. 12ನೇ ಶತಮಾನ



ಹಳೇಬೀಡು, ಹಾಸನ ಜಿಲ್ಲೆ
ಕೇದಾರೇಶ್ವರ ದೇವಾಲಯದ ಹೊರಭಿತ್ತಿ
ಕ್ರಿ.ಶ. 12ನೇ ಶತಮಾನ

ಪ್ಲೇಟ್ –18 ನೃತ್ಯಭಂಗಿಯಲ್ಲಿರುವ ಷಡ್ಭುಜ ಸರಸ್ವತೀ ಶಿಲ್ಪಗಳು

ಮರಳೆ ಚಿಕ್ಕಮಗಳೂರು ಜಿಲ್ಲೆ
ಸಿದ್ದೇಶ್ವರ ದೇವಲಯದ ಹೊರಭಿತ್ತಿ
ಕ್ರಿ.ಶ. 12ನೇ ಶತಮಾನ






ಬೇಲೂರು, ಹಾಸನ ಜಿಲ್ಲೆ
ವೀರನಾರಾಯಣ ದೇವಾಲಯದ ಹೊರಭಿತ್ತಿ
ಕ್ರಿ.ಶ. 12ನೇ ಶತಮಾನ



ಹಾರನಹಳ್ಳಿ, ಹಾಸನ ಜಿಲ್ಲೆ
ಸೋಮೇಶ್ವರ ದೇವಾಲಯದ ಹೊರಭಿತ್ತಿ
ಕ್ರಿ.ಶ. 13ನೇ ಶತಮಾನ

ಪ್ಲೇಟ್ –19 ನೃತ್ಯಭಂಗಿಯಲ್ಲಿರುವ ಷಡ್ಭುಜ ಸರಸ್ವತೀ ಶಿಲ್ಪಗಳು



ಹೊಸಹೊಳಲು, ಮಂಡ್ಯ ಜಿಲ್ಲೆ
ಲಕ್ಷ್ಮಿನಾರಾಯಣ ದೇವಾಲಯದ ಹೊರಭಿತ್ತಿ
ಕ್ರಿ.ಶ. 13ನೇ ಶತಮಾನ



ಸೋಮನಾಥಪುರ, ಮೈಸೂರು ಜಿಲ್ಲೆ
ಕೇಶವ ದೇವಾಲಯದ ಹೊರಭಿತ್ತಿ
ಕ್ರಿ.ಶ. 13ನೇ ಶತಮಾನ



ಅರಳಗುಪ್ಪೆ, ತುಮಕೂರು ಜಿಲ್ಲೆ
ಕೇಶವ ದೇವಾಲಯದ
ಹೊರಭಿತ್ತಿಯ ಮೇಲಿನ ಸಾಲು
ಕ್ರಿ.ಶ. 13ನೇ ಶತಮಾನ
(ವಿಷ್ಣು ಶಿಲ್ಪದ ಬಲಭಾಗಕ್ಕೆ ಲಕ್ಷ್ಮಿ ಮತ್ತು ಎಡಭಾಗಕ್ಕೆ ಸರಸ್ವತಿಯಿರುವ ಶಿಲ್ಪ)

ಪ್ಲೇಟ್ –20 ನೃತ್ಯಭಂಗಿಯಲ್ಲಿರುವ ಅಷ್ಟಭುಜ ಸರಸ್ವತೀ ಶಿಲ್ಪಗಳು

ಹಳೇಬೀಡು, ಹಾಸನ ಜಿಲ್ಲೆ
ಮ್ಯೂಸಿಯಂ
ಕ್ರಿ.ಶ. 12ನೇ ಶತಮಾನ





ನಾಗಲಾಪುರ, ತುಮಕೂರು ಜಿಲ್ಲೆ
ಚೆನ್ನಕೇಶವ ದೇವಾಲಯದ ಹೊರಭಿತ್ತಿ
ಕ್ರಿ.ಶ. 12ನೇ ಶತಮಾನ



ಅರಳಗುಪ್ಪೆ, ತುಮಕೂರು ಜಿಲ್ಲೆ
ಕೇಶವ ದೇವಾಲಯದ ಹೊರಭಿತ್ತಿ
ಕ್ರಿ.ಶ. 13ನೇ ಶತಮಾನ

ಪ್ಲೇಟ್ –21 ನೃತ್ಯಭಂಗಿಯಲ್ಲಿರುವ ಅಷ್ಟಭುಜ ಸರಸ್ವತೀ ಶಿಲ್ಪಗಳು

ಬಸರಾಳು, ಮಂಡ್ಯ ಜಿಲ್ಲೆ
ಮಲ್ಲಿಕಾರ್ಜುನ ದೇವಾಲಯದ ಹೊರಭಿತ್ತಿ
ಕ್ರಿ.ಶ. 13ನೇ ಶತಮಾನ





ನುಗ್ಗೆಹಳ್ಳಿ, ಹಾಸನ ಜಿಲ್ಲೆ
ಲಕ್ಷ್ಮಿನರಸಿಂಹ ದೇವಾಲಯದ ಹೊರಭಿತ್ತಿ
ಕ್ರಿ.ಶ. 13ನೇ ಶತಮಾನ



ಸೋಮನಾಥಪುರ, ಮೈಸೂರು ಜಿಲ್ಲೆ
ಕೇಶವ ದೇವಾಲಯದ ಹೊರಭಿತ್ತಿ
ಕ್ರಿ.ಶ. 13ನೇ ಶತಮಾನ

ಪ್ಲೇಟ್ –22 ನೃತ್ಯಭಂಗಿಯಲ್ಲಿರುವ ದಶಭುಜ ಸರಸ್ವತೀ ಶಿಲ್ಪಗಳು



ಹಳೇಬೀಡು, ಹಾಸನ ಜಿಲ್ಲೆ.
ಹೊಯ್ಸಳೇಶ್ವರ ದೇವಾಲಯದ
ಹೊರಭಿತ್ತಿ. ಕ್ರಿ.ಶ. 12ನೇ ಶತಮಾನ



ಜಾವಗಲ್ಲು, ಹಾಸನ ಜಿಲ್ಲೆ.
ಲಕ್ಷ್ಮೀನರಸಿಂಹ ದೇವಾಲಯದ
ಹೊರಭಿತ್ತಿ. ಕ್ರಿ.ಶ. 13ನೇ ಶತಮಾನ

ಪ್ಲೇಟ್ -22a ಬ್ರಹ್ಮನ ಜೊತೆಯಲ್ಲಿರುವ ಸರಸ್ವತೀ ಶಿಲ್ಪಗಳು



ಕಿಕ್ಕೇರಿ, ಮಂಡ್ಯ ಜಿಲ್ಲೆ
ಬ್ರಹ್ಮೇಶ್ವರ ದೇವಾಲಯದ ಹೊರಭಿತ್ತಿ
ಕ್ರಿ.ಶ. 12ನೇ ಶತಮಾನ




ಹಳೇಬೀಡು, ಹಾಸನ ಜಿಲ್ಲೆ
ಹೊಯ್ಸಳೇಶ್ವರ ಎದುರಿನ
ಸೂರ್ಯನ ಗುಡಿಯ ಭಿತ್ತಿ
ಕ್ರಿ.ಶ. 12ನೇ ಶತಮಾನ




ಬಸ್ರಾಳು, ಮಂಡ್ಯ ಜಿಲ್ಲೆ
ಬ್ರಹ್ಮೇಶ್ವರ ದೇವಾಲಯದ ಹೊರಭಿತ್ತಿ
ಕ್ರಿ.ಶ. 12ನೇ ಶತಮಾನ

ಪ್ಲೇಟ್ –23 ಸರಸ್ವತೀ ದೇವಾಲಯಗಳು



ಗದಗ, ಗದಗ ಜಿಲ್ಲೆ. ಸರಸ್ವತೀ ದೇವಾಲಯ; ಕ್ರಿ.ಶ. 11ನೇ ಶತಮಾನ




ಅಡಗೂರು, ಹಾಸನ ಜಿಲ್ಲೆ. ತ್ರಿಕೂಟ(ಕೇಶವ)ದೇವಾಲಯದ ಎಡಗರ್ಭಗುಡಿ; ಸುಮಾರು ಕ್ರಿ.ಶ. 11ನೇ ಶತಮಾನ



ನಿಪ್ಪಾಣಿ, ಗುಲ್ಬರ್ಗಾ ಜಿಲ್ಲೆ . ಸರಸ್ವತಿಯ ಮಂಟಪ; ಕ್ರಿ.ಶ. 11ನೇ ಶತಮಾನ


ಪ್ಲೇಟ್ –24 ಸರಸ್ವತೀ ದೇವಾಲಯಗಳು



ಬಗ್ಗವಳ್ಳಿ, ಚಿಕ್ಕಮಗಳೂರು ಜಿಲ್ಲೆ. ತ್ರಿಕೂಟ (ಕೇಶವ) ದೇವಾಲಯದ ಬಲ ಗರ್ಭಗುಡಿ; ಕ್ರಿ.ಶ. 12ನೇ ಶತಮಾನ



ಕಲಕೇರಿ, ಹಾವೇರಿ ಜಿಲ್ಲೆ. ಚತುಷ್ಕೂಟ (ಜಯಸಿಂಘೇಶ್ವರ) ದೇವಾಲಯದ ಬಲ ಗರ್ಭಗುಡಿ; ಕ್ರಿ.ಶ. 12ನೇ ಶತಮಾನ



ನಿಡಗುಂದಿ, ಗದಗ ಜಿಲ್ಲೆ ದಾಸಿಮೇಶ್ವರ (ಸರಸ್ವತಿ, ಶಿವ ಮತ್ತು ವಿಷ್ಣು) ದೇವಾಲಯದ ಪ್ರಾಕಾರದಲ್ಲಿರುವ ಶಾಸನ
(ಶಾಸನದ ಶಿರೋಭಾಗದಲ್ಲಿ ಶಿವಲಿಂಗದ ಎಡಭಾಗಕ್ಕೆ ವಿಷ್ಣು ಮತ್ತು ಬಲಭಾಗಕ್ಕೆ ಸರಸ್ವತಿಯರ ಕೆತ್ತನೆಗಳಿವೆ.)
ಕ್ರಿ.ಶ. ಸುಮಾರು 12–13ನೇ ಶತಮಾನ

ವಿಜಯನಗರ ಶೈಲಿಯ ಬ್ರಹ್ಮ–ಸರಸ್ವತಿ
ಹಂಪಿ ವಿರೂಪಾಕ್ಷ ದೇವಾಲಯ ಮಂಟಪದ ಭಿತ್ತಿಚಿತ್ರ
(ಕೃಪೆ: ಸಾಲತೊರೆ ಆರ್.ಎನ್.: ವಿಜಯನಗರ
ಆರ್ಟ್, ಪ್ಲೇಟ್ –3)





ಮೈಸೂರು ಶೈಲಿ



ತಂಜಾವೂರು ಶೈಲಿ


ಪ್ಲೇಟ್ -26 ಚಿತ್ರಕಲೆ

ರಾಜಾ ರವಿವರ್ಮ





ಎಂ.ಎಫ್.ಹುಸೇನ್



ರುದ್ರಕುಮಾರ್ ಝಾ

ಪ್ಲೇಟ್ –27 ನೇಪಾಳ, ಟಿಬೆಟ್ ಮತ್ತು ಜಪಾನ್

ಸರಸ್ವತಿ
ನೇಪಾಳ





Nag-gi-lha-mo
ಟಿಬೆಟ್



Benten
ಜಪಾನ್

ಪ್ಲೇಟ್ –28 ಅಥೀನಾ, ಮಿನರ್ವಾ ಮತ್ತು ಈಸಿಸ್

ಅಥೀನಾ
ಗ್ರೀಕ್ ನಾಗರಿಕತೆ





ಮಿನರ್ವಾ
ರೋಮನ್ ನಾಗರಿಕತೆ



ಈಸಿಸ್
ಮೆಸೆಮೊಟೋಮಿಯಾ ನಾಗರಿಕತೆ

